ಮಧ್ಯಮಲೆನಾಡಿನ ಶಾಸನಗಳ ಸಾಮಾಜಿಕ ಅಧ್ಯಯನ

(ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ)

(ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಶಾಸನಶಾಸ್ತ್ರ ವಿಭಾಗಕ್ಕೆ
ಸಲ್ಲಿಸುತ್ತಿರುವ ಪಿಎಚ್.ಡಿ. ಮಹಾಪ್ರಬಂಧ)

ಸಂಶೋಧಕರು
ಎಂ.ಎ. ಪ್ರಭಾಕರ

ಮಾರ್ಗದರ್ಶಕರು
ಡಾ. ಕಲವೀರ ಮನ್ವಾಚಾರ
ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ– ೫೮೩ ೨೭೬
೨೦೧೬

ಮಧ್ಯಮಲೆನಾಡಿನ ಶಾಸನಗಳ ಸಾಮಾಜಿಕ ಅಧ್ಯಯನ

(ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ)

(ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಶಾಸನಶಾಸ್ತ್ರ ವಿಭಾಗಕ್ಕೆ
ಸಲ್ಲಿಸುತ್ತಿರುವ ಪಿಎಚ್.ಡಿ. ಮಹಾಪ್ರಬಂಧ)

ಸಂಶೋಧಕರು
ಎಂ.ಎ. ಪ್ರಭಾಕರ

ಮಾರ್ಗದರ್ಶಕರು
ಡಾ. ಕಲವೀರ ಮನ್ವಾಚಾರ
ಪ್ರಾಧ್ಯಾಪಕರು

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೬

ಮಾರ್ಗದರ್ಶಕರ ದೃಢೀಕರಣ ಪ್ರಮಾಣ ಪತ್ರ

"ಮಧ್ಯಮಲೆನಾಡಿನ ಶಾಸನಗಳ ಸಾಮಾಜಿಕ ಅಧ್ಯಯನ (ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ)" ಎಂಬ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಮಹಾಪ್ರಬಂಧವನ್ನು ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ **ಎಂ.ಎ. ಪ್ರಭಾಕರ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ. ಕಲವೀರ ಮನ್ವಾಚಾರ)
ಪ್ರಾಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ :
ಸ್ಥಳ : ವಿದ್ಯಾರಣ್ಯ

ಡಾ. ಕಲವೀರ ಮನ್ವಾಚಾರ
ಪ್ರಾಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ಸಂಶೋಧಕರ ಪ್ರಮಾಣ ಪತ್ರ

"ಮಧ್ಯಮಲೆನಾಡಿನ ಶಾಸನಗಳ ಸಾಮಾಜಿಕ ಅಧ್ಯಯನ (ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ)" ಎಂಬ ವಿಷಯದಲ್ಲಿ ಮಹಾಪ್ರಬಂಧವನ್ನು **ಡಾ. ಕಲವೀರ ಮನ್ವಾಚಾರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

(ಎಂ.ಎ. ಪ್ರಭಾಕರ)
ಪಿಎಚ್.ಡಿ. ಸಂಶೋಧನ ವಿದ್ಯಾರ್ಥಿ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದಿನಾಂಕ :
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಭೌಗೋಳಿಕ ವ್ಯಾಪ್ತಿ, ಈವರೆಗಿನ ಅಧ್ಯಯನಗಳು, ಅಧ್ಯಯನ ವಿಧಾನ ಮತ್ತು ಸ್ವರೂಪ

೧.೧. ಅಧ್ಯಯನದ ಉದ್ದೇಶ

೧.೨. ಭೌಗೋಳಿಕ ವ್ಯಾಪ್ತಿ

೧.೩. ಈವರೆಗಿನ ಅಧ್ಯಯನಗಳು

೧.೪. ಅಧ್ಯಯನದ ವಿಧಾನ

೧.೫. ಅಧ್ಯಯನದ ಸ್ವರೂಪ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಭೌಗೋಳಿಕ ವ್ಯಾಪ್ತಿ, ಈವರೆಗಿನ ಅಧ್ಯಯನಗಳು, ವಿಧಾನ ಮತ್ತು ಸ್ವರೂಪ

ಪೀಠಿಕೆ

ಶಾಸನಗಳು ಇತಿಹಾಸದ ಜೀವಾಳ. ಇವುಗಳು ಬಹುಹಿಂದಿನಿಂದಲೂ ಮಾನವನ ಜೀವನಕ್ರಮವನ್ನು ವಿವರಿಸುತ್ತಾ ಬಂದಿವೆ. ಹಾಗೆಯೇ ಶಾಸನಗಳು ಆಯಾಯ ಕಾಲ, ದೇಶಗಳ ಸ್ಥಿತಿಗತಿಗಳಿಗನುಗುಣವಾಗಿ ಬೆಳೆಯುತ್ತಾ ಬಂದಿವೆ. ಶಾಸನಗಳು ಜೀವನ ಮೌಲ್ಯಗಳನ್ನು ಮತ್ತು ನೀತಿ-ನಿಯಮಾವಳಿಗಳನ್ನು ಬಿತ್ತರಿಸಿದರೂ, ಏನೇ ಬೋಧಿಸಿದರೂ ಅವು ಆಯಾಯ ಕಾಲ, ದೇಶಗಳ ಪರಿಸ್ಥಿತಿಗೆ ಅನುಗುಣವಾಗಿರುತ್ತವೆ. ಹೀಗೆ ಒಂದು ನಿರ್ದಿಷ್ಟ ಜೀವನ ಮೌಲ್ಯಗಳನ್ನು ಹಾಗೂ ನೀತಿ-ನಿಯಮಾವಳಿಗಳನ್ನು, ಸಾರ್ವಕಾಲಿಕವಾದ ಗುಣಗಳನ್ನು ಹೊಂದದಿದ್ದಾಗ ಅದರಲ್ಲಿ ಮಾನವೀಯ ಸ್ಪಂದನೆಗಳನ್ನು ಕಾಣದಿದ್ದಾಗ ಅದು ಹೇಗೆ ಉತ್ತಮ ಶಾಸನವಾಗಲು ಸಾಧ್ಯ? ಈ ಕಾರಣಕ್ಕಾಗಿಯೇ ಶಾಸನಗಳು ಪ್ರತಿಯೊಂದು ಕಾಲ, ದೇಶ, ಪರಿಸರಗಳಲ್ಲೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತವೆ. ಕಾಲಕ್ರಮೇಣ ಬದಲಾದ ಪರಿಸರಕ್ಕೆ ಪೂರಕವಾಗಿ ಜನಸಮುದಾಯದಿಂದ ದೂರ ಸಾಗುತ್ತಾ ಹೋಗಿ ರಾಜಪ್ರಭುತ್ವ ಮತ್ತು ಪುರೋಹಿತಶಾಹಿಗಳ ಪ್ರತಿಷ್ಠೆಗಾಗಿ ರೂಪುಗೊಳ್ಳುತ್ತಾ ಸಾಗಿವೆ.

ಕ್ರಿ.ಪೂ. ೩ನೇ ಶತಮಾನದ ಆರಂಭದ ಕಾಲಘಟ್ಟದ ಸಂದರ್ಭದಲ್ಲಿ ರೂಪಿತವಾದ ಬಹಳಷ್ಟು ಶಾಸನಗಳು ಜನಪರವಾಗಿದ್ದವು. ಅನಂತರದಲ್ಲಿ ಅವುಗಳ ಬೆಳವಣಿಗೆಯನ್ನು ಗಮನಿಸಿದಾಗ ಬಹುಶಃ ಇಲ್ಲಿ ಸಾಮಾಜಿಕ ಒತ್ತಡಗಳು, ರಾಜಕೀಯ ಸ್ಥಿತ್ಯಂತರಗಳ ಪ್ರತಿಫಲವಾಗಿ ಬದಲಾವಣೆ ಹೊಂದಿರುವುದನ್ನು ಕಾಣಬಹುದು. ಒಂದು ಕಡೆ ಅರಸುವರ್ಗ, ಮತ್ತೊಂದೆಡೆ ಪುರೋಹಿತಶಾಹಿಯನ್ನು ಆಶ್ರಯಿಸಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ಶಾಸನಗಳಿಗೆ ಬಂದೊದಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಜನಸಾಮಾನ್ಯರ ಬದುಕನ್ನು ಪ್ರತಿಬಿಂಬಿಸಬೇಕಾದ ಈ ಶಾಸನಗಳು ಆಶ್ರಯ ನೀಡಿದ ರಾಜಪ್ರಭುತ್ವದ ಹಾಗೂ ಪುರೋಹಿತಶಾಹಿಯ ಜೊತೆಗೆ ಜಮೀನ್ದಾರರ ಒತ್ತಾಸೆಯಾಗಿ ರೂಪಿತವಾಗುವುದರೊಂದಿಗೆ ಆ ವರ್ಗಗಳ ಹಿತ ಕಾಯುವ ಕಡೆಗೆ ಗಮನಕೊಟ್ಟಿರುವುದು ಇತಿಹಾಸದುದ್ದಕ್ಕೂ ಕಂಡುಬರುತ್ತದೆ.

ಭಾರತದಲ್ಲಿ ಶಾಸನೀಯ ಪರಂಪರೆಗೆ ನೂರಾರು ವರ್ಷಗಳ ಇತಿಹಾಸವಿದೆ. ಅದರ ವ್ಯಾಪಕತೆಯು ಹಲವು ರೀತಿಯಲ್ಲಿ ಹರಡಿಕೊಂಡಿದೆ. ಪ್ರಾಚೀನ ಭಾರತದ ಅನೇಕ ರಾಜಮನೆತನಗಳು ಆದರ್ಶ ರಾಜ್ಯವನ್ನು ಸ್ಥಾಪಿಸಬೇಕೆಂಬ ಮಹದಾಸೆಯನ್ನು ಈಡೇರಿಸಿಕೊಳ್ಳಲು ಮತ್ತು ಸರ್ವಾಧಿಕಾರವನ್ನು ವ್ಯವಸ್ಥಿತವಾಗಿ ಸ್ಥಾಪಿಸುವ ಉದ್ದೇಶದಿಂದ ಶಾಸನ ರಚಿಸುವ ಕಾರ್ಯವನ್ನು ಅಸ್ತ್ರವಾಗಿ ಬಳಸಿಕೊಂಡವು. ರಾಜತ್ವವನ್ನು ಸಾರ್ವಭೌಮವಾಗಿರುವಂತೆ ನೋಡಿಕೊಳ್ಳಲಾಗುತ್ತಿತ್ತು. ಇಲ್ಲಿ ಶಾಸನ ಎನ್ನುವುದನ್ನು ಇಂಗ್ಲೀಷ್ ಭಾಷೆಯ 'ಆದೇಶ' ಎನ್ನುವ ಸೀಮಿತ ಅರ್ಥದಲ್ಲಿ ಬಳಸಲ್ಪಟ್ಟಿಲ್ಲ. ಸಮಾಜವನ್ನು ಒಟ್ಟಾಗಿ ಹಿಡಿದಿಡುವ ವ್ಯವಸ್ಥೆ ಹಾಗೂ ಅಂತಹ ವ್ಯವಸ್ಥೆಯನ್ನು ಪ್ರತಿಯೊಬ್ಬರೂ ಉಳಿಸಿಕೊಂಡು ಹೋಗಬೇಕಾದ ಕರ್ತವ್ಯ ಎನ್ನುವ ಅರ್ಥದಲ್ಲಿ ಶಾಸನಗಳನ್ನು ಬಳಕೆಗೆ ತರಲಾಯಿತು. ಅದಕ್ಕಾಗಿಯೇ ರಾಜಪ್ರಭುತ್ವವು ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಧಾರ್ಮಿಕ ವ್ಯವಸ್ಥೆಯನ್ನು ಹಿಡಿದಿಡುವುದಕ್ಕೆ ಹೆಣಗಾಡಿರುವುದು ಕಂಡುಬರುತ್ತದೆ. ಈ ಭಯದಿಂದಲೇ ರಾಜನು ಒಂದು ನಿರ್ದಿಷ್ಟ ಧರ್ಮಕ್ಕೆ ಬದ್ಧನಾಗಿದ್ದು ಒಂದು ವೇಳೆ ಈ ಧರ್ಮವನ್ನು ಎದುರು ಹಾಕಿಕೊಂಡರೆ ಅದರಿಂದಾಗುವ ಅಪಾಯವನ್ನರಿತು ಧರ್ಮನಿಷ್ಠೆಯಿಂದ ತನ್ನ ಧರ್ಮದ ಶಾಸನಗಳನ್ನು ಬರೆಯಿಸಲು ಕಾರ್ಯಪ್ರವೃತ್ತನಾದನು. ಜನಸಾಮಾನ್ಯರನ್ನು ಧಾರ್ಮಿಕ ಚೌಕಟ್ಟಿನೊಳಗೆ ತರುವುದರ ಮುಖೇನ ಅವರನ್ನು ನಿಯಂತ್ರಿಸುವ ಸಾಧನವಾಗಿ ಶಾಸನಗಳಲ್ಲಿ ಶಾಪಾಶಯ ಮತ್ತು ಪುಣ್ಯಾಶಯಗಳನ್ನು ಪ್ರತಿಬಿಂಬಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಕಾರಣಕ್ಕಾಗಿಯೇ ಶಾಸನ ಎಂದರೆ ರಾಜಾಜ್ಞೆ ಎಂಬ ಅರ್ಥದಲ್ಲಿ ಬಿಂಬಿಸಲಾಗಿದೆ.

ಶಾಸನಗಳಲ್ಲಿ ಕೆಲವೊಂದು ಅಂಶಗಳು ಜನರ ಭಾವನೆಗಳಿಗೆ ವಿರುದ್ಧವಾಗಿದ್ದರೂ ಪರಿಪಾಲಿಸಲೇಬೇಕಾದ ಅನಿವಾರ್ಯತೆಯನ್ನು ರಾಜಪ್ರಭುತ್ವವು ಸೃಷ್ಟಿ ಮಾಡಿತು. ಅರಸೊತ್ತಿಗೆ ಮತ್ತು ಪುರೋಹಿತ ವರ್ಗವು ಇಡೀ ಸಾಮಾಜಿಕ ವ್ಯವಸ್ಥೆಯನ್ನು ಪರೋಕ್ಷವಾಗಿ ನಿಯಂತ್ರಿಸುವ ಸಾಧನವನ್ನಾಗಿ ಶಾಸನಗಳನ್ನು ಅಸ್ತ್ರಗಳನ್ನಾಗಿ ಮಾಡಿಕೊಂಡಿತು. ಆದರೆ ಪುರೋಹಿತ ವರ್ಗಕ್ಕೆ ಇಂತಹ ಅಧಿಕಾರವನ್ನು ನೇರವಾಗಿ ಚಲಾಯಿಸುವ ಅವಕಾಶವಿರಲಿಲ್ಲ. ಹಾಗಾಗಿ ರಾಜಪ್ರಭುತ್ವವನ್ನು ಹೊಗಳಿ, ಓಲೈಸಿ ಅದರಿಂದ ತನ್ನ ಧರ್ಮವ್ಯವಸ್ಥೆಯ ಹಿಡಿತವನ್ನು ಪರೋಕ್ಷವಾಗಿ ಬಿತ್ತರಿಸುತ್ತಿತ್ತು. ಹೀಗೆ ಸಾಮಾಜಿಕವಾದ ಹಿಡಿತವನ್ನು ಹೊಂದಿರುವುದಲ್ಲದೇ, ಧರ್ಮದ ಮೂಲಕ ನೇರವಾಗಿ ರಾಜಪ್ರಭುತ್ವದ ಮೇಲೆ ಪ್ರಭಾವವನ್ನು ಬೀರುವ ಪ್ರಯತ್ನ ಸದಾ ನಡೆಯುತ್ತಿತ್ತು. ಮಧ್ಯಮಲೆನಾಡಿನ ಶಾಸನಗಳಲ್ಲಿ ಪುರೋಹಿತ ವರ್ಗವು ಯಾವ ರೀತಿಯಲ್ಲಿ ರಾಜಪ್ರಭುತ್ವವನ್ನು ತನ್ನ ಮೂಗಿನ ನೇರಕ್ಕೆ ಬಳಸಿಕೊಂಡು ಇಡೀ ವ್ಯವಸ್ಥೆಯನ್ನು ಹಿಡಿದಿಟ್ಟುಕೊಂಡಿತ್ತು ಎಂಬುದು ಕಂಡುಬರುತ್ತದೆ.

ರಾಜಕೀಯ ಅಧಿಕಾರವನ್ನು ವಿಧಿಬದ್ಧಗೊಳಿಸುವ ಕೆಲಸ ನಡೆಸುತ್ತಿದ್ದ ಪುರೋಹಿತಶಾಹಿ ವರ್ಗವು ಕ್ರಿಸ್ತಶಕದ ಮೊದಲ ಸಹಸ್ರಮಾನದಲ್ಲಿ ಭೂಮಿಯನ್ನು ದಾನವಾಗಿ ಪಡೆಯಲು ಆರಂಭಿಸಿತು. ಇದು ಅವರು ದೊಡ್ಡ ಭೂಮಾಲೀಕರಾಗಲು ಕಾರಣವಾಗಿರಬೇಕು. ಇದರಿಂದಾಗಿ

ಅಗ್ರಹಾರಗಳಂತಹ ಸಂಸ್ಥೆಗಳು ಹುಟ್ಟಿಕೊಂಡವು. ಈ ಅಗ್ರಹಾರಗಳು ಗ್ರಾಮೀಣ ಸಂಪನ್ಮೂಲಗಳ ಮೇಲೆ ನಿಯಂತ್ರಣ ಸಾಧಿಸುವ ಕೇಂದ್ರಗಳಾಗಿ ಮತ್ತು ಬ್ರಾಹ್ಮಣರ ವಿದ್ಯೆ ಹಾಗೂ ಆಚರಣೆಗಳ ಕೇಂದ್ರಸ್ಥಳಗಳಾಗಿ ರೂಪುಗೊಂಡವು. ಈಗಲೂ ಇಲ್ಲಿನ ಬಹಳಷ್ಟು ಪ್ರದೇಶಗಳಲ್ಲಿ ಅಗ್ರಹಾರ ಗಳಿರುವುದನ್ನು ಗಮನಿಸಬಹುದು.

ಸುಮಾರು ಸಾವಿರಾರು ವರ್ಷಗಳ ಭವ್ಯ ಇತಿಹಾಸ ಹೊಂದಿರುವ ಮಧ್ಯಮಲೆನಾಡು ಸಹ್ಯಾದ್ರಿ ಪರ್ವತ ಶ್ರೇಣಿಯ ತಪ್ಪಲಿನಲ್ಲಿಯ ರಮಣೀಯ ಪ್ರದೇಶಗಳಿಂದ ಆವೃತವಾಗಿದ್ದು, ತಪೋಭೂಮಿ, ಕರ್ಮಭೂಮಿ ಮತ್ತು ಜ್ಞಾನ ಭೂಮಿಯಾಗಿದ್ದು ಸಾಕಷ್ಟು ವೈವಿಧ್ಯತೆಯನ್ನು ಹೊಂದಿದೆ. ಶ್ರೀಮಂತವಾದ ಸಂಸ್ಕೃತಿಯ ಪರಂಪರೆ ಹೊಂದಿದ್ದು ಪ್ರಾಗೈತಿಹಾಸಿಕ ನೆಲೆವೀಡಾಗಿಯೂ ಬೆಟ್ಟ, ಗುಡ್ಡ, ಹಳ್ಳ, ನದಿ, ತೊರೆ, ಜಲಪಾತಗಳಿಂದ ಕೂಡಿದ ದಟ್ಟ ಮಲೆನಾಡು ಭಾಗವಾಗಿದೆ.

ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ ತಾಲ್ಲೂಕುಗಳು ಸಾಂಸ್ಕೃತಿಕವಾಗಿ, ಸಾಂಪ್ರದಾಯಿಕವಾಗಿ ಹಾಗೂ ರೂಢಿಗತವಾಗಿ ಮಧ್ಯಮಲೆನಾಡು ಭಾಗವೆಂದು ಚಿರಪರಿಚಿತವಾಗಿವೆ. ಈ ಪ್ರದೇಶಗಳು ತಮ್ಮೊಳಗೆ ಭೌಗೋಳಿಕವಾಗಿ ಸಾಮ್ಯತೆಯನ್ನು ಹೊಂದಿದ್ದು ಬೇರೆ ಪ್ರದೇಶಗಳೊಂದಿಗೆ ತುಲನೆ ಮಾಡಿದಾಗ ಭಿನ್ನತೆ ವ್ಯಕ್ತವಾಗಿರುವುದಕ್ಕೆ ಕಾರಣ ಇಲ್ಲಿನ ದಟ್ಟವಾದ ಅರಣ್ಯ ಪ್ರದೇಶ. ಈ ಮೂರು ತಾಲ್ಲೂಕುಗಳು ಪ್ರಸ್ತುತ ಎರಡು ಜಿಲ್ಲೆಯ ಭೌಗೋಳಿಕ ಪ್ರದೇಶದಲ್ಲಿ ಸ್ಥಿತವಾಗಿದ್ದರೂ ಒಂದೇ ಭೌಗೋಳಿಕ ಪ್ರದೇಶದ ವ್ಯಾಪ್ತಿಯಲ್ಲಿ ಕೇಂದ್ರೀಕೃತಗೊಂಡಿರುವುದನ್ನು ಕಾಣಬಹುದು. ತೀರ್ಥಹಳ್ಳಿಯು ಉಡುಪಿ, ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ಹಾಗೂ ಹೊಸನಗರ ತಾಲ್ಲೂಕುಗಳಿಂದ ಸುತ್ತುವರಿಯಲ್ಪಟ್ಟಿದ್ದು ಮಲೆನಾಡಿನ ಕೇಂದ್ರ ಭಾಗವಾಗಿರುವುದನ್ನು ಗಮನಿಸ ಬಹುದು. ಇದು ಸಾಕಷ್ಟು ಪೌರಾಣಿಕ ಹಿನ್ನೆಲೆಯನ್ನು ಹೊಂದಿದ್ದು ಪರಶುರಾಮನು ತನ್ನ ತಂದೆ ಜಮದಗ್ನಿಯ ಆದೇಶದಂತೆ ತಾಯಿ ರೇಣುಕಾದೇವಿಯ ಶಿರವನ್ನು ಕಡಿದಾಗ ರಕ್ತಸಿಕ್ತವಾದ ಪರಶುವನ್ನು ತೊಳೆಯಲು ಯಾವ ಹಳ್ಳ, ಕೊಳ್ಳಗಳು ಸಿಗದೇ ಇದ್ದಾಗ, ಮಾರ್ಗಶಿರ ಬಹುಳ ಅಮಾವಾಸ್ಯೆಯ ದಿನ ತೀರ್ಥಹಳ್ಳಿಯ ಸಮೀಪದ ಕೊಂಡದಲ್ಲಿ ಪರಶುವನ್ನು ತೊಳೆದಿದ್ದರಿಂದ ರಕ್ತದ ಕಲೆ ಹೋಯಿತೆಂಬ ಐತಿಹ್ಯವಿದೆ. ಈ ತೀರ್ಥಕೊಂಡದ ಮೇಲ್ಭಾಗದಲ್ಲಿರುವ ಹಳ್ಳಿಯೇ ತೀರ್ಥರಾಜಪುರ. ಇದು ತೀರ್ಥಹಳ್ಳಿಯೆಂಬ ರೂಢನಾಮವಾಗಿ ಪ್ರಸಿದ್ಧಿಗೆ ಬಂತು.

ದಕ್ಷಿಣ ಭಾರತದ ಸ್ವಿಟ್ಜರ್‌ಲ್ಯಾಂಡ್, ಹಿಮರಹಿತ ಕಾಶ್ಮೀರ ಎಂಬ ಬಿರುದುಗಳಿಗೆ ಯೋಗ್ಯವಾದ ಕೊಪ್ಪ ನಿತ್ಯ ಹರಿದ್ವರ್ಣ ವನಸಿರಿಯ ಸುಂದರ ಪ್ರದೇಶದಿಂದ ಕೂಡಿದೆ. ಶೃಂಗೇರಿ, ಮೂಡಿಗೆರೆ, ನರಸಿಂಹರಾಜಪುರ, ತೀರ್ಥಹಳ್ಳಿ ತಾಲ್ಲೂಕುಗಳಿಂದ ಸುತ್ತುವರಿದ ಸುಂದರ ತಾಣ. ದಕ್ಷಬ್ರಹ್ಮನ ಯಜ್ಞಮಂಟಪದಲ್ಲಿ ತಂದೆಯಿಂದ ಅವಮಾನಿತಳಾದ ದಾಕ್ಷಾಯಿಣಿ ದೇಹತ್ಯಾಗ ಮಾಡಿದಾಗ ಕೋಪಗೊಂಡ ಶಿವನು ತನ್ನ ಜಟೆಯೊಂದನ್ನು ಕಿತ್ತು ನೆಲಕ್ಕಪ್ಪಳಿಸಿದಾಗ ವೀರಭದ್ರ ಜನಿಸಿದನು. ಶಿವನ ಆದೇಶದಂತೆ ದಕ್ಷಬ್ರಹ್ಮನ ಯಜ್ಞವನ್ನು ಆತಂಕಗೊಳಿಸಿದ ವೀರಭದ್ರ ಕೊಪ್ಪದಲ್ಲಿ ಬಂದು

ನೆಲೆನಿಂತನೆಂದೂ, ಅಂದಿನಿಂದ ಜನರ ಬಾಯಲ್ಲಿ ಕೊಪ್ಪಲು, ಕೊಪ್ಪ ಎಂಬ ಹೆಸರು ರೂಪುಗೊಂಡಿತು ಎಂಬುದು ಐತಿಹ್ಯ.

ಹಸುರುಡುಗೆಯ ಮರಗಿಡಗಳಿಂದ ಗಗನಚುಂಬಿ ಹೆಮ್ಮರಗಳಿಂದ ಗಿರಿಶಿಖರಗಳಿಂದ ತುಂಗೆಯ ನಿನಾದದಿಂದ ತುಂಬಿತುಳುಕುವ ಶೃಂಗೇರಿಯು ಭೌಗೋಳಿಕವಾಗಿ ತೀರ್ಥಹಳ್ಳಿ, ಕೊಪ್ಪ, ಮೂಡಿಗೆರೆ, ಕಾರ್ಕಳ ತಾಲ್ಲೂಕುಗಳಿಂದ ಸುತ್ತುವರಿಯಲ್ಪಟ್ಟಿದೆ. ಪೌರಾಣಿಕ ಹಿನ್ನೆಲೆಯನ್ನು ಹೊಂದಿದ್ದು ರಾಮಾಯಣ ಕಾಲದಲ್ಲಿ ವಿಭಾಂಡಕರು ಮತ್ತು ಅವರ ಮಗ ಋಷ್ಯಶೃಂಗರ ತಪೋಭೂಮಿಯಾಗಿ ನಂತರ ಋಷ್ಯಶೃಂಗರು ಇಲ್ಲಿ ನೆಲೆಸಿದ್ದರಿಂದ ಋಷ್ಯಶೃಂಗಗಿರಿ, ಶೃಂಗಗಿರಿ, ಶೃಂಗಪುರ, ಶೃಂಗೇರಿ ಎಂಬ ಹೆಸರು ಪ್ರಸಿದ್ಧಿಗೆ ಬಂದಿತು.

ಈ ಹಿನ್ನೆಲೆಯ ಭೌಗೋಳಿಕ ದೃಷ್ಟಿಕೋನದಲ್ಲಿ ಅಧ್ಯಯನದ ಕ್ರಮಗಳನ್ನು ನಿರೂಪಿಸುವ ಸಂದರ್ಭದಲ್ಲಿ ಮಧ್ಯಮಲೆನಾಡು ಎನ್ನುವ ಮೇಲಿನ ಮೂರು ತಾಲ್ಲೂಕು ಪ್ರದೇಶಗಳು ಭೌಗೋಳಿಕ ವಾಗಿ ಸಾಮ್ಯತೆಯನ್ನು ಹೊಂದಿದ್ದು ಇನ್ನಿತರ ಪ್ರದೇಶಗಳಿಂದ ಭಿನ್ನವಾಗಿವೆ. ಈ ಮೂರು ತಾಲ್ಲೂಕುಗಳು ತಾಲ್ಲೂಕು ಕೇಂದ್ರಗಳಿಂದ ಸುಮಾರು ೬೦ ಕಿ.ಮೀ. ದೂರದವರೆಗೂ ದಟ್ಟ ಮಲೆನಾಡಿನ ಭಾಗದಿಂದ ಆವೃತವಾಗಿ ಮಲೆನಾಡಿನ ಮಧ್ಯಭಾಗದಲ್ಲಿ ಪಶ್ಚಿಮ ಭಾಗದಲ್ಲಿ ಕರಾವಳಿಯ ಘಟ್ಟ ಪ್ರದೇಶಗಳು ಪೂರ್ವದಲ್ಲಿ ದೂರದ ಅರೆಮಲೆನಾಡಿನ ಪ್ರದೇಶಗಳು ಆವರಿಸಿಕೊಂಡಿರುವುದರಿಂದ ಮಧ್ಯಮಲೆನಾಡಿನ ಕೇಂದ್ರಭಾಗವೆಂದು ಕರೆಯಲಾಗುತ್ತದೆ. ಮಧ್ಯಮಲೆನಾಡು ಎಂಬ ಪದಕ್ಕೆ ನಿಖರವಾದ ಅರ್ಥವನ್ನು ಅಥವಾ ವ್ಯಾಪ್ತಿಯನ್ನು ನಿಗದಿಪಡಿಸುವ ಕೆಲಸ ಕೈಗೊಂಡಾಗ ಕರ್ನಾಟಕದ ಭೌಗೋಳಿಕ ನಕ್ಷೆಯಲ್ಲಿ ಮೂರು ತಾಲ್ಲೂಕುಗಳು ಮಲೆನಾಡಿನ ಕೇಂದ್ರಸ್ಥಾನವೆಂದು ಸಾದರಪಡಿಸಬಹುದಾಗಿದೆ.

ಈ ಮಧ್ಯಮಲೆನಾಡು ಪ್ರದೇಶ ಭಿನ್ನ ಪರಿಸರದಿಂದ ವಿಭಜಿಸಲ್ಪಟ್ಟು ತನ್ನದೇ ಆದ ಸಾಂಸ್ಕೃತಿಕ ಶ್ರೀಮಂತಿಕೆ, ಸ್ಥಿತ್ಯಂತರ, ಬದಲಾವಣೆಗಳನ್ನು ಹೊಂದುತ್ತಾ ತನ್ನದೇ ಆದಂತಹ ಜೀವನ ಮೌಲ್ಯಗಳನ್ನು ರಕ್ಷಿಸಿ ಬೆಳೆಸಿಕೊಂಡು ಬಂದಿರುವುದನ್ನು ವಿವೇಚಿಸಬಹುದು. ಮಧ್ಯಮಲೆನಾಡಿನ ಜನರು ಆಚರಿಸುವ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳು, ಹಬ್ಬ-ಹರಿದಿನಗಳು, ರೂಢಿ-ಸಂಪ್ರದಾಯಗಳು ಏಕತಾನತೆಯನ್ನು ಪ್ರದರ್ಶಿಸುವಂತಹವುಗಳಾಗಿದ್ದು, ಬೇರೆ ಪರಿಸರದ ಜೊತೆಗೆ ಹೊಂದಿಕೊಳ್ಳಲಾರದಂತಹ ಭಿನ್ನತೆಯನ್ನು ಪರಿವೀಕ್ಷಿಸುವಂತಿವೆ. ಇಲ್ಲಿನ ಧಾರ್ಮಿಕ ಕಟ್ಟುಪಾಡುಗಳು, ಜನರ ಅಭಿರುಚಿ ಬಹುಶಃ ಒಂದೇ ರೀತಿಯಾಗಿರುವುದಕ್ಕೆ ಉದಾಹರಣೆಯಾಗಿ ಯಕ್ಷಗಾನ-ಬಯಲಾಟ, ಜಾನಪದ ನೃತ್ಯ, ಅಂಟಿಕೆ-ಪಂಟಿಕೆ ಮುಂತಾದವುಗಳು ಕಂಡುಬರುತ್ತವೆ. ಇಲ್ಲಿನ ಬಹುಸಂಖ್ಯಾತರು ಒಕ್ಕಲಿಗರಾಗಿದ್ದು ಮೂರು ತಾಲ್ಲೂಕುಗಳ ನಡುವೆಯೇ ಭಾಗಶಃ ವೈವಾಹಿಕ ಸಂಬಂಧಗಳು ನಡೆಯುವುದರಿಂದ ಮಧ್ಯಮಲೆನಾಡಿನ ಜನರ ಆಚಾರ-ವಿಚಾರ, ಜನಜೀವನ, ಉಡುಗೆ-ತೊಡುಗೆ, ಆಹಾರ-ವಸತಿಯಲ್ಲಿನ ಸಾಮ್ಯತೆಗಳನ್ನು ಪರಿಗಣಿಸಬಹುದಾಗಿದೆ. ಇಂತಹ ಸ್ಪಷ್ಟವಾದ ಆಲೋಚನಾ ಕ್ರಮದಲ್ಲಿ ಮಧ್ಯಮಲೆನಾಡಿನಲ್ಲಿ

ರಚನೆಯಾದ ಸಾಹಿತ್ಯ ಕೃತಿಗಳಾದ ಕಾವ್ಯ, ಕಥೆ, ಕಾದಂಬರಿಗಳಲ್ಲಿ ವ್ಯಕ್ತವಾಗಿರುವ ಪಾತ್ರ ಹಾಗೂ ಸನ್ನಿವೇಶಗಳು ಈ ಭಾಗಕ್ಕೆ ಸೀಮಿತವಾಗಿರುವುದನ್ನು ಕಾಣಬಹುದಾಗಿದೆ. ಕುವೆಂಪುರವರ ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ ಮುಂತಾದ ಕಾದಂಬರಿಗಳಲ್ಲಿ ಸಮಗ್ರ ಮಲೆನಾಡಿನ ಮೂರು ತಾಲ್ಲೂಕುಗಳ ಭೌಗೋಳಿಕ ವೈಶಿಷ್ಟ್ಯತೆಯನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದು.

ಆರ್ಥಿಕ ದೃಷ್ಟಿಕೋನದಲ್ಲಿ ಅಧ್ಯಯನದ ಕ್ರಮಗಳನ್ನು ನಿರೂಪಿಸುವ ಸಂದರ್ಭದಲ್ಲಿ, ಆರ್ಥಿಕತೆಯು ಸೇರಿದಂತೆ ಇಡೀ ಒಂದು ವ್ಯವಸ್ಥೆಯನ್ನು ಕೇಂದ್ರೀಕರಿಸಿಕೊಂಡಿರುತ್ತದೆ ಹಾಗೂ ಆವರಿಸಿಕೊಂಡಿರುತ್ತದೆ. ಹಾಗೆಯೇ ಆವರಿಸಿಕೊಂಡ ಆರ್ಥಿಕತೆಯ ಮೂಲಕ ಮಧ್ಯಮಲೆನಾಡು ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳುತ್ತದೆ. ಈ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಸಾಂಪ್ರದಾಯಿಕ ಶೈಲಿಯಲ್ಲಿ ಸಾಂಸ್ಕೃತಿಕ ಹಿರಿಮೆಯನ್ನು ಗಟ್ಟಿಗೊಳಿಸಿಕೊಂಡಿರುವುದು ವ್ಯಕ್ತವಾಗುತ್ತದೆ. ಭೌಗೋಳಿಕ ಲಕ್ಷಣವಾಗಿ ಈ ಮಧ್ಯಮಲೆನಾಡು ಪ್ರದೇಶವು ಸಹ್ಯಾದ್ರಿ ಪರ್ವತ ಶ್ರೇಣಿಯ ಘಟ್ಟ ಪ್ರದೇಶಗಳಿಂದ ಆವೃತವಾಗಿದ್ದು ಮೂರು ತಾಲ್ಲೂಕುಗಳ ಭೂಮಿಯ ಮೇಲ್ಮೈ ಲಕ್ಷಣವು ಒಂದೇ ತೆರನಾಗಿರುವುದು. ಇಲ್ಲಿನ ಮಣ್ಣಿನ ಗುಣಮಟ್ಟಕ್ಕೆ ಅನುಗುಣವಾಗಿ ಅಡಿಕೆ, ಭತ್ತ, ತೆಂಗು, ಕಾಫಿ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತಿದ್ದು ಭೂಸ್ವರೂಪ ಹಾಗೂ ಬೆಳೆಗಳ ಮಾದರಿಯು ಬೇರೆ ಪ್ರದೇಶಗಳಿಗಿಂತ ಭಿನ್ನವಾಗಿರುವುದು ಕಂಡುಬರುತ್ತದೆ.

ಬದಲಾವಣೆ ಎನ್ನುವುದು ಪ್ರಕೃತಿಯ ನಿಯಮ. ಇದು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ನಡೆಯುವ ನಿರಂತರ ಪ್ರಕ್ರಿಯೆಯಾಗಿದೆ. ಪ್ರಕೃತಿಯು ಬದಲಾದಂತೆ ಮಾನವ ಸಮಾಜವು ಬದಲಾವಣೆಗೆ ಒಡ್ಡಿಕೊಳ್ಳುತ್ತದೆ. ಪರಿವರ್ತನೆಯು ಜೀವಂತ ಸಮಾಜದ ಬಹುಮುಖ್ಯ ಗುಣ. ಇಂತಹ ಬದಲಾವಣೆಯ ಮನೋಧರ್ಮಕ್ಕೆ ಮಧ್ಯಮಲೆನಾಡು ಹೊರತಾಗಿಲ್ಲ; ಅದು ಸಮೃದ್ಧವಾಗಿದೆ. ಮಧ್ಯಮಲೆನಾಡು ಇಂದು ಹಲವಾರು ಸಮಸ್ಯೆಗಳನ್ನು ತನ್ನ ಒಡಲಿನಲ್ಲಿಟ್ಟುಕೊಂಡು ಪರಿತಪಿಸುತ್ತಿದೆ. ಜನತೆ ಕೃಷಿಯಿಂದ ವಿಮುಖರಾಗುತ್ತಿರುವುದು, ಕೃಷಿಯ ಹಿನ್ನಡೆ, ಆಧುನಿಕ ಶಿಕ್ಷಣದಿಂದ ಪ್ರತಿಭಾ ಪಲಾಯನ, ಭೂಮಿಯ ವಿಭಜನೆ ಮತ್ತು ಛಿದ್ರೀಕರಣ, ನಕ್ಸಲ್ ಚಳುವಳಿ, ಹುಲಿ ಯೋಜನೆ ಹಾಗೂ ರಾಷ್ಟ್ರೀಯ ಉದ್ಯಾನವನ ಇನ್ನೂ ಮುಂತಾದ ಸರ್ಕಾರಿ ಹಾಗೂ ಸರ್ಕಾರೇತರ ಯೋಜನೆಗಳಿಂದಾಗಿ ಮಧ್ಯಮಲೆನಾಡಿನ ಜನರು ವಲಸೆ ಹೋಗುತ್ತಿದ್ದು ಕೇವಲ ವಯಸ್ಕರ ಮತ್ತು ವೃದ್ಧರ ತಾಣವಾಗಿ ರೂಪುಗೊಳ್ಳುತ್ತಿದೆ; ಇದಕ್ಕೆ ಪರಿಹಾರಮಾರ್ಗ ಇನ್ನೂ ಸಾಧ್ಯವಾಗಿಲ್ಲ.

ಮಧ್ಯಮಲೆನಾಡು ಅಂದಿನ ಕಾಲದಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಪ್ರಧಾನ ಕೇಂದ್ರವಾಗಿತ್ತು ಎಂಬುದಕ್ಕೆ ಶಾಸನಗಳು ವಿಪುಲವಾದ ಮಾಹಿತಿಯನ್ನು ನೀಡುವುದರ ಮೂಲಕ ಇಲ್ಲಿನ ಭವ್ಯ ಇತಿಹಾಸಕ್ಕೆ ಮೆರಗನ್ನು ನೀಡುತ್ತವೆ. ಪ್ರಮುಖವಾಗಿ ಆಳ್ವಾರರು, ಸಾಂತರರು, ಹೊಯ್ಸಳರು, ಆರಗದ ಮಾಂಡಳಿಕರು, ಕಳಸ-ಕಾರ್ಕಳದ ಪ್ರಭುಗಳು, ದಾನಿವಾಸ

ಒಡೆಯರು, ಕೆಳದಿ ನಾಯಕರು, ಮೈಸೂರು ಒಡೆಯರು ಈ ಪ್ರದೇಶಗಳಲ್ಲಿ ನೇರವಾಗಿ ಆಡಳಿತ ನಡೆಸಿದ್ದು, ಇಲ್ಲಿನ ಇತಿಹಾಸಕ್ಕೆ ಎಲ್ಲಾ ಕಾಲಘಟ್ಟದಲ್ಲಿ ವಿಪುಲವಾದ ಕೊಡುಗೆ ನೀಡಿದ್ದಾರೆ.

ಅರಸರು ತಮ್ಮ ಕಾಲದಲ್ಲಿ ದೇವಾಲಯ, ಮಠ, ಬಸದಿಗಳನ್ನು ನಿರ್ಮಿಸಲು ದಾನ ನೀಡಿದ ವಿವರಣೆಗಳು ಶಾಸನಗಳಲ್ಲಿ ಉಲ್ಲೇಖವಾಗಿವೆ. ಧಾರ್ಮಿಕ ಸಹಿಷ್ಣುತೆಗೆ ಮಲೆನಾಡು ಪ್ರಸಿದ್ಧಿಯಾಗಿದ್ದಿತು. ಪ್ರಥಮವಾಗಿ ಜೈನ ಧರ್ಮ ಪ್ರಧಾನವಾಗಿ ರೂಪುಗೊಂಡಿದ್ದು ನಂತರದ ಕಾಲದಲ್ಲಿ ಆ ಸ್ಥಾನವನ್ನು ಶೈವ ಧರ್ಮ ಮತ್ತು ವೈಷ್ಣವ ಧರ್ಮಗಳು ಆಕ್ರಮಿಸಿದವು. ಪರಮತ ಸಹಿಷ್ಣುತೆಗೆ ಮಲೆನಾಡು ಹೆಸರುವಾಸಿಯಾಗಿದ್ದಿತು.

ಶಾಸನಗಳು ಬತ್ತಲಾರದ, ಬಗೆದಷ್ಟು ದೊರಕುವ ಅಕ್ಷಯ ನಿಧಿ. ಶಾಸನಗಳು ಇತಿಹಾಸ ರಚನೆಗೆ ಪೂರಕವಾದ ಮಾಹಿತಿಗಳನ್ನು ನೀಡುತ್ತಾ, ಸಾಮಾಜಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ವಿಪುಲವಾದ ಮಾಹಿತಿಗಳನ್ನು ಇತಿಹಾಸಕಾರನಿಗೆ ಉಣಬಡಿಸುತ್ತವೆ. ವಿದ್ವಾಂಸರು ಹಾಗೂ ಶಾಸನತಜ್ಞರು ಶಾಸನಗಳ ಪರಿವೀಕ್ಷಣೆ, ಸಂಗ್ರಹ, ಸಂಪಾದನೆ ಮತ್ತು ಪ್ರಕಟಣೆಯನ್ನು ನಿರಂತರವಾಗಿ ಮಾಡುತ್ತಾ ಅವುಗಳು ಅರ್ಥೈಸುವ ಅಧ್ಯಯನ ಕಾರ್ಯವನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಪೂರ್ವದ ಮಲೆನಾಡಿನ ಇತಿಹಾಸವನ್ನು ಶಿಲಾಶಾಸನಗಳು, ತಾಮ್ರಶಾಸನಗಳು, ವೀರಗಲ್ಲುಗಳು, ಮಾಸ್ತಿಗಲ್ಲುಗಳ ಸುಭದ್ರವಾಗಿ ಕಟ್ಟಿಕೊಡಲು ಕಾರಣೀಭೂತವಾಗಿವೆ.

ಒಂದು ಸಾಂಸ್ಕೃತಿಕ ಪರಿಸರದ ಚರಿತ್ರೆಯನ್ನು ಕಟ್ಟುವಾಗ ಲಿಖಿತ ಆಕರ, ಭೌತಿಕ ಸ್ಮಾರಕಗಳಂತೆ ಸ್ಥಳೀಯ ಜನಸಮುದಾಯದ ಮೌಖಿಕ ಆಕರಗಳು ಮುಖ್ಯವಾಗುತ್ತವೆ. ರಾಜ–ಮಹಾರಾಜರ, ಅಧಿಕಾರಿಗಳ, ಶ್ರೀಮಂತರ ಶಾಸನಗಳಲ್ಲಿ ಬಿರುದಾವಳಿಗಳನ್ನು ದಾಟಿಕೊಂಡು ದಾನಭಾಗವನ್ನು ಗಮನಿಸಿದರೆ, ಸಾಮಾನ್ಯರು ಹಾಕಿಸಿದ ಶಾಸನಗಳಲ್ಲಿ ಆನುಷಂಗಿಕವಾಗಿ ನೀಡಿರುವ ಅಂದಿನ ಜನಸಮುದಾಯದ ಸಾಂಸ್ಕೃತಿಕ ಸಾಮಾಜಿಕ ಜೀವನದ ಒಳನೋಟಗಳು ಗೋಚರಿಸುತ್ತವೆ. ಬರಹವಿಲ್ಲದ ಅನೇಕ ಸ್ಮಾರಕ ಶಿಲ್ಪಗಳು ಬರಹವುಳ್ಳವುಗಳಿಗಿಂತ ಹೆಚ್ಚಿನ ಆಪ್ತತೆಯನ್ನು ಜನಪದದೊಂದಿಗೆ ಹೊಂದಿವೆ. ಅವರ ಬದುಕಿನ ಆಚರಣೆಯ ಭಾಗವಾಗಿವೆ. ಅವುಗಳನ್ನು ಕುರಿತು ಹುಟ್ಟಿಕೊಂಡಿರುವ ಕಥೆಗಳು, ಐತಿಹ್ಯಗಳು, ಹಾಡು, ಜಾತ್ರೆ ಇಂದಿಗೂ ಆ ಕಾಲದ ಮೌಲ್ಯಗಳಿಗೆ ಜನರು ತೋರಿದ ಪ್ರತಿಕ್ರಿಯೆಯನ್ನು ಸ್ಪಷ್ಟಪಡಿಸುತ್ತವೆ.

ಪ್ರಸ್ತುತ ಅಧ್ಯಯನದಲ್ಲಿ ಶಾಸನಗಳನ್ನು ಪ್ರಧಾನ ಆಕರಗಳನ್ನಾಗಿ ಉಪಯೋಗಿಸಿಕೊಳ್ಳಲಾಗಿದೆ. ಶಿಲಾಶಾಸನ ಮತ್ತು ತಾಮ್ರಶಾಸನಗಳ ರೂಪದಲ್ಲಿ ದೊರೆಯುವ ಆಧಾರಗಳಿಂದ ಮಧ್ಯಮಲೆನಾಡಿನ ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ತಿಳಿಯಲು ಪ್ರಯತ್ನಿಸಲಾಗಿದೆ. ಶಾಸನಗಳನ್ನು ಆಕರಗಳನ್ನಾಗಿ ಬಳಸಿಕೊಂಡು ವಸ್ತುನಿಷ್ಠವಾಗಿ ವಿಮರ್ಶಿಸಿ, ಆ ಕಾಲದ ಮಾಹಿತಿ ಮೂಲಗಳೊಂದಿಗೆ ಸಮೀಕರಿಸಿ ಬಳಸಲಾಗಿದೆ. ಶೃಂಗೇರಿ ಮಠಕ್ಕೆ ಸೇರಿದ ಕಡತಗಳು,

ದಾಖಲೆಗಳು ಈ ಅಧ್ಯಯನದ ಇನ್ನಿತರ ಆಕರಗಳಾಗಿದ್ದು ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಹಲವಾರು ಮಾಹಿತಿಗಳನ್ನು ಉಪಯೋಗಿಸಿಕೊಳ್ಳಲಾಗಿದೆ.

೧.೧. ಅಧ್ಯಯನದ ಉದ್ದೇಶ

ಮಧ್ಯಮಲೆನಾಡಿನ ಶಾಸನಗಳಲ್ಲಿ ಕಂಡುಬರುವ ರಾಜಕೀಯ, ಆರ್ಥಿಕ, ಸಾಮಾಜಿಕ ವ್ಯವಸ್ಥೆಯ ಬಗ್ಗೆ ಇದುವರೆಗೆ ಪೂರ್ಣ ಸ್ವರೂಪದ ಅಧ್ಯಯನ ನಡೆದಿಲ್ಲ. ಮಧ್ಯಮಲೆನಾಡು ಸಾಂಸ್ಕೃತಿಕ ಕೇಂದ್ರವಾಗಿದ್ದು ವಿವಿಧ ಕಾಲಘಟ್ಟದಲ್ಲಿ ತನ್ನದೇ ಆದ ಧಾರ್ಮಿಕ, ಆರ್ಥಿಕ, ಸಾಮಾಜಿಕ ಪ್ರಭಾವವನ್ನು ಹೊಂದಿತ್ತು. ಪ್ರಾಕೃತಿಕ ಸೊಬಗು, ಸಹ್ಯಾದ್ರಿ ಬೆಟ್ಟ ಶ್ರೇಣಿಯಿಂದ ಆವೃತಗೊಂಡಿರುವ ಹಿನ್ನೆಲೆಯಲ್ಲಿ ಲಭ್ಯವಿರುವ ಶಾಸನಗಳನ್ನು ಎಲ್ಲಾ ದೃಷ್ಟಿಕೋನಗಳಿಂದ ಅಧ್ಯಯನ ಮಾಡುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ವಿಜಯನಗರ ಅರಸರ ಮಾಂಡಳಿಕರು ಹಾಗೂ ಬಂಧುಗಳಾಗಿದ್ದ ಆರಗದ ಒಡೆಯರು ಈ ಪ್ರದೇಶದ ಎಲ್ಲೆಯನ್ನು ಮೀರಿ ಶಾಸನಗಳನ್ನು ಬರೆಯಿಸಿದ್ದು ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮಹತ್ವವಾದುದು. ಶೃಂಗೇರಿಯ ಹಾಗೂ ಕವಲೇದುರ್ಗದ ತಾಮ್ರಶಾಸನಗಳು ಬಹುಶಃ ಯಾವ ಭಾಗದಲ್ಲಿಯೂ ಇಷ್ಟೊಂದು ಹೇರಳವಾಗಿ ದೊರೆಯಲಿಕ್ಕಿಲ್ಲ. ಆದುದರಿಂದ ಈ ಶಾಸನಗಳ ಸಮಗ್ರ ಅಧ್ಯಯನದ ಅವಶ್ಯಕತೆಯಿದ್ದು ಇದನ್ನು ಸಫಲಗೊಳಿಸುವ ಉದ್ದೇಶದಿಂದ ಈ ವಿಷಯವನ್ನು ಆಯ್ದುಕೊಳ್ಳಲಾಗಿದೆ.

ಶಾಸನಗಳಲ್ಲಿ ಉಲ್ಲೇಖವಾಗಿರುವ ರಾಜ್ಯ-ರಾಜರುಗಳ ನಡುವಿನ ಸಂಬಂಧ, ಆರ್ಥಿಕತೆ, ಜನ ಜೀವನ, ವಿವಿಧ ಧರ್ಮಗಳು, ಮಠಗಳು, ದೇವಸ್ಥಾನ ಮುಂತಾದ ವಿಷಯಗಳ ಬಗ್ಗೆ ಯಾರೂ ಇಲ್ಲಿಯವರೆಗೂ ಅಧ್ಯಯನ ಮಾಡಿಲ್ಲ. ಕೆಲವೊಂದು ಬಿಡಿ ಶಾಸನಗಳನ್ನು ಪ್ರಕಟಿಸಿದರೇ ಹೊರತು ಶಾಸನಗಳ ತಲಸ್ಪರ್ಶಿ ಅಧ್ಯಯನ ನಡೆಸಿಲ್ಲ. ಈ ಸಂಬಂಧಗಳ ಸೂಕ್ಷ್ಮ ವಿವರಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡುವುದು ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ.

ಮಧ್ಯಮಲೆನಾಡು ಸಾಂತರರು ಮತ್ತು ಆಳುಪರ ಕಾಲದಿಂದಲೂ ಒಂದು ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿ ಬೆಳವಣಿಗೆಯಾದ ಮೇಲೆ ಈ ಪ್ರದೇಶವು ಕಾಲಕಾಲಕ್ಕೆ ಅನೇಕ ಸಾಮಂತರ, ರಾಜಮನೆತನಗಳ ಒಂದು ಪ್ರಸಿದ್ಧ ಕೇಂದ್ರವಾಗಿ ಬೆಳೆಯಿತು. ಉದಾಹರಣೆಗೆ ಆರಗ ಮಾಂಡಳಿಕರು, ಒಂದು ಸಣ್ಣ ಪ್ರದೇಶದಲ್ಲಿ ರಾಜ್ಯವನ್ನು ಕಟ್ಟಿದ ನಂತರ ಹೇಗೆ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡರು ಎಂಬುದನ್ನು ಅಧ್ಯಯನದ ಮೂಲಕ ತಿಳಿಯಬಹುದು.

ಇಲ್ಲಿನ ಶಾಸನಗಳನ್ನು ಮುಂದಿಟ್ಟುಕೊಂಡು ಅಧ್ಯಯನ ಮಾಡಿದಾಗ ರಾಜಪ್ರಭುತ್ವ ಮತ್ತು ಪುರೋಹಿತಶಾಹಿ ವರ್ಗಗಳು ಸಾಮಾಜಿಕವಾಗಿ ಸ್ಥಾಪಿಸಿಕೊಂಡ ಮೌಲ್ಯಗಳನ್ನು ಆರ್ಥಿಕವಾಗಿ ಹಿಂದುಳಿದವರ ಮೇಲೆ ತನ್ನ ಹಿಡಿತವನ್ನು ಸಾಧಿಸಿ ಅದರೊಂದಿಗೆ ತಮ್ಮ ಕಾರ್ಯಗಳನ್ನು ಮಾಡಿಸಿಕೊಳ್ಳುವ ವ್ಯವಸ್ಥಿತವಾದ ಸಂಚನ್ನು ಹೇಗೆ ರೂಪಿಸಿಕೊಂಡರು. ಹಾಗೆಯೇ ತಮ್ಮ

ಪ್ರಾಬಲ್ಯವನ್ನು ಗಟ್ಟಿಗೊಳಿಸಿಕೊಂಡು ಮಧ್ಯಮಲೆನಾಡನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸಿಕೊಂಡರು ಎಂಬುದರ ಅಧ್ಯಯನವು ಮಹತ್ವವಾಗಿದ್ದು ಶಾಸನಗಳು ಅದಕ್ಕೆ ಪೂರಕವಾಗಿ ಸಂಪೂರ್ಣ ಮಾಹಿತಿಗಳನ್ನು ಒದಗಿಸಿಕೊಡುತ್ತವೆ.

ಮಧ್ಯಮಲೆನಾಡಿನ ಮಧ್ಯಕಾಲೀನ ಸಮಯದಲ್ಲಿ ಉಂಟಾದ ಸಾಮಾಜಿಕ ಮತ್ತು ಧಾರ್ಮಿಕ ಬದಲಾವಣೆಗಳು, ಅವುಗಳಿಂದ ಜನಸಾಮಾನ್ಯರ ಮೇಲೆ ಆದಂತಹ ಮಹತ್ತರ ಸ್ಥಿತ್ಯಂತರಗಳು ಇವೆಲ್ಲವುಗಳ ಹಿಂದಿರುವುದು ಆರ್ಥಿಕ ಸ್ಥಿತಿ. ಈ ಆರ್ಥಿಕ ಸ್ಥಿತಿಯಿಂದಾಗಿ ಜನಸಾಮಾನ್ಯರು ಕೂಡ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಎಂತಹ ಸವಾಲುಗಳು ಹಾಗೂ ಬದಲಾವಣೆಗಳನ್ನು ಎದುರಿಸಿದರು ಎಂಬುದನ್ನು ಶಾಸನಗಳ ಮೂಲಕ ಅರ್ಥೈಸಿಕೊಳ್ಳುವುದು ಅಧ್ಯಯನದ ಉದ್ದೇಶ ವಾಗಿದೆ. ರಾಜಪ್ರಭುತ್ವ ಮತ್ತು ಪುರೋಹಿತಶಾಹಿ ವರ್ಗಗಳ ನೇರ ನಿಯಂತ್ರಣಕ್ಕೊಳಪಟ್ಟ ಈ ಪ್ರದೇಶಗಳ ಜನಸಾಮಾನ್ಯರ ಬದುಕನ್ನು ಕುರಿತು ವಿಮರ್ಶಾತ್ಮಕವಾಗಿ, ವಿಶ್ಲೇಷಣಾತ್ಮಕವಾದ ನೋಟದಲ್ಲಿ ಅರ್ಥೈಸುವ ಕಾರ್ಯವನ್ನು ಕೈಗೊಳ್ಳುವುದು ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲೊಂದು. ಹಾಗೆಯೇ ಸಮಾಜದಲ್ಲಿ ಅವರು ಸಮಾಜದ ಬಹುಸಂಖ್ಯಾತ ಮೂರನೇ ವರ್ಗದವರಾಗಿದ್ದು ಯುದ್ಧದಲ್ಲಿ ವೀರರಾಗಿ, ದೇವಾಲಯಗಳ ನಿರ್ಮಾಣಕಾರರಾಗಿ ಯಾವ ರೀತಿಯಲ್ಲಿ ಬದುಕಿದರು ಮತ್ತು ಶೋಷಣೆಗೆ ಒಳಗಾದ ಸ್ತ್ರೀ ಬದುಕಿನ ಚಿತ್ರಣವನ್ನು ಪರಾಮರ್ಶಿಸುವ ಉದ್ದೇಶ ಹೊಂದಲಾಗಿದೆ.

ಮಧ್ಯಮಲೆನಾಡಿನ ಪ್ರದೇಶಗಳೆಂದೇ ಬಿಂಬಿತವಾಗಿರುವ ತೀರ್ಥಹಳ್ಳಿ, ಕೊಪ್ಪ, ಶೃಂಗೇರಿಯಲ್ಲಿ ವೀರಗಲ್ಲು, ಮಾಸ್ತಿಗಲ್ಲು, ತುರುಗೋಳ್, ಪೆಣ್ಬುಯಲ್ ಶಾಸನಗಳು ಹೇರಳವಾಗಿ ಕಂಡುಬರುತ್ತವೆ. ಕೆಲವೊಂದು ಕಡೆ ಮಾಸ್ತಿಕಲ್ಲು ಬಿಡಿ ಬಿಡಿಯಾಗಿ ಕಾಣಸಿಗುತ್ತಿದ್ದರೂ ಕೆಲವು ಸ್ಥಳಗಳಲ್ಲಿ ಗುಂಪುಗುಂಪಾಗಿ ಸಿಗುವುದುಂಟು. ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿಯೂ ಹೇರಳವಾಗಿ ಮಾಸ್ತಿಗಲ್ಲುಗಳ ಕುರುಹುಗಳು ಸಿಗುತ್ತವೆ.

೧.೨ ಭೌಗೋಳಿಕ ವ್ಯಾಪ್ತಿ

ಮಧ್ಯಮಲೆನಾಡಿನ ಮೂರು ತಾಲ್ಲೂಕುಗಳಾದ ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ ತಮ್ಮದೇ ಆದ ವಿಶಿಷ್ಟ ಇತಿಹಾಸವನ್ನು ಹೊಂದಿವೆ, ಭೌಗೋಳಿಕವಾಗಿ ಬೆಟ್ಟ, ಗುಡ್ಡ, ಅರಣ್ಯ, ನದಿ, ಪರ್ವತ ಶ್ರೇಣಿಯಿಂದ ಸುತ್ತುವರೆದಿದ್ದು ಪ್ರಾಕೃತಿಕ ಸಿರಿಸಂಪತ್ತಿನಿಂದ ಕೂಡಿದ ತಾಣ. ಅತಿಯಾದ ಮಳೆಯಿಂದಾಗಿ ಹಾಗೂ ತಂಪಾದ ವಾತಾವರಣದಿಂದಾಗಿ ಇಲ್ಲಿನ ಶಿಲಾಶಾಸನಗಳು ಸಾಕಷ್ಟು ತ್ರುಟಿತಗೊಂಡಿವೆ.

ಭೌಗೋಳಿಕವಾಗಿ ಮೂರು ತಾಲ್ಲೂಕುಗಳಲ್ಲಿ ಕೊಪ್ಪ ಮತ್ತು ಶೃಂಗೇರಿ ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟರೆ, ತೀರ್ಥಹಳ್ಳಿ ತಾಲ್ಲೂಕು ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಗೆ ಒಳಪಡುತ್ತದೆ. ಇಲ್ಲಿ ಕಂಡುಬರುವ ಶಾಸನಗಳಲ್ಲಿನ ವಿಷಯಗಳಲ್ಲಿ ಒಂದೇ ರೀತಿಯ ಹೋಲಿಕೆ, ಅನುಕರಣೆಯನ್ನು ಕಾಣಬಹುದು.

ಪ್ರಸ್ತುತ ಅಧ್ಯಯನ ವ್ಯಾಪ್ತಿಯು ಭೌಗೋಳಿಕವಾಗಿ ಮೂರು ಜಿಲ್ಲೆಗಳ ಇನ್ನಿತರೆ ಕೆಲವು ಪ್ರದೇಶಗಳಿಗೂ ವ್ಯಾಪಿಸಿದೆ. ಆಧುನಿಕ ಆಡಳಿತ ವಿಭಾಗಗಳು ರಚನೆಯಾದಂತೆ ಪ್ರಾಚೀನ ಕಾಲದಲ್ಲಿ ಪ್ರಾಂತೀಯ ವ್ಯವಸ್ಥೆಯಾಗಿ ಸೀಮಾತೀತವಾಗಿ ರೂಪುಗೊಂಡವುಗಳಾಗಿದ್ದವು. ಸಾಂತರರು ಮತ್ತು ಆಳುಪರ ಉದಯವಾಗಿ ಎರಡು ವಂಶಗಳ ನಡುವೆ ವೈವಾಹಿಕ ಸಂಬಂಧಗಳು ಬೆಸೆದು ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವೊಂದು ಪ್ರದೇಶಗಳನ್ನೂ ವ್ಯಾಪಿಸಿಕೊಂಡಿದ್ದವು. ಕಳಸ-ಕಾರ್ಕಳದ ಭೈರರಸವೊಡೆಯರು ಎರಡು ಜಿಲ್ಲೆಗಳನ್ನು ಆಳಿದ್ದರ ಬಗ್ಗೆ ಹಲವಾರು ಶಾಸನಗಳು ಎರಡು ಜಿಲ್ಲೆಗಳಲ್ಲೂ ಲಭಿಸಿವೆ. ವಿಜಯನಗರ ಅರಸರ ಸಾಮಂತರಾದ ಆರಗದ ಮಾಂಡಳಿಕರು ಮಧ್ಯಮಲೆನಾಡಿನ ಬಹುವಿಸ್ತಾರ ಸಾಮ್ರಾಜ್ಯವನ್ನು ಆಳಿದ್ದಲ್ಲದೇ ಭೌಗೋಳಿಕ ಸೀಮೆಯನ್ನು ಮೀರಿ ಆಡಳಿತ ನಡೆಸಿದರು. ಆರಗವನ್ನು ರಾಜಧಾನಿಯನ್ನಾಗಿರಿಸಿ ಇಂದಿನ ಚಂದ್ರಗುತ್ತಿಯವರೆಗೂ ರಾಜ್ಯಭಾರ ಮಾಡಿದರು. ದಾನಿವಾಸ ಒಡೆಯರು, ಕೆಳದಿ ನಾಯಕರು ಮಧ್ಯಮಲೆನಾಡಿನ ಪ್ರದೇಶಗಳನ್ನು ತಮ್ಮ ಆಳ್ವಿಕೆಗೆ ಒಳಪಡಿಸಿ ಕೊಂಡು ಆಡಳಿತ ನಡೆಸಿದರು. ಮೇಲಿನ ರಾಜವಂಶಗಳು ಮೂರು ತಾಲ್ಲೂಕುಗಳನ್ನು ಮೀರಿ-ಅದರಾಚೆಗಿನ ಪ್ರದೇಶಗಳನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿರುವುದರಿಂದ ಅಲ್ಲಿನ ಶಾಸನಗಳನ್ನು ಕೂಡ ಅಧ್ಯಯನದಲ್ಲಿ ಸೇರಿಸಿಕೊಳ್ಳಲಾಗಿದೆ.

೧.೩. ಈವರೆಗಿನ ಅಧ್ಯಯನಗಳು

ಶಾಸನಗಳು ವಿವಿಧ ಕಾಲಘಟ್ಟಗಳಲ್ಲಿ ಇತಿಹಾಸವನ್ನು ಕಟ್ಟಿಕೊಡುವ ಮೌಲ್ಯಯುತವಾದ ಆಕರಗಳೆಂದು ಪರಿಗಣಿಸಬಹುದು. ಇಂತಹ ಶಾಸನಗಳು ಮಧ್ಯಮಲೆನಾಡಿನ ಪ್ರದೇಶಗಳಲ್ಲಿ ಹೇರಳವಾಗಿ ಲಭಿಸಿವೆ. ಶಾಸನಗಳ ಅಧ್ಯಯನದಲ್ಲಿ ಹಲವಾರು ವಿದ್ವಾಂಸರು, ಅಧ್ಯಾಪಕರು, ಇತರ ಅಧಿಕಾರಿಗಳು ಹಾಗೂ ಜನಸಾಮಾನ್ಯರು ಆಸಕ್ತಿ ವಹಿಸಿದ್ದರು ಹಾಗೂ ಇಂದಿಗೂ ಆಸಕ್ತಿ ಇಟ್ಟುಕೊಂಡಿರುವವರನ್ನು ಗಮನಿಸಬಹುದು. ಇಂತಹ ಶಾಸನಗಳನ್ನು ಅತ್ಯಮೂಲ್ಯವಾದ ನಾಡಿನ ಆಸ್ತಿಯೆಂದು ಪರಿಗಣಿಸಿ ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೆನ್ನಬಹುದು. ಆದರೆ ದುರಾದೃಷ್ಟವಶಾತ್ ಶಾಸನಗಳ ಸಂರಕ್ಷಣೆಯು ಜನರ ಮತ್ತು ಆಡಳಿತಗಾರರ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಖೇದಕರವಾದ ಸಂಗತಿ.

ಪ್ರಮುಖ ರಾಜಕೀಯ, ಸಾಂಸ್ಕೃತಿಕ ಸಂಗತಿಗಳ ಮೇಲೆ ಬೆಳಕು ಚೆಲ್ಲುವ ಇಲ್ಲಿನ ಕೆಲವು ಶಾಸನಗಳ ಪ್ರಾಮುಖ್ಯತೆಯನ್ನು ಕುರಿತು ತಿಳಿಯುವುದು ಪ್ರಸ್ತುತ ಅಧ್ಯಯನಕ್ಕೆ ಸಹಾಯಕ ವಾಗುತ್ತದೆ. ಸಾಂತರರು ಹಾಗೂ ಆಳುಪರ ಉದಯದೊಂದಿಗೆ ಪ್ರಾಮುಖ್ಯತೆಯನ್ನು ಪಡೆದುಕೊಂಡುಮಧ್ಯಮಲೆನಾಡು ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಮಧ್ಯಮಲೆನಾಡು ದಟ್ಟ ಅರಣ್ಯಗಿರಿ ಪರ್ವತಗಳಿಂದ ಕೂಡಿದ್ದು ಶಾಸನಗಳ ಹುಡುಕುವಿಕೆ ಮತ್ತು ಅಧ್ಯಯನಕ್ಕೆ ಸಾಕಷ್ಟು ಸಮಯ ತೆಗೆದುಕೊಳ್ಳಬೇಕಾಗುವುದು. ದೊರೆತಿರುವ ಬಹಳಷ್ಟು ಶಿಲಾಶಾಸನಗಳು ತ್ರುಟಿತವಾಗಿದ್ದು, ಬರವಣಿಗೆಯಲ್ಲಿ ಗಟ್ಟಿ ಕಲ್ಲನ್ನು ಬಳಸಿದ್ದೇ ಕಾರಣವೆನ್ನಬಹುದು.

ಈ ನಿಟ್ಟಿನಲ್ಲಿ ಸ್ಪಷ್ಟ ಬರವಣಿಗೆ ಇಲ್ಲದಿರುವುದರಿಂದ ಶಾಸನಗಳ ಅಧ್ಯಯನಕ್ಕೆ ಕೊಂಚ ಹಿನ್ನಡೆಯಾಗುವುದು. ಆದರೂ ಅಂತಹ ಶಾಸನಗಳನ್ನು ಸಾಧ್ಯವಾದಷ್ಟು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಇಲ್ಲಿಯವರೆಗಿನ ಶಾಸನಗಳ ಅಧ್ಯಯನದಲ್ಲಿ ಹಲವಾರು ವ್ಯಕ್ತಿಗಳು ಪ್ರಾಮಾಣಿಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವುದು ನಿಜಕ್ಕೂ ಸಂತೋಷಪಡಬೇಕಾದ ಸಂಗತಿ. ಈ ನಿಟ್ಟಿನಲ್ಲಿ ಇಲ್ಲಿನ ಶಾಸನಗಳನ್ನು ಮೊದಲು ಅಧ್ಯಯನ ಮಾಡಿದವರು ಬಿ.ಎಲ್.ರೈಸ್. ಇವರು ಕ್ರಿ.ಶ. ೧೮೮೪ರಿಂದ ೧೯೦೬ರವರೆಗೆ ಸಾವಿರಾರು ಶಾಸನಗಳನ್ನು ಸಂಗ್ರಹಿಸಿ, ವಿದ್ವಾಂಸರ ನೆರವಿನಿಂದ 'ಎಪಿಗ್ರಾಫಿಯ ಕರ್ನಾಟಿಕ' ಎಂಬ ಸಂಪುಟವನ್ನು ಸಂಪಾದಿಸಿ ಪ್ರಕಟಿಸಿದರು. ಈ ಹಿನ್ನೆಲೆಯಲ್ಲಿ ನಿಜಕ್ಕೂ ಬಿ.ಎಲ್.ರೈಸ್ ಅವರ ಸೇವೆಯನ್ನು ಮರೆಯುವಂತಿಲ್ಲ.

'ಎಪಿಗ್ರಾಫಿಯ ಕರ್ನಾಟಿಕ' (ಸಂಪುಟ–೧೩, ೨೦೦೬) ಪ್ರಕಟವಾಗಿರುವ ಶಾಸನಗಳ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಂಖ್ಯೆ: ೨೫೫. ಹಲವಾರು ಬಿಡಿಶಾಸನಗಳು ಇತ್ತೀಚೆಗೆ ಪ್ರಕಟವಾಗಿವೆ. ತೀರ್ಥಹಳ್ಳಿಯಲ್ಲಿ ಇತ್ತೀಚೆಗೆ ಶಾಸನಗಳನ್ನು ಕುರಿತು ಅಧ್ಯಯನ ಮಾಡುತ್ತಿರುವವರು ಜಿ.ಕೆ. ದೇವರಾಜಸ್ವಾಮಿ ಎನ್ನುವರು. ತೀರ್ಥಮತ್ತೂರಿನ ಹಲವಾರು ತಾಮ್ರ ಶಾಸನಗಳನ್ನು ಪ್ರಕಟಿಸಿದ್ದು ಸಂಪುಟ–೧೩ರಲ್ಲಿ ಸೇರಿಕೊಳ್ಳಬೇಕಾಗಿದೆ. ಹಾಗೆಯೇ ಕುಂದಾದ್ರಿ, ತೀರ್ಥಹಳ್ಳಿಯ ರಾಮಮಂಟಪದ ಹಾಗೂ ಕೆಸವೆ ಶಾಸನಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದು ಇವುಗಳು ಸಂಪುಟ ಸಂಚಿಕೆಗೆ ಸೇರಬೇಕಾಗಿದೆ. ಈ ನಿಟ್ಟಿನಲ್ಲಿ ಜಿ.ಕೆ. ದೇವರಾಜಸ್ವಾಮಿಯವರ ಶಾಸನಗಳ ಅಧ್ಯಯನ ಹಾಗೂ ಸಂಶೋಧನೆಯಲ್ಲಿ ಇವರ ಸೇವೆ ಸ್ತುತ್ಯಾರ್ಹ.

ಪ್ರಸ್ತುತ ಅಧ್ಯಯನದ ಮೂಲಕ ಹಲವಾರು ಅಪ್ರಕಟಿತ ಶಾಸನಗಳನ್ನು ಪತ್ತೆ ಹಚ್ಚಲಾಗಿದೆ. ಅವುಗಳಲ್ಲಿ ಬಹಳಷ್ಟು ಶಾಸನಗಳು ತ್ರುಟಿತವಾಗಿದ್ದು ಓದಿ ಅರ್ಥೈಸಲು ಕಷ್ಟಸಾಧ್ಯ. ಮಳಲಿಮಕ್ಕಿ ಶಾಸನ ಮತ್ತು ನೇರಳೆ ಶಾಸನ, ಕಲ್ಲುಕೊಪ್ಪ ಶಾಸನ, ಬಿಳುವಿನ ಕೊಪ್ಪ ಶಾಸನ, ಹರೂರು ಮಕ್ಕಿ ಶಾಸನ, ಹುಲಿಸರದ ವೀರಗಲ್ಲು ಶಾಸನಗಳ ಪಾಠಗಳನ್ನು ಸಂಶೋಧಿಸಿ ಪತ್ರಿಕೆಯಲ್ಲಿ ಪ್ರಕಟಿಸಿದ್ದೇನೆ.

ಇನ್ನೊಬ್ಬ ಪ್ರಮುಖ ಶಾಸನಾಸಕ್ತರಾದ ಮೇಕನಗದ್ದೆ ಲಕ್ಷ್ಮಣಗೌಡ ಅವರು ಇತ್ತೀಚೆಗೆ ಕುಂದಾದ್ರಿಯ ಎರಡು ಶಾಸನಗಳನ್ನು ಹಾಗೂ ಹಾರೋಗೊಳಿಗೆಯ ಒಂದು ಶಾಸನವನ್ನು ಪತ್ತೆ ಹಚ್ಚಿದ್ದಾರೆ. ಅದು ಅಧ್ಯಯನ ಹಂತದಲ್ಲಿದ್ದು ಪ್ರಕಟಣೆಗೆ ಯೋಗ್ಯವೆನಿಸಿವೆ. ಅದೇ ರೀತಿಯಲ್ಲಿ ಶಾಸನಾಸಕ್ತರಾದ ಶ್ರೀ ಎಂ.ಆರ್. ಗುರು ಎನ್ನುವವರು ಶಾಸನಗಳ ಪ್ರಕಟಣೆಯಲ್ಲಿ ಹಾಗೂ ಹಲವಾರು ಹೊಸ ಶಾಸನಗಳನ್ನು ಸಂಪುಟಕ್ಕೆ ಸೇರಿಸಲು ನೆರವಾಗುತ್ತಿದ್ದಾರೆ. ಜೆ.ಎಫ್. ಫ್ಲೀಟ್, ಬಿ.ಆರ್. ಗೋಪಾಲ್, ಪಿ. ಗುರುರಾಜ್ ಭಟ್ ಹಾಗೂ ಇತರರು ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್(ಎಮ್.ಎ.ಆರ್)ನಲ್ಲಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ

ನಿಯತಕಾಲಿಕೆ ಶಾಸನ ಅಧ್ಯಯನ ಹಾಗೂ ಮಂಗಳೂರು ಶೋಧ ಪತ್ರಿಕೆಯಲ್ಲಿ ಮತ್ತು ಇತಿಹಾಸ ದರ್ಶನ ಸಂಪುಟದಲ್ಲಿ ಇಲ್ಲಿನ ಹಲವಾರು ಶಾಸನಗಳನ್ನು ಪ್ರಕಟಿಸಿದ್ದಾರೆ.

'ಎಪಿಗ್ರಾಫಿಯ ಕರ್ನಾಟಿಕ'(ಸಂಪುಟ ೧೨, ೨೦೦೩)ದಲ್ಲಿ ಪ್ರಕಟವಾಗಿರುವ ಕೊಪ್ಪ ತಾಲ್ಲೂಕಿನ ಶಾಸನಗಳ ಸಂಖ್ಯೆ ೪೬, ಹಲವಾರು ಬಿಡಿಶಾಸನಗಳನ್ನು ಪತ್ತೆ ಹಚ್ಚಿದ್ದು ಇನ್ನಷ್ಟೇ ಪ್ರಕಟವಾಗಬೇಕಿದೆ. ಕೊಪ್ಪ ಶಾಸನಗಳನ್ನು ಮೊದಲಿಗೆ ಸಂಶೋಧಿಸಿ, ಪ್ರಕಟಿಸಿ 'ಎಪಿಗ್ರಾಫಿಯ ಕರ್ನಾಟಿಕ' ಮಾಲೆಯನ್ನು ರಚಿಸಿದವರು ಬಿ.ಎಲ್.ರೈಸ್. ಇತ್ತೀಚೆಗೆ ಕೊಪ್ಪದ ಶಾಸನಗಳನ್ನು ಪ್ರಕಟಿಸಿ ಸಂಪುಟಕ್ಕೆ ಸೇರಿ ಸಹಕರಿಸಿದವರು ಮೇಕನಗದ್ದೆ ಲಕ್ಷ್ಮಣಗೌಡರು. ಅವರು ಅಧ್ಯಯನ ಮಾಡಿದ ೪ ಹೊಸ ಶಾಸನಗಳನ್ನು ಸಂಪುಟಕ್ಕೆ ಸೇರಿಸಲಾಗಿದೆ. ಇನ್ನುಳಿದ ಮೂರು ಶಾಸನಗಳು ಸಂಪುಟಕ್ಕೆ ಸೇರಬೇಕಿದೆ. ಕೊಪ್ಪ ತಾಲೂಕಿನ ಶಾಸನಗಳ ಅಧ್ಯಯನದಲ್ಲಿ ಲಕ್ಷ್ಮಣಗೌಡರ ಸೇವೆ ಸ್ತುತ್ಯಾರ್ಹ. ಕೊಪ್ಪ ತಾಲ್ಲೂಕಿನಲ್ಲಿ ನೂರಾರು ಹಳ್ಳಿಗಳು ಇವೆಯಾದರೂ ಶಾಸನ ದೊರೆತಿರುವುದು ಕೇವಲ ೩೫ ಗ್ರಾಮಗಳಲ್ಲಿ ಮಾತ್ರ. ಬಿ.ಎಲ್. ರೈಸ್ ಅವರು ಕ್ರಿ.ಶ. ೧೯೦೧ರಲ್ಲಿ ಕಡೂರು ತಾಲ್ಲೂಕು ಶಾಸನಗಳನ್ನು ಪ್ರಕಟಿಸಿದಾಗ ಬೆಳಕಿಗೆ ಬಂದದ್ದು ೩೧ ಶಾಸನಗಳು. ಮೈಸೂರು ಪುರಾತತ್ವ ಇಲಾಖೆ ಪ್ರಕಟಿಸಿದ್ದು ೧೧ ಶಾಸನಗಳು. ಕೊಪ್ಪ ತಾಲ್ಲೂಕಿನ "ಶಾಸನಗಳಲ್ಲಿ ಉಲ್ಲೇಖವಾಗಿರುವ ಸ್ಥಳ ನಾಮಗಳನ್ನು ಒಂದು ಅಧ್ಯಯನ" ಎಂಬ ಪ್ರಬಂಧವನ್ನು ಶ್ರೀಎ.ಆರ್. ಗುರು ಎಂಬುವವರು ಮಂಡಿಸಿದ್ದರು. ಮೇಗುಂದದ ಎರಡು ಶಾಸನಗಳನ್ನು ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದ ಪ್ರೊ. ಪಿ.ಎನ್. ನರಸಿಂಹಮೂರ್ತಿಯವರು ಪ್ರಕಟಿಸಿದ್ದಾರೆ.

ಇನ್ನೊಬ್ಬ ಶಾಸನಾಸಕ್ತರು ಹಾಗೂ ವಿದ್ವಾಂಸರಾದ ಹೆಚ್. ಎಂ. ನಾಗರಾಜರಾವ್‌ರವರು ಕೊಪ್ಪ ತಾಲ್ಲೂಕಿನ ಹಲವಾರು ಶಾಸನಗಳನ್ನು ಪ್ರಕಟಿಸಿ ಸಂಪುಟಕ್ಕೆ ಸೇರ್ಪಡೆಗೊಳ್ಳಲು ಸಹಕರಿಸಿದ್ದಾರೆ.

ಎಪಿಗ್ರಾಫಿಯ ಕರ್ನಾಟಿಕ(ಸಂಪುಟ-೧೧, ೧೯೯೮)ದಲ್ಲಿ ಪ್ರಕಟವಾಗಿರುವ ಶೃಂಗೇರಿ ತಾಲ್ಲೂಕಿನ ಶಾಸನಗಳ ಸಂಖ್ಯೆ ೮೦. ಇಲ್ಲಿನ ಶಾಸನಗಳನ್ನು ಮೊದಲಿಗೆ ಪ್ರಕಟಿಸಿದವರು ಬಿ.ಎಲ್. ರೈಸ್‌ರವರು. ನಂತರ ಡಾ. ಎ.ವಿ. ನರಸಿಂಹಮೂರ್ತಿಯವರು, ಹೆಚ್.ಎಂ. ನಾಗರಾಜರಾವ್ ಅವರು ಶಾಸನಗಳ ಅಧ್ಯಯನದಲ್ಲಿ ಸಹಕರಿಸಿದ್ದಾರೆ.

ಇಷ್ಟೆಲ್ಲಾ ಪ್ರಯತ್ನಗಳು ನಡೆದಿದ್ದರೂ ಈ ಪ್ರದೇಶದ ಶಾಸನಗಳನ್ನು ಸಂಪೂರ್ಣವಾಗಿ ಅಧ್ಯಯನಕ್ಕೆ ಒಳಪಡಿಸಿದರೂ ಅವು ಈ ಪರಿಸರದ ಸಮಗ್ರ ಚಿತ್ರಣವನ್ನು ಕಟ್ಟಿಕೊಡಲಾರವು. ಹಾಗಾಗಿ ಈ ಪ್ರದೇಶಕ್ಕೆ ಕೇಂದ್ರೀಕೃತವಾದ ಅಧ್ಯಯನವೊಂದರ ಅವಶ್ಯಕತೆಯಿದ್ದು, ಆ ಕೊರತೆಯನ್ನು ನೀಗಿಸುವ ಪ್ರಯತ್ನ ಇದಾಗಿದೆ.

ಇನ್ನು ಮಧ್ಯಮಲೆನಾಡಿನಲ್ಲಿ ಸಂಶೋಧನೆ ಕೈಗೊಂಡರೆ ಹಲವಾರು ಶಾಸನಗಳು ದೊರೆಯುವುದರಲ್ಲಿ ಅನುಮಾನವೇ ಇಲ್ಲ. ಶಾಸನಗಳನ್ನು ಸಂಶೋಧಿಸಿ ರಕ್ಷಿಸುವುದು ನಮ್ಮೆಲ್ಲರ ಹೊಣೆಯಾಗಿದೆ.

ಶಾಸನಗಳ ಮಾದರಿಯಲ್ಲಿಯೇ ಹಲವಾರು ಮಾಸ್ತಿಗಲ್ಲು ಮತ್ತು ವೀರಗಲ್ಲು ಶಾಸನಗಳು ದೊರೆತಿದ್ದು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ. ಇಲ್ಲಿಯವರೆಗೂ ಇವುಗಳ ಮೇಲಿನ ಯಾವುದೇ ರೀತಿಯ ಅಧ್ಯಯನ ಆಗದೇ ಇರುವುದರಿಂದ ಈ ನಿಟ್ಟಿನಲ್ಲಿ ನಾನು ಮೊದಲ ಸಂಶೋಧನೆಯ ಪ್ರಯತ್ನ ಮಾಡಿದ್ದೇನೆ.

೧.೪. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಆರಂಭದಿಂದ ಹದಿನೇಳನೇ ಶತಮಾನದವರೆಗಿನ ಶಾಸನಗಳನ್ನು ಪ್ರಮುಖ ಆಕರವನ್ನಾಗಿ ಬಳಸಿಕೊಳ್ಳಲಾಗಿದೆ. ಮಧ್ಯಮಲೆನಾಡಿನಲ್ಲಿ ಶಾಸನಗಳು ವಿಪುಲವಾಗಿ ದೊರೆತಿವೆ. ಜೊತೆಗೆ ಶೃಂಗೇರಿ ಮಠದಲ್ಲಿನ ಕಡತಗಳು ಹಾಗೂ ವೀರಗಲ್ಲು, ಮಾಸ್ತಿಗಲ್ಲು ಮತ್ತು ನಿಷಿಧಿಗಲ್ಲುಗಳ ಶಿಲ್ಪಗಳನ್ನು ಆನುಷಂಗಿಕ ಆಕರಗಳನ್ನಾಗಿ ಬಳಸಿಕೊಂಡು ಅಧ್ಯಯನ ಮಾಡಲಾಗಿದೆ. ಶಾಸನಗಳನ್ನು ಆಧರಿಸಿ ಮಾಡಿದ ರಾಜಕೀಯ, ಆರ್ಥಿಕ, ಸಾಮಾಜಿಕ ಅಧ್ಯಯನಗಳ ಹಿನ್ನೆಲೆಯಲ್ಲಿ ಮಧ್ಯಮಲೆನಾಡಿನಲ್ಲಿ ಉಂಟಾದ ಧಾರ್ಮಿಕ ಸ್ಥಿತ್ಯಂತರ, ಆ ಮೂಲಕ ಪಡೆದುಕೊಂಡ ಸ್ವರೂಪ, ಅವುಗಳಿಂದಾಗಿ ಸಾಮಾಜಿಕ ವ್ಯವಸ್ಥೆಯ ಮೇಲೆ ಉಂಟಾದ ಪರಿಣಾಮಗಳು, ಜನಸಾಮಾನ್ಯರ ಬದುಕು, ಸ್ತ್ರೀಯರ ಜೀವನ ಇನ್ನೂ ಮುಂತಾದ ಅಂಶಗಳ ಅಧ್ಯಯನವನ್ನು ವಿಮರ್ಶಾತ್ಮಕವಾಗಿ ಹಾಗೂ ವಿಶ್ಲೇಷಣಾತ್ಮಕವಾಗಿ ಮಾಡಲಾಗಿದೆ.

೧.೫. ಅಧ್ಯಯನದ ಸ್ವರೂಪ

ಈ ಮಹಾಪ್ರಬಂಧದಲ್ಲಿ ಒಟ್ಟು ಏಳು ಅಧ್ಯಾಯಗಳಿವೆ. ಪ್ರಮುಖವಾಗಿ ಮಾಹಿತಿಪ್ರಧಾನ ನೆಲೆಯಲ್ಲಿ ವಿಶ್ಲೇಷಣೆ ಮತ್ತು ವಿಮರ್ಶೆಯನ್ನು ಮಾಡಲಾಗಿದೆ. ಈ ಏಳು ಅಧ್ಯಾಯಗಳಲ್ಲಿ ಮೊದಲನೇ ಅಧ್ಯಾಯವು ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿಯನ್ನು ಕುರಿತದ್ದಾಗಿದೆ. ಮಧ್ಯಮಲೆನಾಡನ್ನು ಆಳಿದ ವಿವಿಧ ರಾಜವಂಶಗಳು ಹಾಗೂ ಆಡಳಿತ ವ್ಯವಸ್ಥೆ ಎಂಬ ಎರಡನೇ ಅಧ್ಯಾಯದಲ್ಲಿ ಈ ನಾಡನ್ನು ವಿವಿಧ ಕಾಲದಲ್ಲಿ ಆಳಿದ ರಾಜವಂಶಗಳು ಹೇಗೆ ತನ್ನ ಅಸ್ತಿತ್ವವನ್ನು ಪಡೆದುಕೊಂಡು ರಾಜಕೀಯ ಹಾಗೂ ಆಡಳಿತವನ್ನು ತಮ್ಮ ಹಿಡಿತದಲ್ಲಿಟ್ಟು ಕೊಂಡು ಮುನ್ನಡೆಸಿಕೊಂಡು ಬಂದವು ಎಂಬುದನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಮೂರನೇ ಅಧ್ಯಾಯವಾದ ಶಾಸನಗಳ ಸಾಮಾಜಿಕ ಸ್ಥಿತ್ಯಂತರದಲ್ಲಿ ಪ್ರಸ್ತುತ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನೋಡಲಾಗಿದೆ. ಕೆಲವು ಸಂದರ್ಭಗಳಲ್ಲಿ ಉಂಟಾದ ಧಾರ್ಮಿಕ ಪಲ್ಲಟಗಳು, ರಾಜಪ್ರಭುತ್ವ ಮತ್ತು ಪುರೋಹಿತಶಾಹಿ ಅನಿವಾರ್ಯವಾಗಿ ಸೂಚಿಸಿಕೊಂಡ ಹಲವು ನಿಯಂತ್ರಣಗಳಲ್ಲಿ ದೇವಾಲಯಗಳು ಮತ್ತು ಮಠಗಳು, ಆ ಮೂಲಕವಾಗಿ ಆರ್ಥಿಕ ವ್ಯವಸ್ಥೆಯನ್ನು

ತನ್ನ ನಿಯಂತ್ರಣಕ್ಕೆ ಇಟ್ಟುಕೊಂಡಿದ್ದ ಅಂಶಗಳನ್ನು ಈ ಅಧ್ಯಾಯದಲ್ಲಿ ನೋಡಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ 'ಶಾಸನಗಳಲ್ಲಿ ಜನಸಾಮಾನ್ಯರು'; ಅರಸುಕೇಂದ್ರಿತ ಮತ್ತು ಪುರೋಹಿತಶಾಹಿ ಅಧೀನದಲ್ಲಿ ಜನಸಾಮಾನ್ಯರು ವೀರರಾಗಿ, ಸಹೃದಯವಂತರಾಗಿ ನಿರ್ಮಿಸಿದ ದೇವಾಲಯಗಳು, ಕೆರೆಗಳು, ಅವರ ಆಚಾರ-ವಿಚಾರಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಶಾಸನಗಳಲ್ಲಿ ಅಭಿವ್ಯಕ್ತವಾಗಿರುವ ಸಮಾಜದ ಶೋಷಣೆಗೆ ಒಳಗಾದ ಸ್ತ್ರೀ ಜೀವನದ ಏರುಪೇರುಗಳು ಹಾಗೂ ಪತಿವ್ರತ ಆಚರಣೆಯು ರೂಪುಗೊಳ್ಳಲು ಕಾರಣವಾಗಿರುವ ಅಂಶಗಳು, ಆಕೆಯು ಬಾಳಿ ಬದುಕಿದ ಚಿತ್ರಣವನ್ನು ಐದನೇ ಅಧ್ಯಾಯದಲ್ಲಿ ನೋಡಲಾಗಿದೆ. ಈ ಮಹಾಪ್ರಬಂಧದ ಬಹುಮುಖ್ಯವೆಂದು ಭಾವಿಸಲಾದ 'ವೀರಗಲ್ಲು ಮತ್ತು ಮಾಸ್ತಿಗಲ್ಲು ಶಿಲ್ಪಗಳಲ್ಲಿ ಕಾಣುವ ಸ್ತ್ರೀ ಸಮುದಾಯ' ಅಧ್ಯಾಯದಲ್ಲಿ ಶಿಲ್ಪಗಳ ಮುಖೇನ ಲಭ್ಯವಿರುವ ವೀರಗಲ್ಲು ಮತ್ತು ಮಾಸ್ತಿಗಲ್ಲು ಗಳಲ್ಲಿನ ಸ್ತ್ರೀ ಪುರುಷರ ಕೇಶಾಲಂಕಾರ, ಆಭರಣಗಳು, ಉಡುಗೆ-ತೊಡುಗೆಗಳು, ಪ್ರಸ್ತುತ ಕಾಲಕ್ಕೆ ಹೋಲಿಕೆ ಮಾಡಬಹುದಾದ ಅಂಶಗಳನ್ನು ಮಾಹಿತಿ ಪ್ರಧಾನನೆಲೆಯಲ್ಲಿ ಕಂಡುಕೊಳ್ಳಲಾಗಿದೆ. ಕೊನೆಯದಾಗಿ ಸಮಾರೋಪದಲ್ಲಿ ಅಧ್ಯಯನದ ಫಲಿತಗಳನ್ನು ಹೇಳಲಾಗಿದೆ.

•••

ಅಧ್ಯಾಯ : ಎರಡು

ರಾಜಕೀಯ ಮತ್ತು ಆಡಳಿತ ವ್ಯವಸ್ಥೆ

ಅಧ್ಯಾಯ : ಎರಡು

ರಾಜಕೀಯ ಮತ್ತು ಆಡಳಿತ ವ್ಯವಸ್ಥೆ

ಮಾನವನಿಗೆ ಸಮಾಜದ ಅವಶ್ಯಕತೆಯಂತೆ ರಾಜ್ಯದ ಅವಶ್ಯಕತೆಯೂ ಇದೆ. ರಾಜ್ಯದ ಪರಿಕಲ್ಪನೆಗೆ ಶತಮಾನಗಳ ಇತಿಹಾಸವಿದೆ. ರಾಜ್ಯವನ್ನು ಕುರಿತಂತೆ ವ್ಯಾಖ್ಯಾನಗಳು ಏಕಮುಖ ವಾಗಿಲ್ಲ. 'ರಾಜ್ಯ' ಅಥವಾ 'ಸ್ಟೇಟ್' ಪದವನ್ನು ಜನಪ್ರಿಯಗೊಳಿಸಿದ ಕೀರ್ತಿ ಹದಿನಾರನೇ ಶತಮಾನದ ಇಟಾಲಿಯನ್ ಚಿಂತಕ ಮೆಕೆವಲಿಗೆ ಸಲ್ಲುತ್ತದೆ. ಅರಿಸ್ಟಾಟಲ್ ಪ್ರಕಾರ 'ರಾಜ್ಯವು ಜೀವದ ರಕ್ಷಣೆಗಾಗಿ ಹುಟ್ಟಿಕೊಂಡಿದೆ ಮತ್ತು ಅದು ಒಳ್ಳೆಯ ಜೀವನವನ್ನು ಒದಗಿಸಲು ಮುಂದುವರಿದಿದೆ. ಸಿಸಿರೋ ಪ್ರಕಾರ 'ರಾಜ್ಯವು ಅನೇಕ ಜನರನ್ನೊಳಗೊಂಡ ಸಮಾಜ. ರಾಜ್ಯದಲ್ಲಿ ನ್ಯಾಯವನ್ನು ದೊರಕಿಸಲು ಎಲ್ಲರೂ ಪಾಲ್ಗೊಳ್ಳುತ್ತಾರೆ ಮತ್ತು ಅವರೆಲ್ಲರೂ ರಾಜ್ಯದ ಸೌಲಭ್ಯಗಳನ್ನು ಹಂಚಿಕೊಳ್ಳುತ್ತಾರೆ'. ಸಮಾಜದಂತೆ ರಾಜ್ಯವು ಸ್ವಾಭಾವಿಕವಾದ, ಅಗತ್ಯವಾದ ಮತ್ತು ಸರ್ವವ್ಯಾಪಿಯಾದ ಸಂಸ್ಥೆಯಾಗಿದೆ. ರಾಜ್ಯದ ರಕ್ಷಣೆಯಿಲ್ಲದೇ ಸಮಾಜವು ಬಹುಕಾಲ ಬದುಕಲಾರದು. ರಾಜ್ಯದ ರಕ್ಷಣೆಯಿಂದ ಸಾಮಾಜಿಕ ಜೀವನ ಶಾಂತಿಯಿಂದ ಸುಗಮವಾಗಿ ಸಾಗುವುದು. ಹೆರಾಲ್ಡ್ ಲಾಸ್ಕಿ ಅವರ ಅಭಿಪ್ರಾಯದಂತೆ 'ತನಗೆ ಸೇರಿರುವ ಭೌಗೋಳಿಕ ಪ್ರದೇಶದೊಳಗಿನ ಎಲ್ಲಾ ಸಂಸ್ಥೆಗಳ ಮೇಲೂ ಪರಮಾಧಿಕಾರ ಹೊಂದಿರುವ ಹಾಗೂ ಸರ್ಕಾರ ಮತ್ತು ಪ್ರಜೆಗಳು ಎಂಬುದಾಗಿ ವಿಭಾಗಿಸಲ್ಪಟ್ಟಿರುವ ಒಂದು ಪ್ರಾದೇಶಿಕ ಸಮಾಜವೇ ರಾಜ್ಯ'.

೨.೧. ಸಾಮಂತ ಅರಸರು

ಮಧ್ಯಮಲೆನಾಡಿನ ಪ್ರದೇಶಗಳನ್ನು ಆಳಿದ ಆಳುಪ, ಕದಂಬ, ಗಂಗ, ಸಾಂತಾರ, ಸೇನಾವಾರ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಹೊಯ್ಸಳ, ವಿಜಯನಗರದ ಅರಸ, ಕೆಳದಿ ನಾಯಕರು ಮತ್ತು ಮೈಸೂರು ಒಡೆಯರು ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಕದಂಬರು, ಗಂಗರು, ರಾಷ್ಟ್ರಕೂಟರು ಈ ಪ್ರದೇಶದಲ್ಲಿ ನೇರವಾಗಿ ಆಳ್ವಿಕೆ ನಡೆಸದೆ ಸಾಮಂತರ ಮೂಲಕ ಆಳ್ವಿಕೆ ನಡೆಸಿದರು. ಇತ್ತೀಚೆಗೆ ತೀರ್ಥಹಳ್ಳಿ ತಾಲ್ಲೂಕು ಮರುವಾಸೆಯಲ್ಲಿ ಕದಂಬರ ಕಾಲಕ್ಕೆ ಸೇರಿದ್ದು ಎನ್ನಲಾದ ಶಾಸನವನ್ನು ಸ್ಥಳೀಯ ಸಂಶೋಧಕರಾದ ಜಿ.ಕೆ. ದೇವರಾಜ ಸ್ವಾಮಿ ಪತ್ತೆ ಹಚ್ಚಿದ್ದು, ಲಿಪಿ ಸ್ವರೂಪದ ದೃಷ್ಟಿಯಿಂದ ಕ್ರಿ.ಶ. ೫ನೇ ಶತಮಾನವೆಂದು

ತಿಳಿಸಿದ್ದಾರೆ. ಶಾಸನವು ಎರಡು ಸಾಲುಗಳನ್ನು ಒಳಗೊಂಡಿದ್ದು, ಒಂದನೆಯ ಸಾಲು 'ಗುವಕದು' ಎಂತಲೂ ಎರಡನೆಯ ಸಾಲು 'ಯಮವಾದ' ಎಂಬ ಅಕ್ಷರಗಳಿಂದ ಕೂಡಿದ್ದು ಕದಂಬರ ಲಿಪಿಯಲ್ಲಿದೆ. ಆದರೆ ಈ ಪದಗಳ ಅರ್ಥ ಸ್ಪಷ್ಟವಿಲ್ಲ. ಮರುವಾಸೆ ಪ್ರದೇಶವು ಬನವಾಸಿ ಮಹಾಮಂಡಲಕ್ಕೆ ಸೇರಿದ ಸ್ಥಳವಾಗಿದ್ದು, ನಂತರ ನಾಗರಖಂಡ ಎಪ್ಪತ್ತರ ಭಾಗವಾಗಿತ್ತು. ಹಾಗೆಯೇ ಈ ಪ್ರದೇಶದ ಸಮೀಪದಲ್ಲಿ ಅರಮನೆ, ಕೋಟೆ, ಪ್ರಾಚ್ಯಾವಶೇಷ, ತಳಪಾಯ, ಇಟ್ಟಿಗೆ ಇತ್ಯಾದಿಗಳು ಲಭ್ಯವಾಗಿವೆ. ಇಲ್ಲಿ ದೊರಕಿರುವ ಇಟ್ಟಿಗೆ ಕದಂಬರ ಕಾಲದ್ದೆಂದು ಹೇಳುವ ಇಟ್ಟಿಗೆಗೆ ಸರಿಹೊಂದುತ್ತದೆ. ಇದರ ಆಧಾರದ ಮೇಲೆ ಈ ಭಾಗವು ಕದಂಬರ ಆಳ್ವಿಕೆಗೆ ಒಳಪಟ್ಟಿದ್ದಿತು ಎನ್ನುವ ಅಂಶ ಮನವರಿಕೆಯಾಗುತ್ತದೆ(ಇತಿಹಾಸ ದರ್ಶನ ಸಂಪುಟ ೨೯, ಕ್ರಿ.ಶ. ೨೦೧೪). ಕಲ್ಯಾಣ ಚಾಲುಕ್ಯರು ತಮ್ಮ ಸಾಮಂತರಾದ ಸಾಂತರರು, ಗಂಗರು ಹಾಗೂ ಹೊಯ್ಸಳರ ಮೂಲಕ ಈ ಪ್ರದೇಶವನ್ನು ಆಳಿದರು. ದಾನಸಾಲೆಯ-ಶಾಸನವು ೧೧೧೦೩ ಕಲ್ಯಾಣ ಚಾಲುಕ್ಯ ಅರಸ ತ್ರಿಭುವನಮಲ್ಲ ದೇವನ (೬ನೆಯ ವಿಕ್ರಮಾದಿತ್ಯ) ಕಾಲದಾಗಿದ್ದು ಆತನ ಕೈಕೆಳಗೆ ತೈಲು ಎಂಬ ಸಾಂತರರ ದೊರೆ ಆಡಳಿತ ನಡೆಸುತ್ತಿದ್ದ ಎಂದಿದೆ. ಇದು ಸಾಂತರರ ವಂಶಾವಳಿಯನ್ನು ನೀಡುತ್ತದೆ. ಒಡ್ಡುಗ, ಆತನ ತಮ್ಮ ತೈಲ, ಆತನ ಮಗ ವೀರ, ವೀರನ ಪತ್ನಿ ಗಂಗ ವಂಶದ ಬೀರಲದೇವಿ. ಭುಜಬಲ ಸಾಂತರ, ನನ್ನಿಸಾಂತರ, ವಿಕ್ರಮಸಾಂತರ ಇವರುಗಳು ಬೀರಲದೇವಿಯ ಮಕ್ಕಳು. ವಿಕ್ರಮಸಾಂತರನ ಹೆಂಡತಿ ಪಾಂಡ್ಯಕುಲದ ಚಂದಲದೇವಿ; ಇವರಿಬ್ಬರ ಮಗ ತೈಲ. ಈ ಶಾಸನವು ಮುಂದುವರಿದು ಇನ್ನಷ್ಟು ಮಾಹಿತಿ ನೀಡುತ್ತದೆ. ಬೀರಬ್ಬರಸಿಯು ಆರುಮುಳಿದೇವ ಮತ್ತು ಗಾವಬ್ಬರಸಿಯ ಮಗಳು. ಈಕೆಯ ಅಕ್ಕ ಚಟ್ಟಲದೇವಿ; ಇವಳನ್ನು ಶಾಸನದಲ್ಲಿ ಪ್ರಶಂಸಿಸಲಾಗಿದೆ. ಅವಳು 'ಕಾಂಚೀನಾಥ ಮನಃ ಪ್ರಿಯೆ' ಎಂದು .ಆಕೆಯ ಮಕ್ಕಳು ಎಂದರೆ ಭುಜಬಲಸಾಂತರ ನನ್ನಿಸಾಂತರ, ವಿಕ್ರಮಸಾಂತರ ಮತ್ತು ಬಮ್ಮಲಾದೇವಿ. ಇವರು ಪೊಂಬುರ್ಚದಲ್ಲಿ ಪಂಚಬಸದಿಯನ್ನು ಕಟ್ಟಿಸಿದರು. ಬಸದಿಯ ದುರಸ್ತಿ ಕಾರ್ಯಗಳಿಗೂ 'ರಿಷಿ ಸಮುದಾಯಕ್ಕಾಹಾರ ದಾನಾರ್ಥವಾಗಿ'ಯೂ ಕೆಲವು ಹಳ್ಳಿಗಳನ್ನು ದಾನ ನೀಡಲಾಯಿತು. ಮೃತಳಾದ ಬೀರಬ್ಬರಸಿಯ ಸ್ಮಾರಕವಾಗಿ ಆನಂದೂರಿನಲ್ಲಿ ದ್ರವೀಳ ಸಂಘದ ಮತ್ತು ಅರುಂಗಳಾನ್ವಯರ ಅಜೀತಸೇನ ಪಂಡಿತರ ನಾಮೋಚ್ಚಾರಣ ಮಾಡುತ್ತ ಕೆಸರಕಲ್ಲನ್ನು ಚಟ್ಟಲದೇವಿ ಮತ್ತು ತ್ರಿಭುವನಮಲ್ಲ ಶಾಂತರದೇವರು ಇರಿಸಿದರು. ಬಸದಿಯ ಪ್ರತಿಷ್ಠಾಪನೆಯಲ್ಲಿ ತೈಲುಗ, ಗೋಮದ ಮತ್ತು ಬೊಪ್ಪುಗ ಈ ಮೂವರು ರಾಜಪುತ್ರರು ಉಪಸ್ಥಿತರಿದ್ದು ದಾನವನ್ನು ನೀಡಿದರು ಎಂದಿದೆ.[೧] ಮೃಗವಧೆಯ ಶಾಸನದಲ್ಲಿ ತ್ರಿಭುವನಮಲ್ಲನು ಕಲ್ಯಾಣಪುರದಿಂದ ರಾಜ್ಯವಾಳುತ್ತಿದ್ದನು ಹಾಗೂ ಪೃಥ್ವಿವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ, ಸತ್ಯಾಶ್ರಯ ಕುಲತಿಲಕ, ಚಾಲುಕ್ಯಾಭರಣ ಎಂದು ಅರಸರ ಬಿರುದಾವಳಿಗಳನ್ನು ಉಲ್ಲೇಖಿಸುತ್ತದೆ. ಇದರ ಆಧಾರದ ಮೇಲೆ ಕಲ್ಯಾಣಿ ಚಾಲುಕ್ಯರು ತೀರ್ಥಹಳ್ಳಿ ಪ್ರದೇಶದಲ್ಲೂ ಆಳ್ವಿಕೆ ನಡೆಸಿದ್ದರು ಎಂಬುದು ಸ್ಪಷ್ಟವಾಗುತ್ತದೆ.[೨]

ಕೊಪ್ಪ ತಾಲ್ಲೂಕನ್ನು ಕದಂಬ, ಗಂಗ, ರಾಷ್ಟ್ರಕೂಟ ಮನೆತನದವರೂ ಮಾಂಡಳಿಕರ ಮೂಲಕ ಆಳ್ವಿಕೆ ನಡೆಸಿರಬಹುದು. ಆದರೆ ಈ ಬಗ್ಗೆ ಸ್ಪಷ್ಟ ಮಾಹಿತಿ ದೊರೆಯುವುದಿಲ್ಲ. ಕಾರಣ ಶಾಸನಗಳು ಲಭ್ಯವಿಲ್ಲದಿರುವುದು. ಆದರೆ ಗಂಗರು ತಮ್ಮ ಎಲ್ಲಾ ಪ್ರದೇಶಗಳನ್ನು ಕಳೆದುಕೊಂಡು ಹೊಯ್ಸಳರ ಸಾಮಂತ ಪ್ರಭುಗಳಾಗಿ ಆಸಂದಿ ನಾಡಿನಲ್ಲಿ ಆಳ್ವಿಕೆಯನ್ನು ನಡೆಸಿದರು.

ಕಲ್ಯಾಣ ಚಾಲುಕ್ಯರ ಅತ್ಯಂತ ಪ್ರಾಚೀನ ಶಾಸನವೆಂದರೆ ನಾಗಲಾಪುರದ ಶಾಸನ. ಹೊಸದಾಗಿ ಅನ್ವೇಷಿತವಾಗಿರುವ ಈ ಶಾಸನದಲ್ಲಿ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯ ಹಾಗೂ ವಿಜಯರಾಜ್ಯದ ಉಲ್ಲೇಖವಿದೆ. ಈ ಶಾಸನದ ಕಾಲ ಕ್ರಿ.ಶ. ೧೦೮೫. ಸಾಂತರರ ಮಾರಯ್ಯದೇವನು ಈ ಪ್ರದೇಶವನ್ನು ಪಾಲಿಸುತ್ತಿದ್ದ ಮೂರು ಜನ ವೀರರಿಗೆ ಯುದ್ಧ ಪರಿಹಾರವಾಗಿ ಹಣ ಮತ್ತು ಭೂಮಿಗಳನ್ನು ಆತ ದಾನವಿತ್ತ, ಆತನ ವಿಶೇಷಣಗಳಲ್ಲಿ 'ಮಲಪರದೇವ' ಎಂಬುದು ನಮ್ಮ ಗಮನ ಸೆಳೆಯುತ್ತದೆ.[೩]

ಶೃಂಗೇರಿ ಹಾಗೂ ಅಲ್ಲಿನ ಸುತ್ತಮುತ್ತ ಕದಂಬರ ಆಳ್ವಿಕೆಯ ಬಗ್ಗೆ ತಿಳಿಯಲು ಕುರುಹುಗಳ ಕೊರತೆಯಿದೆ. ಆದರೆ ತಲಕಾಡಿನ ಗಂಗರ ಆಳ್ವಿಕೆಗೆ ಸಂಬಂಧಿಸಿದಂತೆ ಶೃಂಗೇರಿಯ ಶಂಕರ ಮಠದಲ್ಲಿರುವ ೪೧ನೆಯ ತಾಮ್ರಶಾಸನವಿದ್ದು, ಸುಮಾರು ಕ್ರಿ.ಶ. ೫ ಮತ್ತು ಕ್ರಿ.ಶ. ೬ನೆಯ ಶತಮಾನಕ್ಕೆ ಸೇರಿದೆ. ಶಾಸನವು ಗಂಗರ ದೊರೆಗಳಾದ ಕೊಂಗಣಿಶರ್ಮ ಮಾಧವವರ್ಮ, ಹರಿವರ್ಮ, ವಿಷ್ಣು ಗೋಪ, ಇಮ್ಮಡಿ ಮಾಧವವರ್ಮ ಮತ್ತು ಅವನೀತರನ್ನು ಹೆಸರಿಸುತ್ತದೆ. ಕೇಶವಶರ್ಮನೆಂಬ ಬ್ರಾಹ್ಮಣನಿಗೆ ಪಾಣಪುರ ಎಂಬ ಗ್ರಾಮವನ್ನು ಬ್ರಹ್ಮದೇಯವಾಗಿ ಕೊಟ್ಟದ್ದನ್ನು ದಾಖಲಿಸುವುದು ಈ ಶಾಸನದ ಮುಖ್ಯ ಉದ್ದೇಶ. ಈ ದಾನ ಕೊಟ್ಟ ಗ್ರಾಮ ಮರುಕರೆ ವಿಷಯದಲ್ಲಿತ್ತು. ಇನ್ನೊಂದು ದಾನದ ಉಲ್ಲೇಖವಿದ್ದು ಅದನ್ನು ನೀಡಿದವಳು ಅವನೀತನ ಹಿರಿಯ ರಾಣಿ. ಇದೂ ಬ್ರಹ್ಮದೇಯವಾಗಿದ್ದು ಮರುಕರೆ ವಿಷಯಕ್ಕೆ ಸೇರಿದ ಕೊಪ್ಪಳ್ಳಿ ಎಂಬ ಗ್ರಾಮದಲ್ಲಿ ಹತ್ತು ಖಂಡುಗ ಭೂಮಿಯನ್ನು ಒಳಗೊಂಡಿತ್ತು. ಇದರಲ್ಲಿ ದಾನವನ್ನು ಪಡೆದವನು ಗೋವಿಂದಶರ್ಮನೆಂಬ ಬ್ರಾಹ್ಮಣ. ಇವನು ಹಿಂದೆ ದಾನ ಪಡೆದ ಕೇಶವಶರ್ಮನ ಗೋತ್ರ ಚರಣ ಹಾಗೂ ಕಲ್ಪನೆಗಳಿಗೆ ಸೇರಿದವನಾಗಿದ್ದನು. ಇಲ್ಲಿ ಗಮನಿಸಬೇಕಾದ್ದು ಮರುಕರೆ ವಿಷಯ; ಒಂದು ಪ್ರಾಚೀನ ಆಡಳಿತ ಪ್ರಾಂತ.[೪]

ಕಲ್ಯಾಣ ಚಾಲುಕ್ಯರು ತಮ್ಮ ಸಾಮಂತರ ಮುಖಾಂತರ ಆಳ್ವಿಕೆಯನ್ನು ಈ ಭಾಗದಲ್ಲಿ ನಡೆಸಿರಬಹುದು ಎಂಬುದಕ್ಕೆ ಕಿಗ್ಗ ಶಾಸನವು ಮುಖ್ಯ ಆಧಾರವಾಗಿದೆ. ಕಿಗ್ಗ ಶಾಸನ ಏಳನೆಯ ಶತಮಾನದ ಲಿಪಿಯಲ್ಲಿದ್ದು ಕಲ್ಯಾಣದಿಂದ ಆಳುತ್ತಿದ್ದ ಚಾಲುಕ್ಯ ತ್ರಿಭುವನಮಲ್ಲನನ್ನು ಹೆಸರಿಸುತ್ತದೆ. ಇದು ಮಹಾಮಂಡಲೇಶ್ವರನನ್ನು ಉಲ್ಲೇಖಿಸುತ್ತದೆ. ಆದರೆ ಸ್ವಲ್ಪ ತ್ರುಟಿತವಾಗಿರುವುದರಿಂದ ಅರಸನ ಹೆಸರು ತಿಳಿದು ಬರುವುದಿಲ್ಲ. ಆದರೆ ಅದರಲ್ಲಿ ಕಂಡುಬರುವ ಪೊಂಬುಚ್ಚ

ಪುರವರಾಧೀಶ್ವರ ಎಂಬ ಬಿರುದನ್ನು ಗಮನಿಸಿದರೆ ಇವನು ಸಾಂತರ ವಂಶಕ್ಕೆ ಸೇರಿದವನಿರಬೇಕು ಎಂಬುದು ಗೊತ್ತಾಗುತ್ತದೆ. ಈ ಶಾಸನದ ಉದ್ದೇಶವೂ ತಿಳಿದು ಬರುವುದಿಲ್ಲ.[೫]

ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಹೊಯ್ಸಳರು ತಮ್ಮ ಆಳ್ವಿಕೆಯನ್ನು ತೀರ್ಥಹಳ್ಳಿಯ ಪ್ರದೇಶದಲ್ಲಿ ಆರಂಭಿಸಿದರು ಎಂಬುದಕ್ಕೆ ಕಣಿವೆಯಲ್ಲಿ ದೊರೆತ ಶಾಸನ ಬಹಳ ಮುಖ್ಯ ಆಧಾರ ಎಂದು ತಿಳಿದುಬರುತ್ತದೆ. ಕಣಿವೆ ಶಾಸನ ಹೊಯ್ಸಳದೇವನ ಮಂತ್ರಿ ಮತ್ತು ಕೋಶಾಧ್ಯಕ್ಷನಾಗಿದ್ದ ಚಂದಿಮಯ್ಯನ ಪತ್ನಿ ಬೊಪ್ಪವ್ವೆ ಸನ್ಯಾಸವನ್ನು ಸ್ವೀಕರಿಸಿ ಸ್ವರ್ಗ ಪ್ರಾಪ್ತಿಯಾದಳು ಎಂದು ಉಲ್ಲೇಖಿಸಿದೆ.[೬]

ಚಿಕ್ಕಮಗಳೂರು ಜಿಲ್ಲೆ ಹೊಯ್ಸಳರ ಜನ್ಮಭೂಮಿ. ಹೊಯ್ಸಳರಿಗೆ ಸಂಬಂಧಪಟ್ಟ ಸುಮಾರು ೩೦೦ಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಆದರೆ ಹೊಯ್ಸಳರ ನೇರ ಆಡಳಿತವನ್ನು ಸೂಚಿಸುವ ಕೊಪ್ಪ ಮತ್ತು ಶೃಂಗೇರಿ ಪರಿಸರದಲ್ಲಿ ದೊರೆತ ಶಾಸನಗಳು ಅತಿ ಕಡಿಮೆ. ಈ ಭಾಗದಲ್ಲಿ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಹೊಯ್ಸಳರು ಆಡಳಿತ ನಡೆಸಿರುವರು. ಕೊಪ್ಪದಲ್ಲಿ ಪ್ರಾಪ್ತವಾದ ಹೊಯ್ಸಳ ಶಾಸನಗಳೆಂದರೆ ಕೊಪ್ಪ (ಲರ)ನರಸಿಂಹಪುರ ಶಾಸನ ಕ್ರಿ.ಶ. ೧೩೨೭– ಹೊಯ್ಸಳ ದೊರೆ ವೀರಬಲ್ಲಾಳನಿಗೆ ಸೇರಿದ್ದು. ಇದರಲ್ಲಿ ಮಾದಣ್ಣನ ಮಗ ನಾಗಣ್ಣನು ಕೊಪ್ಪನಾಡಿನ ಸುಂಕಾಧಿಕಾರಿಯಾಗಿದ್ದು ನರಸಿಂಹಪುರದ ನರಸಿಂಹನಿಗೆ ಸಲ್ಲಿಸುವ ವೀಳ್ಯದೆಲೆ ಮತ್ತು ಅಡಿಕೆ ಮೇಲಿನ ಸುಂಕವನ್ನು ರದ್ದುಗೊಳಿಸಿದ್ದು ಹಾಗೂ ದಾನ ನೀಡಿದ ಉಲ್ಲೇಖವಿದೆ.[೭] ನರಸಿಂಹಪುರ ಶಾಸನದಲ್ಲಿ ಹೊಯ್ಸಳರ ಮೂರನೇ ಬಲ್ಲಾಳನ ಕಾಲದ ಉಲ್ಲೇಖವಿದ್ದು ಕೃಷ್ಣಪ್ಪನೆಂಬಾತ ಪಾತಾಳ ನರಸಿಂಹದೇವರಿಗೆ ಪೂಜಾದಿ ಸೇವೆಗೆ ದಾನವಿತ್ತ ವಿಷಯವು ಇದರಲ್ಲಿದೆ.[೮] ಇಲ್ಲಿನ ಇನ್ನೊಂದು ಶಾಸನದಲ್ಲಿ ಮೂರನೆಯ ಬಲ್ಲಾಳನ ಉಲ್ಲೇಖವಿದ್ದು ನರಸಿಂಹದೇವರಿಗೆ ಹುಲಿಗೆರೆ ಅನಂತದೇವ ನೀಡಿದ ದಾನದ ವಿಷಯವನ್ನು ತಿಳಿಸುತ್ತದೆ.[೯]

ಶೃಂಗೇರಿಯ ಪಾರ್ಶ್ವನಾಥ ಬಸದಿಯ ಮುಖಮಂಟಪವು ಜೈನಶ್ಲೋಕ ಹೊಂದಿದ್ದು ಕಾಣೂರು ಗಣ, ಮೂಲಸಂಘ, ಪುಸ್ತಕ ಗಚ್ಛ ಎಂಬ ಹೆಸರುಗಳಿವೆ. ಇದನ್ನು ಹೊಯ್ಸಳರ ಕಾಲದ್ದು ಎನ್ನಲಾಗಿದೆ.[೧೦]

ಶೃಂಗೇರಿ ಬಸದಿಯ ಇನ್ನೊಂದು ಶಾಸನದಲ್ಲಿ ನಿಡುಗೋಡು ಶಾಂತಿಸೆಟ್ಟಿಯ ಮೊಮ್ಮಗ ಮಾರಿಸೆಟ್ಟಿಯ ನೆನಪಿಗೋಸ್ಕರ ಪಾಶ್ವನಾಥ ಬಸದಿಯನ್ನು ನಿರ್ಮಿಸಿದ್ದು ಅದಕ್ಕೆ ಕೆಲವು ಭೂಮಿ ಮತ್ತು ಸುಂಕವನ್ನು ನೀಡಿದ ಉಲ್ಲೇಖವಿದೆ.[೧೧]

ಮಧ್ಯಮಲೆನಾಡಿನ ಭಾಗವಾಗಿರುವ ಶೃಂಗೇರಿಯ ಶಾಸನಗಳಲ್ಲಿ ವ್ಯಕ್ತವಾಗಿರುವಂತೆ ಈ ಪ್ರದೇಶಗಳಲ್ಲಿ ಹೊಯ್ಸಳರ ಆಳ್ವಿಕೆಯ ಕುರುಹುಗಳನ್ನು ಕಾಣಬಹುದು. ವಿವಿಧ ರಾಜವಂಶಗಳು ಇಲ್ಲಿ ರಾಜ್ಯವನ್ನು ಕಟ್ಟಿ ಆಳ್ವಿಕೆಯನ್ನು ಮಾಡಿದ್ದರು. ಬಹುತೇಕ ರಾಜವಂಶಗಳು ಸ್ವತಂತ್ರವಾಗಿ ಆಳ್ವಿಕೆಯನ್ನು ನಡೆಸದೆ ಸಾಮಂತ ಪ್ರಭುಗಳಾಗಿ ಮೆರೆದವರು.

ಶಾಸನಗಳಲ್ಲಿ ಉಲ್ಲೇಖವಿರುವಂತೆ ಮಲೆನಾಡಿನ ಬಹುಭಾಗ ಪ್ರದೇಶವು ಸಾಂತರರ ಆಳ್ವಿಕೆಗೆ ಒಳಪಟ್ಟಿದ್ದಿತ್ತು. ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಹೊಯ್ಸಳರ ಸಾಮಂತರಾಗಿ ಎಂಟರಿಂದ ಹನ್ನೆರಡನೇ ಶತಮಾನದವರೆಗೂ ಈ ಸಾಂತರರು ಸುಮಾರು ೪೦೦ ವರ್ಷಗಳ ದೀರ್ಘ ಆಳ್ವಿಕೆಯನ್ನು ಈ ಪ್ರದೇಶದಲ್ಲಿ ನಡೆಸಿದರು. ಸಾಂತರರು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ ನಂತರ ಸಾಂತಳಿಕೆ ಸಾವಿರ ಎಂಬ ಆಡಳಿತ ಘಟಕವಾಗಿ ನಿರೂಪಿಸಲ್ಪಟ್ಟ ಪ್ರದೇಶ ೧೨ನೆಯ ಶತಮಾನದವರೆಗೂ ಸಾಂತಳಿಗೆ ಸಾವಿರ ಎಂದೇ ಪ್ರಚಲಿತದಲ್ಲಿತ್ತು. ಇಂದು ಸಣ್ಣ ಗ್ರಾಮವಾಗಿರುವ ಹುಂಚ ಅಥವಾ ಹೊಂಬುಜ ಶಿವಮೊಗ್ಗ ನಗರದಿಂದ ೫೫ ಕಿ.ಮೀ. ಮತ್ತು ತೀರ್ಥಹಳ್ಳಿಯಿಂದ ೨೭ ಕಿ.ಮಿ. ದೂರದಲ್ಲಿದೆ. ಇದು ಜೈನ ಕೇಂದ್ರವಾಗಿದ್ದು ದಿಗಂಬರ ಪಂಥಕ್ಕೆ ಸೇರಿದುದಾಗಿದೆ. ಪದ್ಮಾವತಿ ಇಲ್ಲಿನ ಪ್ರಧಾನ ದೇವತೆ.

೨.೧.೧. ಮಾಂಡಳಿಕರಾಗಿ ಸಾಂತರ ರಾಜ್ಯ

ಸುಮಾರು ಎಂಟನೇ ಶತಮಾನದಲ್ಲಿ ಹುಂಚ ಮಲೆನಾಡಿನ ಒಂದು ಮಾಂಡಲಿಕ ವಂಶದವರ ರಾಜಧಾನಿಯಾಗಿತ್ತು. ಅವರನ್ನೇ ಇತಿಹಾಸದಲ್ಲಿ ನಾವು ಸಾಂತರರು ಎಂದು ಗುರುತಿಸುತ್ತೇವೆ. ಹಾಗೆಯೇ ಅವರು ಆಳ್ವಿಕೆ ಮಾಡಿದ ಪ್ರದೇಶ ಘಟಕ ಸಾಂತಳಿಗೆ ಸಾವಿರ ಎಂದು ಗುರುತಿಸಲ್ಪಟ್ಟಿದೆ. ಆದರೆ ಇವರ ಇತಿಹಾಸವನ್ನು ಅರಿಯಲು ನಮಗೆ ಮಾಹಿತಿಗಳ ಸಾಕಷ್ಟು ಕೊರತೆ ಇದೆ. ಇವರ ರಾಜ್ಯದ ಗಡಿ ಇಂದಿನ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗಷ್ಟೇ ಸೀಮಿತವಾದ ಮನೆತನವಾಗಿತ್ತು. ತಮ್ಮ ದೀರ್ಘ ಆಳ್ವಿಕೆಯ ಕಾಲದಲ್ಲಿ ಸಾಂತರರು ಕೇವಲ ಮಹಾಮಾಂಡಲೇಶ್ವರ ಸ್ಥಾನಕ್ಕೆ ಮಾತ್ರ ಏರಲು ಸಾಧ್ಯವಾಯಿತು. ಸುಮಾರು ೮ನೆಯ ಶತಮಾನದಿಂದ ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ ನಂತರ ಹೊಯ್ಸಳರ ಅಧೀನದಲ್ಲಿ ಇವರು ಆಳ್ವಿಕೆ ಮಾಡಿದುದು ಶಾಸನಗಳಿಂದ ತಿಳಿದುಬರುತ್ತದೆ. ಆದರೆ ಸಾಂತರರು ಇಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸುವ ಪೂರ್ವದಲ್ಲಿ ಈ ಮಲೆನಾಡಿನ ಬಹುಭಾಗವು ಆಳುಪರ ಅಧೀನದಲ್ಲಿದ್ದಂತೆ ಕಂಡುಬರುತ್ತದೆ. ಇವರು ಮೂಲತಃ ಜೈನರಾಗಿದ್ದು ಜೈನ ಧರ್ಮದ ಬೆಳವಣಿಗೆಗೆ ಸಾಕಷ್ಟು ಪ್ರೋತ್ಸಾಹ ನೀಡಿದವರಾಗಿದ್ದಾರೆ. ಶಾಸನದ ಆಧಾರದ ಮೇಲೆ ಇವರದ್ದು ಮೃಗ ಲಾಂಛನ ಹಾಗೂ ವಾನರ ಧ್ವಜವೆಂದು ತಿಳಿಯಬಹುದು. ಇವರು ಮೊದಲಿಗೆ ಹುಂಚವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ನಂತರ ಕಳಸಕ್ಕೆ ತಮ್ಮ ರಾಜಧಾನಿಯನ್ನು ಬದಲಾಯಿಸಿಕೊಂಡು ಆಳ್ವಿಕೆ ನಡೆಸಿದರು. ಇದಕ್ಕೆ ಕಾರಣ ಹೊಂಬುಜದ ಅರಸ ಜಗದೇವರಸನಿಗೂ ಬೆಳಗುತ್ತಿಯ ಈಶ್ವರ ದೇವನಿಗೂ ಕದನವಾಗಿ ಜಗದೇವರಸನು ತನ್ನ ಸಾಂತಳಿಗೆ ನಾಡಿನ ಕೆಲವು ಭಾಗಗಳನ್ನು ಕಳೆದುಕೊಂಡಿದ್ದರಿಂದ ಕಳಸಕ್ಕೆ ತಮ್ಮ ರಾಜಧಾನಿಯನ್ನು ಬದಲಾಯಿಸಿಕೊಂಡು ಆಳ್ವಿಕೆ ನಡೆಸಿದರು ಹಾಗೂ ಜೈನ ಧರ್ಮದ ಮೇಲೆ ಬಲವಾದ ಹೊಡೆತ ಹನ್ನೊಂದನೇ ಶತಮಾನದ ವೇಳೆಗೆ ಆಗಿದ್ದರಿಂದ ಜೈನ ಧರ್ಮ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾ ಬಂತು. ಸೇತು ಎಂಬುದು ಶಿವಮೊಗ್ಗ ಜಿಲ್ಲೆ ಹೊಸನಗರ

ತಾಲ್ಲೂಕಿನ ಕರೂರು ಹೋಬಳಿಯ ಒಂದು ಗ್ರಾಮ. ಇದು ಶರಾವತಿ ನದಿ ದಡದ ಮೇಲಿದ್ದು ಇಂದು ಲಿಂಗನಮಕ್ಕಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಆಗಿರುವ ಪ್ರದೇಶವಾಗಿದೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ಅಂಶವೆಂದರೆ ಸೇತುವಿನಲ್ಲಿ ಶಾಸನಗಳು ಜಿನಸ್ತುತಿಯನ್ನು ಹೊರತುಪಡಿಸಿ ಶಿವಸ್ತುತಿಯಿಂದ ಪ್ರಾರಂಭವಾಗುತ್ತವೆ. ಈ ರಾಜರು ತಮ್ಮನ್ನು ತಾವೇ ಉಗ್ರವಂಶದವರೆಂದು, ಪಟ್ಟಿಪೊಂಬುರ್ಚಪುರವರಧೀಶ್ವರರು ಎಂತಲೂ ಕರೆದುಕೊಂಡಿದ್ದಾರೆ.

ದಾನಸಾಲೆ ಶಾಸನವು ಕಲ್ಯಾಣ ಚಾಲುಕ್ಯರ ಅರಸ ತ್ರಿಭುವನಮಲ್ಲದೇವ ೬ನೇ ವಿಕ್ರಮಾದಿತ್ಯನ ಆಳ್ವಿಕೆಗೆ ಸೇರಿದ್ದು. ಅವನ ಕೈಕೆಳಗೆ ತೈಲ ಎಂಬ ಸಾಂತರ ದೊರೆ ಆಡಳಿತ ನಡೆಸುತ್ತಿದ್ದು ಈ ಶಾಸನದಲ್ಲಿ ಸಾಂತರರ ವಂಶಾವಳಿಯೇ ಇದೆ. ಒಡ್ಡುಗ ಆತನ ತಮ್ಮ ತೈಲ ಆತನ ವೀರಲದೇವ, ಭುಜಬಲಸಾಂತರ, ನನ್ನಿಸಾಂತರ, ವಿಕ್ರಮಸಾಂತರ ವೀರ ಮತ್ತು ಬೀರಲದೇವಿಯ ಮಕ್ಕಳು ವಿಕ್ರಮಸಾಂತರನ ಹೆಂಡತಿ ಪಾಂಡ್ಯಕುಲದ ಚಂದಲದೇವಿ ಇವರಿಬ್ಬರ ಮಗ ತೈಲ. ಇದರಿಂದಾಗಿ ಸಾಂತರರು ಚಾಲುಕ್ಯರರ ಸಾಮಂತರಾಗಿದ್ದರು ಎಂಬ ಅಂಶ ವ್ಯಕ್ತವಾಗುತ್ತದೆ. ದಾನಸಾಲೆ ಶಾಸನವು ಸಾಂತರರು ಮತ್ತು ಕಲ್ಯಾಣ ಚಾಲುಕ್ಯರ ದೊರೆಗಳನ್ನು ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ ಚಾಲುಕ್ಯ ಸತ್ಯಾಶ್ರಯ ಕುಲತಿಲಕ ಎಂಬ ಬಿರುದುಗಳನ್ನು ದಾಖಲಿಸುತ್ತದೆ.[೧೨] ಹೊಂಬುಜ ಸಾಂತರರ ಕಾಲದಲ್ಲಿಯೇ ಜೈನರ ಒಂದು ನೆಲೆಯಾಗಿತ್ತು. ಶಾಸನಗಳ ಆಧಾರದ ಮೇಲೆ ನಮಗೆ ತಿಳಿದುಬರುವ ಪ್ರಮುಖ ಅಂಶವೆಂದರೆ ಪಟ್ಟಿ ಪೊಂಬುರ್ಚವು ಅವರ ಮೊದಲ ರಾಜಧಾನಿಯಾಗಿದ್ದು ಅದು ಅವರ ಮೂಲ ಪುರುಷನಾದ ಜಿನದತ್ತನಿಗೆ ಲೊಕ್ಕಿಯಬ್ಬೆ ಕರುಣಿಸಿದ ಸ್ಥಳವಾಗಿತ್ತು. ಅವರ ರಾಜಧಾನಿಯಾದ ಹೊಂಬುಜವನ್ನು ಶಾಸನಗಳು ಹೊಂಬುಜ, ಪೊಂಬುಜಪಟ್ಟಿ, ಪೊಂಬುರ್ಜ ಇತ್ಯಾದಿಯಾಗಿ ಕರೆದಿವೆ.

ಸಾಂತರರ ವಂಶಾವಳಿಯನ್ನು ಅರಿಯಲು ನಮಗಿರುವ ಒಂದೇ ಒಂದು ಪ್ರಮುಖ ಆಕರವೆಂದರೆ ಅವರ ಕಾಲದ ಶಾಸನಗಳು. ಅದರಂತೆ ಸುಮಾರು ಕ್ರಿ.ಶ. ೭ನೆಯ ಶತಮಾನದ ಕಿಗ್ಗಾ ಶಾಸನದಲ್ಲಿ ಪೊಂಬುರ್ಚವನ್ನು ಚಿತ್ರವಾಹನ ಎಂಬ ಅರಸನು ಆಳುತ್ತಿದ್ದನೆಂದು ತಿಳಿಸುತ್ತದೆ. ಅವನ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶವು ಆಳುಪರ ವಶದಲ್ಲಿರಬೇಕು.[೧೩] ಸುಮಾರು ೮ನೆಯ ಶತಮಾನದ ಹೊತ್ತಿಗೆ ಪೊಂಬುರ್ಚವು ಒಂದು ಪಟ್ಟಣ ಪ್ರದೇಶವಾಗಿ ರೂಪುಗೊಂಡಿತು. ಸುಮಾರು ೯ನೇ ಶತಮಾನಕ್ಕೆ ಕಾಲಿಡುವ ಹೊತ್ತಿಗೆ ನಮಗೆ ಸಾಂತರ ಅರಸರ ವಂಶಾವಳಿಯನ್ನು ತಿಳಿಸುವ ಅನೇಕ ಶಾಸನಗಳು ಕಂಡುಬರುತ್ತವೆ.

ಶಾಸನಗಳ ಆಧಾರದ ಮೇಲೆ ಜಿನದತ್ತನು ಸಾಂತರರ ವಂಶದ ಸ್ಥಾಪಕನೆಂದು ತಿಳಿದುಬರುತ್ತದೆ. ಹಾಗೆಯೇ ಜಿನದತ್ತನು ಪೂರ್ವಜರ ಬಗ್ಗೆ ತಿಳಿಸುತ್ತಾ ರಾಹ ಸಹಕಾರ ಅವನ ಪತ್ನಿಯಾದ ಕೆಯಾಲದೇವಿಯ ಸುತನೇ ಜಿನದತ್ತ. ಜಿನದತ್ತನ ತಂದೆ ಸಹಕಾರನು

ಮನುಷ್ಯಮಾಂಸ ಭಕ್ಷಿಸುವುದನ್ನು ನೋಡಿ ಬೇಸತ್ತು ತನ್ನ ರಾಜ್ಯವನ್ನು ತ್ಯಜಿಸಿ ದಕ್ಷಿಣಕ್ಕೆ ಬರುವಾಗ ಮಾರ್ಗ ಮಧ್ಯೆಯೇ ಸಿಂಹ ರಥನೆಂಬ ರಾಕ್ಷಸನನ್ನು ಕೊಂದದ್ದರಿಂದ ಇದಕ್ಕೆ ಸಂತೃಪ್ತಳಾದ ಲೊಕ್ಕಿಯಬ್ಬೆ ಅವನಿಗೆ ಸಿಂಹ ಲಾಂಛನವನ್ನು ನೀಡಿದಳೆಂದು ಅನಂತರ ಅಂದಾಸುರನೆಂಬ ರಾಕ್ಷಸನನ್ನು ಸಂಹರಿಸಿದ್ದರಿಂದ, ಕುಂದದ ಕೋಟೆಯಲ್ಲಿದ್ದ ಕರ ಹಾಗೂ ಕರಧೂಷಣರನ್ನು ಮುಕ್ತಿಗೊಳಿಸಿದಾಗ ಅದನ್ನು ಮೆಚ್ಚಿದ ಪದ್ಮಾವತಿ ದೇವಿಯು ಈ ಭಾಗವನ್ನು ರಾಜಧಾನಿಯನ್ನಾಗಿ ಮಾಡುವಂತೆ ಹರಸಿ ತಾನು ಅಲ್ಲಿರುವ ಲೊಕ್ಕಿಮರದಲ್ಲಿ ನೆಲೆನಿಂತಳೆಂದು, ಹಾಗೆಯೇ ಲೊಕ್ಕಿಯಬ್ಬೆ ಎಂಬ ಎರಡನೇ ಹೆಸರನ್ನು ಪಡೆದಳೆಂದು ನಗರ ಶಾಸನ ತಿಳಿಸುತ್ತದೆ.

ಜಿನದತ್ತನ ನಂತರ ಆಳ್ವಿಕೆಗೆ ಬಂದವರು ಶ್ರೀಕೇಸಿ ಜಯಕೇಶಿ, ರಣಕೇಸಿ, ಜಗೇಸಿ. ಇವರ ನಂತರ ಆಳ್ವಿಕೆಗೆ ಬಂದವರಲ್ಲಿ ಒಬ್ಬ ಪ್ರಮುಖ ರಾಜನಾದ ತೊಲಾಪುರುಷ ವಿಕ್ರಮ ಸಾನ್ತರ. ಇವನ ಕಾಲ ಸುಮಾರು ಕ್ರಿ.ಶ. ೮೯೫–೯೩೫. ಇವನ ಕಾಲದಲ್ಲಿ ಹೊರಡಿಸಿರುವ ಅನೇಕ ಶಾಸನಗಳು ಅವನು ಹಿರಣ್ಯಗರ್ಭ ಮಹಾದಾನಗಳನ್ನು ಮಾಡಿದನೆಂದು, ಅನೇಕ ಶತ್ರು ಅರಸರನ್ನು ಕೊಂದು ಸಾಂತಳಿಗೆ ಸಾವಿರದ ಮೇರೆಗಳನ್ನು ಬಲಪಡಿಸಿ ಅದನ್ನು ಏಕಛತ್ರವನ್ನಾಗಿ ಮಾರ್ಪಡಿಸಿದನೆಂದು ತಿಳಿಸುತ್ತದೆ.[೧೪]

ಒಂದನೆಯ ನನ್ನಿಸಾಂತರ: ಇವನ ಇನ್ನೊಂದು ಹೆಸರು ಅಣ್ಣಲದೇವ. ಇವನು ಚಾಲುಕ್ಯರ ಸಾಮಂತನಾಗಿದ್ದನು. ಶಿಕಾರಿಪುರ ಶಾಸನದಲ್ಲಿ ಇವನನ್ನು ಪಟ್ಟಿ ಪೊಂಬುರ್ಚ ಪುರವರೇಶ್ವರಂ ವಿಪುಲ ತುಲಾಪುರುಷ ಹಿರಣ್ಯಗರ್ಭ ತ್ರಯ್ಯೋದ್ಯಾಧಿಕ್ರದಾನ ಮಾಡಿದವನೆಂದು, ಮೃಗ ಲಾಂಛನ ವನ್ನು ಹೊಂದಿದವನೆಂದೂ ಉಲ್ಲೇಖಿಸಿದ್ದಾರೆ.[೧೫]

ತ್ರೈಲೋಕ್ಯಮಲ್ಲ ವೀರಸಾಂತರ: ಬೀರದೇವ/ಬೀರಸಾಂತರ ಎಂಬ ವಿವಿಧ ಹೆಸರಿನಿಂದ ಇವನನ್ನು ಕರೆಯಲಾಗಿದೆ. ಇವನ ಪತ್ನಿ ಬೀರಲದೇವಿ ನಗರಶಾಸನದಲ್ಲಿ ಇವನನ್ನು ಉತ್ತರ ಮಧುರಾಧೀಶ್ವರ, ಪಟ್ಟಿಪೊಂಬುರ್ಚಪುರವರೇಶ್ವರ, ಮಹೋಗ್ರ ವಂಶಲಲಾಮ, ಪದ್ಮಾವತೀ ವರಲಬ್ಧಪ್ರಸಾದಿತ, ವಿಘುಳತುಲಪುರುಷ, ಮಹಾದಾನ ಎಂಬ ವಿವಿಧ ಬಿರುದುಗಳಿಂದ ವರ್ಣಿಸಲಾಗಿದೆ. ಇವನು ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲದೇವನ ಮಹಾಮಂಡಲೇಶ್ವರನಾಗಿದ್ದನು. ಶಾಸನಗಳಲ್ಲಿ ಇವನನ್ನು ವಿವಿಧ ರೀತಿಯಲ್ಲಿ ವರ್ಣಿಸಲಾಗಿದೆ. ಇವನಿಗೆ ನಾಲ್ಕು ಜನ ಮಕ್ಕಳಿದ್ದರು. ಅವರುಗಳೆಂದರೆ ಭುಜಬಲಸಾಂತರ, ನನ್ನಿಸಾಂತರ, ಗೋವಿಂದದೇವ ಮತ್ತು ವಿಕ್ರಮಸಾಂತರ.[೧೬]

ಭುಜಬಲಸಾಂತರ: ಸು.ಕ್ರಿ.ಶ. ೧೦೭೦–೭೬

ಇವನು ಸಾಂತಳಿಕೆಯನ್ನು ಏಕಚಕ್ರಾಧಿಪತ್ಯವನ್ನಾಗಿ ಆಳಿದನೆಂದು ಶಾಸನಗಳು ತಿಳಿಸುತ್ತವೆ. ಹಾಗೆಯೇ ಇವನು ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲನಿಗೆ ವಿಧೇಯತೆಯ ಸಂಕೇತವಾಗಿ

ತನ್ನನ್ನು ತ್ರೈಲೋಕ್ಯಮಲ್ಲ ಎಂದು ಕರೆದುಕೊಂಡನು. ಪೊಂಬುಜದ ಪಂಚಬಸದಿಗೆ ಮಾಡಿದ ಅನೇಕ ದಾನದ ವಿವರಗಳನ್ನು ಶಾಸನಗಳು ನೀಡುತ್ತವೆ.[೧೭]

ಗೊಗ್ಗಿಗ/ಗೋವಿಂದರದೇವ/ಇಮ್ಮಡಿ ನನ್ನಿ ಸಾಂತರ

ಇವನ ಕಾಲದಲ್ಲಿ ಸಾಂತರರಾಜ್ಯ ಉನ್ನತ ಶಿಖರ ತಲುಪಿತು. ಇವನ ಶಾಸನಗಳು ಪರದತ್ತವಾದ ಸಾಂತಳಿಗೆಯನ್ನು ಸ್ವಾಯತ್ತ ಮಾಡಿದನೆಂದು ತಿಳಿಸುತ್ತದೆ.[೧೮] ಇವನ ಸಾಹಸವನ್ನು ಮೆಚ್ಚಿದ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನು ತನ್ನ ಅರ್ಧಾಸನವಾದ ಲೋಹಸಿಂಹಾಸನದಲ್ಲಿ ಕೂಡಿಸಿಕೊಂಡನೆಂದು ಶಾಸನಗಳಿಂದ ತಿಳಿದು ಬರುತ್ತದೆ.

ಮೂರನೇ ವಿಕ್ರಮಸಾಂತರ: ಸು.ಕ್ರಿ.ಶ. ೧೦೭೭-೮೭

ಇವನ ಪ್ರಭುವಾದ ವಿಕ್ರಮಾದಿತ್ಯನ ನಾಮಾಂಕಿತವನ್ನು ತನ್ನ ಹೆಸರಿನೊಂದಿಗೆ ಸೇರಿಸಿಕೊಂಡು ವಿಕ್ರಮ ಸಾಂತರನಾದನು. ಇವನು ತನ್ನ ಆಳ್ವಿಕೆಯ ಕಾಲದಲ್ಲಿ ಪಂಚ ಬಸದಿಗಾಗಿ ಮಾಡಿದ ದಾನದ ವಿವರಗಳು ಹೊಂಬುಜದ ಶಾಸನಗಳಿಂದ ತಿಳಿದುಬರುತ್ತವೆ.[೧೯]

ತ್ರಿಭುವನಮಲ್ಲ ಸಾಂತರದೇವ: ಸು.ಕ್ರಿ.ಶ. ೧೦೯೦-೧೧೩೦

ಇವನ ಆಳ್ವಿಕೆಯ ಕಾಲದಲ್ಲಿ ಸೋಮಗ್ರಹಣದಂದು ದಾನಸಾಲೆಯಲ್ಲಿ ಜಿನಬಿಂಬ ಪ್ರತಿಷ್ಠೆಯನ್ನು ಮಾಡಿ ಒಂದು ಬಸದಿಯನ್ನು ಕಟ್ಟಿಸಿ ಅದಕ್ಕೆ ಬಿಟ್ಟ ದಾನದ ವಿವರಗಳು ಶಾಸನದಲ್ಲಿ ಕಂಡು ಬರುತ್ತದೆ.[೨೦]

ನಾಲ್ಕನೇ ವಿಕ್ರಮ ಸಾಂತರ: ಇವರ ಸಾಂತಳಿಗೆ ಸಾವಿರ ನಾಡನ್ನು ಏಕಸ್ವಾಮ್ಯವಾಗಿ ಮಾಡಿ ಆಳ್ವಿಕೆ ಮಾಡಿದಂತೆ ಶಾಸನಗಳಿಂದ ತಿಳಿದು ಬರುತ್ತದೆ. ಇವನ ಅಕ್ಕನಾದ ಪಂಪಾದೇವಿಯು ಮಹಾ ಜಿನಭಕ್ತೆಯಾಗಿದ್ದು, ಅವಳು ನೂತನ ಅತ್ತಿಮಬ್ಬೆ ಎಂದು ಕರೆಯಲ್ಪಟ್ಟಿದ್ದಾಳೆ. ಪಂಪಾದೇವಿ ಹಾಗೂ ಅವಳ ಮಗಳಾದ ಬಾಚಲದೇವಿ ಸೇರಿ ಪಂಚಬಸದಿಗೆ ಬಡಗಣ ಪಡುಸಾಲೆಯನ್ನು ಮಾಡಿಸಿ ಅದರ ಪ್ರತಿಷ್ಠಾಪನೆಯನ್ನು ಮಾಡಿದರೆಂದು ತಿಳಿದು ಬರುತ್ತದೆ.[೨೧]

ಇಮ್ಮಡಿ ತ್ರಿಭುವನಮಲ್ಲ ವೀರಾಸಾಂತರದೇವ: ಸು.ಕ್ರಿ.ಶ. ೧೦೫೭-೧೯೪. ಇವನನ್ನು ಶಾಸನಗಳು ಮಹಾಮಂಡಳೇಶ್ವರ, ಉತ್ತರಮಧುರಾಧೀಶ್ವರ, ಸಾಂತರಾದಿತ್ಯ ಎಂದು ಕರೆದಿವೆ. ಇವನ ಕಾಲದಲ್ಲಿ ಹೊಸಗುಂದದ ಬೀರರನು ಒಬ್ಬ ಪ್ರಮುಖ ಸಾಮಂತನಾಗಿದ್ದನು. ಇವರಿಬ್ಬರ ನಡುವೆ ಯುದ್ಧ ನಡೆದಾಗ ವೀರ ಸಾಂತರನಿಗೆ ಬನವಾಸಿಯ ದಂಡನಾಯಕ ಅರಳಯ್ಯ ಹಾಗೂ ಪೆದ್ದಯ್ಯ ಸಹಾಯಕರಾದರು. ಹಾಗೆಯೇ ಶಾಸನದಲ್ಲಿ ಕಲಚೂರಿ ಅರಸ ಬಿಜ್ಜಳದೇವ ಆಳುತಿದ್ದ ಎಂದು ಸಾಗರ ಶಾಸನ ತಿಳಿಸುತ್ತದೆ.[೨೨]

ಚಿಕ್ಕಮಗಳೂರಿನ ಕಳಸ ಮತ್ತು ಸುತ್ತಮುತ್ತಲ ಪ್ರದೇಶಗಳು ಹಾಗೂ ಕೊಪ್ಪ ತಾಲೂಕಿನ ಕೆಲಭಾಗಗಳು ಸೇರಿ ಕಳಸವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ ಸಾಂತರರ ಕೆಲವು ಶಾಸನಗಳು ದೊರೆತಿವೆ. ಮೊದಲಿಗೆ ಆಳುಪರ ಸಾಮಂತರಾಗಿ ಶಿವಮೊಗ್ಗ ಜಿಲ್ಲೆಯ

ಹುಂಚವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದ ನಂತರ ಕಳಸವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಿದರು. ಶಿವಮೊಗ್ಗ ಜಿಲ್ಲೆಯ ಸಾಗರ ಸೊರಬ, ತೀರ್ಥಹಳ್ಳಿ, ಹೊಸನಗರ ತಾಲ್ಲೂಕುಗಳನ್ನೊಳ ಗೊಂಡು ಕೊಪ್ಪ ತಾಲ್ಲೂಕಿನ ಕೆಲಭಾಗಗಳು ಮತ್ತು ಕಳಸದ ಸುತ್ತಮುತ್ತಲ ಪ್ರದೇಶಗಳನ್ನು ಒಳಗೊಂಡ ಸಾಂತಳಿಗೆ ಸಾಯಿರನಾಡು ಎಂಬ ಸಣ್ಣ ರಾಜ್ಯವು ೭ನೇ ಶತಮಾನದಿಂದ ೧೨ನೇ ಶತಮಾನದವರೆಗೂ ಅಸ್ತಿತ್ವದಲ್ಲಿ ಇದ್ದಿತ್ತು.

ಹಲವಾರು ಶಾಸನಗಳಲ್ಲಿ ಉಲ್ಲೇಖವಾಗಿರುವ ಕೊಡನಾಡು ೩೦, ಕೊಡನಾಡು ಮಾಗಣಿ, ಕೊಡನಾಡು ೨೫ ಎಂಬ ಆಡಳಿತ ವಿಭಾಗಗಳು ಸಾಂತಳಿಗೆ ಸಾಯಿರದಲ್ಲಿ ಅಂತರ್ಗತವಾಗಿದ್ದವು. ಸಾಮಂತರಾಗಿಯೇ ಇದ್ದ ಇವರು ಹುಂಚ ಮತ್ತು ಕಳಸದಿಂದ ಆಳ್ವಿಕೆ ನಡೆಸಿದರು.

ಸಾಂತರರು ಶೃಂಗೇರಿಯನ್ನು ತಮ್ಮ ಆಡಳಿತದ ಪ್ರದೇಶವನ್ನಾಗಿ ಮಾಡಿಕೊಂಡಿದ್ದರು ಎಂಬುದಕ್ಕೆ ಇಲ್ಲಿ ದೊರೆತಿರುವ ಕೆಲವು ಶಾಸನಗಳು ಸಾಕ್ಷಿಯಾಗಿವೆ. ಕಿಗ್ಗಾ ೫೯ನೆಯ ಶಾಸನದಲ್ಲಿ ತೇದಿಯಲ್ಲ. ಆದರೆ ಇದು ಕ್ರಿ.ಶ. ೭ನೇ ಶತಮಾನದ ಲಿಪಿಯಲ್ಲಿದೆ. ಇದರಲ್ಲಿ ಪೊಂಬುರ್ಜವನ್ನು ಆಳುತ್ತಿದ್ದ ಪೃಥ್ವಿವಲ್ಲಭ ಸಾಂತರಸನ ಉಲ್ಲೇಖವಿದೆ. ಈ ಶಾಸನದ ಉದ್ದೇಶ ದಾನವನ್ನು ದಾಖಲಿಸುವುದು.

ಕಿಗ್ಗಾದ ೫೮ನೆಯ ಶಾಸನವು ೭ನೇ ಶತಮಾನದ ಲಿಪಿಯಲ್ಲಿದ್ದು ಯಾವ ಸಾಂತರ ಅರಸರ ಹೆಸರೂ ಕಂಡುಬರುವುದಿಲ್ಲ. ಆದರೆ ಸಾಂತರರ ಆಳ್ವಿಕೆಯನ್ನು ಮಾತ್ರ ಉಲ್ಲೇಖಿಸುತ್ತದೆ.[೨೩]

ಕಿಗ್ಗಾ ೫೫ನೇಯ ಶಾಸನದಲ್ಲಿ ತೇದಿಯಿಲ್ಲ. ಆದರೆ ಇದು ಕ್ರಿ.ಶ.೭ ನೆಯ ಶತಮಾನದ ಲಿಪಿಯಲ್ಲಿದೆ. ಇದರಲ್ಲಿ ಪೊಂಬುರ್ಚವನ್ನು ಆಳುತ್ತಿದ್ದವನು ಚಿತ್ರವಾಹನ ಎಂದಿದೆ. ಕಿಗ್ಗಾದ ಕೀಳ್ಗಾಣೇಶ್ವರ ಭಕ್ತರಿಗೆ ಮಾತ್ರ ಅಕ್ಕಿ ಮತ್ತು ಹಾಲನ್ನು ಅನುಭವಿಸುವ ಹಕ್ಕು ಇದೆ ಎಂದು ದಾಖಲಿಸುತ್ತದೆ.[೨೪]

ಕಿಗ್ಗಾದ ಶಾಸನಗಳಲ್ಲಿ ಕೆಲವು ಸಾಂತರರ ಅರಸರ ಹೆಸರುಗಳಿದ್ದರೂ ಇವತ್ತಿಗೂ ಈ ಶಾಸನಗಳ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿದ್ದು ಚರ್ಚಾಸ್ಪದ ವಿಷಯವಾಗಿದೆ.

ಒಟ್ಟಾರೆಯಾಗಿ ೧೨ನೇ ಶತಮಾನದ ಕೊನೆಯ ಭಾಗದಲ್ಲಿ ಹುಂಚದ ಸಾಂತರರು ಅವನತಿಯ ಹಾದಿಯನ್ನು ಹಿಡಿದಾಗ ಅನೇಕ ಸಾಮಂತರು ಇವರ ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಯತ್ನ ಮಾಡತೊಡಗಿದರು. ಇವರನ್ನು ತಡೆಯುವ ಪ್ರಯತ್ನವನ್ನು ಸಾಂತರರು ಮಾಡಿದರಾದರೂ ತಮ್ಮ ಪ್ರದೇಶದ ಗಡಿಗಳನ್ನು ರಕ್ಷಿಸಿಕೊಳ್ಳಲು ಹೊಂಬುಜದ ಸಾಂತರರಿಗೆ ಸಾಧ್ಯವಾಗದೇ ಹೋಯಿತು. ಕೊನೆಯ ಹಂತದಲ್ಲಿ ಹೊಯ್ಸಳರ ವಿಷ್ಣುವರ್ಧನನು ಸಾಂತರ ಅರಸ ಜಗದೇವನ ಪಡೆಯನ್ನು ಹೊಡೆದೋಡಿಸಿ ಸಾಂತಳಿಗೆಯ ಪೂರ್ವದ ಕಡೆ ಅನೇಕ ಪ್ರಾಂತ್ಯಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು.[೨೫]

೨.೧.೨. ಸೇನರು/ಸೇನವಾರರು

ಚಿಕ್ಕಮಗಳೂರು ಮತ್ತು ಕೊಪ್ಪ ತಾಲ್ಲೂಕುಗಳ ಒಂದು ಸಣ್ಣ ಪ್ರದೇಶದಲ್ಲಿ ಆಳಿದ ಸೇನರಿಗೆ ಸೇರಿದ ೭ ಶಾಸನಗಳು ಲಭಿಸಿವೆ.

ಕ್ರಿ.ಶ. ೭ನೆಯ ಶತಮಾನದ ಪ್ರಾರಂಭದಿಂದ ಹನ್ನೊಂದನೇ ಶತಮಾನದವರೆಗೆ ಸುಮಾರು ಕ್ರಿ.ಶ. ೬೯೦ರಿಂದ ಕ್ರಿ.ಶ. ೧೦೬೦ರವರೆಗೆ ಶಿವಮೊಗ್ಗ ಜಿಲ್ಲೆಯ ಸೊರಬದಿಂದ ಚಿಕ್ಕಮಗಳೂರು ಜಿಲ್ಲೆಯ ಕೆಲಭಾಗಗಳಿಂದಲೂ ಈಗಿನ ಉಡುಪಿ ಜಿಲ್ಲೆಯ ಕೆಲಭಾಗಗಳಲ್ಲೂ ಆಳ್ವಿಕೆ ನಡೆಸುತ್ತಿದ್ದ ಸೇನರನ್ನು ಸೇನವಾರರೆಂದು ಕರೆಯಲಾಗಿದೆ. ಶಾಸನಗಳಲ್ಲಿ ಕಂಡುಬರುವ ಪ್ರಶಸ್ತಿಗಳಿಂದ ಇವರು ಕೂಡಲೂರು ಪುರುವರಧೀಶ್ವರರು, ಸಿಂಹ ಲಾಂಛನದವರೂ ಫಣಿಧ್ವಜ ವಿರಾಜಮಾನರು ಖಚರವಂಶಜರು ಎಂದು ತಿಳಿದುಬರುತ್ತದೆ. ಶಾಸನಗಳಲ್ಲಿ ದೊರಕುವ ಇವರ ಹೆಸರುಗಳಿಂದ ನಾಲ್ಕು ತಲೆಮಾರಿನ ಸೇನಾವಾರರನ್ನು ಗುರುತಿಸಬಹುದು. ಅವರುಗಳೆಂದರೆ ಜೀಮೂತವಾಹನ, ಖಚರಕಂದರ್ಪ ಮತ್ತು ಗುಂಡಕಂದರ್ಪ. ಚಿತ್ತವಳ್ಳಿ ಶಾಸನದಲ್ಲಿ ಜೀವಿತೇಶ್ವರನು ಮಾರಸಿಂಹನ ಅಜ್ಜ ಎಂದು ಹೇಳಿದೆ.[೨೬]

ಮಾರಸಿಂಹನ ಅಜ್ಜನಾದ ಜೀವಿತೇಶ್ವರನು ಒಬ್ಬ ವೈರಿಯಿಂದ ಕೊಲ್ಲಲ್ಪಟ್ಟನು. ಆದರೆ ಮಾರಸಿಂಹನ ತಂದೆಗೆ ಆ ವೈರಿಯನ್ನು ಶಿಕ್ಷಿಸಲಾಗಲಿಲ್ಲ. ಆದುದರಿಂದ ಸ್ವತಃ ಮಾರಸಿಂಹನೇ ಆ ಶತ್ರುವನ್ನು ಕೊಂದನು. ಅಷ್ಟೇ ಅಲ್ಲದೆ ತನ್ನ ಅಜ್ಜ ಕಟ್ಟಿಸಿದ ದೇವಾಲಯವನ್ನು ದುರಸ್ತಿ ಮಾಡಿಸಿ ಅದರ ಕಾರ್ಯಗಳಿಗಾಗಿ ದಾನಗಳನ್ನು ಮಾಡಿ, ಆ ದಾನಗಳನ್ನು ಇನ್ನೊಬ್ಬ ಸೇನಾವಾರ ಸಾಮಂತನು ಜೀವಿತೇಶ್ವರ ದೇವಾಲಯಕ್ಕೋಸ್ಕರ ಪ್ರತ್ಯೇಕವಾದ ಒಂದು ನಿಧಿಯನ್ನು ಸ್ಥಾಪಿಸಿದನು. ಈ ಎರಡು ಶಾಸನಗಳನ್ನು ಗಮನಿಸಿದರೆ ಜೀಮೂತವಾಹನನು ಜೀವಿತೇಶ್ವರರ ಮಗನೆಂದೂ ಮಾರಸಿಂಹನು ಜೀಮೂತವಾಹನನ ಮಗನೆಂದು ತಿಳಿಯಬಹುದು. ಇದು ಶಾಸನಾಧಾರಿತ ಊಹೆ ಮಾತ್ರ.

ಕೋಟೆವೂರು ಶಾಸನ ಮಾರಸಿಂಹನು ಆವಣೂರಿನ ದೇವರಿಗೂ ಪಂಚವೇಶ್ವರ ದೇವರಿಗೂ ಕ್ರಿ.ಶ. ೧೦೫೮ರಲ್ಲಿ ಭೂದಾನಗಳನ್ನು ಕೊಟ್ಟ ವಿಷಯವನ್ನು ತಿಳಿಸುತ್ತದೆ. ಮಾರಸಿಂಹನು ಗೌತಮೇಶ್ವರ ಗ್ರಾಮವನ್ನು ಸಂದರ್ಶಿಸಿ ಕೈಕೇಶ್ವರ ದೇವಾಲಯದ ಸ್ವಯಂಭೂ ದೇವರಿಗೆ ಕೂರಿದವಳ್ಳಿ ಗ್ರಾಮದಲ್ಲಿ ಭೂದಾನ ಮಾಡಿದನು ಮತ್ತು ಕೆಲವು ತೆರಿಗೆಯನ್ನು ಮನ್ನಾ ಮಾಡಿದನು ಎಂದಿದೆ.[೨೭]

ಕ್ರಿ.ಶ. ೧೧ನೆಯ ಶತಮಾನದ ಮತ್ತೊಂದು ಶಾಸನದ ಪ್ರಕಾರ ಇವನು ತನ್ನ ರಾಜ್ಯದ ಚಿತ್ತವಳ್ಳಿ, ಮಳ್ತವೂರು, ಚಿಕ್ಕವಿಟ್ಟ ಮುಂತಾದ ಅನೇಕ ಸ್ಥಳಗಳಲ್ಲಿ ದೇವಾಲಯ ನಿರ್ಮಾಣ ಕಾರ್ಯದಲ್ಲಿ ತೊಡಗಿದನೆಂದು ತಿಳಿಯುತ್ತದೆ.

ಕಣತಿಯ ಶಾಸನದ ಪ್ರಕಾರ ಗುಂಡಕಂದರ್ಪನು ಈಶ್ವರನಿಗಾಗಿ ದೇವಾಲಯವನ್ನು ನಿರ್ಮಿಸಿದನು. ಇಬ್ಬರು ವ್ಯಕ್ತಿಗಳು ಇದೇ ದೇವಾಲಯದ ನಂದಿಮಂಟಪವನ್ನು ನಿರ್ಮಿಸಲು ಸಹಾಯ ಮಾಡಿದರು.[೨೮]

ಕಡವಂತಿ ಶಾಸನ ಸೇನಾವಾರ ಸಾಮಂತ ಖಚರಕಂದರ್ಪನನ್ನು ಉಲ್ಲೇಖಿಸುತ್ತದೆ. ಇವನು ಜೈನ ಧರ್ಮಕ್ಕೆ ವಿಶೇಷ ಒಲವು ತೋರಿಸಿದನೆಂದು ತಿಳಿಸುತ್ತದೆ. ಈ ಶಾಸನದ ಪ್ರಕಾರ ಸೇನಾವಾರರು ಜೈನ ಧರ್ಮಕ್ಕೆ ವಿಶೇಷ ಒಲವು ವ್ಯಕ್ತಪಡಿಸಿದರು ಎಂಬುದಕ್ಕೆ ಕಡವಂತಿ ಶಾಸನ ಸಾಕ್ಷಿಯಾಗಿದೆ. ಈ ಶಾಸನದಲ್ಲಿ ನಿರುವದ್ಯಯ್ಯ ಎನ್ನುವವನು ನಿರವದ್ಯ ಜಿನಾಲಯವನ್ನು ನಿರ್ಮಿಸಿದನು. ಖಚರಕಂದರ್ಪ ಅದನ್ನು ಮಾನ್ಯವನ್ನಾಗಿ ಮಾಡಿ ಜಿನಾಲಯಕ್ಕೆ ಅರ್ಪಿಸಿದನು. ಈ ನಿರುವದ್ಯಯ್ಯನು ದೇವಗಣ ಮತ್ತು ಪಾಷಾಣನ್ವಯದ ಅಂಕದೇವಭಟ್ಟಾರರ ಶಿಷ್ಯನೆಂದು ಹೇಳಲಾಗಿದೆ.[೨೯]

ಈ ಶಾಸನದಲ್ಲಿ ತೇದಿಯ ಉಲ್ಲೇಖವಿಲ್ಲದಿದ್ದರೂ ಲಿಪಿ ಲಕ್ಷಣದ ಆಧಾರದ ಮೇಲೆ ಇದು ಕ್ರಿ.ಶ. ೧೧ನೆಯ ಶತಮಾನಕ್ಕೆ ಸೇರುತ್ತದೆ. ಈ ರೀತಿ ಸೇನವಾರ ಸಾಮಂತರು ದೇವಾಲಯ ನಿರ್ಮಾಣ ಕಾರ್ಯಗಳಿಂದ ಈ ಪ್ರದೇಶದ ಸಾಂಸ್ಕೃತಿಕ ಜೀವನವನ್ನು ಶ್ರೀಮಂತಗೊಳಿಸಿದರು.

೨.೧.೩. ಕಳಸ–ಕಾರ್ಕಳ ಮಾಂಡಳಿಕ ಪ್ರಭುಗಳು

ಚಿಕ್ಕಮಗಳೂರು ಜಿಲ್ಲೆಯ ಕಳಸ ಹಾಗೂ ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಸುಮಾರು ಕ್ರಿ.ಶ. ೧೧೫೪ರಿಂದ ಕ್ರಿ.ಶ. ೧೬೮೯ರವರೆಗೆ ಮಾಂಡಳಿಕ ಮನೆತನದ ಭೈರರಸರು ಆಡಳಿತ ನಡೆಸುತ್ತಿದ್ದರು ಎಂಬ ಅಂಶ ಶಾಸನಗಳಿಂದ ತಿಳಿದುಬರುತ್ತದೆ. ಭೈರರಸ ಒಡೆಯರು ಕಳಸವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಕೊಪ್ಪದ ಕೆಲಭಾಗಗಳು ಅವರ ಆಳ್ವಿಕೆಯಲ್ಲಿದ್ದ ಅಂಶ ಗಮನಾರ್ಹವಾದದ್ದು. ಕ್ರಿ.ಶ. ೧೧೫೪ರ ಕಳಸ ಶಾಸನವು ಅತ್ಯಂತ ಪ್ರಾಚೀನ ಶಾಸನವಾಗಿದ್ದು ಶಾಂತಮಾರುದೇವನನ್ನು ಹೆಸರಿಸುತ್ತದೆ.

ಈ ರಾಜವಂಶದ ಮಹಾರಾಣಿಯಾದ ಜಾಗಲಮಹಾದೇವಿ ಅತ್ಯಂತ ದಕ್ಷತೆಯಿಂದ ರಾಜ್ಯಭಾರ ಮಾಡಿದ್ದು ಕಳಸದ ಪ್ರಧಾನ ದೇವತೆಯಾದ ಕಳಸೇಶ್ವರನಿಗೆ ನೀಡಿದ ದಾನವನ್ನು ಮುತ್ತೊಳ್ಳಿ ಶಾಸನ ಉಲ್ಲೇಖಿಸುತ್ತದೆ.

ಈ ಮನೆತನದ ಇನ್ನೊಬ್ಬ ರಾಣಿಯಾದ ಕಾಳಲಮಹಾದೇವಿಯನ್ನು ಪಟ್ಟದ ಹಿರಿಯರಸಿ ಎಂದು ಹೇಳಲಾಗಿದೆ. ಕಳಸ ಮತ್ತು ಮೂಡಿಗೆರೆ ಶಾಸನಗಳಲ್ಲಿ ಈಕೆಯು ಕಳಸ–ಕಾರ್ಕಳ ರಾಜ್ಯವನ್ನು ಆಳುತ್ತಿದ್ದಳೆಂದು, ಕಳಸೇಶ್ವರನಿಗೆ ದಾನ ನೀಡಿದ್ದರ ಬಗ್ಗೆ ಮಾಹಿತಿಯನ್ನು ನೀಡುತ್ತವೆ.[೩೦]

ಅನಂತರ ಕಳಸ–ಕಾರ್ಕಳ ಸಾಮ್ರಾಜ್ಯವನ್ನಾಳಿದ ಶಾಸನೋಕ್ತ ಪ್ರಮುಖ ಚಕ್ರವರ್ತಿ ವೀರಬಲ್ಲುದೇವ. ಮೂಡಿಗೆರೆ ಮತ್ತು ಕಳಸ ಶಾಸನಗಳಲ್ಲಿ ಈತನ ಬಗ್ಗೆ ಸಾಕಷ್ಟು ಮಾಹಿತಿಗಳು ಇದ್ದು ಕಳಸನಾಥನಿಗೆ ದಾನ ನೀಡಿದ ಬಗ್ಗೆ ವಿವರಣೆ ನೀಡುತ್ತವೆ. ಇವನು ಮರಕಾಲ ಶತ್ರುಗಳನ್ನು ಯುದ್ಧದಲ್ಲಿ ಹತ ಮಾಡಿದ ಬಗ್ಗೆ ಇಂದಾವರ ಶಾಸನದಲ್ಲಿ ಉಲ್ಲೇಖವಿದೆ. ಇವನೊಂದಿಗೆ ಕಳಸ–ಕಾರ್ಕಳ ವಂಶದ ಮೊದಲನೆ ಹಂತ ಮುಗಿದು, ಎರಡನೆಯ ಹಂತ ಎರಡು ಶತಮಾನಗಳ ನಂತರ ಆರಂಭವಾಗುತ್ತದೆ. ಈ ಹಂತದಲ್ಲಿ ವಿಜಯನಗರ ಅರಸರ ಸಾಮಂತರಾಗಿ ಕಾಣಿಸಿಕೊಳ್ಳುತ್ತಾರೆ.[೩೧]

ಎರಡನೆಯ ಹಂತ

ಈ ಹಂತದಲ್ಲಿ ಕಳಸ–ಕಾರ್ಕಳ ಪ್ರಭುಗಳನ್ನು ಭೈರರಸ ಒಡೆಯರು ಎಂದು ಉಲ್ಲೇಖಿಸಿದ್ದು ಕ್ರಿ.ಶ. ೧೪೮೯ರಿಂದ ಕ್ರಿಶ ೧೬೦೯ರವರೆಗೆ ೬ ಜನ ಅರಸರು ರಾಜ್ಯಭಾರ ಮಾಡಿದರು. ಈ ಸಮಯದಲ್ಲಿ ವಿಜಯನಗರ ಅರಸರು ಪ್ರಬಲರಾಗಿದ್ದು ಅವರ ಸಾಮಂತರಾಗಿ ಆಳ್ವಿಕೆ ನಡೆಸಿದರು. ಒಂದನೇ ದೇವರಾಯ ಆಳುತ್ತಿದ್ದಾಗ ಸಿಂಗರಸ ಒಡೆಯ ಕಾರ್ಕಳದ ಪ್ರಭುವಾಗಿದ್ದನು.ಈ ಹಂತದಲ್ಲಿ ತಮ್ಮನ್ನು ಭೈರರಸ ಒಡೆಯರು ಎಂದು ಕರೆದುಕೊಂಡಿದ್ದಾರೆ. ಸಾಳುವ ಮನೆತನದ ಇಮ್ಮಡಿ ನರಸಿಂಹನ ಸಾಮಂತನಾಗಿ ಇಮ್ಮಡಿ ಭೈರರಸ ಆಳುತ್ತಿದ್ದನೆಂದು ಕಳಸೇಶ್ವರನಿಗೆ ದಾನ ನೀಡಿದುದರ ಬಗ್ಗೆ ಮೂಡಿಗೆರೆ ಮತ್ತು ಕಳಸ ಶಾಸನಗಳು ಮಾಹಿತಿ ಇದೆ.

ಕಲ್ಲುಬಸ್ತಿ ಶಾಸನದಲ್ಲಿ ಬೊಮ್ಮಲದೇವಿಯ ಮಗ ವೀರಭೈರರಸವೊಡೆಯ ಕಾರ್ಕಳದಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ, ದೊರೆಯ ಸೋದರಿ ಕಾಳಲದೇವಿಯು ಬಗ್ಗುಂಜಿ ಸೀಮೆಯನ್ನು ಆಳುತ್ತಿದ್ದ ಸಂದರ್ಭದಲ್ಲಿ, ಆಕೆಯ ಪುತ್ರಿ ರಮಾದೇವಿಯು ಮೃತಳಾದಾಗ ತನ್ನ ಕುಲದೇವತೆ ಕಲ್ಲುಬಸ್ತಿಯ ಪಾರ್ಶ್ವತೀರ್ಥಂಕರರ ಸೇವೆಗಳಿಗೆ ಭೂದಾನ ನೀಡಿದ ಬಗ್ಗೆ ವಿವರಣೆ ಇದೆ.[೩೨]

ನಾರ್ವೆ ಶಾಸನದಲ್ಲಿ ಇಮ್ಮಡಿ ಭೈರರಸವೊಡೆಯನು ಗುಮ್ಮಟ ದೇವಿಯ ಮಗನೆಂದು ಹಾಗೂ ಇವನ ಕಾಲದಲ್ಲಿ ಕೊಪ್ಪದ ಅಪ್ಪಾಜಿಸೇನಾಭೋವನು ತುಂಗಾ ನದಿಯ ತೀರದ ನಾರ್ವೆಯಲ್ಲಿ ಗೋಪಾಲಕೃಷ್ಣ ದೇವಾಲಯವನ್ನು ಪ್ರತಿಷ್ಠಾಪನೆ ಮಾಡಿ ನಂದಾದೀಪ ಮತ್ತು ಛತ್ರಕ್ಕಾಗಿ ೨೫೨ ಖಂಡುಗ ಭತ್ತವನ್ನು ಬೆಳೆಯುವ ಭೂಮಿಯನ್ನು ದಾನ ನೀಡಿದ ವಿವರಣೆ ಇದೆ.[೩೩]

ಇನ್ನೊಬ್ಬ ಭೈರರಸ ಒಡೆಯರ ಅರಸ ವೀರಪಾಂಡ್ಯನು ಕೊಪ್ಪದಲ್ಲಿ ಸಾಧನ ಚೈತ್ಯಾಲಯವನ್ನು ನಿರ್ಮಿಸಿ, ಅಲ್ಲಿನ ಪಾರ್ಶ್ವನಾಥ ದೇವರಿಗೆ ಭೂಮಿಯನ್ನು ದಾನ ಮಾಡಿದ ವಿಷಯವನ್ನು ಕೊಪ್ಪ ಶಾಸನ ನಿರೂಪಿಸುತ್ತದೆ.[೩೪]

ಕಳಸ ಶಾಸನದಲ್ಲಿ ಇಮ್ಮಡಿ ವೀರ ಭೈರರಸನ ವಿವರಣೆ ಇದ್ದು, ಆತ ಕ್ರಿ.ಶ. ೧೪೯೩ರಿಂದ ಕ್ರಿ.ಶ. ೧೫೧೬ರವರೆಗೆ ಆಳಿದನೆಂದು ಹೇಳುತ್ತದೆ. ಈ ಶಾಸನದಲ್ಲಿ ಕಳಸೇಶ್ವರನಿಗೆ ದಾನ ನೀಡುವಾಗ ಹುಳಿಶಾಖ, ಮೇಲುಗರ, ಕಾಯಮೇಲುಗರ, ಸಕ್ಕರೆ, ಮೆಣಸು, ಬಾಳೆಹಣ್ಣು, ಉಪ್ಪು, ಹುಣಸೇಹಣ್ಣು, ಬಟ್ಟೆ ಇತ್ಯಾದಿಗಳನ್ನು ಪ್ರಸ್ತಾಪಿಸುತ್ತದೆ.[೩೫]

ಕಳಸ ಶಾಸನವು ಕ್ರಿ.ಶ. ೧೫೧೬ರ ಕೃಷ್ಣದೇವರಾಯನ ಕಾಲಕ್ಕೆ ಸೇರಿದ್ದು ಇಮ್ಮಡಿ ಭೈರರಸ ಒಡೆಯನನ್ನು ಹೆಸರಿಸುತ್ತದೆ. ಇವನು ಬೊಮ್ಮಲದೇವಿಯ ಮಗನೆಂದು ಇಮ್ಮಡಿ ವೀರ ಹಿರಿಯ ಬೈರರಸ ಒಡೆಯನ ಅಳಿಯನೆಂದು ಹೇಳಿದೆ. ಈ ಶಾಸನವು ಆಸಕ್ತಿಕರ ರಾಜಕೀಯ ವಿಷಯಗಳನ್ನು ತಿಳಿಸುತ್ತದೆ. ಕ್ರಿ.ಶ. ೧೫೧೬ರಲ್ಲಿ ಕೃಷ್ಣದೇವರಾಯನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಾಳಿ ಮಾಡಿ ಮಂಗಳೂರಿಗೆ ಸಮೀಪದ ಭುವನಕಾಲೆ ಎಂಬಲ್ಲಿ

ಬೀಡುಬಿಟ್ಟಿದ್ದನು. ಇದು ಇಮ್ಮಡಿ ಭೈರರಸನಿಗೆ ತುಂಬಾ ಆತಂಕವನ್ನುಂಟುಮಾಡಿತು. ಶಾಸನದಲ್ಲಿ ಉಕ್ತವಾಗಿರುವಂತೆ ವಿಜಯನಗರ ಸೈನ್ಯ ಯಾವ ತೊಂದರೆಯನ್ನು ಉಂಟುಮಾಡದೆ ಹಿಂದಕ್ಕೆ ಹೊರಟು ಹೋದರೆ ಕಳಸನಾಥೇಶ್ವರನ ದೇವಾಲಯವನ್ನು ದುರಸ್ತಿ ಮಾಡುವುದಾಗಿ ಇವನು ಹರಸಿಕೊಂಡನು. ಇವನ ಮೊರೆಯು ಕಳಸನಾಥನಿಗೆ ಕೇಳಿಸಿತೋ ಎನ್ನುವಂತೆ ವಿಜಯನಗರ ಸೈನ್ಯವು ಸುಮ್ಮನೆ ಹಿಂದಿರುಗಿತು. ತನ್ನ ಹರಕೆಯಂತೆ ಇವನು ಸೇನಾಭೋವ ಸೂರಪ್ಪನ ಮೂಲಕ ದೇವಾಲಯದ ಜೀರ್ಣೋದ್ಧಾರ ಕಾರ್ಯ ಮಾಡಿಸಿರುವುದಲ್ಲದೆ ೩೦ ಗದ್ಯಾಣಗಳನ್ನು ದಾನವಾಗಿ ನೀಡಿದನು. ಬಹುಶಃ ತುಳುನಾಡಿನ ಸಾಮಂತನೊಬ್ಬ ಸ್ವತಂತ್ರವಾಗಲು ಹವಣಿಸಿರಬೇಕು. ಇದಕ್ಕಾಗಿ ವಿಜಯನಗರ ಸೈನ್ಯವು ಇಲ್ಲಿ ಬಂದು ತಂಗಿರಬೇಕು. ಈ ಸೈನ್ಯ ನೋಡಿ ಸಾಮಂತ ಶರಣಾಗತನಾಗಿರಬೇಕು. ಆದುದರಿಂದ ವಿಜಯನಗರ ಸೈನ್ಯವು ಯಾರಿಗೂ ತೊಂದರೆಯನ್ನುಂಟು ಮಾಡದೆ ಹಿಂದಿರುಗಿತು ಎಂಬುದಾಗಿ ಶಾಸನದಲ್ಲಿ ಮಾಹಿತಿ ಇದೆ.[೩೬]

ಈ ಶಾಸನದಲ್ಲಿ ಕಾಣಿಸಿಕೊಳ್ಳುವ ಪ್ರಮುಖ ದೊರೆ ವೀರಪಾಂಡ್ಯ ಒಡೆಯ. ಇವನು ವಿಜಯನಗರದ ಅರಸ ಸದಾಶಿವರಾಯನ ಸಾಮಂತನಾಗಿದ್ದು, ಇವನು ಕೆರೆವಾಸೆಯ ಚಂದಲದೇವಿಯ ಮಗನೆಂದು ಕಳಸ ಶಾಸನ ಹೇಳುತ್ತದೆ. ಇವನು ಕಳಸದ ಕಳಸೇಶ್ವರನ ಅನನ್ಯ ಆರಾಧಕನೇ ಆಗಿದ್ದನು. ಕಳಸನಾಥೇಶ್ವರನಿಗೆ ಪ್ರತಿನಿತ್ಯ ರುದ್ರಪೂಜೆ ಇತ್ಯಾದಿಗಳನ್ನು ಮಾಡುವುದಕ್ಕೋಸ್ಕರ ೨೭೦ ಖಂಡುಗ ಭೂಮಿಯನ್ನು ದಾನವಾಗಿ ಕೊಟ್ಟ ವಿಷಯವನ್ನು ಕಳಸ ಶಾಸನ ತಿಳಿಸುತ್ತದೆ.[೩೭] ಹಾಗೆಯೇ ಕಳಸನಾಥನ ಪಂಚಾಮೃತಾಭಿಷೇಕಕ್ಕೆ ಮಾಡಿದ ವಿವರಗಳನ್ನು ಇಲ್ಲಿಯ ಶಾಸನವು ವ್ಯಕ್ತಪಡಿಸುತ್ತದೆ.[೩೮]

ಕಳಸ–ಕಾರ್ಕಳ ಒಡೆಯರು ಮಲೆನಾಡಿನ ೬ ಪ್ರಾಂತ್ಯದಲ್ಲಿ ಸುಮಾರು ೬ ಶತಮಾನಗಳ ದೀರ್ಘಕಾಲ ಆಳ್ವಿಕೆ ನಡೆಸಿ ಮಲೆನಾಡಿನ ಸಂಸ್ಕೃತಿಗೆ ತಮ್ಮದೇ ಆದಂತಹ ವಿಶಿಷ್ಟ ಕೊಡುಗೆಯನ್ನು ನೀಡಿರುವರು. ವಿಜಯನಗರದ ಸಾಮಂತ ಅರಸರಾಗಿದ್ದ ಇವರು ಎಲ್ಲಿಯೂ ಉದ್ಧಟತನವನ್ನು ತೋರಿಸದೆ ನಿಷ್ಠೆಯಿಂದ ಆಳಿದವರು. ಜೈನ ಧರ್ಮದ ಅವಲಂಬಿತರಾಗಿದ್ದು ಕಳಸದ ಕಳಸೇಶ್ವರನ ಅನನ್ಯ ಆರಾಧಕರಾಗಿದ್ದು, ಎಲ್ಲಾ ಕಾಲಘಟ್ಟದಲ್ಲೂ ಯಥೇಚ್ಛವಾಗಿ ದಾನ-ಧರ್ಮಗಳನ್ನು ಮಾಡಿರುವುದನ್ನು ಶಾಸನಗಳು ಸಾದರಪಡಿಸುತ್ತವೆ.

೨.೧.೪. ದಕ್ಷಿಣ ಕನ್ನಡದ ಆಳುಪರು

ತುಳುನಾಡಿನ ರಾಜವಂಶಗಳಲ್ಲಿ ಆಳುಪ ಮನೆತನವೇ ಅತೀ ಪ್ರಾಚೀನವಾದದ್ದು. ಇಲ್ಲಿನ ರಾಜಕೀಯ ಚರಿತ್ರೆಗೆ ಸಂಬಂಧಿಸಿದಂತೆ 'ತುಳುನಾಡು' ಎಂದು ಕರೆಯಲ್ಪಡುತ್ತಿದ್ದು, ಈ ಜಿಲ್ಲೆಯನ್ನು ಕ್ರಿ.ಶ. ೫ನೇ ಶತಮಾನದ ಮಧ್ಯಭಾಗದಲ್ಲಿ ಕದಂಬರ ಸಾಮಂತರಾಗಿ ರಾಜ್ಯ ವಾಳಿದರೆಂದು ಹಲ್ಮಿಡಿ ಶಾಸನದಲ್ಲಿ 'ಅಳುಪಗಣ ಪಶುಪತಿ' ಎಂದು ಬಣ್ಣಿಸಿದೆ. ಭೂಗೋಳ ತಜ್ಞ ಟಾಲೆಮಿ ಆಳ್ವಖೇಡವನ್ನು ತನ್ನ ಭೂಗೋಳಶಾಸ್ತ್ರದಲ್ಲಿ ಒಲೊಖೊಯ್ರವು ಎಂಬುದಾಗಿ

ಕರೆದಿದ್ದಾನೆ.[೩೯] ಏಳನೇ ಶತಮಾನದಿಂದ ಹದಿನಾಲ್ಕನೇ ಶತಮಾನದವರೆಗೆ ಅಳುಪರು ದೀರ್ಘಕಾಲ ಆಳ್ವಿಕೆ ನಡೆಸಿದರು. ಆರಂಭದಲ್ಲಿ ಸ್ವತಂತ್ರ ಪ್ರಭುಗಳಾಗಿದ್ದು ನಂತರ ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರದ ಅರಸರ ಸಾಮಂತರಾಗಿ ಬಹು ದೀರ್ಘಕಾಲ ಆಳಿದರು. ತಮ್ಮ ರಾಜ್ಯವನ್ನು ಕಾಸರಗೋಡಿನವರೆಗೂ ಪೂರ್ವದಲ್ಲಿ ಶಿವಮೊಗ್ಗದ ಹೊಂಬುಜದ ವರೆಗೂ ವಿಸ್ತರಿಸಿ ರಾಜ್ಯಭಾರ ಮಾಡಿದರು. ಕೊಪ್ಪ, ಶೃಂಗೇರಿ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೆಲವು ಪ್ರದೇಶಗಳನ್ನು ಆಡಳಿತಕ್ಕೆ ಒಳಪಡಿಸಿಕೊಂಡರು.

ಆಳುಪರು ತುಳುನಾಡಿನ ಪಾಂಡ್ಯರಂತೆ ಮೀನಲಾಂಛನೋಪೇತರು. ಇವರು ಮೂಲತಃ ಮಧುರೈ, ಪಾಂಡ್ಯರ ವಂಶಕ್ಕೆ ಸೇರಿರಬಹುದು ಎಂಬುದಕ್ಕೆ ಎರಡು ಮೀನುಗಳ ಮುದ್ರೆ ಪ್ರಮುಖ ಸಾಕ್ಷಿಯಾಗುತ್ತದೆ. ನಾಣ್ಯಗಳಲ್ಲಿ 'ಶ್ರೀಪಾಂಡುಧನಂಜಯ' ಎಂಬ ನಾಮಾಂಕಿತವಿದೆ.

ಕ್ರಿ.ಶ. ಏಳನೇ ಶತಮಾನದಲ್ಲಿ ಆಳುಪರ ಇತಿಹಾಸವು ಬೆಳಕಿಗೆ ಬರುವ ಕಾಲಕ್ಕೆ ರಾಜಧಾನಿ ಮಂಗಳಾಪುರದ ಆಳುಪ ಸಿಂಹಾಸನದಲ್ಲಿ ಕುಳಿತು ರಾಜ್ಯವಾಳುತ್ತಿದ್ದವನು ಒಂದನೇಯ ಆಳುಪರಸನಾದ ಗುಣಸಾಗರ ಆಳುಪೇಂದ್ರನು. ಇವನ ಕಾಲದಲ್ಲಿ ತುಳುನಾಡು ಅಷ್ಟೇ ಅಲ್ಲದೇ ಹುಂಚ ಪ್ರದೇಶವು, ಕದಂಬ ಮಂಡಲವು ಆಳುಪರ ಆಳ್ವಿಕೆಗೆ ಒಳಪಟ್ಟಿದ್ದಿತು. ಹೀಗಾಗಿ ಒಂದನೇ ಆಳ್ವರಸನ ಆಳ್ವಿಕೆಯಲ್ಲಿ ತುಳುನಾಡಿನ ಮಂಗಳೂರು, ಹೊಂಬುಜ ಮತ್ತು ಕದಂಬ ಮಾಂಡಳಿಕ ಬನವಾಸಿ ಆಳುಪರ ಮೂರು ಪ್ರಧಾನ ರಾಜಧಾನಿಗಳಾಗಿದ್ದವು.[೪೦]

ರಾಜಕೀಯ ಚರಿತ್ರೆ

ಕನ್ನಡದ ಅತ್ಯಂತ ಪ್ರಾಚೀನ ಶಾಸನವೆನಿಸಿಕೊಂಡ ಕ್ರಿ.ಶ. ೪೫೦ರ ಪಲ್ಮಿಡಿ ಶಾಸನದಲ್ಲಿ ಆಳುಪರ ಬಗೆಗೆನ ಉಲ್ಲೇಖವು ಗಮನೀಯವಾಗಿದೆ.ಬತಾರಿ ಕುಲಾಮಲಾವ್ಯೋವ 'ತಾರಾದಿ ನಾಥನ್ನಳುಪಗಣಪಶುಪಥಿ' ಎಂಬುದಾಗಿ ಆಳುಪ ಕುಲದ ಬಗ್ಗೆ ಮಾಹಿತಿ ನೀಡುತ್ತದೆ. ಏಳನೆಯ ಶತಮಾನದ ಮಧ್ಯಭಾಗಕ್ಕೆ ಸೇರಿದ (ಕ್ರಿ.ಶ.ಸು ೬೫೦)ಕ್ಕೆ ವಡ್ಡರ್ಸೆ ಶಿಲಾಶಾಸನವು ದಕ್ಷಿಣ ಕನ್ನಡದಲ್ಲಿ ದೊರಕಿರುವ ಮೊದಲ ಶಿಲಾ ದಾಖಲೆಯಾಗಿದ್ದು ಒಂದನೇ ಆಳ್ವರಸನ ಕಾಲದ್ದಾಗಿದ್ದು ಆಳುಪರ ಬಗ್ಗೆ ವಿಪುಲವಾದ ಮಾಹಿತಿಯನ್ನು ನೀಡುತ್ತದೆ.[೪೧]

ಒಂದನೆಯ ಆಳ್ವರಸನ ನಂತರ ಆತನ ಮಗನಾದ ಚಿತ್ರವಾಹನ ಅಧಿಕಾರಕ್ಕೆ ಬಂದುದರ ಬಗ್ಗೆ ಕಿಗ್ಗಾ ಶಾಸನದಲ್ಲಿ ಮಾಹಿತಿ ಇದೆ. ಇವನು ಕದಂಬ ಮಂಡಲವನ್ನು ಆಳುತ್ತಿದ್ದಾಗ ಕುಂದವರ್ಮನು ಇಲ್ಲಿ ಅಧಿಕಾರಿಯಾಗಿದ್ದನು. ಚಿತ್ರವಾಹನಿಗೆ ಗುಣಸಾಗರನೆಂಬ ಮತ್ತೊಂದು ನಾಮಧೇಯವು, ಮಹಾದೇವಿ ಎಂಬ ರಾಣಿಯೂ ಇದ್ದು ದಾನವನ್ನು ಸ್ವೀಕರಿಸಿದ ಬಗ್ಗೆ ಶಾಸನದಲ್ಲಿ ಕಂಡುಬರುತ್ತದೆ.[೪೨] ಇವನು ಚಾಲುಕ್ಯ ದೊರೆ ವಿನಯಾದಿತ್ಯನ ಸಹೋದರಿ ಕುಂಕುಮದೇವಿಯನ್ನು ವಿವಾಹವಾಗಿದ್ದನು. ಶಿಗ್ಗಾಂವ ತಾಮ್ರ ಶಾಸನದಲ್ಲಿ ಕುಂಕುಮದೇವಿ 'ಸ್ವಹೃದಯ ಪ್ರಾಹ್ಲಾದನಕಾರಿಣೀ' ಎಂದು ಬಣ್ಣಿಸಿದ್ದು ಈಕೆಯು ಪರಮ ಜಿನಭಕ್ತೆ. ಅವಳ ಪತಿ ಚಿತ್ರವಾಹನನೂ ಪರಮಶಿವಭಕ್ತ ಎಂದಿದೆ.[೪೩]

ಇನ್ನು ಆಳುಪರ ಶಾಸನೋಕ್ತ ದೊರೆ ಎಂದರೆ ಇಮ್ಮಡಿ ಆಳ್ವರಸ. ಕಾರ್ಕಳ ತಾಲ್ಲೂಕಿನ ಬೆಳ್ಮಣ್ಣು ಗ್ರಾಮದ ಮಹಿಷಾಸುರ ಮರ್ಧಿನಿ ದೇವಾಲಯದಲ್ಲಿ ಇಟ್ಟಿರುವ ತಾಮ್ರಶಾಸನದಲ್ಲಿ ಇಮ್ಮಡಿ ಆಳ್ವರಸನು ಆಳುತ್ತಿದ್ದಾಗ 'ಮಹಾನಾಡು' ಎಂಬ ಅಧಿಕೃತ ಸಭೆಯಲ್ಲಿ ಆಳ್ವರಸನೂ ಎರೆಯಪ್ಪರಸನೂ ಸ್ವತಃ ಹಾಜರಿದ್ದು ಸೂರ್ಯಗ್ರಹಣದಂದು ಶಿವಳ್ಳಿಯ ಸಭೆಗೆ ಅನ್ವಯಿಸುವಂತಹ ಕಟ್ಟುಕಟ್ಟಳೆಗಳು ಹಾಗೂ ಶಾಪಶಯ ಹಾಗೂ ಪುಣ್ಯಾಶಯವನ್ನೂ ವಿವರಿಸುತ್ತದೆ. ಈ ಪಾಂಡ್ಯ ಕುಲದ ಸ್ತುತಿಯೊಂದಿಗೆ ಶಾಸನದ ಮುದ್ರೆಯುಂಗುರದಲ್ಲಿ ಎರಡು ಮೀನುಗಳ ಚಿತ್ರ ಹೊಂದಿರುವ ತಾಮ್ರ ಶಾಸನವನ್ನು ಹೊರಡಿಸುವಷ್ಟು ಸ್ವತಂತ್ರ ಆಳ್ವರಸನಾಗಿದ್ದುದು ಇದರಿಂದ ದೃಢವಾಗುತ್ತದೆ.[೪೪] ಇವನು ಬಾದಾಮಿ ಚಾಲುಕ್ಯರ ದೊರೆಗೆ ಸಹಾಯ ಮಾಡಿದ್ದರಿಂದ ಸಂತೋಷಗೊಂಡ ವಿನಯಾದಿತ್ಯನು ಇವನಿಗೆ ಕದಂಬ ಮಂಡಲದ ಅಧಿಪತ್ಯವನ್ನು ವಹಿಸಿಕೊಟ್ಟನು.

ಎರಡನೇ ಆಳ್ವರಸನ ನಂತರ ಶಾಸನೋಕ್ತ ಅರಸನೆಂದರೆ ಇಮ್ಮಡಿ ಚಿತ್ರವಾಹನ. ಇವನು ತುಳುನಾಡಿನ ರಾಜಧಾನಿ ಉದ್ಯಾವರದಲ್ಲಿ ಆಳ್ವಿಕೆ ನಡೆಸದೇ ಪೊಂಬುಚ್ಚ ಪ್ರದೇಶಕ್ಕೆ ತೆರಳಿ ಅಲ್ಲಿಯ ಪೆರ್ಗುಂಜಿಯಿಂದ ರಾಜ್ಯವಾಳ ತೊಡಗಿದನು. ತುಳುನಾಡಿನ ರಾಜ್ಯಭಾರವನ್ನು ಅವನ ತಮ್ಮನಿದ್ದಿರಬಹುದಾದ ರಣಸಾಗರನು ವಹಿಸಿಕೊಂಡನು.[೪೫] ಇವರಿಬ್ಬರ ನಡುವಿನ ಕದನದಲ್ಲಿ ರಣಸಾಗರ ಸೋಲನ್ನು ಅನುಭವಿಸಿ ಆಳುಪರ ಮತ್ತೊಂದು ಪ್ರಮುಖ ರಾಜಧಾನಿಯಾಗಿದ್ದ ಮಂಗಳೂರಿಗೆ ಧಾವಿಸಿದ. ತೇದಿಯ ಉಲ್ಲೇಖವಿಲ್ಲದಿದ್ದರೂ ಏಳನೆಯ ಶತಮಾನದ ಲಿಪಿಯಲ್ಲಿದ್ದು ಕಿಗ್ಗಾ ಶಾಸನದಲ್ಲಿ ಚಿತ್ರವಾಹನ ಪೊಂಬುಜದಲ್ಲಿ ರಾಜ್ಯವನ್ನಾಳುತ್ತಿದ್ದ ಎಂಬ ವಿಷಯ ತಿಳಿಸುತ್ತದೆ. ಇದರಲ್ಲಿ ನಾಗಣ್ಣ ಎಂಬ ಅಧಿಕಾರಿಯ ಉಲ್ಲೇಖವಿದೆ.[೪೬]

ಇಮ್ಮಡಿ ಚಿತ್ರವಾಹನನ ನಂತರ ಅವನ ಮಗ ಶ್ವೇತವಾಹನ ಅಧಿಕಾರಕ್ಕೆ ಬಂದನು. ರಾಣಾ ಸಾಗರ ಮತ್ತು ಈತನ ನಡುವೆ ಹಲವು ಹೋರಾಟಗಳು ನಡೆದವು. ನಂತರ ಪೃಥ್ವಿ ಸಾಗರ ಅಧಿಕಾರಕ್ಕೆ ಬಂದು ಶ್ವೇತವಾಹನನೊಡನೆ ಹೋರಾಟ ನಡೆಸಿದ.

ಪೃಥ್ವಿಸಾಗರನ ಬಳಿಕ ಆಳುಪ ವಂಶದಲ್ಲಿ ರಾಜ್ಯವಾಳಿದವನು ವಿಜಯಾದಿತ್ಯ. ಈತನಿಗೆ ಮಾರಮ್ಮ ಆಳುವರಸರ್, ಉತ್ತಮಪಾಂಡ್ಯ ಎಂಬ ಹೆಸರುಗಳಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ.[೪೭]

ರಾಷ್ಟ್ರಕೂಟರ ಮಾಂಡಲಿಕರಾಗಿದ್ದ ಸಾಂತರರೊಂದಿಗೆ ಆಳುಪರು ವೈವಾಹಿಕ ಸಂಬಂಧ ಬೆಳೆಸಿರುವುದು ಶಾಸನವೊಂದರಿಂದ ತಿಳಿದುಬರುತ್ತದೆ.[೪೮]

ವಿಕ್ರಮಸಾಂತರನ ಮಗ ಚಾಗಿಸಾಂತರನು ಆಳುಪ ರಣಂಜಯನ ಮಗಳಾದ ಎಂಜಲಾದೇವಿ ಯನ್ನು ಮದುವೆಯಾದದ್ದು ಹೊಂಬುಜ ಶಾಸನಗಳಿಂದ ತಿಳಿದುಬರುತ್ತದೆ. ದತ್ತಾಳುಪನನ್ನು ಪದಚ್ಯುತಿಗೊಳಿಸಿ ಕುಂದವರ್ಮನು ಆಳುಪ ಸಿಂಹಾಸನವನ್ನು ತನ್ನದಾಗಿಸಿಕೊಂಡ ಮಹತ್ವದ ಘಟನೆಯನ್ನು ಉಲ್ಲೇಖಿಸುವ ಶಾಸನವನ್ನು ಕದ್ರಿಯ ಮಂಜುನಾಥ ದೇವಸ್ಥಾನದಲ್ಲಿರುವ

ಪೀಠದ ಮೇಲೆ ಬರೆಯಲಾಗಿದೆ.[೨೯] ಇವನ ಕಾಲದಲ್ಲಿ ಚೋಳರು ಅವ್ಯಾಹತವಾಗಿ ಆಳುಪರ ಮೇಲೆ ದಾಳಿ ಮಾಡಿದ್ದಾರೆ.

ಹೀಗೆ ಚೋಳರ ಆಕ್ರಮಣದ ಕತ್ತಲೆಯಲ್ಲಿ ಮುಳುಗಿದ್ದ ತುಳು ರಾಜ್ಯವನ್ನು ಸ್ವಾತಂತ್ರ್ಯದ ಬೆಳಕಿಗೆ ತಂದ ಯಶಸ್ಸು ಆಳುಪ ಅರಸ ಒಂದನೇ ಬಂಡದೇವ ಮತ್ತು ಅವನ ಸಾಮಂತ ಸಾಂತರ ಮನೆತನದ ಅಮ್ಮಣ್ಣದೇವನಿಗೆ ಸಲ್ಲುತ್ತದೆ. ಬಾರಕೂರಿನ ಶಾಸನದಲ್ಲಿ ಬಂಡದೇವ ಚೋಳರನ್ನು ಸೋಲಿಸಿದರ ಬಗ್ಗೆ ಉಲ್ಲೇಖವಿದೆ.[೩೦] ಶೈವ ಧರ್ಮದ ಆಳುಪರಿಗೂ ಜೈನ ಧರ್ಮದ ಸಾಂತರರಿಗೂ ನಿಕಟವಾದ ರಾಜಕೀಯ ಮತ್ತು ಕೌಟುಂಬಿಕ ಸಂಬಂಧಗಳು ನಡೆದವು. ಸಾಂತರ ಮನೆತನದ ಅಮ್ಮಣ್ಣನ ಮಗಳು ಬಿರಲಾದೇವಿಯನ್ನು ಆಳುಪ ಬಂಡದೇವ ಮದುವೆಯಾದನು. ಬಂಡದೇವನು ತನ್ನ ಮಗಳಾದ ಮಂಕಪ್ಪರಸಿಯನ್ನು ಸಾಂತರ ತೈಲಪನಿಗೆ ಮದುವೆ ಮಾಡಿಕೊಟ್ಟನು.

ಒಂದನೇ ಬಂಡದೇವನ ನಂತರ ಆಳುಪ ಸಿಂಹಾಸನದಲ್ಲಿ ೩ ರಾಜರುಗಳು ಆಳ್ವಿಕೆ ನಡೆಸಿದ್ದು ಅವರ ಹೆಸರುಗಳು ವರಂಗದ ಜೈನ ಶಾಸನದಲ್ಲಿದ್ದು, ಇದರಲ್ಲಿ ಆಳುಪರ ವಂಶಾವಳಿಯನ್ನು ಕೊಡಲಾಗಿರುವುದು ವಿಶೇಷವಾಗಿದೆ.[೩೧] ಶಾಸನದಲ್ಲಿ ಉಲ್ಲೇಖವಾಗಿರುವವರು ಪಟ್ಟಿಯೊಡೆಯ, ಪಾಂಡ್ಯಪಟ್ಟಿಯೊಡೆಯ, ಕವಿ ಆಳುಪ ಕುಲಶೇಖರ ಕುಂದಣ ಮುಂತಾದವರು.

ಕವಿ ಆಳುಪೇಂದ್ರನು ಸುದೀರ್ಘ ಕಾಲದ ಆಳ್ವಿಕೆಯಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನ ನೊಂದಿಗೆ ಹೋರಾಡಿ ಪ್ರಬಲಗೊಂಡರೂ ಸ್ವತಂತ್ರ ದೊರೆಯಾಗಿಯೇ ಮುಂದುವರೆದನು. ಈತನ ಪಟ್ಟದ ರಾಣಿ ಪಾಂಡ್ಯ ಮಹಾದೇವಿಯು ಪನ್ನಿಪಳ್ಳಿ ಎಂಬ ಗ್ರಾಮದ ಆಡಳಿತ ಸೂತ್ರವನ್ನು ವಹಿಸಿದ್ದಳೆಂದು ಕ್ರಿ.ಶ. ೧೧೩೩ಕ್ಕೆ ಸೇರಿದ ಒಂದು ಶಾಸನದಲ್ಲಿ ಕಂಡುಬರುತ್ತದೆ.[೩೨] ಇವನ ಆಳ್ವಿಕೆಯಲ್ಲಿ ಆಳುಪರ ರಾಜಧಾನಿಯನ್ನು ಉದ್ಯಾವರದಿಂದ ಬಾರಕೂರಿಗೆ ಬದಲಾಯಿಸಿದ್ದು ವಿಶೇಷ ಸಂಗತಿ.

ಕ್ರಿ.ಶ. ೧೧೬೦ರಲ್ಲಿ ಸಿಂಹಾಸನವನ್ನೇರಿದ ಕುಲಶೇಖರನು ಕಲಚೂರಿ ಮನೆತನದ ಬಿಜ್ಜಳನ ಸೈನ್ಯವನ್ನು ಹಿಮ್ಮೆಟ್ಟಿಸುವುದರಲ್ಲಿ ಸಫಲನಾದನು. ಈತನ ಪಟ್ಟದ ರಾಣಿಯಾದ ಜಾಕಲಮಾದೇವಿಯು ಪರಮ ಜಿನಭಕ್ತೆಯಾಗಿದ್ದು ವರಂಗದಲ್ಲಿ ಕೆರೆಯೊಂದನ್ನು ಕಟ್ಟಿಸಿದಳೆಂದು ಅನೇಕ ಧರ್ಮಕಾರ್ಯ ಗಳನ್ನು ಪ್ರಕಟಿಸಿದಳೆಂದು ಕಾರ್ಕಳದ ವರಂಗ ಶಾಸನದಲ್ಲಿ ಹೇಳಲಾಗಿದೆ.[೩೩] ಕುಲಶೇಖರನ ಆಳ್ವಿಕೆಯ ಕಾಲದಲ್ಲಿ ಮಂಗಳಪುರಹಾಳುಪರ ರಾಜಧಾನಿಯಾಗಿದ್ದು ಅಲ್ಲಿನ ಹಿರಿಯ ಅರಮನೆಗೆ 'ಭುವನಾಶ್ರಯ'ವೆಂಬ ಹೆಸರಿದ್ದಿತು.

ಆಳುಪರ ಕಾಲದಲ್ಲಿ ಕಾರ್ಕಳದ ವರಂಗವು ಪ್ರಸಿದ್ಧ ಜೈನ ಕೇಂದ್ರವಾಗಿದ್ದಿತು. ಆಳುಪೇಂದ್ರನು ಅಧಿಕಾರ ವಹಿಸಿಕೊಂಡು 'ಪಾಂಡ್ಯಚಕ್ರವರ್ತಿ' ರಾಯಗಜಾಂಕುಶ ಎಂಬ ಬಿರುದನ್ನು ಧರಿಸಿದನು. ಇವನ ನಂತರ ವೀರಪಾಂಡ್ಯದೇವ ಆಳುಪೇಂದ್ರದೇವನು ಕ್ರಿ.ಶ. ೧೨೩೦ರಿಂದ ೧೨೭೩ರವರೆಗೆ ಆಳ್ವಿಕೆ ನಡೆಸಿದ್ದು ಅವನ ಶಾಸನಗಳು ಆರ್ಥಿಕ ದೃಷ್ಟಿಯಿಂದ ಶ್ರೇಷ್ಠ ಎನಿಸಿವೆ.[೩೪] ಇವನ

ಆಳ್ವಿಕೆಯ ಆರಂಭದ ವರ್ಷಗಳಲ್ಲಿ ಪುಟ್ಟಮಹಾದೇವಿ ಮತ್ತು ಕೊನೆಯ ವರ್ಷಗಳಲ್ಲಿ ಪತ್ನಿ ಬಲ್ಲಮಹಾದೇವಿ ಆಡಳಿತ ಕ್ಷೇತ್ರದಲ್ಲಿ ಪ್ರಮುಖ ಸ್ಥಾನ ಪಡೆದಿದ್ದರು.ಇವಳು ತನ್ನ ಪತಿ ಮರಣ ಹೊಂದಿದ ಕೂಡಲೇ ಆಳುಪ ರಾಜರಂತೆ 'ಸಮಸ್ತಭುವನ ವಿಖ್ಯಾತ, ಸೋಮ ಕುಲತಿಲಕ, ಮಹಾರಾಜಾಧಿರಾಜ, ಪರಮೇಶ್ವರ' 'ಪರಮ ಭಟ್ಟಾರಕ' ಮುಂತಾದ ಬಿರುದುಗಳನ್ನು ತಾನು ಉಪಯೋಗಿಸತೊಡಗಿದಳು.[೫೫] ಒಟ್ಟಿನಲ್ಲಿ ಕ್ರಿ.ಶ. ೧೨೮೫ರಿಂದ ಕ್ರಿ.ಶ. ೧೩೦೦ರವರೆಗೆ ತುಳುನಾಡಿನಲ್ಲಿ ಎರಡು ಆಳುಪ ಸಿಂಹಾಸನಗಳಿದ್ದವು. ಬಲ್ಲಮಹಾದೇವಿ ಮತ್ತು ಅವಳ ಮಗ ನಾಗದೇವರಸ ರಾಜಧಾನಿ ಬಾರಕೂರನಿಂದಲೂ, ಅಳಿಯ ಬಂಕಿದೇವನು ರಾಜಧಾನಿ ಮಂಗಳಪುರ ದಿಂದಲೂ ರಾಜ್ಯವಾಳುತ್ತಿದ್ದರು.[೫೬] ಅಳಿಯಬಂಕಿದೇವನ ನಂತರ ಸೋಯಿದೇವ ಅಧಿಕಾರಕ್ಕೆ ಬಂದಾಗ ಹೊಯ್ಸಳರ ದಾಳಿ ನಿರಂತರವಾಗಿದ್ದು ಅವರನ್ನು ಸೋಲಿಸಲು ಕಷ್ಟವಾಗಿದ್ದರಿಂದ ಹೊಯ್ಸಳ ದೊರೆ ಮೂರನೇ ಬಲ್ಲಾಳನಿಗೆ ತಮ್ಮ ವಂಶದ ಚಿಕ್ಕಾಯಿ ತಾಯಿಯನ್ನು ಮದುವೆ ಮಾಡಿಕೊಟ್ಟು ಸ್ನೇಹವನ್ನು ಸಂಪಾದಿಸಿದನು.

ಸೋಯಿದೇವ ಆಳುಪೇಂದ್ರನ ನಂತರ ಇಮ್ಮಡಿ ಕುಲಶೇಖರ ಪಟ್ಟಕ್ಕೆ ಬಂದ. ಈತನ ನಂತರ ಆಳುಪರ ಪ್ರಭಾವ ಸಾಕಷ್ಟು ಕ್ಷೀಣಿಸಿತು. ಕ್ರಿ.ಶ. ೧೩೪೨ರಲ್ಲಿ ಮೂರನೆಯ ಬಲ್ಲಾಳ ಮಧುರೆಯ ಸುಲ್ತಾನನೊಂದಿಗೆ ನಡೆದ ಯುದ್ಧದಲ್ಲಿ ಮರಣ ಹೊಂದಲಾಗಿ ಚಿಕ್ಕಾಯಿ ತಾಯಿ ತುಳುನಾಡಿನ ಹೊಯ್ಸಳ ಸಿಂಹಾಸನದ ಒಡೆಯಳಾಗಿ ಕಂಡುಬರುತ್ತಾಳೆ. ಅನಂತರ ಮುಮ್ಮಡಿ ಬಂಕಿದೇವ, ಮುಮ್ಮಡಿ ಕುಲಶೇಖರ, ಇಮ್ಮಡಿ ವೀರಪಾಂಡ್ಯರು ಕ್ರಮವಾಗಿ ಆಳ್ವಿಕೆ ನಡೆಸಿದರು. ಅಂತಿಮವಾಗಿ ಈ ಸಾಮ್ರಾಜ್ಯ ವಿಜಯನಗರದಲ್ಲಿ ಲೀನವಾಯಿತು.

ದಕ್ಷಿಣ ಕನ್ನಡದಲ್ಲಿ ಸುದೀರ್ಘ ವರ್ಷಗಳ ಕಾಲ ರಾಜ್ಯಭಾರ ಮಾಡಿರುವ ಆಳುಪರು ಕೇವಲ ಕರಾವಳಿ ತೀರಪ್ರದೇಶಗಳನ್ನು ತಮ್ಮ ಆಡಳಿತದ ವ್ಯಾಪ್ತಿಗೆ ಒಳಪಡಿಸಿಕೊಳ್ಳುವುದರೊಂದಿಗೆ ಘಟ್ಟದ ಮೇಲ್ಭಾಗದ ಮಲೆನಾಡಿನ ಪ್ರದೇಶಗಳನ್ನು ತಮ್ಮ ಆಡಳಿತ ಕೇಂದ್ರಗಳನ್ನಾಗಿ ಮಾಡಿ ಕೊಂಡಿದ್ದರು. ಆಳುಪರು ಮತ್ತು ಹೊಂಬುಜದ ಸಾಂತರರ ನಡುವೆ ವೈವಾಹಿಕ ಸಂಬಂಧ ಗಳಿಂದಾಗಿ ಎರಡು ಮನೆತನಗಳ ಮಧ್ಯೆ ಕೆಲವೊಮ್ಮೆ ಸೌಹಾರ್ದತೆ ಹಾಗೂ ಇನ್ನೊಮ್ಮೆ ಸಂಘರ್ಷದ ಮೂಲಕ ಸಾಮ್ರಾಜ್ಯವನ್ನು ಅತಿಕ್ರಮಿಸಿಕೊಳ್ಳುವುದರ ಮುಖೇನ ಆಡಳಿತ ಕಾರ್ಯಕ್ಷೇತ್ರವನ್ನು ಮಧ್ಯಮಲೆನಾಡಿನವರೆಗೂ ಚಾಚಿದರು. ಶಾಸನಗಳು ಇವರ ಬಗ್ಗೆ ವಿಪುಲವಾದ ಮಾಹಿತಿಗಳನ್ನು ನೀಡುವ ಮೂಲಕ ಆಳುಪರ ಸಾಂಸ್ಕೃತಿಕ ಜೀವನದ ಮೇಲೆ ಬೆಳಕನ್ನು ಚೆಲ್ಲುತ್ತವೆ. ಆಳುಪರ ರಾಜಕೀಯ ಚರಿತ್ರೆಯನ್ನು ಅವಲೋಕಿಸಿದಾಗ ಪ್ರಾಚೀನ ಆಳುಪರು ಮತ್ತು ಮಧ್ಯಯುಗೀನ ಆಳುಪರು ಎಂಬುದಾಗಿ ವಿಂಗಡಿಸಿದಾಗ ಕದಂಬರ ಕಾಲದಲ್ಲಿನ ಆಳುಪರು, ಚಾಲುಕ್ಯರ ಸಾಮಂತರಾಗಿ ಆಳುಪರು ಮತ್ತು ಸಾಂತರರ ನಡುವಿನ ಸಂಬಂಧವನ್ನು ಶಾಸನಗಳಿಂದ ತಿಳಿಯಬಹುದು.

೨.೧.೫. ಆರಗದ ಮಾಂಡಳಿಕರು

ವಿಜಯನಗರ ಅರಸರ ನಿರೂಪದಂತೆ ಅರಸು ಮನೆಯವರು ಅಥವ ಅವರ ಬಂಧುಗಳು ಆರಗದಲ್ಲಿ ಆಳ್ವಿಕೆ ನಡೆಸಿದರು. ವಿಜಯನಗರ ಅರಸರ ಕಾಲದಲ್ಲಿ ಆರಗವೇಂತೆ ಆರಗವು ರಾಜ್ಯದ ಮುಖ್ಯ ಸ್ಥಳವಾಯಿತು. ಈ ರಾಜ್ಯವು ಮೂರು ಪ್ರಮುಖ ಪಟ್ಟಣಗಳನ್ನು ೧೮ ಕಂಪಣಗಳನ್ನು ಒಳಗೊಂಡಿತೆಂಬ ಸಂಗತಿ ಕುತೂಹಲಕಾರಿಯಾಗಿದೆ. ಶಿವಮೊಗ್ಗ, ಶಿಕಾರಿಪುರ, ನಗರ, ತೀರ್ಥಹಳ್ಳಿ, ಕೊಪ್ಪ, ಸೊರಬ ತಾಲ್ಲೂಕುಗಳ ಕೆಲಭಾಗಗಳನ್ನು ಒಳಗೊಂಡು ಆರಗ ರಾಜ್ಯ ರೂಪಿತವಾಗಿತ್ತು. ವಿಜಯನಗರದ ಅರಸ ಹರಿಹರನ ಪ್ರತಿನಿಧಿಯಾಗಿ ಆರಗದಲ್ಲಿ ವೀರಹರಿಯಪ್ಪ ಒಡೆಯನು ಆಳಿದನು. ೧ನೇ ಬುಕ್ಕರಾಯನ ಪ್ರತಿನಿಧಿಗಳಾಗಿ ವಿರುಪಣ್ಣ ಒಡೆಯರು, ವೇದಗಿರಿ ವಿರೂಪರಾಯರು, ಎರಡನೇ ಹರಿಹರನ ಪ್ರತಿನಿಧಿಗಳಾಗಿ ಚಿಕ್ಕರಾಜ ಒಡೆಯರು, ಮಲ್ಲಪ್ಪ ಒಡೆಯರು, ವೀರಪ್ಪ ಒಡೆಯ, ಜನಪ್ಪ ಒಡೆಯ, ರಾಮಪ್ಪಯ್ಯ, ವಿಠಂಣ ಒಡೆಯರು, ಎರಡನೇ ಬುಕ್ಕರಾಯನ ಬಂಧುಗಳಾಗಿ ಇಮ್ಮಡಿ ವೀರಣ್ಣ ಒಡೆಯ, ಇಮ್ಮಡಿ ದೇವರಾಯನ ಪ್ರತಿನಿಧಿಯಾಗಿ ಸಿರಿಗಿರಿನಾಥ ದೇವನು, ಮಲ್ಲಿಕಾರ್ಜುನನ ಪ್ರತಿನಿಧಿಯಾಗಿ ಸಿರಿಯಮ್ಮವಗ್ಗಡೆ, ಎರಡನೇ ವಿರೂಪಾಕ್ಷನ ಪ್ರತಿನಿಧಿಯಾಗಿ ದೇವಪ್ಪಡಣಾಯಕ, ವೀರನರಸಿಂಹ ಮತ್ತು ಕೃಷ್ಣದೇವರಾಯರ ಪ್ರತಿನಿಧಿಯಾಗಿ ಸದಾಶಿವನಾಯಕ ಆರಗದಲ್ಲಿ ರಾಜ್ಯಭಾರ ಮಾಡಿದರು.

ಆರಗದ ಅರಸರ ಶಾಸನಗಳನ್ನು ವಿಶ್ಲೇಷಿಸಿದಾಗ ಇವರನ್ನು ವಿಜಯನಗರದ ಮಾಂಡಳೀಕರು ಎನ್ನುವುದಕ್ಕಿಂತ ಪ್ರತಿನಿಧಿಗಳು ಅಥವ ಕುಟುಂಬದವರು ಎನ್ನುವುದು ಸೂಕ್ತವೆನಿಸುತ್ತದೆ. ಏಕೆಂದರೆ ಇವರು ತಮ್ಮನ್ನು ಮಾಂಡಲಿಕರು ಎಂದು ಗುರುತಿಸಿಕೊಂಡಿದ್ದರೆ ಮಾಂಡಲೀಕರ ಬಿರುದುಗಳನ್ನು ಹೊಂದಬೇಕಾಗಿತ್ತು ಎನಿಸುತ್ತದೆ.

ಆರಗ ರಾಜ್ಯ:-(ಗುತ್ತಿ ರಾಜ್ಯ/ಅನನ್ಯ ದೇಶ/ಮಲಯ ರಾಜ್ಯ)

ಹಿರಿಯ ಸಾಮ್ರಾಜ್ಯಗಳ ಅಧೀನದಲ್ಲಿ ಸಾಮಂತ ರಾಜ್ಯಗಳು ಆಡಳಿತ ನಡೆಸಿ ತಮ್ಮ ಸಾಮರ್ಥ್ಯವನ್ನು ಸಾಬೀತುಗೊಳಿಸಿದವರಲ್ಲಿ ಆರಗ ರಾಜರು ಪ್ರಮುಖರು. ವಿಜಯನಗರ ಸಾಮ್ರಾಜ್ಯದ ಅಧೀನರಾಗಿದ್ದು ಕ್ರಿ.ಶ. ೧೪ನೇ ಶತಮಾನದಿಂದ ಕ್ರಿ.ಶ. ೧೬ನೇ ಶತಮಾನದವರೆಗೂ ಮಲೆನಾಡಿನ ಭಾಗಗಳಲ್ಲಿ ದಕ್ಷತೆಯಿಂದ ವಿಜಯನಗರದ ಅರಸರ ಬಂಧುಗಳಾಗಿ ಆಳ್ವಿಕೆ ನಡೆಸಿದರು. ಸಾಂತಳಿಗೆ ಸಾವಿರವನ್ನು ಆಳುತ್ತಿದ್ದ ಹೊಯ್ಸಳರು ಆರಗವನ್ನು ಅನನ್ಯದೇಶ ಮತ್ತು ಮಲಯ ರಾಜ್ಯವೆಂದು ಕರೆದರು. ಸಾಂತಳಿಕೆಯು ಕ್ರಿ.ಶ. ೧೩೪೬ರಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಲೀನವಾಯಿತು. ಕ್ರಿ.ಶ. ೧೪ನೇ ಶತಮಾನದಲ್ಲಿ ಆರಗ ರಾಜ್ಯ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದಿತು. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಆರಗ ಪ್ರದೇಶವು ಹೊಂಬುಜದ ಸಾಂತರಸರ ಅಧೀನದಲ್ಲಿತ್ತು. ಹೊಯ್ಸಳರ ಕಾಲದಲ್ಲಿ ಪ್ರಸಿದ್ಧ ಅಗ್ರಹಾರವಾಗಿದ್ದ ಉಲ್ಲೇಖಗಳು ಶಾಸನೋಕ್ತವಾಗಿವೆ.

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೦ ಕಿ.ಮೀ. ದೂರದಲ್ಲಿನ ಐತಿಹಾಸಿಕ ಗ್ರಾಮ ಆರಗ. ಮಲೆನಾಡಿನ ಪ್ರಕೃತಿ ಸಿರಿಯ ಮಧ್ಯೆ ಕಂಗೊಳಿಸುತ್ತಿರುವ ಆರಗ ಪ್ರಾಚೀನದಲ್ಲಿ ವೈಭವದಿಂದ ಕೂಡಿತ್ತು. ಈ ಗ್ರಾಮದ ಬಳಿಯಲ್ಲಿ ಕುಶಾವತಿ ಮತ್ತು ಗೋಪಿನಾಥ ಎಂಬ ಎರಡು ಪುಟ್ಟ ನದಿಗಳು ಹರಿಯುತ್ತವೆ. ಆರಗವು ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿ ಕಂಪಣ ಎಂಬ ಒಂದು ಪ್ರತ್ಯೇಕ ಘಟಕವಾಗಿ ಒಂದು ರಾಜ್ಯದ ಸ್ಥಾನಮಾನವನ್ನು ಪಡೆದಿತ್ತು.

ಚಟ್ಟಕೊಡಗಿಯ ಶಾಸನವು ಇಲ್ಲಿ ದೊರೆತಿರುವ ಅತೀ ಪ್ರಾಚೀನ ಶಾಸನವಾಗಿದ್ದು ಶಿರಪತಿಯ ನರಸಿಂಹ ದೇವರಿಗೆ ನೈವೇದ್ಯಾದಿ ಸೇವೆಗೆ ಶಾಸನವು ಶ್ರೀ ವೀರಹರಿಯಪ್ಪ ಒಡೆಯರ ವಿಜಯರಾಜ್ಯೋದಯವನ್ನು ಮತ್ತು ಭೂದಾನವನ್ನು ಉಲ್ಲೇಖಿಸುತ್ತದೆ. ಇವನು ಕ್ರಿ.ಶ. ೧೩೪೭ರಲ್ಲಿ ಆರಗದಿಂದ ಸಾಂತಳಿಗೆ ಸಾವಿರವನ್ನು ಸಹ ಆಳುತ್ತಿದ್ದನು. ಇದೇ ವರ್ಷ ಸಾಂತಳಿಗೆ ವಿಜಯನಗರ ಸಾಮ್ರಾಜ್ಯದಲ್ಲಿ ಲೀನವಾಯಿತು.

ಆರಗ ರಾಜ್ಯವನ್ನಾಳಿದ ವಿಜಯನಗರ ವಂಶಸ್ಥರು: ಕ್ರಿ.ಶ. ೧೩೪೬ರ ಶೃಂಗೇರಿ ಶಾಸನದಂತೆ ಮೊದಲನೇ ಹರಿಹರನು ಶೃಂಗೇರಿ ಪೀಠಾಧಿಪತಿಗಳಾದ ಭಾರತೀ ತೀರ್ಥರಿಗೆ ಸಾಂತಳಿಗೆ ನಾಡಿನ ಕೆಳಭಾಗದ ಕೈಮಲೆ ಹೊಸುರು ಎಂಬ ಗ್ರಾಮವನ್ನು ದಾನವಾಗಿ ನೀಡಿದ್ದಾನೆ.

ನಂತರ ಶೃಂಗೇರಿ ಪ್ರಾಂತ್ಯವನ್ನು ಆರಗ ಒಡೆಯರು ವಿಜಯನಗರದ ಸಾಮಂತರಾಗಿ ಆಳ್ವಿಕೆ ನಡೆಸಿದ್ದನ್ನು ಶಾಸನಗಳು ದಾಖಲಿಸುತ್ತವೆ. ಶೃಂಗೇರಿಯ ೧ನೇ ಶಾಸನವು ವಿಜಯನಗರದ ಏಳು ಜನ ರಾಜಕುಮಾರರನ್ನು ಒಟ್ಟಿಗೆ ಹೆಸರಿಸುತ್ತದೆ. ಅವರುಗಳೆಂದರೆ ಹರಿಹರ, ಅವನ ತಮ್ಮಂದಿರಾದ ಬುಕ್ಕ, ಕಂಪಣ, ಮಾರಪ್ಪ, ಮುದ್ದಪ್ಪ, ಅಳಿಯ ಬಲಪ್ಪ ಮತ್ತು ಕಂಪಣನ ಮಗ ಸೋವಣ. ಈ ಎಲ್ಲರೂ ಸೇರಿ ಶೃಂಗೇರಿಯ ಸ್ವಾಮಿಗಳಾದ ಭಾರತೀ ತೀರ್ಥಶ್ರೀಪಾದರು ಮತ್ತೆ ಅವರ ಶಿಷ್ಯರು ಮತ್ತು ನಲವತ್ತು ಮಂತ್ರಿ ಬ್ರಾಹ್ಮಣರಿಗೆ ಒಂಭತ್ತು ಗ್ರಾಮಗಳನ್ನು ದಾನವಾಗಿ ಕೊಟ್ಟರು. ಇದರಲ್ಲಿ ಸಾಂತಳಿಗೆ ನಾಡಿನ ರೈತರಿಗಾಗಿ ೧೫೦ ಗದಾಣ್ಯಗಳನ್ನು ಕಳೆಯಲಾಯಿತು ಎಂದಿದೆ.[೫೭]

ವಿಜಯನಗರದ ಸಂಸ್ಥಾಪಕನಾದ ಬುಕ್ಕರಾಯನು ಸಿಂಹಾಸನವನ್ನು ಏರಿದ ಕೂಡಲೇ ಸ್ವತಃ ಶೃಂಗೇರಿಗೆ ಪ್ರಯಾಣ ಬೆಳೆಸಿ ಗುರುಗಳಾದ ವಿದ್ಯಾತೀರ್ಥರಿಂದ ಆಶೀರ್ವಾದ ಪಡೆದುದಲ್ಲದೇ ಕೆಲವು ದತ್ತಿಗಳನ್ನು ಕೊಟ್ಟಿರುವುದನ್ನು ಶೃಂಗೇರಿಯ ಶಾಸನಗಳು ಪ್ರಚುರಪಡಿಸುತ್ತವೆ. ಅವನು ಶೃಂಗೇರಿ ಮಠದ ಬಗ್ಗೆ ಹೊಂದಿದ್ದ ಗೌರವವನ್ನು ಇದು ತೋರಿಸುತ್ತದೆ.

ಕ್ರಿ.ಶ. ೧೩೬೦ರಲ್ಲಿ ಬುಕ್ಕರಾಯನ ಹಿರಿಯ ಮಗ ತಿಪ್ಪಣನು ಆರಗ ಮತ್ತು ಮಂಗಳೂರು ಪ್ರಾಂತ್ಯದಲ್ಲಿ ರಾಜ್ಯವನ್ನು ವಿಸ್ತರಿಸುತ್ತಿದ್ದನೆಂದು ಬೆಳಗುತ್ತಿಯ ಕೈಫಿಯತ್ತಿನಲ್ಲಿದೆ.[೫೮] ಇವನೂ ಸಹ ವಿಜಯನಗರದ ರಾಜವಂಶದ ಬಂಧುವಾಗಿದ್ದನು. ಇದೇ ವೀರಹರಿಯಪ್ಪ ಒಡೆಯನ ಕಾಲದಲ್ಲಿ

(ಕ್ರಿ.ಶ. ೧೩೬೩) ಬುಕ್ಕರಾಯನ ಕುಮಾರ ವಿರೂಪಾಕ್ಷನು ಆರಗದ ಮದುವಂಕ ನಾಡಿನ ವಿರೂಪಾಕ್ಷಪುರದಲ್ಲಿ ಬ್ರಾಹ್ಮಣರಿಗೆ ಭೂದಾನವನ್ನು ನೀಡಿದ್ದಾನೆ.[೫೯] ಇವನು ತನ್ನ ಹೆಸರಿನಲ್ಲಿ ಆರಗದಲ್ಲಿ ವಿರೂಪ ಸಮುದ್ರ ಎಂಬ ಕೆರೆಯನ್ನು ಕಟ್ಟಿಸಿದ್ದಾನೆ.

ವಿರುಪಂಣ ಒಡೆಯ:– ಒಂದನೇ ಬುಕ್ಕರಾಯನ ಸಮಕಾಲೀನ

ಇವನು ಬುಕ್ಕರಾಯನ ಪುತ್ರ. ಇವನು ಕ್ರಿ.ಶ. ೧೩೬೮ರಲ್ಲಿ ಆರಗವನ್ನು ಆಳುತ್ತಿದ್ದಾಗ ಕವಲೇದುರ್ಗದ ಮೈಲಾರ ದೇವರ ಅಮೃತಪಡಿಗೆ ಮತ್ತು ಇಲ್ಲಿನ ವಿರಕ್ತಮಠಕ್ಕೆ ಭೂದಾನ ನೀಡಿದ್ದಾನೆ. ಇವನ ಕಾಲದಲ್ಲಿ ಹೆದ್ದೂರು ನಾಡಿನ ಕಣಿವೆ ಗ್ರಾಮದ ಪಾರ್ಶ್ವನಾಥ ಬಸದಿಗೆ ಭೂದಾನ ನೀಡಿದ್ದು ಈ ಗ್ರಾಮದಲ್ಲಿರುವ ಶಾಸನದಲ್ಲಿ ಉಲ್ಲೇಖವಾಗಿದೆ.[೬೦]

ಮುನಿಯೂರಿನ ಪ್ರಸನ್ನ ವಿಶ್ವೇಶ್ವರ ದೇವರ ಸೇವೆಗೆ ನೀಡಿದ ದಾನವನ್ನು ಬಂಡಿಗಡಿ ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ.[೬೧]

ವೇದಗಿರಿ ವಿರುಪರಾಯ:– ಬುಕ್ಕರಾಯನ ಸಮಕಾಲೀನ

ಇವನು ಬುಕ್ಕರಾಯನ ಪುತ್ರ. ಇವನ ಮಗ ವಿರುಪಾಯರ. ಇವನ ಪತ್ನಿ ಮುಂಜಾದೇವಿ. ಇವರಿಬ್ಬರೂ ಆರಗದ ವೀರಭದ್ರ ದೇವರಿಗೆ ವೈಭವದ ಉತ್ಸವ ನಡೆಸಿದರು. ಕೊನೆಗೆ ವೇದಗಿರಿ ವಿರೂಪಣ್ಣ ಒಡೆಯರ ಕೂಡಿ ಮುಂಜಾದೇವಿಯು ಸ್ವರ್ಗವನ್ನು ಸೂರೆಗೊಂಡಳೆಂದು ಶಾಸನವೊಂದರಲ್ಲಿ ಉಲ್ಲೇಖಿಸಿದೆ.[೬೨] ಇದು ಮುಂಜಾದೇವಿಯ ಸತಿಸಹಗಮನವನ್ನು ವಿವರಿಸುತ್ತದೆ.

ಚಿಕ್ಕರಾಜ ಒಡೆಯ ಎರಡನೇ ಹರಿಹರನ ಸಮಕಾಲೀನ

ಆರಗದ ಅರಸರು ವಿಜಯನಗರ ಸಾಮ್ರಾಜ್ಯದ ಸಾಮಂತರೂ ಆಗಿದ್ದರು ಎಂಬುದಕ್ಕೆ ಈಸಾಪುರ ಶಾಸನದಲ್ಲಿ ಚಿಕ್ಕರಾಜ ಒಡೆಯನನ್ನು 'ಶ್ರೀಮನ್ ಮಹಾಮಾಂಡಳೇಶ್ವರ' ಎಂದು ಕರೆದಿದೆ. ಇವನು ಚಂದ್ರಗುತ್ತಿ ರಾಜ್ಯ ಆಳುತ್ತಿದ್ದನು. ಇವನಿಗೆ 'ಅರಿರಾಯಭಯಂಕರ' ಮತ್ತು 'ಮಾದರರಾಯರ ಗಂಡ' 'ತುರುಕುದಳವಿಬಾಡ' ವೈರಿರಾಯ ಮಸ್ತಕಶೂಲ ಎಂಬ ಪ್ರಶಸ್ತಿಗಳನ್ನು ಪಡೆದಿದ್ದನು. ಇವನ ಶಾಸನಗಳಲ್ಲಿ ದಾನದ ವಿವರಣೆ ಇದೆ. ಬಂಡಿಗಡಿಯ ಶಾಸನದಲ್ಲಿ ಚಿಕ್ಕರಾಯನು ಆರಗವನ್ನು ಆಳುತ್ತಿದ್ದು ಸಾಂತರಿಗೆ ನಾಡಿನ ಮೇಲುಬಾಗಿಯ ಮುನಿಯೂರಿನ ದೇವರಿಗೆ ಭೂದಾನ ಮಾಡಿದ ಪ್ರಸ್ತಾಪವಿದೆ.[೬೩] ಕುಂದ್ಕೆರೆ ಶಾಸನವು ನಾಗಬಾನಿ ಹಳ್ಳಿಗೆ ಭೂ ದಾನವನ್ನು ನೀಡಿದ್ದನ್ನು ಬಗ್ಗೆ ಹಾಗೂ ಶೃಂಗೇರಿ ಮಠದ ವಿದ್ಯಾರಣ್ಯ ಶ್ರೀಪಾದರನ್ನು ಉಲ್ಲೇಖಿಸುತ್ತದೆ.[೬೪]

ಮಲ್ಲಪ್ಪ ಒಡೆಯ:– ಎರಡನೇ ಹರಿಹರನ ಸಮಕಾಲೀನ

ಇವನು ಕ್ರಿ.ಶ. ೧೪೫೦ರಲ್ಲಿ ಆರಗ ಆಳುತ್ತಿದ್ದಾಗ ಮೈಲಾರಲಿಂಗೇಶ್ವರ ದೇವಾಲಯಕ್ಕೆ ಭೂದಾನ ನೀಡಿದ್ದನ್ನು ಶಿಕಾರಿಪುರದ ಗೊಡ್ಡನಕೊಪ್ಪ ೩೧೩ರ ಶಾಸನದಲ್ಲಿ ಉಲ್ಲೇಖಿಲಾಗಿದೆ.[೬೫]

ಹರಿಹರಪುರ ಶಾಸನದಲ್ಲಿ 'ಎರಡನೇ ಹರಿಹರನು' ಸಕಲ ವರ್ಣಾಶ್ರಮಂಗಳನ್ನು ಧರ್ಮದಿಂದ ಪಾಲಿಸುತ್ತಿದ್ದ' ಎಂಬ ವಿಷಯವನ್ನು ತಿಳಿಸುತ್ತದೆ. ದೊರೆಯು ಪ್ರತಾಪ ಹರಿಹರಪುರವನ್ನು ಮಾಧವ ರಾಮಚಂದ್ರ ಸರಸ್ವತಿ ಒಡೆಯರಿಗೆ ದಾನ ನೀಡಿದ ಎಂದಿದೆ.[೬೬]

ಶೃಂಗೇರಿಯ ವಿದ್ಯಾರಣ್ಯ ಶ್ರೀಪಾದರು ತಮ್ಮ ಶಿಷ್ಯರಾದ ಸೂರಪ್ಪ ಮತ್ತು ಕೃಷ್ಣದೇವ ಎಂಬ ಬ್ರಾಹ್ಮಣರಿಗೆ ದಾನಗಳನ್ನು ಕೊಟ್ಟಿದ್ದನ್ನು ಶೃಂಗೇರಿ ಶಾಸನ ತಿಳಿಸುತ್ತದೆ.[೬೭]

ವೀರಪ್ಪ ಒಡೆಯ:–ಎರಡನೇ ಹರಿಹರನ ಸಮಕಾಲೀನ ಅರಸ

ಕುರುವಳ್ಳಿಯ ಶಾಸನದಲ್ಲಿ ಇವನು ಬುಕ್ಕರಾಯ ಪುರದಮಹಾಜನಂಗಳಿಗೆ ಭೂದಾನ ನೀಡಿ ಶಿಲಾಪ್ರತಿಷ್ಠೆ ಮಾಡಿಸಿದನೆಂಬ ಉಲ್ಲೇಖವಿದೆ.[೬೮] ಇವನು ಆಳುತ್ತಿದ್ದಾಗ ಕ್ರಿ.ಶ. ೧೩೯೦ರಲ್ಲಿ ಮರಣ ಹೊಂದಿದ ಇಮ್ಮಡಿ ಹರಿಹರನಿಗೆ ಮುಕ್ತಿ ಸಿಗಲೆಂದು ಮುಕ್ತಿಹರಿಹರಪುರ ಎಂಬ ಅಗ್ರಹಾರವನ್ನು ಸ್ಥಾಪಿಸಿ ಬ್ರಾಹ್ಮಣರಿಗೆ ಸ್ಥಳವೃತ್ತಿಯನ್ನು ಕಲ್ಪಿಸಿದನು.

ಎರಡನೇ ಹರಿಹರನು ಆಗತಾನೆ ಮುಕ್ತಿಹೊಂದಿದ ಶೃಂಗೇರಿ ಮಠದ ವಿದ್ಯಾರಣ್ಯ ಶ್ರೀಪಾದರ ಜ್ಞಾಪಕಾರ್ಥವಾಗಿ ಮುಕ್ತಿಸಿಗಲೆಂದು ವಿದ್ಯಾರಣ್ಯಪುರವೆಂಬ ಅಗ್ರಹಾರವನ್ನು ಸ್ಥಾಪಿಸಿದನೆಂದು ಶೃಂಗೇರಿ ಶಾಸನದಲ್ಲಿ ಮಾಹಿತಿ ಇದೆ.[೬೯]

ಬೊಮ್ಮಲಾಪುರ ಶಾಸನಗಳು ವಿಜಯನಗರ ಅರಸ ಇಮ್ಮಡಿ ಹರಿಹರನ ಶಾಸನಗಳಾಗಿದ್ದು ಆರು ಗ್ರಾಮಗಳನ್ನು ಆರಗದ ವಿಠಣ್ಣ ಒಡೆಯನಿಗೆ ದಾನ ನೀಡಿದ ವಿಷಯವನ್ನು ಮತ್ತು ಅದೇ ವ್ಯಕ್ತಿಗೆ ಕ್ರಯದಾನವ ಮಾಡಿದ ವಿಷಯವನ್ನು ದಾಖಲಿಸುತ್ತವೆ.[೭೦]

ಜನ್ನಪ್ಪ ಒಡೆಯ:– ಎರಡನೇ ಹರಿಹರನ ಸಮಕಾಲೀನ ಅರಸ

ಇವನು ಕ್ರಿ.ಶ. ೧೪೦೦ರಲ್ಲಿ ಆರಗವನ್ನು ಆಳುತ್ತಿದ್ದಾಗ ಬಿಕ್ಕವಳ್ಳಿಯ ದೇವಾಲಯಕ್ಕೆ ದಾನ ನೀಡಿದರ ಬಗ್ಗೆ ಬಿಕ್ಕವಳ್ಳಿ ಶಾಸನದಲ್ಲಿ ಉಲ್ಲೇಖವಿದೆ.[೭೧]

ವಿಠಂಣ: ಎರಡನೇ ಹರಿಹರನ ಸಮಕಾಲೀನ ಅರಸ

ಇವನನ್ನು ಅನೇಕ ಶಾಸನಗಳು ರಾಮಪ್ಪ ಒಡೆಯರ ಬೊಮ್ಮಂಣಗಳ ಮಕ್ಕಳು ವಿಠಂಣಗಳು ಎಂದು ಕರೆದಿವೆ.

ಕ್ರಿ.ಶ. ೧೪೦೩ರಲ್ಲಿ ಇವನು ಆರಗವನ್ನು ಆಳುತ್ತಿದ್ದಾಗ ಆರಗದ ಕಲಿನಾಥ ದೇವರಿಗೆ ಭೂದಾನ ನೀಡಿದ್ದಾನೆ. ಆರಗದ ಶಾಸನದಲ್ಲಿ ಹನ್ನೆರಡು ಹೊಂನಗುತ್ತಿಗೆ ಸಲುವ ಭೂಮಿ ಎಂದು ಹೇಳಿದೆ.[೭೨] ಅಲ್ಲಿನ ಇನ್ನೊಂದು ಶಾಸನದಲ್ಲಿ ಇವನು ಆರಗದ ಹಿರಿಯಂಗಡಿ ಬನದೇವಿ ದೇವಾಲಯಕ್ಕೆ ಭೂದಾನ ನೀಡಿದ ಉಲ್ಲೇಖವಿದೆ.[೭೩]

ಶೃಂಗೇರಿಯ ಶಾಸನದಲ್ಲಿ ಇಮ್ಮಡಿ ಹರಿಹರನು ಆರಗ ರಾಜ್ಯದ ಕಾರ್ಕಳ ಸೀಮೆಯಲ್ಲಿದ್ದ ಬಾನುವಳ್ಳಿ ಎಂಬ ಗ್ರಾಮವನ್ನು ಮಾಧವೇಂದ್ರ ಎಂಬ ಬ್ರಾಹ್ಮಣನಿಗೆ ತುಂಗಾಭದ್ರ ತೀರದಲ್ಲಿ ವಿರೂಪಾಕ್ಷನ ಸಮ್ಮುಖದಲ್ಲಿ ದಾನವನ್ನು ಕೊಟ್ಟನು. ಈ ಗ್ರಾಮವನ್ನು ಅನೇಕ ವೃತ್ತಿಗಳಾಗಿ ವಿಂಗಡಿಸಿ, ಅವುಗಳನ್ನು ಅನೇಕ ಬ್ರಾಹ್ಮಣರಿಗೆ ಹಂಚಲಾಯಿತು ಎಂಬ ಉಲ್ಲೇಖವಿದೆ.[೭೪]

ಇಮ್ಮಡಿ ವೀರಣ್ಣ ಒಡೆಯ:–ಎರಡನೇ ಬುಕ್ಕರಾಯ ಮತ್ತು ಒಂದನೇ ದೇವರಾಯನ ಸಮಕಾಲೀನ ಅರಸ

ಇವನ ಎಲ್ಲಾ ಶಾಸನಗಳು ದಾನಶಾಸನಗಳಾಗಿದ್ದು ರಾಜಕೀಯ ಅಂಶಗಳನ್ನು ನಿರ್ಲಕ್ಷಿಸಲಾಗಿದೆ. ಹಾಲ್ಮೂತ್ತೂರಿನ ತಾಮ್ರ ಶಾಸನವು ಎರಡನೇ ಬುಕ್ಕರಾಯನ ಆಳ್ವಿಕೆಗೆ

ಸೇರಿದ್ದು ಕೆಲವು ಬ್ರಾಹ್ಮಣರಿಗೆ ಈ ಗ್ರಾಮವನ್ನು ದಾನವಿತ್ತ ಅಂಶಗಳನ್ನು ಹಾಗೂ ವಿಜಯನಗರ ದೊರೆಗಳ ವಂಶಾವಳಿಯನ್ನು ನೀಡುತ್ತದೆ.[೭೫]

ಆರಗದ ಶಾಸನವೊಂದರಲ್ಲಿ ಎರಡನೇ ಬುಕ್ಕರಾಯ ವಿಜಯನಗರ ಸಾಮ್ರಾಜ್ಯ ಆಳುತ್ತಿದ್ದಾಗ 'ಸಂಕಪ್ಪರಾಯಪ್ಪಾನ್ವಯ ಬ್ರಹ್ಮರಾಜಕುಮಾರ ವೀರಪ್ಪ ಒಡೆಯರು ಆರಗದಲ್ಲಿ ರಾಜ್ಯವಾಳುತಿಹ ಮದುವಂಕನಾಡ ಸಮಸ್ತಗವುಡ ಪ್ರಭುಗಳು' ಸೇರಿ ಕಲಾನಾಥೇಶ್ವರ ದೇವರಿಗೆ ಭೂದಾನ ನೀಡಿದ್ದಾರೆ ಎಂದು ಉಲ್ಲೇಖಿಸುತ್ತದೆ.[೭೬]

ಬಾನುವಳ್ಳಿ ಶಾಸನದಲ್ಲಿ ಒಂದನೇ ದೇವರಾಯನ ಆದೇಶದ ಮೇರೆಗೆ ಆರಗ ಮತ್ತಿತರ ಪ್ರದೇಶಗಳನ್ನು ವಿಠಣ ಒಡೆಯ ಪಾಲಿಸುತ್ತಿದ್ದ. ವಿದ್ಯಾಶಂಕರ ದೇವರ ಸೇವೆಗೆ ಭಾನುಪುರ ಗ್ರಾಮವನ್ನು ನೀಡಲಾಯಿತು ಎಂದು ದಾಖಲಿಸುತ್ತದೆ.[೭೭]

ಹರಿಹರಮನೆ ಶಾಸನವು ದೇವರಾಯನ ಅಪ್ಪಣೆಯ ಮೇರೆಗೆ ವಿಠಣೊಡೆಯ ವಿದ್ಯಾನಾಥ ದೇವರಿಗೆ ದಾನ ನೀಡಿದ ಎಂದಿದೆ.[೭೮]

ಹರಿಹರಪುರದ ರಾಮಚಂದ್ರ ಸರಸ್ವತಿ ಒಡೆಯರಿಗೆ ಗ್ರಾಮದಾನ ಮಾಡಿದ ಉಲ್ಲೇಖವನ್ನು ಸೆಟ್ಲಗೋಡಿಗೆ ಶಾಸನ ತಿಳಿಸುತ್ತದೆ.[೭೯]

ಸಿರಿಗಿರಿನಾಥದೇವ: ಇಮ್ಮಡಿ ದೇವರಾಯನ ಸಮಕಾಲೀನ

ಆರಗದ ಒಂದು ಶಾಸನದಲ್ಲಿ ತಮ್ಮಣ್ಣ ಒಡೆಯರ ಮಗ ಸಿರಿಗಿರಿನಾಥ ಒಡೆಯರು ಛತ್ರ ಕಟ್ಟಿಸಿ ಭೂದಾನ ನೀಡಿದರೆಂದು ಉಲ್ಲೇಖವಿದೆ. ಶೃಂಗೇರಿಯ ಶಾಸನವೊಂದರಲ್ಲಿ ಇಮ್ಮಡಿ ದೇವರಾಯನ ತೇದಿಯನ್ನು ಹೊಂದಿದ್ದು ಶೃಂಗೇರಿ ಪೀಠಾಧಿಪತಿಗಳಾದ ಪುರುಷೋತ್ತಮಾರಣ್ಯರಿಗೆ ದಾನವನ್ನು ಹಾಗೂ ಗೋವಾ ರಾಜ್ಯದ ಕೆಳಗುಂದುಣಿ ಮತ್ತು ಕೈಗ್ಯೆ ಎಂಬ ಎರಡು ಗ್ರಾಮವನ್ನು ದಾನವನ್ನು ಕೊಟ್ಟ ಸಂಗತಿಯನ್ನು ನಿರೂಪಿಸುತ್ತದೆ.[೮೦]

ತಾಮ್ರಶಾಸನವು ಇಮ್ಮಡಿ ದೇವರಾಯನು ಶೃಂಗೇರಿ ಮಠಕ್ಕೆ ದಾನ ಕೊಟ್ಟ ಮಾಹಿತಿಯನ್ನು ನೀಡುತ್ತದೆ. ಶೃಂಗೇರಿ ಮಠದ ಪೀಠಾಧಿಪತಿಗಳಾದ ಪುರುಷೋತ್ತಮಾರಣ್ಯರಿಗೆ ಕೊಟ್ಟ ದಾನವನ್ನು ದಾಖಲಿಸುತ್ತದೆ.[೮೧]

ಆರಗದ ಶಾಸನದಲ್ಲಿ ಇವನು ಆರಗದ ಅಖಂಡೇಶ್ವರ ದೇವಾಲಯಕ್ಕೆ ಭೂದಾನ ನೀಡಿದ ಮಾಹಿತಿ ಇದೆ.[೮೨]

ಬಂಡಿಗಡಿ ಶಾಸನದಲ್ಲಿ ಸಿರಿಗಿರಿನಾಥವೊಡೆಯ ಆರಗ ರಾಜ್ಯವನ್ನು ಆಳುತ್ತಿದ್ದುದನ್ನು ಈ ಶಾಸನ ದಾಖಲಿಸುತ್ತದೆ.[೮೩]

ಇಲ್ಲಿನ ಇನ್ನೊಂದು ಶಾಸನವು ಮಲ್ಲಿಕಾರ್ಜುನನ ಆಳ್ವಿಕೆಗೆ ಸಂಬಂಧಿಸಿದ್ದು ಆರಗ ರಾಜ್ಯವನ್ನು ಸಿರಿಗಿರಿನಾಥ ಪಾಲಿಸುತ್ತಿದ್ದ ಎಂದಿದೆ.[೮೪]

ದೇವಪ್ಪದಣಾಯಕ ಒಡೆಯ:–ಎರಡನೇ ವಿರೂಪಾಕ್ಷನ ಸಮಕಾಲೀನ ಅರಸ.

ಹೆಸರೇ ಸೂಚಿಸುವಂತೆ ಇವನು ಬಹುಶಃ ಸೇನೆಯ ದಂಡನಾಯಕನಾಗಿದ್ದಿರಬಹುದು. ಬಹುಶಃ ಸೈನ್ಯಾಧಿಪತಿಯಾಗಿದ್ದ ಇವನು ಕ್ರಿ.ಶ. ೧೪೬೮ರಲ್ಲಿ ಆರಗದಲ್ಲಿ ಆಳುತ್ತಿದ್ದನೆಂದು ಇವನು ನಾಬಳದ ದೇವಾಲಯಕ್ಕೆ ನೀಡಿದ ದಾನವನ್ನು ನಾಬಳ ಶಾಸನದಿಂದ ತಿಳಿಯಬಹುದಾಗಿದೆ.[೮೫] ಮುಂದೆ ಕ್ರಿ.ಶ. ೧೫೦೯ರವರೆಗೆ ಆಡಳಿತದ ವಿವರ ದೊರೆತಿಲ್ಲ. ನಂತರ ಆರಗದ ೧೮ ಕಂಪಣವು ಕೆಳದಿ ಸಂಸ್ಥಾನಕ್ಕೆ ಸೇರಿಕೊಂಡಿತು. ಇಲ್ಲಿಗೆ ಆರಗದ ರಾಜಕೀಯ ಇತಿಹಾಸದ ಮೊದಲ ಘಟ್ಟಕ್ಕೆ ತೆರೆಬಿದ್ದಿತು.

ಸದಾಶಿವ ನಾಯಕ: ಕ್ರಿ.ಶ. ೧೫೧೪–ಕ್ರಿ.ಶ. ೧೫೩೭ ವೀರನರಸಿಂಹ ಮತ್ತು ಕೃಷ್ಣದೇವರಾಯನ ಸಮಕಾಲೀನ ಅರಸ.

ಇವನಿಂದ ಆರಗದ ರಾಜಕೀಯ ಚಟುವಟಿಕೆಯ ಎರಡನೆಯ ಘಟ್ಟ ಆರಂಭವಾಗುತ್ತದೆ. ವಿಜಯನಗರದ ದೊರೆ ಕೃಷ್ಣದೇವರಾಯನು ಆರಗದ ಮಾಗಣೆಯ ಆಡಳಿತವನ್ನು ಕೆಳದಿ ಸದಾಶಿವ ನಾಯಕನಿಗೆ ವಹಿಸಿದನು. ವಿಜಯನಗರದ ಸಾಮಂತನಾಗಿದ್ದ ಈ ಅರಸನು ಇಕ್ಕೇರಿಯಿಂದ ಆರಗದ ಆಡಳಿತವನ್ನು ನಿರ್ವಹಿಸಿದನು. ಇವನು ಆರಗದ ಸದಾಶಿವಪುರ ಅಗ್ರಹಾರದಲ್ಲಿ ವೈದಿಕರ ಪುನರ್ವಸತಿಗೆ ಆದ್ಯತೆ ನೀಡಿದನು.[೮೬] ಹೀಗೆ ಆರಗ ಕೆಳದಿ ಅರಸರ ನೇರ ಆಡಳಿತಕ್ಕೆ ಒಳಪಟ್ಟಿತ್ತು.

ತಾಳಕೋಡು ಶಾಸನವು ಕೃಷ್ಣದೇವರಾಯನ ಕಾಲಕ್ಕೆ ಸೇರಿದ್ದು, ಹೆದ್ನೆಯ ಚನ್ನರಸ ಹೆಗ್ಗಡೆ ಮತ್ತು ಬೊಮ್ಮನ ಹೆಗ್ಗಡೆಯವರು ನೀಡಿದ ದಾನದ ವಿವರಣೆ ಒಳಗೊಂಡಿದೆ.[೮೭]

ಸೇಸಪ್ಪ:–ಅಳಿಯ ರಾಯರಾಯನ ಸಮಕಾಲೀನ ಅರಸ

ಇವನು ವಿಜಯನಗರ ಅರಸರ ಕೊನೆಯ ಸಾಮಂತ ಪ್ರಭುವಾಗಿ ಆರಗದಲ್ಲಿ ರಾಜ್ಯಭಾರ ಮಾಡಿದನು. ಶಾಸನದಲ್ಲಿ ಇವನು ವಿಜಯನಗರದ ರಾಜಪ್ರತಿನಿಧಿಯಾಗಿ ಆರಗವನ್ನು ಆಳುತ್ತಿದ್ದನೆಂದು ಶಾಸನ ತಿಳಿಸುತ್ತದೆ.[೮೮]

ಮೇಳಿಗೆ ಶಾಸನದಲ್ಲಿ ಮೇಳಿಗೆಯಲ್ಲಿ ಬೊಮ್ಮಿಸೆಟ್ಟಿಯು ಅನಂತತೀರ್ಥಂಕರ ಬಸದಿಯನ್ನು ಕಟ್ಟಿಸಿದನು. ಅವನ ಮೊಮ್ಮಗ ಬೊಮ್ಮಣ್ಣಸೆಟ್ಟಿ ಮತ್ತು ಅಲ್ಲಿನ ಇತರರು ಅದನ್ನು ಕಲ್ಲಿನಲ್ಲಿ ಕಟ್ಟಿಸಿಕೊಟ್ಟರು ಎಂದಿದೆ.[೮೯] ಇದೇ ಸಮಯದಲ್ಲಿ ವೆಂಕಟಪತಿಯು ಪೆನುಗೊಂಡೆಯಿಂದ ರಾಜ್ಯವಾಳುತ್ತಿದ್ದನು.

ಶೃಂಗೇರಿಯ ತಾಮ್ರಪಟ ಶಾಸನವು ತೆಲುಗು ಭಾಷೆಯಲ್ಲಿದ್ದು ಶಾಸನದ ಪ್ರಾರಂಭ ಹಾಗೂ ಅಂತ್ಯದಲ್ಲಿ ಶ್ರೀರಾಮ ಎಂದು ಬರೆದಿದೆ. ವಿಜಯನಗರ ಅರಸರು ತಾಳಿಕೋಟೆ ಯುದ್ಧದ ನಂತರ ತಮ್ಮ ರಾಜಧಾನಿಯನ್ನು ಪೆನುಗೊಂಡೆಗೆ ಸ್ಥಳಾಂತರಿಸಿದ ನಂತರ ವಿರೂಪಾಕ್ಷನಿಗೆ ಬದಲಾಗಿ ಶ್ರೀರಾಮನನ್ನು ತಮ್ಮ ರಕ್ಷಣಾ ದೇವತೆಯನ್ನಾಗಿ ಮಾಡಿಕೊಂಡರು ಎಂದು ಹೇಳಬಹುದು.[೯೦]

ಆರಗ ಒಡೆಯರು ವಿಜಯನಗರ ಅರಸರ ಸಾಮಂತರಾಗಿ ಇಲ್ಲಿ ರಾಜ್ಯಭಾರ ಮಾಡಿದರು. ಈ ರಾಜ್ಯ ಮಲಯ ರಾಜ್ಯ (ಬೆಟ್ಟ ಶ್ರೇಣಿಯಿಂದ ಆವೃತವಾದ ರಾಜ್ಯ) ಗುತ್ತಿರಾಜ್ಯ (ಚಂದ್ರಗುತ್ತಿಯವರೆಗೂ ವಿಸ್ತರಿಸಿದ ರಾಜ್ಯ) ಎಂದೆನಿಸಿಕೊಂಡು ಮಲೆನಾಡಿನ ಒಂದು ಸಣ್ಣ ಪ್ರಾಂತ್ಯದಲ್ಲಿ ಸ್ಥಾಪಿತವಾಗಿದ್ದು ಸಾಕಷ್ಟು ವಿಸ್ತಾರವಾದ ಪ್ರದೇಶಗಳಲ್ಲಿ ತನ್ನ ಆಡಳಿತ ನಿಯಂತ್ರಣವನ್ನು ಸಾಧಿಸಿದ ರಾಜ್ಯವೆನಿಸಿಕೊಂಡಿತು. ಇವರ ಕಾಲದಲ್ಲಿ ನೂರಾರು ಶಾಸನಗಳನ್ನು ಪ್ರಕಟಿಸಿದರೂ ಅವುಗಳಲ್ಲಿ ಬಹಳಷ್ಟು ಶಾಸನಗಳು ದಾನ ಶಾಸನಗಳಾಗಿವೆ. ಇವುಗಳಲ್ಲಿ ಹೆಚ್ಚಿನ ಶಾಸನಗಳು ದೇವಾಲಯಗಳಿಗೆ, ಬ್ರಾಹ್ಮಣರುಗಳಿಗೆ ದಾನ ನೀಡಿದ ವಿವರಣೆ ಹಾಗೂ ಭೂಪ್ರದೇಶ, ಕೃಷಿ, ನೀರಾವರಿ, ಶಾಪಾಶಯ ಮತ್ತು ಪುಣ್ಯಾಶಯಗಳನ್ನು ವಿವರಿಸುತ್ತವೆಯೇ ಹೊರತು ರಾಜಕೀಯ ಅಂಶಗಳನ್ನಲ್ಲ. ಆದ್ದರಿಂದ ಆಗರದೊಡೆಯರ ಸ್ಪಷ್ಟ ಇತಿಹಾಸವನ್ನು ಕಟ್ಟಿಕೊಡಲು ಕಷ್ಟಸಾಧ್ಯ.

೨.೧.೬. ದಾನಿವಾಸ ಒಡೆಯರು

ದಾನಿವಾಸ ಒಡೆಯರು ಮಧ್ಯಮಲೆನಾಡಿನ ಭಾಗಗಳಾದ ಕೊಪ್ಪ, ನರಸಿಂಹರಾಜಪುರ ಹಾಗೂ ಚಿಕ್ಕಮಗಳೂರಿನ ಕೆಲವು ಪ್ರದೇಶಗಳನ್ನು ಆಡಳಿತಕ್ಕೆ ಒಳಪಡಿಸಿಕೊಂಡು ಚಿಕ್ಕ ಮನೆತನದವರಾಗಿ ಪ್ರಭುತ್ವ ಮೆರೆದವರು. ಮೊದಲಿಗೆ ಹೊಯ್ಸಳರು, ವಿಜಯನಗರ ಅರಸರಿಗೆ, ಕೆಳದಿ ನಾಯಕರಿಗೆ ಸಾಮಂತರಾಗಿ (ಅಧೀನ) ಆಡಳಿತ ನಡೆಸಿದ ಘಟಕವಾಗಿ ಕಂಡುಬರುತ್ತದೆ.

ಲಿಂಗಾಪುರ ಗ್ರಾಮದ ಶಿಲಾಶಾಸನವು ಇವರ ಉಗಮದ ಬಗ್ಗೆ ಬೆಳಕು ಚೆಲ್ಲುತ್ತದೆ. ಅದರಲ್ಲಿ ಹಳೇಬೀಡು ಶ್ರೀ ವೀರಹೊಯ್ಸಳ, ಬಲ್ಲಾಳ ಮಹರಾಯರು ನಮಗೆ ವಂಶನ್ವಯವಾಗಿ ನಾಯಕತನಕ್ಕೆ ಪಾಲಿಸಿದ ದಾನಿವಾಸ ಸೀಮೆ ಎಂದಿದೆ.[೧]

ಹೊಯ್ಸಳರ ಆಡಳಿತವನ್ನು ನೋಡಿದಾಗ ಅವರ ರಾಜ್ಯಾಡಳಿತವು ಒಂದು ಏಕೀಕೃತ ರಾಜ್ಯಕ್ಕಿಂತ ಊಳಿಗಮಾನ್ಯ ಒಕ್ಕೂಟ ರಚನೆಯನ್ನು ಹೊಂದಿದ್ದು ಮಾಂಡಳಿಕ ವ್ಯವಸ್ಥೆಗೆ ಹೆಚ್ಚಿನ ಒತ್ತುಕೊಟ್ಟಿತ್ತು. ಈ ಹಿನ್ನೆಲೆಯನ್ನಿಟ್ಟುಕೊಂಡು ನೋಡಿದಾಗ ದಂಡನಾಯಕರು ಮತ್ತು ಮನ್ನೆಯರು ಭೂಕಾಣಿಕೆಯನ್ನು ಅನುವಂಶೀಯವಾಗಿ ಪಡೆಯುತ್ತಿದ್ದರು. ಲಿಂಗಾಪುರ ಶಾಸನದಂತೆ ದಾನಿವಾಸ ಸೀಮೆಯು ಪ್ರಾಪ್ತವಾಯಿತೆಂದು ಸ್ಪಷ್ಟವಾಗುತ್ತದೆ.[೨]

ವಂಶಪಾರಂಪರ್ಯವಾಗಿ ಈ ಪ್ರಾಂತ್ಯದ ಆಡಳಿತವನ್ನು ಪಡೆಯಬೇಕಾದರೆ ದಾನಿವಾಸ ಒಡೆಯರ ಪೂರ್ವಜರು ಹೊಯ್ಸಳರ ರಾಜ್ಯಾಡಳಿತದಲ್ಲಿ ಅಧಿಕಾರಿಗಳಾಗಿಯೂ ಅಥವ ದಂಡನಾಯಕರಾಗಿಯೂ ಸೀಮೆಯನ್ನು ಪಡೆದುಕೊಂಡರು ಮತ್ತು ಈ ಸಾಮ್ರಾಜ್ಯ ಪತನ ಹೊಂದಿದ ನಂತರ ಸ್ವತಂತ್ರರಾಗಿ ಆ ಸೀಮೆಯಲ್ಲಿ ಕೆಲಕಾಲ ಆಳ್ವಿಕೆ ನಡೆಸಿದರು.

ವಿಜಯನಗರದವರು ಮಲೆನಾಡು ಭಾಗದಲ್ಲಿ ಪ್ರಭಾವಶಾಲಿಗಳಾದಾಗ ದಾನಿವಾಸ ಸೀಮೆಯಲ್ಲಿ ಆಳ್ವಿಕೆ ಮಾಡುತ್ತಿದ್ದ ಒಡೆಯರು ಅವರಿಗೆ ನಿಷ್ಠರಾಗಿ ನಡೆದುಕೊಳ್ಳಲಾರಂಭಿಸಿದರು ಎಂಬುದಾಗಿ ಶಾಸನ ದಾಖಲಿಸುತ್ತದೆ. ಹಾಗೆಯೇ ಮುಂದುವರಿದು ಶಾಲಿವಾಹನ ಶಕ ೧೪೭೪ನೇ ಸಂದ

ವರ್ತಮಾನ ಪರಿದಾವಿ ಸಂವತ್ಸರದ ಫಾಲ್ಗುಣ ಶುದ್ಧ ೧೦ ಗುರುವಾರದಲೂ ಶ್ರೀಮನ್ಮಹಾರಾಜಾಧಿರಾಜ ಶ್ರೀ ವೀರಪ್ರತಾಪ ಶ್ರೀ ಸದಾಶಿವ ಮಹರಾಯರು ಹಂಪೆ ನೆಲೆವೀಡಿನ ಸ್ವಕ್ಷೇತ್ರದ ವಿದ್ಯಾನಗರಿ ಸಿಂಹಾಸನದಲ್ಲಿ ಸಾಮ್ರಾಜ್ಯವಾಳುವ ಕಾಲದಲ್ಲಿ ಶ್ರೀಮತ್ ದಾನಿವಾಸ ವಿರೂಪಾಕ್ಷರಸರ ಮಗ ಚಿಂನರಾಯ ಒಡೆಯರು ಲಿಂಗಣ್ಣ ನಾಯಕರು ಮಾಡಿದ ದೇವತಾ ಪ್ರತಿಷ್ಠೆ ಬ್ರಾಹ್ಮಣರ ಸತ್ಯಧರ್ಮ ಪ್ರತಿಪಾಲನದ ಶಾಸನ ಎಂದಿದೆ.[೯೩]

ಈ ಮೇಲಿನ ಶಾಸನದ ಮಾಹಿತಿಯನ್ನಾಧರಿಸಿ ಹೇಳುವುದಾದರೆ ಹೊಯ್ಸಳರ ಕೃಪೆಯಿಂದಾಗಿ ತಮ್ಮ ರಾಜ್ಯಭಾರವನ್ನು ಈ ಸೀಮೆಯಲ್ಲಿ ಮುಂದುವರೆಸಿದರು ಹಾಗೂ ದಾನಿವಾಸ ಪ್ರಭುಗಳು ನಂತರದ ಚಕ್ರವರ್ತಿಗಳಾದ ವಿಜಯನಗರ ಅರಸರಿಗೆ ಸೈನಿಕ ಸೇವೆ ಮತ್ತು ವಾರ್ಷಿಕ ಕಪ್ಪಕಾಣಿಕೆಯನ್ನು ಸಲ್ಲಿಸುತ್ತಾ ತಮ್ಮ ಪ್ರಾಮಾಣಿಕತೆಯನ್ನು ಮುಂದುವರೆಸಿಕೊಂಡು ಬಂದರು.

ದಾನಿವಾಸ ಒಡೆಯರು ಹೊಯ್ಸಳರ ಕಾಲದಲ್ಲಿ ಒಂದು ಸೀಮೆಯ ನಾಯಕತ್ವವನ್ನು ವಹಿಸಿಕೊಂಡು ವಿಜಯನಗರ ಅರಸರ ಕಾಲದಲ್ಲಿ ಅವರಿಗೆ ನಿಷ್ಠರಾಗಿ ಸಾಕಷ್ಟು ಪ್ರಗತಿಯ ಜೊತೆಗೆ ಕಷ್ಟ-ನಷ್ಟಗಳನ್ನು ಅನುಭವಿಸಿದ್ದರು. ಕ್ರಿ.ಶ. ೧೫೫೮ರ ನಂತರ ಇವರು ತಮ್ಮ ಸೀಮೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗಲಿಲ್ಲ ಎಂಬುದು ಗೊತ್ತಾಗುತ್ತದೆ. ಈ ವೇಳೆಗೆ ಅವರ ರಾಜ್ಯದ ಪಶ್ಚಿಮದಲ್ಲಿ ತರೀಕೆರೆ ನಾಯಕರು, ಉತ್ತರದಲ್ಲಿ ಕೆಳದಿಯ ನಾಯಕರು ಸದೃಢವಾಗಿ ಬೆಳೆದು ತಮ್ಮ ರಾಜ್ಯವನ್ನು ಕರಾವಳಿಯವರೆಗೂ ವಿಸ್ತರಿಸಿದರು. ತಾಳಿಕೋಟೆ ಯುದ್ಧದ ನಂತರ ಅನೇಕ ಚಿಕ್ಕ ಮನೆತನಗಳು ಕೆಳದಿ ನಾಯಕರ ಅಧೀನಕ್ಕೆ ಒಳಪಟ್ಟವು. ಈ ಮನೆತನದ ಕೊನೆಯ ಒಡೆಯನಾದ ಚಂನವೀರಪ್ಪನು ಕೆಳದಿಯ ಹಿರಿಯ ವೆಂಕಟಪ್ಪ ನಾಯಕನಿಗೆ ತಮ್ಮ ಸೀಮೆಯನ್ನು ಒಪ್ಪಿಸಿರಬಹುದು. ಕ್ರಿ.ಶ. ೧೬೦೭ರ ನಂತರ ಸುಮಾರು ೧೦೦ ವರ್ಷಗಳ ಕಾಲ ಕೆಳದಿ ಅರಸರ ಹಲವಾರು ಶಾಸನಗಳು ದಾನಿವಾಸ ಕೆಳದಿ ರಾಜ್ಯದ ಒಂದು ಪ್ರಮುಖ ಆಡಳಿತ ಭಾಗ ಎಂದು ಹೇಳುತ್ತದೆ.[೯೪]

ಸಾಮಂತ ದಾನಿವಾಸ ಪ್ರಭುಗಳು

ಹಿಂದೂ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ನಂತರ ಮಲೆನಾಡು ಪ್ರದೇಶಗಳ ಇತಿಹಾಸದಲ್ಲಿ ಒಂದು ಹೊಸ ಯುಗವೇ ಆರಂಭವಾಯಿತು. ವಿಜಯನಗರ ಸಾಮ್ರಾಜ್ಯ ಉದಯವಾದ ನಂತರ ಮಲೆನಾಡಿನ ರಾಜಕೀಯ ಇತಿಹಾಸದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ವಿಜಯನಗರದ ಚಕ್ರವರ್ತಿಗಳ ಪ್ರತಿನಿಧಿಗಳು ಇಲ್ಲಿ ಆಳ್ವಿಕೆ ನಡೆಸಿದ್ದರಿಂದ ರಾಜಕೀಯ ಮೌಲ್ಯದ ಬೆಳವಣಿಗೆಗೆ ಕಾರಣವಾದವು. ಕೇಂದ್ರೀಕರಣ ಮತ್ತು ವಿಕೇಂದ್ರೀಕರಣ ವ್ಯವಸ್ಥೆಯ ಹಿನ್ನೆಲೆಯಲ್ಲಿ ಅನೇಕ ರಾಜಮನೆತನಗಳು ಇಲ್ಲಿ ಉದಯವಾದವು. ಅಂತಹ ಅಧೀನಕ್ಕೆ ಒಳಪಟ್ಟು ಆಳ್ವಿಕೆ ನಡೆಸಿದ ದಾನಿವಾಸ ಒಡೆಯರು ಕೊಪ್ಪ, ನರಸಿಂಹರಾಜಪುರ ಪ್ರದೇಶಗಳಲ್ಲಿ ವಿಜಯನಗರದ ಅರಸರ ಸಾಮಂತರಾಗಿ ಆಳ್ವಿಕೆ ನಡೆಸಿದರು.

ದಾನಿವಾಸವು ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ ತಾಲ್ಲೂಕಿನಲ್ಲಿದೆ. ಚಿಕ್ಕಮಗಳೂರಿನಿಂದ ವಾಯುವ್ಯಕ್ಕೆ ೮೮ ಕಿ.ಮೀ., ಕೊಪ್ಪದಿಂದ ೩೦ ಕಿ.ಮೀ. ದೂರದಲ್ಲಿದೆ. ನರಸಿಂಹರಾಜಪುರದ ಸನಿಹವೇ ಇರುವ ೪೦೦ ವರ್ಷಗಳ ಹಿಂದಿನ ದಾನಿವಾಸವನ್ನು ಹಳೇದಾನಿವಾಸ ಎಂದು ಕರೆಯುವರು. ಆದರೆ ಈಗ ಭದ್ರ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಿ ಹೋಗಿದೆ.

೯ ಶಾಸನಗಳು ದಾನಿವಾಸ ಒಡೆಯರಿಗೆ ಸಂಬಂಧಿಸಿವೆ. ಮೂರು ಶಿಲಾಶಾಸನಗಳು ಹಾಗೂ ೬ ತಾಮ್ರಶಾಸನಗಳು ಕ್ರಮವಾಗಿ ಬಿ.ಎಲ್. ರೈಸರ ಎಪಿಗ್ರಾಫಿಯಾ ಕರ್ನಾಟಿಕದ ೬ನೇ ಸಂಪುಟದಲ್ಲೂ ಮತ್ತು ಎಂ.ಎ.ಆರ್. ೧೯೩೧ರ ಸಂಪುಟದಲ್ಲೂ ಪ್ರಕಟವಾಗಿವೆ. ಕೆಳದಿ ಅರಸರ ಶಾಸನಗಳಲ್ಲಿ, ಶೃಂಗೇರಿಯ ಕೈಫಿಯತ್‌ನಲ್ಲಿ, ಹೊಳೆಹೊನ್ನೂರಿನ ಕೈಫಿಯತ್‌ನಲ್ಲಿ ದಾನಿವಾಸ ಒಡೆಯರ ಉಲ್ಲೇಖವಿದೆ.[೫]

ಹೀಗೆ ಪ್ರಗತಿಯತ್ತ ಸಾಗುತ್ತಿದ್ದ ದಾನಿವಾಸ ಒಡೆಯರಿಗೆ ಹಣಕಾಸಿನ ಮುಗ್ಗಟ್ಟು ತಲೆದೋರಿತು. ಅದನ್ನು ಪರಿಹರಿಸಿಕೊಳ್ಳಲು ಅವರು ಬಾಳೆಹಳ್ಳಿ ಮಠದಿಂದ ೧೨,೦೦೦ ವರಹಗಳನ್ನು ಸಾಲವಾಗಿ ಪಡೆದರು. ಆ ಸಾಲದ ಪತ್ರವು ಕೊಪ್ಪ ಬಸವಯ್ಯನಲ್ಲಿರುವುದನ್ನು ಕಂಡು ಅದನ್ನು ದಾನಿವಾಸ ಒಡೆಯನಾದ ಚಂನವೀರಣ್ಣ ನಾಯಕನು ಅವನಿಂದ ಪಡೆದುಕೊಂಡು ತಮ್ಮ ಪೂರ್ವಜರು ಮಾಡಿದ ಸಾಲಕ್ಕೆ ಪ್ರತಿಯಾಗಿ ಆ ಮನೆತನಕ್ಕೆ ಸೇರಿದ ಲಿಂಗಣ್ಣನಾಯಕ, ಮಲ್ಲಣ್ಣನಾಯಕ, ಚಿಕ್ಕಮಲ್ಲಣ್ಣನಾಯಕ ಹಾಗೂ ಪ್ರಜೆಗಳೊಡಗೂಡಿ ಬಾಳೆಹಳ್ಳಿ ಮಠಕ್ಕೆ ತಮ್ಮ ಸೀಮೆಯೊಳಗೂಡಿ ಮೂರು ಗ್ರಾಮಗಳನ್ನು ಬಿಟ್ಟುಕೊಟ್ಟನು.[೬] ಈ ಶಾಸನದಲ್ಲಿ ಉಲ್ಲೇಖವಾಗಿರುವ ಚಂನವೀರಣ್ಣ, ಲಿಂಗಣ್ಣ, ಮಲ್ಲಣ್ಣ ಮತ್ತು ಚಿಕ್ಕಮಲ್ಲಣ್ಣ ನಾಯಕ ಈ ಮನೆತನಕ್ಕೆ ಸೇರಿದ ಸಹೋದರರಾಗಿದ್ದರು. ಇವರು ತಮ್ಮ ಪೂರ್ವಜರು ಮಾಡಿದ ಸಾಲಕ್ಕೆ ತಾವು ಹೊರೆಯಾಗಿ ಅದನ್ನು ತೀರಿಸುವುದರ ಮುಖಾಂತರ ಋಣ ಮುಕ್ತರಾದರು. ಮಠಗಳು ಅಂದಿನ ಕಾಲದ ಬ್ಯಾಂಕುಗಳಂತೆ ಕಾರ್ಯವನ್ನು ನಿರ್ವಹಿಸುತ್ತಿದ್ದವೆಂದು ಹಾಗೂ ಬಾಳೇಹಳ್ಳಿ ಮಠವು ಅತ್ಯಂತ ಶ್ರೀಮಂತ ಮಠವಾಗಿತ್ತೆಂದು ಇದರಿಂದ ಗೊತ್ತಾಗುತ್ತದೆ.

ಇವರು ಕ್ರಿ.ಶ. ೧೫೫೩ರಿಂದ ಕ್ರಿ.ಶ. ೧೫೮೭ರವರೆಗೆ ಆಳ್ವಿಕೆಯನ್ನು ಮಾಡಿದ್ದರು ಎಂದು ಶಾಸನಗಳು ದಾಖಲಿಸುತ್ತವೆ. ಅವರ ವಂಶಾವಳಿಯನ್ನು ಹೀಗೆ ನಿರೂಪಿಸಬಹುದು.[೭]

ವಿರೂಪಾಕ್ಷ ಒಡೆಯರು

↓

ಚಂನರಾಯ ಒಡೆಯರು

↓

ಲಿಂಗಣ್ಣ ನಾಯಕ(ಕ್ರಿ.ಶ. ೧೫೫೩)

↓

ಅರಸಪ್ಪ ಒಡೆಯ(ಕ್ರಿ.ಶ. ೧೫೭೦)

↓

↓ ↓ ↓

ಚೆನ್ನವೀರಣ್ಣನಾಯಕ ಲಿಂಗಣ್ಣನಾಯಕ ಮಲ್ಲಣ್ಣನಾಯಕ

↓

ಚಿಕ್ಕಮಲ್ಲಣ್ಣನಾಯಕ

↓

ಚಿಕ್ಕವೀರಪ್ಪನಾಯಕ

↓

ಚೆನ್ನವೀರಪ್ಪನಾಯಕ

ಒಟ್ಟಾರೆಯಾಗಿ ದಾನಿವಾಸ ಒಡೆಯರ ಮನೆತನ ಚಿಕ್ಕದಾದರೂ ಅವರ ಉದಾರ ನೀತಿಯಿಂದ ಉದಾತ್ತ ಧರ್ಮವನ್ನು ಸ್ವೀಕರಿಸಿ ಅದಕ್ಕೆ ನಿಷ್ಠರಾಗಿ ಬದುಕಿ ಕರ್ನಾಟಕದ ಸಣ್ಣ ಪ್ರಾದೇಶಿಕ ಮನೆತನಗಳ ಇತಿಹಾಸದಲ್ಲಿ ತಮ್ಮದೇ ಆದ ನೆರಳನ್ನು ಬಿಟ್ಟು ಹೋಗಿದ್ದಾರೆ. ಬಲಾಢ್ಯವೆನಿಸಿದ ವಿಜಯನಗರದಂತಹ ಸಾಮ್ರಾಟರ ಸಾಂಸ್ಕೃತಿಕ ಪರಂಪರೆಯನ್ನು ಭದ್ರಗೊಳಿಸುತ್ತಾ ಆ ಪರಂಪರೆಯನ್ನು ಸಂಘಟಿಸುವಲ್ಲಿ ಅತೀ ಕಿರಿಯ ಮನೆತನದವರಾದರೂ ಶ್ರಮಿಸಿ ಆ ಭಾಗದಲ್ಲಿ ಸಮನ್ವಯ ಸಂಸ್ಕೃತಿಯನ್ನು ಸಾಧ್ಯವಾಗಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರು ವೀರಶೈವರಾಗಿದ್ದು ಯಡೆಯೂರು ಸಿದ್ಧಲಿಂಗೇಶ್ವರರ ಪರಮಭಕ್ತರಾಗಿದ್ದರು. ಅತೀ ಶ್ರೀಮಂತ ಮನೆತನವಾಗಿಲ್ಲದಿದ್ದರೂ ಕೂಡ ತನ್ನ ಇತಿಮಿತಿಯಲ್ಲಿ ಮಲೆನಾಡ ಸಂಸ್ಕೃತಿಗೆ ತನ್ನದೇ ಆದ ಕೊಡುಗೆ ಸಲ್ಲಿಸಿರುವುದು ಸುತ್ಯಾರ್ಹ.

೨.೧.೭. ಕೆಳದಿ ನಾಯಕರು (ಕ್ರಿ.ಶ. ೧೪೯೯ - ಕ್ರಿ.ಶ. ೧೭೬೩)

ವಿಜಯನಗರ ಸಾಮ್ರಾಜ್ಯ ಕಣ್ಮರೆಯಾದ ಮೇಲೆ ಕರ್ನಾಟಕದ ರಾಜಕೀಯ ರಂಗದ ಮೇಲೆ ಅನೇಕ ಸಣ್ಣಪುಟ್ಟ ಮನೆತನಗಳು ಕಾಣಿಸಿಕೊಂಡವು. ಅವುಗಳಲ್ಲಿ ಮುಖ್ಯವಾದುದು ಕೆಳದಿ ರಾಜ್ಯ. ಸುಮಾರು ಎರಡೂವರೆ ಶತಮಾನಗಳ ಕಾಲ ವಿಜೃಂಭಿಸಿದ ಈ ಕೆಳದಿ ಸಂಸ್ಥಾನದ ಅರಸರು ಹಿಂದೂ ಧರ್ಮ ಸಂಸ್ಕೃತಿಯನ್ನು ರಕ್ಷಿಸಿ ಪೋಷಿಸಿದ್ದಾರೆ. ಅವರ ಚಟುವಟಿಕೆಗಳ ಕೇಂದ್ರವಾಗಿದ್ದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕೆಳದಿ ರಾಜ್ಯ ಕೆಳದಿ, ಇಕ್ಕೇರಿ, ಬಿದನೂರು, ಭುವನಗಿರಿದುರ್ಗಗಳನ್ನು ರಾಜಧಾನಿಗಳನ್ನಾಗಿ ಇರಿಸಿಕೊಂಡು ಆಳಿದ್ದಾರೆ. ಅವರ ರಾಜ್ಯವು ಕೊಡಗು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ಧಾರವಾಡ, ಉತ್ತರ ಕನ್ನಡ, ಪಶ್ಚಿಮ ಕರಾವಳಿಯಲ್ಲಿ ಗೋವದಿಂದ ಕೇರಳದ ಕಣ್ಣಾನೂರುವರೆಗೂ ವಿಸ್ತರಿಸಿದ್ದಿತ್ತು.

ಕೆಳದಿ ಅರಸರ ಇತಿಹಾಸ ರಚನೆಯಲ್ಲಿ ವಿವಿಧ ಬಗೆಯ ಮೂಲ ಆಕರಗಳು ಅಮೂಲ್ಯ ಮಾಹಿತಿಯನ್ನು ನೀಡುತ್ತವೆ. ಲಿಂಗಣ್ಣ ಕವಿಯ 'ಕೆಳದಿನೃಪ ವಿಜಯ' ಮತ್ತು ಶಿವತತ್ವ

ರತ್ನಾಕರ' ಕೃತಿಗಳು, ಮರಾಠರ ದಾಖಲೆಯ ಕಾಗದ ಪತ್ರಗಳು, ಗೋವಾದಲ್ಲಿ ದೊರೆತಿರುವ ಪೋರ್ಚುಗೀಸರ ಮತ್ತು ತಲಚೇರಿಯಲ್ಲಿನ ಬ್ರಿಟೀಷರ ದಾಖಲೆಗಳು, ಇಟಲಿಯ ಯಾತ್ರಿಕ ಪಿಟ್ರೊಡೆಲಿವೆಲ್ಲೆ, ಇಂಗ್ಲೆಂಡಿನ ಪೀಟರ್ ಮಂಡಿ, ಜಾನ್‌ಫ್ರಯರ್ ಮತ್ತು ಅಲೆಗ್ಸಾಂಡರ್ ಹ್ಯಾಮಿಲ್ಟನ್ ಮುಂತಾದವರ ವರದಿಗಳು, ಪ್ರಾಪ್ತವಾಗಿರುವ ಅಮೂಲ್ಯ ಶಾಸನಗಳು ಮತ್ತು ತಾಮ್ರ ಪಟಗಳು ಸಮಗ್ರ ಮಾಹಿತಿ ನೀಡುತ್ತವೆ.

ಕೆಳದಿ ಅರಸರ ಶಾಸನಗಳು ಸಾಹಿತ್ಯಿಕ ದೃಷ್ಟಿಯಿಂದ ಪ್ರಮುಖವಲ್ಲದಿದ್ದರೂ ಡಾ. ಕೆ.ಎನ್. ಚಿಟ್ನಿಸ್ ಅವರು ಹೇಳಿರುವಂತೆ ಅವು 'ಕಂದಾಯದ ವಿಷಯಗಳಿಗೆ ಮತ್ತು ವಿವಿಧ ಬಗೆಯ ನಾಣ್ಯಗಳಿಗೆ ಸಂಬಂಧಿಸಿದಂತೆ' ವಿಪುಲ ವಿವರಗಳನ್ನು ನಮಗೆ ನೀಡಿರುತ್ತವೆ.

ಕವಲೇದುರ್ಗದ ಮಹಂತನ ಮಠದಲ್ಲಿ ಸುಮಾರು ೭೨ ತಾಮ್ರದ ಪಟಗಳು ಮತ್ತು ಶಾಸನಗಳು ಹಾಗೂ ಕೊಪ್ಪ, ಶೃಂಗೇರಿಯಲ್ಲಿ ಕೆಳದಿ ಅರಸರ ಸಾಕಷ್ಟು ಶಾಸನಗಳು ಲಭಿಸಿವೆ. ಇವರ ಶಾಸನಗಳು ರಾಜಕೀಯವಾಗಿ ಯಾವ ಅಂಶಗಳನ್ನು ತಿಳಿಸುವುದಿಲ್ಲ. ಅವೆಲ್ಲವೂ ವಿಶೇಷವಾಗಿ ಧಾರ್ಮಿಕ ಶಾಸನಗಳಾಗಿದ್ದು, ದೇವಾಲಯಗಳಿಗೆ ಹಾಗೂ ಮಠಗಳಿಗೆ ಕೊಟ್ಟ ದಾನಗಳನ್ನು ಉಲ್ಲೇಖಿಸುತ್ತವೆ.

ಶಿವರಾಜಪುರ ತಾಮ್ರಪಟ ಶಾಸನವು ಅತಿ ದೀರ್ಘ ತಾಮ್ರ ಶಾಸನವಾಗಿದ್ದು, ಎಂಟು ಹಲಗೆಗಳಿಂದ ಕೂಡಿದ್ದು ೪೩೮ ಸಾಲುಗಳನ್ನು ಹೊಂದಿದೆ. ಇದು ಇವರ ಕಾಲದ ಅತ್ಯಂತ ವಿಸ್ತಾರವಾದ ತಾಮ್ರಶಾಸನವಾಗಿದೆ.

ಇದು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಕ್ರಿ.ಶ. ೧೯೯೭ರಲ್ಲಿ ಪ್ರಕಟಿಸಿದ್ದ copper plate inscription from karnatakaದಲ್ಲಿ ಹೊಸ ಶಾಸನವಾಗಿ ಪ್ರಕಟವಾಗಿದೆ. ಕ್ರಿ.ಶ. ೧೫೬೦ರಿಂದ ಕ್ರಿ.ಶ. ೧೭೩೭ರವರೆಗೆ ಈ ಶಾಸನಗಳ ತೇದಿಗಳು ವ್ಯಾಪಿಸಿವೆ. ಈ ವಂಶದ ೧೮ ಪ್ರಭುಗಳಲ್ಲಿ ಸುಮಾರು ೧೨ ಜನ ಆಳುವವರಿಗೆ ಅವು ಸಂಬಂಧಿಸಿದ್ದಾಗಿವೆ.[೯೮]

ಕೆಳದಿ ಸಂಸ್ಥಾನದ ಸ್ಥಾಪಕರು ಚೌಡಪ್ಪ ಮತ್ತು ಭದ್ರಪ್ಪರೆಂಬ ಸಹೋದರರು. ಅವರ ತಂದೆ ಬಸವಪ್ಪ ಮತ್ತು ತಾಯಿ ಬಸವ್ವ, ವೀರಶೈವರಾದ ಇವರು ಮೂಲತಃ ರೈತರು. ತಂದೆಯ ಮರಣದ ನಂತರ ಈ ಇಬ್ಬರು ಸಹೋದರರು ಎಂದಿನಂತೆ ತಮ್ಮ ಪೂರ್ವಿಕರ ಕಸುಬಾದ ಕೃಷಿಯನ್ನೇ ಮುಂದುವರಿಸಿಕೊಂಡು ಬಂದರು. ಈ ಸಮಯದಲ್ಲಿ ಜರುಗಿದ ಆಶ್ಚರ್ಯಕರ ಘಟನೆಗಳು ಈ ಸಹೋದರರ ಭವಿಷ್ಯವನ್ನು ರೂಪಿಸಿದವು.

ತೀರ್ಥಹಳ್ಳಿಯ ಒಂದು ತಾಮ್ರಶಾಸನದಲ್ಲಿ ಸದಾಶಿವರಾಯನನ್ನು ಆರಗದ ೧೮ ಕಂಪಣದ ರಾಜ್ಯಪಾಲ ಎಂದಿದ್ದು ಅಗ್ರಹಾರಕ್ಕೆ ನೀಡಿದ ಭೂದಾನದ ವಿವರಣೆ ನೀಡುತ್ತದೆ.[೯೯]

ರಾಮರಾಜ ನಾಯಕ, ಕ್ರಿ.ಶ. ೧೫೮೦ - ಕ್ರಿ.ಶ. ೧೫೮೬

ಅಗಳಬಾಗಿಲು ಶಾಸನದಲ್ಲಿ ಸದಾಶಿವರಾಯ ಮತ್ತು ರಾಮರಾಜ ನಾಯಕನ ಉಲ್ಲೇಖವಿದ್ದು, ಭೂದಾನ, ದೇವಾಲಯದ ಖರ್ಚು - ವೆಚ್ಚ, ಬ್ರಾಹ್ಮಣರಿಗೆ ದಾನ ಹಾಗೂ ದೇವಾಲಯದ ಮುಖ್ಯಸ್ಥ ರಿಕ್‌ಶಕೆಯ ರಾಮಕೃಷ್ಣಪ್ಪನ ನೇಮಕದ ಉಲ್ಲೇಖವನ್ನು ನೀಡಿದೆ.[೧೦೦]

ಆರಗ ಶಾಸನವೊಂದರಲ್ಲಿ ರಾಮರಾಜ ನಾಯಕನು ಆರಗದ ಬೆನಕಪ್ಪಸೆಟ್ಟಿ, ದೇವಪ್ಪಸೆಟ್ಟಿ, ಬೊಮ್ಮನಸೆಟ್ಟಿಯವರಿಗೆ ನೀಡಿದ ಭೂದಾನದ ವಿವರಣೆ ಇದೆ.[೧೦೧]

ತೀರ್ಥಹಳ್ಳಿ ತಾಮ್ರಶಾಸನದಲ್ಲಿ 'ಪ್ರಿಯ ಸ್ರಾಹೆ ನಿಜ ಘಟ್ಟಿ ವರಹಗಳನ್ನು' ಮಲ್ಲರಸಯ್ಯ ಎಂಬಾತನಿಂದ ಪಡೆದು ದೊರೆಯು ಅವನಿಗೆ ಹಿರಿಯ ಕಲ್ಲಹಳ್ಳಿ ಗ್ರಾಮವನ್ನು ನೀಡಿದನು ಎಂದು ತಿಳಿದುಬರುತ್ತದೆ.[೧೦೨]

ಹಿರಿಯ ವೆಂಕಟಪ್ಪ ನಾಯಕ (ಕ್ರಿ.ಶ. ೧೫೮೨ - ಕ್ರಿ.ಶ. ೧೬೨೯)

ಇವನ ಆಳ್ವಿಕೆ ಕಾಲದಲ್ಲಿ ಕೆಳದಿ ಸಾಮ್ರಾಜ್ಯ ಪ್ರಬಲ ರಾಜ್ಯವಾಯಿತು. ಪತನದ ಅಂಚಿನಲ್ಲಿದ್ದ ಅರವೀಡು ವಂಶದ ಅಸಮರ್ಥತೆಯ ಲಾಭ ಪಡೆದ ವೆಂಕಟಪ್ಪ ಸ್ವತಂತ್ರನಾದನು. ಬಿಜಾಪುರದ ಸುಲ್ತಾನ ಆದಿಲ್‌ಷಾನ ಸೇನೆಯನ್ನು, ಗೇರುಸೊಪ್ಪೆಯ ಬೈರಾದೇವಿಯನ್ನು, ತರೀಕೆರೆಯ ಸರ್ಜಾಹನುಮಪ್ಪ ನಾಯಕನ ಉಪಟಳವನ್ನು ಹತ್ತಿಕ್ಕಿದನು. ಪಶ್ಚಿಮ ಕರಾವಳಿಯಲ್ಲಿ ನೆಲೆಸಿದ್ದ ಇಂಗ್ಲೀಷರು ಮತ್ತು ಪೋರ್ಚುಗೀಸರೊಡನೆ ಸಂಪರ್ಕ ಕಲ್ಪಿಸಿಕೊಂಡು ರಾಜ್ಯದ ಅಕ್ಕಿ ಮತ್ತು ಮೆಣಸಿನ ವ್ಯಾಪಾರ ಹೆಚ್ಚಿಸಿದನು. ಕ್ರಿ.ಶ. ೧೬೨೩ರಲ್ಲಿ ಇಕ್ಕೇರಿಗೆ ಇಟಲಿಯ ಪ್ರವಾಸಿ ಪಿಟ್ರೋ ಡೆಲಿವೆಲ್ಲೆ ಭೇಟಿ ಕೊಟ್ಟು ಅರಸನ ಸಾಮರ್ಥ್ಯಗಳ ಬಗ್ಗೆ ಗುಣಗಾನ ಮಾಡಿದ್ದಾನೆ. ಇವನ ಕಾಲದಲ್ಲಿ ಕೆಳದಿ ರಾಜ್ಯ ಪೂರ್ವದಲ್ಲಿ ಮೈಸೂರು, ಶಿವಮೊಗ್ಗ, ಕಡೂರು ಮತ್ತು ಭುವನಗಿರಿದುರ್ಗ(ತೀರ್ಥಹಳ್ಳಿ)ದವರೆಗೂ, ಪಶ್ಚಿಮದಲ್ಲಿ ಹೊನ್ನಾವರ, ದಕ್ಷಿಣದಲ್ಲಿ ಮಲಬಾರಿನ ವರೆಗೂ ವ್ಯಾಪಿಸಿತ್ತು.

ರಾಜ್ಯದಲ್ಲಿ ಶಿಖರೇಶ್ವರ, ವೀರೇಶ್ವರ, ಲಕ್ಷ್ಮೀನಾರಾಯಣ, ತಾಂಡವೇಶ್ವರ, ರಂಗನಾಥ ಮುಂತಾದ ಅನೇಕ ದೇವಾಲಯಗಳನ್ನು ನಿರ್ಮಿಸಿದ್ದನು. ಶೃಂಗೇರಿಯಲ್ಲಿ ಒಂದು ಮಠವನ್ನು ಸ್ಥಾಪಿಸಿ ಅಲ್ಲಿನ ಗುರುಗಳಾದ ಅಭಿನವ ನರಸಿಂಹ ಭಾರತಿಗಳಿಗೆ ಅದನ್ನು ಒಪ್ಪಿಸಿ 'ಶೃಂಗೇರಿ ಪುನರ್‌ನಿರ್ಮಾಪಕ' ಎಂಬ ಬಿರುದನ್ನು ಗಳಿಸಿದನು. ಇವನು ವಿದ್ಯಾಭಿಮಾನಿಯಾಗಿದ್ದು ಅನೇಕ ಅಗ್ರಹಾರಗಳಿಗೆ ಮತ್ತು ದೇವಾಲಯಗಳಿಗೆ ಸಾಕಷ್ಟು ದಾನ - ಧರ್ಮಗಳನ್ನು ನೀಡಿದ್ದನು. ಇದಕ್ಕೆ ಸಾಕ್ಷಿ ಎಂಬಂತೆ ಇವನ ಕಾಲದಲ್ಲಿ ಅನೇಕ ಶಾಸನಗಳನ್ನು ಜಾರಿಗೆ ತಂದನು.

ಮೇಳಿಗೆ ಶಾಸನವು ಅನಂತ ಜಿನದೇವರ ಸ್ತುತಿಯೊಂದಿಗೆ ಆರಂಭವಾಗಿ ವೆಂಕಟಪ್ಪ ನಾಯಕನ ಉಲ್ಲೇಖವನ್ನು ಮಾಡುವುದು. ಮೇಳಿಗೆಯಲ್ಲಿ ಬೊಮ್ಮಣ್ಣ ಸೆಟ್ಟಿ,ಪದುವಣ ಶೆಟ್ಟಿ, ಚಂದನ ಶೆಟ್ಟಿ, ಮಾಣಿಕ ಶೆಟ್ಟಿ ಮತ್ತು ಆದಣ್ಣ ಶೆಟ್ಟಿಯವರು ಬಸದಿಯನ್ನು ನಿರ್ಮಾಣ ಮಾಡಿದರು. ಬೊಮ್ಮಣ್ಣ ಶೆಟ್ಟಿ ಮತ್ತು ಅವನ ಸಹೋದರರು ದೇವರ ನಂದಾದೀಪಕ್ಕಾಗಿ ಭೂದಾನ ಮಾಡಿದ ಬಗ್ಗೆ ವಿವರಣೆ ನೀಡುವುದು.[೧೦೩]

ಕವಲೇದುರ್ಗ ತಾಮ್ರಶಾಸನದಲ್ಲಿ ವೆಂಕಟಾದ್ರಿಯ ಹೆಂಡತಿಯು ವಿರುಪಣ್ಣ ನಾಯಕನ ಮಗಳು. ಆದರೆ ಆಕೆಯ ಹೆಸರನ್ನು ತಿಳಿಸಿಲ್ಲ. ವೀರಶೈವ ಮಠಗಳಿಗಾಗಿ ಹೇರೆತ್ತುಗಳ

ಮೂಲಕ ಸಾಗಿಸುವ ಸಾಮಾನು ಸರಂಜಾಮುಗಳ ಮೇಲಿನ ಸುಂಕಗಳನ್ನು ಮನ್ನಾ ಮಾಡಿದನು ಎಂಬ ಮಾಹಿತಿಯಿದೆ.[೧೦೪]

ಕವಲೇದುರ್ಗ ಶಾಸನವು ವೆಂಕಟಪ್ಪ ನಾಯಕನು ಸದಾಶಿವ ಸಾಗರದ ಮಹಂತನ ಮಠಕ್ಕೆ ಕಡೆ ನಂದಿಹಳ್ಳಿಯಲ್ಲಿ ಭೂದಾನ ಮಾಡಿದ ಬಗ್ಗೆ ವಿವರಣೆ ನೀಡುತ್ತದೆ.[೧೦೫]

ವೆಂಕಟಪ್ಪ ನಾಯಕನು ಸಿರಿವಂತೆ ಸೀಮೆಯ ಸುದ್ರವಾಡದ ಹಣಸೂರು ಹಳ್ಳಿಯಲ್ಲಿ ಭೂದಾನವನ್ನು ಗುರುಮಲ್ಲಿಕಾರ್ಜುನ ಪಟ್ಟಣಗೆರೆಗೆ ಭೂದಾನ ಮಾಡಿದ ವಿವರಣೆಯು ಕವಲೇದುರ್ಗ ಶಾಸನದಲ್ಲಿದೆ.[೧೦೬]

ವೆಂಕಟಪ್ಪ ನಾಯಕನು ಕವಲೇದುರ್ಗದಲ್ಲಿ ಮಸೀದಿಯನ್ನು ನಿರ್ಮಾಣ ಮಾಡಲು ಮದುವಂಕ ಸೀಮೆಯ ಹಲಸಿನಹಳ್ಳಿಯ ಭೂಮಿಯನ್ನು ದಾನ ಮಾಡಿದ ಬಗ್ಗೆ ವಿವರಣೆ ಇನ್ನೊಂದು ಶಾಸನದಲ್ಲಿದೆ.[೧೦೭]

ಶೃಂಗೇರಿಯ ಶಾಸನವು ವೆಂಕಟಪ್ಪ ನಾಯಕನನ್ನು ಸದಾಶಿವ ನಾಯಕನ ಮೊದಲಿಗ ಎಂದು ವರ್ಣಿಸಿದೆ ಹಾಗೂ ಕೆಳದಿ ನಾಯಕನು ಕೊಟ್ಟ ದಾನದ ವಿವರಣೆಯನ್ನು ಒಳಗೊಂಡಿದೆ.[೧೦೮]

ವೀರಭದ್ರ ನಾಯಕ (ಕ್ರಿ.ಶ. ೧೬೨೯ - ಕ್ರಿ.ಶ. ೧೬೪೫)

ಇವನು ವೆಂಕಟಪ್ಪ ನಾಯಕನ ಮೊಮ್ಮಗ. ಇವನಿಗೆ ಚಿಕ್ಕಸಂಕಣ್ಣನ ಮೊಮ್ಮಗ ಶಿವಪ್ಪ ನಾಯಕನು ವೀರಭದ್ರನಿಗೆ ಬೆಂಬಲಿಗನಾಗಿ ನಿಂತನು. ಬಿಜಾಪುರ ಆದಿಲ್‌ಷಾಹಿಗಳು ಇವನಿಗೆ ತೊಂದರೆ ಕೊಡಲಾರಂಭಿಸಿದರು. ಇವರನ್ನು ಪ್ರತಿಭಟಿಸಲಾಗದೆ ವೀರಭದ್ರ ಬಿಜಾಪುರದ ಸುಲ್ತಾನರೊಡನೆ ಸಂಧಿ ಮಾಡಿಕೊಂಡನು.ಇವರ ಉಪಟಳದಿಂದಲೇ ವೀರಭದ್ರ ತನ್ನ ರಾಜಧಾನಿ ಯನ್ನು ಬಿದನೂರಿಗೆ ವರ್ಗಾಯಿಸಿಕೊಂಡನು. ಕೊನೆಗೆ ಶಿವಪ್ಪನಾಯಕನ ಸಹಾಯದಿಂದ ಪಾಳೆಗಾರರನ್ನು ಹತ್ತಿಕ್ಕಿದನು. ಈ ಮಧ್ಯೆ ತನ್ನ ರಾಣಿಯನ್ನು ಕಳೆದುಕೊಂಡ ವೀರಭದ್ರನಾಯಕ ಜೀವನದಲ್ಲಿ ಜಿಗುಪ್ಸೆ ಹೊಂದಿ ತೀರ್ಥಯಾತ್ರೆಯಲ್ಲಿಯೇ ಕಾಲ ಕಳೆದನು. ಇವನ ಭೂದಾನದ ವಿವರಣೆ ಹಾಗೂ ಕವಲೇದುರ್ಗದ ಮಹಂತನ ಮಠಕ್ಕೆ ನೀಡಿದ ದಾನದ ವಿವರಣೆಗಳು ಕವಲೆದುರ್ಗ ಶಾಸನದಲ್ಲಿ ವ್ಯಕ್ತವಾಗಿವೆ.[೧೦೯]

ಆರಗ ರಾಜ್ಯದ ಮದುವಂಕನಾಡು ಸೀಮೆಯ ನೆರಟೂರು ಮತ್ತು ಹುರಣಿ ಹಾಗೂ ಗಾಜನೂರು ಸೀಮೆಯ ತ್ರಿಯಂಬಕಪುರ ಮತ್ತು ಸಕ್ರೆಬೈಲು ಎಂಬ ನಾಲ್ಕು ಹಳ್ಳಿಗಳನ್ನು ೩೪೮ ವರಹಗಳಿಗೆ ಭೂದಾನ ಮಾಡಿದ ವಿವರಣೆ ತೀರ್ಥಹಳ್ಳಿ ಶಾಸನದಲ್ಲಿ ಇದೆ.[೧೧೦]

ಕವಲೇದುರ್ಗ ಶಾಸನಗಳು ವೀರಭದ್ರ ನಾಯಕನ ಆಳ್ವಿಕೆಯನ್ನು ಉಲ್ಲೇಖಿಸುತ್ತಾ ಮಹತ್ತಿನ ಮಠಕ್ಕೆ ೬೧ ವರಹಗಳಿಗೆ ಚಿಕ್ಕೋಡ ಎಂಬ ಹಳ್ಳಿಯನ್ನು ದಾನ ಮಾಡಿದ ಬಗ್ಗೆ ಮತ್ತು ಹೆಬ್ಬಯಲು ಸೀಮೆಯ ಜಡ್ಡಿನಕೊಪ್ಪದಲ್ಲಿ ಭೂ ವಿಕ್ರಯವನ್ನು ವಿಶದೀಕರಿಸುತ್ತವೆ.[೧೧೧]

ವೀರಭದ್ರ ನಾಯಕನು ಆದಿಮಲೆ ಸೀಮೆಯ ಬಿಚ್ಚಹಳ್ಳಿಯಲ್ಲಿ ೭೪ ವರಹಗಳು, ಒಂದು ಹಣ, ಮೂರು ಹಾಗಗಳಿಗೆ ಬಸುರೂರಿನ ಮಹಂತನ ಮಠಕ್ಕೆ ನೀಡಿದ ಬಗ್ಗೆ ದಾನದ ಕವಲೇದುರ್ಗ ಶಾಸನವೊಂದು ತಿಳಿಸುವುದು.[೧೧೨]

ವೀರಭದ್ರ ನಾಯಕನು ಮಠಗಳಿಗೆ ಭೂದಾನ ನೀಡಿದ ವಿವರಣೆಯನ್ನು ತೂದೂರು ಮತ್ತು ಕವಲೇದುರ್ಗ ಶಾಸನಗಳು ವಿವರಿಸುತ್ತಾ ಲಿಂಗಾಯತ ಮಠಗಳಿಗೆ ಹೇರೆತ್ತುಗಳ ಮೂಲಕ ಸಾಗಿಸುವ ಸಾಮಾನು ಸರಂಜಾಮುಗಳ ಮೇಲಿನ ಸಾಗಣೆ ಸುಂಕವನ್ನು ಮನ್ನಾ ಮಾಡಿದುದರ ಬಗ್ಗೆ, ಗಾಜನೂರು ಸೀಮೆಯ ಪುರದಾಳು ಮತ್ತು ಹುಲಿಕಟ್ಟೆ ಹಳ್ಳಿಗಳನ್ನು ನೂರು ವರಹಗಳಿಗೆ ನೀಡಿದ ಭೂದಾನದ ವಿವರಣೆ ಹಾಗೂ ಸಿದ್ಧಲಿಂಗಣ್ಣ ಮಹಂತನ ಮಠಕ್ಕೆ ಸಮೀಪದ ಸಂಗಮೇಶ್ವರ ಕೆರೆಯನ್ನು ಕಟ್ಟಿದ್ದು ೪೨ ವರಹಗಳಿಗೆ ಮಸರೂರು ಸೀಮೆಯ ಕೆಲವು ಹಳ್ಳಿಗಳನ್ನು ಭೂದಾನ ಮಾಡಿದ್ದುದರ ಬಗ್ಗೆ ವಿವರಿಸುತ್ತದೆ, ಶೃಂಗೇರಿಯ ೩೬ನೇ ಶಾಸನವು (ಕ್ರಿ.ಶ. ೧೬೨೯) ವೀರಭದ್ರ ನಾಯಕ ಶೃಂಗೇರಿಯ ಮಠಕ್ಕೆ ನೀಡಿದ ದಾನಗಳನ್ನು ತಿಳಿಸುತ್ತದೆ.[೧೧೩]

ಶಿವಪ್ಪ ನಾಯಕ (ಕ್ರಿ.ಶ. ೧೬೪೫ - ಕ್ರಿ.ಶ. ೧೬೬೦)

ಕೆಳದಿ ಅರಸರಲ್ಲಿ ದಕ್ಷನು, ಪರಾಕ್ರಮಶಾಲಿಯೂ ಆಗಿದ್ದವನೆಂದರೆ ಶಿವಪ್ಪ ನಾಯಕ. ಇವನ ಆಳ್ವಿಕೆಯ ಕಾಲದಲ್ಲಿ ಕೆಳದಿ ಅರಸರ ಕೀರ್ತಿ ದಶದಿಕ್ಕುಗಳಲ್ಲಿ ಹರಡಿತ್ತು. ಈತ ಅಧಿಕಾರ ರೂಢನಾಗುವುದಕ್ಕೆ ಮೊದಲೇ ರಾಜ್ಯದ ವ್ಯವಹಾರಗಳಲ್ಲಿ ಅನುಭವವುಳ್ಳವನಾಗಿದ್ದ. ಶತ್ರುಗಳನ್ನು ಸದೆಬಡಿದು ತುರುವೆಕೆರೆ, ಚನ್ನರಾಯಪಟ್ಟಣ, ಹೊಳೆನರಸೀಪುರ, ಹಾಸನ, ಕಡೂರು, ಸಕ್ಕರೆಪಟ್ಟಣ, ಬೆಳಗುತ್ತಿ, ಬನವಾಸಿ, ಸೊರಬ, ಉಡಗಣಿ, ಮಲಬಾರು ಪ್ರದೇಶಗಳನ್ನು ವಶಪಡಿಸಿ ಕೊಂಡು ಕರಾವಳಿ ತೀರದಲ್ಲಿದ್ದ ಪೋರ್ಚುಗೀಸರು, ಡಚ್ಚರು ಮತ್ತು ಇಂಗ್ಲೀಷರನ್ನು ಸೋಲಿಸಿ ಮಂಗಳೂರು, ಕುಂದಾಪುರ, ಗಂಗೊಳ್ಳಿ, ಹೊನ್ನಾವರ ಪ್ರದೇಶಗಳನ್ನು ಆಕ್ರಮಿಸಿಕೊಂಡನು. ಗೋಲ್ಕಂಡದ ನವಾಬನಿಂದ ಸೋಲನ್ನನುಭವಿಸಿದ ವಿಜಯನಗರದ ಅರಸ ಶ್ರೀರಂಗರಾಯ ಶಿವಪ್ಪ ನಾಯಕನ ಆಶ್ರಯ ಬಯಸಿದುದು ಅವನ ಖ್ಯಾತಿಗೆ ಸಾಕ್ಷಿಯಾಗಿದೆ. ಅಂತಹ ಸನ್ನಿವೇಶದಲ್ಲಿ ಶ್ರೀ ರಂಗರಾಯನಿಗೆ ಆಶ್ರಯ ನೀಡಿ ಅವನಿಗೆ ಸಕ್ಕರೆಪಟ್ಟಣದ ಅಧಿಪತ್ಯವಿತ್ತು ಗೌರವಿಸಿದುದು ಇಲ್ಲಿ ಸ್ಮರಿಸುವಂತಹುದಾಗಿದೆ.

ಬೇಲೂರು ಕದನದಲ್ಲಿ ಮೈಸೂರಿನ ಸೈನ್ಯ ಶಿವಪ್ಪ ನಾಯಕನಿಗೆ ಕೊಟ್ಟ ಕಿರುಕುಳದ ಪ್ರತೀಕಾರಕ್ಕಾಗಿ ಶಿವಪ್ಪ ನಾಯಕ ಮೈಸೂರಿನ ಮೇಲೆ ಯುದ್ಧ ಸಾರಿದ. ಇವನನ್ನು ತಡೆಯುವ ಪ್ರಯತ್ನ ಮಾಡಿದ ದೇವರಾಜ ಒಡೆಯರು ಹಂಪರಾಜಯ್ಯನ ನೇತೃತ್ವದಲ್ಲಿ ಸೈನ್ಯ ಕಳುಹಿಸಿದರು. ಆದರೆ ಯುದ್ಧದಲ್ಲಿ ಮೈಸೂರು ಸೈನ್ಯ ಸೋತು ಪಲಾಯನ ಮಾಡಿತು. ಹೀಗೆ ಮುಂದುವರೆದು ಅವನು ಶ್ರೀರಂಗಪಟ್ಟಣವನ್ನು ಮುತ್ತಿದನು. ಆದರೆ ಅನಾರೋಗ್ಯ ನಿಮಿತ್ತ ಆಕ್ರಮಣವನ್ನು ಮೊಟಕುಗೊಳಿಸಿ ರಾಜಧಾನಿಗೆ ಹಿಂದಿರುಗಿದನು.

ಶಿವಪ್ಪನಾಯಕನ ರಾಜ್ಯ ಪಶ್ಚಿಮದಲ್ಲಿ ಅರಬ್ಬೀ ಸಮುದ್ರದ ತೀರ, ಪೂರ್ವದಲ್ಲಿ ಚಿತ್ರದುರ್ಗ, ಉತ್ತರದಲ್ಲಿ ಬಿಜಾಪುರ, ದಕ್ಷಿಣದಲ್ಲಿ ಶ್ರೀರಂಗಪಟ್ಟಣದವರೆಗೂ ವಿಸ್ತರಿಸಿತ್ತು.

ಶಿವಪ್ಪ ನಾಯಕನ ಭೂ ಕಂದಾಯ ಪದ್ಧತಿ (ಶಿಸ್ತು)

ಇವನು ಭೂಕಂದಾಯ ಸುಧಾರಣೆಯಲ್ಲಿ ಒಂದು ಹೊಸ ಮಾರ್ಪಾಡನ್ನು ತಂದನು. ಇವನಿಗಿಂತ ಮುನ್ನ ಭೂಕಂದಾಯ ಅರ್ಧದಷ್ಟು ನಿಗದಿಯಾಗಿದ್ದಿತು. ರಾಜ್ಯಾಡಳಿತ ಮತ್ತು ಯುದ್ಧ ವೆಚ್ಚಗಳನ್ನು ಸರಿದೂಗಿಸಲು ಕಂದಾಯ ವ್ಯವಸ್ಥೆಯಲ್ಲಿ ಹೊಸ ಮಾರ್ಪಾಡನ್ನು ಜಾರಿಗೊಳಿಸಿದನು. ಕಂದಾಯದ ಸುಧಾರಣೆ ವಾಸ್ತವಿಕವು, ವೈಜ್ಞಾನಿಕವೂ ಆಗಿದ್ದು, ತೋದರಮಲ್ಲನ ಪ್ರಯೋಗದಂತೆ ಸರ್ವ ರೈತರಿಗೆ ಒಪ್ಪಿಗೆಯಾಗುವಂತೆ ಇದ್ದಿತು.

ಕಂದಾಯ ವಿಧಿಸುವ ಮುನ್ನ ಪ್ರತಿಯೊಂದು ಹಳ್ಳಿಯಲ್ಲೂ ಹೊಲವೊಂದನ್ನು ಆರಿಸಿ ಸರ್ಕಾರದ ವೆಚ್ಚದಲ್ಲಿ ಸಾಗುವಳಿ ಮಾಡಿಸಿದನು. ಅಧಿಕಾರಿಗಳು ಬಿತ್ತನೆ ಬೀಜ, ಉಳುಮೆ, ಗೊಬ್ಬರ, ಕೂಲಿ ಮೊದಲಾದ ಖರ್ಚುಗಳ ಲೆಕ್ಕವನ್ನಿಟ್ಟು ಉತ್ಪನ್ನದ ಆಧಾರದ ಮೇಲೆ ಭೂಕಂದಾಯವನ್ನು ನಿಷ್ಕರ್ಷಿಸುವ ಕ್ರಮವನ್ನು ಜಾರಿಗೆ ತಂದನು. ಈ ರೀತಿ ಕೆಲವು ಕಡೆ ಐದು ವರ್ಷಗಳ ಕಾಲ, ಇನ್ನೂ ಕೆಲವು ಕಡೆ ಹನ್ನೆರಡು ವರ್ಷಗಳ ಕಾಲ ಐದು ಬಗೆಯ ಹೊಲಗಳಲ್ಲಿ ವ್ಯವಸಾಯ ಮಾಡಿಸಿದನು. ಅವುಗಳ ವರ್ಗೀಕರಣ ಈ ರೀತಿ ಇದೆ

೧. ಉತ್ತಮ ಭೂಮಿ　　೨. ಮಧ್ಯಮ ಭೂಮಿ

೩. ಕನಿಷ್ಠ ಭೂಮಿ　　೪. ಅಧಮ ಭೂಮಿ

೫. ಅಧಮಾಧಮ ಭೂಮಿ

ಈ ವರ್ಗಗಳಲ್ಲಿ ಮಾದರಿ ಕ್ಷೇತ್ರಗಳನ್ನು ಸರ್ಕಾರದಿಂದ ನಿಯುಕ್ತರಾದ ಅಧಿಕಾರಿಗಳೇ ಖುದ್ದು ೫–೧೨ ವರ್ಷ ವ್ಯವಸಾಯ ಮಾಡಿಸಿ, ಆದಾಯ ಮತ್ತು ಮಾರುಕಟ್ಟೆ ಬೆಲೆಗಳನ್ನು ಸರಾಸರಿಯಲ್ಲಿ ಪರಿಗಣಿಸಿ ಭೂಕಂದಾಯವನ್ನು ನಿಗದಿಪಡಿಸಲಾಯಿತು. ೧ ಖಂಡುಗ ಭತ್ತಕ್ಕೆ ೧ ಹಣ ತೆರಿಗೆಯಂತೆ ಲೆಕ್ಕ ಹಾಕಲಾಯಿತು.

ಅಡಿಕೆ, ತೆಂಗು ಮೊದಲಾದ ತೋಟಗಳನ್ನು ೫–೧೨ ವರ್ಷಗಳ ಕಾಲ ಮಾದರಿ ರೀತಿಯ ಸಾಗುವಳಿ ಮಾಡಿಸಿ ಸರಾಸರಿ ಉತ್ಪನ್ನವನ್ನು ಗಣನೆಗೆ ತೆಗೆದುಕೊಂಡು ತೆರಿಗೆ ನಿಷ್ಕರ್ಷ ಮಾಡಿದನು. ಕಂದಾಯ ನಿಗದಿಯಲ್ಲಿ ಒಂದು ಸಾವಿರ ಅಡಿಕೆ ಮರಗಳನ್ನು ಒಂದು ಘಟಕವಾಗಿ ಪರಿಗಣಿಸಲಾಯಿತು. ಹೆಚ್ಚಿನ ಇಳುವರಿ ಪಡೆಯಬೇಕಾದರೆ ಮರಗಳ ನಡುವಿನ ಅಂತರ ಹದಿನೆಂಟುವರೆ ಅಡಿ ಇರಬೇಕೆಂಬ ಅನುಭವದ ಮೇಲೆ ಆಜ್ಞೆ ಹೊರಡಿಸಿದನು. ಇಕ್ಕೇರಿಯ ಅಘೋರೇಶ್ವರ ದೇವಾಲಯದ ಮೆಟ್ಟಿಲ ಉದ್ದವೇ ಅಳತೆಯ ಮಾಪನ ಎಂಬುದಾಗಿ ಕೆಳದಿಯ ಗುಂಡಾ ಜೋಯಿಸರು ಅಭಿಪ್ರಾಯಪಟ್ಟಿದ್ದಾರೆ. ೧೦೦೦ ಗಿಡಗಳಿಗೆ ೭–೨೫

ವರಹ ತೆರಿಗೆ ವಿಧಿಸಲಾಗಿತ್ತು. ಇವನ ಕಂದಾಯ ಸುಧಾರಣೆಯನ್ನು 'ಶಿವಪ್ಪ ನಾಯಕನ ಶಿಸ್ತು' ಎಂದು ಕರೆಯಲಾಗಿದೆ. ಇವನು ರೈತರ ಹಿತಾಸಕ್ತಿಯನ್ನು ಕಾಪಾಡಿದನು.

ಕಾವೇರಿ ನದಿಗೆ ಒಂದು ಸೇತುವೆಯನ್ನು ನಿರ್ಮಿಸಿದನು. ಬ್ರಾಹ್ಮಣರಿಗೆ ಶಿವರಾಜಪುರ ಎಂಬ ಅಗ್ರಹಾರವನ್ನು ಬಿಟ್ಟುಕೊಟ್ಟನು. ಶೃಂಗೇರಿ ಪೀಠಕ್ಕೆ ಅಪಾರ ದಾನ ಮತ್ತು ಆಶ್ರಯ ನೀಡಿದ್ದನು. ಕೆಳದಿಯ ಮಹಂತಿನ ಮಠ ಮತ್ತು ಆನಂದಪುರದ ಜಂಗಮ ಮಠಗಳು ಇವನ ಉದಾರ ಆಶ್ರಯ ಪಡೆದಿದ್ದವು. ಇವನ ನಂತರ ಇವನ ಸಹೋದರ ಎರಡನೇ ವೆಂಕಪ್ಪ ನಾಯಕ ಸಿಂಹಾಸನವನ್ನೇರಿದನು.

ವಿದ್ಯಾರಣ್ಯಪುರ ಶಾಸನವು ಶಿವಪ್ಪ ನಾಯಕನ ಕಾಲಕ್ಕೆ ಸೇರಿದ್ದು, ಇವನು ಶೃಂಗೇರಿ ಮಠದ ವಿಷಯದಲ್ಲಿ ತೆಗೆದುಕೊಂಡಿದ್ದ ಆಸಕ್ತಿಯನ್ನು ತೋರಿಸುವುದಲ್ಲದೆ ಕೆಲವು ದಾನಗಳನ್ನು ಉಲ್ಲೇಖಿಸುತ್ತದೆ.[೧೧೪]

ಕವಲೇದುರ್ಗ ಶಾಸನದಲ್ಲಿ ಶಿವಪ್ಪನಾಯಕನು ಆದಿಮಲೆ ಸೀಮೆಯ ನಡುಗಟ್ಟದ ಬಾಗಿಮನೆ ಹಳ್ಳಿಯಲ್ಲಿ ೫೬ ವರಹಗಳಿಗೆ ೩ ಹಣಗಳಿಗೆ ೧ ಹಾಗ ಮತ್ತು ೧ ಬಿಲೆ ಹೊಸಂಗಡಿಯಲ್ಲಿ ಚನ್ನಣ್ಣನು ಕಟ್ಟಿಸಿ ಮಹಂತಿನ ಮಠದ ಧರ್ಮಕ್ಕೆ ಕೊಟ್ಟ ದಾನದ ಕ್ರಮವನ್ನು ಕವಲೇದುರ್ಗದ ಶಾಸನವೊಂದು ವಿವರಿಸುತ್ತದೆ.[೧೧೫]

ಭದ್ರಪ್ಪ ನಾಯಕ, ಕ್ರಿ.ಶ. ೧೬೦೧ – ೧೬೬೩

ಇವನು ಶಿವಪ್ಪನಾಯಕನ ಮಗ. ಕಾಸರವಳ್ಳಿ ಶಾಸನದಲ್ಲಿ ಶಿವಪ್ಪ ನಾಯಕನ ಮೊದಲನೆ ಪುಣ್ಯ ತಿಥಿಯಂದು ಬಿದನೂರಿನ ವಿಠಲದೇವ ಮತ್ತು ನೀಲಕಂಠದೇವರ ಅಮೃತ ಪಡಿಗೆ ಮತ್ತು ನಂದಾದೀಪಕ್ಕಾಗಿ ವೆಂಕಟಾದ್ರಿ ಭಟ್ಟನಿಗೆ ಭದ್ರಪ್ಪ ನಾಯಕ ನೀಡಿದ ಭೂದಾನದ ವಿವರಣೆ ಇದೆ.[೧೧೬] ಜೆನಿ ಸೀಮೆಯಲ್ಲಿ ಕಕ್ಕಿನ ಕಾಲಗ್ರಾಮದಿಂದ ಹೇರೂರ ಗವಿ ಕರಿಬಸವ ದೇವರಿಗೆ ಸಲ್ಲುವ ಧರ್ಮಶಾಸನದ ಕ್ರಮದ ಬಗ್ಗೆ ಕವಲೇದುರ್ಗ ಶಾಸನವು ತಿಳಿಸುತ್ತದೆ.[೧೧೭]

ಇದೇ ಸ್ಥಳದ ಇನ್ನೊಂದು ಶಾಸನವು ಆರುನಾಡು ಸೀಮೆಯ ಒಳಗಣ ಕುಮ್ಮಟ ಸೀಮೆಯ ಕಡುಗೆರೆ ಹಳ್ಳಿಯಲ್ಲಿನ ಮಹಂತಿನ ಮಠಕ್ಕೆ ದಾನಮಾಡಿದ ವಿವರ ಹಾಗೂ ನರ್ತಕಿಯಾದ ಶಿವಲಿಂಗಿಯ ಕೋರಿಕೆಯ ಮೇರೆಗೆ ಭೂದಾನ ಮಾಡಿದಕ್ಕೆ ಅದಕ್ಕೆ ಪ್ರತಿಫಲವಾಗಿ ಆಕೆ ಅರಮನೆಗೆ ೩.೨೦ ವರಹಗಳನ್ನು ನೀಡಿದಳು ಎಂದಿದೆ.[೧೧೮]

ತೀರ್ಥಮುತ್ತೂರು ಶಾಸನದಲ್ಲಿ ಭದ್ರಪ್ಪ ನಾಯಕನು ತೀರ್ಥಮುತ್ತೂರು ಮಠದ ಜ್ಞಾನೇಂದ್ರ ಭಾರತೀ ಸ್ವಾಮಿಗಳ ಅಮೃತ ಪಡಿಗೆ ದಾನ ನೀಡಿದ ಉಲ್ಲೇಖವಿದೆ.[೧೧೯]

ಸೋಮಶೇಖರ ನಾಯಕ (ಕ್ರಿ.ಶ. ೧೬೬೩–ಕ್ರಿ.ಶ. ೧೬೭೧)

ಇವನು ಶಿವಪ್ಪ ನಾಯಕನ ಪುತ್ರ. ಇವನು ದುಷ್ಟರ ಸಹವಾಸದಲ್ಲಿ ಸೇರಿ ಕೊನೆಗೆ ಅವರಿಂದಲೇ ಜನರಲ್ಲಿ ಅಪ್ರಿಯನಾಗಿ ಕೊಲೆಯಾದನೆಂದು ತಿಳಿದುಬರುತ್ತದೆ. ಇವನ ರಾಣಿಯೇ

ಬಿದನೂರಿನ ಚೆನ್ನಮ್ಮಾಜಿ. ಸೋಮಶೇಖರ ನಾಯಕನನ್ನು ಉಲ್ಲೇಖಿಸುವ ಶಾಸನಗಳು ಮಹತ್ತಿನಮಠ, ಅಗ್ರಹಾರ, ದೇವಾಲಯ ಮತ್ತು ಮಹಾಜನಗಳಿಗೆ ನೀಡಿದ ದಾನದ ವಿವರಣೆಯನ್ನು ಒಳಗೊಂಡಿವೆ. ತೀರ್ಥಹಳ್ಳಿಯ ಕವಲೇದುರ್ಗ ಶಾಸನದಲ್ಲಿ ಸೋಮಶೇಖರ ನಾಯಕನು ಹೊಂಬುಜ ಸೀಮೆಯ ಸುಣ್ಣಬಸ್ತಿಯ ಸಿದ್ದಪುರದಲ್ಲಿ ಸಿದ್ಧಮ್ಮಾಜಿಯವರು ಕಟ್ಟಿಸಿದ ಮಹಂತಿನ ಮಠಕ್ಕೆ ದಾನ ನೀಡಿದ ವಿವರಗಳಿವೆ.[೧೨೦]

ಇಲ್ಲಿನ ಮತ್ತೊಂದು ಶಾಸನದಲ್ಲಿ ವಸುಧಾರೆ ಹೋಬಳಿ ಹಳೆ ಜೆವಣಿಗೆ ಸೀಮೆಯೊಳಗೆ ಕಬ್ಬಿನ ಹಳ್ಳಿ ಗ್ರಾಮದಿಂದ ಮಹಂತಿನ ಮಠವಾದ ಪಡುವಳ್ಳಿಗೆ ನೀಡಿದ ದಾನದ ವಿಷಯವಿದೆ.[೧೨೧]

ಕ್ರಿ.ಶ. ೧೬೬೪ರ ಶಾಸನದಲ್ಲಿ ಸೋಮಶೇಖರ ನಾಯಕನು ಆರಗದ ಮಹಂತಿನ ಮಠಕ್ಕೆ ಸಲ್ಲಿಸಿದ ಹಿರಣ್ಯ ಗರ್ಭದಾನ ಮತ್ತು ಮದುವಂಕ ನಾಡಿನ ಜಂಬೆ ಪಟ್ಟಡಿಯ ಮರಗಳಲೆಯನ್ನು ೩೬ ವರಹಗಳಿಗೆ ನೀಡಿದ ಭೂಮಿಯ ದಾನದ ವಿವರಣೆಯಿದೆ.[೧೨೨]

ಕ್ರಿ.ಶ. ೧೬೬೪ರ ಮತ್ತೊಂದು ಶಾಸನದಲ್ಲಿ ಸೋಮಶೇಖರ ನಾಯಕನ ಧರ್ಮಶಾಸನವೆಂದರೆ ಶಿವಪ್ಪ ನಾಯಕ ಅಯ್ಯನವರಿಗೆ ಶಾಶ್ವತ ಶಿವಲೋಕ ನಿವಾಸವಾಗಿರಬೇಕು. ಅವನ ಸಹೋದರರಾದ ವೆಂಕಟಪ್ಪ ನಾಯಕ ಪರವಾಗಿ ನೀಡಿದ ದಾನದ ಕ್ರಮ ಎಂದಿದೆ.[೧೨೩]

ಕೊಳವಳ್ಳಿ ಶಾಸನದಲ್ಲಿ ತುಂಗಾಭದ್ರ ನದಿ ದಡದ ಮೇಲೆ ಮುನಿವೃಂದ ಭೀಮೇಶ್ವರ ದೇವರ ಸನ್ನಿಧಿಯಲ್ಲಿ ಅಗ್ರಹಾರವನ್ನು ನಿರ್ಮಿಸಿದ್ದು, ಶಂಕರನಾರಾಯಣ ದೇವಸ್ಥಾನದ ಖರ್ಚಿಗಾಗಿ ಭೂದಾನ ಮಾಡಿದ ವಿವರಣೆ ಇದೆ.[೧೨೪]

ತೂದೂರು ಶಾಸನದಲ್ಲಿ ತೂದೂರಿನಲ್ಲಿ ತುಂಗಭದ್ರ ನದಿಯ ದಡದ ಮೇಲೆ ಶಿವಪ್ಪ ನಾಯಕನ ಹೆಸರಿನಲ್ಲಿ ಶಿವರಾಜಪುರ ಅಗ್ರಹಾರ ನಿರ್ಮಿಸಿದ್ದ ಬಗ್ಗೆ ಉಲ್ಲೇಖವಿದೆ.[೧೨೫]

ಕವಲೇದುರ್ಗ ಶಾಸನದಲ್ಲಿ ಸೋಮಶೇಖರ ನಾಯಕನು ಕೊಟ್ಟ ದಾನವೆಂದರೆ ಉಡುಚಬೋವನ ಮಗ ಹೊಸೂರಬೋವಗೆ ಕೆಳದಿ ಸೀಮೆಯಲ್ಲಿ ಉಂಬಳಿಯಾಗಿ ಕೊಟ್ಟಿದ್ದಲ್ಲಿ ಆತನು ಸದಾಶಿವ ಸಾಗರದಲ್ಲಿ ವಶೀಕೃತ ಮಠವ ಕಟ್ಟಿಸಿಕೊಟ್ಟು ದಾನಧರ್ಮವನ್ನು ಪಾಲಿಸಬೇಕೆಂದಿದೆ.[೧೨೬]

ಶಿವರಾಜಪುರ ಶಾಸನವು ಸುದೀರ್ಘವಾಗಿದ್ದು, ೪೩೮ ಸಾಲುಗಳನ್ನು ಒಳಗೊಂಡಿದೆ. ಸೋಮಶೇಖರ ನಾಯಕನು ಶಿವರಾಜಪುರದ ಅನೇಕ ಮಹಾಜನಗಳಿಗೆ ಭೂದಾನ ಮಾಡಿದ ಹಾಗೂ ದೇವಾಲಯಗಳ ನಿರ್ವಹಣೆ ಮಾಡಿದ ಬಗ್ಗೆ ಉಲ್ಲೇಖವಿದೆ.[೧೨೭]

ಕ್ರಿ.ಶ. ೧೬೬೬ರ ಶಾಸನದಲ್ಲಿ ಮಹಂತಿನ ಮಠಕ್ಕೆ ಘಂಟೆ ಅಮ್ಮಾಜಿಯವರು ಕೊಟ್ಟ ಧರ್ಮಶಾಸನದಲ್ಲಿ ತಮ್ಮ ತಂದೆಯವರು ತನ್ನನ್ನು ಭದ್ರಪ್ಪ ನಾಯಕರಿಗೆ ಮದುವೆಯಲ್ಲಿ ಧಾರೆಯೆರೆದು ನಜೂರು, ಅರಂದೂರು ಗ್ರಾಮವನ್ನು ಬಿಟ್ಟುಕೊಟ್ಟರು. ಇದರಿಂದ ಬೀಳಿಗಿ ಮತ್ತು ಕೆಳದಿಯ ನಡುವೆ ಉತ್ತಮ ಬಾಂಧವ್ಯ ಏರ್ಪಟ್ಟಿತ್ತು ಎಂದಿದೆ.[೧೨೮]

ಮುಳಬಾಗಿಲು ಶಾಸನದಲ್ಲಿ ಸೋಮಶೇಖರ ನಾಯಕನ ಭೂದಾನದ ವಿವರಣೆ ಇದೆ. ತುಂಗಭದ್ರ ನದಿಯ ದಡದ ಮೇಲಿನ ಮುನಿವೃಂದಾಪುರದ ಸಚ್ಚಿದಾನಂದ ಸ್ವಾಮಿಗಳಿಗೆ ಸೋಮಶೇಖರ ನಾಯಕನು ನೀಡಿದ ದಾನದ ಬಗ್ಗೆ ಉಲ್ಲೇಖವಿದೆ.[೧೨೯]

ಕ್ರಿ.ಶ. ೧೬೬೮ರ ಶಾಸನದಲ್ಲಿ ಸೋಮಶೇಖರ ನಾಯಕನು ಪಟ್ಟಗುಪ್ಪೆ ಸೀಮೆಯೊಳಗಣ ಜಂಬವಳ್ಳಿ ಗ್ರಾಮದಲ್ಲಿ ಹೊಳೆಯಮ್ಮ ಕಟ್ಟಿಸಿದ ಕೆರೆಯಿಂದ ಮಹಂತನ ಮಠಕ್ಕೆ ಸಲ್ಲುವ ಭೂದಾನದ ವಿವರಣೆ ಮತ್ತು ೫ ಹೇರೆತ್ತುಗಳ ಮೂಲಕ ಸಾಗಿಸುವ ಸಾಮಾನು ಸರಂಜಾಮುಗಳ ಮೇಲಿನ ಸಾಗಾಣಿಕೆ ಸುಂಕವನ್ನು ಮನ್ನಾ ಮಾಡಿದ ವಿವರಣೆ ಇದೆ.[೧೩೦]

ಕವಲೇದುರ್ಗ (ಕ್ರಿ.ಶ. ೧೬೬೯) ಶಾಸನದಲ್ಲಿ ಸೋಮಶೇಖರ ನಾಯಕನು ದಾನಿವಾಸ ಸೀಮೆಯ ಎಡೆಹಳ್ಳಿ ವೆಂಕಟಯ್ಯನು ಕಟ್ಟಿಸಿದ ಮಹಂತನ ಮಠಕ್ಕೆ ನೀಡಿದ ದಾನದ ಉಲ್ಲೇಖವಿದೆ.[೧೩೧]

ಕವಲೇದುರ್ಗ (ಕ್ರಿ.ಶ. ೧೬೭೧) ಶಾಸನದಲ್ಲಿ ಹುಜೂರ ಮೇಳದ ಪುಟ್ಟತಾಯಿ ಜಮಖಂಡಿ ಚೆನ್ನಿಯು ಜೇನಿ ಗ್ರಾಮದಲ್ಲಿ ಕಟ್ಟಿಸಿದ ಮಹಂತನ ಮಠಕ್ಕೆ ದಾನವನ್ನು ಬಿಡಬೇಕೆಂದು ಅರಮನೆಗೆ ಕಾಣಿಕೆಯಾಗಿ ೩೦೦ ವರಹ ಕೊಟ್ಟು ಹೇಳಿಕೊಂಡ ಪ್ರಾರ್ಥನೆ ಎಂದಿದೆ.[೧೩೨]

ಕೆಳದಿ ಚೆನ್ನಮ್ಮಾಜಿ, ಕ್ರಿ.ಶ. ೧೬೭೧ - ಕ್ರಿ.ಶ. ೧೬೯೭

ಪತಿ ಸೋಮಶೇಖರ ನಾಯಕನ ವಿಯೋಗದಿಂದ ಆಘಾತಗೊಂಡಿದ್ದ ರಾಣಿ ಚೆನ್ನಮ್ಮಾಜಿ ಒಮ್ಮೆಗೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ತನ್ನ ಪತಿಯ ಸಾವಿಗೆ ಕಾರಣರಾದವರನ್ನು ಶಿಕ್ಷಿಸುವುದು ಮತ್ತು ರಾಜ್ಯವನ್ನು ಬಿಜಾಪುರ ಸುಲ್ತಾನನಿಂದ ರಕ್ಷಿಸುವುದು ಮುಖ್ಯವಾಗಿದ್ದವು. ಆದರೆ ಬಿಜಾಪುರದ ಸುಲ್ತಾನನೊಡನೆ ಯುಕ್ತಿಯಿಂದ ನಡೆದುಕೊಂಡು ರಾಜ್ಯದ ಗಡಿಯನ್ನು ಬಲಪಡಿಸಿಕೊಂಡಳು. ಇದೇ ಸಮಯದಲ್ಲಿ ಔರಂಗಜೇಬನಿಂದ ತಪ್ಪಿಸಿಕೊಂಡ ಮರಾಠರ ನಾಯಕ ರಾಜಾರಾಮನಿಗೆ ಆಶ್ರಯ ನೀಡಿದ ವೀರಮಹಿಳೆ ಎನಿಸಿಕೊಂಡಳು. ಕೊನೆಗೆ ತನ್ನ ಮೇಲೆ ಎರಗಿಬಂದ ಔರಂಗಜೇಬನನ್ನು ಹಿಮ್ಮೆಟ್ಟಿಸುವಷ್ಟರಮಟ್ಟಿಗೆ ತನ್ನ ಚಿಕ್ಕಸಂಸ್ಥಾನವನ್ನು ಬಲಪಡಿಸಿದ್ದಳು. ಮಕ್ಕಳಿಲ್ಲದ ಚೆನ್ನಮ್ಮಾಜಿ ಕೆಳದಿ ಸಂಸ್ಥಾನದ ಉತ್ತರಾಧಿಕಾರಿ ಯಾಗಿ ಬಸವ ಭೂಪಾಲನನ್ನು ದತ್ತು ತೆಗೆದುಕೊಂಡು ರಾಜ್ಯದ ವ್ಯವಹಾರದಲ್ಲಿ ತರಬೇತಿ ನೀಡಿದಳು. ಧರ್ಮಭೀರುವಾದ ಈಕೆ ಬ್ರಾಹ್ಮಣರಿಗೆ ಅಗ್ರಹಾರಗಳನ್ನು, ಜಂಗಮರಿಗೆ ಮಠಗಳನ್ನು ಕಟ್ಟಿಸಿದ್ದಳು.[೧೩೩] ಕವಲೇದುರ್ಗ ಈ ಕಾಲದ ತಾತ್ಕಾಲಿಕ ರಾಜಧಾನಿಯಾಗಿದ್ದಿತು. ಈಕೆಯ ಕಾಲದ ಪ್ರಮುಖ ಶಾಸನಗಳೆಂದರೆ;

ದೀವರ ಮಳಲಿ ಶಾಸನವು ಶರಾಬುದಾರ ವೀರಯ್ಯನು ಅರಮನೆಗೆ ೫೦೦ ವರಹಗಳನ್ನು ಕೊಟ್ಟು, ದೀವರ ಮಳಲಿ ಗ್ರಾಮವನ್ನು ಕೊಂಡು ಮತ್ತು ದಾನ ನೀಡಿ ಶಿವಾರ್ಪಿತ ಎಂದನು ಎಂಬುದಾಗಿ ವಿವರಿಸುತ್ತದೆ.[೧೩೪]

ಮಳಲಿಮಠ ಶಾಸನದಲ್ಲಿ ಚೆನ್ನಮ್ಮಾಜಿಯ ಉಲ್ಲೇಖವಾಗಿದ್ದು ಹೊಂಬುಜ ಸೀಮೆಯ ಬೀಡೆ ತಮ್ಮಣ ಪಟಡಿಯಲ್ಲಿ ಮಳಲಿ ನಾಗಾರ್ಜುನ ದೇವರಮಠ ಧರ್ಮಕ್ಕೆ ಶರಾಬುದಾರ ವೀರಯ್ಯನು ಅರಮನೆಗೆ ೫೦೦ ವರಹದ ಕ್ರಯ ತೆಗೆದುಕೊಂಡ ವಿವರವನ್ನು ತಿಳಿಸುತ್ತದೆ.[೧೩೫]

ಕವಲೇದುರ್ಗ ಶಾಸನದಲ್ಲಿ ೨೫ ಹೇರೆತ್ತುಗಳ ತೆರಿಗೆಯನ್ನು ಮಾನ್ಯ ಮಾಡಿರುವುದಾಗಿ ಅಡಿಕೆ, ಮೆಣಸು, ಝುಲಿಪಟ್ಟ, ಕೊಬ್ಬರಿ, ಕವಾಡ ಮುಂತಾದ ಗಡಸಿನ ವಸ್ತುಗಳ ಮೇಲಿನ ಸುಂಕವನ್ನು ಹೊರತುಪಡಿಸಿ ಅಕ್ಕಿ, ಭತ್ತ, ರಾಗಿ, ಎಣ್ಣೆ, ತುಪ್ಪ, ಕಾಯಿ, ಬೆಲ್ಲ ಮುಂತಾದ ವಸ್ತುಗಳಿಗೆ ಸುಂಕವನ್ನು ವಿಧಿಸುವುದರ ಉಲ್ಲೇಖವಿದೆ.[೧೩೬]

ಇನ್ನೊಂದು ಶಾಸನದಲ್ಲಿ ಬಿದನೂರಿನಿಂದ ಕುಂಬಾಸಿಗೆ ಹೋಗುವ ಮಾರ್ಗದ ಜೆನಿಯ ಮಹಂತಿನ ಮಠಕ್ಕೆ ಚೆನ್ನಮ್ಮಾಜಿಯವರೂ ಮೇಳದ (ನರ್ತಕಿ) ಪುಟ್ಟತಾಯಿ ಜಮಖಂಡಿ ಸೀಮೆಯ ಮಠಕ್ಕೆ ೫ ಎತ್ತಿನ ಮಾನ್ಯವನ್ನು ಶಿವಾರ್ಪಿತವಾಗಿಬಿಟ್ಟಿದ್ದೇವೆ ಎಂಬ ಉಲ್ಲೇಖವಿದೆ.[೧೩೭]

ತೂದೂರು ಶಾಸನವು ೧೫ ಹೇರೆತ್ತುಗಳ ಮೇಲಿನ ಸುಂಕವನ್ನು ಮನ್ನಾ ಮಾಡಿದ್ದನ್ನು ಉಲ್ಲೇಖಿಸುತ್ತಾ ಚೆನ್ನಮ್ಮಾಜಿಯ ದಾನವನ್ನು ತಿಳಿಸುತ್ತದೆ.[೧೩೮]

ಕವಲೇದುರ್ಗ ಶಾಸನದಲ್ಲಿ ಚೆನ್ನಮ್ಮಾಜಿ ೧೫೨ ವರಹಗಳಿಗೆ ಗಾಜನೂರು ಸೀಮೆಯ ಸಮುದ್ರವಳ್ಳಿ, ಚೋರನಹಾಳು ಮತ್ತು ಯಡೆಹಳ್ಳಿ ಪ್ರದೇಶಗಳನ್ನು ಭೂಕ್ರಯ ಮಾಡಿದ ಪ್ರಸ್ತಾಪವಿದೆ. ಶಿವಮೊಗ್ಗದ ಘಾಣದಾರ ಪಟಣನು ಕಟ್ಟಿಸಿದ ಮಹಂತಿನ ಮಠದ ದಾನದ ಬಗ್ಗೆ ಉಲ್ಲೇಖವಿದೆ.[೧೩೯]

ಕೊನೇರಿಪುರ ಶಾಸನದಲ್ಲಿ ಚೆನ್ನಮ್ಮಾಜಿಯು ಅರಮನೆಗೆ ಕ್ರಯ ತೆಗೆದುಕೊಂಡ ಬಗ್ಗೆ ಉಲ್ಲೇಖ ಮತ್ತು ತುಂಗಾನದಿ ದಂಡೆಯ ಮುಂಡಾಕರ ಹೆದ್ದೂರುಪಾಲನ ಕೊನೇರಿಪುರ ಅಗ್ರಹಾರಕ್ಕೆ ದಾನ ಮಾಡಿದ ಪ್ರಸ್ತಾಪವಿದೆ.[೧೪೦]

ಶಾಸನದಲ್ಲಿ ಚೆನ್ನಮ್ಮಾಜಿಯು ಹೊಸಹಳ್ಳಿ ಮಹಂತಿನ ಮಠಕ್ಕೆ ೨೭ ವರಹಗಳನ್ನು ದಾನಿವಾಸಿ ಸೀಮೆಯ ಹೋಳಿಕೊಪ್ಪವನ್ನು ಭೂದಾನ ಮಾಡಿದ ಪ್ರಸ್ತಾಪವಿದೆ.[೧೪೧]

ಇದೇ ಸ್ಥಳದ ಶಾಸನದಲ್ಲಿ ಆಗುಂಬೆ ಸೀಮೆಯ ಹೊಸುರುಪಾಲ ಕುಂಡಹಳ್ಳಿಯಲ್ಲಿ ೬೯ ವರಹ, ೭ ಹಣ, ಒಂದು ಹಾಗಕ್ಕೆ ಚೆನ್ನಮ್ಮಾಜಿ ಭೂದಾನ ಮಾಡಿದ ವಿವರಣೆ ಇದ್ದು, ರಾಣಿಯ ತಾಯಿ ಪಾರ್ವತಮ್ಮ ಆಗುಂಬೆಯಲ್ಲಿ ಮಹಂತಿನ ಮಠದ ನಿರ್ಮಾಣ ಮಾಡಿದರು ಎಂದಿದ್ದು ದುರ್ಗ ಮತ್ತು ಇಕ್ಕೇರಿಯ ಸುಂಕದಕಟ್ಟೆಯಲ್ಲಿ ೭ ಹೇರತ್ತುಗಳ ಮೇಲಿನ ಸುಂಕವನ್ನು ಮನ್ನಾ ಮಾಡಿದ ಪ್ರಸ್ತಾಪವಿದೆ.[೧೪೨]

ಕೂಡುಗೂಳಿ ಶಾಸನದಲ್ಲಿ ಮಹಾಲಕ್ಷ್ಮಿ ಅವ್ವನ ಪುತ್ರನಾದ ಕರಣಿಕ ಬೊಕ್ಕಸದ ವೆಂಕಪ್ಪಯ್ಯನು ಚನ್ನಕೇಶವ ದೇವರ, ಸೋಮೇಶ್ವರ ದೇವರ, ಹನುಮಂತ ದೇವರ ಪಾದಕ್ಕೆ ಸಮರ್ಪಿಸಿ ಮಾಡಿದ ಅಗ್ರಹಾರ ಎಂದಿದೆ.[೧೪೩]

ಬೊಕ್ಕಸ ಶಾಸನದಲ್ಲಿ ಚೆನ್ನಮ್ಮಾಜಿಯ ಆಳ್ವಿಕೆಯನ್ನು ಉಲ್ಲೇಖಿಸಿದ್ದು ತುಂಗಭದ್ರ ತೀರದ ಆಲುಮನೆ ಸೀಮೆಯ ಬೊಕ್ಕಸ ಶ್ರೀನಿವಾಸನಿಗೆ ಕೊಟ್ಟ ಭೂಶಾಸನವೆಂದರೆ ಅಗ್ರಹಾರದ ವೃತ್ತಿವಂತರು ಕಟ್ಟಿಸಿದ ದೇವರುಗಳ ದೇವತಾ ವೆಚ್ಚಕ್ಕೆ ಕೂಡುಗೂಳಿ ಗ್ರಾಮ ಬಿಟ್ಟ ಉಂಬಳಿ ಎಂದಿದೆ.[೧೪೪]

ಕವಲೇದುರ್ಗ ಶಾಸನದಲ್ಲಿ ಚೆನ್ನಮ್ಮಾಜಿಯವರು ಆರಗದ ದಾಸನಗದ್ದೆಯ ಬಾವಿಕೈದಲ್ಲಿ ವಶೀಕೃತ ಮಠವನ್ನು ಕಟ್ಟಿಸಿಕೊಟ್ಟಿದ್ದ ಗುರು ಲಿಂಗದೇವರಿಗೆ ನೀಡಿದ ಭೂಕ್ರಯ ಶಾಸನದ ಪ್ರಸ್ತಾಪವಿದೆ.[೧೪೫]

ಇಲ್ಲಿನ ಇನ್ನೊಂದು ಶಾಸನದಲ್ಲಿ ಚೆನ್ನಮ್ಮಾಜಿಯವರು ಮನೋಹರದ ಜೆಟಾಶಂಕರ ದೇವರ ಶಿಷ್ಯರು ಕೆಂಪಿನ ಮನೋಹರ ದೇವರಿಗೆ ಬರೆಯಿಸಿಕೊಟ್ಟ ಕ್ರಯ ದಾನದ ಶಾಸನದಲ್ಲಿ ಸಿದ್ದಬಸವಯ್ಯನ ಮಗ ನಂಜಣ್ಣನು ಕೆಂಚವ್ವನ ಹತ್ತಿರ ೩೦೦ ವರಹದ ಸಾಲ ತೆಗೆದುಕೊಂಡು ಅಡವಿ ಹಾಕಿದ ಪ್ರಸ್ತಾಪವಿದೆ.[೧೪೬]

ಕವಲೇದುರ್ಗ ಶಾಸನದಲ್ಲಿ ಹೊಂಬುಜ ಸೀಮೆಯ ನಾಗರಹಳ್ಳಿ ತಿಪ್ಪನ ಪಟ್ಟಡಿ ಹಂದಿ ಗ್ರಾಮದಲ್ಲಿ ಜೆಟಾಶಂಕರದೇವರ ಶಿಷ್ಯರು ಕೆಂಪಿನ ಮನೋಹರ ದೇವರಿಗೆ ಚೆನ್ನಮ್ಮಾಜಿ ನೀಡಿದ ಭೂಕ್ರಯ ದಾನದ ವಿವರಣೆ ಇದೆ.[೧೪೭]

ಕವಲೇದುರ್ಗ ಶಾಸನದಲ್ಲಿ ಕವಲೇದುರ್ಗ ತಿಮ್ಮಣ್ಣನು ಭುವನಗಿರಿದುರ್ಗದಲ್ಲಿ ನಿರ್ಮಿಸಿದ ಮಹತ್ತಿನ ಮಠದ ಪರವಾಗಿ ಕೊಡವೀಸದಲ್ಲಿ ಮಾಡಿದ ದಾನದ ನವೀಕರಣದ ಉಲ್ಲೇಖವಿದೆ.[೧೪೮]

ಕವಲೇದುರ್ಗ ಶಾಸನದಲ್ಲಿ ಚೆನ್ನಮ್ಮಾಜಿಯ ಪ್ರಸ್ತಾಪವಿದ್ದು, ಆರಗದ ಕಂಬಾಳ ಸಿದ್ದರಾಮ ದೇವರ ಶಿಷ್ಯರು ವಿರೂಪಾಕ್ಷ ದೇವರಿಗೆ ೩೦ ಖಂಡುಗದ ನೀರಾವರಿ ಭೂಮಿಯನ್ನು ದಾನ ಮಾಡಿದ ಬಗ್ಗೆ ಉಲ್ಲೇಖವಿದೆ.[೧೪೯]

ಕಿಗ್ಗ ಶಾಸನದಲ್ಲಿ ಚೆನ್ನಮ್ಮಾಜಿಯವರು ಸುಖಸಂತೋಷದಿಂದ ರಾಜ್ಯವಾಳುತ್ತಿರುವ ಕಾಲದಲ್ಲಿ ಪ್ರಧಾನಿ ಗುರುಬಸಪ್ಪ ದೇವರು ಉತ್ಸವ ವಿಗ್ರಹ ಮಾಡಿಸಿ ಕಿಗ್ಗದ ಶೃಂಗೇಶ್ವರ ಸ್ವಾಮಿಗೆ ಸಮರ್ಪಿಸಿದ ಸೇವೆ ಎಂದಿದೆ.[೧೫೦]

ಚೆನ್ನಮ್ಮಾಜಿ ಕವಲೇದುರ್ಗವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮಧ್ಯಮಲೆನಾಡಿನ ಪ್ರದೇಶಗಳಿಗೆ, ಮಠಗಳಿಗೆ, ಬ್ರಾಹ್ಮಣರಿಗೆ, ದೇವಾಲಯಗಳಿಗೆ ದಾನ ಮಾಡಿರುವುದನ್ನು ವಿಶೇಷವಾಗಿ ಕವಲೇದುರ್ಗ ಶಾಸನಗಳು ವಿವರಿಸುತ್ತವೆ.

ಬಸಪ್ಪ ನಾಯಕ: ಕ್ರಿಶ. ೧೬೯೭ - ಕ್ರಿಶ. ೧೭೧೪

ಈತನ ಮತ್ತೊಂದು ಹೆಸರು ಬಸವ ಭೂಪಾಲ. ಇವನು ಮೈಸೂರು ಅರಸರನ್ನು ಸೋಲಿಸಿ ಅವರಿಂದ ಅರಕಲಗೂಡನ್ನು, ಮಲೆಯಾಳದ ನಾಯಕರಿಂದ ಚಂದ್ರಗಿರಿ ಮತ್ತು

ವಸುಧಾರೆ ಕೋಟೆಗಳನ್ನು ಸ್ವಾಧೀನಪಡಿಸಿಕೊಂಡು ರಾಜ್ಯವನ್ನು ವಿಸ್ತರಿಸಿದನು. ಬಿದನೂರಿನ ಮೇಲೆ ದಾಳಿ ಮಾಡಿದ ಸವಣೂರು ನವಾಬನನ್ನು ಸೋಲಿಸಿ ಓಡಿಸಿದನು. ಕ್ರಿ.ಶ.೧೭೦೭ರಲ್ಲಿ ಗೋವೆಯ ವೈಸರಾಯಿಯೊಡನೆ ಶಾಂತಿಯುತ ಒಪ್ಪಂದವನ್ನು ಮಾಡಿಕೊಂಡನು. ಬಸಪ್ಪ ನಾಯಕ ಕಲೆ ಮತ್ತು ಸಾಹಿತ್ಯಾಭಿಮಾನಿಯಾಗಿದ್ದುದಲ್ಲದೆ ಸ್ವತಃ ವಿದ್ವಾಂಸನು ಆಗಿದ್ದು ಶಿವತತ್ವ ರತ್ನಾಕರ, ಸುರದ್ರುಮ, ಸುಕ್ತಿಸುಧಾಕರ ಕೃತಿಗಳನ್ನು ರಚಿಸಿದ ಉಲ್ಲೇಖವಿದೆ. ಕೆಳದಿಯ ವೀರಭದ್ರ ದೇವಸ್ಥಾನದ ನಿರ್ಮಾಣ ಕಾರ್ಯ ಈತನಿಂದ ಪೂರ್ಣಗೊಂಡಿತು.

ಗೋಪಾಲಪುರ ಶಾಸನದಲ್ಲಿ ರಂಗಣ್ಣನ ತಂದೆ ವೆಂಕಪ್ಪನ ಹೆಸರಲ್ಲಿ ಮತ್ತೂರು ಸೀಮೆಯ ಕೆಳಕೇರಿ ಗ್ರಾಮದ ತುಂಗಾನದಿ ತೀರದಲ್ಲಿ ಕಟ್ಟಿಸಿದ ವೆಂಕಟಾಪುರ ಅಗ್ರಹಾರದಲ್ಲಿ ಪ್ರತಿಷ್ಠೆ ಮಾಡಿದ ಲಕ್ಷ್ಮಿನಾರಾಯಣ ದೇವರ ದೇವತಾ ವೆಚ್ಚಕ್ಕೆ ಬಿಟ್ಟಿರುವ ದಾನದ ಉಲ್ಲೇಖವಿದೆ.[೧೫೧]

ಬಸಪ್ಪ ನಾಯಕನು ಅನೇಕ ಶಾಸನಗಳಲ್ಲಿ ಕೆಲವೊಂದು ಊರುಗಳನ್ನು ೬೦ ಅಗ್ರಹಾರಗಳಿಂದ ಬೇರ್ಪಡಿಸಿ, ಹೊಸದಾಗಿ ನಿರ್ಮಿಸಿದ ಅಗ್ರಹಾರಕ್ಕೆ ಆಶೇಷ ವಿದ್ವಾನ ಮಹಾಜನಗಳಿಗೆ ನೀಡಿದ ದಾನದ ವಿವರಣೆಯು, ಕೋಣಂದೂರು, ವೇಮಲಾಪುರ, ಅಕಲಾಪುರ, ಭಾರತೀಪುರ, ವಿರುಪಪುರ ಹಾಗೂ ಹುಂಚದಕಟ್ಟೆ ಶಾಸನಗಳಲ್ಲಿ ಉಲ್ಲೇಖವಾಗಿವೆ.

ತೂದೂರು ಶಾಸನದಲ್ಲಿ ಮಾಳೂರು ಸೀಮೆಯ ತೂದೂರಿನ ತುಂಗಾನದಿ ತೀರದಲ್ಲಿ ಶಿವಪ್ಪ ನಾಯಕನವರ ಹೆಸರಲ್ಲಿ ಕಟ್ಟಿಸಿದ ಶಿವರಾಜಪುರದ ಮಹಂತಿನ ಮಠಕ್ಕೆ ದಾನಿವಾಸ ಸೀಮೆಯ ಕೋಣಕೇರಿ ಪಾಲವನ್ನು ಭೂದಾನ ಮಾಡಿದ ಪ್ರಸ್ತಾಪವಿದೆ.[೧೫೨]

ಕವಲೇದುರ್ಗ ಶಾಸನವು ಬಸಪ್ಪ ನಾಯಕನು ಎರಡು ದಂಡದ ಮಠಕ್ಕೆ ೧೫ ಹೇರೆತ್ತುಗಳ ಮೂಲಕ ಸಾಗಿಸುವ ಸಾಮಾನು ಸರಂಜಾಮುಗಳ ಮೇಲಿನ ಸಾಗಣೆ ಸುಂಕಗಳನ್ನು ಮನ್ನಾ ಮಾಡಿರುವುದನ್ನು ಉಲ್ಲೇಖಿಸುತ್ತದೆ.[೧೫೩]

ಕವಲೇದುರ್ಗ ಶಾಸನದಲ್ಲಿ ಬಿದನೂರಿನಿಂದ ಆರಗಕ್ಕೆ ಹೋಗುವ ಮಾರ್ಗದಲ್ಲಿ ಕೊಡೂರು ಬೊಕ್ಕಸ ಸಿದ್ದಬಸಯ್ಯನ ಹೆಂಡತಿ ವೀರಮ್ಮನು ತನ್ನ ಮಗ ಭದ್ರಯ್ಯನ ಹೆಸರಲ್ಲಿ ಕಟ್ಟಿಸಿದ ಮಹಂತಿನ ಮಠಕ್ಕೆ ದಾನಿವಾಸ ಸೀಮೆಯ ಮಡಬೂರುಪಾಲು ಕುಸುಬೂರಿನಲ್ಲಿ ಭೂದಾನ ನೀಡಿದ ವಿವರಣೆ ಇದೆ.[೧೫೪]

ಕವಲೇದುರ್ಗ ಶಾಸನದಲ್ಲಿ ಮದುವಂಕನಾಡಿನ ಜಂಬೆಪಟ್ಟಡಿಯ ಹಿಸಣ ಗ್ರಾಮವನ್ನು ೭೩೪ ವರಹಗಳಿಗೆ ದಾನ ಮಾಡಿದ ಉಲ್ಲೇಖವಿದೆ ಮತ್ತು ವೀರಮ್ಮಾಜಿಯಿಂದ ನಿರ್ಮಾಣವಾದ ತೀರ್ಥರಾಜಪುರ ಮಠಕ್ಕೆ ರಾಜನ ದಾನ ಹಾಗೂ ಗಾಜನೂರು ಮತ್ತು ಯಡತೊರೆ ಸೀಮೆಯವರು ಎತ್ತು, ಹಸು, ಎಮ್ಮೆ, ಕೋಣಗಳನ್ನು ಬೇರೆ ಕಡೆಯಿಂದ ತರದೆ ತಮ್ಮಲ್ಲಿಯೇ ವಿನಿಮಯ ಮಾಡಿಕೊಳ್ಳಬೇಕೆಂದು ಪ್ರಸ್ತಾಪಿಸುತ್ತದೆ.[೧೫೫]

ಕವಲೇದುರ್ಗ ಶಾಸನವು ೧೫ ಹೇರೆತ್ತಿನ ಮೇಲೆ ಮಠಕ್ಕೆ ಸಾಗಿಸುವ ಸರಕು ಸರಂಜಾಮುಗಳ ಮೇಲಿನ ಸುಂಕವನ್ನು ವಿಧಿಸಬಾರದೆಂಬ ಬಸಪ್ಪ ನಾಯಕ ಆಜ್ಞೆಯನ್ನು ತಿಳಿಸುತ್ತದೆ.[೧೫೬]

ಶಾಸನದಲ್ಲಿ ಶಾಂತವೀರಪ್ಪ ಕಟ್ಟಿಸಿರುವ ಮಹತ್ತಿನ ಮಠಕ್ಕೆ ೨೫ ಹೇರೆತ್ತುಗಳ ಮೂಲಕ ಸಾಗಿಸುವ ಸರಕು ಸರಂಜಾಮುಗಳ ಮೇಲಿನ ಸುಂಕವನ್ನು ಮನ್ನಾ ಮಾಡಿರುವುದು. ಸುಂಕದಕಟ್ಟೆಯ ಮೂಲಕ ಸಾಗುವ ಎತ್ತುಗಳ ಬಣ್ಣ ಮತ್ತು ವಯಸ್ಸನ್ನು ಉಲ್ಲೇಖಿಸುವುದು ಎಂದಿದೆ.[೧೫೭]

ಮಹಿಷಿ ಸತ್ಯನಾಥಪುರ ಶಾಸನದಲ್ಲಿ ಮಹಿಷಿ ಅಗ್ರಹಾರದ ಸಮೀಪ ನರಸಣ್ಣನ ಹೆಸರಿನಲ್ಲಿ ಕಟ್ಟಿಸಿದ ಮುದಗಲ್ಲು ನರಸೀಪುರದ ಅಗ್ರಹಾರದ ಹನುಮಂತ ದೇವರ ದೇವತಾ ವೆಚ್ಚಕ್ಕೆ ನೀಡಿದ ಭೂದಾನದ ವಿವರಣೆ ಇದೆ.[೧೫೮]

ಎರಡನೆಯ ಸೋಮಶೇಖರ ನಾಯಕ (ಕ್ರಿ.ಶ. ೧೭೧೪ - ಕ್ರಿ.ಶ. ೧೭೩೯)

ತಂದೆಯಂತೆ ಈತನೂ ಶೂರನಾಗಿದ್ದನು. ಸವಣೂರು ನವಾಬನು ಇವನೊಡನೆ ಮೈತ್ರಿ ಬೆಳೆಸಿಕೊಂಡಿದ್ದನು. ಆದರೆ ಮೈಸೂರು ಅರಸರು ಇವನ ಶತ್ರುಗಳಾಗಿಯೇ ಉಳಿದು ಅನೇಕ ಯುದ್ಧ ನಡೆಸಿದರು. ಮಲಬಾರಿನಲ್ಲಿ ಪ್ರಬಲವಾಗುತ್ತಿದ್ದ ಈಸ್ಟ್ ಇಂಡಿಯಾ ಕಂಪನಿಯನ್ನು ಎದುರಿಸಿದ. ಕವಲೇದುರ್ಗ ಶಾಸನದಲ್ಲಿ ಅಳವಿಂಡಿ ಕೆಂಚಸಿದ್ದ ದೇವರ ಶಿಷ್ಯರು ನಿರ್ವಾಣ ದೇವರು ಜೆನಿ ಸೀಮೆಯ ಚಿಕ್ಕಮಶಿಗೆ ಗ್ರಾಮದಲ್ಲಿ ಕಟ್ಟಿಸಿದ ವಶೀಕೃತ ಮಠದ ಧರ್ಮಕ್ಕೆ ಭೂದಾನ ಮಾಡಿದ ಉಲ್ಲೇಖವಿದೆ.[೧೫೯]

ಕವಲೇದುರ್ಗ ಶಾಸನದಲ್ಲಿ ಬಿದನೂರಿನಿಂದ ಆರಗಕ್ಕೆ ಹೋಗುವ ಮಾರ್ಗದ ಕೋಡೂರಲ್ಲಿ ಬೊಕ್ಕಸ (ಖಜಾನೆ) ಸಿದ್ದಬಸವಯ್ಯನ ಹೆಂಡತಿ ವೀರಮ್ಮ ತನ್ನ ಮಗ ಭದ್ರಯ್ಯನ ಹೆಸರಲ್ಲಿ ಕಟ್ಟಿಸಿದ ಮಹಂತಿನ ಮಠಕ್ಕೆ ೫ ಹೇರೆತ್ತುಗಳ ಮೂಲಕ ಸಾಗಿಸುವ ಸರಕುಗಳ ಮೇಲಿನ ಸುಂಕವನ್ನು ಮನ್ನಾ ಮಾಡುವ ಬಗ್ಗೆ ವಿವರಣೆ ಇದೆ.[೧೬೦]

ಉದ್ದಬಸವಲಿಂಗ ದೇವರು ಹೊಂಬುಜ ಸೀಮೆಯ ಕಾರಗಲ್ಲಿನಲ್ಲಿ ಕಟ್ಟಿಸಿದ ಮಹಂತಿನ ಮಠಕ್ಕೆ ಸೋಮಶೇಖರ ನಾಯಕ ನೀಡಿದ ಭೂದಾನದ ಪ್ರಸ್ತಾಪ ಕವಲೇದುರ್ಗ ಶಾಸನದಲ್ಲಿದೆ.[೧೬೧]

ತೀರ್ಥಹಳ್ಳಿ ಶಾಸನದಲ್ಲಿ ವೆಂಕಣ್ಣನು ತೀರ್ಥರಾಜಪುರದಿಂದ ಶಿವರಾಜಪುರದ ಅಗ್ರಹಾರಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ಮದುವಂಕ ಸೀಮೆಯ ಬಾಳೆಬಯಲು. ಗ್ರಾಮದ ತುಂಗಾ ನದಿಯ ತೀರದಲ್ಲಿ ಅವನ ತಂದೆ ಕಟ್ಟಿಸಿದ ಲಕ್ಷ್ಮೀಗೋವಿಂದಪುರ ಅಗ್ರಹಾರ ಮತ್ತು ದೇವಸ್ಥಾನವನ್ನು ಕಟ್ಟಿಸಿ ಅಲ್ಲಿನ ದೇವರು ವೆಂಕಟೇಶ್ವರ ದೇವಸ್ಥಾನದ ಖರ್ಚಿಗೆ ಕೊಟ್ಟ ಭೂದಾನದ ವಿವರಣೆ ಇದರಲ್ಲಿದೆ.[೧೬೨]

ತೂದೂರು ಶಾಸನವು ಮಂಡಗದ್ದೆ ಸೀಮೆ ಸಿಂಗನಬಿದರೆ ಗ್ರಾಮದಲ್ಲಿ ಕಟ್ಟಿಸಿದ ಮಹತ್ತಿನ ಮಠಕ್ಕೆ ಸೋಮಶೇಖರ ನಾಯಕ ನೀಡಿದ ಭೂದಾನದ ಉಲ್ಲೇಖವನ್ನು ಹೊಂದಿದೆ.[೧೬೩]

ಇಲ್ಲಿನ ಇನ್ನೊಂದು ಶಾಸನದಲ್ಲಿ ಆದಣ್ಣನು ಮಂಡಗದ್ದೆಯಲ್ಲಿ ಕಟ್ಟಿಸಿದ ಮಹಂತಿನ ಮಠಕ್ಕೆ ಸೋಮಶೇಖರ ನಾಯಕನು ನೀಡಿದ ಭೂದಾನದ ವಿವರಣೆ ಇದೆ.[೧೬೪]

ಬಗ್ಗುಂಜಿ ಶಾಸನದಲ್ಲಿ ಬಗ್ಗುಂಜಿ ಸೀಮೆಯ ಸೀತಾ ನದಿ ತೀರದಲ್ಲಿ ಕೆಂಚವ್ವ ಕಟ್ಟಿಸಿದ ವಿರಕ್ತಮಠಕ್ಕೆ ಸೋಮಶೇಖರ ನಾಯಕನು ನೀಡಿದ ಭೂ ದಾನದ ವಿವರಣೆ ಇದೆ.[೧೬೫]

ಶೃಂಗೇರಿ ಶಾಸನದಲ್ಲಿ ತೀರ್ಥರಾಜಪುರ ನದಿ ಆಚೆಯಲ್ಲಿ ಮುತ್ತೂರು ಸೀಮೆ ಹರಳಿಪಾಲ ಮಳೆಯಾಳ ಮಠದ ಗ್ರಾಮದಲ್ಲಿ ತಮ್ಮ ತಂದೆ ವೆಂಕಟಯ್ಯನು ದೇವಸ್ಥಾನ ಕಟ್ಟಿಸಿ ಪ್ರತಿಷ್ಠೆ ಮಾಡಿದ ಅವಿಮುಕ್ತೇಶ್ವರ ದೇವರು, ಬಿಂದುಮಾಧವ ದೇವರ ದೇವತಾ ವೆಚ್ಚಕ್ಕೆ ಮತ್ತು ಪಕ್ಕದ ಚಂದ್ರಶೇಖರಪುರ ಅಗ್ರಹಾರಕ್ಕೆ ಸೋಮಶೇಖರ ನಾಯಕ ನೀಡಿದ ದಾನದ ವಿವರಣೆ ಇದೆ.[೧೬೬]

ಕೆಳದಿ ಅರಸರು ಮಧ್ಯಮಲೆನಾಡಿನ ಪ್ರದೇಶಗಳಲ್ಲಿ ಸುದೀರ್ಘ ಕಾಲ ಆಳ್ವಿಕೆ ನಡೆಸಿದ್ದು ಕವಲೇದುರ್ಗವನ್ನು ಉಪರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡಿದರು. ಕವಲೇದುರ್ಗದಲ್ಲಿ ಕೆಳದಿ ಅರಸರ ೭೨ ತಾಮ್ರ ಶಾಸನಗಳು ಲಭಿಸಿದ್ದು ಅವರ ರಾಜಕೀಯ ಪ್ರಾಬಲ್ಯವನ್ನು ವ್ಯಕ್ತಪಡಿಸುವುದರ ಮೂಲಕ ಮಠ, ದೇವಾಲಯ ಹಾಗೂ ಅಗ್ರಹಾರಗಳನ್ನು ನಿರ್ಮಿಸಿ ದಾನವನ್ನು ನೀಡಿರುವುದನ್ನು ಪರಿಶೀಲಿಸಿದಾಗ ರಾಜಕೀಯವಾಗಿ ತಮ್ಮ ಶಕ್ತಿಯನ್ನು ವರ್ಧಿಸಿಕೊಳ್ಳುವುದೇ ಆಗಿದ್ದಿತು ಎಂದೆ ಎನಿಸುತ್ತದೆ. ಸೋಮಶೇಖರ ನಾಯಕ, ಚೆನ್ನಮ್ಮಾಜಿ ಹಾಗೂ ಬಸಪ್ಪ ನಾಯಕರು ದಾನ ನೀಡಿದ ಶಾಸನಗಳು ಯಥೇಚ್ಛವಾಗಿ ವಿವರಣೆಯನ್ನು ಒಳಗೊಂಡಿದ್ದು ಈ ಪ್ರದೇಶಗಳಲ್ಲಿ ಅವರು ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬರುವುದೇ ಮುಖ್ಯವಾದ ಅಂಶವಾಗಿತ್ತು ಎಂಬುದನ್ನು ವಿವರಿಸುವಂತಿವೆ. ಕೆಳದಿ ಅರಸರು ತಮ್ಮ ಆರ್ಥಿಕ ಪ್ರಾಬಲ್ಯವನ್ನು ಗಟ್ಟಿ ಮಾಡಿಕೊಳ್ಳುವ ಉದ್ದೇಶದಿಂದ ತಾವು ನಿರ್ಮಿಸಿದ ಮಠಗಳಲ್ಲಿ ವಿಪರೀತವಾಗಿ ದಾನಗಳನ್ನು ನೀಡಿರುವರು.

ತಾವು ನಿರ್ಮಿಸಿದ ಮಹಂತನ ಮಠಗಳಿಗೆ ಹಲವಾರು ಗ್ರಾಮಗಳನ್ನು ದತ್ತಿಯಾಗಿ ನೀಡಿರುವುದನ್ನು ಶಾಸನಗಳಲ್ಲಿ ಗುರುತಿಸಬಹುದು. ಆರ್ಥಿಕ ಸ್ವಾವಲಂಬನೆಯ ಮೂಲಕ ತಮ್ಮ ಧರ್ಮ ಪ್ರಚಾರವೇ ಅವರಿಗೆ ಮುಖ್ಯವಾಗಿ ಕಂಡಿತು.

ಇವರ ಕಾಲದ ಶಾಸನಗಳನ್ನು ಅಧ್ಯಯನ ಮಾಡಿದಾಗ ಪ್ರಧಾನವಾಗಿ ಗುರುತಿಸಬಹುದಾದ ಅಂಶವೆಂದರೆ ವೀರಶೈವ ಧರ್ಮದ ಪ್ರತಿಪಾದನೆ, ಮಠಗಳ ಸ್ಥಾಪನೆ ಮೇಲ್ನೋಟಕ್ಕೆ ಕಂಡು ಬಂದರೂ ಒಳಗೊಳಗೆ ಧಾರ್ಮಿಕತೆಯನ್ನು ಜಾಗೃತಗೊಳಿಸಿ ಆ ಮುಖೇನ ಈ ಪ್ರದೇಶಗಳಲ್ಲಿ ಹಿಡಿತ ಸಾಧಿಸಿ ತಮ್ಮ ಶಕ್ತಿಯನ್ನು ವೃದ್ಧಿಸಿಕೊಳ್ಳುವುದಾಗಿತ್ತು. ಸಮಾಜದಲ್ಲಿ ಹಲವಾರು ವರ್ಗ, ಜಾತಿ ಹಾಗೂ ತಳಸಮುದಾಯದವರು ಬಹುಸಂಖ್ಯಾತರಾಗಿದ್ದರೂ ಅಲ್ಪಸಂಖ್ಯಾತರಾಗಿದ್ದ ಬ್ರಾಹ್ಮಣರು ಮತ್ತು ವೀರಶೈವರಿಗೆ ಪ್ರಾಧಾನ್ಯತೆಯನ್ನು ನೀಡಿದ್ದು ಬಹುಸಂಖ್ಯಾತ ಧರ್ಮಿಯರಿಗಾಗಿ ಮಠ ಹಾಗೂ ದೇವಾಲಯಗಳನ್ನು ಕಟ್ಟಿಕೊಳ್ಳಲು ಪ್ರೋತ್ಸಾಹಿಸದೇ ಇದ್ದುದು ಶಾಸನಗಳಲ್ಲಿ ಅಭಿವ್ಯಕ್ತವಾದ ವಿಚಾರವಾಗಿದ್ದು ಇದು ಅವರ ಕಾಲದ ಧಾರ್ಮಿಕ ವಿಪರ್ಯಾಸವೆಂದೇ ಹೇಳಬಹುದು.

೨.೧.೮. ಮೈಸೂರು ಒಡೆಯರು

ವಿಜಯನಗರ ಸಾಮ್ರಾಜ್ಯ ಪತನದ ನಂತರ ದಕ್ಷಿಣ ಭಾರತದಲ್ಲಿ ಅನೇಕ ಸಣ್ಣಪುಟ್ಟ ರಾಜ್ಯಗಳು ತಲೆ ಎತ್ತಿದವು. ಕರ್ನಾಟಕದಲ್ಲಿ ಏಳಿಗೆಗೆ ಬಂದ ರಾಜ್ಯಗಳಲ್ಲಿ ಮೈಸೂರು ಸಂಸ್ಥಾನವು ಪ್ರಮುಖವಾದುದು. ಮೈಸೂರಿನಲ್ಲಿ ೧೬ನೇ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದ ಒಡೆಯರ ಮನೆತನದ ಅರಸರು ತಮ್ಮದೇ ಆದ ವಿಶಿಷ್ಟ ಇತಿಹಾಸವನ್ನು ಹೊಂದಿದ್ದಾರೆ. ಸುಮಾರು ೫ ಶತಮಾನಕ್ಕೂ ದೀರ್ಘಕಾಲ ಆಳಿದ ಒಡೆಯರುಗಳು ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಹಿರಿಮೆಯಲ್ಲಿ ವಿಜಯನಗರ ಸಾಮ್ರಾಜ್ಯದಷ್ಟು ಔನತ್ಯಕ್ಕೇರದಿದ್ದರೂ ಅದೇ ಧ್ಯೇಯ - ಧೋರಣೆಗಳನ್ನು ಮೈಸೂರು ಸಂಸ್ಥಾನ ಹೊತ್ತು ನಿಂತದ್ದು ಇಲ್ಲಿ ಗಮನಾರ್ಹ ವಾಗಿದೆ.

೧೬ನೆಯ ಶತಮಾನದ ಆರಂಭದಲ್ಲಿ ಅಂದರೆ ರಾಜ ಒಡೆಯರ ಕಾಲದಲ್ಲಿ ವಿಜಯನಗರದ ಸಾಮಂತರಾಗಿ ಒಡೆಯರು ಆಳ್ವಿಕೆ ನಡೆಸಿದ್ದಾರೆ. ಆದರೆ ನಂತರದ ಕಾಲದಲ್ಲಿ ತಾವು ಸ್ವತಂತ್ರರೆಂದು ಘೋಷಿಸಿಕೊಂಡರು. ಆರಂಭಿಕ ಮೈಸೂರು ಒಡೆಯರ ಶಾಸನಗಳು ಮಧ್ಯಮಲೆನಾಡಿನ ಭಾಗಗಳಲ್ಲಿ ಲಭ್ಯವಾಗಿಲ್ಲ. ಕ್ರಿ.ಶ. ೧೬ನೆಯ, ಕ್ರಿ.ಶ. ೧೭ನೆಯ ಮತ್ತು ಕ್ರಿ.ಶ. ೧೮ನೆಯ ಶತಮಾನದ ಯಾವ ಶಾಸನಗಳೂ ಈ ಭಾಗದಲ್ಲಿ ದೊರೆತಿಲ್ಲ. ಕ್ರಿ.ಶ. ೧೮೮೧ರಲ್ಲಿ ಬ್ರಿಟಿಷ್ ಕಮಿಷನರ್ ಮೈಸೂರು ರಾಜ್ಯವನ್ನು ಒಡೆಯರಿಗೆ ವಹಿಸಿಕೊಟ್ಟ ನಂತರ ಸಾಕಷ್ಟು ಶಾಸನಗಳನ್ನು ಈ ಭಾಗದಲ್ಲಿ ಹೊರಡಿಸಿದರು. ಕ್ರಿ.ಶ. ೧೭೯೯ರ ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ನಂತರ ಮೈಸೂರು ಸಂಸ್ಥಾನ ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟು ಅಧೀನ ರಾಜ್ಯವಾಗಿ ಕ್ರಿ.ಶ. ೧೯೪೭ರವರೆಗೂ ಮುಂದುವರೆಯಿತು. ಇದರಿಂದಾಗಿ ಮೂರು ಶತಮಾನಗಳ ಕಾಲ ಸ್ವತಂತ್ರ ಅರಸರಾಗಿ ಅನಂತರ ಒಂದು ಶತಮಾನಗಳ ಕಾಲ ಬ್ರಿಟಿಷರ ದೇಶಿಯ ಸಂಸ್ಥಾನವಾಗಿ ಆಡಳಿತ ನಡೆಸಿದರು.

ತೀರ್ಥಹಳ್ಳಿ ಶಾಸನ(ಸನ್ನ)ವು ಮೈಸೂರು ದೊರೆ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಸಂಬಂಧಿಸಿದಂತೆ ಶಿವಮೊಗ್ಗ ಸಂಪುಟದ ಏಕೈಕ ಶಾಸನವಾಗಿದ್ದು ಮುಮ್ಮಡಿ ಕೃಷ್ಣರಾಜ ಒಡೆಯರು ಮುಳುಬಾಗಿಲು ಕೃಷ್ಣನಂದಸ್ವಾಮಿ ಮಠಕ್ಕೆ ೧೦೬ ಹೈದರಿ ವರಹ ಮತ್ತು ೩ ಹಣಗಳನ್ನು ನೀಡಿದ ಸಂಗತಿಯನ್ನು ನಿರೂಪಿಸುತ್ತದೆ. ಈ ಮಠವು ಭಾಗವತ ಸಂಪ್ರದಾಯವನ್ನು ಅನುಸರಿಸುತ್ತದೆ. ಮಠದ ಸ್ವಾಮೀಜಿಯವರು ದೊರೆಯ ಮುಂದೆ ಖುದ್ದು ಹಾಜರಿದ್ದು ಭಿನ್ನವಿಸಿಕೊಂಡವರಂತೆ ಈ ದಾಖಲೆಗೆ ದೊರೆಯ ಸಹಿ ಇದೆ.[೧೬೭]

ಹೆದ್ದೆ ಶಾಸನದಲ್ಲಿ ಹೆದ್ದೆ ತಿಮ್ಮಯ್ಯ ಎಂಬಾತ ಉಮಾಮಹೇಶ್ವರ ಮತ್ತು ಇತರ ದೇವಾಲಯಗಳನ್ನು ಕಟ್ಟಿಸಿದ. ಆತನ ಕೋರಿಕೆಯ ಮೇರೆಗೆ ಮೈಸೂರು ದೊರೆ ಮುಮ್ಮಡಿ ಕೃಷ್ಣರಾಜ ಒಡೆಯರು ಗಂಜೂರಿನವರಾದ ಅಮಲ್ದಾರ ಮನಘೂರು ಫಯಾಜ್ ಎಂಬಾತನನ್ನು

ಕಳುಹಿಸಿಕೊಟ್ಟು ಪಾಳ್ಯದ ಮಕ್ಕಿ ಗ್ರಾಮವನ್ನು ಹಾಗೂ ಸೀತಾ ನದಿ ತೀರದ ಕೆಲವು ಭೂಪ್ರದೇಶಗಳನ್ನು ದೇವರುಗಳ ನೈವೇದ್ಯ, ದೀಪಗಳು ಹಾಗು ಬ್ರಾಹ್ಮಣರ ಆಹಾರಗಳಿಗಾಗಿ ದಾನವೀಯಲಾಯಿತು ಎಂದಿದೆ.[೧೬೮]

ಶೃಂಗೇರಿ ಶಾಸನವು ಇಮ್ಮಡಿ ಕೃಷ್ಣರಾಜ ಒಡೆಯರಿಗೆ ಸೇರಿದ್ದು ಸಚ್ಚಿದಾನಂದ ಭಾರತೀಯವರು ಬೇಲೂರಿನಲ್ಲಿ ಶೃಂಗೇರಿ ಮಠದ ಶಾಖೆಯನ್ನು ಸ್ಥಾಪಿಸಿದ ವಿಷಯವನ್ನು ತಿಳಿಸುತ್ತದೆ. ಈ ಮಠದ ಶಾಖೆಗೆ ಕೊಡಲಾದ ಕೆಲವು ದಾನಗಳನ್ನು ತಿಳಿಸುತ್ತದೆ ಹಾಗೂ ಇಮ್ಮಡಿ ಕೃಷ್ಣರಾಜ ಒಡೆಯರು ಶ್ರೀರಂಗಪಟ್ಟಣವನ್ನು ಆಳುತ್ತಿದ್ದರೆಂದು ಹೇಳಿದೆ.[೧೬೯]

ಶೃಂಗೇರಿಯ ಇನ್ನೊಂದು ಶಾಸನದಲ್ಲಿ ನರಸಿಂಹಭಾರತೀ ಸ್ವಾಮಿಗಳ ಉಲ್ಲೇಖವಿದೆ. ೨೨೫ ಸಲಗೆ ಭತ್ತದ ಉತ್ಪಾದನೆ ಇರುವ ಎರಡು ಗ್ರಾಮಗಳನ್ನು ದತ್ತಿಯಾಗಿ ಕೊಟ್ಟ ವಿಷಯವನ್ನು ಇದು ತಿಳಿಸುತ್ತದೆ. ಈ ದಾನವನ್ನು ಛತ್ರದಲ್ಲಿ ೧೨ ಜನ ಬ್ರಾಹ್ಮಣರ ಭೋಜನಕ್ಕಾಗಿ ದಂಡುಸೆಟ್ಟಿಯು ಕೊಟ್ಟನೆಂದು ಹೇಳುತ್ತದೆ.[೧೭೦]

ಶೃಂಗೇರಿಯ ಮತ್ತೊಂದು ಶಾಸನವು ಇಮ್ಮಡಿ ಕೃಷ್ಣರಾಜರ ಆಳ್ವಿಕೆಗೆ ಸೇರಿದೆ. ದೊರೆಯು ಶೃಂಗೇರಿಯ ಸ್ವಾಮೀಜಿಯವರನ್ನು ತನ್ನ ರಾಜಧಾನಿಯಾದ ಶ್ರೀರಂಗಪಟ್ಟಣಕ್ಕೆ ಆಮಂತ್ರಿಸಿದನು. ಅದನ್ನು ಮನ್ನಿಸಿ ಸಚ್ಚಿದಾನಂದ ಭಾರತೀಯವರ ಶಿಷ್ಯರಾದ ಅಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳು ರಾಮೇಶ್ವರ ಯಾತ್ರೆ ಹೋಗುವ ಮಾರ್ಗದಲ್ಲಿ ಶ್ರೀರಂಗಪಟ್ಟಣದಲ್ಲಿ ತಂಗಿದ್ದರು. ಆ ಸಂದರ್ಭದಲ್ಲಿ ಇಮ್ಮಡಿ ಕೃಷ್ಣರಾಜರು ಉಪಗ್ರಾಮಗಳು ಸೇರಿದಂತೆ ಬೆಳವಾಡಿ ಗ್ರಾಮವನ್ನು ಮತ್ತು ಇತರ ಆದಾಯದ ಸಮೇತವಾಗಿ ಚಂದ್ರಮೌಳೀಶ್ವರ ಮತ್ತು ಶಾರದಾಂಬೆಯರ ನಂದಾದೀಪಕ್ಕಾಗಿ ಅಭಿನವ ಸಚ್ಚಿದಾನಂದ ಭಾರತೀಗಳಿಗೆ ಕೊಟ್ಟರು. ಶಾಸನದ ಕೊನೆಯಲ್ಲಿ ಶ್ರೀಕೃಷ್ಣ ಎಂಬ ಅಂಕಿತವಿದೆ.[೧೭೧]

ಮುಮ್ಮಡಿ ಕೃಷ್ಣರಾಜ ಒಡೆಯರು ಶೃಂಗೇರಿ ಮಠದ ಪರಮಭಕ್ತರಾಗಿದ್ದು ಅನೇಕ ದಾನಗಳನ್ನು ಮಠಕ್ಕೆ ಕೊಟ್ಟಿದ್ದರು. ಸಮಕಾಲೀನ ಶೃಂಗೇರಿಯ ಸ್ವಾಮಿಗಳು ಆಗಿದ್ದ ಅಭಿನವ ಸಚ್ಚಿದಾನಂದ ಭಾರತೀಯವರು ಹಾಗೂ ನರಸಿಂಹ ಭಾರತೀಯವರು ಮೈಸೂರು ಅರಮನೆಗೆ ಭೇಟಿಯಿತ್ತು ಮಹಾರಾಜರಿಗೆ ಆಶೀರ್ವಾದ ಮಾಡಿದರು ಎಂಬುದು ತಿಳಿದು ಬಂದಿದೆ. ಆದರೆ ಇಲ್ಲಿರುವ ಶಾಸನಗಳು ವಿಶೇಷವಾಗಿ ಶೀರ್ಷಿಕೆ ಮಾದರಿಯಲ್ಲಿದ್ದು, ಚಿನ್ನ ಮತ್ತು ಬೆಳ್ಳಿಯ ವಸ್ತುಗಳನ್ನು ದಾನವನ್ನಾಗಿ ಕೊಟ್ಟು, ಆ ವಸ್ತುಗಳ ಮೇಲೆ ಕೆತ್ತಲಾದ ಶಾಸನಗಳಿವೆ. ನಾಲ್ವಡಿ ಕೃಷ್ಣರಾಜ ಒಡೆಯರು ಕೆಲವು ವಸ್ತುಗಳನ್ನು ಕೊಟ್ಟರೆಂದು ಶಾಸನಗಳಿಂದ ತಿಳಿದು ಬರುತ್ತದೆ. ಅವುಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.[೧೭೨]

ಶೃಂಗೇರಿ ೧೧ನೆಯ ಶಾಸನ - ಅಶ್ವತ ಎಲೆಯ ಆಕಾರದ ಬೆಳ್ಳಿಯ ತಟ್ಟೆ-ಬಾಳೆ ಅರಸು

ಶೃಂಗೇರಿ ೧೨ನೆಯ ಶಾಸನ - ಬೆಳ್ಳಿಯ ಕೊಡ–ದ್ಯಾವವೆ ಕೃಷ್ಣವಿಲಾಸ ಸನ್ನಿಧಾನ

ಶೃಂಗೇರಿ ೧೩ನೆಯ ಶಾಸನ - ಚಂದ್ರಮೌಳೀಶ್ವರ ದೇವರಿಗೆ ಬೆಳ್ಳಿಯ ಪೀಠ

- ನಾಲ್ವಡಿ ಕೃಷ್ಣರಾಜ ಒಡೆಯರು

ಶೃಂಗೇರಿ ೧೪ನೆಯ ಶಾಸನ - ಬೆಳ್ಳಿಯ ತಟ್ಟೆ-ಸುಮುಖ ತೊಟ್ಟಿ ಸನ್ನಿಧಾನ

ಶೃಂಗೇರಿ ೧೫ನೆಯ ಶಾಸನ - ಚಂದ್ರಮೌಳೀಶ್ವರ ದೇವರ ಚಿನ್ನದ ಪ್ರಭಾವಳಿ-ಮೀನಾಕ್ಷಿಬಾಯಿ

ಶೃಂಗೇರಿ ೧೬ನೆಯ ಶಾಸನ - ಚಿನ್ನದ ಪಲ್ಲಕ್ಕಿ-ನರಸಿಂಹ ಭಾರತಿಗಳಿಗೆ ಕೃಷ್ಣರಾಜರಿಂದ

ಶೃಂಗೇರಿ ೧೭ನೆಯ ಶಾಸನ - ಬೆಳ್ಳಿಯ ಸಿಂಹಾಸನ-ಜಮಖಂಡಿಯ ದೊರೆ ರಾಮಚಂದ್ರ

ಶೃಂಗೇರಿ ೧೮ನೆಯ ಶಾಸನ - ಚಿನ್ನದ ಕಿರೀಟ-ಕೃಷ್ಣರಾಜ ಒಡೆಯರಿಂದ

ಶೃಂಗೇರಿ ೧೯ನೆಯ ಶಾಸನ - ಚಿನ್ನದ ಪಾನ್ ದಾನ್-ಚಂದ್ರವಿಲಾಸ ಸನ್ನಿಧಾನ

ಶೃಂಗೇರಿ ೨೦ನೆಯ ಶಾಸನ - ಚಿನ್ನದ ಬಟ್ಟಲು-ಕೃಷ್ಣರಾಜ ಒಡೆಯರು

ಶೃಂಗೇರಿ ೨೧ನೆಯ ಶಾಸನ - ವಜ್ರ ಖಚಿತ ಚಿನ್ನದ ಬಟ್ಟಲು-ಮದನವಿಲಾಸ ಸನ್ನಿಧಾನ

ಮೈಸೂರು ಒಡೆಯರ ಶಾಸನಗಳು ವಿಶೇಷವಾಗಿ ದಾನಶಾಸನಗಳಾಗಿದ್ದು, ಶೃಂಗೇರಿ ಮಠ ಮತ್ತು ಪೀಠಾಧಿಪತಿಗಳಿಗೆ ನೀಡಿದ ದಾನಗಳನ್ನು ಕುರಿತದ್ದಾಗಿವೆ. ತಾಮ್ರ ಶಾಸನಗಳನ್ನು ಹೊರತುಪಡಿಸಿದರೆ ಇಲ್ಲೆಲ್ಲವು ಶೀರ್ಷಿಕೆಯಂತಹ ಶಾಸನಗಳಾಗಿದ್ದು, ಮೈಸೂರು ರಾಜರು ಮತ್ತು ಅವರ ರಾಣಿಯರು ದಾನ ನೀಡಿದ ವಸ್ತುಗಳ ಮೇಲೆ ಕೆತ್ತಲಾಗಿದೆ. ಒಟ್ಟಿನಲ್ಲಿ ಈ ಶಾಸನಗಳು ಮೈಸೂರು ಒಡೆಯರ ಕಾಲದ ರಾಜಕೀಯ ಇತಿಹಾಸದ ಮೇಲೆ ಹೆಚ್ಚಿನ ಬೆಳಕನ್ನೇನೂ ಬೀರುವುದಿಲ್ಲವೆಂಬುದನ್ನು ಗಮನಿಸಬೇಕು.

ಮಧ್ಯಮಲೆನಾಡಿನ ಭಾಗಗಳಲ್ಲಿ ಸಾಮಂತ ಆಳುವ ಮನೆತನಗಳು ರೂಪುಗೊಂಡ ಹಾಗೆ ಆ ಕಾಲದ ರಾಜಕೀಯ ವ್ಯವಸ್ಥೆಗೆ ವಿಶಿಷ್ಟವಾಗಿದ್ದು ಸಾಮಾಜಿಕ ಅಂಶಗಳು ರಾಜ್ಯವನ್ನು ಪ್ರತಿನಿಧಿಸುತ್ತಿದ್ದ ಇಂತಹ ಸಾಂಸ್ಕೃತಿಕ ಅಂಶಗಳನ್ನು ಪ್ರಾದೇಶಿಕ ಮಟ್ಟದ ಆಳ್ವಿಕೆಯಲ್ಲೂ ಅಂತರ್ಗತ ಮಾಡಿಕೊಳ್ಳುತ್ತ ಪುನರುತ್ಪಾದಿಸುತ್ತ ಸ್ಥಳೀಯ ಮನೆತನಗಳು ತಮ್ಮ ಪ್ರಭುತ್ವದ ಕಲ್ಪನೆಯನ್ನು ರೂಪಿಸಿಕೊಂಡಿದ್ದು ಇಲ್ಲಿ ವಿಶೇಷ ಎನಿಸುತ್ತದೆ.

ಈ ಭಾಗದಲ್ಲಿ ಆಳಿದ ಸ್ಥಳೀಯ ರಾಜರ ಹೆಸರುಗಳು ತಮ್ಮ ವಂಶದ ಕೊನೆಯ ವರೆಗೂ ಮುಂದುವರಿಸಿಕೊಂಡು ಬಂದಿರುವುದು; ಆರಗದ ಬಹುತೇಕ ಶಾಸನಗಳಲ್ಲಿ ರಾಜರು ತಮ್ಮನ್ನು ಬ್ರಹ್ಮ ಕ್ಷತ್ರಿಯರೆಂದು ಕರೆದುಕೊಳ್ಳುವ ಮೂಲಕ ತಾವು ಮೂಲತಃ ಬ್ರಾಹ್ಮಣರಾಗಿದ್ದು 'ಕ್ಷತ್ರಿಯ ವೃತ್ತಿಯನ್ನು' ಆಧರಿಸಿದ ವಿಷಯವನ್ನು ಸಾರಿಕೊಳ್ಳುತ್ತಾರೆ. ಆರಗ ಸಾಮಂತರು ತಮ್ಮ ಹೆಸರಿನ ಅಂತ್ಯದಲ್ಲಿ ಒಡೆಯರು ಎಂತಲೂ ಸಾಂತರ ಅರಸರು ತಮ್ಮ ಹೆಸರಿನ ಕೊನೆಯಲ್ಲಿ

ಸಾಂತರರು ಎಂಬ ಪದವನ್ನು ಅಳುಪರು ಆಳುಪೇಂದ್ರ ಎಂಬಂತಹ ಪದವನ್ನು ದಾನಿವಾಸಿ ಒಡೆಯರು 'ಒಡೆಯರು' ಎಂಬ ಪದವನ್ನು, ಕೆಳದಿ ನಾಯಕರು ನಾಯಕ ಎಂಬಂತಹ ಹೆಸರುಗಳನ್ನು ತಮ್ಮ ಹೆಸರಿನ ಅಂತ್ಯ ಭಾಗದಲ್ಲಿ ಇಡುವ ಪ್ರಯತ್ನ ಮಾಡಿರುವುದು ಸೋಜಿಗವೇ ಸರಿ.

ಮಧ್ಯಮಲೆನಾಡಿನ ಶಾಸನಗಳು ದಾನ, ವೀರತ್ವ, ಸಹಗಮನ ಮುಂತಾದ ವಿಷಯಗಳ ದಾಖಲೆಗಳಾದರೂ ಅವುಗಳು ಒಂದು ಪ್ರಭುತ್ವ ಕಲ್ಪನೆಯನ್ನು ನಿರ್ಮಿಸಿಕೊಡುವಲ್ಲಿ ಮಹತ್ವದ ಪಾತ್ರವಹಿಸಿದ್ದವು. ಒಂದು ವಿಶಾಲವಾದ ಪ್ರಭುತ್ವದ ಕಲ್ಪನೆಯನ್ನು ಪ್ರಾದೇಶಿಕ ಸಂದರ್ಭಕ್ಕೆ ಅನ್ವಯಿಸಿ ಮಾಹಿತಿ ನೀಡುತ್ತವೆ. ಶಾಸನಗಳಲ್ಲಿ ಚಕ್ರವರ್ತಿಯಿಂದ ಸಾಮಂತ ಅರಸರ ಮನೆತನದವರೆಗಿನ ಮಾಹಿತಿ ಬಿರುದು, ಭೂದಾನ, ಆಳುವ ಸೀಮೆ, ಸಂಪ್ರದಾಯದ ಕಲ್ಪನೆಯನ್ನು, ರಾಜಪ್ರಭುತ್ವದ ಸಂದರ್ಭದಲ್ಲಿ ಇಟ್ಟು ಅವುಗಳ ಮಾನ್ಯತೆಯನ್ನು ಸಾರುತ್ತವೆ. ಇಲ್ಲಿನ ಪ್ರಾದೇಶಿಕ ಆಳುವ ಮನೆತನಗಳು ತಮ್ಮನ್ನು ಪುರಾಣ ಪುರುಷರು, ಪುರಾಣಕಲ್ಪನೆ, ಭೌಗೋಳಿಕ ಪ್ರದೇಶದ ಜೊತೆಗೆ ತಮ್ಮನ್ನು ಗುರುತಿಸಿಕೊಂಡಿರುವುದನ್ನು ಕಾಣಬಹುದು. ಉದಾಹರಣೆಯಾಗಿ ಸಾಂತರರು ಹೊಂಬುಜವನ್ನು 'ಉತ್ತರಮಧುರೆ' ಎಂದು ಗುರುತಿಸಿದರೆ ಆರಗ ರಾಜ್ಯವನ್ನು ಅನನ್ಯ ದೇಶ, ಗುತ್ತಿರಾಜ್ಯವೆಂದು ಕರೆಯಲಾಯಿತು.

ಆಳುವ ವಂಶಗಳ ಹರಡುವಿಕೆ ಆಶ್ಚರ್ಯಕರವೆನಿಸುವಷ್ಟು ವ್ಯಾಪಕವಾಗಿದ್ದರೂ ಆಳುವ ವಂಶ ಹಾಗೂ ಪ್ರದೇಶಗಳ ನಡುವಿನ ಸಂಬಂಧಗಳನ್ನು ಪರಿಶೀಲಿಸಬಹುದಾದ ಕೆಲವೊಂದು ಅಂಶಗಳಿವೆ. ಈ ಸಂಬಂಧ ಆಯಾ ವಂಶಗಳು ಪ್ರಬಲವಾಗಿದ್ದ ಸೀಮೆಯ ಹೆಸರುಗಳ ರೂಪದಲ್ಲಿ ವ್ಯಕ್ತಗೊಳಿಸಲ್ಪಟ್ಟಿವೆ. ಉದಾಹರಣೆಯಾಗಿ ಆರಗ ರಾಜ್ಯವನ್ನು ಕಂಪಣ ಅಥವಾ ಆರಗ ನಾಡು ಎಂತಲೂ, ಆಳ್ವರರ ರಾಜ್ಯವನ್ನು ಆಳ್ವಖೇಡ ೬೦೦೦ ಎಂತಲೂ ಸಾಂತರರು ಆಳಿದ ಪ್ರದೇಶ ಸಾಂತಳಿಗೆ ಸಾವಿರ ಎಂತಲೂ ಕರೆದುಕೊಂಡರು.

ಸಾಮಂತ ಎಂಬ ವರ್ಗ ಮಧ್ಯಮಲೆನಾಡಿನಲ್ಲಿ ಬಳಕೆಯಲ್ಲಿದ್ದು ದಿನೇ ದಿನೇ ವೃದ್ಧಿಸುತ್ತಿದ್ದ ವಿವಿಧ ಉಪಾದಿಗಳನ್ನು ಹೊಂದಿದ ವಿಶಾಲ ಹರಹುವುಳ್ಳ ಒಂದು ವರ್ಗವಾಗಿತ್ತು. ಕಾಲಕ್ರಮೇಣ ಸಾಮಂತ, ಮಹಾಸಾಮಂತ, ಮಹಾಮಾಂಡಳೇಶ್ವರ, ಮಾಂಡಳೇಶ್ವರ ಎಂಬ ಉಪಾದಿಗಳು ಶಾಸನಗಳಲ್ಲಿದ್ದು ರಾಜಕೀಯ ವ್ಯವಸ್ಥೆಯೊಂದರ ಸೂಚಕಗಳಾಗಿ ಬೆಳೆದವು. ಅಧಿಕಾರಶಾಹಿಗೆ ತುಂಬ ಸೀಮಿತ ಪಾತ್ರವಿರುತ್ತಿದ್ದ ಈ ವ್ಯವಸ್ಥೆ ಶ್ರೇಣೀಕೃತ ರಚನೆಯೊಂದರ ಲಕ್ಷಣಗಳನ್ನು ಹೊಂದಿದ್ದಿತು. ಇಂತಹ ಸಾಮಂತರ ರಾಜ್ಯಗಳು ಸ್ಥಳೀಯ ಮತ್ತು ಪ್ರಾದೇಶಿಕ ನೆಲೆಗಳಲ್ಲಿ ಪರಿಣಾಮಕಾರಿಯಾಗಿ ಆಡಳಿತ ನಡೆಸಿದ್ದು ಈ ಸಣ್ಣ ಪುಟ್ಟ ಅರಸು ಮನೆತನಗಳೇ. ಕೆಲವಂತೂ ಎಷ್ಟು ಚಿಕ್ಕವೆಂದರೆ ಅರಸು ಮನೆತನಗಳೆಂದೂ ಕರೆಯುವುದೂ ಚರ್ಚಾರ್ಹ.

೨.೨. ಆಡಳಿತ ವ್ಯವಸ್ಥೆ

ಪ್ರಾಚೀನ ಕರ್ನಾಟಕದ ಆಡಳಿತ ವ್ಯವಸ್ಥೆಯ ರಚನೆಯನ್ನು ಅವಲೋಕಿಸಿದರೆ ಅದನ್ನು ಪ್ರಮುಖವಾಗಿ ಎರಡು ವಿಭಾಗಗಳಾಗಿ ವಿಂಗಡಿಸಬಹುದು.

ಒಂದು ಕೇಂದ್ರಾಡಳಿತ, ಇನ್ನೊಂದು ಸ್ಥಾನೀಯ ಆಡಳಿತ ಎಂದು ಹೆಸರಿಸಬಹುದು. ಕೇಂದ್ರೀಯ ಆಡಳಿತದಲ್ಲಿ ರಾಜರು, ಮಂತ್ರಿಗಳು, ಅಧಿಕಾರಿಗಳ ಆಡಳಿತ ನಿರ್ವಹಣೆಯನ್ನು ನೋಡಿದರೆ ಸ್ಥಾನೀಯ ಆಡಳಿತದಲ್ಲಿ ನಾಡು, ಗ್ರಾಮ, ಊರು, ಪಟ್ಟಣಗಳು ಸ್ವತಂತ್ರ ಸಣ್ಣಪುಟ್ಟ ಘಟಕಗಳಂತೆ ಕಾರ್ಯನಿರ್ವಹಿಸುವುದು ಕಂಡುಬಂದರೂ ಅವುಗಳು ರಾಜನ ಅಧೀನದಲ್ಲಿರುವುದನ್ನು ಗಮನಿಸಬಹುದು. ಶಾಸನಗಳಲ್ಲಿ ಅಂದಿನ ಆಡಳಿತ ವಿಭಾಗಗಳನ್ನು ಕೊಡನಾಡು, ಮಾಗಣಿ ಎಂಬುದಾಗಿ ಹೆಸರಿಸಲಾಗಿದೆ.

ಮಧ್ಯಮಲೆನಾಡಿನ ಪ್ರದೇಶಗಳನ್ನು ಆಳಿದ ಬಹಳಷ್ಟು ಅರಸರು ಸಾಮಂತ ಪ್ರಭುಗಳೇ ಆಗಿದ್ದರು. ಸಾಂತರರು ಹಾಗೂ ಆಳುಪರು ಕೆಲವು ಕಾಲ ಹೊಯ್ಸಳರು ಮತ್ತು ವಿಜಯನಗರದ ಸಾಮ್ರಾಟರ ಸಾಮಂತರಾಗಿಯೂ ಕಳಸ–ಕಾರ್ಕಳ ಪ್ರಭುಗಳವರು ಹೊಯ್ಸಳರು ಹಾಗೂ ವಿಜಯನಗರದ ಮಾಂಡಳಿಕರಾಗಿಯೂ, ಆರಗದ ಒಡೆಯರು ವಿಜಯನಗರದ ಸಾಮಂತ ರಾಗಿಯೂ ಕೆಳದಿ ನಾಯಕರು ಕೆಲವು ಕಾಲ ಸ್ವತಂತ್ರರಾಗಿಯೂ, ಕೆಲವೊಮ್ಮೆ ವಿಜಯನಗರದ ಅರಸರ ಮಾಂಡಳಿಕರಾಗಿದ್ದು ಇಂತಹ ಸಾಮಂತರು ತಮ್ಮನ್ನು ಅನೇಕ ಶಾಸನಗಳಲ್ಲಿ "ಮಾಂಡಲೇಶ್ವರರು" ಎಂದು ಕರೆಸಿಕೊಂಡಿದ್ದಾರೆ. ಇವರು ಸಾಮ್ರಾಟರಿಗೆ ವಾರ್ಷಿಕ ಕಪ್ಪಕಾಣಿಕೆ ಯನ್ನು ಸಲ್ಲಿಸುತ್ತಾ ಅವರ ಅಧೀನರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರುಗಳು ತಮ್ಮದೇ ಆದ ಲಾಂಛನ ಮತ್ತು ರಾಜಮುದ್ರೆಯನ್ನು ಹೊಂದಿದ್ದರು.

೨.೨.೧. ನಾಡು (ಸೀಮೆ)

ಈ ರೀತಿಯಾಗಿ ಸಾಮಂತರಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದ ಸಣ್ಣ ರಾಜ್ಯಗಳು ಹಲವಾರು ಆಡಳಿತ ಘಟಕಗಳನ್ನು ಹೊಂದಿರುತ್ತಿದ್ದವು. ತಮ್ಮ ಆಡಳಿತಕ್ಕೆ ಒಳಪಟ್ಟ ಭೂಪ್ರದೇಶಗಳನ್ನು ನಾಡು ಎಂಬುದಾಗಿ ವಿಂಗಡಿಸಿಕೊಂಡಿರಬಹುದಾಗಿದೆ. ಈ ಆಡಳಿತ ಘಟಕಗಳಲ್ಲಿ ಸಾಮಂತ ಅರಸರು ಸ್ವತಂತ್ರರಾಗಿ ಆಡಳಿತ ನಿರ್ವಹಿಸುತ್ತಿದ್ದರು. ಇಂತಹ ಆಡಳಿತ ಘಟಕಗಳನ್ನೇ ಪ್ರಾಚೀನ ಕಾಲದ ಗಡಿರೇಖೆಗಳು ಎಂದು ಕರೆಯಲಾಗಿದೆ. ಮಧ್ಯಮಲೆನಾಡಿನ ಭಾಗಗಳಲ್ಲಿ ಕೆಲವೊಂದು ಪ್ರಮುಖ ಆಡಳಿತ ಘಟಕ ಎಂದರೆ ಮೊದಲಿಗೆ ನಾಡು ಎಂದು ಗುರುತಿಸಲ್ಪಡುವುದು. ಅವುಗಳೆಂದರೆ ಸಾಂತಳಿಕೆ ಸಾವಿರಾನಾಡು. ಸಾಂತರರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರ ಮಾಂಡಳಿಕರಾಗಿ ಹೊಂಬುಜ ಪ್ರಾಂತ್ಯದ ಸಾಂತಳಿಗೆ ಸಾವಿರದ ಭಾಗವನ್ನು ಆಳಿರುವುದು ಶಾಸನಗಳಲ್ಲಿ ಕಂಡುಬರುವ ಪ್ರಮುಖ ವಿಷಯವಾಗಿದೆ. ಸಾಂತರರು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ ನಂತರ ಸಾಂತಳಿಗೆ ಸಾವಿರಾ ಎಂಬ ಆಡಳಿತ ಘಟಕವಾಗಿ ರೂಪಿಸಲ್ಪಟ್ಟ ಪ್ರದೇಶ ಹನ್ನೆರಡನೆಯ ಶತಮಾನದವರೆಗೂ ಸಾಂತಳಿಗೆ ಸಾವಿರಾ ಎಂದೇ ಪ್ರಚಲಿತದಲ್ಲಿತ್ತು.

ಸಾಂತಳಿಗೆ ಸಾವಿರಾ ಒಂದು ಸಾವಿರ ಹಳ್ಳಿಗಳನ್ನು ಒಳಗೊಂಡ ಆಡಳಿತ ಘಟಕವಾಗಿದ್ದು ಸುಮಾರು ಎಂಟರಿಂದ ಹನ್ನೆರಡನೆಯ ಶತಮಾನದವರೆಗೂ ಸಾಂತರರ ಆಳ್ವಿಕೆಗೆ ಒಳಪಟ್ಟ

ಪ್ರದೇಶವಾಗಿತ್ತು. ಈ ಸಾಂತಳಿಗೆ ಸಾವಿರದ ರಾಜಧಾನಿ ಹೊಂಬುಜ. ಇಲ್ಲಿಂದಲೇ ಸಾಂತರ ರಾಜರು ರಾಜ್ಯದ ಆಡಳಿತವನ್ನು ನಿಯಂತ್ರಿಸುತ್ತಿದ್ದರು. ಈ ರಾಜ್ಯದೊಳಗೆ ರಾವಣದೊಳಗಣನಾಡು ಜಂಬೂರು, ಕಲ್ಲೂರು ನಾಡು, ಕುಕ್ಕುಪನಾಡು, ಬಲಕನಾಡು, ಎಡೆನಾಡು, ಜಿಡವಳ್ಳಿ ಮುಂತಾದ ಪ್ರದೇಶಗಳಿದ್ದವು.[೧೭೩]

ಆರಗವನ್ನು ಕೇಂದ್ರವಾಗಿ ಮಾಡಿಕೊಂಡಿದ್ದರೂ ಸಹ ತನ್ನ ಸುತ್ತಮುತ್ತಲಿನ ಅನೇಕ ಗ್ರಾಮಗಳ ಆಡಳಿತ ಕೇಂದ್ರವಾಗಿ ಮಧುವಂಕನಾಡು ಖ್ಯಾತವಾಗಿದ್ದಿತು. ಅತ್ತಿಗಾರು, ಅಲುಗವಳ್ಳಿ, ಬಾಳಗೋಡು, ಮಳಲಿ, ಜಂಬೆ, ಬಸವನಕಲ್ಲು, ನೆರಟೂರು, ಹೊರಣಿ, ಶಿವರಾಜಪುರ, ಯಡೇಹಳ್ಳಿ, ಸಾಲೂರು, ಕೊಡಸಗೊಳಿ, ಬುಲ್ಲೂರು, ಸೂರಳಿ, ಮರಗಳಲೆ, ಜಾಗಟಗಾರು, ಮಹಿಷಿ, ಕೂಳೂರು, ಬೆಕ್ಕನೂರು, ಬಸವಾನಿ, ಮುತ್ತೂರು ಮುಂತಾದ ಊರುಗಳು ಈ ನಾಡಿನಲ್ಲಿ ಸೇರಿಕೊಂಡಿದ್ದವು. ಈ ನಾಡಿನ ವಿಶೇಷವೆಂದರೆ ಕೆಲವು ಗ್ರಾಮಗಳ ಸಮುಚ್ಚಯವನ್ನು 'ಬಾಗೆ' ಎಂದು ಕರೆಯುತ್ತಿದ್ದರು. ಇದರಲ್ಲಿ ಕೆಲವು ಪಟ್ಟಡಿಗಳಿದ್ದವು. ಈ ಪಟ್ಟಡಿಗಳು ಕಂದಾಯ ವ್ಯವಸ್ಥೆಯ ಕೇಂದ್ರಭಾಗವಾಗಿದ್ದವು.

ರಾವುನಾಡು ಆರಗದ ಕಾಲದಿಂದಲೂ ಅಸ್ತಿತ್ವದಲ್ಲಿದ್ದುದು ವಿಜಯನಗರ ಕಾಲದಲ್ಲಿ ಹೆಚ್ಚು ಅಭಿವೃದ್ಧಿ ಸಾಧಿಸಿತು. ದಾನಸಾಲೆ ಶಾಸನದಲ್ಲಿ ಈ ನಾಡಿನ ಉಲ್ಲೇಖವಿದ್ದು ಈ ನಾಡಿನಲ್ಲಿ ಯಾವ್ಯಾವ ಊರುಗಳು ಅಂತರ್ಗತವಾಗಿದ್ದವು ಎಂದು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಅಂದಗೆರೆ ಶಾಸನವು ರಾವುನಾಡಿನಲ್ಲಿ ನಾಲ್ಕು ಮಂದ ಅರವತ್ತು ಹಳ್ಳಿಗಳಿರುವುದನ್ನು ತಿಳಿಸುತ್ತದೆ.[೧೭೪]

ಇನ್ನೊಂದು ಪ್ರಮುಖ ನಾಡಾಗಿದ್ದ ಮದವಳಿಗೆ ನಾಡು ಸಾಂತರರ ನಾಡಿನಲ್ಲಿತ್ತು. ಈ ನಾಡಿನ ಬಗ್ಗೆ ಮೇಗರವಳ್ಳಿ ಶಾಸನದಲ್ಲಿ ಆರಗದ ವೇಂಠೆಯಾದ ಸಾಂತಳಿಗೆನಾಡು ಒಳಗಣ ಮಧುವಳಿಗೆನಾಡು ಒಳಗಣ ಮೇಗರವಳ್ಳಿ ಗ್ರಾಮದ ಒಳಗೆ ಎಂದು ತಿಳಿಸುತ್ತದೆ.[೧೭೫]

ಇನ್ನು ಮುಂದುವರೆದು ಇಲ್ಲಿನ ಇನ್ನೊಂದು ಶಾಸನವು ಈ ಮಧುವಳಿಗೆ ನಾಡಿನಲ್ಲಿ ಮಡವಳ್ಳಿ, ಅಡಪವಳ್ಳಿಗಳು ಇದ್ದವು ಎಂದು ತಿಳಿಸುತ್ತದೆ.

ಆರಗ ರಾಜ್ಯದಲ್ಲಿ ಮತ್ತೊಂದು ಪ್ರಮುಖ ನಾಡು ನಿಡುವಾಲ ನಾಡು. ತೀರ್ಥಹಳ್ಳಿಯ ಹುಣಸವಳ್ಳಿ, ಕುರುವಳ್ಳಿ, ಗಾಡಿಗೆರೆ ಶಾಸನಗಳಲ್ಲಿ ಈ ನಾಡಿನ ಉಲ್ಲೇಖವಿದೆ. ತೀರ್ಥಹಳ್ಳಿಯ ಶಾಸನವು ನಿಡುವಾಲ ನಾಡು ಸಾಂತಳಿಗೆ ಮಾಗಣಿಗೆ ಸೇರಿತ್ತು ಎಂದು ತಿಳಿಸುತ್ತದೆ.[೧೭೬]

ಸಾಂತರ ಕಾಲದ ರಾಜಧಾನಿಯಾಗಿದ್ದ ಹೊಂಬುಜ ತನ್ನ ಸುತ್ತಮುತ್ತಲಿನ ಹಲವಾರು ಗ್ರಾಮಗಳನ್ನು ಸೇರಿಸಿಕೊಂಡು ಹೊಂಬುಚ್ಚ ನಾಡು ಎಂದು ಪ್ರಸಿದ್ಧಿಯಾಗಿದ್ದಿತು. ಶಾಸನಗಳಲ್ಲಿ ವ್ಯಕ್ತವಾಗಿರುವ ಹಲವನಹಳ್ಳಿ, ನಿಟ್ಟೂರು, ಶಂಕ್ರಹಳ್ಳಿ ಗ್ರಾಮಗಳು ಈ ನಾಡಿನಲ್ಲಿದ್ದವು ಎಂದು ಹೇಳುತ್ತದೆ.

ಇನ್ನು ಮುಂದುವರೆದು ಬೆಳುವೆಯ ನಾಡು, ಕೊಡಲಿನಾಡು, ಹನಗವಾಡಿ ನಾಡು, ಹೊಳೆಹೊನ್ನೂರು ನಾಡು, ಅನವೆರಿಯನಾಡಿನ ಉಲ್ಲೇಖವಿದ್ದು ಇದೆಲ್ಲವೂ ಆರಗ ಸಾಮ್ರಾಜ್ಯದಲ್ಲಿ ವಿಲೀನವಾಗಿದ್ದವು ಎನ್ನುವ ಅಂಶವು ಶಾಸನಗಳಿಂದ ತಿಳಿದುಬರುತ್ತದೆ.

ವಿಜಯನಗರ ಕಾಲದಲ್ಲಿ ಆರಗವನ್ನು ಒಂದು ಪ್ರತ್ಯೇಕ ರಾಜ್ಯ ಘಟಕವನ್ನಾಗಿ ಮಾಡಲಾಯಿತು. ತೀರ್ಥಹಳ್ಳಿ ಶಾಸನದಲ್ಲಿ ಆರಗ ರಾಜ್ಯಕ್ಕೆ ಸಲ್ಲುವ ಮಧುವಂಕನಾಡಸೀಮೆ ಎಂಬ ಮಾಹಿತಿ ಇದ್ದು ಆರಗ ಒಂದು ರಾಜ್ಯವಾಗಿತ್ತು ಎನ್ನುವುದನ್ನು ಮನಗಾಣಬಹುದು.[೧೭೭]

ಆರಗ "ಕಂಪಣ" ಎಂಬ ಆಡಳಿತ ಘಟಕವಾಗಿದ್ದಿತು ಎಂಬುದಕ್ಕೆ ಅಂದಿಗೆರೆ ಶಾಸನದಲ್ಲಿ "ಆರಗದ ೧೮ ಕಂಪಣದ ಸಮಸ್ತ ನಾಡು" ಎಂಬ ಉಲ್ಲೇಖವಿದ್ದು[೧೭೮] ಕಂಪಣ ಎನ್ನುವುದು ಯಾವ ರೀತಿಯ ಆಡಳಿತ ವಿಭಾಗ ಎನ್ನುವ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟಸಾಧ್ಯ.

ಆರಗ ರಾಜ್ಯವು ಈಗಿನ ಸೊರಬ ತಾಲ್ಲೂಕಿನ ಚಂದ್ರಗುತ್ತಿಯವರೆಗೂ ವಿಸ್ತರಿಸಲ್ಪಟ್ಟಿತ್ತು. ಅದಕ್ಕಾಗಿ ಅನೇಕ ಶಾಸನಗಳಲ್ಲಿ ಆರಗವನ್ನು ಗುತ್ತಿರಾಜ್ಯ, ಗುತ್ತಿಸೀಮೆ ಎಂದು ಕರೆಯಲಾಗಿದೆ. ಹೀಗಾಗಿ ಒಂದಿಷ್ಟು ವರ್ಷಗಳ ಕಾಲ ಚಂದ್ರಗುತ್ತಿಯೊಂದಿಗೆ ಸೇರಿಕೊಂಡು ಆರಗ ರಾಜ್ಯವೆಂದು ಗುರುತಿಸಲ್ಪಟ್ಟಿತು. ಆರಗ ರಾಜ್ಯವು ಸೀಮೆಯಾಗಿಯೂ ಕಾರ್ಯನಿರ್ವಹಿಸಿರುವುದು ಎನ್ನುವುದಕ್ಕೆ "ಆರಗದ ಸೀಮೆಯ ಹೊಳೆಹೊನ್ನೂರು" ಎಂಬುದಾಗಿ ಶಾಸನಗಳಲ್ಲಿ ಮಾಹಿತಿ ಇದೆ.[೧೭೯] ಆರಗ ಪ್ರಾಂತ್ಯವು 'ಹೋಬಳಿ'ಯಾಗಿ ಮಾಗಣೆಯಾಗಿ ಕಾರ್ಯನಿರ್ವಹಿಸಿರುವುದನ್ನು ಶಾಸನಗಳಲ್ಲಿ ಕಾಣಬಹುದು.[೧೮೦]

ಆರಗದ ಹದಿನೆಂಟು ಕಂಪಣವನ್ನು ಪ್ರಮುಖವಾಗಿ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಒಂದು ಇಚ್ಛೆ ೯ ಕಂಪಣ ಈಳೆ ೯ ಕಂಪಣ ಎಂಬುದಾಗಿದೆ.[೧೮೧] ಆದರೆ ಈ ವಿಭಾಗಗಳ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲದಿರುವುದರಿಂದ ಏನನ್ನೂ ಹೇಳಲು ಸಾಧ್ಯವಾಗುತ್ತಿಲ್ಲ.

ಸೀಮೆಗಳು: ವಿಜಯನಗರ ಆಡಳಿತ ಕಾಲದಲ್ಲಿ ನಾಡುಗಳಲ್ಲಿನ ಅಧಿಕಾರದಲ್ಲಿ ವಿಪರೀತ ಜವಾಬ್ದಾರಿಯಿದ್ದುದರಿಂದ ಸೀಮೆಗಳನ್ನು ರೂಪಿಸಲಾಯಿತು. ಈ ಸೀಮೆಗಳಲ್ಲಿ ಹಲವಾರು ಗ್ರಾಮಗಳು ಅಂತರ್ಗತವಾಗಿದ್ದವು. ಕೆಲವೊಂದು ಶಾಸನಗಳಲ್ಲಿ ಸ್ಪಷ್ಟವಾಗಿರುವಂತೆ ಒಂದು ರಾಜ್ಯದಲ್ಲಿ ಒಂದು ನಾಡಿರುತ್ತದೆ. ಈ ನಾಡುಗಳೇ ಕ್ರಮೇಣ ಸೀಮೆಗಳಾಗಿರುತ್ತವೆ. ಕೆಲವೊಮ್ಮೆ ನಾಡು ಹಾಗೂ ಸೀಮೆಯನ್ನು ಪರ್ಯಾಯವಾಗಿ ಬಳಸಲಾಗಿದೆ.

ಆರಂಭದಲ್ಲಿ ನಾಡುಗಳ ಕೇಂದ್ರವಾಗಿದ್ದ ಹೊಂಬುಜ ಮತ್ತು ಬೆಳುವೆಗಳು ಕ್ರಮೇಣ ಸೀಮೆಗಳಾಗಿ ರೂಪುಗೊಂಡವು. ಸೀಮೆಗಳು ಪ್ರಾಂತೀಯ ಆಡಳಿತದ ಪ್ರಮುಖ ಘಟಕಗಳಾಗಿದ್ದವು. ಇನ್ನುಳಿದಂತೆ ಮೊಸರೂರು ಸೀಮೆ, ಮುತ್ತೂರು ಸೀಮೆ, ಸಿಡಿಯ ಬೆಕ್ಕನೂರು ಸೀಮೆ, ಮಾಳೂರು ಸೀಮೆ, ಕೊಳವರ ಸೀಮೆ, ಬಸವಾನಿ ಸೀಮೆ, ಹಳಿವಾರ ಸೀಮೆ, ನೀರ್ಕಲು ಸೀಮೆ, ಹರಿಹರಪುರ ಸೀಮೆಗಳು ಆರಗ ರಾಜ್ಯದಲ್ಲಿ ಅಂತರ್ಗತವಾಗಿದ್ದವು. ಇವುಗಳ ಜೊತೆಗೆ ಮಂಡಗದ್ದೆ, ಹಣಗೇರಿ, ಹಲಸರ ಸೀಮೆಗಳು ಈ ರಾಜ್ಯದಲ್ಲಿದ್ದವು.

ವಿಜಯನಗರದ ಆಡಳಿತದಲ್ಲಿ ಗಂಗಮಂಡಳಿ ನಾಡಿನಲ್ಲಿದ್ದ ಗಾಜನೂರು ಸೀಮೆಯಾಗಿ ಪರಿವರ್ತಿತವಾಯಿತು. ಕವಲೇದುರ್ಗ ಶಾಸನವು ಈ ಸೀಮೆಯಲ್ಲಿ ಪುರದಹಾಳ, ಹೂಲಿಕಟ್ಟೆ ಗ್ರಾಮಗಳಿದ್ದುದನ್ನು ದಾಖಲಿಸುತ್ತದೆ.[೧೮೨]

ಒಟ್ಟಾರೆಯಾಗಿ ಶಾಸನಗಳಲ್ಲಿ ಆರಗವನ್ನು ರಾಜ್ಯ, ಕಂಪಣ, ವೇಂಠೆ, ಸೀಮೆ ಹೋಬಳಿ, ನಾಡು, ೫೦ ನಾಡು ಎಂದೆಲ್ಲಾ ಕರೆಯಲಾಗಿದೆ. ಇದರಲ್ಲಿ ೧೮ ಕಂಪಣಗಳು ೧೮ ಸೀಮೆಗಳಾಗಿದ್ದ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಶಾಸನವೊಂದರಲ್ಲಿ 'ಆರಗ'ದ ರಾಜ್ಯಕ್ಕೆ ಸಲ್ಲುವ ೫೦ ನಾಡೊಳಗೆ ಎಂಬ ಮಾಹಿತಿ ಇದ್ದು[೧೮೩] ಆರಗ ರಾಜ್ಯದಲ್ಲಿ ೫೦ ನಾಡುಗಳಿದ್ದವು ಎನ್ನುವುದನ್ನು ಗಮನಿಸಬಹುದು. ಆಳ್ವಖೇಡ ೬೦೦೦ ಆಳುಪರ ಕಾಲದ ಒಂದು ಪ್ರಮುಖ ಆಡಳಿತ ಘಟಕವಾಗಿದ್ದು ರಾಷ್ಟ್ರಕೂಟ ದೊರೆ ಗೋವಿಂದ ಅರಸನ ಮೊರಬ ಶಾಸನದಲ್ಲಿ ಮೊದಲ ಬಾರಿಗೆ ಆಳ್ವಖೇಡ ೬೦೦೦ ಎಂಬ ಆಡಳಿತ ವಿಭಾಗದ ಉಲ್ಲೇಖವಿದೆ.[೧೮೪] ಇದು ೬೦೦೦ ಹಳ್ಳಿಗಳಿಂದ ಕೂಡಿದ ಪ್ರದೇಶವಾಗಿದ್ದಿತು. ಬನವಾಸಿ ೧೨೦೦೦ದ ಪ್ರಾಂತ್ಯಾಧಿಪತಿಯಾದ ಇಂದಪಯ್ಯನನ್ನು ಆಳ್ವಖೇಡ ೬೦೦೦ದ ಅಧಿಕಾರಿಯನ್ನಾಗಿ ಮಾಡಲಾಯಿತು.[೧೮೫] ಇದರಿಂದಾಗಿ ಅಳುಪರು ದಕ್ಷಿಣ ಕನ್ನಡದಲ್ಲಿ ಪ್ರಬಲವಾದ ಆಡಳಿತ ವಿಭಾಗ ಹೊಂದಿದ್ದರು ಎನ್ನುವ ಅಂಶ ಮನವರಿಕೆಯಾಗುತ್ತದೆ. ಹೊಯ್ಸಳರ ಕಾಲದವರೆಗೂ ಆಳ್ವಖೇಡ ೬೦೦೦ ಎಂಬ ಭೌಗೋಳಿಕ ವಿಭಾಗವಿದ್ದಿತು. ಹೊಯ್ಸಳ ದೊರೆ ವಿಷ್ಣುವರ್ಧನನ ಕಾಲದ ಹಲವಾರು ಶಾಸನಗಳಲ್ಲಿ ಆಳ್ವಖೇಡ ೬೦೦೦ದ ಜನರನ್ನು 'ಆಳ್ವಖೇಡ ಆರುಸಾವಿರದಲು' ಎಂಬ ಉಲ್ಲೇಖವಿದ್ದು.[೧೮೬] ಹೊಯ್ಸಳರು ಕರ್ನಾಟಕದ ಪಶ್ಚಿಮ ಕರಾವಳಿ ತೀರದವರೆಗೂ ಬಲಿಷ್ಠರಾಗಿದ್ದರು ಎನ್ನುವುದು ಅರಿವಾಗುತ್ತದೆ. ಹೀಗಾಗಿ ಆಳ್ವಖೇಡ ಎನ್ನುವುದು ಆಳುಪರ ನಿರ್ದಿಷ್ಟವಾದ ಭೂಪ್ರದೇಶವಾಗಿದ್ದು ಈಗಿನ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೂ ವ್ಯಾಪಿಸಿದ ಆಡಳಿತ ವಿಭಾಗವಾಗಿದ್ದಿತು.

ಈ ಮೇಲಿನ ಆಡಳಿತ ವಿಭಾಗಗಳನ್ನು ವಿಮರ್ಶಿಸಿದಾಗ ಅಂದಿನ ಕಾಲದ ಆಡಳಿತ ವ್ಯಾಪ್ತಿಯು ವಿಸ್ತಾರವಾದ ಭೂಪ್ರದೇಶಗಳನ್ನು ಒಳಗೊಂಡಿದ್ದು ಹಲವಾರು ರಾಜವಂಶಗಳು ತಮ್ಮದೇ ಆದಂತಹ ಆಡಳಿತದ ರೂಪುರೇಷೆಗಳನ್ನು ಕಂಡುಕೊಂಡಿದ್ದರು. ಹಲವಾರು ಸಣ್ಣ ರಾಜಮನೆತನಗಳು ಮಧ್ಯಮಲೆನಾಡಿನಲ್ಲಿ ರಾಜ್ಯಭಾರ ಮಾಡಿದ್ದರು. ತಮ್ಮದೇ ಆದ ಕೇಂದ್ರೀಯ ಸರ್ಕಾರವನ್ನು ರೂಪಿಸಿಕೊಂಡು ಆಡಳಿತ ಮಾಡಿರುವುದು ಶಾಸನಗಳಲ್ಲಿ ಕಾಣುವ ಅಪರೂಪದ ಮಾಹಿತಿಯೆಂದೇ ಹೇಳಬಹುದು. ಕೇಂದ್ರೀಯ ಆಡಳಿತ ವ್ಯವಸ್ಥೆಯ ಮಾಹಿತಿ ಸಾಕಷ್ಟು ಗೌಣವಾಗಿದ್ದನ್ನು ಗಮನಿಸಿದರೆ ಬಹಳಷ್ಟು ರಾಜವಂಶಗಳು ಸಾಮಂತರಾಗಿದ್ದರು ಎನ್ನಬಹುದು. ಸ್ಥಳೀಯ ಆಡಳಿತವನ್ನು ಪರಿಶೀಲಿಸಿದಾಗ ನಾಡು, ಸೀಮೆ, ಕಂಪಣ, ಮಾಗಣಿ ರಾಜ್ಯಗಳ ಆಡಳಿತದ ಸ್ಪಷ್ಟ ಮಾಹಿತಿ ಲಭ್ಯವಾಗುವುದು. ಈ ಆಡಳಿತ ವಿಭಾಗಗಳ ಮುಖ್ಯಸ್ಥರು ಯಾರಾಗಿದ್ದರು? ಅವರ ಕಾರ್ಯವ್ಯಾಪ್ತಿ ಎಲ್ಲಿಯವರೆಗೆ ವಿಸ್ತರಿಸಿತ್ತು ಎಂಬುದಕ್ಕೆ ಶಾಸನಗಳಲ್ಲಿ ಯಾವುದೇ ಮಾಹಿತಿ ಇಲ್ಲ ಶಾಸನಗಳು ಅಸ್ಪಷ್ಟತೆಯಿಂದ ಕೂಡಿವೆ.

೨.೨.೨. ಅಗ್ರಹಾರಗಳ ಆಡಳಿತ

'ಅಗ್ರಹಾರ'ಗಳು ವೇದಸಂಪನ್ನರಾದ ಬ್ರಾಹ್ಮಣರಿಗೆ ಅವರ ಷಟ್ಕರ್ಮಗಳನ್ನು ಸಾಂಗವಾಗಿ ನಡೆಸಿಕೊಂಡು ಜೀವನ ಮಾಡಲು ಅಂದಿನ ಅರಸರು ನೀಡುತ್ತಿದ್ದ 'ಆಕರ ಗ್ರಾಮ'ಗಳಾಗಿದ್ದವು.

ಪ್ರಾಚೀನ ವೇದಗ್ರಂಥಗಳು ರಾಜನಾದವನು ರಾಜ್ಯದಲ್ಲಿ ಶಾಂತಿ ನೆಲೆಸಲು, ರಾಜ್ಯ ಸುಭಿಕ್ಷವಾಗಿರಲು ರಾಜಭಂಡಾರದಿಂದ ವೇದೋಕ್ತ ಬ್ರಾಹ್ಮಣರಿಗೆ ಭೂದಾನ ನೀಡಬೇಕೆಂದು ತಿಳಿಸುತ್ತವೆ. ಅವರು ನಿರ್ವಹಿಸುತ್ತಿದ್ದ ಯಜ್ಞ, ಯಾಗಾದಿಗಳಿಂದ ನಾಡು ಧರ್ಮದ ಬೀಡಾಗಿರುತ್ತದೆ. ಅವರು ಮಾಡುವ ಅಧ್ಯಯನ, ಅಧ್ಯಾಪನಗಳಿಂದ ಜನರು ಸುಶಿಕ್ಷಿತರು, ಸಜ್ಜನರು ಆಗುತ್ತಾರೆ ಎಂಬ ನಂಬಿಕೆ ರಾಜರಲ್ಲಿದ್ದು ಆ ಮೂಲಕ ದಾನ ನೀಡುವುದರಿಂದ ತಮಗೂ ಪುಣ್ಯ ಲಭಿಸುತ್ತದೆ ಎಂಬ ವಿಶ್ವಾಸವು ಇದ್ದಿತು. ಹೀಗಾಗಿ ಅಗ್ರಹಾರವೆಂದರೆ ಶ್ರೇಷ್ಠವಾದ ಭೂಮಿಯನ್ನು ಬ್ರಾಹ್ಮಣರಿಗೆ ಆಕರವಾಗಿ ಕೊಟ್ಟ ಭೂಭಾಗವಾಗಿರುತ್ತಿತ್ತು. ಈ ಭೂಭಾಗದ ಎಲ್ಲಾ ಆದಾಯಗಳೂ ದಾನ ಪಡೆದ ಬ್ರಾಹ್ಮಣರಿಗೆ ಸೇರುತ್ತಿದ್ದು ಅವರುಗಳನ್ನು ಮಲೆನಾಡಿನ ಶಾಸನಗಳಲ್ಲಿ ಮಹಾಜನಂಗಳು ಎಂದು ಕರೆಯಲಾಗಿದೆ. ಡಾ. ಚಿದಾನಂದಮೂರ್ತಿಯವರು ಶಾಸನಗಳಲ್ಲಿ ಬರುವ ಮಹಾಜನರ ವಿಶೇಷಣಗಳು ಬ್ರಾಹ್ಮಣರದ್ದಾಗಿದೆ. ಇವರು ಶಾಸ್ತ್ರ ಮತ್ತು ಶಸ್ತ್ರಗಳಲ್ಲಿ ಪ್ರವೀಣರಾಗಿದ್ದರು ಎನ್ನುವರು. ಮಹಾಜನಗಳು ಬ್ರಾಹ್ಮಣರೇ ಆಗಬೇಕಿಲ್ಲವೆಂದು ಮಹಾಜನಗಳಲ್ಲಿ ಬ್ರಾಹ್ಮಣರೇತರರು ಕಡಿಮೆ ಸಂಖ್ಯೆಯಲ್ಲಾದರೂ ಇದ್ದಿರಬಹುದೆಂದು ಡಾ. ಅಲ್ತೇಖರ್ ಅಭಿಪ್ರಾಯಪಟ್ಟು ಶಾಸನಗಳನ್ನು ಉದಾಹರಿಸುತ್ತಾರೆ.

'ಅಗ್ರಹಾರ'ಗಳ ಮೂಲಕ ಬ್ರಾಹ್ಮಣ ವರ್ಗದಲ್ಲಿ ವಿದ್ಯಾಪ್ರಸಾರದ ಕಾರ್ಯ ನಿರ್ವಹಿಸುವ ಬ್ರಾಹ್ಮಣರು ತಮ್ಮದೇ ಆದ ಸಂಘಟನೆಯನ್ನು ರೂಪಿಸಿಕೊಂಡಿದ್ದರು. ಅವರು ಅರಸನಿಂದ ಕಾಣಿಕೆಗಳನ್ನು ಸ್ವೀಕರಿಸಿ ಅಗ್ರಹಾರಗಳನ್ನು ನಡೆಸಿಕೊಂಡಿದ್ದರು. ಅವರಿಗೆ ಭೂಮಿಯನ್ನು ದಾನವಾಗಿ ನೀಡಿದ ಉದಾಹರಣೆ ಇದೆ. ಇಂತಹ ಅಗ್ರಹಾರಗಳು ಬ್ರಾಹ್ಮಣರಿಗೆ ದತ್ತಿಯಾಗಿ ನೀಡಲ್ಪಟ್ಟ ಊರುಗಳು. ಈ ಊರುಗಳ ಆದಾಯ ಪೂರ್ಣವಾಗಿ ಅವರಿಗೆ ಸಲ್ಲುತ್ತಿತ್ತು. ಅವರು ಒಂದು ರೀತಿಯಲ್ಲಿ ಅಗ್ರಹಾರಗಳ ಪ್ರಭುಗಳಾಗಿದ್ದರು. ಅಗ್ರಹಾರದ ಬ್ರಾಹ್ಮಣರನ್ನು ಅವರ ಗುಣಗಳಿಗಾಗಿ, ವಿದ್ವತ್ತಿಗಾಗಿ, ಧೈರ್ಯ, ಸಾಹಸ ಮತ್ತು ದಾನ - ಗುಣಗಳಿಗಾಗಿ ಶಾಸನಗಳು ಹೊಗಳಿವೆ. ಅಗ್ರಹಾರಗಳ ಬ್ರಾಹ್ಮಣ ಕುಟುಂಬಗಳ ಮುಖ್ಯಸ್ಥರೇ ಮಹಾಜನರೆಂದು ಹೆಚ್ಚಿನ ವಿದ್ವಾಂಸರ ಅಭಿಪ್ರಾಯವಾಗಿದೆ.

ಮಹಾಜನರು

ಇವರು ಒಂದು ಸಂಸ್ಥೆಯಾಗಿ ಹಲವಾರು ಉಪಯುಕ್ತ ಕಾರ್ಯಗಳನ್ನು ನಿರ್ವಹಿಸಿರುವುದು ಕಂಡುಬರುತ್ತದೆ. ಮಹಾಜನರು ಎಂಬ ಸಂಸ್ಥೆಯಲ್ಲಿ ಹತ್ತರಿಂದ ಐನೂರು ಅಥವ ಅದಕ್ಕಿಂತ ಹೆಚ್ಚಿನ ಸಂಖ್ಯೆಯ ಮಹಾಜನರಿರುತ್ತಿದ್ದರು. ಆ ಊರಿನ ಸಮಸ್ತ ಚಟುವಟಿಕೆಗಳೆಲ್ಲವನ್ನು ಈ ಮಹಾಜನರು ನಿಯಂತ್ರಿಸುತ್ತಿದ್ದರು. ದೇವಸ್ಥಾನ ನಿರ್ಮಾಣ, ವಿದ್ಯಾಭ್ಯಾಸ ಇತ್ಯಾದಿ ಸಾಂಸ್ಕೃತಿಕ ಕಾರ್ಯಗಳಿಗೆ, ಕೆರೆಯನ್ನು ಕಟ್ಟಿಸುವುದು ಇತ್ಯಾದಿ ಸಾಮಾಜಿಕ ಕಾರ್ಯಗಳಿಗೆ ಮಹಾಜನರು ಬೇಕಾದಷ್ಟು ದತ್ತಿಗಳನ್ನು ಬಿಟ್ಟುಕೊಟ್ಟಿದ್ದಾರೆ. ಅಗ್ರಹಾರದ ನ್ಯಾಯ ಪರಿಪಾಲನೆಯು ಮಹಾಜನರ ಕರ್ತವ್ಯಗಳಲ್ಲೊಂದು. ಗ್ರಾಮ ಸಂಸ್ಥೆಗಳಿಂದ ಗ್ರಾಮದ ಆಡಳಿತ ಹೇಗೆ ನಡೆಯುತ್ತದೆಯೋ

ಹಾಗೆ ಅಗ್ರಹಾರದ ಆಡಳಿತ ಸಂಪೂರ್ಣವಾಗಿ ಮಹಾಜನರಿಂದ ನಡೆಯುತ್ತಿದ್ದಿತ್ತು. ಮಹಾಜನರು ಆಡಳಿತದ ವಿವಿಧ ಘಟ್ಟದಲ್ಲಿ ಆಗಾಗ ಸಭೆ ಸೇರಬೇಕಾಗುತ್ತಿತ್ತು. ಮಹಾಜನರು ಊರಿನ ಮಂಟಪದಲ್ಲೋ ಬ್ರಾಹ್ಮಣರ ಶಾಲೆಯಲ್ಲೋ, ದೇವಾಲಯಗಳಲ್ಲೋ ಸಭೆಗಳನ್ನು ನಡೆಸುತ್ತಿದ್ದರು. ಸಭೆಗಳು ಮಹಾಜನರ ಮುಖ್ಯಸ್ಥ, ಊರೊಡೆಯನ ಸಮಕ್ಷಮದಲ್ಲಿ ನಡೆಯುತ್ತಿದ್ದವು. ಅನೇಕ ಶಾಸನಗಳಲ್ಲಿ ಸಭೆ ನಡೆದು 'ತಮ್ಮೊಳೇಕ ಮತ್ಯವಾಗಿ', 'ಆಶೇಷ ಮಹಾಜನಾಂಗಳಿಗೆ ಕೊಟ್ಟ' ಎಂಬಂತಹ ಮಾತುಗಳು ಕಂಡುಬಂದಿವೆ. ಇದಕ್ಕೆ ನಿದರ್ಶನವೆಂದರೆ ಈಚಲುಬೈಲು ಶಾಸನದಲ್ಲಿ ಒಂಭತ್ತು ಅಗ್ರಹಾರ ಒಳಗಾದ ಈ ಮನ್ಮಮಹಾಪ್ರಭುಗಳು ಸಮಸ್ತ ನಾಡು ಮಹಾಜನಗಳು ತಮ್ಮೊಳು ಏಕಮತ್ಯವಾಗಿ ತಮಗೆ ವಿಷ್ಣುಲೋಕ ಪ್ರಾಪ್ತಿಯಾಗಬೇಕೆಂದು ಕೊಟ್ಟ ಭೂದಾನ ಶಾಸನ ಎಂದಿದೆ.[೧೮೭] ಶೃಂಗೇರಿಗೆ ಸಂಬಂಧಿಸಿದ ಅಗ್ರಹಾರಗಳು ಯತಿಗಳ ಹೆಸರಿನೊಂದಿಗೆ ಉಕ್ತವಾಗಿರುವುದನ್ನು ಕಾಣಬಹುದು. ಉದಾಹರಣೆಗೆ ಶೃಂಗೇರಿಯ ಶಾಸನವೊಂದರಲ್ಲಿ ವಿಜಯನಗರದ ದೊರೆ ವೀರಹರಿಹರರಾಯನು ವಿದ್ಯಾರಣ್ಯ ಶ್ರೀಪಾದಂಗಳವರು ಪರಿಪೂರ್ಣರಾದಾಗ, ಶೃಂಗೇರಿಯ ಗ್ರಾಮಾಶ್ರಿತ ಮಹಾಜನಗಳಿಗೆ ಕಿಕ್ಕುಂದನಾಡು ಮತ್ತು ಹೊನ್ನಿನ ಸ್ಥಳವನ್ನು ನೂರು ವೃತ್ತಿಗಳನ್ನಾಗಿ ಮಾಡಿ 'ವಿದ್ಯಾರಣ್ಯಪುರ' ಎಂದು ಹೆಸರಿಸಿ ಹಂಪೆಯ ಶ್ರೀ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ದಾನ ಬಿಟ್ಟಿದ್ದನ್ನು ತಿಳಿಸುತ್ತದೆ. ಈ ನೂರು ವೃತ್ತಿಗಳಲ್ಲಿ ಶೃಂಗೇರಿಯ ಶ್ರೀವಿದ್ಯಾಶಂಕರ ದೇವರಿಗೆ ಮತ್ತು ಶ್ರೀ ಜನಾರ್ಧನ ದೇವರಿಗೆ ವಿದ್ಯಾವಿಶ್ವೇಶ್ವರ ದೇವರಿಗೆ ತಲಾ ಒಂದು ವೃತ್ತಿಯನ್ನು ಬಿಟ್ಟಿದ್ದು ದೇವಸ್ಥಾನಗಳಿಗೆ ನಾಲ್ಕು ವೃತ್ತಿ ಎಂದು ತಿಳಿಸಿದೆ. ಇದರಿಂದ ಅಗ್ರಹಾರಗಳಲ್ಲಿ ದೇವದೇಯ, ಬ್ರಹ್ಮದೇಯ ಎರಡರ ಭಾಗವೂ ಇರುತ್ತಿತ್ತೆಂದು ತಿಳಿದುಬರುತ್ತದೆ.[೧೮೮]

ಇನ್ನೊಂದು ಶಾಸನದಲ್ಲಿ ಶೃಂಗೇರಿಯ ಶ್ರೀ ನರಸಿಂಹಭಾರತೀಸ್ವಾಮಿಗಳು ಅವರ ಗುರುಗಳು ಪೂಜಿಸುತ್ತಿದ್ದ ಶ್ರೀ ನೃಸಿಂಹೇಶ್ವರ ದೇವರ ಪ್ರೀತ್ಯಾರ್ಥವಾಗಿ ಶ್ರೀ ನರಸಿಂಹಪುರವೆಂಬ ಹೆಸರಿನ ಅಗ್ರಹಾರವನ್ನು, ಪಶ್ಚಿಮ ವಾಹಿನಿಯಾದ ತುಂಗಾ-ಭದ್ರಾ ತೀರದ ವಶಿಷ್ಟಾಶ್ರಮದಲ್ಲಿ ನಾನಾ ಗೋತ್ರ, ನಾನಾ ಸೂತ್ರದ ಆಶೇಷ ವಿದ್ವನ್ ಮಹಾಜನಂಗಳಿಗೆ ಸರ್ವಸಮ್ಮತವಾಗಿ ಕೊಟ್ಟ ಧರ್ಮಶಾಸನವೆಂದು ಉಲ್ಲೇಖಿಸುತ್ತದೆ.[೧೮೯]

ಕೆಲವೊಂದು ಸಂದರ್ಭಗಳಲ್ಲಿ ಅಗ್ರಹಾರದ ಬ್ರಾಹ್ಮಣರಿಗೆ ಸಂಕಟ ಒದಗಿದಾಗ ತಮ್ಮ ಪಾಲಿನ ಭೂಮಿಯನ್ನು ಗುತ್ತಿಗೆಗೆ ಕೊಡುತ್ತಿದ್ದುದನ್ನು ಈ ಭೂಮಿಯ ಸಿದ್ದಾಯವನ್ನು ಗುತ್ತಿಗೆದಾರನೇ ನೀಡುತ್ತಿದ್ದನು ಎನ್ನುವುದಕ್ಕೆ ಹರಾವರಿ ಶಾಸನವು ಕ್ರಯದಾನದ ಶ್ರೋತ್ರಗುತ್ತಿಗೆಯ ಪತ್ರಶಾಸನವಾಗಿದ್ದು ಬ್ರಾಹ್ಮಣರು ಪಡೆದಿದ್ದ ವೃತ್ತಿ ಭೂಮಿಯನ್ನು ಮಲ್ಲಣ್ಣನವರಿಗೆ ಶ್ರೋತ್ರಗುತ್ತಿಗೆಯಾಗಿ ಕೊಟ್ಟಿದ್ದನ್ನು ತಿಳಿಸುತ್ತದೆ.[೧೯೦]

ಅಗ್ರಹಾರವೊಂದು ಅಪರೂಪಕ್ಕೆ 'ಗ್ರಾಮದಾನ'ವಾಗಿ ಪರಿಣಮಿಸಿದ ಸಂಗತಿಯು ಕೆಳಬೆಳ್ಳೂರು ಶಾಸನದಲ್ಲಿ ಉಲ್ಲೇಖವಾಗಿದೆ.ಇದಕ್ಕೆ ಪೂರಕವಾಗಿ ಶ್ರೀ ರಾಮಚಂದ್ರ ಭಾರತಿ ಒಡೆಯರು

ಕೆಳಬೆಳ್ಳೂರಿನ ಮೂಲಿಗಳಾದ ಕಜ್ಜರಸ, ಸಂಜಯ, ಬೊಮ್ಮಯ್ಯರಿಂದ ಶ್ರೀಮಠಕ್ಕೆ ಸಲ್ಲಬೇಕಾದ ಸಿದ್ದಾಯವು ಸಲ್ಲದೇ ಉಳಿದುಬಂದ ನಿಮಿತ್ತವಾಗಿ, ಆ ಗ್ರಾಮವನ್ನು ಕಾರ್ಕಳದ ಭಾರದ್ವಾಜ ಗೋತ್ರದ ಋಕ್ ಶಾಖೆಯ ಸೂರಪ್ಪ ಸೇನಾಭೋವರಿಗೆ ವಹಿಸಿಕೊಡುತ್ತಾರೆಂದು ಕೆಳಬೆಳ್ಳೂರಿನ ಶಾಸನದಲ್ಲಿ ಮಾಹಿತಿ ಇದೆ.[೧೯೧]

ಕೆಲವು ಸಾರಿ ಸ್ಥಳೀಯ ಅಧಿಕಾರಿಗಳೊಂದಿಗೆ ಸೇರಿ ದಾನದತ್ತಿಗಳನ್ನು ಮತ್ತು ಧರ್ಮವನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ಹೊತ್ತಿರುತ್ತಿದ್ದರು. ಇದಕ್ಕೆ ನಿದರ್ಶನವೆಂದರೆ ತೀರ್ಥಮುತ್ತೂರು ಶಾಸನದಲ್ಲಿ 'ಸಮಸ್ತ ಮಹಾಜನಂಗಳು ಕೊಟ್ಟ ಕ್ರಯ ಮೂಲ ದಾನಪತ್ರದ ಕ್ರಮ' ಎಂದಿದೆ.[೧೯೨]

ತೀರ್ಥಹಳ್ಳಿ ಶಾಸನದಲ್ಲಿ 'ಈ ಧರ್ಮಪ್ರತಿಪಾಲಕರು ಬುಕ್ಕರಾಜಪುರದ ತೀರ್ಥಹಳ್ಳಿಯ ಮಹಾಜನಾಂಗಳು ಯೀ ಧರ್ಮವನ್ನು...' ಎಂದಿದೆ.[೧೯೩]

ಸಮಷ್ಟಿಯಾಗಿ ಮಧ್ಯಮಲೆನಾಡಿನ ಶಾಸನಗಳಲ್ಲಿ ಅಗ್ರಹಾರಗಳ ನಿರ್ಮಾಣಕ್ಕೆ ಬ್ರಾಹ್ಮಣರಿಗೆ ಯಥೇಚ್ಛವಾಗಿ ದಾನಗಳನ್ನು ನೀಡಿರುವುದು ಕಂಡುಬರುತ್ತದೆ. ಅಗ್ರಹಾರಗಳ ಸ್ಥಾಪನೆ ಹಾಗೂ ಬ್ರಾಹ್ಮಣರನ್ನು ಸಂತೃಪ್ತಿಗೊಳಿಸುವುದು ತಮ್ಮ ಆದ್ಯ ಕರ್ತವ್ಯ ಎಂದು ರಾಜರುಗಳು ತಿಳಿದಿದ್ದರು. ಹೀಗಾಗಿ ಕೆಳದಿಯ ಅರಸರ ಕಾಲದಲ್ಲಿ ತೀರ್ಥಹಳ್ಳಿಯಲ್ಲಿಯೇ ಸುಮಾರು ೬೦ ಅಗ್ರಹಾರಗಳು ಸ್ಥಾಪನೆಯಾಗಿದ್ದವು. ವರ್ಣವ್ಯವಸ್ಥೆಯಲ್ಲಿ ಮೇಲುವರ್ಗದಲ್ಲಿದ್ದ ಬ್ರಾಹ್ಮಣರು ಶಾಸ್ತ್ರ, ಆಗಮಗಳನ್ನು ಅಭ್ಯಸಿಸಿ ವಿದ್ಯೆ ಮತ್ತು ಜ್ಞಾನದ ವಿಷಯದಲ್ಲಿ ಮೊದಲಿಗರಾಗಿದ್ದರು. ಬ್ರಾಹ್ಮಣರನ್ನು ಗೌರವಿಸುವುದೆಂದರೆ ಸ್ವತಃ ದೇವರನ್ನೇ ಗೌರವಿಸಿದಂತೆ ಎಂಬ ಒಂದು ಆಲೋಚನೆಯೇ ಹೇರಳವಾಗಿ ನೀಡಲಾದ ದಾನ ದತ್ತಿಯ ಹಿಂದೆ ಕೆಲಸ ಮಾಡಿದಂತೆ ತೋರುತ್ತದೆ. ಬ್ರಾಹ್ಮಣರ ಸಂತರ್ಪಣೆಗಾಗಿ ದಾನ ನೀಡುವ ಕ್ರಮವಿತ್ತೆಂದು ಶಾಸನಗಳಿಂದ ತಿಳಿಯಬಹುದಾಗಿದೆ. ದಾನದ ದುರುಪಯೋಗವಾಗಬಹುದೆಂಬ ಭಯದಿಂದ ಶಾಸನಗಳಲ್ಲಿ ಕೆತ್ತಲಾಗಿರುವ ಶಾಪಾಶಯಗಳಲ್ಲಿ ಪವಿತ್ರ ಕ್ಷೇತ್ರಗಳಲ್ಲಿರುವ ಪ್ರಾಮುಖ್ಯತೆ ಬ್ರಾಹ್ಮಣರಿಗೂ ಇದೆ. ಅವರ ಹತ್ಯೆ ಪಂಚಮಹಾಪಾತಕಗಳಲ್ಲಿ ಒಂದೆಂದು ಹೇಳುವ ಮೂಲಕ ಸಮಾಜದಲ್ಲಿ ಬ್ರಾಹ್ಮಣರಿಗೆ ಇದ್ದ ಉನ್ನತ ಸ್ಥಾನವನ್ನು ವ್ಯಕ್ತಪಡಿಸುತ್ತದೆ. ಬ್ರಾಹ್ಮಣರನ್ನು ಗೌರವಿಸುವುದು ತಮ್ಮ ಕರ್ತವ್ಯವೇ ಆಗಿ ಅರಸನಿಂದ ಜನಸಾಮಾನ್ಯರವರೆಗೂ ಅದನ್ನು ಪಾಲಿಸಿಕೊಂಡು ಬರತಕ್ಕದು ಎಂಬ ವಿಚಾರ ಜೀವನದ ಪ್ರಮುಖ ಅಂಶಗಳಲ್ಲಿ ಒಂದಾಯಿತು.

ಈ ಮೇಲಿನ ಶಾಸನಗಳನ್ನು ಮತ್ತು ಮಾಹಿತಿಗಳನ್ನು ವಿಶ್ಲೇಷಿಸಿದಾಗ ಅಗ್ರಹಾರಗಳು ರಾಜರುಗಳಿಂದ ಬ್ರಾಹ್ಮಣರಿಗೆ, ಪುರೋಹಿತರಿಗೆ ದಾನಪೂರ್ವಕವಾಗಿ ಕೊಡಲ್ಪಟ್ಟವುಗಳು. ದಾನವನ್ನು ಪಡೆದುಕೊಂಡ ಅಗ್ರಹಾರಗಳು ಭೂಮಾಲೀಕರ ಶೋಷಿತರ ಬಂಡವಾಳಶಾಹಿಗಳ ಪ್ರಧಾನ ಕೇಂದ್ರಗಳಾಗಿ ರೂಪುಗೊಂಡವು. ಅರಸರು ಸಮಾಜದಲ್ಲಿ ಬಹುಸಂಖ್ಯಾತ ಜನರ ಕಲ್ಯಾಣವನ್ನು

ನಿರ್ಲಕ್ಷಿಸಿ ಅಲ್ಪಸಂಖ್ಯಾತರಾದ ಬ್ರಾಹ್ಮಣರಿಗೆ ಯಥೇಚ್ಛವಾಗಿ ಭೂದಾನ ನೀಡಿದ್ದು, ಅಗ್ರಹಾರಗಳನ್ನು ನಿರ್ಮಿಸಿದ್ದುದನ್ನು ಗಮನಿಸಿದರೆ ಅಲ್ಪಸಂಖ್ಯಾತರ ತುಷ್ಟೀಕರಣವೇ ಪ್ರಧಾನವಾದ ಅಂಶವಾಗಿದ್ದಿತು. ಅಗ್ರಹಾರಗಳಲ್ಲಿ ಕೇವಲ ಬ್ರಾಹ್ಮಣರಿಗೆ ವಿದ್ಯಾದಾನ ನೀಡಿದರೇ ಹೊರತು ಕೆಳವರ್ಗದ ಜನರನ್ನು ನಿಕೃಷ್ಟವಾಗಿ ಕಂಡು ವಿದ್ಯಾಕೇಂದ್ರದಿಂದ ದೂರವಿಟ್ಟರು.

೨.೨.೩. ಗಾವುಂಡರು

ಮಧ್ಯಮಲೆನಾಡಿನಲ್ಲಿ ಗಾವುಡ, ಸಮಸ್ತಪ್ರಭು, ಸೇನಭೋವ ಹಲರು, ಹದಿನೆಂಟು ಕಂಪಣ ಎಂಬ ಗ್ರಾಮ ಸಂಸ್ಥೆಗಳು ಮತ್ತು ಗ್ರಾಮದ ಮುಖ್ಯಸ್ಥರ ಉಲ್ಲೇಖವಿರುವುದನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ.

ಇಡೀ ಗ್ರಾಮದ ಸಭೆಯನ್ನು ಊರು ಎಂದು ಕರೆಯಲಾಗುತ್ತಿತ್ತು. ಊರ ಸಭೆ ಗಾವುಂಡನ ನೇತೃತ್ವದಲ್ಲಿ ಸೇರಿ ಆ ಗ್ರಾಮಕ್ಕೆ ಸಂಬಂಧಿಸಿದ ಸಾರ್ವಜನಿಕ ಕಾರ್ಯಗಳನ್ನು ನಿರ್ವಹಿಸುತ್ತಿತ್ತು. ಅದು ಸಭೆಯಲ್ಲಿ ಒಮ್ಮತದಿಂದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿತ್ತು. ಶಾಸನಗಳಲ್ಲಿ ಅದನ್ನು ನೆರೆದು, ಅನುಮತದಿಂದ, ಒಡಂಬಟ್ಟು, ಏಕಸ್ಥರಾಗಿ, ಸರ್ವೇಕಮತ್ಯವಾಗಿ ಎಂಬ ಮಾತುಗಳ ಉಲ್ಲೇಖವಿದೆ.

ಗಾವುಂಡಗಳು ಊರಿನ ಯಾವುದೇ ಧರ್ಮಕಾರ್ಯಗಳಿಗೆ ಮುಂದೆ ನಿಲ್ಲುತ್ತಿದ್ದರು. ಅವರು ಸ್ವತಂತ್ರರಾಗಿಯೋ ಅಥವ ಸ್ಥಳೀಯ ಸಂಸ್ಥೆಗಳ ಜೊತೆ ಸೇರಿಯೋ ಅಥವ ಬೇರೆ ಅಧಿಕಾರಿಗಳ ಜೊತೆ ಸೇರಿಯೋ ಅನೇಕ ಧರ್ಮಕಾರ್ಯಗಳಲ್ಲಿ ಭಾಗಿಗಳಾಗುತ್ತಿದ್ದರು.

ಅರಳಸುರಳಿ ಶಾಸನದಲ್ಲಿ ಮೂವತ್ತಾರು ಹಳ್ಳಿಯ ಸಮಸ್ತ ಗೌಡ ಪ್ರಜೆಗಳು ತಮ್ಮ ಒಪ್ಪಿಗೆಯಿಂದ ದಾನವಾಗಿ ಕೊಟ್ಟಿದ್ದರ ಬಗ್ಗೆ ಉಲ್ಲೇಖವಿದೆ.[೧೯೪]

ಆರಗ ಶಾಸನದಲ್ಲಿ ಶ್ರೀಕಲಿನಾಥ ದೇವರಿಗೆ ಆರಗದ ಹದಿನೆಂಟು ಕಂಪಣದೊಳಗಿನ ಮದುವಂಕ ನಾಡಿನ ಮೂವತ್ತರ ಸಮಸ್ತ ಗಾವುಡ ಪ್ರಜೆಗಳು ಸರ್ವಾನುಮತದಿಂದ ಈ ದೇವರಿಗೆ ಭೂದಾನ ಮಾಡಿದ ಉಲ್ಲೇಖವಿದೆ.[೧೯೫]

ನಿಟ್ಟೂರು ಶಾಸನವು ಕೋಶಾಧಿಕಾರಿಯಾದ ಮಲ್ಲಪ್ಪಗಳಿಗೆ ಆರಗದ ವಿರೂಪ್ಪಣ ಒಡೆಯರ ನಾಗಗವುಡ ಹೆಗ್ಗಡೆ ಮತ್ತು ಬೋಳ ಹಲವನಹಳ್ಳಿಯ ಜೆನಿಯ ತಮ್ಮಗವುಡರು ನೀಡಿದ ದಾನಶಾಸನದ ವಿವರಣೆಯನ್ನು ಒಳಗೊಂಡಿದೆ.[೧೯೬] ಭಂಡಿಕೊಪ್ಪ ಶಾಸನವು ಬಲಾಡಿಗವುಂಡ, ಸಂಕಗವುಂಡ, ವೀರಗಾವುಂಡರ ಹೆಸರುಗಳನ್ನು ಉಲ್ಲೇಖಿಸುತ್ತದೆ.[೧೯೭]

ಹಲವು ಊರುಗಳಲ್ಲಿ ಒಬ್ಬನೇ ಗಾವುಂಡನು, ಇನ್ನು ಕೆಲವು ಊರುಗಳಲ್ಲಿ ಹಲವಾರು ಗಾವುಂಡಗಳು ಇದ್ದುದು ಕಂಡುಬರುತ್ತದೆ. ಈ ಎರಡರಲ್ಲಿ ಯಾವ ಪದ್ಧತಿಯೂ ಪ್ರಾಚೀನವಾದುದು ಎಂಬುದನ್ನು ನಿರ್ಧರಿಸುವುದು ಕಷ್ಟವೆನಿಸುತ್ತದೆ.

ಹೊಸಕೊಪ್ಪ ಶಾಸನವು ವೀರಪ್ಪ ಒಡೆಯ ಆರಗ ರಾಜ್ಯವನ್ನು ಆಳುತ್ತಿದ್ದಾಗ ಆರಗವೇಂಠೆಯಲ್ಲಿ ತಮ್ಮಗವುಡ, ಮುದ್ದಗವುಡ, ನಾಗಗವುಡ, ಕಾಮಣ್ಣಗವುಡರು ಅಧಿಕಾರ ನಡೆಸುತ್ತಿದ್ದರು ಎಂದು ಹೇಳುತ್ತದೆ.[೧೯೮]

ನಾರ್ವೆ ಶಾಸನವು ಬೊಸರಗವುಡ, ಹಿರಿಯಣ್ಣ ಗವುಡ ಮತ್ತು ಸೊಳೆಬಾಳು ಬೊಂಮರಸ ಗವುಡರು ಒಂದೇ ಮನಸ್ಸಿನಿಂದ ಒಪ್ಪಿಕೊಂಡು ನಾರ್ವೆಯ ಗೋಪಾಲಕೃಷ್ಣ ದೇವರು, ವಿಶ್ವೇಶ್ವರ ದೇವರ ದಿವ್ಯ ಶ್ರೀಪಾದಪದ್ಮಂಗಳಿಗೆ ಭೂದಾನ ಕೊಟ್ಟ ವಿವರಣೆಗೆ ಸಾಕ್ಷಿಯಾಗಿ ಮರಗಳಲೆ ಅಂಣಿಗವುಡ, ತನುವಡಿಯ, ಬೊಮ್ಮೆಯಗವುಡ, ತೋಟದ ಕೊಪ್ಪದ ಜೆಟಿಗವುಡರ ಹೆಸರನ್ನು ಉಲ್ಲೇಖಿಸುತ್ತದೆ.[೧೯೯]

ಪಶ್ಚಿಮವಾಹಿನಿ ಶಾಸನದಲ್ಲಿ ಸಮಸ್ತ ಊರು ಗವುಡ(ಡು)ಗಳು ಪಶ್ಚಿಮವಾಹಿನಿಯ ಗೋಪಾಲದೇವರ ಅಮೃತಪಡಿಗೆಂದು ದಾನ ನೀಡಿದ ವಿವರಣೆ ಇದೆ.[೨೦೦]

ಊರಿನ ಯಾವುದೇ ವ್ಯಕ್ತಿ ಶೌರ್ಯ - ಸಾಹಸದಿಂದ ಹೋರಾಡಿದುದನ್ನು ಗೌರವಿಸಿ ಮೃತನ ಕುಟುಂಬಕ್ಕೆ ಭೂಮಿಯನ್ನು ದಾನವಾಗಿ ಕೊಡುವುದರ ಮೂಲಕ ಶೌರ್ಯವನ್ನು ಮೆಚ್ಚುವುದರೊಂದಿಗೆ ಮೃತನ ಕುಟುಂಬದವರು ನಿರ್ಗತಿಕರಾಗದ ಹಾಗೆ ನೋಡಿಕೊಂಡು ದೊಡ್ಡ ಸಾಮಾಜಿಕ ಜವಾಬ್ದಾರಿಯನ್ನು ಗಾವುಂಡಗಳು ನಿರ್ವಹಿಸುತ್ತಿದ್ದರು.

ಪ್ರಾಚೀನಕಾಲದಲ್ಲಿ ಗ್ರಾಮ – ಗ್ರಾಮಗಳ ಮಧ್ಯೆ ಸೀಮಾ ವಿವಾದಗಳ ವಿಷಯಗಳಲ್ಲಿ ಹೋರಾಟಗಳು ನಡೆಯುತ್ತಿದ್ದವು. ಕೆಲವು ಸಾರಿ ಅಕ್ಕ–ಪಕ್ಕದ ಹಳ್ಳಿಗಳ ಗಾವುಂಡಗಳು ಸೇರಿ ವಿವಾದವನ್ನು ಪರಿಹರಿಸುತ್ತಿದ್ದುದುಂಟು. ಇಂಥ ಕಡೆ ಗಾವುಂಡಗಳು ಸ್ಥಳೀಯ ನ್ಯಾಯ ತೀರ್ಮಾನಗಳನ್ನು ಮಾಡುತ್ತಿದ್ದುದು ಕಂಡು ಬರುತ್ತದೆ.[೨೦೧]

ಎಲ್ಲಾ ಸಂದರ್ಭಗಳಲ್ಲಿ ಇಂತಹ ವಿವಾದಗಳನ್ನು ಗಾವುಂಡಗಳೇ ಪರಿಹರಿಸಲು ಸಾಧ್ಯ ವಾಗುತ್ತಿರಲಿಲ್ಲ. ಗೌಡಗಳು ತಮ್ಮ ಕೈಮೀರಿದ ವಿವಾದಗಳನ್ನು ಮೇಲಿನ ಅಧಿಕಾರಿಗಳ ಗಮನಕ್ಕೆ ಅಥವ ರಾಜನ ಗಮನಕ್ಕೆ ತರುತ್ತಿದ್ದರು.

ಗ್ರಾಮಸಭೆಗಳನ್ನು ಕುರಿತು ಈ ರೀತಿಯಾಗಿ ಹೇಳಬಹುದು. ಒಂದೊಂದು ಊರಿನಲ್ಲಿಯೂ ಒಂದೊಂದು ಗ್ರಾಮಸಭೆಯು ಇರುತ್ತಿತ್ತು. ಆ ಸಭೆಯ ಮುಖ್ಯಸ್ಥ ಅಲ್ಲಿಯ ಗಾವುಂಡ ಅಥವಾ ಪ್ರಭುಗಾವುಂಡ. ಗ್ರಾಮಸಭೆಯ ಇತರ ಸದಸ್ಯರು ಆ ಊರಿನ ಸಹಜ ನಾಯಕರಾದ ಹಿರಿಯರು. ಗ್ರಾಮಸಭೆಯ ಮೇಲೆ ರಾಜನ ನೇರವಾದ ಹತೋಟಿ ಇರಲಿಲ್ಲ. ರಾಜ್ಯದಲ್ಲಿ ರಾಜನಿಗೆ ಪರಮಾಧಿಕಾರವಿದ್ದಂತೆ ಗ್ರಾಮದಲ್ಲಿ ಗ್ರಾಮಸಭೆಗೆ ಪರಮಾಧಿಕಾರವಿದ್ದಿತು. ಒಂದೊಂದು ಹಳ್ಳಿಯು ರಾಜ್ಯದೊಳಗಿನ ಪುಟ್ಟ ರಾಜ್ಯವಿದ್ದಂತೆ; ಕೇಂದ್ರಾಡಳಿತಕ್ಕೆ ಮತ್ತು ಹಳ್ಳಿಗೆ ಸಂಪರ್ಕವನ್ನು ಕಲ್ಪಿಸಲು ಗ್ರಾಮಸಭೆಯು ಮಾಧ್ಯಮವಾಗಿದ್ದರೂ ಅದು ಮುಖ್ಯವಾಗಿ ಜನರ ಪ್ರತಿನಿಧಿ. ರಾಜ್ಯಕ್ಕೆ ಸಲ್ಲಬೇಕಾದ ತೆರಿಗೆಗಳ ವಸೂಲಿಯಲ್ಲಿ ರಾಜನಿಗೆ ಸೈನಿಕರನ್ನು ಒದಗಿಸುವುದರಲ್ಲಿ

ಗ್ರಾಮಸಭೆ ಸಹಾಯವನ್ನು ಮಾಡುತ್ತಿದ್ದಿತು. ಗ್ರಾಮದ ವಿವಾದಗಳನ್ನು ಪರಿಹರಿಸಿ ಗ್ರಾಮದ ಅಭಿವೃದ್ಧಿಗಾಗಿ ಶ್ರಮಿಸುತ್ತಿತ್ತು. ಹೀಗೆ ಗ್ರಾಮಸಭೆಯು ಆಧುನಿಕ ಕಾಲದ ಕಲೆಕ್ಟರ್, ಮ್ಯಾಜಿಸ್ಟ್ರೇಟ್ ಮತ್ತು ಮುನಿಸಿಪಾಲಿಟಿಗಳ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಿತು. ಗ್ರಾಮಸಭೆಗಳು ಜನತೆಯದ್ದಾದ್ದರಿಂದ ಅವುಗಳ ಸ್ವರೂಪವು ಸಮಾಜವಾದಿ ಸಂಸ್ಥೆಗಳಂತಿದ್ದು ಶುದ್ಧ ಪ್ರಜಾಪ್ರಭುತ್ವ ತತ್ವಗಳನ್ನು ಅಳವಡಿಸಿಕೊಂಡಿದ್ದವು.

೨.೨.೪. ಸೇನಾಭೋವ

ಸುಶಿಕ್ಷಿತರಾಗಿದ್ದು, ಆಯಾಯ ಗ್ರಾಮಗಳಿಗೆ ಸೇನಾಭೋವರು ಸಂಬಂಧಿಸಿದ ಲೆಕ್ಕಪತ್ರಗಳ ತಪಾಸಣೆ ನಡೆಸುವುದು ಮತ್ತು ಅವುಗಳನ್ನು ವ್ಯವಸ್ಥಿತವಾಗಿ ಇರಿಸಿಕೊಳ್ಳುವ ಜವಾಬ್ದಾರಿಯುತ ಆಡಳಿತಾಧಿಕಾರಿಯಾಗಿದ್ದರು. ಗ್ರಾಮಗಳ ಆಡಳಿತದಲ್ಲಿ ಗಾವುಂಡನಿಗೆ ಆಪ್ತಕಾರ್ಯದರ್ಶಿಯಂತೆ ಸೇನಾಭೋವನಿರುತ್ತಿದ್ದನು. ಬರವಣಿಗೆಯಲ್ಲಿ ಆತ ಪಳಗಿದವನಾಗಿರುತ್ತಿದ್ದ. ಅನೇಕ ಶಾಸನಗಳ ಕೊನೆಯಲ್ಲಿ ಶಾಸನವನ್ನು ಬರೆದಾತ ಸೇನಾಭೋವನೆಂಬ ಮಾತು ಕಂಡುಬರುತ್ತದೆ. ಎಷ್ಟೋ ವೇಳೆ ಶಾಸನಗಳ ಪಾಠವನ್ನು ಸಿದ್ಧಪಡಿಸುತ್ತಿದ್ದವನು ಸೇನಾಭೋವನೇ ಆಗಿದ್ದನು(ಕುಲಕರ್ಣಿ ಎಂಬುದು ಸೇನಾಬೋವನಿಗಿದ್ದ ಮತ್ತೊಂದು ಹೆಸರು). ವಾಸ್ತವವಾಗಿ ಇವನ ಸ್ಥಾನ ಗ್ರಾಮದ ಗೌಡನಿಗಿಂತ ಕೆಳಗಿನದಾದರೂ ಇವನು ಬಹು ಪ್ರಭಾವಶಾಲಿಯಾದ ವ್ಯಕ್ತಿಯಾಗಿದ್ದಿರಬೇಕು. ನಿದರ್ಶನಕ್ಕೆ ನಿಟ್ಟೂರು[೨೦೨] ಶಾಸನದ ಅಂತ್ಯದಲ್ಲಿ 'ಆ ನಾಡ ಸೇನಾಬೋವ ದೇವಪ್ಪನ ಬರಹ' ಎಂದಿದೆ. ಭಂಡಿಕೊಪ್ಪ ಶಾಸನದಲ್ಲಿ ಸೇನಬೋವ ದೇವರಸ ಎಂದು, ಅಲಗವಳ್ಳಿ[೨೦೩] ಶಾಸನದಲ್ಲಿ ಮದುವಂಕ ನಾಡ ಸೇನಾಭೋವ ಸಿಂಗಣ್ಣನ ಬರಹ ಎಂದು ಶಾಸನದ ಕೊನೆಯಲ್ಲಿ ಹೇಳಲಾಗಿದೆ.[೨೦೪] ಕರಡಿಕೋಡು[೨೦೫] ಶಾಸನದಲ್ಲಿ ನಾಡಸೇನಬೋವ ವೆಂಕಣ್ಣನ ಬರಹ ಎಂತಲೂ ವಿವರಣೆ ಇದೆ.

ಹೊಸಕೊಪ್ಪದ ಶಾಸನದಲ್ಲಿ[೨೦೬] "ಯಿಂತಪುದ"ಕ್ಕೆ ಹೊಂಬುಜನಾಡ ಸೇನಬೋವ ಮಲ್ಲನ ಬರಹ ಆ ಹೊಂಬುಚ್ಚ ಸಮಸ್ತ ಗೌಡುಗಳ ಒಪ್ಪ ಶ್ರೀ ಬಿಲ್ಲೇಶ್ವರ ದೇವರು' ಎಂದಿದೆ.

ನಾರ್ವೆ ಶಾಸನದಲ್ಲಿ[೨೦೭] ಅಣ್ಣಾಜಿಸೇನಾಬೋವನ ಬರಹ, ಸಂಕಯ್ಯ ಸೇನಬೋವರ ತಿಮ್ಮಪ್ಪನ ಬರಹ ಎಂಬ ಮಾತುಗಳು ಉಲ್ಲೇಖವಾಗಿವೆ.

ಹರಿಹರಮನೆ ಶಾಸನದಲ್ಲಿ[೨೦೮] ಶಾಪಾಶಯ ಮತ್ತು ಪುಣ್ಯಾಶಯಗಳನ್ನು ವಿವರಿಸುತ್ತಾ 'ಯಿಂತಪುದಕ್ಕೆ ಆ ಊರ ಕುಳದ ಸೇನಭೋವ ಮಾದಪ್ಪನ ಬರಹ ಆ ಮಹಾಜನಂಗಳ ಒಪ್ಪ ಶ್ರೀಲೋಕ ಮಹೇಶ್ವರಿದೇವಿ' ಎಂದಿದೆ.

ಹೀಗಾಗಿ ಶಾಸನಗಳ ರಚನೆಯಲ್ಲಿ ಸೇನಾಭೋವ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದು ಕಂಡು ಬರುತ್ತದೆ. ಸೀಮೆಗಳಿಂದ ಬರುವ ಸಾಮಗ್ರಿಗಳನ್ನು ಸಂಗ್ರಹಿಸುವುದು, ಅವುಗಳನ್ನು ಮಠ ಮತ್ತು ದೇವಸ್ಥಾನಕ್ಕೆ ಸಮರ್ಪಿಸುವುದು ಹಾಗೂ ಇಲ್ಲಿನ ಧಾರ್ಮಿಕ ಕಾರ್ಯಗಳ

ಮೇಲ್ವಿಚಾರಣೆ ನೋಡಿಕೊಳ್ಳುವುದು ಇವನ ಇತರೆ ಕಾರ್ಯಗಳಾಗಿದ್ದವು. ಅರಸನೊಂದಿಗೆ ನಿಕಟಪೂರ್ವ ಸಂಪರ್ಕ ಹೊಂದಿರುತ್ತಿದ್ದನು.

ಕೊನೆ ಟಿಪ್ಪಣಿಗಳು

೧. ಎಕ ೧೩ (ಬಿ.ಎಲ್. ರೈಸ್ ಸಂಪುಟ), ತೀರ್ಥಹಳ್ಳಿ, ಪೀಠಿಕೆ, ಪು.ಸಂ. ೪೨, ೪೩.

೨. ಇದೇ, ತೀರ್ಥಹಳ್ಳಿ ೨೦೫, ಕ್ರಿ.ಶ. ೧೪೦೪.

೩. ಎಕ ೧೨ (ಬಿ.ಎಲ್. ರೈಸ್ ಸಂಪುಟ) ಕೊಪ್ಪ, ಪೀಠಿಕೆ, ಪು.ಸಂ. ೪೮, ೪೯.

೪. ಎಕ ೧೧ (ಬಿ.ಎಲ್. ರೈಸ್ ಸಂಪುಟ), ಶೃಂಗೇರಿ, ಪೀಠಿಕೆ, ಪು.ಸಂ. ೪೯.

೫. ಇದೇ, ಶೃಂಗೇರಿ ಪೀಠಿಕೆ ಪು.ಸಂ. ೫೬.

೬. ಇದೇ, ತೀರ್ಥಹಳ್ಳಿ, ಪೀಠಿಕೆ, ಪು.ಸಂ. ೪೬.

೭. ಇದೇ, ಕೊಪ್ಪ ೮, ಕ್ರಿ.ಶ. ೧೩೨೭.

೮. ಇದೇ, ಕೊಪ್ಪ ೯, ಕ್ರಿ.ಶ. ೧೩೩೯.

೯. ಇದೇ, ಕೊಪ್ಪ ೧೦, ಕ್ರಿ.ಶ. ೧೩೨೮.

೧೦. ಇದೇ, ಶೃಂಗೇರಿ ೨೫, ಕ್ರಿ.ಶ. ೧೧೫೦.

೧೧. ಇದೇ, ಶೃಂಗೇರಿ ೨೦, ಕ್ರಿ.ಶ. ೧೧೬೧.

೧೨. ಇದೇ, ತೀರ್ಥಹಳ್ಳಿ ೧೭೩, ಕ್ರಿ.ಶ. ೧೧೦೩.

೧೩. ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ, ಸಂಪಾದಕರು ಮಲೆಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು.ಸಂ. ೫೧.

೧೪. ಆರ್ಕ್ಯೋಲಾಜಿಕಲ್ ಸರ್ವೆ ಆಫ್ ಮಸೂರ್ ಆನ್ಯುವೆಲ್ ರಿಪೋರ್ಟ್ ಎಂ.ಎ.ಆರ್. ಸಂಪುಟ–೩, ೧೯೧೨ ಪು. ೧೪೫ರಿಂದ ೧೪೯.

೧೫. ಪೂರ್ವೋಕ್ತ, ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ: ಪು.ಸಂ. ೫೪.

೧೬. ಇದೇ, ಪು.ಸಂ. ೫೪.

೧೭. ಇದೇ, ಪು.ಸಂ. ೫೫.

೧೮. ಎಕ ೧೫ ಹೊಸನಗರ ೮೧, ಕ್ರಿ.ಶ. ೧೦೭೭.

೧೯. ಪೂರ್ವೋಕ್ತ, ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ: ಪು.ಸಂ. ೫೬.

೨೦. ಅದೇ, ತೀರ್ಥಹಳ್ಳಿ ೧೭೩, ಕ್ರಿ.ಶ. ೧೧೦೩

೨೧. ಪೂರ್ವೋಕ್ತ, ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ: ಪು.ಸಂ ೫೬.

೨೨. ಎಕ–೧೫ ಸಾಗರ ೧೭೮, ಕ್ರಿ.ಶ. ೧೧೦೨.

೨೩. ಇದೇ, ಶೃಂಗೇರಿ ೫೯, ಕ್ರಿ.ಶ. ೭ನೇ ಶತಮಾನ.

೨೪. ಇದೇ, ಶೃಂಗೇರಿ ೫೫, ಕ್ರಿ.ಶ. ೭ನೇ ಶತಮಾನ.

೨೫. ಪೂರ್ವೋಕ್ತ, ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ: ಪು.ಸಂ. ೫೭.

೨೬. ಎಕ ೧೧ ಚಿಕ್ಕಮಗಳೂರು ೧೩೦, ಕ್ರಿ.ಶ. ೧೧ನೇ ಶತಮಾನ.

೨೭. ಇದೇ, ಚಿಕ್ಕಮಗಳೂರು ೧೪೭, ಕ್ರಿ.ಶ. ೧೦೫೮.

೨೮. ಇದೇ, ಚಿಕ್ಕಮಗಳೂರು ೧೭೮, ಕ್ರಿ.ಶ. ೧೧ನೇ ಶತಮಾನ.

೨೯. ಇದೇ, ಚಿಕ್ಕಮಗಳೂರು ೧೭೭, ಕ್ರಿ.ಶ. ೧೧ನೇ ಶತಮಾನ.

೩೦. ಎಕ ೧೧ ಮೂಡಿಗೆರೆ ೭೭, ಕ್ರಿ.ಶ. ೧೨೭೭.

೩೧. ಇದೇ, ಚಿಕ್ಕಮಗಳೂರು ೨೬, ಕ್ರಿ.ಶ. ೧೧೯೦–೯೧.

೩೨. ಇದೇ, ಕೊಪ್ಪ ೨, ಕ್ರಿ.ಶ. ೧೫೩೦.

೩೩. ಇದೇ, ಕೊಪ್ಪ ೧೧, ಕ್ರಿ.ಶ. ೧೫೮೮.

೩೪. ಇದೇ, ಕೊಪ್ಪ ೬, ಕ್ರಿ.ಶ. ೧೫೯೮.

೩೫. ಇದೇ, ಮೂಡಿಗೆರೆ ೪೫, ಕ್ರಿ.ಶ. ೧೫೧೬.

೩೬. ಇದೇ, ಮೂಡಿಗೆರೆ ೪೮, ಕ್ರಿ.ಶ. ೧೫೧೬.

೩೭. ಇದೇ, ಮೂಡಿಗೆರೆ ೪೭, ಕ್ರಿ.ಶ. ೧೫೪೭.

೩೮. ಇದೇ, ಮೂಡಿಗೆರೆ ೬೭, ಕ್ರಿ.ಶ. ೧೫೫೫.

೩೯. ಎಸ್‌ಐಐ VII ಪು.ಸಂ. ೧೭೯.

೪೦. ರಮೇಶ ಕೆ.ವಿ. ಮತ್ತು ಶರ್ಮ ಎಂ.ಜೆ: ತುಳುನಾಡಿನ ಅರಸು ಮನೆತನಗಳು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಮಾಲೆ, ಉಜಿರೆ, ದಕ್ಷಿಣ ಕನ್ನಡ, ಪು.ಸಂ. ೨.

೪೧. ಇದೇ, ಪು.ಸಂ. ೩.

೪೨. ಇದೇ, ಶೃಂಗೇರಿ ೩೬, ಕ್ರಿ.ಶ. ೭ನೇ ಶತಮಾನ.

೪೩. ಪೂರ್ವೋಕ್ತ, ರಮೇಶ ಕೆ.ವಿ. ಮತ್ತು ಶರ್ಮ ಎಂ.ಜೆ., ಪು.ಸಂ ೪೫.

೪೪. ಶೈಲಾ ಟಿ: ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ. ೨೧.

೪೫. ಪೂರ್ವೋಕ್ತ: ರಮೇಶ ಕೆ.ವಿ. ಮತ್ತು ಶರ್ಮ ಎಂ.ಜೆ., ಪು.ಸಂ. ೭.

೪೬. ಇದೇ, ಶೃಂಗೇರಿ ೫೫, ಕ್ರಿ.ಶ. ೭ನೇ ಶತಮಾನ.

೪೭. ಪೂರ್ವೋಕ್ತ: ರಮೇಶ ಕೆ.ವಿ. ಮತ್ತು ಶರ್ಮಾ ಎಂ.ಜೆ., ಪು.ಸಂ. ೪೨, ೪೩.

೪೮. ಪೂರ್ವೋಕ್ತ, ಶೈಲಾ ಟಿ: ಪು.ಸಂ. ೪೨, ೪೩.

೪೯. ಪೂರ್ವೋಕ್ತ, ರಮೇಶ ಕೆ.ವಿ. ಮತ್ತು ಶರ್ಮ ಎಂ.ಜೆ., ಪು.ಸಂ. ೧೫.

೫೦. ಎಸ್‌ಐಐ Vol. VII. ಪು.ಸಂ. ೫೨೭, ೫೨೮.

೫೧. ಪೂರ್ವೋಕ್ತ, ರಮೇಶ ಕೆ.ವಿ. ಮತ್ತು ಶರ್ಮ ಎಂ.ಜೆ., ಪು.ಸಂ. ೧೮, ೧೯.

೫೨. ಇದೇ, ಪು.ಸಂ. ೨೦, ೨೧.

೫೩. ಇದೇ, ಪು.ಸಂ. ೨೧.

೫೪. ಎಸ್.ಐ.ಐ. Vol VII ೩೭೬.

೫೫. ಪೂರ್ವೋಕ್ತ, ರಮೇಶ ಕೆ.ವಿ. ಮತ್ತು ಶರ್ಮ ಎಂ.ಜೆ., ಪು.ಸಂ. ೨೪.

೫೬. ಅದೇ, ಪು.ಸಂ. ೨೫.

೫೭. ಇದೇ, ಶೃಂಗೇರಿ, ೧ ಕ್ರಿ.ಶ. ೧೩೪೬.

೫೮. Belluguthi Kaifiyat II J.M.S. (Quarterly) Journal of Mythic Society, Bangalore Vol-XXXV AP ೧೯೪೫, Page No. ೬೭.

೫೯. ಪೂರ್ವೋಕ್ತ, ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ, ಪು.ಸಂ. ೨೧೬.

೬೦. ಇದೇ, ತೀರ್ಥಹಳ್ಳಿ ೨೯, ಕ್ರಿ.ಶ. ೧೩೬೩.

೬೧. ಇದೇ, ಕೊಪ್ಪ ೨೫, ಕ್ರಿ.ಶ. ೧೩೭೮.

೬೨. ಇದೇ, ತೀರ್ಥಹಳ್ಳಿ ೨೩, ಕ್ರಿ.ಶ. ೧೩೭೭.

೬೩. ಇದೇ, ಕೊಪ್ಪ ೨೫, ಕ್ರಿ.ಶ. ೧೩೭೮.

೬೪. ಇದೇ, ಕೊಪ್ಪ ೪೨, ಕ್ರಿ.ಶ. ೧೩೮೧.

೬೫. ಪೂರ್ವೋಕ್ತ, ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ, ಪು.ಸಂ. ೨೧೭.

೬೬. ಇದೇ, ಕೊಪ್ಪ ೩೧, ಕ್ರಿ.ಶ. ೧೩೯೨.

೬೭. ಇದೇ, ಶೃಂಗೇರಿ ೩೧, ಕ್ರಿ.ಶ. ೧೩೮೪.

೬೮. ಇದೇ, ತೀರ್ಥಹಳ್ಳಿ ೧೨೦, ಕ್ರಿ.ಶ. ೧೩೮೭.

೬೯. ಇದೇ, ಶೃಂಗೇರಿ ೧೧, ೩೨, ಕ್ರಿ.ಶ. ೧೩೮೬.

೭೦. ಇದೇ, ಕೊಪ್ಪ ೧೭, ೧೮, ಕ್ರಿ.ಶ. ೧೪೦೩.

೭೧. ಇದೇ, ತೀರ್ಥಹಳ್ಳಿ ೧೮೩, ಕ್ರಿ.ಶ. ೧೪೦೧.

೭೨. ಇದೇ, ತೀರ್ಥಹಳ್ಳಿ ೧೬, ಕ್ರಿ.ಶ. ೧೪೦೪.

೭೩. ಇದೇ, ತೀರ್ಥಹಳ್ಳಿ ೨೦, ಕ್ರಿ.ಶ. ೧೪೦೪.

೭೪. ಇದೇ, ಶೃಂಗೇರಿ ೧೩, ಕ್ರಿ.ಶ. ೧೩೯೭.

೭೫. ಇದೇ, ಕೊಪ್ಪ ೩೮, ಕ್ರಿ.ಶ. ೧೪೦೪.

೭೬. ಇದೇ, ತೀರ್ಥಹಳ್ಳಿ ೧೯, ಕ್ರಿ.ಶ. ೧೪೦೫.

೭೭. ಇದೇ, ಕೊಪ್ಪ ೩೬, ಕ್ರಿ.ಶ.೧೪೦೮

೭೮. ಇದೇ, ಕೊಪ್ಪ ೩೬, ಕ್ರಿ.ಶ. ೧೪೦೮.

೭೯. ಇದೇ, ಕೊಪ್ಪ ೩೦, ಕ್ರಿ.ಶ. ೧೪೧೦.

೮೦. ಇದೇ, ಶೃಂಗೇರಿ ೩೫ ಕ್ರಿ.ಶ. ೧೪೩೨.

೮೧. ಇದೇ, ಶೃಂಗೇರಿ ೩೪ ಕ್ರಿ.ಶ. ೧೪೩೨.

೮೨. ಇದೇ, ತೀರ್ಥಹಳ್ಳಿ ೨೧ ಕ್ರಿ.ಶ. ೧೪೨೪.

೮೩. ಇದೇ, ಕೊಪ್ಪ ೨೨ ಕ್ರಿ.ಶ. ೧೪೨೭.

೮೪. ಇದೇ, ಕೊಪ್ಪ ೨೭ ಕ್ರಿ.ಶ. ೧೪೪೮.

೮೫. ಇದೇ, ತೀರ್ಥಹಳ್ಳಿ ೧೭೭ ಕ್ರಿ.ಶ. ೧೪೬೮.

೮೬. ಪೂರ್ವೋಕ್ತ, ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ, ಪು.ಸಂ. ೨೧೯.

೮೭. ಇದೇ, ಶೃಂಗೇರಿ ೪೯ ಕ್ರಿ.ಶ. ೧೫೨೯-೩೦.

೮೮. ಇದೇ, ತೀರ್ಥಹಳ್ಳಿ ೧೮೦ ಕ್ರಿ.ಶ. ೧೫೬೦.

೮೯. ಇದೇ, ತೀರ್ಥಹಳ್ಳಿ ೨೧೫ ಕ್ರಿ.ಶ. ೧೬೧೦.

೯೦. ಇದೇ, ಶೃಂಗೇರಿ ೩೭ ಕ್ರಿ.ಶ. ೧೬೬೧.

೯೧. ಇದೇ, ಕೊಪ್ಪ ೩೬ ಕ್ರಿ.ಶ. ೧೫೫೩.

೯೨. ಪೂರ್ವೋಕ್ತ, ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ, ಪು.ಸಂ. ೨೭೬-೨೭೭.

೯೩. ಇದೇ, ಕೊಪ್ಪ ೩೬ ಕ್ರಿ.ಶ. ೧೫೫೩.

೯೪. ಪೂರ್ವೋಕ್ತ: ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ, ಪು.ಸಂ ೨೮೧, ೨೮೨.

೯೫. ಇದೇ ಪು.ಸಂ. ೨೭೬.

೯೬. ಇದೇ, ನರಸಿಂಹರಾಜಪುರ ೧೯, ಕ್ರಿ.ಶ. ೧೫೨೯.

೯೭. ಇದೇ, ನರಸಿಂಹರಾಜಪುರ ೧೯, ಕ್ರಿ.ಶ. ೧೫೨೯.

೯೮. ಇದೇ, ತೀರ್ಥಹಳ್ಳಿ, ಪೀಠಿಕೆ ಪು.ಸಂ. ೫೨.

೯೯. ಇದೇ, ತೀರ್ಥಹಳ್ಳಿ ೧೫೮, ಕ್ರಿ.ಶ. ೧೫೭೩.

೧೦೦. ಇದೇ, ತೀರ್ಥಹಳ್ಳಿ ೫, ಕ್ರಿ.ಶ. ೧೫೭೭.

೧೦೧. ಇದೇ, ತೀರ್ಥಹಳ್ಳಿ ೨೨, ಕ್ರಿ.ಶ. ೧೬ನೇ ಶತಮಾನ.

೧೦೨. ಇದೇ, ತೀರ್ಥಹಳ್ಳಿ ೧೫೪, ಕ್ರಿ.ಶ. ೧೬ನೇ ಶತಮಾನ.

೧೦೩. ಇದೇ, ತೀರ್ಥಹಳ್ಳಿ ೨೧೫, ಕ್ರಿ.ಶ. ೧೬೧೦.

೧೦೪. ಇದೇ, ತೀರ್ಥಹಳ್ಳಿ ೧೦೮, ಕ್ರಿ.ಶ. ೧೬೧೫.

೧೦೫. ಇದೇ, ತೀರ್ಥಹಳ್ಳಿ ೬೭, ಕ್ರಿ.ಶ. ೧೬೧೬.

೧೦೬. ಇದೇ, ತೀರ್ಥಹಳ್ಳಿ ೯೩, ಕ್ರಿ.ಶ. ೧೬೨೪.

೧೦೭. ಇದೇ, ತೀರ್ಥಹಳ್ಳಿ ೪೦, ಕ್ರಿ.ಶ. ೧೬೨೭.

೧೦೮. ಇದೇ, ಶೃಂಗೇರಿ ೫, ಕ್ರಿ.ಶ. ೧೬೨೧.

೧೦೯. ಇದೇ, ತೀರ್ಥಹಳ್ಳಿ ೧೫೬, ಕ್ರಿ.ಶ. ೧೬೪೫.

೧೧೦. ಇದೇ, ತೀರ್ಥಹಳ್ಳಿ ೧೫೭, ಕ್ರಿ.ಶ. ೧೬೪೦.

೧೧೧. ಇದೇ, ತೀರ್ಥಹಳ್ಳಿ ೫೪, ಕ್ರಿ.ಶ. ೧೬೪೧.

೧೧೨. ಇದೇ, ತೀರ್ಥಹಳ್ಳಿ ೯೯, ಕ್ರಿ.ಶ. ೧೬೪೧.

೧೧೩. ಇದೇ, ಶೃಂಗೇರಿ ೩೬, ಕ್ರಿ.ಶ. ೧೬೩೦.

೧೧೪. ಇದೇ, ಶೃಂಗೇರಿ ೪೫, ಕ್ರಿ.ಶ. ೧೬೫೨.

೧೧೫. ಇದೇ, ತೀರ್ಥಹಳ್ಳಿ ೯೨, ಕ್ರಿ.ಶ. ೧೬೫೯.

೧೧೬. ಇದೇ, ತೀರ್ಥಹಳ್ಳಿ ೧೧೪, ಕ್ರಿ.ಶ. ೧೬೬೧.

೧೧೭. ಇದೇ, ತೀರ್ಥಹಳ್ಳಿ ೮೭, ಕ್ರಿ.ಶ. ೧೬೬೨.

೧೧೮. ಇದೇ, ತೀರ್ಥಹಳ್ಳಿ ೯೬, ಕ್ರಿ.ಶ. ೧೬೬೨.

೧೧೯. ಇದೇ, ತೀರ್ಥಹಳ್ಳಿ ೧೪೯, ಕ್ರಿ.ಶ. ೧೬೬೨.

೧೨೦. ಇದೇ, ತೀರ್ಥಹಳ್ಳಿ ೬೪, ಕ್ರಿ.ಶ. ೧೬೬೪.

೧೨೧. ಇದೇ, ತೀರ್ಥಹಳ್ಳಿ ೯೧ ಕ್ರಿ.ಶ. ೧೬೬೪.

೧೨೨. ಇದೇ, ತೀರ್ಥಹಳ್ಳಿ ೯೭, ಕ್ರಿ.ಶ. ೧೬೬೪

೧೨೩. ಇದೇ, ತೀರ್ಥಹಳ್ಳಿ ೧೦೭, ಕ್ರಿ.ಶ. ೧೬೬೪.

೧೨೪. ಇದೇ, ತೀರ್ಥಹಳ್ಳಿ ೧೩೦, ಕ್ರಿ.ಶ. ೧೬೬೪.

೧೨೫. ಇದೇ, ತೀರ್ಥಹಳ್ಳಿ ೧೬೫, ಕ್ರಿ.ಶ. ೧೬೬೪..

೧೨೬. ಇದೇ, ತೀರ್ಥಹಳ್ಳಿ ೬೪, ಕ್ರಿ.ಶ. ೧೬೬೫.

೧೨೭. ಇದೇ, ತೀರ್ಥಹಳ್ಳಿ ೨೨೩, ಕ್ರಿ.ಶ. ೧೬೬೫.

೧೨೮. ಇದೇ, ತೀರ್ಥಹಳ್ಳಿ ೪೪ ಕ್ರಿ.ಶ. ೧೬೬೬.

೧೨೯. ಇದೇ, ತೀರ್ಥಹಳ್ಳಿ ೨೧೦, ಕ್ರಿ.ಶ. ೧೬೬೬.

೧೩೦. ಇದೇ, ತೀರ್ಥಹಳ್ಳಿ ೧೦೯, ಕ್ರಿ.ಶ. ೧೬೬೮.

೧೩೧. ಇದೇ, ತೀರ್ಥಹಳ್ಳಿ ೬೧, ಕ್ರಿ.ಶ. ೧೬೬೯.

೧೩೨. ಇದೇ, ತೀರ್ಥಹಳ್ಳಿ ೮೨, ಕ್ರಿ.ಶ. ೧೬೭೧.

೧೩೩. ಇದೇ, ತೀರ್ಥಹಳ್ಳಿ ೮೧, ಕ್ರಿ.ಶ. ೧೬೭೦.

೧೩೪. ಇದೇ, ತೀರ್ಥಹಳ್ಳಿ ೧೭೪, ಕ್ರಿ.ಶ. ೧೬೭೨.

೧೩೫. ಇದೇ, ತೀರ್ಥಹಳ್ಳಿ ೨೦೨, ಕ್ರಿ.ಶ. ೧೬೭೨.

೧೩೬. ಇದೇ, ತೀರ್ಥಹಳ್ಳಿ ೪೫, ಕ್ರಿ.ಶ. ೧೬೭೩.

೧೩೭. ಇದೇ, ತೀರ್ಥಹಳ್ಳಿ ೭೯, ಕ್ರಿ.ಶ. ೧೬೭೩.

೧೩೮. ಇದೇ ತೀರ್ಥಹಳ್ಳಿ ೧೬೪, ಕ್ರಿ.ಶ. ೧೬೭೪.

೧೩೯. ಇದೇ ತೀರ್ಥಹಳ್ಳಿ ೮೮, ಕ್ರಿ.ಶ. ೧೬೭೭.

೧೪೦. ಇದೇ, ತೀರ್ಥಹಳ್ಳಿ ೧೩೬, ಕ್ರಿ.ಶ. ೧೬೭೮.

೧೪೧. ಇದೇ, ತೀರ್ಥಹಳ್ಳಿ ೭೫, ಕ್ರಿ.ಶ. ೧೬೭೯.

೧೪೨. ಇದೇ, ತೀರ್ಥಹಳ್ಳಿ ೧೦೦, ಕ್ರಿ.ಶ. ೧೬೮೧.

೧೪೩. ಇದೇ, ತೀರ್ಥಹಳ್ಳಿ ೧೨೪, ಕ್ರಿ.ಶ. ೧೬೮೭.

೧೪೪. ಇದೇ, ತೀರ್ಥಹಳ್ಳಿ ೧೯೧, ಕ್ರಿ.ಶ. ೧೬೮೭.

೧೪೫. ಇದೇ, ತೀರ್ಥಹಳ್ಳಿ ೭೨, ಕ್ರಿ.ಶ. ೧೬೮೮

೧೪೬. ಇದೇ, ತೀರ್ಥಹಳ್ಳಿ ೭೨, ಕ್ರಿ.ಶ. ೧೬೯೦.

೧೪೭. ಇದೇ ತೀರ್ಥಹಳ್ಳಿ ೧೦೧, ಕ್ರಿ.ಶ.೧೬೯೦.

೧೪೮. ಇದೇ, ತೀರ್ಥಹಳ್ಳಿ ೫೭, ಕ್ರಿ.ಶ. ೧೬೯೪.

೧೪೯. ಇದೇ, ತೀರ್ಥಹಳ್ಳಿ ೪೭, ಕ್ರಿ.ಶ. ೧೬೯೫.

೧೫೦. ಇದೇ, ಶೃಂಗೇರಿ ೬೧, ಕ್ರಿ.ಶ. ೧೬೭೮.

೧೫೧. ಇದೇ, ತೀರ್ಥಹಳ್ಳಿ ೧೪೩, ಕ್ರಿ.ಶ. ೧೬೯೮.

೧೫೨. ಇದೇ, ತೀರ್ಥಹಳ್ಳಿ ೧೬೭, ಕ್ರಿ.ಶ. ೧೭೦೨.

೧೫೩. ಇದೇ, ತೀರ್ಥಹಳ್ಳಿ ೧೧೧, ಕ್ರಿ.ಶ. ೧೭೦೭.

೧೫೪. ಇದೇ, ತೀರ್ಥಹಳ್ಳಿ ೫೮, ಕ್ರಿ.ಶ. ೧೭೦೯.

೧೫೫. ಇದೇ, ತೀರ್ಥಹಳ್ಳಿ ೧೦೨, ಕ್ರಿ.ಶ. ೧೭೦೯.

೧೫೬. ಇದೇ, ತೀರ್ಥಹಳ್ಳಿ ೧೧೨, ಕ್ರಿ.ಶ. ೧೭೦೯.

೧೫೭. ಇದೇ, ತೀರ್ಥಹಳ್ಳಿ ೮೩, ಕ್ರಿ.ಶ. ೧೭೧೧.

೧೫೮. ಇದೇ, ತೀರ್ಥಹಳ್ಳಿ ೨೦೧, ಕ್ರಿ.ಶ. ೧೭೧೨.

೧೫೯. ಇದೇ, ತೀರ್ಥಹಳ್ಳಿ ೧೧೩, ಕ್ರಿ.ಶ. ೧೭೧೯.

೧೬೦. ಇದೇ, ತೀರ್ಥಹಳ್ಳಿ ೫೦, ಕ್ರಿ.ಶ. ೧೭೨೩.

೧೬೧. ಇದೇ, ತೀರ್ಥಹಳ್ಳಿ ೯೮, ಕ್ರಿ.ಶ. ೧೭೨೩.

೧೬೨. ಇದೇ, ತೀರ್ಥಹಳ್ಳಿ ೧೫೯, ಕ್ರಿ.ಶ. ೧೭೨೩.

೧೬೩. ಇದೇ, ತೀರ್ಥಹಳ್ಳಿ ೧೬೩, ಕ್ರಿ.ಶ. ೧೭೨೩.

೧೬೪. ಇದೇ, ತೀರ್ಥಹಳ್ಳಿ ೧೬೬, ಕ್ರಿ.ಶ. ೧೭೨೩.

೧೬೫. ಇದೇ, ಕೊಪ್ಪ ೧೪, ಕ್ರಿ.ಶ.೧೭೨೩.

೧೬೬. ಇದೇ, ಶೃಂಗೇರಿ ೩೮, ಕ್ರಿ.ಶ. ೧೭೨೯

೧೬೭. ಇದೇ, ತೀರ್ಥಹಳ್ಳಿ ೧೬೦, ಕ್ರಿ.ಶ. ೧೮೬೨

೧೬೮. ಇದೇ, ಕೊಪ್ಪ ೩೯, ಕ್ರಿ.ಶ. ೧೮೭೯.

೧೬೯. ಇದೇ, ಶೃಂಗೇರಿ ೩೯, ಕ್ರಿ.ಶ. ೧೭೩೭.

೧೭೦. ಇದೇ, ಶೃಂಗೇರಿ ೩, ಕ್ರಿ.ಶ. ೧೭೫೮.

೧೭೧. ಇದೇ, ಶೃಂಗೇರಿ ೩೦, ಕ್ರಿ.ಶ. ೧೭೬೦.

೧೭೨. ಇದೇ, ಪೀಠಿಕೆ, ಪು.ಸಂ. ೭೮, ೭೯.

೧೭೩. ಪೂರ್ವೋಕ್ತ: ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ, ಪು.ಸಂ. ೬೦.

೧೭೪. ಇದೇ, ತೀರ್ಥಹಳ್ಳಿ ೧, ಕ್ರಿ.ಶ. ೧೪೦೪.

೧೭೫. ಇದೇ, ತೀರ್ಥಹಳ್ಳಿ ೧ ,ಕ್ರಿ.ಶ. ೧೪೦೪.

೧೭೬. ಇದೇ, ತೀರ್ಥಹಳ್ಳಿ ೧೫೫, ಕ್ರಿ.ಶ. ೧೪೬೩.

೧೭೭. ಇದೇ, ತೀರ್ಥಹಳ್ಳಿ ೧, ಕ್ರಿ.ಶ. ೧೪೦೪.

೧೭೮. ಇದೇ, ತೀರ್ಥಹಳ್ಳಿ ೧, ಕ್ರಿ.ಶ. ೧೪೦೪.

೧೭೯. ಪೂರ್ವೋಕ್ತ: ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ, ಪು.ಸಂ. ೨೨೦.

೧೮೦. ಇದೇ, ಪು.ಸಂ. ೨೨೦.

೧೮೧. ಇದೇ, ಪು.ಸಂ. ೨೨೦.

೧೮೨. ಇದೇ, ತೀರ್ಥಹಳ್ಳಿ ೫೨, ಕ್ರಿ.ಶ. ೧೬೪೨.

೧೮೩. ಇದೇ, ತೀರ್ಥಹಳ್ಳಿ ೧೮೦ ಕ್ರಿ.ಶ. ೧೫೬೦.

೧೮೪. Bhat Gururaja, P, Studies in Tuluva Dynasty and Culture, Manipal Press, Page No. ೨೦.

೧೮೫. ರಮೇಶ ಕೆ.ವಿ., ತುಳುನಾಡಿನ ಇತಿಹಾಸ, ಪು.ಸಂ. ೪೩.

೧೮೬. ಪೂರ್ವೋಕ್ತ Bhat Gururaja P., Studies in Tuluva Dynasty and Culture, Manipal Press, Page No. ೨೧.

೧೮೭. ಇದೇ, ತೀರ್ಥಹಳ್ಳಿ ೨೬, ಕ್ರಿ.ಶ. ೧೪೦೫–೦೬.

೧೮೮. ಇದೇ, ಶೃಂಗೇರಿ ೩೨ ಕ್ರಿ.ಶ. ೧೩೮೬

೧೮೯. ಇದೇ, ಶೃಂಗೇರಿ ೨, ಕ್ರಿ.ಶ. ೧೬೦೩.

೧೯೦. ಇದೇ, ಶೃಂಗೇರಿ ೪೮, ಕ್ರಿ.ಶ. ೧೪೧೮.

೧೯೧. ಇದೇ, ಶೃಂಗೇರಿ ೫೨, ಕ್ರಿ.ಶ. ೧೫೨೪.

೧೯೨. ಇದೇ, ತೀರ್ಥಹಳ್ಳಿ ೧೪೮, ಕ್ರಿ.ಶ. ೧೪೨೧.

೧೯೩. ಇದೇ, ತೀರ್ಥಹಳ್ಳಿ ೧೫೨, ಕ್ರಿ.ಶ. ೧೪೨೨.

೧೯೪. ಇದೇ, ತೀರ್ಥಹಳ್ಳಿ ೭, ಕ್ರಿ.ಶ. ೧೪ನೇ ಮತ್ತು ೧೫ನೇ ಶತಮಾನ.

೧೯೫. ಇದೇ, ತೀರ್ಥಹಳ್ಳಿ ೧೯, ಕ್ರಿ.ಶ. ೧೪೦೫.

೧೯೬. ಇದೇ ತೀರ್ಥಹಳ್ಳಿ ೧೭೮, ಕ್ರಿ.ಶ. ೧೩೭೯.

೧೯೭. ಇದೇ, ತೀರ್ಥಹಳ್ಳಿ ೧೯೨, ಕ್ರಿ.ಶ. ೧೫ನೇ ಶತಮಾನ.

೧೯೮. ಇದೇ, ತೀರ್ಥಹಳ್ಳಿ ೨೪೩, ಕ್ರಿ.ಶ. ೧೪೦೪–೦೫.

೧೯೯. ಇದೇ, ಕೊಪ್ಪ ೧೩, ಕ್ರಿ.ಶ. ೧೬ನೇ ಶತಮಾನ.

೨೦೦. ಇದೇ, ಶೃಂಗೇರಿ ೭೭, ಕ್ರಿ.ಶ. ೧೪ನೇ ಶತಮಾನ.

೨೦೧. ಪೂರ್ವೋಕ್ತ; ಮಂಜುನಾಥ ಸಿ.ಯು. ಪು.ಸಂ. ೩೨೧.

೨೦೨. ಇದೇ, ತೀರ್ಥಹಳ್ಳಿ ೧೭೮, ಕ್ರಿ.ಶ. ೧೩೭೯

೨೦೩. ಇದೇ, ತೀರ್ಥಹಳ್ಳಿ ೧೯೨, ಕ್ರಿ.ಶ. ೧೫ನೇ ಶತಮಾನ.

೨೦೪. ಇದೇ, ತೀರ್ಥಹಳ್ಳಿ ೧೦, ಕ್ರಿ.ಶ. ೧೪೦೭.

೨೦೫. ಇದೇ, ತೀರ್ಥಹಳ್ಳಿ ೩೪, ಕ್ರಿ.ಶ. ೧೪೧೩.

೨೦೬. ಇದೇ, ತೀರ್ಥಹಳ್ಳಿ ೨೪೩, ಕ್ರಿ.ಶ. ೧೪೦೪–೦೫.

೨೦೭. ಇದೇ, ಕೊಪ್ಪ ೧೧, ಕ್ರಿ.ಶ. ೧೫೮೮.

೨೦೮. ಇದೇ, ಕೊಪ್ಪ ೩೬, ಕ್ರಿ.ಶ. ೧೪೦೮.

•••

ಅಧ್ಯಾಯ : ಮೂರು

ಶಾಸನೋಕ್ತ ಸಾಮಾಜಿಕ ಸ್ಥಿತ್ಯಂತರ

೩.೧. ಧಾರ್ಮಿಕ ವ್ಯವಸ್ಥೆ

೩.೧.೧. ಬೌದ್ಧ ಧರ್ಮ

೩.೧.೨. ಜೈನ ಧರ್ಮ

೩.೧.೩. ಶೈವ ಧರ್ಮ

೨.೧.೪. ವೈಷ್ಣವ ಧರ್ಮ

೨.೧.೫. ವೀರಶೈವ ಧರ್ಮ

೨.೧.೬. ಇಸ್ಲಾಂ ಧರ್ಮ

೩.೨. ಶಾಸನಗಳಲ್ಲಿ ಮಠ ಮತ್ತು ದೇವಸ್ಥಾನ

೩.೩. ಶಾಸನೋಕ್ತ ದೇವಾಲಯ

ಅಧ್ಯಾಯ : ಮೂರು

ಶಾಸನೋಕ್ತ ಸಾಮಾಜಿಕ ಸ್ಥಿತ್ಯಂತರ

ಧರ್ಮವು ಮಾನವನ ಜೀವನವಿಧಾನ ಹಾಗೂ ಒಂದು ವಿಶಿಷ್ಟವಾದ ಅಂಶವಾಗಿದೆ.ವ್ಯಕ್ತಿ ಮತ್ತು ಸಮಾಜಗಳ ಒಂದು ಅವಿಭಾಜ್ಯ ಅಂಗವೆನ್ನುವಷ್ಟು ಧರ್ಮ ಅವುಗಳಲ್ಲಿ ಲೀನವಾಗಿದೆ. ಹಾಗೆಯೇ ಸಮಾಜದಲ್ಲಿ ಹಲವಾರು ಶಾಖೆಗಳನ್ನು ಹೊಂದಿದ್ದು ಪ್ರತಿಯೊಂದು ಶಾಖೆಯು ತಮ್ಮದೇ ಆದ ಧರ್ಮಾಧಿಕಾರಿ ಅಥವ ಧರ್ಮಗುರುಗಳನ್ನು ಹೊಂದಿದೆ. ಪ್ರತಿಯೊಂದು ಧರ್ಮವು ತನ್ನದೇ ಆದ ತತ್ವಗಳನ್ನು ಹೊಂದಿದ್ದು ಸಾಮಾಜಿಕ ಬೆಳವಣಿಗೆಯಲ್ಲಿ ಗುರುತಿಸಿ ಕೊಳ್ಳುವಂತಹ ಪ್ರಯತ್ನವನ್ನು ಮಾಡಿರುವುದು ಕಂಡುಬರುತ್ತದೆ.

೩.೧. ಧಾರ್ಮಿಕ ವ್ಯವಸ್ಥೆ

ಮಧ್ಯಮಲೆನಾಡಿನ ಬಹುಪಾಲು ಪ್ರದೇಶಗಳನ್ನು ಆಳಿದ ಕದಂಬರು, ಗಂಗರು, ಅಳುಪರು, ಸಾನ್ತರರು, ಸೇನವಾರರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಚಾಲುಕ್ಯರು, ಹೊಯ್ಸಳರು, ಆರಗದ ಅರಸರು, ದಾನಿವಾಸ ಒಡೆಯರು, ಕೆಳದಿನಾಯಕರು, ಮೈಸೂರು ಒಡೆಯರು ವಿವಿಧ ಮತ ಧರ್ಮಗಳಿಗೆ ಸೇರಿದ್ದು, ವಿಶಿಷ್ಟವಾದ ಸಾಂಸ್ಕೃತಿಕ ಕೊಡುಗೆಯನ್ನು ನೀಡಿದ್ದಾರೆ.ಕೆಲವು ರಾಜವಂಶಗಳು ನೇರವಾಗಿ ಆಳ್ವಿಕೆ ನಡೆಸಿದರೆ ಇನ್ನು ಕೆಲವರು ಸಾಮಂತರ ಮೂಲಕ ಆಳ್ವಿಕೆಯನ್ನು ನಡೆಸಿ ಮಲೆನಾಡಿನ ಪ್ರದೇಶಗಳನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದರು. ಇವರು ಧಾರ್ಮಿಕ ಸಹಿಷ್ಣುಗಳಾಗಿದ್ದು ಯಾವುದೇ ರೀತಿಯ ಮತದ್ವೇಷದ ಹಿನ್ನೆಲೆಯು ಶಾಸನಗಳಲ್ಲಿ ಕಂಡುಬರುವುದಿಲ್ಲ. ಜೈನಧರ್ಮ, ಶೈವ, ವೈಷ್ಣವ, ವೀರಶೈವ ಪಂಥಗಳು ಪ್ರಧಾನವಾಗಿ ಈ ಭಾಗದಲ್ಲಿ ಅಸ್ತಿತ್ವದಲ್ಲಿದ್ದವು.

ಧರ್ಮವನ್ನು ಸಾಧನವಾಗಿಟ್ಟುಕೊಂಡು ಸಮಾಜದಲ್ಲಿ ಯಜಮಾನಿಕೆಯನ್ನು ಸ್ಥಾಪಿಸುವುದೇ ಧಾರ್ಮಿಕ ಪ್ರಭುತ್ವ. ಇದು ಸಮಾಜದಲ್ಲಿ ನಿರಂತರವಾದ ಪರಿಣಾಮಗಳನ್ನು ಬೀರುತ್ತದೆ. ಧಾರ್ಮಿಕ ಪ್ರಭುತ್ವವು ರಾಜಪ್ರಭುತ್ವಕ್ಕಿಂತಲೂ ಹೆಚ್ಚು ಅಧಿಕಾರ ಸಾಮರ್ಥ್ಯವನ್ನು ಹೊಂದಿತ್ತು. ಅರಸರು ತಮ್ಮನ್ನು ದೈವಾಂಶ ಸಂಭೂತರು ಎಂದು ಕರೆದುಕೊಂಡಿರುವುದು ಈ ಕಾರಣದಿಂದಾಗಿಯೇ. ಧಾರ್ಮಿಕ ಪ್ರಭುತ್ವವು ಜನರ ಮೇಲೆ ನೇರ ಪ್ರವೇಶನ್ನು ಪಡೆಯಿತು.

ಅವುಗಳನ್ನು ಪ್ರತಿಭಟಿಸಿ, ಸತ್ಯದ ಅನ್ವೇಷಣೆ ಹಾಗೂ ಆಚರಣೆಯತ್ತ ಮಾನವನ ಬದುಕು ಸಾಗುವ ಅಗತ್ಯವೂ ಇತ್ತು.ಈ ಅಂಶವು ಇತರ ಧರ್ಮಗಳಂತೆ ಬೌದ್ಧಧರ್ಮ ಉಗಮಕ್ಕೂ ಕಾರಣವಾಗಿರಬೇಕು.

ನಮಗೆ ಈ ಬೌದ್ಧರು ಮತ್ತು ಇತರ ಧರ್ಮೀಯರು ಕರ್ನಾಟಕಕ್ಕೆ ಬಂದು ನೆಲೆಸುವ ಮೊದಲು ಇಲ್ಲಿನ ಜನ ಯಾವ ಧರ್ಮವನ್ನು ಅನುಸರಿಸುತ್ತಿದ್ದರು ಹಾಗೂ ಅವರ ಧಾರ್ಮಿಕ ಚಟುವಟಿಕೆಗಳು ಯಾವ ರೀತಿಯಾಗಿದ್ದಿರಬಹುದು ಎಂಬುದಕ್ಕೆ ಯಾವುದೇ ಸ್ಪಷ್ಟ ಆಧಾರಗಳು ನಮ್ಮ ಕಣ್ಣೆದುರು ಇಲ್ಲ. ಕರ್ನಾಟಕದ ಚಂದ್ರವಳ್ಳಿ, ಸನ್ನತಿ, ಬನವಾಸಿಗಳಲ್ಲಿ ದೊರೆತ ಶಾಸನಗಳ ಆಧಾರದ ಹಿನ್ನೆಲೆಯಲ್ಲಿ ಕ್ರಿಸ್ತ ಪೂರ್ವದಲ್ಲಿಯೇ ಬೌದ್ಧಧರ್ಮವೂ ಕರ್ನಾಟಕಕ್ಕೆ ಪ್ರವೇಶ ಮಾಡಿತೆಂಬುದು ತಿಳಿದುಬರುತ್ತದೆ. ಅಶೋಕನು ಬೌದ್ಧ ಧರ್ಮದ ಪ್ರಚಾರಕರನ್ನು ಕುಂತಳಕ್ಕೆ (ಈಗಿನ ಬನವಾಸಿ) ಕಳುಹಿಸಿ ಧರ್ಮಪ್ರಚಾರ ಮಾಡಿದ ಬಗ್ಗೆ ಉಲ್ಲೇಖಗಳು ಈ ಪ್ರದೇಶದಲ್ಲಿ ದೊರೆಯುತ್ತವೆ. ಕುಂತಳ ಸೇರಿದಂತೆ ಮಹಿಷಮಂಡಲ, ಅಪರಾಂತಕ ಮೊದಲಾದವು ಬೌದ್ಧರು ನೆಲೆಸಿದ್ದರು ಎಂಬುದು ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ಕಾಣಬಹುದು.

ಕರ್ನಾಟಕದಲ್ಲಿ ಬೌದ್ಧಧರ್ಮವು ಬಹು ಪ್ರಮುಖವಾಗಿ ಗೋಚರಿಸುವ ಸ್ಥಳಗಳೆಂದರೆ ಚಿತ್ರದುರ್ಗ ಜಿಲ್ಲೆಯ ಸಿದ್ಧಾಪುರ ಜಟಿಂಗಾರಾಮೇಶ್ವರ, ಬ್ರಹ್ಮಗಿರಿಗಳು ಉತ್ತರಕರ್ನಾಟಕದ ಮಸ್ಕಿ ಮತ್ತು ಕೊಪ್ಪಳಗಳಲ್ಲಿ ದೊರೆತಿರುವ ಕ್ರಿ.ಪೂ. ಮೂರನೆಯ ಶತಮಾನದ ಅಶೋಕನ ಶಾಸನಗಳೇ ಆಗಿವೆ. ಈ ಹಿನ್ನೆಲೆಯಲ್ಲಿ ಬೌದ್ದಧರ್ಮವು ಕರ್ನಾಟಕದಲ್ಲಿ ಪ್ರಬಲವಾಗಿತ್ತು ಎನ್ನುವುದರ ಜೊತೆಗೆ ಮೌರ್ಯ ಸಾಮ್ರಾಜ್ಯ ಇಲ್ಲಿಯವರೆಗೂ ವ್ಯಾಪಿಸಿತ್ತು ಎಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ.ಅಶೋಕನ ಶಿಲಾಶಾಸನಗಳನ್ನು ಬರೆಯಿಸಿದ್ದರ ಮಹಾಮುಖ್ಯಉದ್ದೇಶ ತನ್ನ ಪ್ರಜೆಗಳಿಗೆ ಧರ್ಮವನ್ನು ಭೋದಿಸಿ ಅದನ್ನು ಬೆಳೆಸುವುದಾಗಿತ್ತು.[೨] ಕರ್ನಾಟಕದಲ್ಲಿ ಬೌದ್ಧಧರ್ಮವು ಎಷ್ಟೊಂದು ಪ್ರಬಲವಾಗಿತ್ತು ಎನ್ನುವುದು, ಅದರ ಸೂಕ್ಷ್ಮನೆಲೆಗಳನ್ನು ಗುರುತಿಸುವುದು ಔಚಿತ್ಯಪೂರ್ಣವೆನಿಸುತ್ತದೆ. ಮಧ್ಯಕರ್ನಾಟಕದ ಚಂದ್ರವಳ್ಳಿಯಿಂದ ಪಶ್ಚಿಮಕ್ಕೆ ಬನವಾಸಿಯನ್ನು ಹಾದು ಸಮುದ್ರವನ್ನು ಸೇರುವಂತೆ ರೇಖೆಯನ್ನು ಎಳೆದರೆ ಆ ರೇಖೆಯ ಉತ್ತರಕ್ಕೆ ಬೌದ್ಧಧರ್ಮ ಪ್ರಚಾರದಲ್ಲಿತ್ತೆಂದು ಸ್ಥೂಲವಾಗಿ ಹೇಳಬಹುದು. ಪಶ್ಚಿಮ ಕರ್ನಾಟಕದಲ್ಲಿ ಬೌದ್ಧಧರ್ಮ ಇನ್ನೂ ಸ್ವಲ್ಪ ಕೆಳಗೆ ಇಳಿದು ಮಂಗಳೂರಿನ ಬಳಿ ಕದರಿಬೆಟ್ಟದಲ್ಲಿ ವಿಹಾರವನ್ನು ಸ್ಥಾಪಿಸಿಕೊಂಡಂತೆ ಕಂಡುಬರುತ್ತದೆ. ಕದರಿಬೆಟ್ಟದ ಗುಹೆಗಳು ಬೌದ್ಧ ವಿಹಾರವನ್ನು ನೆನಪಿಗೆ ತರುತ್ತವೆ. ಇಲ್ಲಿನ ಮಂಜುನಾಥ ಬಹುಶಃ ಬೌದ್ಧರ ಮಂಜುನಾಥ ಈಗ ಹಿಂದೂಗಳ ದೇವತೆ.[೩] ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಮಧ್ಯಮಲೆನಾಡು ಕೂಡ ಬೌದ್ಧಧರ್ಮದ ನೆಲೆಯಾಗಿದ್ದಿತು ಎಂಬುದು ಸ್ಪಷ್ಟವಾಗುತ್ತದೆ. ಮೇಲೆ ಹೆಸರಿಸಿದ ಸ್ಥಳಗಳಿಗೂ ಮಲೆನಾಡಿನ ಪ್ರದೇಶಗಳಿಗೂ ಅಂತರ ಬಹಳ ಕಡಿಮೆ ಇರುವುದರಿಂದ ಬೌದ್ಧ ಧರ್ಮವು ತನ್ನ ಪ್ರಾಬಲ್ಯವನ್ನು ಈ ಪ್ರದೇಶಗಳಲ್ಲಿ ಸ್ಥಾಪಿಸಿದ್ದಿತು ಎನ್ನುವ ಅಂಶ ವ್ಯಕ್ತವಾಗುತ್ತದೆ. ಇದಕ್ಕೆ ಸಾಕಷ್ಟು ಕುರುಹುಗಳನ್ನು ಗುರುತಿಸಬಹುದೇ ಹೊರತು ಮಧ್ಯಮಲೆನಾಡಿನಲ್ಲಿ ಬೌದ್ಧರ ಶಾಸನಗಳು ದೊರೆತಿಲ್ಲ.

೩.೧.೨. ಜೈನಧರ್ಮ

ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಬಹುತೇಕ ಕರ್ನಾಟಕ ಜೈನಧರ್ಮದ ಇತಿಹಾಸವೇ ಆಗಿದೆ. ಕರ್ನಾಟಕದಲ್ಲಿ ಅತಿಪ್ರಚಾರ ಪಡೆದು ಬಹುಜನರ ಪ್ರೀತಿಗೆ ಪಾತ್ರವಾದ ಧರ್ಮವೆಂದರೆ ಜೈನಧರ್ಮ. ಬೌದ್ಧರ ಹಾಗೆಯೇ ಜೈನರೂ ಕೂಡ ಕ್ರಿಸ್ತಪೂರ್ವದಲ್ಲೇ ಕರ್ನಾಟಕಕ್ಕೆ ಬಂದಿದ್ದರು ಎಂಬುದಕ್ಕೆ ಶ್ರವಣಬೆಳಗೊಳ ಶಾಸನ ಆಧಾರ ಒದಗಿಸುತ್ತದೆ. ಗುರುಭದ್ರಬಾಹುನೊಂದಿಗೆ ಚಂದ್ರಗುಪ್ತನು ಸಿಂಹಾಸನವನ್ನು ತ್ಯಜಿಸಿ ಶ್ರವಣಬೆಳಗೊಳಕ್ಕೆ ಬಂದು ನೆಲೆಸಿದನು ಎಂದು ತಿಳಿದುಬರುತ್ತದೆ. ಜೈನಧರ್ಮದ ಇತಿಹಾಸ ಮಹಾವೀರನಿಗಿಂತಲೂ ಬಹಳಷ್ಟು ಹಿಂದಕ್ಕೆ ಹೋಗುವುದರಿಂದ ಅದರ ಪ್ರತಿಪಾದಕ ಸುಧಾರಕ ಮತ್ತು ಜೈನಧರ್ಮದ ಪ್ರವರ್ತಕ ಭಗವಾನ್ ವೃಷಭನೆಂಬುದು ಈಗ ನಿರ್ವಿವಾದದ ವಿಷಯವಾಗಿದೆ.

ಕೆಲವೊಂದು ಐತಿಹಾಸಿಕ ಆಧಾರಗಳು ವೃಷಭನನ್ನು ಚಾರಿತ್ರಿಕ ಪುರುಷನನ್ನಾಗಿಸಿದೆ. ವೃಷಭದೇವನ ನಂತರದ ವರ್ಷಗಳಲ್ಲಿ ೨೩ ಜನ ತೀರ್ಥಂಕರರು ಜೈನಧರ್ಮದ ಪ್ರವರ್ತನೆಗೈದಿದ್ದಾರೆ. ಪಾರ್ಶ್ವನಾಥ ಹಾಗೂ ವರ್ಧಮಾನ ಮಹಾವೀರನನ್ನು ಈ ಧರ್ಮದ ಪ್ರವರ್ತಕರೆಂದು ಗುರುತಿಸಲಾಗಿದೆ. ಇವರು ಧರ್ಮದ ಮಹಾನ್ ತತ್ವಗಳನ್ನು ಉಪದೇಶಿಸಿದ್ದಾರೆ.

ಜೈನಧರ್ಮ ಕರ್ನಾಟಕದಲ್ಲಿ ವ್ಯಾಪಕವಾಗಿ ಬಾಳಿ ಬದುಕಿದ ಧರ್ಮಗಳಲ್ಲಿ ಒಂದು. ಕರ್ನಾಟಕದಲ್ಲಿ ಕ್ರಿ.ಪೂ. ೩ನೆಯ ಶತಮಾನದಿಂದ ಇದು ಅಸ್ತಿತ್ವದಲ್ಲಿದ್ದಿತ್ತೆಂದು ವಿದ್ವಾಂಸರು ಭಾವಿಸುತ್ತಾರೆ.[೪]

ಈ ಧರ್ಮದ ಮೂರು ಶಾಖೆಗಳಾದ ದಿಗಂಬರ, ಶ್ವೇತಾಂಬರ ಮತ್ತು ಯಾಪನೀಯಗಳು ಮಧ್ಯಮಲೆನಾಡಿನ ಭಾಗಗಳಲ್ಲಿ ಅಸ್ತಿತ್ವದಲ್ಲಿದ್ದವು. ಶೃಂಗೇರಿ, ಕೊಪ್ಪ, ಕಲ್ಲುಬಸ್ತಿ, ಕಣಿವೆ, ಮೇಗುಂದ, ಮೇಳಿಗೆ, ಹೊಂಬುಜ, ಕುಂದಾದ್ರಿ, ದಾನಸಾಲೆ ಮುಂತಾದ ಸ್ಥಳಗಳಲ್ಲಿ ಜಿನಮಂದಿರಗಳಿವೆ. ಶಾಸನಗಳಲ್ಲಿ ಉಲ್ಲೇಖವಾಗಿರುವ ಪ್ರಥಮ ಧರ್ಮ ಜೈನಧರ್ಮ. ಈ ಧರ್ಮಕ್ಕೆ ಸಂಬಂಧಿಸಿದ ಹಲವಾರು ಶಾಸನಗಳು ಪ್ರಾಪ್ತವಾಗಿವೆ. ಶಾಸನದ ಮೊದಲಿಗೆ ಕ್ರಿ.ಶ. ೭ನೇ ಶತಮಾನದಲ್ಲಿದ್ದ ಅಕಳಂಕನ 'ಪ್ರಮಾಣಸಂಗ್ರಹ'ದ ಮಂಗಳ ಶ್ಲೋಕವು ಬಹುಪಾಲು ಜೈನಶಾಸನದಲ್ಲಿದೆ.

ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾಮೋಘಲಾಂಛನ ಜೀಯಾತ್ತ್ರೈಲೋಕನಾಥಸ್ಯ ಶಾಸನಂ ಜಿನಶಾಸನಂ। ಎಂಬ ಜೈನಧರ್ಮದ ಶ್ಲೋಕದೊಂದಿಗೆ ಜೈನಶಾಸನಗಳು ಆರಂಭವಾಗುತ್ತವೆ. ಈ ಭಾಗದಲ್ಲಿ ಶಾಸನೋಕ್ತವಾಗಿರುವ ಮೊದಲರಾಜ ವಂಶವೆಂದರೆ ದಕ್ಷಿಣಕನ್ನಡದ ಅಳುಪರು. ಇವರು ಕ್ರಿ.ಶ. ೪ನೇ ಶತಮಾನದಿಂದ ಕ್ರಿ.ಶ. ೧೪ನೆಯ ಶತಮಾನದವರೆಗೂ ಆಳ್ವಿಕೆ ನಡೆಸಿ ಮೊದಲಿಗೆ ಸ್ವತಂತ್ರರಾಗಿ ಆ ನಂತರ ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರದ ಮಾಂಡಳಿಕರಾಗಿ ಬಹುದೀರ್ಘಕಾಲ ಆಳ್ವಿಕೆ ನಡೆಸಿದರು. ಮೊದಲಿಗೆ ಮಂಗಳೂರನ್ನು ಅನಂತರ ಬಾರಕೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರು.

ಅಳುಪರು ಪ್ರಧಾನವಾಗಿ ಜೈನಮತಾವಲಂಬಿಗಳಾಗಿದ್ದವರು. ಮೊದಲನೆಯ ಕುಲಶೇಖರನ ರಾಣಿಯಾದ ಮಹಾದೇವಿಯು ಜೈನಮತಾವಲಂಬಿಯಾಗಿದ್ದು, ಯಥೇಚ್ಚವಾಗಿ ದಾನದತ್ತಿಗಳನ್ನು ನೀಡಿ ಖ್ಯಾತಿಪಡೆದವಳಾಗಿದ್ದಾಳೆ.[೫]

ಸಾಂತರರು ಮೂಲತಃ ಜೈನಮತಾವಲಂಬಿಗಳಾಗಿದ್ದರು.ನಂತರದಲ್ಲಿ ಅಂದರೆ ಸುಮಾರು ಕ್ರಿ.ಶ. ೧೨ನೇ ಶತಮಾನದಲ್ಲಿ ಶೈವಧರ್ಮಕ್ಕೆ ಮತಾಂತರ ಹೊಂದಿದ್ದರೆಂದು ಕೆಲವೊಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದರೂ ಸಹ ಇದರ ಬಗ್ಗೆ ಇನ್ನೂ ಹೆಚ್ಚಿನ ಚರ್ಚೆಗಳಿಗೆ ಅವಕಾಶಗಳಿವೆ.[೬]

ಸಾಂತರರು ಯಾವುದೋ ಒಂದು ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ತಮ್ಮ ನೆಲೆವೀಡಾದ ಹೊಂಬುಜವನ್ನು ತ್ಯಜಿಸಿ,ಸೇತುವಿಗೆ(ಹೊಸನಗರ) ಅನಂತರ ಕಳಸಕ್ಕೆ ಬದಲಾವಣೆಮಾಡಿದಂತೆ ಶಾಸನಗಳಿಂದ ಕಂಡುಬರುತ್ತದೆ. ಇದಕ್ಕೆ ಸಾಕ್ಷಿ ಎನ್ನುವಂತೆ ಸೇತುವಿನ ಶಾಸನಗಳು ಜಿನಸ್ತುತಿಯನ್ನು ಹೊರತುಪಡಿಸಿ, ಶಿವಸ್ತುತಿಯಿಂದ ಪ್ರಾರಂಭವಾಗುತ್ತವೆ. ರಾಜರು ತಮ್ಮನ್ನೂ ಶಾಸನಗಳಲ್ಲಿ 'ಪೊಂಬುಜದ ಪುರವರಧೀಶ್ವರರು' ಎಂದು ಕರೆಯಿಸಿಕೊಂಡಿದ್ದಾರೆ.[೭] ಇದಕ್ಕೆ ಮೂಲಕಾರಣ ಜೈನಧರ್ಮದ ಅವನತಿ. ಮೂರು ಅಥವಾ ನಾಲ್ಕನೇ ಶತಮಾನದಿಂದ ಹನ್ನೊಂದನೆಯ ಶತಮಾನದವರೆಗೆ ಅತ್ಯಂತ ರಾಜವೈಭವದಿಂದ ಬಾಳಿ ಬೆಳಗಿ ರಾಜಧರ್ಮವಾಗಿ ಮೆರೆದು ನಂತರದ ಕಾಲಘಟ್ಟದಲ್ಲಿ ನಿಧಾನವಾಗಿ ಅವನತಿಯ ಹಾದಿ ಹಿಡಿದಿದೆ. ಇದಕ್ಕೆ ಪ್ರಧಾನ ಅಂಶವೆಂದರೆ ಬಿಟ್ಟಿದೇವ ರಾಮಾನುಜರ ಪ್ರೇರಣೆಯಿಂದ ವೈಷ್ಣವನಾದುದು ಬಹುದೊಡ್ಡ ಆಘಾತ. ಅಂದರೆ ಇದೇ ಸಮಯಕ್ಕೆ ಗಂಗರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ರಾಜಧರ್ಮವಾಗಿದ್ದ ಜೈನಧರ್ಮಕ್ಕೆ ಕ್ರಮೇಣ ನೆಲೆ ಇಲ್ಲದಂತಾಯಿತು. ವೀರಶೈವಧರ್ಮದ ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನಗಳು ಈ ಧರ್ಮಕ್ಕೆ ಕೊಡಲಿಪೆಟ್ಟುಗಳಾದವು. ಸಾಂತರರು, ಕಾರ್ಕಳದ ಬೈರರಸ ಒಡೆಯರು, ದಾನಿವಾಸ ಪ್ರಭುಗಳು ವೀರಶೈವಧರ್ಮದ ಪ್ರತಿಪಾದಕರಾಗಿದ್ದು ಆರಗದ ಒಡೆಯರು ಹಿಂದೂ ಧರ್ಮವನ್ನು ಎತ್ತಿಹಿಡಿದಿದ್ದು, ಜೈನವ್ಯಾಪಾರಿ ವರ್ಗಗಳು ವೀರಶೈವಕ್ಕೆ ಮತಾಂತರಗೊಂಡಿದ್ದು ಜೈನಧರ್ಮಕ್ಕೆ ಇನ್ನಿಲ್ಲದ ಹೊಡೆತ ನೀಡಿದ್ದವು. ಆಂತರಿಕ ಕಲಹಗಳು, ಕಠಿಣ ಆಚರಣೆಗಳ ಕಾರಣಗಳಿಂದಾಗಿ ಈ ಧರ್ಮ ಇತರ ಧರ್ಮಗಳ ಜೊತೆ ಸ್ಪರ್ಧಿಸಲಾರದೆ ಹೋದಂತಹ ಸಂದರ್ಭದಲ್ಲಿ ಶೈವಧರ್ಮ ಈ ಭಾಗದಲ್ಲಿ ಪ್ರಧಾನವಾಗಿ ತನ್ನ ಪ್ರಾಬಲ್ಯವನ್ನು ಕಂಡುಕೊಂಡಿತು.

ಸಾಂತರರು ತಮ್ಮನ್ನು ಪಾರ್ಶ್ವನಾಥ ತೀರ್ಥಂಕರನ ಉಗ್ರವಂಶದವರೆಂದು, ಉತ್ತರಮಥುರ ದಿಂದ ಬಂದವರೆಂದು, ಪದ್ಮಾವತೀಲಬ್ದ ವರಪ್ರಸಾದರೆಂದು ಕರೆದುಕೊಂಡಿದ್ದಾರೆ. ಇಂದಿಗೂ ಸಹ ಹುಂಚದಲ್ಲಿ ಜೈನಮತವಿದ್ದು, ಪದ್ಮಾವತಿದೇವಿ ಪೂಜಿಸಲ್ಪಡುತ್ತಿದ್ದು ಅನೇಕ ಪಾರ್ಶ್ವನಾಥ ಬಸದಿಗಳು ಇಲ್ಲಿವೆ.

ಸಾನ್ತರರ ಶಾಸನಗಳು ಜೈನಪರಂಪರೆಯ ಬಗ್ಗೆ ತಿಳಿಸುತ್ತ ಕುಂದಕುಂದಾನ್ವಯ ಮೂಲಗಣ, ನಂದಿಗಣ, ದೇಸಿಗಣ, ಪುಸ್ತಕಗಚ್ಚ ಮೊದಲಾದವುಗಳನ್ನು ಉಲ್ಲೇಖಿಸುತ್ತವೆ. ಹಾಗೆಯೇ ಸಾಂತರ ರಾಜರಾಣಿಯರು, ಅವರ ಮಕ್ಕಳು ಕೆಲವೊಮ್ಮೆ ಅಧಿಕಾರಿ ವರ್ಗದವರು, ವರ್ತಕರು, ಸಾಮಾನ್ಯ ಪ್ರಜೆಗಳು ಜೈನಧರ್ಮವನ್ನು ಪ್ರೋತ್ಸಾಹಿಸಿರುವುದು ಸಾಂತರರ ಶಾಸನಗಳ ಅಧ್ಯಯನದಿಂದ ತಿಳಿದುಬರುತದೆ. ಇದಕ್ಕೆ ನಿದರ್ಶನವೆಂದರೆ ತೊಲಾಪುರುಷ ವಿಕ್ರಮಾದಿತ್ಯ ಸಾಂತರನು ಮೋನಿ ಭಟ್ಟಾರಕ ಶಿಷ್ಯನಾಗಿ ಗುಡ್ಡದ ಮೇಲೆ ಬಾಹುಬಲಿಯ ಬಸದಿಯನ್ನು ಕಟ್ಟಿಸಿದ್ದು ಅದಕ್ಕೆ ನೀಡಿದ ದಾನದ ವಿವರಗಳು ಇವೆ.[೮]

ಸಾಂತರ ಇನ್ನೊಬ್ಬ ದೊರೆ ಭುಜಬಲ ಸಾನ್ತರನು ದೇವಾಲಯವನ್ನು ಕ್ರಿ.ಶ. ೧೦೬೬ರಲ್ಲಿ ನಿರ್ಮಿಸಿ ತನ್ನ ರಾಜಗುರು ಕನಕನಂದಿ ದೇವರಿಗೆ ಭೂಮಿಯನ್ನು ಉಂಬಳಿಯಾಗಿ ಬಿಟ್ಟು ಕೊಡುವುದರೊಂದಿಗೆ ಅದನ್ನು ಒಪ್ಪಿಸಿದನು.[೯]

ವೀರ ಸಾಂತರನು **ನೊಕಿಯಬ್ಬೆ ಜಿನಗೇಹವನ್ನು** ಮಾಡಿಸಿ ಅದಕ್ಕೆ ಕೆಲವೊಂದು ಭೂಮಿಗಳನ್ನು ತೆರಿಗೆರಹಿತವಾಗಿ ದಾನ ಮಾಡಿದನು. ತ್ರಿಭುವನಮಲ್ಲ ಸಾಂತರನು ಆನಂದೂರಿನಲ್ಲಿ ಬಸದಿಯನ್ನು ನಿರ್ಮಿಸಿದ ಉಲ್ಲೇಖ ಬರುತ್ತದೆ.[೧೦] ಜಿನದತ್ತನಿಂದ ಪ್ರಾರಂಭವಾದ ಹೊಂಬುಜ ರಾಜಧಾನಿಯಲ್ಲಿ ಲೊಕ್ಕಿಯಬ್ಬೆಯು ನೆಲೆನಿಂತದ್ದಕ್ಕಾಗಿ ಜಿನದತ್ತನು ಅಲ್ಲಿ ಜಿನಗೇಹವನ್ನು ಕಟ್ಟಿಸಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಚಟ್ಟಲದೇವಿ ತನ್ನ ಹಿರಿಯರಿಗೆ ಪಂಚಬಸದಿಯನ್ನು ಕಟ್ಟಿಸಿ ಆ ಬಸದಿಗಾಗಿ ಮಾಡಿದ ದಾನದ ವಿವರಗಳು ಪ್ರಮುಖವಾಗಿವೆ.[೧೧] ಹಾಗೆಯೇ ಶಾಸನದಲ್ಲಿ ವ್ಯಕ್ತವಾಗಿರುವ ತೈಲಪನ ಪತ್ನಿ ಅಕ್ಕದೇವಿಯು ಅಂದಾಸುರದಲ್ಲಿ ಒಂದು, ಬಸದಿ ಸೇತುವಿನಲ್ಲಿ ಎರಡು ಬಸದಿಗಳನ್ನು ನಿರ್ಮಿಸಿ ಅಭಿನವ ಅತ್ತಿಮಬ್ಬೆ ಎಂದೆನೆಸಿಕೊಂಡಳೆಂದು ಶಾಸನಗಳು ತಿಳಿಸುತ್ತವೆ.[೧೨]

ರಾಜವಂಶದವರಲ್ಲದೆ ಸಮಾಜದ ಕೆಳವರ್ಗದ ಜನರೂ ಸಹ ಜೈನಮತಾವಲಂಬಿಗಳಾಗಿದ್ದು ಆ ಸಮಾಜದ ಜೈನಧರ್ಮದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಉದಾಹರಣೆಗೆ ನೋಕಯ್ಯಶೆಟ್ಟಿಯು ಹೊಂಬುಜದಲ್ಲಿ ನಿರ್ಮಿಸಿದ ಪಟ್ಟಣಸ್ವಾಮಿ ಜಿನಾಲಯ, ಅನೇಕ ಕೆರೆಗಳ ನಿರ್ಮಾಣ ಹಾಗೂ ನೀಡಿದ ಅನೇಕ ಭೂದಾನಗಳ ವಿವರಣೆಗಳನ್ನು ಶಾಸನಗಳು ಒದಗಿಸುತ್ತವೆ.[೧೩]

ಈ ಭಾಗದಲ್ಲಿ ನಿಷಿಧಿ ಕಲ್ಲುಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದು, ನಗರದ ೪೫ನೆಯ ಶಾಸನದಲ್ಲಿ ಇಮ್ಮಡಿ ಪುಷ್ಪಸೇನದೇವ ಮತ್ತು ಅಕಳಂಕದೇವ ಎಂಬ ಇಬ್ಬರು ಆಚಾರ್ಯರು ಸನ್ಯಾಸನ ವಿಧಿಯಿಂದ ಮುಡಿಪಿ ಮುಕ್ತಿಪಥವನ್ನು ಪಡೆದರು ಎಂದಿದೆ.[೧೪]

ಇನ್ನು ಸಾಂತರರ ಅರಸರ ರಾಜಗುರುಗಳಾದ ಜೈನಮುನಿಗಳ ಬಗ್ಗೆಯೂ ಶಾಸನಗಳು ಸಾಕಷ್ಟು ಉಲ್ಲೇಖ ಮಾಡಿದ್ದು ನನ್ನಿಶಾಂತರಸನ ಗುರುಗಳಾದ ಅಜಿತ ಪಂಡಿತದೇವ ಹಾಗೆಯೇ ಶಾಸನದಲ್ಲಿ ಕಂಡುಬರುವ ಜೈನ ಆಚಾರ್ಯರಲ್ಲಿ ವಾದಿಸೇನಾ, ಕನಕಸೇನಾ ಭಟ್ಟಾರಕರು, ಸಿದ್ಧಾಂತದೇವಾ ಮುಂತಾದವರು ವಿಕ್ರಮ ಸಾನ್ತರನ ಕಾಲದ ಆಚಾರ್ಯರು ಮೌನಿದೇವಾ.[೧೫]

ಸಾಂತರರ ಪ್ರಮುಖ ಅರಸಿಯಾದ ಚಾಗಲದೇವಿಯು ನೂಕಿಯಬ್ಬೆಯ ಬಸದಿಯ ಮುಂದೆ ಮಾಡಿಸಿರುವ ಮಕರತೋರಣದ ಉಲ್ಲೇಖ ಶಾಸನಗಳಿಂದ ತಿಳಿದುಬರುತ್ತದೆ.[೧೬]

ಒಟ್ಟಾರೆಯಾಗಿ ಸಾಂತರರು ಜೈನ ಧರ್ಮಾವಲಂಬಿಯಾಗಿದ್ದು ಬೇರೆ ಧರ್ಮಗಳ ಬೆಳವಣಿಗೆಗೆ ಸಹಾಯಕರಾಗಿದ್ದರೆಂದು ಶಾಸನಗಳ ಮೂಲಕ ತಿಳಿಯಬಹುದಾಗಿದೆ. ಇನ್ನು ಈ ಭಾಗದಲ್ಲಿ ಆಳಿದ ಸೇನರು(ಸೇನಾವಾರ) ಸುಮಾರು ಕ್ರಿ.ಶ. ೭ನೆಯ ಶತಮಾನದಿಂದ ಕ್ರಿ.ಶ. ೧೧ನೆಯ ಶತಮಾನದವರೆಗೆ ರಾಜ್ಯಭಾರ ಮಾಡಿದ್ದು ೪ ತಲೆಮಾರಿನ ಸೇನಾವಾರರನ್ನು ಗುರುತಿಸಬಹುದು. ಧಾರ್ಮಿಕವಾಗಿ ಸರ್ವಧರ್ಮಸಮನ್ವಯಕಾರರಾಗಿದ್ದು ಶಿವದೇವಾಲಯಗಳನ್ನು ಮತ್ತು ಜಿನಾಲಯ ವನ್ನು ನಿರ್ಮಿಸಿದರು. ಶೈವ ದೇವಾಲಯಗಳಿಗಾಗಿ ಭೂದಾನವನ್ನು ನೀಡಿರುವುದು, ದೇವಾಲಯ ಗಳನ್ನು ಜೀರ್ಣೋದ್ಧಾರ ಮಾಡಿರುವುದು ಶಾಸನಗಳಿಂದ ವೇದ್ಯವಾಗುತ್ತದೆ. ಇವರು ಜೈನಧರ್ಮಕ್ಕೆ ವಿಶೇಷ ಒಲವು ತೋರಿದ್ದರು. ಚಿಕ್ಕಮಗಳೂರು ೧೭೭ರ ಕಡವಂತಿ ಶಾಸನದಲ್ಲಿ **ನಿರವದ್ಯಯ** ಎನ್ನುವನು ನಿರವದ್ಯ ಜಿನಾಲಯವನ್ನು ನಿರ್ಮಿಸಿದನು. ದೊರೆಯಾದ ಖಚರಕುಂದರ್ಪನು ಅದನ್ನು ಮಾನ್ಯವನ್ನಾಗಿ ಮಾಡಿ ಜಿನಾಲಯಕ್ಕೆ ಅರ್ಪಿಸಿದನು. ಈ ನಿರುವದ್ಯನು ದೇವಗಣ ಮತ್ತು ಪಾಷಾಣನ್ವಯದ ಅಂಕದೇವಭಟ್ಟಾರರ ಶಿಷ್ಯನೆಂದು ಹೇಳಲಾಗಿದೆ.[೧೭]

ಮಧ್ಯಮಲೆನಾಡಿನ ಕೆಲವೊಂದು ಪ್ರದೇಶಗಳಲ್ಲಿ ಪ್ರಧಾನವಾಗಿ ಆಳ್ವಿಕೆ ನಡೆಸಿದ ಪ್ರಮುಖ ಸಾಮಂತ ಅರಸು ಮನೆತನಗಳಲ್ಲಿ ಕಳಸ–ಕಾರ್ಕಳದ ಪ್ರಭುಗಳು.ಪ್ರಮುಖರು ಇವರು ಕ್ರಿ.ಶ. ೧೨ನೆಯ ಶತಮಾನದಿಂದ ಕ್ರಿ.ಶ. ೧೭ನೆಯ ಶತಮಾನದವರೆಗೂ ವಿಜಯನಗರ ಅರಸರ ಮಾಂಡಲಿಕರಾಗಿ ರಾಜ್ಯಭಾರ ಮಾಡಿದ್ದು ಜೈನಧರ್ಮಾವಲಂಬಿಗಳಾಗಿದ್ದರು ಎನ್ನುವ ಅಂಶ ಇವರ ಶಾಸನಗಳ ಅಧ್ಯಯನದ ಮೂಲಕ ತಿಳಿದುಬರುತ್ತದೆ. ಕಳಸ ಶಾಸನಗಳಲ್ಲಿ ಪ್ರಧಾನವಾಗಿ ಕಳಸೇಶ್ವರ ದೇವರಿಗೆ, ಜಿನೇಶ್ವರ ದೇವರಿಗೆ ಭೂದಾನ ನೀಡಿರುವುದರ ಉಲ್ಲೇಖ ಸಮಗ್ರವಾಗಿ ರುವುದರಿಂದ ಇವರು ಶೈವ ಮತಾವಲಂಬಿಗಳಾಗಿದ್ದರು ಎನ್ನುವುದರಲ್ಲಿ ಅನುಮಾನವೇ ಇಲ್ಲ ಎನ್ನಬಹುದು.

ಕಾರ್ಕಳ ಇಂದಿಗೂ ಜೈನಧರ್ಮದ ಮುಖ್ಯನೆಲೆವೀಡು.ಬಹಳ ಕಾಲದಿಂದಲೂ ಜೈನಧರ್ಮದ ಮುಖ್ಯ ಕೇಂದ್ರವಾಗಿದ್ದು ಈ ಭಾಗದಿಂದ ಆಳಿದ ಬಹಳಷ್ಟು ಅರಸುಮನೆತನಗಳು ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದರು ಎನ್ನುವುದಕ್ಕೆ ಸಾಕಷ್ಟು ಬಸದಿಗಳು ಜಿನಾಲಯಗಳಿರುವುದೇ ಸಾಕ್ಷಿಯಾಗಿದೆ. ಕಾರ್ಕಳ ಭೈರರಸರ ರಾಜಧಾನಿಯಾಗಿದ್ದಿತು. ಈ ಕಾಲದಲ್ಲಿ ಕಾಳಲದೇವಿಯು ಬಗ್ಗುಂಜಿ ಸೀಮೆಯನ್ನು ಪಾಲಿಸುತ್ತಿದ್ದು ತನ್ನ ಮಗಳಾದ ರಮಾದೇವಿ ಮೃತಳಾದಾಗ ಆಕೆ ತನ್ನ ಕುಲದೇವತೆ ಕಲ್ಲುಬಸ್ತಿಯ ಪಾರ್ಶ್ವನಾಥ ತೀರ್ಥಂಕರರ ಸೇವೆಗಳಿಗೆ ಭೂಮಿದಾನ ಮಾಡಿದ ವಿವರಣೆಯನ್ನು ನೀಡುತ್ತದೆ.[೧೮] ವೀರಪಾಂಡ್ಯಪ್ಪಒಡೆಯನು ಕೊಪ್ಪದಲ್ಲಿ ಸಾಧನ ಚೈತ್ರಾಲಯ ನಿರ್ಮಾಣಗೊಳಿಸಿ ಅಲ್ಲಿನ ಪಾರ್ಶ್ವನಾಥ ದೇವರಿಗೆ ಭೂಮಿದಾನ ಮಾಡಿದ ವಿಷಯವನ್ನು ನಿರೂಪಿಸುತ್ತದೆ.[೧೯]

ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಆಳ್ವಿಕೆ ನಡೆಸಿದ ಹೊಯ್ಸಳರು ಜೈನಧರ್ಮಾನುಯಾಯಿಗಳಾಗಿದ್ದರು. ಇವರು ಅನ್ಯಧರ್ಮಸಹಿಷ್ಣುಗಳಾಗಿದ್ದು ಜೈನ, ಬೌದ್ಧ, ಶೈವ, ವೈಷ್ಣವ ಧರ್ಮಗಳೊಂದಿಗೆ ಸಾಮರಸ್ಯವನ್ನು ಹೊಂದಿದ್ದರು. ವಿಷ್ಣುವರ್ಧನ ಮೂಲತಃ ಜೈನಾನುಯಾಯಿ ಶಾಂತಲೆ ಕೊನೆಯವರೆಗೂ ಜೈನಳಾಗಿಯೇ ಉಳಿದಳು. ಒಟ್ಟಿನಲ್ಲಿ ಜೈನಧರ್ಮ ರಾಜಾಶ್ರಯವನ್ನು ಪಡೆದುಕೊಂಡು ಉಛ್ರಾಯ ಸ್ಥಿತಿಯನ್ನು ತಲುಪಿದ್ದಿತು. ಹೊಯ್ಸಳರ ಕಾಲದ ಸಾಕಷ್ಟು ಜೈನಶಾಸನಗಳು ಲಭಿಸಿವೆ. ಜೈನಬಸದಿಗಳು, ಚೈತ್ಯಾಲಯಗಳು, ಮಂದಿರಗಳು ಲಭ್ಯವಿದ್ದು ತಮ್ಮ ಹಿಂದಿನ ಕಾಲದ ಧಾರ್ಮಿಕ ಪರಂಪರೆಯನ್ನು ತಿಳಿಸುತ್ತವೆ. ಹೊಯ್ಸಳರ ಕಾಲದ ಕೆಲವೇ ಶಾಸನಗಳು ಈ ಪ್ರದೇಶಗಳಲ್ಲಿ ದೊರೆತಿವೆ. ಶ್ರೀ ಮಹಾಪ್ರಧಾನ ಹೊಯ್ಸಳದೇವನ ಕೋಶಾಧಿಕಾರಿ ಚಂದಿಮಯ್ಯನ ಹೆಂಡತಿ ಬೊಪ್ಪವ್ವೆಯು ಶುಕ್ಲಸಂವತ್ಸರದ ಪುಷ್ಯಮಾಸದಲ್ಲಿ ಸನ್ಯಾಸಂ ಗೆಯ್ದು ಸಮಾಧಿಸಹಿತ ಸ್ವರ್ಗಪ್ರಾಪ್ತಿಯಾದಳೆಂದು ಕಣಿವೆ ಶಾಸನವು[೨೦] ಉಲ್ಲೇಖಿಸುತ್ತದೆ. ಇದರಿಂದಾಗಿ ಜೈನಧರ್ಮದಲ್ಲಿ ಸಮಾಧಿಮರಣಕ್ಕೆ ವಿಶಿಷ್ಟವಾದ ಮಹತ್ವವಿತ್ತು ಎಂಬುದು ಮನವರಿಕೆಯಾಗುತ್ತದೆ. ಜೈನ ಧಾರ್ಮಿಕ ವಿಧಿಗಳಿಂದ ಮರಣ ಹೊಂದಿದವರ ಸ್ಮಾರಕಗಳನ್ನು ನಿಲ್ಲಿಸುತ್ತಿದ್ದರು. ಇಂತಹ ಸ್ಮಾರಕಗಳನ್ನು ನಿಷಿಧಿ, ನಿಶಿಧಿ ಎಂಬುದಾಗಿ ಶಾಸನಗಳು ಕರೆದಿವೆ. ಹುಲಿಸರದಲ್ಲಿನ ನಿಷಿಧಿಕಲ್ಲು ಅತ್ಯಂತ ಮನೋಹರವಾಗಿದ್ದುದು. ಅದ್ಭುತ ಶಿಲ್ಪಗಳಿಂದ ಕೂಡಿದೆ ಕಣಿವೆಯ ಇನ್ನೊಂದು ಶಾಸನವು ಮಲದಾರಿದೇವನ ಶಿಷ್ಯನಾದ ಶುಭಚಂದ್ರದೇವನು ಸಮಾಧಿ ಮರಣಹೊಂದಿದ ಎಂದು ತಿಳಿಸುತ್ತದೆ.[೨೧] ಹಾದಿಗಲ್ಲು ಗುಡಿಯಪ್ಪಗೌಡನ ಹೆಂಡತಿ ಕಾಳಿಗಾವುಂಡಿಯು ಸಮಾಧಿಮರಣವನ್ನು ಅನುಸರಿಸಿ ಸುರಲೋಕ ಹೊಂದಿದಳು ಎಂಬುದಾಗಿ ಶಾಸನವೊಂದು ಮಾಹಿತಿ ನೀಡುತ್ತದೆ.[೨೨]

ಕಾಲಮಾನದ ದೃಷ್ಟಿಯಿಂದ ಮುಂದಿನ ಎರಡು ಶಾಸನಗಳು ಶೃಂಗೇರಿಯಲ್ಲಿ ದೊರೆತಿವೆ. ಶೃಂಗೇರಿಯ ೨೫(೧೧೬೧) ಮತ್ತು ೨೬(೧೧೫೦)ನೆಯ ಶಾಸನಗಳೂ ಪಾರ್ಶ್ವನಾಥ ಬಸದಿಯಲ್ಲಿ ದೊರಕಿವೆ.[೨೩] ಮೊದಲನೆಯದರಲ್ಲಿ ಕಾಣೂರುಗಣ, ಮೂಲಸಂಘ ಹಾಗೂ ಪುಸ್ತಕಗುಚ್ಛದ ಉಲ್ಲೇಖವಿದೆ. ಎರಡನೇ ಶಾಸನದಲ್ಲಿ ಬಸದಿಗಾಗಿ ಕೊಟ್ಟ ಭೂದಾನ ಹಾಗೂ ತೆರಿಗೆಗಳ ಉಲ್ಲೇಖವಿದೆ. ವಿಜಯನಾರಾಯಣ ಶಾಂತಿಸೆಟ್ಟಿಯ ಮೊಮ್ಮಗನೂ, ಹೆಮ್ಮಾಡಿಸೆಟ್ಟಿ ಹಾಗೂ ಸಿರಿಯಾಸೆಟ್ಟಿಯ ಮಗನೂ ಆಗಿದ್ದ ಮಾರಿಸೆಟ್ಟಿಯ ಜ್ಞಾಪಕಾರ್ಥವಾಗಿ ಈ ಬಸದಿಯನ್ನು ನಿರ್ಮಿಸಲಾಯಿತು. ಈ ಬಸದಿಯು ಹೊಯ್ಸಳರ ಕಾಲಕ್ಕೆ ಸೇರಿದುದು.ಶೃಂಗೇರಿಯಲ್ಲಿ ಪುನಃ ಜೈನಶಾಸನ ಕಾಣಿಸಿಕೊಳ್ಳುವುದು ನಾಲ್ಕು ಶತಮಾನಗಳ ನಂತರ. ಕ್ರಿ.ಶ. ೨೭ನೆಯ ಮತ್ತು ೨೮ನೆಯ ಶಾಸನಗಳೆರಡೂ ಅನಂತನಾಥ ಹಾಗೂ ಚಂದ್ರನಾಥ ವಿಗ್ರಹಗಳ ಪೀಠದ ಮೇಲೆ ಕೆತ್ತಲ್ಪಟ್ಟಿವೆ. ಮೊದಲನೆಯದು ದೇವಣ್ಣಸೆಟ್ಟಿಯು ಇದನ್ನು ಸ್ಥಾಪಿಸಿದ ವಿಷಯವನ್ನು ತಿಳಿಸಿದರೆ, ಎರಡನೆಯದು ಬೊಮ್ಮರಸೆಟ್ಟಿಯು ಇದನ್ನು ಸ್ಥಾಪಿಸಿದ ವಿಷಯವನ್ನು ತಿಳಿಸುತ್ತದೆ.[೨೪]

ರಾಜನು ಸಾಮಾನ್ಯವಾಗಿ ಜೈನಧರ್ಮದವನಾಗಿದ್ದರೆ ತಾನು ನೀಡಿದ ದಾನಗಳನ್ನು ಬರೆಸುವಾಗ ಆರಂಭದಲ್ಲಿ ಜಿನಸ್ತುತಿಯನ್ನು ಹಾಕಿಸುತ್ತಿದ್ದನು. ಈ ರೀತಿ ಜಿನಸ್ತುತಿಗಳನ್ನು ಹೊಂದಿದ ಶಾಸನಗಳಲ್ಲಿ ಶಾಪಗಳೂ ಸಹ ಜಿನಬಿಂಬಗಳನ್ನು, ಜಿನಮೂರ್ತಿಗಳನ್ನು, ಜಿನಮುನಿಗಳನ್ನು, ಜೈನಬಸದಿಗಳನ್ನು ಹಾಗೂ ಜೈನಪವಿತ್ರ ಕ್ಷೇತ್ರಗಳನ್ನೂ ಹೆಸರಿಸುತ್ತವೆ, ಜೈನಕೇಂದ್ರಗಳಾದ ಕೊಪ್ಪ, ಕಲ್ಲುಬಸ್ತಿ, ದಾನಸಾಲೆ, ಹೊಂಬುಜ, ಮೇಳಿಗೆ, ಕಣಿವೆ, ಮೇಗುಂದ ಪ್ರದೇಶಗಳಲ್ಲಿ ಲಭ್ಯವಿರುವ ಶಾಸನಗಳಲ್ಲಿ ಜೈನ ಶಾಪಾಶಯ ಮತ್ತು ಪುಣ್ಯಾಶಯಗಳನ್ನು ಕಾಣಬಹುದು. ಧರ್ಮವನ್ನು ಕೆಡಿಸಿದವರು ಬ್ರಾಹ್ಮಣರನ್ನು, ಮುನಿಗಳನ್ನು, ಗೋವುಗಳನ್ನು, ಸ್ತ್ರೀಯರನ್ನು ಕೊಂದ ಪಾಪಕ್ಕೆ ಹೋಗುವರು ಎಂತಲೂ ಈ ಧರ್ಮವನ್ನು ಪರಿಪಾಲಿಸಿದವರಿಗೆ ಸಂಕ್ರಾಂತಿ, ಗ್ರಹಣ ಮುಂತಾದ ಪುಣ್ಯಕಾಲದಲ್ಲಿ ಕೋಟಿ ಗೋವುಗಳನ್ನು, ಬ್ರಾಹ್ಮಣರನ್ನು, ಮುನಿಗಳನ್ನು, ಸ್ತ್ರೀಯರನ್ನು ರಕ್ಷಿಸಿದ ಪುಣ್ಯ ಲಭಿಸುತ್ತದೆ ಎಂದಿದೆ.

ಈ ಮೇಲಿನ ಶಾಸನಗಳ ಸಮೀಕ್ಷೆಯಿಂದ ಕರ್ನಾಟಕದಲ್ಲಿ ಸುಮಾರು ಹನ್ನೆರಡನೆಯ ಶತಮಾನದವರೆಗೂ ಜೈನಧರ್ಮ ಉಚ್ಛ್ರಾಯಸ್ಥಿತಿಯಲ್ಲಿತ್ತು. ಹೊಯ್ಸಳರ ಕಾಲದಲ್ಲಿ ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹ ದೊರಕಿತೆಂದೂ, ನಂತರ ಅದು ಕಡಿಮೆಯಾಯಿತೆಂದು ಗೊತ್ತಾಗುತ್ತದೆ. ವಿಜಯನಗರ ಕಾಲದಲ್ಲಿ ಈ ಧರ್ಮದ ಪುನರುಜ್ಜೀವನಕ್ಕೆ ಕೆಲವು ಪ್ರಯತ್ನಗಳನ್ನು ಮಾಡಿದರೂ, ಸಫಲವಾಗಲಿಲ್ಲ. ಮತ್ತೆ ಈ ಪ್ರದೇಶದಲ್ಲಿ ಜೈನಧರ್ಮವು ಪ್ರಾಚೀನಕಾಲದಲ್ಲಿ ಇದ್ದ ಉತ್ತುಂಗ ಸ್ಥಿತಿಯನ್ನು ತಲುಪಲೇ ಇಲ್ಲ.

ಆರಗದ ಅರಸರು ಜೈನಧರ್ಮಕ್ಕೂ ಉತ್ತೇಜನ ನೀಡಿದ್ದರು. ಅನೇಕ ಜೈನ ಮಂದಿರಗಳು, ಬಸದಿಗಳು ಇವರ ಕಾಲದಲ್ಲಿ ನಿರ್ಮಾಣವಾದವು.ಆರಗದಲ್ಲಿರುವ ಜೈನಬಸದಿಯು ಪಾಳುಬಿದ್ದಿದೆ. ಗರ್ಭಗುಡಿಯಲ್ಲಿ ಮೂಲ ದೇವತೆಯ ವಿಗ್ರಹವಿಲ್ಲ, ರಂಗಮಂಟಪದಲ್ಲಿ ನಾಲ್ಕು ಸ್ತಂಭಗಳಿವೆ. ದ್ವಾರಪಟ್ಟಿಕೆಯ ಮೇಲೆ ತೀರ್ಥಂಕರರ ಮೂರ್ತಿಗಳಿವೆ. ಇಲ್ಲಿನ ವೀರಭದ್ರ ದೇವಾಲಯದ ಸಮುಚ್ಚಯದಲ್ಲಿರುವ ಜೈನತೀರ್ಥಂಕರರ ಮೂರ್ತಿಗಳು ಕ್ರಿ.ಶ. ೮ನೆಯ ಶತಮಾನದ ಚೈತ್ಯಾಲಯಕ್ಕೆ ಸಂಬಂಧಿಸಿದಂತೆ ಕಂಡುಬರುತ್ತವೆ.

ಜೈನಧರ್ಮ ಪ್ರಾಬಲ್ಯವಿದ್ದ ಕಾಲದಲ್ಲಿ ಮಲೆನಾಡಿನ ಜನರು ಅದರಲ್ಲೂ ವಿಶೇಷವಾಗಿ ಒಕ್ಕಲಿಗರು ಜೈನ ಭೂಮಾಲಿಕರ ಒಕ್ಕಲುಗಳಾಗಿದ್ದರೆಂದು ಊಹಿಸುವ ಸಾಧ್ಯತೆಗಳಿವೆ. ಜೈನಧರ್ಮದ ಪ್ರಾಬಲ್ಯ ಕುಗ್ಗಿ ವೈಷ್ಣವಮತ ಹೆಚ್ಚು ಪ್ರಚಾರಕ್ಕೆ ಬಂದ ದಿನಗಳಲ್ಲಿ ವ್ಯಾಪಾರ ಉದ್ಯಮದಲ್ಲಿ ನಿಪುಣರಾಗಿದ್ದ ಜೈನರು ತಮ್ಮ ಜಮೀನು ಮನೆಗಳನ್ನು ಇಲ್ಲಿಯವರಿಗೇ ಒಪ್ಪಿಸಿ ಹೋಗಿರುವ ಸಾಧ್ಯತೆಗಳಿವೆ. ಇಂದಿಗೂ ಜೈನವಂಶದವರ ಮನೆಗಳು ಉಳಿದುಬಂದಿವೆ. ತೀರ್ಥಹಳ್ಳಿ ತಾಲ್ಲೂಕಿನ ಗುಡ್ಡೇಕೇರಿ ಕಾಡಮ್ಮನವರ ಮನೆ ಜೈನರದ್ದು ಎಂದು ಹೇಳಲಾಗಿದೆ. ಈ ಮನೆಯ ರಚನಾವಿನ್ಯಾಸ, ಸುತ್ತಲಿನ ವಾತಾವರಣ ಜೈನ ನಿವಾಸಗಳ ನೆನಪನ್ನು ತಂದುಕೊಡುತ್ತದೆ. ತಪ್ಪು ಮಾಡಿದವರಿಗೆ

ಪ್ರಾಯಶ್ಚಿತ್ತ ನೀಡುವ ಸಲುವಾಗಿ ಜೈನರು ನೆಟ್ಟಿದ್ದರೆಂದು ಹೇಳಲಾದ 'ಆಣೆಕಲ್ಲು' ಈ ಮನೆಯ ಆವರಣದಲ್ಲಿ ಈಗಲೂ ಇದೆ. ಈ ಕಲ್ಲನ್ನು ಸತ್ಯ ಪ್ರಮಾಣಮಾಡಲು ಈಗಲೂ ಬಳಸುತ್ತಾರೆ.

ತೀರ್ಥಹಳ್ಳಿ, ಕೊಪ್ಪ, ಶೃಂಗೇರಿಯಲ್ಲಿ ಬಹುಸಂಖ್ಯಾತ ಸಮುದಾಯವಾದ ಒಕ್ಕಲಿಗರು ಮೂಲತಃ ಜೈನರಾಗಿದ್ದು ನಂತರದ ಕಾಲಘಟ್ಟದಲ್ಲಿ ಪರಿವರ್ತನೆ ಹೊಂದಿದವರು ಎಂಬುವುದನ್ನು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಪಿತೃಪಕ್ಷ ಮತ್ತಿತರ ಹಬ್ಬ ಆಚರಣೆಗಳಲ್ಲಿ ಹಸಿರು ಸೊಪ್ಪಿನಿಂದ ತಯಾರಿಸಿದ 'ಜೈನೆಡೆ' ಎಂಬ ಮೀಸಲು ಎಡೆಯನ್ನು ಮೊದಲಿಗೆ ಇಡುವುದು, ಸೂರ್ಯಾಸ್ತಕ್ಕೆ ಮೊದಲು ಊಟ ಮಾಡುವುದು, ಭಾನುವಾರ ಮಜ್ಜಿಗೆ ಕಡೆಯದಿರುವುದು, ಮನೆಗೆ ಅರವತ್ತು ತುಂಬಿದಾಗ 'ಅಣುವ್ರತ' ಆಚರಿಸುವುದು, ಜೈನಮನೆತನದ ಹೆಸರುಗಳನ್ನು ಉಳಿಸಿಕೊಂಡಿರುವುದು ಹಾಗೂ ಮೃದುಸ್ವಭಾವದಾಗಿರುವುದನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಜೈನಧರ್ಮದ ಅನುವಂಶೀಯತೆಯನ್ನು ಈ ಸಮುದಾಯದಲ್ಲಿ ಗುರುತಿಸಬಹುದು.

೩.೧.೩. ಶೈವಧರ್ಮ

ಇಂದು ಶೈವ ಎಂದು ಕರೆಯಲಾಗುವ ಧರ್ಮದ ಒಳಹೊರಗುಗಳ ವ್ಯತ್ಯಾಸಗಳು ಅದು ಐತಿಹಾಸಿಕವಾಗಿ ಬೆಳೆದು ಅನೇಕ ವಿಭಿನ್ನ ಅಂಶಗಳನ್ನು ತನ್ನದಾಗಿರಿಸಿಕೊಂಡ ಧರ್ಮ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಶೈವಧರ್ಮದ ಆಚರಣೆಯನ್ನು ನಾವು ಕ್ರಿಸ್ತಪೂರ್ವ ಕಾಲದ ಸಿಂಧೂ ನಾಗರಿಕತೆಯ ಸಂದರ್ಭದಲ್ಲಿ ದೊರೆತಿರುವ 'ಲಿಂಗ' ಸಾದೃಶ್ಯ ವಸ್ತುಗಳು ಶಿಶ್ನ ಅಂಶಗಳು ಎಂಬುದನ್ನು ಊಹೆಗೆ ಅವಕಾಶವಾಗಿದೆ. ಇದರಿಂದಾಗಿ ಲಿಂಗದ ಆರಾಧನೆಯ ಪ್ರಾಚೀನತೆಯನ್ನು ಸ್ಪಷ್ಟವಾಗಿ ಸಿಂಧೂ ನಾಗರಿಕತೆಯಲ್ಲಿ ಗುರುತಿಸಲು ಸಾಧ್ಯವಾಗುತ್ತದೆ.

ಶಿವನು ಅನಾರ್ಯ ದೇವತೆಯೆಂದು ವೈದಿಕ ದೇವತೆಯಾದ ರುದ್ರನೊಡನೆ ಸೇರಿ ಪೌರಾಣಿಕ ಶೈವಮತವು ಹುಟ್ಟಿತೆಂದು ಕೆಲವರು ಊಹಿಸುವರು. ಷಣ್ಮತಗಳು ವೈಧಿಕ ಯಜ್ಞ ಕರ್ಮದಿಂದ ಹುಟ್ಟಿವೆ. ವೇದದಲ್ಲಿ ಅಗ್ನಿಯ ಕ್ರೂರರೂಪಕ್ಕೆ ರುದ್ರನೆಂದು, ಸೌಮ್ಯ ರೂಪಕ್ಕೆ ಶಿವನೆಂದು ಹೇಳಿದೆ. ಈ ಯಜ್ಞೇಶ್ವರನ ಕಿಡಿಗಳೇ ಕಾಳಿ, ಕರಾಳಿ ಮುಂತಾದ ದೇವಿಯರು, ಶೈವ ಮತಗಳಲ್ಲಿ ಜಾತಿಗೋತ್ರ ನಿಬಂಧನೆಗಳಿರಲಿಲ್ಲವೆಂದು ಇದು ಅನಾರ್ಯ ಮತವೆಂದು ಹೇಳುವುದು ಸೂಕ್ತವಾಗಿದೆ.

ಸರ್ವದರ್ಶನ ಸಂಗ್ರಹದ ಪ್ರಕಾರ ಶೈವರಲ್ಲಿ ಲಾಕುಲೀಶ ಪಾಶುಪಥ ಪ್ರತ್ಯಭಿಜ್ಞ ಮತ್ತು ರಸೇಶ್ವರ ಎಂಬ ಮೂರು ಪ್ರಬೇಧಗಳಿವೆ. ಕಾರಣಾಗಮದಲ್ಲಿ ಶೈವ, ಪಾಶುಪಥ, ಸೋಮ, ಲಾಕುಳ ಎಂಬ ನಾಲ್ಕು, ಕೂರ್ಮ ಪುರಾಣದಲ್ಲಿ ಕಾಪಾಲ, ನಾಕುಲ, ವಾಮ, ಬೈರವ, ಪಾಶುಪಥ ಎಂಬ ಐದು, ಆನಂದಗಿರಿ ವಾಚಸ್ಪತಿಗಳ ಪ್ರಕಾರ ಶೈವ ಪಾಶುಪಥ, ಕಾರುಕ, ಸಿದ್ಧಾಂತಿ, ಕಾಪಲಿಕ ಎಂಬ ನಾಲ್ಕು ಭೇದಗಳಿವೆ.

ಹರಪ್ಪ ಸಂಸ್ಕೃತಿಯಲ್ಲಿ ಪಶುಪತಿ ಪೂಜೆಯು ಕಂಡುಬರುವುದು. ಉಪನಿಷತ್ತುಗಳಲ್ಲಿ ಇದಕ್ಕೆ ಶಿರೋವ್ರತ, ಮಹಾವ್ರತವೆಂದು ಹೆಸರು. ನ್ಯಾಯದರ್ಶನದ ಕಣಾದ ಮಹರ್ಷಿಗಳು ಪಾಶುಪಥ ಈಶ್ವರರಾಗಿದ್ದರು. ಪಾಶುಪಥರು ಉಜ್ಜಯಿನಿಯ ಮಹಾಕಾಲ ಪೂಜಕರಾಗಿದ್ದುದರಿಂದ ಕಾಳಮುಖರೆಂದು, ಲಾಕುಳೇಶ್ವರರು ಸಂಪ್ರದಾಯದವರಾಗಿದ್ದುದರಿಂದ ಲಾಕುಳರೆನಿಸಿಕೊಂಡರು.

ಈ ಧರ್ಮ ಭಾರತದ ಅತ್ಯಂತ ಪ್ರಾಚೀನ ಧರ್ಮಗಳಲ್ಲೊಂದು.ಶಿವೋಪಾಸನೆ ವೇದಪೂರ್ವ ಹರಪ್ಪ-ಮೆಹೆಂಜೊದಾರೋಗಳ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ನಾನಾರೂಪದಲ್ಲಿ ಬೆಳೆದುಬಂದಿದೆ. ಸಿಂಧೂ ನಾಗರಿಕತೆಯಲ್ಲಿ ಶಿವನು ಯೋಗಸಮಾಧಿಯ ಭಂಗಿಯಲ್ಲಿದ್ದು, ಸುತ್ತಲೂ ಪ್ರಾಣಿಗಳಿಂದ ಸುತ್ತುವರಿದಿದ್ದು ಪಶುಪತಿ ಎಂದು ಗುರುತಿಸಲ್ಪಟ್ಟಿದ್ದು, ಲಿಂಗರೂಪದಲ್ಲಿಯೂ ಆರಾಧಿಸುವ ರೂಢಿ ಆ ಕಾಲದಿಂದಲೂ ಬೆಳೆದುಬಂದಿದೆ.[೨೫] ಸಿಂಧೂ ನಾಗರೀಕತೆಯ ಅವಶೇಷಗಳ ಅಧ್ಯಯನದಿಂದ ಶೈವಧರ್ಮವು ಪ್ರಪಂಚದ ಅತ್ಯಂತ ಪ್ರಾಚೀನ ಜೀವಂತ ಧರ್ಮವೆಂದು ಭಾವಿಸಲಾಗುತ್ತದೆ. ಋಗ್ವೇದದಲ್ಲಿ ರುದ್ರನು ದುಷ್ಟಶಕ್ತಿಗಳಿಗೆ ಅಧಿಪತಿಯೆಂಬಂತೆ ಚಿತ್ರಿತ ರುದ್ರ ಎಂದರೆ ಗರ್ಜಿಸುವವನು ಎಂದರ್ಥ. ಮುಂದೆ ಶಿವನಿಗೆ ಅನ್ವಯಿಸಲಾದ ಅನೇಕ ಲಕ್ಷಣಗಳನ್ನು ರುದ್ರನಿಗೆ ಅನ್ವಯಿಸಿ ಹೇಳಲಾಗಿದೆ.

ಮಧ್ಯಮಲೆನಾಡಿನ ಪ್ರದೇಶಗಳಲ್ಲಿ ಪ್ರಾಪ್ತವಾಗಿರುವ ಬಹಳಷ್ಟು ಶಾಸನಗಳು ಶೈವಶಾಸನಗಳಾಗಿವೆ. ಶಾಸನದ ಆರಂಭದಲ್ಲಿ 'ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ, ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭುವೇ।' ಎಂಬ ಶಿವಸ್ತುತಿಯೊಂದಿಗೆ ಪ್ರಾರಂಭವಾಗುತ್ತವೆ.

ಸಾಂತರರು ಮೂಲತಃ ಜೈನಧರ್ಮಿಯರಾಗಿದ್ದರೂ ಸರ್ವಧರ್ಮಸಹಿಷ್ಣುಗಳಾಗಿದ್ದರು.ಅವರ ರಾಜಧಾನಿಯಾದ ಹೊಂಬುಜದಲ್ಲಿ ಜೈನ ಬಸದಿಗಳ ಜೊತೆಗೆ ಕೆಲವೊಂದು ಶೈವ ದೇವಾಲಯಗಳು ಗೋಚರವಾಗುವುದರಿಂದ ಶೈವಧರ್ಮಕ್ಕೂ ಆಶ್ರಿತರಾಗಿದ್ದರು ಎನ್ನುವ ಅಂಶ ನಮಗೆ ಅರ್ಥವಾಗುತ್ತದೆ. ಇವರ ಕಾಲದಲ್ಲಿ ರಾಜರು ಸ್ಥಾಪಿಸಿದ ಅನೇಕ ಅಗ್ರಹಾರಗಳು ಹಾಗೂ ದೇವಾಲಯಗಳಿಗೆ ಅವರು ನೀಡಿದ ದಾನದ ವಿವರಗಳು ಶಾಸನಗಳಿಂದ ತಿಳಿದುಬರುತ್ತದೆ. ಸಾಂತರರ ನಂತರದ ನೆಲೆವೀಡು ಸೇತುವಿನಲ್ಲಿನ ಶಾಸನಗಳು ಜಿನಸ್ತುತಿಗೆ ಬದಲಾಗಿ ಶೈವಸ್ತುತಿ ಯಿಂದ ಪ್ರಾರಂಭವಾಗುತ್ತವೆ. ಇದರಿಂದಾಗಿ ಇವರು ಶೈವಧರ್ಮದ ಬೆಳವಣಿಗೆಗೂ ಪ್ರಾಶಸ್ತ್ಯ ನೀಡಿದ್ದರು ಎನ್ನುವ ಅಂಶ ತಿಳಿದುಬರುತ್ತದೆ. ಹುಂಚದಲ್ಲಿರುವ ಕಮಟೇಶ್ವರ ದೇವಾಲಯದ ಬಾಗಿಲಿನ ಮೇಲ್ಭಾಗದಲ್ಲಿ ಶಾಸನವಿದ್ದು ಸುಮಾರು ಕ್ರಿ.ಶ. ೮೦೦ರ ಸುಮಾರಿಗೆ ಚಿಕ್ಕಯ್ಯ ಎಂಬುವನು ಈ ದೇವಾಲಯವನ್ನು ಮಾಡಿಸಿದನು ಎಂದಿದೆ.

ಈ ದೇವಾಲಯದ ಮುಂದೆ ನಿಲ್ಲಿಸಿರುವ ಸುಮಾರು ಕ್ರಿ.ಶ. ೧೨೮೭ರ ಇನ್ನೊಂದು ಶಾಸನದ ಪ್ರಕಾರ ಕುಮಾರಸೊಡ್ಡದೇವನು ಸಾಂತಳಿಗೆ ನಾಡನ್ನು ಏಕಚಕ್ರದಿಂದ ಆಳುತ್ತಿರಬೇಕಾದರೆ ಈ ಕಮಟೇಶ್ವರ ದೇವಾಲಯವನ್ನು ಪುನಃ ಪ್ರತಿಷ್ಠಾಪನೆಮಾಡಿ ಅದಕ್ಕೆ ದಾನ ನೀಡಿದನು.

ಚಿಕ್ಕಯ್ಯನು ಈ ಹಿಂದೆ ಕಟ್ಟಿಸಿದ ದೇವಾಲಯವು ಶಿಥಿಲವಾಗಿದ್ದು ಅದನ್ನು ಇವನು ಪುನಃ ಪ್ರತಿಷ್ಠಾಪಿಸಿರ ಬಹುದಾಗಿದೆ.[೨೬]

ಬಿಲ್ಲೇಶ್ವರ ದೇವಾಲಯದ ಆವರಣದಲ್ಲಿ ಕಂಡುಬರುವ ಕಾಳಭೈರವನ ಗುಡಿಯ ಗೋಡೆಯ ಮೇಲೆ ಕಂಡುಬರುವ ಶಾಸನದ ಪ್ರಕಾರ ಶ್ರೀ ತ್ರೈಲೋಕ್ಯಮಲ್ಲ ವೀರಸಾಂತರನು ಕಾಳಮುಖ ಶೈವರುಗಳಿಗೆ ಗೊರವರಪಳ್ಳಿ ಎಂಬ ಹಳ್ಳಿಯನ್ನು ಸರ್ವಸಾಮಾನ್ಯವಾಗಿ ದಾನ ಮಾಡಿದನು.[೨೭] ಶಿಕಾರಿಪುರ ಶಾಸನದಲ್ಲಿ ವೀರಸಾಂತರನುಕಣ್ಣೂರು ಅಗ್ರಹಾರರ ಬ್ರಾಹ್ಮಣರಿಗೂ ಹಾಗೂ ಅಲ್ಲಿಯ ಗೌತಮೇಶ್ವರ ದೇವಾಲಯಕ್ಕೂ, ಭೂದಾನ ನೀಡಿದ ವಿವರಣೆ ಇದೆ.[೨೮] ಇದರಿಂದಾಗಿ ಸಾಂತರರು ಸರ್ವಧರ್ಮ ಪರಿಪಾಲಕರಾಗಿದ್ದು, ಸರ್ವಧರ್ಮ ಸಹಿಷ್ಣುತೆ, ಸಮಾನತೆ ಹಾಗೂ ಸಮನ್ವಯದ ದೃಷ್ಟಿಯನ್ನು ಕಾಪಾಡಿಕೊಂಡು ಬಂದಿದ್ದರು. ಇದಕ್ಕೆ ಸಾಕ್ಷಿಯೆನ್ನುವಂತೆ ಹೊಂಬುಜದಲ್ಲಿ ಬಸದಿ, ಮಂದಿರಗಳನ್ನು ಇವತ್ತು ಕೂಡ ಕಾಣಬಹುದಾಗಿದೆ.

ಇನ್ನು ಚಿಕ್ಕಮಗಳೂರು ಮತ್ತು ಕೊಪ್ಪ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಆಳಿದ ಸೇನಾವಾರರು/ಸೇನರಿಗೆ ಸಂಬಂಧಿಸಿದ ಕೆಲವು ಶಾಸನಗಳು ಲಭ್ಯವಿದ್ದು ಇವುಗಳ ಆಧಾರದ ಮೇಲೆ ಇವರು ಶೈವಧರ್ಮಾನುಯಾಯಿಗಳಾಗಿದ್ದು ಅನೇಕ ಶಿವ ದೇವಾಲಯಗಳನ್ನು ನಿರ್ಮಿಸಿದ ಅಂಶಗಳನ್ನು ಕಾಣಬಹುದು. ಜೀಮೂತವಾಹನನೆಂಬ ಸೇನವಾರ ಸಾಮಂತನು ಜೀವಿತೇಶ್ವರ ದೇವಾಲಯಕ್ಕೋಸ್ಕರ ಪ್ರತ್ಯೇಕವಾದ ಒಂದು ನಿಧಿಯನ್ನು ಸ್ಥಾಪಿಸಿದನು. ಕೋಟೆವೂರು ಶಾಸನದಲ್ಲಿ ಮಾರಸಿಂಹನು ಆವಣೂರಿನ ದೇವರಿಗೂ ಪಂಚೇಶ್ವರ ದೇವರಿಗೂ ಕ್ರಿ.ಶ. ೧೦೫೮ರಲ್ಲಿ ಭೂದಾನ ಕೊಟ್ಟ ವಿವರಣೆ ಇದೆ. ಮಾರಸಿಂಹನು ಗೌತಮೇಶ್ವರ ಗ್ರಾಮವನ್ನು ಸಂದರ್ಶಿಸಿ, ಕೈಕೇಶ್ವರ ದೇವಾಲಯದ ಸ್ವಯಂ ಭೂದೇವರಿಗೆ ಕೊರಿದವಳ್ಳಿ ಗ್ರಾಮದಲ್ಲಿ ಭೂದಾನ ಮಾಡಿದನು ಎಂದಿದೆ.[೨೯] ೧೧ನೇ ಶತಮಾನದ ಇನ್ನೊಂದು ಶಾಸನವು ಇವನು ತನ್ನ ರಾಜ್ಯದ ಚಿತ್ತವಳ್ಳಿ, ಮಳ್ತವೂರು, ಚಿಕ್ಕವಿಟ್ಟ ಮುಂತಾದ ಅನೇಕ ಸ್ಥಳಗಳಲ್ಲಿ ದೇವಾಲಯ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದನೆಂದು ತಿಳಿಸುತ್ತದೆ. ಚಿಕ್ಕಮಗಳೂರಿನ ಕಣತಿ ಶಾಸನದಲ್ಲಿ ಗುಂಡಕಂದರ್ಪನು ಈಶ್ವರನಿಗಾಗಿ ದೇವಾಲಯವನ್ನು ನಿರ್ಮಿಸಿದನು ಎಂಬ ಉಲ್ಲೇಖವಿದೆ.[೩೦]

ಕಳಸ-ಕಾರ್ಕಳದ ಪ್ರಭುಗಳು ಸುಮಾರು ೧೨ನೆಯ ಶತಮಾನದಿಂದ ೧೬ನೆಯ ಶತಮಾನದವರೆಗೂ ಮಲೆನಾಡು ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದು ಬಹುಕಾಲ ವಿಜಯನಗರ ಅರಸರ ಸಾಮಂತರಾಗಿ ಆಳ್ವಿಕೆ ನಡೆಸಿದವರು. ಇವರ ಕಾಲದಲ್ಲಿ ಜೈನಧರ್ಮ ಮತ್ತು ಶೈವಧರ್ಮಗಳೆರಡು ರಾಜಾಶ್ರಯವನ್ನು ಪಡೆದುಕೊಂಡಿದ್ದು, ಬಹುಪಾಲು ಜನರು ಈ ಧರ್ಮಗಳ ಅನುಯಾಯಿಗಳಾಗಿದ್ದರು. ಕಳಸದ ಅರಸರ ಪ್ರಧಾನ ದೇವತೆ ಕಳಸೇಶ್ವರ. ಈ ದೇವರಿಗೆ ಉದಾರವಾಗಿ ದಾನಧರ್ಮಗಳನ್ನು ನೀಡಿರುವುದನ್ನು ಶಾಸನಗಳು ಉಲ್ಲೇಖಿಸಿವೆ(ವಿವರ ಎರಡನೇ ಅಧ್ಯಾಯದಲ್ಲಿದೆ).

ವಿಜಯನಗರದ ಸಾಮಂತರಾಗಿ ಆಳ್ವಿಕೆ ನಡೆಸಿದ ಆರಗದ ಅರಸರು ಶೈವ ಧರ್ಮಕ್ಕೆ ಸಾಕಷ್ಟು ಪ್ರೋತ್ಸಾಹ ಕೊಟ್ಟಿದ್ದರು ಎಂಬ ಅಂಶ ಅವರ ಶಾಸನಗಳಿಂದ ವ್ಯಕ್ತವಾಗುತ್ತದೆ. ಇವರ ಕಾಲದಲ್ಲಿ ಶಾಸನಗಳು ಶೈವಶ್ಲೋಕದಿಂದ ಆರಂಭವಾಗಿ ಶೈವ ಶಾಪಾಶಯದಿಂದ ಮುಕ್ತಾಯಗೊಳ್ಳುತ್ತವೆ. ಮಧ್ಯಮಲೆನಾಡಿನ ಭಾಗದಲ್ಲಿ ಶೈವಧರ್ಮವು ಪ್ರಧಾನವಾಗಿದ್ದಿತು ಎಂಬುದಕ್ಕೆ ಆ ಕಾಲದ ದೇವಾಲಯಗಳು, ಮಠಗಳು, ಗುಡಿಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಸಂಗಮವಂಶದ ಅರಸರು ಶೈವರು, ಶೃಂಗೇರಿ ಮಹಾಪೀಠಕ್ಕೆ ಅವರು ನೀಡಿದ ಆಶ್ರಯ ಅಪಾರ. ಆರಗದಲ್ಲಿ ಕಲಾನಾಥೇಶ್ವರ (ಕಲಿನಾಥ) ಬನಶಂಕರಿ, ಸದಾಶಿವ, ಕಪ್ಪಗೋಡು ಶಿವಾಲಯ, ಅಖಂಡೇಶ್ವರ ದೇವಾಲಯ ಇನ್ನು ಮುಂತಾದ ಶೈವ ದೇವಾಲಯಗಳನ್ನು ಆರಗ ಮತ್ತು ಅವರ ಆಳ್ವಿಕೆಗೆ ಒಳಪಟ್ಟ ಪ್ರಾಂತ್ಯಗಳಲ್ಲಿ ನಿರ್ಮಾಣ ಮಾಡಿದ್ದಾರೆ.

ಇಲ್ಲಿನ ಶಾಸನಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದಾಗ ಈ ಭಾಗದಲ್ಲಿ ಕಾಳಮುಖ ಪಂಥದ ಯಾವುದೇ ಕುರುಹುಗಳು ದೊರೆಯುವುದಿಲ್ಲ. ಕಿಗ್ಗ ಶಾಸನದಲ್ಲಿ 'ಕಮ್ಮಾರರ ಪಾಶುಪಥ ಮರ್ಯಾದೆಯ' ಎಂಬ ಪದದ ಉಲ್ಲೇಖವನ್ನು ಗಮನಿಸಿದಾಗ ಪಾಶುಪಥಪಂಥ ಅಸ್ತಿತ್ವದಲ್ಲಿತ್ತೇ? ಎಂಬ ಪ್ರಶ್ನೆ ಎದುರಾಗುತ್ತದೆ. ಈ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಕೆಲವರ ಪ್ರಕಾರ ಪಶುಪಥ–ಶಿವ ಎಂಬ ಅರ್ಥದಲ್ಲಿ ವಾದವನ್ನು ಮಂಡಿಸಿದರೆ ಶಾಸನದಲ್ಲಿನ ಈ ಪದವನ್ನೇ ಆಧಾರವಾಗಿರಿಸಿಕೊಂಡು ಪಾಶುಪಥ ಪಂಥವನ್ನು ಸಮರ್ಥಿಸುವುದರಲ್ಲಿ ಯಾವುದೇ ಹುರುಳಿಲ್ಲ ಎನ್ನುವವರಿದ್ದಾರೆ. ಮೈಸೂರು ಗೆಜೆಟಿಯರ್‌ನಲ್ಲಿ ಪಾಶುಪಥ ಪಂಥದ ಉಲ್ಲೇಖವಿದೆ. ಈ ವಾದ ಕೇವಲ ಮತಿಯ ಪ್ರೇಮವೇ ಹೊರತು ಬೇರೇನೂ ಅಲ್ಲ ಎಂಬುದು ಕೆಲವರ ಅಭಿಪ್ರಾಯ. ಹನ್ನೆರಡನೇ ಶತಮಾನದ ನಂತರ ಶೈವಧರ್ಮ ಪ್ರಬಲವಾಗಿ ಪ್ರಕಾಶಿಸುವುದರಿಂದ ಇಲ್ಲಿನ ಬಹಳಷ್ಟು ವೀರಗಲ್ಲುಗಳಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಕಾಳಮುಖ ಯತಿಗಳು ಕೌಪೀನ ಧರಿಸಿದ್ದು, ಉದ್ದವಾದ ಜಟೆಯನ್ನು ಹೊಂದಿರುವುದನ್ನು ಗಮನಿಸಿದಾಗ ಕಾಳಮುಖರು ನಂತರದ ಕಾಲದಲ್ಲಿ ಪ್ರಾಬಲ್ಯಕ್ಕೆ ಬಂದಿರಬಹುದು ಎಂದು ಊಹಿಸಬಹುದಾಗಿದೆ.

೩.೧.೪. ವೈಷ್ಣವ ಧರ್ಮ

ಭಾರತದ ಬಹಳ ಜನಪ್ರಿಯ ಮತ್ತು ಶಕ್ತಿಯುತ ದೇವರಲ್ಲಿ ಒಬ್ಬನಾಗಿ 'ತ್ರಿಮೂರ್ತಿ'ಗಳಲ್ಲಿ ಒಬ್ಬನಾಗಿ ಒಂದು ಸ್ಥಾನವನ್ನು ಪಡೆದಿರುವ ವಿಷ್ಣು ವೈಷ್ಣವರ ಆರಾಧ್ಯದೈವ. ಈ ದೇಶದ ಎಲ್ಲ ದೇವ ದೇವತೆಗಳ ವಿಕಾಸದಂತೆ ವಿಷ್ಣುವಿನ ಕ್ರಮವಿಕಾಸವು ಕುತೂಹಲಕರವಾಗಿದೆ. ವೈಷ್ಣವ ಧರ್ಮದ ಮೂಲಗಳನ್ನು ವೇದಗಳಲ್ಲಿ ಗುರುತಿಸುತ್ತಾರೆ. ವೈಷ್ಣವ ಧರ್ಮ ಬೆಳೆಯುತ್ತಾ ಭಾಗವತ ಧರ್ಮದ ಅವತಾರಗಳ ಹಿನ್ನೆಲೆಯಲ್ಲಿ ಒಳಗೊಂಡು ರಾಮಕೃಷ್ಣ ಮತ್ತು ಬುದ್ಧರನ್ನೂ ತನ್ನಲ್ಲಿ ಅಳವಡಿಸಿ ಕೊಂಡಿತು.

ವೇದದಲ್ಲಿ ವಿಷ್ಣುವು ಉಪೇಂದ್ರನು, ಇಂದ್ರನು, ಸಕನು, ಆದಿತ್ಯರಲ್ಲೊಬ್ಬರಾದ ಭಗವಂತನಿಗೆ ಸಂಬಂಧ ಹೊಂದಿರುವವನು. ಬ್ರಾಹ್ಮಣಕಗಳಲ್ಲಿ ವಿಷ್ಣುವು ಆದಿತ್ಯ ಮತ್ತು ಯಜ್ಞ ದೇವತೆ.

ಅರಣ್ಯಕ ಮತ್ತು ಕೆಲವು ಉಪನಿಷತ್ತುಗಳಲ್ಲಿ ಪಾಂಚರಾತ್ರ ಮತವನ್ನು ಪ್ರಚಾರ ಮಾಡಿದ ನಾರಾಯಣ ಗೋತ್ರದವನಾದ ನಾರಾಯಣ ಎಂದೂ ಹೇಳುವರು. ಇತರರು ಪಾಂಚರಾತ್ರ ಮತವೇ ಬಾದರಾಯಣರಿಗೆ ಸಮ್ಮತವೆಂದು ಹೇಳಲಾಗಿದೆ.

ವೈಷ್ಣವ ಮತಾನುಯಾಯಿಗಳಲ್ಲಿ ಸ್ಮಾರ್ಥ ಭಾಗವತರು, ಅದ್ವೈತಿಗಳು, ಶ್ರೀವೈಷ್ಣವರು, ವಿಶಿಷ್ಟಾದ್ವೈತಿಗಳು, ಸದ್ವೈಷ್ಣವರು, ದ್ವೈತಿಗಳು, ನಿಂಬರ್ಕ ಮತದವರು ವಲ್ಲಭಾಚಾರ್ಯ ಮತದವರು ಎಂದು ಹೇಳಲಾಗುತ್ತದೆ.

ಕರ್ನಾಟಕದಲ್ಲಿ ವೈಷ್ಣವಧರ್ಮ ಕದಂಬರ ಕಾಲದಲ್ಲಿಯೇ ಪ್ರಚಲಿತವಾಗಿದ್ದು ಬಾದಾಮಿ ಚಾಲುಕ್ಯರ ಕಾಲದಲ್ಲಿ ಪ್ರಬಲವಾಗಿ ಬೆಳೆಯಿತು. ಈ ಹಿನ್ನಲೆಯಲ್ಲಿ ಮಂಗಳೇಶ ಹಾಗೂ ೨ನೆಯ ಪುಲಿಕೇಶಿಯನ್ನು ಪರಮಭಾಗವತನೆಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಇವನು ಬಾದಾಮಿಯಲ್ಲಿ ವೈಷ್ಣವ ಗುಹಾಲಯವನ್ನು ನಿರ್ಮಿಸಿದನು. ಈ ಗುಹಾಲಯದಲ್ಲಿ ವರಾಹ, ನರಸಿಂಹ, ತ್ರಿವಿಕ್ರಮ ಮುಂತಾದ ನಾರಾಯಣನ ಅವತಾರಗಳನ್ನು ಕೆತ್ತಲಾಗಿದೆ. ಚಾಲುಕ್ಯರ ಕುಲದೈವ ವಿಷ್ಣು ಹಾಗೂ ರಾಜಮುದ್ರೆ ವರಾಹವಾಗಿದ್ದಿತು. ಈ ಹಿನ್ನೆಲೆಯಲ್ಲಿ ಕರ್ನಾಟಕಕ್ಕೆ ಆಗಮಿಸಿದ ಮತಚಾರರಿಗಿಂತ ವೈಷ್ಣವ ಧರ್ಮ ಪ್ರಬಲವಾಗಿದ್ದಿತು. ನಂತರ ಆಳ್ವಾರರು, ಶ್ರೀರಾಮಾನುಜಾಚಾರ್ಯರು, ಮಧ್ವಾಚಾರ್ಯರಿಂದ ಈ ಧರ್ಮ ಸಾಕಷ್ಟು ಪ್ರಚಾರವನ್ನು ಪಡೆದುಕೊಂಡಿತು.

ಸುಮಾರು ಕ್ರಿ.ಶ. ೬ನೇ ಶತಮಾನದಿಂದ ತಮಿಳುದೇಶದ ಆಳ್ವಾರರೆಂಬ ವಿಷ್ಣುಭಕ್ತರು ಭಾಗವತಮತವನ್ನು ಪ್ರಚಾರ ಮಾಡಲು ಆರಂಭಿಸಿದರು. ಒಂಬತ್ತನೇ ಶತಮಾನದಲ್ಲಿ ನೆಮ್ಮಾಳ್ವಾರ್ ಎನ್ನುವರು ಹಾಗೂ ಹನ್ನೆರಡನೇ ಶತಮಾನದಲ್ಲಿ ರಾಮಾನುಜಾಚಾರ್ಯರು ಈ ಧರ್ಮದ ಪ್ರತಿಪಾದಕರಾದರು. ಚೋಳರಾಜನಾದ ಕ್ರಿಮಿಕಂಠ ಎಂಬುವವನು ಈ ವೈಷ್ಣವರನ್ನು ಹಿಂಸೆ ಮಾಡಿದನೆಂದು ಆದುದರಿಂದ ಶ್ರೀರಾಮಾನುಜಾಚಾರ್ಯರು ಜೈನನಾದ ಬಿಟ್ಟಿದೇವನೆಂಬುವನ ರಾಜ್ಯಕ್ಕೆ ಬಂದು ಪರವಾದಿಗಳನ್ನು ಗೆದ್ದು, ರಾಜನನ್ನು ಶ್ರೀವೈಷ್ಣವನನ್ನಾಗಿ ಮಾಡಿ, ಉತ್ತರಪ್ರದೇಶ ದಿಂದ ಅಪ್ರಮೇಯ ವಿಗ್ರಹವನ್ನು ತಂದು ಮೇಲುಕೋಟೆಯಲ್ಲಿ ಪ್ರತಿಷ್ಠಾಪನೆ ಮಾಡಿದರೆಂದು, ಸುಮಾರು ೨೦ ವರ್ಷ ಮೈಸೂರು ಪ್ರಾಂತ್ಯದಲ್ಲಿದ್ದು ನಂತರ ಶ್ರೀರಂಗಕ್ಕೆ ಹಿಂತಿರುಗಿ ತಮ್ಮ ೧೨೦ನೆಯ ವಯಸ್ಸಿನಲ್ಲಿ ಪರಮಪದವಿಯನ್ನು ಪಡೆದರೆಂದು ಹೇಳಲಾಗುವುದು.

ಶ್ರೀರಾಮಾನುಜರ ನಂತರ ಹದಿನಾಲ್ಕನೆಯ ಶತಮಾನದಲ್ಲಿ ಭಕ್ತಿಪ್ರಪತ್ತಿ ವೇದಪ್ರಬಂಧಗಳಲ್ಲಿ ಪ್ರಾದಾನ್ಯಗಳಿಗನುಸಾರವಾಗಿ ಉತ್ತರ-ದಕ್ಷಿಣ ಎಂಬ ಪಂಗಡಗಳಾದವು. ವಿಜಯನಗರದ ಸಾಳುವ, ತುಳುವ, ಅರೆವೀಡು ಅರಸರು ಶ್ರೀವೈಷ್ಣವ ಮತಾಭಿಮಾನಿಗಳಾಗಿದ್ದರು. ಹಾಗೆಯೇ ಅವರ ಬಂಧುಗಳಾಗಿ ಆರಗದಲ್ಲಿ ಆಳುತ್ತಿದ್ದ ಒಡೆಯರು ವೈಷ್ಣವ ಧರ್ಮವನ್ನು ಇಲ್ಲಿ ಬೆಳಗಿದರು.

ಈ ಭಾಗದಲ್ಲಿ ವೈಷ್ಣವಧರ್ಮ ಪಸರಿಸಲು ಪ್ರಮುಖ ಕಾರಣಕರ್ತರೆಂದರೆ ಮಧ್ವಾಚಾರ್ಯರು. ಕ್ರಿ.ಶ. ೧೧೯೭ರಲ್ಲಿ ಉಡುಪಿ ಸಮೀಪ ಪಾಜಕಾದಲ್ಲಿ ಜನಿಸಿದ ಇವರು ಬಾಲ್ಯದಲ್ಲಿಯೆ

ಮಹಾತಜ್ಞೆ ಎಂದು ಪ್ರಕಟಿಸಿ ಸನ್ಯಾಸವನ್ನು ಸ್ವೀಕರಿಸಿ ಅನಂತತೀರ್ಥ, ಪೂರ್ಣಪ್ರಜ್ಞಾ, ಮಧ್ವಾಚಾರ್ಯ ಎಂಬ ಹೆಸರಿನಿಂದ ಪ್ರಖ್ಯಾತರಾದರು. ತಾವು ವಾಯುದೇವರ ಮೂರನೇ ಅವತಾರವೆಂದು ತಮ್ಮ ಅವತಾರವನ್ನು ಋಗ್ವೇದಲ್ಲಿಯೇ ರಚಿಸಿದೆ ಎಂದು ಮೋಹಕಶಾಸ್ತ್ರ ಪ್ರವರ್ತಕರ ನಿಗ್ರಹಕ್ಕಾಗಿಯೂ, ಸದ್ವೈಷ್ಣವರನ್ನು ಉದ್ಧಾರ ಮಾಡುವುದಕ್ಕಾಗಿಯೂ ತಮಗೆ ಸಾಕ್ಷಾತ್ ಬಾದರಾಯಣರೇ ಗುರುಗಳೆಂದು ಹೇಳಿಕೊಂಡಿರುವರು. ಇವರ ಶಿಷ್ಯರಾದ ಪದ್ಮನಾಭ ನರಹರಿ, ಮಾಧವ ಮತ್ತು ಅಕ್ಷೋಭ್ಯರೆಂಬುವವರು ಹಲವಾರು ವೈಷ್ಣವ ಮಠಗಳನ್ನು ಮಲೆನಾಡಿನಲ್ಲಿ ಪ್ರತಿಷ್ಠಾಪಿಸಿ ವೈಷ್ಣವ ಮತವನ್ನು ಪ್ರಚುರಪಡಿಸಿದರು. ಅಕ್ಷೋಭ್ಯ ತೀರ್ಥರು ತೀರ್ಥಹಳ್ಳಿಯ ಬಾಳಗಾರಿನಲ್ಲಿ ವೈಷ್ಣವ ಮಠವನ್ನು, ಮಧ್ವಾಚಾರ್ಯರ ಅಪ್ಪಣೆಯಂತೆ ಶ್ರೀ ಸತ್ಯತೀರ್ಥರು ಮುನಿವೃಂದ ಮಠವನ್ನು, ಶ್ರೀ ಕೃಷ್ಣಾನಂದರು ತುಂಗಾ ನದಿಯ ದಡದ ಮೇಲೆ ಮುಳುಬಾಗಿಲು ಮಠವನ್ನು ಸ್ಥಾಪಿಸಿ ವೈಷ್ಣವ ಮತದ ಪ್ರಚಾರ ಕೈಗೊಂಡರು.

ವಿಜಯನಗರದ ಬಂಧುಗಳಾದ ಆರಗದ ಒಡೆಯರು ವೈಷ್ಣವಮತದ ಪ್ರಬಲ ಆರಾಧಕರಾಗಿದ್ದರು ಎನ್ನುವುದಕ್ಕೆ ಅನೇಕ ವೈಷ್ಣವ ದೇವಾಲಯಗಳನ್ನು ನಿರ್ಮಿಸಿರುವುದೇ ಸಾಕ್ಷಿ ಎನಿಸುತ್ತದೆ. ವೈಷ್ಣವ ಧರ್ಮದ ಆಚರಣೆಗಳು ಇಂದಿಗೂ ಈ ಭಾಗದಲ್ಲಿ ಪ್ರಬಲ ಸಮುದಾಯವಾದ ಒಕ್ಕಲಿಗರಲ್ಲಿ ಮುಂದುವರಿದುಕೊಂಡು ಬಂದಿದೆ. ಜನಾರ್ಧನ, ಗೋಪಾಲಕೃಷ್ಣ, ಶ್ರೀಕೃಷ್ಣ ದೇವಾಲಯಗಳು ಪ್ರಧಾನ ಎನಿಸಿಕೊಂಡು ಭಕ್ತರ ಕೇಂದ್ರಗಳಾಗಿವೆ. ತಿರುಪತಿಯ ತಿಮ್ಮಪ್ಪ ಈ ಸಮುದಾಯದ ಕುಲದೈವವಾಗಿ ಇಂದಿಗೂ ಮುಂದುವರಿದುಕೊಂಡು ಬಂದಿರುವುದು ವೈಷ್ಣವಮತದ ಪ್ರಾಧಾನ್ಯತೆಯನ್ನು ವ್ಯಕ್ತಪಡಿಸುವುದು.

ಒಟ್ಟಾರೆಯಾಗಿ ಮಧ್ಯಮಲೆನಾಡಿನ ಪ್ರಾಂತ್ಯಗಳಲ್ಲಿ ಶೈವ ಮತ್ತು ವೈಷ್ಣವ ಧರ್ಮಗಳು ಹಾಗೂ ಮಂದಿರಗಳು ಒಟ್ಟಾಗಿ ಕಲೆತು ಯಾವುದೇ ರೀತಿಯ ಧಾರ್ಮಿಕ ಕ್ಷೋಭೆಗೆ ಅವಕಾಶ ನೀಡದೆ ಇಂದಿಗೂ ಅನ್ಯೋನ್ಯವಾಗಿ ಬಾಳಿ ಬೆಳೆದುಬಂದಿವೆ ಎನ್ನುವ ವಿಚಾರವನ್ನು ಅರಿಯಬಹುದು.

೩.೧.೫. ವೀರಶೈವ ಧರ್ಮ

ಮಧ್ಯಮಲೆನಾಡಿನ ಪ್ರದೇಶಗಳ ಕೆಲವು ಭಾಗಗಳನ್ನು ಆಳಿದ ದಾನಿವಾಸ ಒಡೆಯರು ಹಾಗೂ ಈ ಭಾಗದಲ್ಲಿ ದೀರ್ಘಕಾಲ ಹಾಗೂ ಸಂಪೂರ್ಣವಾಗಿ ಆಳಿದ ಕೆಳದಿ ಅರಸರ ಕಾಲದಲ್ಲಿ ವೀರಶೈವ ಧರ್ಮ ಉನ್ನತ ಶಿಖರವನ್ನು ತಲುಪಿದ್ದು ವೀರಶೈವ ಮಠಗಳು, ದೇವಾಲಯಗಳು ನಿರ್ಮಾಣವಾದವು.

ಕ್ರಿ.ಶ. ೧೬ನೆಯ ಶತಮಾನದ ಮಧ್ಯಭಾಗದಲ್ಲಿ ದಾನಿವಾಸವು ಒಂದು ಚಿಕ್ಕ ಮನೆತನದ ಆಡಳಿತ ಕೇಂದ್ರವಾಗಿದ್ದು ಹೊಯ್ಸಳ, ವಿಜಯನಗರ ಹಾಗೂ ಕೆಳದಿ ಅರಸರ ಅಧೀನದಲ್ಲಿ ಆಡಳಿತ ನಡೆಸಿದ ಘಟಕವಾಗಿ ಕಂಡುಬರುತ್ತದೆ. ಈ ಮನೆತನದ ಇತಿಹಾಸ ರಚಿಸಲು

ಶಾಸನಗಳ ಕೊರತೆಯಿದೆ. ಪ್ರಸ್ತುತ ದಾನಿವಾಸ ಗ್ರಾಮವು ಈಗ ಭದ್ರಾ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಿಹೋಗಿದ್ದು ಅವರ ಉಗಮ ಅಸ್ಪಷ್ಟವಾಗಿದೆ.

ದಾನಿವಾಸ ಪ್ರಭುಗಳು ವೀರಶೈವಧರ್ಮದ ಅನುಯಾಯಿಗಳಾಗಿದ್ದರು. ಇವರ ಕಾಲದಲ್ಲಿ ಬಾಳೇಹಳ್ಳಿ ಮಠ ಶ್ರೀಮಂತ ಮಠವಾಗಿತ್ತೆಂದು ಶಾಸನಗಳಲ್ಲಿ ಪ್ರಸ್ತಾಪವಿದೆ.[೩೧] ಇವರು ತಮ್ಮ ರಾಜಧಾನಿಯಾದ ದಾನಿವಾಸದಲ್ಲಿ ದೇವಾಲಯ ನಿರ್ಮಿಸಿರುವುದು ಶಾಸನದಲ್ಲಿ ಉಲ್ಲೇಖವಾಗಿದೆ. ದಾನಿವಾಸದಲಿಂಗಣ ನಾಯಕನು ಕ್ರಿ.ಶ. ೧೫೫೩ರಲ್ಲಿ ದಾನಿವಾಸ ಪಟ್ಟಣದಲ್ಲಿ ವಿರೂಪಾಕ್ಷ ಲಿಂಗ ಪ್ರತಿಷ್ಠೆಯನ್ನು ಮಾಡಿಸಿ ಬ್ರಾಹ್ಮಣರ ಸತ್ರಕ್ಕೆ ಗುಳ್ಳದ ಮಾನಿಯ ಗ್ರಾಮದೊಳಗೆ ಹಾನಂಬಿಯಿಂದ ಕಡುವಣ ೨೫ ಖಂಡುಗದ ಭೂಮಿಯನ್ನು ಬಿಟ್ಟನು ಮತ್ತು ಅಲ್ಲಿಯೇ ಬಸವೇಶ್ವರ ದೇವರ ಗುಡಿಯನ್ನು ಕೂಡ ಕಟ್ಟಿಸಿದನು.[೩೨]

ವೀರಶೈವರಾಗಿದ್ದ ಇವರು ಎಡೆಯೂರು ಸಿದ್ಧಲಿಂಗೇಶ್ವರರ ಪರಮಭಕ್ತರಾಗಿದ್ದು ಅಲ್ಲಿನ ಸ್ವಾಮಿಯವರಿಗೆ ಚನ್ನವೀರಪ್ಪನು ಕಲ್ಲಿನ ಮಠವನ್ನು ಕಟ್ಟಿಸಿ ತನ್ನ ಸೇವೆಯನ್ನು ಚಿರಸ್ಥಾಯಿಗೊಳಿಸಿದ್ದಾನೆ.[೩೩]

ಮಧ್ಯಮಲೆನಾಡಿನ ಪ್ರದೇಶಗಳಲ್ಲಿ ಕೆಳದಿ ಅರಸರ ಶಾಸನಗಳು ಯಥೇಚ್ಛವಾಗಿ ಲಭಿಸಿದ್ದು, ಶಿಲಾಶಾಸನಗಳಿಗಿಂತ ತಾಮ್ರಶಾಸನಗಳೇ ಅಧಿಕಸಂಖ್ಯೆಯಲ್ಲಿವೆ. ಶಾಸನಗಳಲ್ಲಿ ರಾಜಕೀಯ ಹಾಗೂ ಆರ್ಥಿಕ ಅಂಶಗಳು ಅಡಗಿದ್ದು, ಭೂದಾನದ ವಿವರಣೆಯ ಜೊತೆಗೆ ಕಂದಾಯ, ದಾನ-ದತ್ತಿಗಳನ್ನು ನೀಡಿದ ಅಂಶಗಳೇ ಪ್ರಧಾನ ಎನ್ನಬಹುದು.

ಕವಲೇದುರ್ಗ (ಭುವನಗಿರಿದುರ್ಗ) ಕೆಳದಿ ರಾಣಿ ಚೆನ್ನಮ್ಮನ ರಾಜಧಾನಿಯಾಗಿದ್ದಿತು. ಕವಲೇದುರ್ಗದ ಮಹಾಮಹತ್ತಿನ ಮಠದಲ್ಲಿ ೭೨ ತಾಮ್ರಶಾಸನಗಳು ಪ್ರಕಟವಾಗಿದ್ದು ವಿವಿಧ ಭಾಗಗಳಲ್ಲಿ ನಿರ್ಮಾಣವಾಗಿದ್ದ ಮಹಾಮಹತ್ತಿನ ಮಠದ ನಿರ್ಮಾಣಕ್ಕೆ ನೀಡಿದ ದಾನ ದತ್ತಿಗಳನ್ನು ಮತ್ತು ಭೂದಾನ ಹಾಗೂ ಕಂದಾಯದ ವಿಷಯಗಳನ್ನು ಅವು ಒಳಗೊಂಡಿವೆ. ಇನ್ನಿತರ ಕಡೆಗಳಲ್ಲಿ ತಾಮ್ರಶಾಸನ ಮತ್ತು ಶಿಲಾಶಾಸನಗಳು ಲಭ್ಯವಿದ್ದು ವೀರಶೈವ ಮಠಕ್ಕೆ ನೀಡುವ ದಾನ-ಧರ್ಮಗಳನ್ನು ಪ್ರಸ್ತಾಪಿಸುತ್ತವೆ.

ಶಾಸನಗಳ ಆರಂಭದಲ್ಲಿ ಶೈವ ಮಂಗಳಗೀತೆಯಾದ ನಮಸ್ತುಂಗ...ಎಂಬ ಶ್ಲೋಕದ ನಂತರ ಶ್ರೀಮತ್ಸಜನಶುಧಶಿವಾಚಾರ ಸಂಪಾನದ್ಯಾಮಾಪೃಥ್ವೀಮಹಾಮಹತ್ತಿನವಳಗಾದ....ಯಡವ ಮುರಾರಿ ಕೋಟೆ ಕೋಳಾಹಳ ವಿಶುಧ ವೈದಿಕಾ ದ್ವೈತ್ತ ಸಿದ್ಧಾಂತ ಪ್ರತಿಷ್ಠಾಪಕ....ವಿಭು ಎಂಬ ಮಂಗಳಾಚರಣೆಯನ್ನು ಎಲ್ಲಾ ಕೆಳದಿ ಅರಸರ ಶಾಸನಗಳಲ್ಲಿ ಕಾಣಬಹುದು.

ಇದರಿಂದಾಗಿ ಕೆಳದಿ ಅರಸರು ಶಿವನ ಆರಾಧಕರು ದ್ವೈತ ಸಿದ್ಧಾಂತದ ಪ್ರತಿಪಾದಕರಾಗಿದ್ದರೂ, ಅಸಂಖ್ಯಾತ ಮಹಾಮಹಂತಿನ ಮಠಗಳನ್ನು ಮಧ್ಯಮಲೆನಾಡಿನಲ್ಲಿ ಪ್ರಾರಂಭಿಸಿ ಆ ಮೂಲಕ ಇಲ್ಲಿನ ರಾಜಕೀಯ ಪ್ರಾಬಲ್ಯವನ್ನು, ಆರ್ಥಿಕ ಪ್ರಗತಿಯನ್ನು ಮಠಗಳ ಸ್ಥಾಪನೆಗಳ ಮೂಲಕ

ಧಾರ್ಮಿಕವಾಗಿ ಜನರನ್ನು ನಿರ್ಬಂಧಿಸುವ ಕಾರ್ಯವನ್ನು ಕೆಳದಿ ನಾಯಕರು ಇಲ್ಲಿ ಕಂಡುಕೊಂಡರು.

೩.೧.೬. ಇಸ್ಲಾಂ ಧರ್ಮ

ಭಾರತದಲ್ಲಿ ಕ್ರಿ.ಶ. ೮ನೇ ಶತಮಾನದಲ್ಲಿ ಅರಬ್ಬರ ಆಗಮನದಿಂದಾಗಿ ಇಸ್ಲಾಂ ಧರ್ಮ ಈ ನಾಡಿನಲ್ಲಿ ಪಾದಾರ್ಪಣೆ ಮಾಡಿತು. ಮಸೀದಿಗಳು ರೂಪುಗೊಂಡು ಈ ಧರ್ಮ ಪ್ರಧಾನಧರ್ಮವಾಗಿ ಬೆಳೆದು ಬಂದಿತು. ಕೆಲವೊಂದು ಸಂದರ್ಭದಲ್ಲಿ ಧಾರ್ಮಿಕ ಅಶಾಂತಿ ಉಂಟಾದರೂ ಧಾರ್ಮಿಕ ಸಾಮರಸ್ಯದಿಂದ ಬದುಕಿದ ನಿದರ್ಶನಗಳಿವೆ.

ವಿಜಯನಗರದ ಅರಸ ಎರಡನೇ ದೇವರಾಯನು ಮುಸ್ಲಿಮರನ್ನು ತನ್ನ ಸೈನ್ಯಕ್ಕೆ ಸೇರಿಸಿಕೊಳ್ಳುವುದರ ಮೂಲಕ ರಾಜಧಾನಿಯಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಿತು. ಬಹಮನಿ ಮತ್ತು ವಿಜಯನಗರದ ನಡುವೆ ನಿರಂತರ ಯುದ್ಧಗಳು ನಡೆಯುತ್ತಿದ್ದರೂ ಈ ಸಾಮ್ರಾಜ್ಯದಲ್ಲಿದ್ದ ಮುಸ್ಲಿಮರು ನಿರಾತಂಕವಾಗಿ ನೆಮ್ಮದಿ ಜೀವನ ನಡೆಸುತ್ತಿದ್ದರು. ರಾಜಧಾನಿಯಲ್ಲಿ ಮುಸ್ಲಿಮರ ಬಡಾವಣೆ ಇರುವುದು ಶಾಸನಗಳಿಂದ ತಿಳಿದುಬರುತ್ತದೆ. ಹಂಪಿಯ ಒಂದು ಭಾಗವಾದ ಕಡ್ಡೀರಾಮಪುರದಲ್ಲಿ ಸುಂದರವಾದ ಮುಸ್ಲಿಮರ ಗೋರಿಗಳನ್ನು ಇಂದಿಗೂ ಕಾಣಬಹುದು.

ಕೆಳದಿ ಅರಸರು ಇಸ್ಲಾಂ ಧರ್ಮಕ್ಕೂ ರಕ್ಷಣೆ ಪೋಷಣೆಗಳನ್ನು ನೀಡಿದರು.ನಗರ ಮತ್ತು ಕವಲೇದುರ್ಗದಲ್ಲಿ ಮಸೀದಿ ಮತ್ತು ದರ್ಗಾಗಳನ್ನು ಕಟ್ಟಿಸಿಕೊಟ್ಟರು. ಕೆಳದಿ ಅರಸ ವೆಂಕಟಪ್ಪನಾಯಕನು ಕವಲೆದುರ್ಗದಲ್ಲಿ ಮುಲ್ಲ್ ಹಾಜಿತ ಮೂಲಕ ಮಸೀದಿ ನಿರ್ಮಾಣಕ್ಕೆ ನೀಡಿದ ಭೂದಾನದ ವಿವರಣೆ ಇದೆ.[೩೪] ಆದರೂ ತೀರ್ಥಹಳ್ಳಿಯ ಎರಡು ಶಾಸನಗಳಲ್ಲಿ ಮಹಮದೀಯರ ದಾಳಿಗಳನ್ನು ಉಲ್ಲೇಖಿಸಿದ 'ಅವಾಂತ್ರ' ಎಂಬ ಶಬ್ದದ[೩೫] ಬಳಕೆ ಇದೆ. ಕವಲೇದುರ್ಗ ಶಾಸನದಲ್ಲಿ 'ಅವರು ತುರುಕರಿಗೆ ಪಗುದಿ ತೆರುಥಾರ' ಎಂಬ ಪದವಿದ್ದು ದೇಶದ ಕೆಲವು ಭಾಗಗಳಲ್ಲಿ ತುರುಕರಿಗೆ ತೆರಿಗೆ ನೀಡುವ ಅಂಶವನ್ನು ಉಲ್ಲೇಖಿಸುತ್ತದೆ.[೩೬] ಇದರಿಂದಾಗಿ ಮುಸ್ಲಿಮರ ಈ ಭಾಗದಲ್ಲಿ ಸಾಕಷ್ಟು ಪ್ರಭಾವಶಾಲಿಗಳಾಗಿದ್ದು ತೆರಿಗೆ ವಸೂಲು ಮಾಡುವಷ್ಟು ಬಲಿಷ್ಟರಾಗಿದ್ದರು ಎನ್ನುವುದನ್ನು ಮನಗಾಣಬಹುದು.

೩.೨. ಶಾಸನಗಳಲ್ಲಿ ಮಠ ಮತ್ತು ದೇವಸ್ಥಾನ

ಕ್ರಿಸ್ತಪೂರ್ವ ಕಾಲದಲ್ಲಿ ದೇವಾಲಯಗಳು ರಚನೆಗೊಂಡವು ಎಂದು ಹೇಳಲು ಸಾಧ್ಯವಿದ್ದರೂ ಅವುಗಳ ಸ್ವರೂಪ ವ್ಯಕ್ತವಾಗುವುದಿಲ್ಲ. ಹರಪ್ಪ ಮತ್ತು ಮೆಹೆಂಜೋದಾರೋ ಉತ್ಖನನಗಳಲ್ಲಿ ಸಾರ್ವತ್ರಿಕ ಕಟ್ಟಡಗಳನ್ನು ಗುರುತಿಸಬಹುದೆ ಹೊರತು ದೇವಾಲಯಗಳೆಂದು ಗುರತಿಸಲಾಗುವ ರಚನೆಗಳಲ್ಲಿ ಕ್ರಿಸ್ತ ಪೂರ್ವ ಎರಡನೆಯ ಶತಮಾನದಲ್ಲಿ ಹೆಲಿಯೋಡರಸ್ ಸ್ಥಾಪಿಸಿದ ಗರುಡ ಸ್ತಂಭದ ಉಲ್ಲೇಖ ವಾಸುದೇವನ ದೇವಾಲಯಕ್ಕೆ ಸಂಬಂಧಿಸಿದ್ದು, ಇದು ದೇವಾಲಯಕ್ಕೆ ಸಂಬಂಧಿಸಿದ ಪ್ರಾಚೀನ ಮಾಹಿತಿಯಾಗಿದೆ.[೩೭]

ದೇವಾಲಯಗಳ ಹುಟ್ಟು ಬೆಳವಣಿಗೆಗಳ ವಿಷಯ ತುಂಬ ಕುತೂಹಲಕರವಾದುದು. ಸಾಮಾನ್ಯವಾಗಿ 'ಹಿಂದೂ ಧರ್ಮಗಳ ಮಠಗಳಿಗೆ ಪ್ರೇರಣೆ ಬೌದ್ಧ ವಿಹಾರ'ಗಳೆಂದು ವಿದ್ವಾಂಸರು ಭಾವಿಸುತ್ತಾರೆ.[೩೮] ದೇವಾಲಯಗಳ ಸಮುಚ್ಚಯದಲ್ಲಿ ಮಠಗಳು ಅಸ್ತಿತ್ವಕ್ಕೆ ಬಂದವು. ಪ್ರಾಚೀನ ಕರ್ನಾಟಕದಲ್ಲಿ ದೇವಾಲಯಗಳು ಜೀವಂತ ಕೇಂದ್ರಗಳು ಮತ್ತು ಸಾಂಸ್ಕೃತಿಕ ಕೇಂದ್ರಗಳೂ ಆಗಿದ್ದವು. ಆದರೆ ವಚನಗಳಲ್ಲಿ ಮಠವೆನ್ನುವುದು ಭಕ್ತನಮನೆ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಕರ್ನಾಟಕದಲ್ಲಿ ಅಂದು ಪ್ರಬಲಪಂಥವಾಗಿ ಅಸ್ತಿತ್ವಕ್ಕೆ ಬಂದ ಲಾಕುಲೀಶ ಪಾಶುಪಥದ ಪ್ರಭಾವದಿಂದ ಮಠಗಳು ಬೆಳೆದು ಬಂದವೆಂಬ ಸಾಮಾನ್ಯ ನಂಬಿಕೆ ಎಲ್ಲರದು.

ಮಧ್ಯಮಲೆನಾಡಿನ ಪ್ರಾಚೀನ ದೇವಾಲಯಗಳು ಮತ್ತು ಮಠಗಳು ಪ್ರಸ್ತುತ ಉಳಿದಿಲ್ಲವಾದರೂ ಆಕಾಲಕ್ಕೆ ದೇವಾಲಯಗಳಿದ್ದುವೆಂದು, ಅವುಗಳಿಗೆ ರಾಜರು ದಾನ ದತ್ತಿಗಳನ್ನು ಬಿಟ್ಟು ಕೊಡುತ್ತಿದ್ದರೆಂದು ಶಾಸನಗಳು ತಿಳಿಸುತ್ತವೆ. ಕೆಲವೊಂದು ಮಠಗಳು ಮತ್ತು ದೇವಾಲಯಗಳು ಇತ್ತೀಚಿನವರೆಗೂ ಇಲ್ಲಿಯವರೆಗೂ ಉಳಿದುಕೊಂಡಿದ್ದರೂ ಕೇವಲ ನಾಮಕಾವಸ್ಥೆಯಲ್ಲಿ, ಇನ್ನು ಕೆಲವು ದೇವಾಲಯಗಳು ಹೇಳಹೆಸರಿಲ್ಲದಂತೆ ಭಗ್ನಾವಶೇಷದಿಂದ ಕೂಡಿದ್ದು ಕೇವಲ ಶಾಸನಗಳ ಉಲ್ಲೇಖಗಳಿಗೆ ಮಾತ್ರ ಸೀಮಿತವಾಗಿವೆ. ಉದಾ:- ಶೃಂಗೇರಿಮಠ ಮತ್ತು ದೇವಾಲಯ ಅಂದಿನ ಕಾಲದಿಂದ ಇಂದಿನ ಕಾಲದವರೆಗೂ ಸಾಂಸ್ಕೃತಿಕ ವೈಭವ ಮತ್ತು ಭಕ್ತಿಯ ಪರಾಕಾಷ್ಠತೆಯ ಸಂಕೇತವಾಗಿದೆ. ಹಾಗೆಯೇ ಕೇವಲ ಪಳೆಯುಳಿಕೆಗಳಿಂದ ಕೂಡಿದ ಮಠ ಮತ್ತು ದೇವಾಲಯ ಇರುವುದನ್ನು ಗಮನಿಸಬಹುದು. ಉದಾಹರಣೆಗೆ; ಮಲೆಯಾಳ ಮಠ, ಬಗ್ಗುಂಜಿಮಠ (ಕೊಪ್ಪ).

ಮಧ್ಯಮಲೆನಾಡಿನ ಶಾಸನಗಳಲ್ಲಿ ಉಲ್ಲೇಖವಿರುವಂತೆ ರಾಜರುಗಳು, ಸಾಮಂತರುಗಳು ಅಗ್ರಹಾರಗಳಿಗೆ, ಬ್ರಾಹ್ಮಣರಿಗೆ, ದೇವಾಲಯ ಮತ್ತು ಮಠಗಳಿಗೆ ಯಥೇಚ್ಛವಾಗಿ ದಾನ ಧರ್ಮಗಳನ್ನು ನೀಡಿರುವರು. ಜೈನ, ಶೈವ, ಮತ್ತು ವೈಷ್ಣವ ಹಾಗೂ ವೀರಶೈವ ಮಠಗಳು, ದೇವಾಲಯಗಳು ಹೇರಳ ಸಂಖ್ಯೆಯಲ್ಲಿ ರಚನೆಯಾದವು. ಶಿವಮೊಗ್ಗ ಜಿಲ್ಲೆಯಲ್ಲಿ ಕೆಳದಿ ಅರಸರ ಆಡಳಿತ ಕಾಲದಲ್ಲಿ ಮತ್ತು ಅದಕ್ಕೂ ಮೊದಲು ೧೩೮ ವೀರಶೈವ ಮಠಗಳು ಸ್ಥಾಪನೆಗೊಂಡ ಬಗ್ಗೆ ಮಾಹಿತಿ ಇದೆ. ಈ ಆಧಾರದ ಮೇಲೆ ಶೋಧನೆಗೆ ಹೋದಾಗ ೯೪ ಮಠಗಳು ದೊರೆತಿವೆ. ಉಳಿದ ಮಠಗಳು ಹೇಳಹೆಸರಿಲ್ಲದಂತಾಗಿವೆ. ದೊರೆತ ಮಠಗಳಲ್ಲಿ ೨೮ ಮಠಗಳು ಅಸ್ತಿತ್ವದಲ್ಲಿದ್ದು ಉಳಿದವುಗಳು ಹೆಸರಿಗಷ್ಟೇ ಮಠಗಳಾಗಿ ಉಳಿದಿವೆ. ಕೆಳದಿ ಅರಸರ ೨೬೪ ವರ್ಷಗಳ ಆಡಳಿತ ಕಾಲಾವಧಿಯಲ್ಲಿ ಧಾರ್ಮಿಕ ತಳಹದಿಯ ಮೇಲೆ ಸಮಾಜವನ್ನು ಬೆಳೆಸಲು ಪ್ರಯತ್ನಿಸಿದರು. ಇವರು ವೀರಶೈವ ಮತಸ್ಥರಾದರೂ ತಮ್ಮ ಆಡಳಿತ ವ್ಯಾಪ್ತಿಯಲ್ಲಿ ವೀರಶೈವ ಮಠಗಳಿಗೆ ಕೊಡುತ್ತಿದ್ದ ಪ್ರಾಮುಖ್ಯತೆಯಂತೆಯೇ ಶೈವ, ವೈಷ್ಣವ ಹಾಗೂ ಜೈನಧರ್ಮ ಕ್ಷೇತ್ರಗಳಿಗೂ ಕೊಟ್ಟು ಬೆಳೆಸಿದ್ದಲ್ಲದೇ, ಕ್ರೈಸ್ತ ಮತ್ತು ಮುಸ್ಲಿಂ ಧರ್ಮಕ್ಕೂ ಹೆಚ್ಚು ನೆರವು ನೀಡಿ ಧರ್ಮಸಹಿಷ್ಣುಗಳು ಎಂಬ ಖ್ಯಾತಿಗೆ ಒಳಗಾಗಿದ್ದರು. ವಿಜಯನಗರದ

ಅರಸರು ಸರ್ವಧರ್ಮಗಳಿಗೂ ಪ್ರಾಧಾನ್ಯತೆ ನೀಡಿದ್ದರು ಎಂಬುದಕ್ಕೆ ಶಾಸನದಲ್ಲಿ ಹರಿಹರನು ಸಕಲವರ್ಣಾಶ್ರಮಂಗಳನ್ನು ಪರಿಪಾಲಿಸುತ್ತಿದ್ದ ಎಂದು ತಿಳಿಸುತ್ತದೆ. ಶಾಸನೋಕ್ತವಾಗಿ ಹಲವಾರು ಮಠಗಳು ಮತ್ತು ದೇವಾಲಯಗಳು ಮಧ್ಯಮಲೆನಾಡಿನಲ್ಲಿ ಉಲ್ಲೇಖವಾಗಿದ್ದರೂ ಪ್ರಸ್ತುತ ಕಾಲದಲ್ಲಿ ಕೆಲವೊಂದು ಮಠಗಳು, ದೇವಾಲಯಗಳು ನಶಿಸಿಹೋಗಿವೆ. ಇನ್ನು ಕೆಲವು ಜೀರ್ಣೋದ್ಧಾರ ಗೊಂಡಿವೆ. ಇವುಗಳು ಅಂದಿನ ಕಾಲದಲ್ಲಿ ಸಾಂಸ್ಕೃತಿಕ ಕೇಂದ್ರಗಳೆನಿಸಿದ್ದರೂ ಉದ್ಯೋಗ, ವಿದ್ಯಾಭ್ಯಾಸ, ನ್ಯಾಯದಾನ ಇನ್ನು ಮುಂತಾದ ವಿಷಯಗಳ ಬಗ್ಗೆ ಸಮಗ್ರವಾದ ಸೇವೆಯನ್ನು ಕಡೆಗಣಿಸಲಾಗಿದೆ.

ಮಧ್ಯಮಲೆನಾಡಿನ ಶಾಸನಗಳನ್ನು ಅಭ್ಯಸಿಸಿದಾಗ ದೊರೆತಿರುವ ಬಹಳಷ್ಟು ಶಾಸನಗಳು ದಾನಶಾಸನಗಳಾಗಿವೆ. ಶಾಸನಗಳಲ್ಲಿ ದೇವಾಲಯಗಳ ಪೂಜೆ, ಪುನಸ್ಕಾರ, ನಂದಾದೀಪದ ಸೇವೆ, ಅಮೃತಪಡಿ, ದೇವಾಲಯದ ನಿರ್ಮಾಣ, ಪುರೋಹಿತರಿಗೆ ಭೂದಾನ ನೀಡಿರುವ ಬಗ್ಗೆ ವ್ಯಾಪಕವಾದ ಮಾಹಿತಿಯನ್ನು ಪಡೆಯಬಹುದಾಗಿದೆ. ಇಂತಹ ದೇವಾಲಯಗಳು ಮತ್ತು ಮಠಗಳು ಸಮಾಜದಲ್ಲಿ ಧಾರ್ಮಿಕ ಭಾವನೆಯನ್ನು ಜಾಗೃತಗೊಳಿಸುವುದು.ಆ ಮೂಲಕ ಅಲ್ಪಸಂಖ್ಯಾತ ಸಮುದಾಯಗಳ ಏಳಿಗೆಗೆ ಮುನ್ನುಡಿ ಬರೆಯುವುದು ಅವುಗಳ ಬಹುಮುಖ್ಯ ಕಾರ್ಯಗಳೆಂದು ತಿಳಿಯಬೇಕಾಗುತ್ತದೆ. ಆದರೆ ದೇವಾಲಯಗಳು, ಮಠಗಳು ಸಮಾಜದಲ್ಲಿನ ಅಲ್ಪಸಂಖ್ಯಾತ ಸಮುದಾಯಗಳ ಹಿತವನ್ನು ಬಯಸಿ ಆ ನಿಟ್ಟಿನಲ್ಲಿ ಆ ಸಮುದಾಯವೇ ಪ್ರಧಾನವೆಂದು ಬಗೆದು ಧರ್ಮದ ಚೌಕಟ್ಟಿನಲ್ಲಿ ಬಹುಸಂಖ್ಯಾತ ಸಮುದಾಯವನ್ನು ನಿಯಂತ್ರಿಸುವ ಶಕ್ತಿಕೇಂದ್ರಗಳಾಗಿ ರೂಪುಗೊಂಡವು.ಕಾಲಾನಂತರದಲ್ಲಿ ಭೂಮಾಲೀಕರ ಯಜಮಾನಿಕೆಯ ತಾಣಗಳಾಗಿ ಸಮಾಜ ಹಾಗೂ ಜನರನ್ನು ದೇವರ ಹೆಸರಿನಲ್ಲಿ ಕಟ್ಟಿಹಾಕುವ ಕೆಲಸವನ್ನು ನಿರ್ವಹಿಸಿದವು.

ಈ ಭಾಗದ ಶಾಸನಗಳು ಮೇಲೆ ಹೇಳಿದ ಹಾಗೆ ಭೂದಾನ ಶಾಸನಗಳೇ ಅಧಿಕ ಆಗಿದ್ದು, ದಾನಗಳನ್ನು ಯಾರು ನೀಡಿದರು? ಯಾರಿಗೆ ನೀಡಿದರು? ಹಾಗೂ ನೀಡುವ ಉದ್ದೇಶವೇನು? ಎಂಬ ಪ್ರಶ್ನೆಯನ್ನು ಕೇಳಿಕೊಂಡಾಗ ಅಂದಿನ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಅಂಶಗಳ ಮಹತ್ವವನ್ನು ಸಮಗ್ರವಾಗಿ ಚಿತ್ರಿಸಬಹುದು. ದಾನಗಳನ್ನು ಸಾಮಾನ್ಯವಾಗಿ ಅರಸು ಕುಟುಂಬದವರು ಪುರೋಹಿತರಿಗೆ ಮಹಾಜನಗಳಿಗೆ, ದೇವಾಲಯಗಳು ಮತ್ತು ಮಠಗಳಿಗೆ ನೀಡುವುದರ ಮುಖೇನ ಅವುಗಳು ಜನರ ಮೇಲೆ ಪ್ರಭುತ್ವ ಹೇರುವ ಅಸ್ತ್ರಗಳಾಗಿ ರೂಪುಗೊಂಡವು. ರಾಜಪ್ರಭುತ್ವವು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಹಾಗೂ ಮುಂದುವರಿಸಿಕೊಂಡು ಹೋಗಲು ದೇವಾಲಯ ಮತ್ತು ಮಠಗಳಿಗೆ ಯಥೇಚ್ಛವಾಗಿ ದಾನ-ಧರ್ಮಗಳನ್ನು ನೀಡುತ್ತಾ ಅವುಗಳನ್ನು ಪೋಷಿಸಿಕೊಂಡು ಬಂದರು. ಈ ಭಾಗದಲ್ಲಿ ದೀರ್ಘಕಾಲ ರಾಜ್ಯಭಾರ ಮಾಡಿದ ಆರಗದ ಒಡೆಯರು ಆರಗದ ಮೂಲಸ್ಥಾನದ ದೇವರಾದ ಕಲಾನಾಥೇಶ್ವರ

ದೇವರ ಅಮೃತಪಡಿಗೆ ಬಂದ್ಯಾಗ್ರಾಮವನ್ನು ಧಾರಾಪೂರ್ವಕವಾಗಿ ದಾನ ನೀಡಿದ್ದು ಇಲ್ಲಿ ಕಂಡುಬರುತ್ತದೆ.[೪೦] ಇಲ್ಲಿನ ಅಖಂಡೇಶ್ವರ ದೇವಾಲಯದ ಮುಂಭಾಗದಲ್ಲಿ ನಿಲ್ಲಿಸಿರುವ ಶಾಸನದ ಪ್ರಕಾರ ಕ್ರಿ.ಶ. ೧೪೨೨ರಲ್ಲಿ ವಿಜಯನಗರದ ಅರಸು ಒಂದನೇ ದೇವರಾಯನ ಕಾಲದಲ್ಲಿ ಆರಗವನ್ನು ಆಳುತ್ತಿದ್ದ ಸಿರಿಗಿರಿನಾಥ ಒಡೆಯರು ಬ್ರಹ್ಮೇಶ್ವರ ದೇವರ ಅಮೃತಪಡಿ, ನಂದಾದೀಪಗಳ ಸೇವೆಗಾಗಿ ಧಾರಾಪೂರ್ವಕವಾಗಿ ದಾನನೀಡಿದ ವಿವರಗಳಿವೆ. ಇನ್ನು ಮುಂದುವರೆದು ಆರಗವನ್ನು ಆಳುತ್ತಿದ್ದ ಶ್ರೀವಿಠಂಣ್ಣ ಒಡೆಯನು ಆರಗದ ಹಿರಿಯಂಗಡಿಯ ಶ್ರೀ ಬನದೇವಿಯ ಅಮೃತಪಡಿಗೆ ಭೂದಾನ ನೀಡಿದ ವಿವರಣೆಯನ್ನು ಶಾಸನವೊಂದು ತಿಳಿಸುತ್ತದೆ.[೪೧] ಇನ್ನೊಂದು ಶಾಸನದಲ್ಲಿ ಆರಗವೇಂಠೆಯ ನಾಡಾಧಿಪತಿಯಾಗಿದ್ದ ಬೊಮ್ಮಣ್ಣ ಒಡೆಯರ ಮಕ್ಕಳು ಆರಗದ ಅಧಿಪತಿಯಾದ ಕಲ್ಲಿನಾಥದೇವರು ಮತ್ತು ಅಂಬುತೀರ್ಥ ರಾಮೇಶ್ವರ ದೇವರ ಅಮೃತಪಡಿ ಮತ್ತು ನಂದಾದೀಪದ ಖರ್ಚಿಗೆ ಇಂತಿಷ್ಟು ಗದ್ಯಾಣ ಮತ್ತು ಭೂಮಿಯನ್ನು ಬ್ರಾಹ್ಮಣರಿಗೆ ದಾನ ಮಾಡಿದ ವಿವರಣೆ ಇದೆ.[೪೨] ಈ ದಾನಗಳನ್ನು ನೀಡುವುದರ ಮೂಲಕ ರಾಜಪ್ರಭುತ್ವವು ಸಮಾಜದ ಶೋಷಿತ ಬಹುಸಮುದಾಯಗಳನ್ನು ನಿಯಂತ್ರಿಸುವ ಸೂತ್ರದಡಿಯಲ್ಲಿ ದೇವಾಲಯಗಳಿಗೆ ನೀಡುವ ದಾನವನ್ನು ಅಸ್ತ್ರವಾಗಿ ಬಳಸಿಕೊಂಡಿದೆ. ರಾಜರುಗಳು, ಸಾಮಂತರುಗಳು ದಾನಧರ್ಮಗಳನ್ನು ಪುರೋಹಿತರಿಗೆ, ಭೂಮಾಲೀಕರಿಗೆ, ದೇವಾಲಯ ಹಾಗೂ ಮಠಗಳಿಗೆ ನೀಡಿದರೆ ಹೊರತು ಸಮಾಜದ ಕೆಳವರ್ಗಗಳಿಗೆ ನೀಡದೇ ಇರುವುದನ್ನು ಶಾಸನಗಳಲ್ಲಿ ಬಿಂಬಿಸಲಾಗಿದೆ. ಕುಶಲಕರ್ಮಿಗಳ ಮೇಲೆ ಬೆಳಕುಚೆಲ್ಲುವ ಖಚಿತವಾದ ಮಾಹಿತಿಯ ಕೊರತೆ ಎದ್ದು ಕಾಣುತ್ತದೆ. ಪ್ರಭುತ್ವದ ಅದ್ಧೂರಿ ಜೀವನಕ್ಕೆ ಬೇಕಾದ ಅರಮನೆ, ದೇವಾಲಯಗಳು, ಕೋಟೆ ಮುಂತಾದವುಗಳನ್ನು ತಮ್ಮ ಪ್ರಭುತ್ವದ ಅಸ್ತಿತ್ವದ ಹಿನ್ನೆಲೆಯಿಂದ ಅನಿವಾರ್ಯಗೊಳಿಸಿ ಕೊಂಡಿದ್ದರು. ಇದಕ್ಕಾಗಿ ಪ್ರಜೆಗಳ ಶ್ರಮವನ್ನು ಪಡೆದುಕೊಳ್ಳಲಾಗುತ್ತಿತ್ತು. ಜೊತೆಗೆ ಪ್ರಭುತ್ವವು ತನ್ನ ಹಿತಾಸಕ್ತಿಗಳಿಗಾಗಿ ಶ್ರಮಿಕರನ್ನು ಬಳಸಿಕೊಳ್ಳುತ್ತಿತ್ತು. ಈ ಕಾರ್ಯಗಳಿಗೆ ದೇವಕಾರ್ಯಗಳೆಂದು ಕರೆಯುತ್ತಿದ್ದರು.ಈ ಎಲ್ಲವುಗಳ ಹಿಂದೆ ಪ್ರಭುತ್ವದ ವೈಯಕ್ತಿಕ ಹಿತಾಸಕ್ತಿ ಅಡಗಿರುವುದು ಸ್ಪಷ್ಟವಾಗುತ್ತದೆ.[೪೩]

ಮಧ್ಯಮಲೆನಾಡಿನ ಅಂದಿನ ಕಾಲದ ರಾಜಪ್ರಭುತ್ವದ ವ್ಯವಸ್ಥೆಯನ್ನು ತಿರುಗಿ ನೋಡಿದಾಗ ದೇವಾಲಯಗಳಿಗೆ ಮತ್ತು ಮಠಗಳಿಗೆ ನೀಡುವ ದಾನದ ಮೂಲಕ ಅವುಗಳನ್ನು ಒಂದು ಕೇಂದ್ರೀಕೃತ ವ್ಯವಸ್ಥೆಯೊಳಗಿನ ನಿಯಂತ್ರಿತ ಶಕ್ತಿಯಂತ ಬಳಸಿಕೊಳ್ಳುವಂತಹ ಪ್ರಯತ್ನವಂತೂ ಸದಾ ಚಲಾವಣೆಯಲ್ಲಿದ್ದಿತು. ಪ್ರಜೆಗಳನ್ನು ನಿಯಂತ್ರಣದಲ್ಲಿಡಲು ದೇವಾಲಯಗಳ ನಿರ್ಮಾಣದ ಮೊರೆ ಹೋಗುವುದು ಅನಿವಾರ್ಯವಾಗಿದ್ದಿತು.ಆ ನಿಟ್ಟಿನಲ್ಲಿ ಅಂದು ನಿರ್ಮಿಸಲಾದ ಆರಗ, ಶೃಂಗೇರಿ, ಕಿಗ್ಗ, ನಾರ್ವೆ ಇನ್ನು ಮುಂತಾದ ಸ್ಥಳಗಳಲ್ಲಿರುವ ದೇವಾಲಯಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಧರ್ಮದೇವರು ದೇವಾಲಯಗಳು ಹಾಗೂ ದಾನವನ್ನು ಒಂದು ಶೋಷಣೆಯ

ಅಸ್ತ್ರವನ್ನಾಗಿ ಬಳಸಿಕೊಂಡಿರುವುದನ್ನು ಶಾಸನಗಳ ಮೂಲಕ ಅಭ್ಯಸಿಸಬಹುದಾಗಿದೆ. ಸಮಾಜದಲ್ಲಿ ಅಲ್ಪಸಂಖ್ಯಾತರಾದ ಬ್ರಾಹ್ಮಣರು ಬಹುಸಂಖ್ಯಾತರನ್ನು ನಿಯಂತ್ರಣಕ್ಕೆ ಒಳಪಡಿಸಿರುವುದು ಈ ಮೂಲಕ ಎಂದು ಅರಿಯಬಹುದು.

ಕೆಳವರ್ಗದ ಸ್ತ್ರೀಯರನ್ನು ದೇವರ ಹೆಸರಿನಲ್ಲಿ ಅಂಗಭೋಗ, ರಂಗಭೋಗದ ಧಾರ್ಮಿಕ ಆಚರಣೆಯಲ್ಲಿ ಕಟ್ಟಿಹಾಕುವುದರ ಮೂಲಕ ಜನತೆಯನ್ನು ಬಿಗಿ ಹಿಡಿತದಲ್ಲಿರುವಂತೆ ರಾಜಪ್ರಭುತ್ವವು ಪ್ರಯತ್ನಿಸಿತು. ರಾಜನ ನರ್ತಕಿಯರಿಂದ ಆರಂಭವಾದ ಪದ್ಧತಿಯು ಕೊನೆಗೆ ವೇಶ್ಯಾಧರ್ಮವನ್ನು ಸ್ವೀಕರಿಸಿ ರಾಜಾಶ್ರಯದಲ್ಲಿಯೇ ಕಾಲ ಕಳೆಯುವಂತಾಯಿತು. ಶಾಸನವೊಂದರಲ್ಲಿ ಶಿರಪತಿಯ ನರಸಿಂಹದೇವರ ರಂಗಭೋಗಕ್ಕೆ ಸಲುವಾಗಿ ಎಂಬ ಉಲ್ಲೇಖವಿದೆ.[೪೪] ಇಂತಹ ನರ್ತಕಿಯರು ಮಠಗಳನ್ನು ನಿರ್ಮಿಸಿದರ ಬಗ್ಗೆ ಮಾಹಿತಿ ಇದ್ದು ರಂಗಭೋಗದಲ್ಲಿ ಯಾವ ರೀತಿಯಲ್ಲಿ ನಿಷ್ಣಾತರಾಗಿದ್ದರು ಎಂಬುದು ಅರಿಯುವುದರ ಮೂಲಕ ಮುಂದೊಂದು ದಿನ ರಾಜಪ್ರಭುತ್ವವು ಸಾಮಾಜಿಕ ವ್ಯವಸ್ಥೆಯನ್ನು ನಿಯಂತ್ರಿಸುವ ಶಕ್ತಿಯಾಗಿ ಹೊರಹೊಮ್ಮಿತು ಎಂಬುದರ ಬಗ್ಗೆ ವಿವರವಿದೆ.

ದೇವಾಲಯಗಳು ಮತ್ತು ಮಠಗಳು ಈ ನಾಡಿನಲ್ಲಿ ಆರ್ಥಿಕ ಹಿಡಿತವನ್ನು ಸಾಧಿಸಿದ್ದವು. ಇಡೀ ಆರ್ಥಿಕ ವ್ಯವಸ್ಥೆಯನ್ನು ತನ್ನ ಕೈವಶ ಮಾಡಿಕೊಳ್ಳಲು ಅಂದಿನ ಆರ್ಥಿಕ ಮೂಲಗಳಾದ ಉದ್ದಿಮೆ, ಕೃಷಿ, ವ್ಯಾಪಾರಗಳಲ್ಲಿ ಧರ್ಮವನ್ನು ಬೆರೆಸಿ, ವ್ಯವಸ್ಥೆಯನ್ನು ಪ್ರತಿಕೂಲವಾಗಿಸಿ ಜನಸಾಮಾನ್ಯರನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನ ಮಾಡಿರುವುದು ಕಂಡುಬರುತ್ತದೆ. ಇದಕ್ಕೆ ಸಾಕ್ಷಿ ಎನ್ನುವಂತೆ ಶೃಂಗೇರಿ ಮಠವು ಸಾವಿರಾರು ಎಕರೆ ಭೂ ಪ್ರದೇಶವನ್ನು ಹೊಂದಿದ್ದು ಭೂಮಾಲೀಕತ್ವದ ಶ್ರೀಮಂತಿಕೆಯನ್ನು ಅನುಭವಿಸಿದ್ದಿತು. ಗೇಣಿಗಾಗಿ ಜನಸಾಮಾನ್ಯರಿಗೆ ಭೂಮಿ ಯನ್ನು ಕೃಷಿಗಾಗಿ ನೀಡಿದ್ದು ಆ ಹಿನ್ನೆಲೆಯಲ್ಲಿ ಈ ಭಾಗದ ಆರ್ಥಿಕ ಪ್ರಾಬಲ್ಯವನ್ನು ಸಾಧಿಸಿದ್ದಿತು. ಕ್ರಿ.ಶ. ಹನ್ನೊಂದನೆಯ ಶತಮಾನದ ನಂತರದ ಬಹಳಷ್ಟು ಶಾಸನಗಳು ತಳಸಮುದಾಯಗಳ ಏಳಿಗೆಯನ್ನು ಪ್ರಚುರಪಡಿಸುತ್ತವೆ.

ದೇವಾಲಯ ಮತ್ತು ಮಠಗಳ ನಿರ್ಮಾಣದಲ್ಲಿ ಪಂಚಕಾರುಕರ ಪಾತ್ರ ಪ್ರಧಾನವಾಗಿದ್ದು ಇವರುಗಳ ನೆರವಿಲ್ಲದೆ ದೇವಾಲಯಗಳ ನಿರ್ಮಾಣ ಅಸಾಧ್ಯವೆಂಬುದು ರಾಜಪರಿವಾರದವರು ಮತ್ತು ಪುರೋಹಿತಶಾಯಿ ವರ್ಗಗಳ ಅಭಿಮತ.ತಳಸಮುದಾಯಗಳು ಸಮಾಜದಲ್ಲಿ ಬಹುಸಂಖ್ಯಾತ ರಾಗಿದ್ದರೂ ಅಲ್ಪಸಂಖ್ಯಾತರ ನಿಯಂತ್ರಣದಲ್ಲಿದ್ದರು. ದೇವಸ್ಥಾನಗಳ ಸುತ್ತಮುತ್ತಲಿನ ಸ್ಥಳ ವ್ಯಾಪಾರ ಕೇಂದ್ರವಾಗಿರುತ್ತಿತ್ತು. ಇದರಿಂದಾಗಿ ವ್ಯಾಪಾರಿವರ್ಗದವರು ದೇವರು ಮತ್ತು ಧರ್ಮಕ್ಕೆ ನಿಷ್ಠೆಯನ್ನು ವ್ಯಕ್ತಪಡಿಸುತ್ತಾ ಭೂದಾನಕ್ಕಿಂತ 'ಮಿಗಿಲಾದ ದಾನವಿಲ್ಲ, ಭೂಮಿಗಿಂತ ಮಿಗಿಲಾದ ಐಶ್ವರ್ಯವಿಲ್ಲ' ಎಂದು ತಿಳಿದ ಆ ಕಾಲದಲ್ಲಿ ರಾಜಪರಿವಾರವು ಭೂದಾನವನ್ನು ಪುರೋಹಿತ ಶಾಹಿಗಳಿಗೆ, ಮಹಾಜನಗಳಿಗೆ, ದೇವಾಲಯಗಳಿಗೆ ನೀಡಿದ್ದು ಕೃಷಿ ಮಾಡುತ್ತಿದ್ದ ಭೂಮಿ

ರಾಜನ ಭೂಮಿಯಾಗಿದ್ದು ಕೃಷಿಕಾರರು ನೇರವಾಗಿ ಭೂಮಾಲೀಕರ ಸ್ವಾಧೀನಕ್ಕೆ ಒಳಪಟ್ಟು ಕ್ರಿ.ಶ. ೧೫ನೆಯ ಶತಮಾನದ ನಂತರ ಭೂಮಾಲೀಕರ ಕೇಂದ್ರಗಳಾಗಿ, ಶೋಷಿತರ ತಾಣಗಳಾಗಿ ರೂಪುಗೊಂಡವು.

ಮಠಗಳು ಅಂದಿನಕಾಲದಲ್ಲಿ ಬಡ್ಡಿ ವ್ಯವಹಾರ ಮಾಡುತ್ತಾ ಸಂಪತ್ತಿನ ಕ್ರೋಢೀಕರಣದ ಸ್ಥಳವಾಗಿಯೂ, ಬಂಡವಾಳಶಾಯಿಗಳ ಕೇಂದ್ರಗಳಾಗಿಯೂ ಅಸ್ತಿತ್ವಕ್ಕೆ ಬಂದಿದ್ದು, ಧರ್ಮದ ಹೆಸರಿನಲ್ಲಿ ಜನಸೇವೆಯನ್ನು ನಿರ್ಲಕ್ಷಿಸಿದವು.ಇದಕ್ಕೆ ನಿದರ್ಶನವೆನ್ನುವಂತೆ ಲಿಂಗಾಪುರ ಶಾಸನದಲ್ಲಿ ದಾನಿವಾಸ ಒಡೆಯರು ಹಣಕಾಸಿನ ಮುಗ್ಗಟ್ಟು ತಲೆದೋರಿದಾಗ ಬಾಳೇಹಳ್ಳಿ ಮಠದಿಂದ ೨,೦೦೦ ವರಹಗಳನ್ನು ಸಾಲವಾಗಿ ಪಡೆದುಕೊಂಡದ್ದರ ಪ್ರತಿಯಾಗಿ ಈ ಮಠಕ್ಕೆ ತಮ್ಮ ಸೀಮೆಯೊಳಗಣ ಮೂರುಗ್ರಾಮಗಳನ್ನು ಚಿಕ್ಕಮಲ್ಲಣ್ಣನಾಯಕನು ಬಿಟ್ಟುಕೊಟ್ಟನು ಎಂಬ ಉಲ್ಲೇಖ ಉಲ್ಲೇಖಿವದೆ. ಅಂದಿನ ಕಾಲದಲ್ಲಿ ಬ್ಯಾಂಕುಗಳಂತೆ ಕಾರ್ಯನಿರ್ವಹಿಸುತ್ತಿದ್ದವೆಂದು ಹಾಗೂ ಬಾಳೇಹಳ್ಳಿ ಮಠವು ಅತ್ಯಂತ ಶ್ರೀಮಂತಮಠವೆಂದು ಇದರಿಂದ ವ್ಯಕ್ತವಾಗುತ್ತದೆ.[೪೫]

ಋಷ್ಯಶೃಂಗರ ತಪೋಭೂಮಿ ಈ ಶೃಂಗೇರಿ.ಇಲ್ಲಿ ಮಂಗಳದಾಯಿಯಾದ ತುಂಗಾನದಿ ಪ್ರವಹಿಸುತ್ತಿದ್ದಾಳೆ.ಈ ಕ್ಷೇತ್ರದಲ್ಲಿ ಬಿಸಿಲಿನ ಬಾಧೆಯಿಂದ ಬಳಲುತ್ತಿದ್ದ ಗರ್ಭಿಣಿಕಪ್ಪೆಗೆ ಹಾವು ಹೆಡೆ ಎತ್ತಿ ನೆರಳನ್ನು ನೀಡುತ್ತಿತ್ತು ಎಂಬ ಐತಿಹ್ಯವು ಮನೋಹರವಾಗಿದ್ದರೂ ಪ್ರಮಾಣ ವೆನಿಸಲಾರದು. ಶಾರದ ದೇವಾಲಯದ ಸಂಕೀರ್ಣದಲ್ಲಿಯೇ ಮಠವು ರೂಪುಗೊಂಡು ಮಠ ಮತ್ತು ದೇವಾಲಯ ಪ್ರತ್ಯೇಕತೆ ಎನ್ನದಂತೆ ಜೊತೆ ಜೊತೆಯಾಗಿಯೇ ಬೆಳೆದುಕೊಂಡು ಬಂದವು. ಕ್ರಿ.ಶ. ೧೪ನೇ ಶತಮಾನದ ನಂತರ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ಶೃಂಗೇರಿ ಮಠವು ಸಂಸ್ಥಾನವಾಗಿ ಪರಿವರ್ತನೆ ಹೊಂದಿತಲ್ಲದೆ ಶೃಂಗೇರಿ ಜಹಗೀರು ಕೂಡ ಕ್ರಮವಾಗಿ ರೂಪುಗೊಂಡಿತು.ಶೃಂಗೇರಿ ಮಠಕ್ಕೆ ಗ್ರಾಮಗಳು, ಭೂಮಾನ್ಯಗಳು ದಾನವಾಗಿ ಬರತೊಡಗಿದವು.

ಇಲ್ಲಿ ಮುಖ್ಯವಾಗಿ ಮಠಾಧಿಪತಿಗಳು ರಾಜರುಗಳಂತೆಯೇ ಪ್ರಜೆಗಳಿಂದ ತೆರಿಗೆಯನ್ನು ಸಂಗ್ರಹಿಸುವ ಮತ್ತು ಅಧರ್ಮದಲ್ಲಿ ನಡೆದವರಿಗೆ ದಂಡವನ್ನು ವಿಧಿಸುವ ಅಧಿಕಾರವನ್ನು ಹೊಂದಿರುತ್ತಾರೆಂದು ಹೇಳಲಾಗುತ್ತದೆ. ಈ ಮಠವು ಶೋಷಿತವರ್ಗದ ಧ್ವನಿಯಾಗದೇ ಕೇವಲ ಭೂಮಾಲೀಕರ ಸ್ವಾಧೀನದಲ್ಲಿ ಪುರೋಹಿತಶಾಯಿಯ ಶಕ್ತಿಕೇಂದ್ರವಾಗಿ ಮುಂದುವರಿದುದನ್ನು ಗುರುತಿಸಬಹುದು. ಕ್ರಿ.ಶ. ೧೭೯೧ರಲ್ಲಿ ಲಂಬಾಣಿ ಮತ್ತು ಪಿಂಡಾರೆಯವರು ರಘುನಾಥರಾವ್ ಪಟವರ್ಧನ್ ಎಂಬುವನ ನೇತೃತ್ವದಲ್ಲಿ ಶೃಂಗೇರಿಯನ್ನು ಲೂಟಿ ಮಾಡಿದರು. ಸಾಕಷ್ಟು ಸಂಪತ್ತನ್ನು ಲೂಟಿ ಮಾಡಿ ಅನೇಕ ಅರ್ಚಕರನ್ನು ಕತ್ತರಿಸಿ ಹಾಕಿದರು.

ಮಲೆನಾಡಿನ ಸಹ್ಯಾದ್ರಿ ಪರ್ವತದ ಸಾಲಿನಲ್ಲಿ ಕವಲೇದುರ್ಗ ಮಠವು ಮೈದಳೆದಿದೆ. ಕೆಳದಿನಾಯಕರ ನಾಲ್ಕನೇ ರಾಜಧಾನಿಯಾದ ಕವಲೇದುರ್ಗ ಬೆಟ್ಟಗುಡ್ಡಗಳಿಂದ, ದಟ್ಟವಾದ ಅರಣ್ಯದಿಂದ ಕೂಡಿದ ದುರ್ಗಮ ಪ್ರದೇಶವಾಗಿದ್ದು ಯುದ್ಧಕಾಲದಲ್ಲಿ ರಕ್ಷಣೆಯ ತಾಣವಾಗಿದ್ದಿತು.

ಈ ಮಠವು ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿ ಬೆಳೆದು ಇತಿಹಾಸದ ಪುಟದಲ್ಲಿ ಅಜರಾಮರವಾಗಿದೆ. ಆರು ನೂರು ವರ್ಷಗಳ ಹಿಂದೆ ಕೆಳದಿಯ ನಾಯಕರ ಕಾಲದಲ್ಲಿ ಪ್ರಾರಂಭವಾಗಿರಬಹುದಾದ ಮಠವು ಹಿರಿಯ ಮಠವಾಗಿ ರೂಪುಗೊಂಡಿದೆ.

ಸೋಮಶೇಖರ ನಾಯಕನ ಕೊಲೆಯಾದ ನಂತರ ಅವನ ಮಡದಿ ಚೆನ್ನಮ್ಮ ರಾಜ್ಯದ ಆಡಳಿತವನ್ನು ವಹಿಸಿಕೊಂಡನಂತರ ರಾಜರುಗಳು ಮತ್ತು ಪ್ರಧಾನಮಂತ್ರಿಗಳ ಒತ್ತಾಯದ ಮೇರೆಗೆ ಪಟ್ಟಾಭಿಷೇಕಕ್ಕೆ ಸಿದ್ಧತೆಯಲ್ಲಿದ್ದಾಗ ತನ್ನವರಿಂದಲೇ ತೊಂದರೆಗೆ ಸಿಲುಕಿಕೊಂಡಾಗ ಧೃತಿಗೆಡದೆ ಯುದ್ಧದ ಸಕಲ ಸಿದ್ಧತೆಗಳನ್ನು ಮಾಡಿಕೊಂಡು ಬಸವಲಿಂಗ ನಾಯಕನನ್ನು ಸೆರೆಹಿಡಿದು ವೆಂಕಟಪ್ಪನಾಯಕನನ್ನು ಎದುರಿಸಲು ಶಕ್ತಿ ಇದ್ದರೂ ತಂತ್ರಬಳಸಿ ಬಿದನೂರು ಕೋಟೆಯಿಂದ ಕಣ್ಮರೆಯಾಗಿ ಕವಲೇದುರ್ಗದಲ್ಲಿ ಬಂದು ನೆಲೆಸುತ್ತಾಳೆ. ಕೆಳದಿ ಚೆನ್ನಮ್ಮನ ಸಾಹಸ ಹೋರಾಟಕ್ಕೆ ಕವಲೇದುರ್ಗ ಮಠವು ದಾರಿದೀಪವಾಗಿದೆ.

ಸಾಗರ ತಾಲ್ಲೂಕಿನ ಕೆಳದಿ–ಇಕ್ಕೇರಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಬಹುದೀರ್ಘಕಾಲ ರಾಜ್ಯಭಾರ ಮಾಡಿದ ನಾಯಕ ವಂಶಸ್ಥರು ವೀರಶೈವಧರ್ಮದ ಪ್ರತಿಪಾದಕ ರಾಗಿದ್ದು, ಈ ಧರ್ಮದ ಮೂಲಕ ರಾಜಪ್ರಭುತ್ವವು ಬಹುಸಂಖ್ಯಾತ ಸಮುದಾಯದ ಮೇಲೆ ನಿಯಂತ್ರಣ ಸಾಧಿಸಲು ಮಠಗಳನ್ನು ವಿಶೇಷವಾಗಿ ಪ್ರತಿಪಾದಿಸುವುದರ ಮೂಲಕ ಜನರನ್ನು ಧಾರ್ಮಿಕ ಹಿಡಿತದಲ್ಲಿ ಕಟ್ಟಿಹಾಕಲಾಯಿತು. ಮಧ್ಯಮಲೆನಾಡಿನ ಭಾಗದಲ್ಲಿ ಕೆಳದಿನಾಯಕರು ನೇರವಾಗಿ ಆಡಳಿತ ನಡೆಸಿ ಇಲ್ಲಿನ ಕವಲೇದುರ್ಗದ ಮಠದ ಗುರುಪರಂಪರೆಯ ಮೂಲಕ ಅಸಂಖ್ಯಾತ ಮಹಾಮತ್ತಿನ ಮಠಗಳನ್ನು ಸ್ಥಾಪಿಸಿ ಅವುಗಳಿಗೆ ದಾನದತ್ತಿಗಳನ್ನು ಯಥೇಚ್ಚವಾಗಿ ಬಿಟ್ಟುಕೊಟ್ಟಿರುವುದನ್ನು ವಿಶ್ಲೇಷಿಸಿದಾಗ ಧರ್ಮಪ್ರಸಾರದ ಜೊತೆಗೆ ತಮ್ಮ ರಾಜಪ್ರಭುತ್ವದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡಿರುವುದು ಶಾಸನಗಳ ಹಿನ್ನೆಲೆಯಲ್ಲಿ ವ್ಯಕ್ತವಾಗುತ್ತದೆ. ಸ್ಥಾಪನೆಯಾಗಿರುವ ಎಲ್ಲಾ ಮಠಗಳು ಆರ್ಥಿಕ ಶಕ್ತಿಯ ಕೇಂದ್ರಗಳಾಗಿ ತಳಸಮುದಾಯಗಳ ನಿಯಂತ್ರಿತ ಶಕ್ತಿಗಳಾಗಿ ರೂಪುಗೊಂಡು ರಾಜಪ್ರಭುತ್ವವು ಈ ಮಠಗಳನ್ನು ನಿಯಂತ್ರಕ ಶಕ್ತಿಗಳಾಗಿ ಬಳಸಿಕೊಂಡಿರುವುದನ್ನು ಶಾಸನಗಳಲ್ಲಿ ಅವಲೋಕಿಸಬಹುದಾಗಿದೆ.

ಈ ಭಾಗದ ಶಾಸನಗಳನ್ನು ವಿಶ್ಲೇಷಿಸಿದಾಗ ಶಾಸನಗಳು ಕೇವಲ ಶ್ರೀಮಂತರ, ಪುರೋಹಿತರ, ಬ್ರಾಹ್ಮಣರ ಹಿತಕ್ಕಾಗಿ ರೂಪುಗೊಂಡ ದಾನಶಾಸನಗಳಾಗಿವೆ. ದಾನವನ್ನು ಪಡೆದುಕೊಂಡ ಪುರೋಹಿತಶಾಹಿಗಳು ರಾಜವಂಶಗಳನ್ನು ಸೂರ್ಯ–ಚಂದ್ರವಂಶಗಳೆಂದು ಕರೆಯುವ ಮೂಲಕ ಅವರನ್ನು ಇಡೀ ಬಹುಸಂಖ್ಯಾತ ವ್ಯವಸ್ಥೆಯ ನಿಯಂತ್ರಕರಂತೆ ಬಿಂಬಿಸಿದ್ದಾರೆ. ರಾಜಕುಟುಂಬದ ಓಲೈಕೆಯನ್ನು ಪ್ರಧಾನ ಅಸ್ತ್ರವನ್ನಾಗಿ ಮಾಡಿಕೊಂಡಿರುವರು. ಜೊತೆಗೆ ರಾಜಪ್ರಭುತ್ವದ ನಿಯಂತ್ರಕ ಶಕ್ತಿಗಳಾಗಿ ಪುರೋಹಿತರು ಕೆಲಸ ಮಾಡಿದ್ದಾರೆ. ಹೀಗೆ ಪುರೋಹಿತಶಾಹಿಯು ಮುಂದುವರೆದು ಜನಸಾಮಾನ್ಯರನ್ನು ರಾಜಪ್ರಭುತ್ವದ ವಿರುದ್ಧ ದಂಗೆ ಏಳದಂತೆ ವ್ಯವಸ್ಥಿತವಾಗಿ ಧರ್ಮ, ಮಠ,

ದೇವಾಲಯ ಎಂಬ ನಂಬಿಕೆಯ ಮೂಲಕ ಕಟ್ಟಿಹಾಕಿದ್ದಾರೆ. ಅಂದಿನರಾಜರು ತಾವು ದೈವೀಪುರುಷರೆಂದು ತಿಳಿದುಕೊಂಡಿದ್ದು ರಾಜರು ದೈವದ ಅವತಾರ ಎಂಬ ಭಾವನೆ ಜನರಲ್ಲಿ ಬೆಳೆಯಲು ರಾಜಪುರೋಹಿತ ವರ್ಗವು ಕಾರಣವಾಗಿದ್ದು ರಾಜಪ್ರಭುತ್ವವನ್ನು ದೈವೀಮಟ್ಟಕ್ಕೇರಿಸಲು ಇವರುಗಳೇ ಪ್ರಧಾನರಾದರು.

ಸಮಾಜದಲ್ಲಿ ಚತುರ್ವರ್ಣ ವ್ಯವಸ್ಥೆಯಿದ್ದುದನ್ನು ಶಾಸನಗಳಲ್ಲಿ ಗಮನಿಸಬಹುದು.ಬ್ರಾಹ್ಮಣರು ಸಮಾಜದಲ್ಲಿ ಉನ್ನತಸ್ಥಾನವನ್ನು ಅಲಂಕರಿಸಿದ್ದು, ಧಾರ್ಮಿಕ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಪ್ರಾಬಲ್ಯವನ್ನು ಪಡೆದುಕೊಂಡಿದ್ದರು. ಮಠಗಳು ಮತ್ತು ದೇವಾಲಯಗಳು ಪುರೋಹಿತಶಾಹಿಯ ಹಾಗೂ ಉಳ್ಳವರ ಅಧೀನದಲ್ಲಿರುವುದನ್ನು ಗಮನಿಸಿದಾಗ ಇಲ್ಲಿ ಕೆಳವರ್ಗದವರ ಪ್ರವೇಶವನ್ನು ನಿರಾಕರಿಸಿ ರುವುದು ವರ್ಣಗಳ ಉಚ್ಚ್ರಾಯ ಸ್ಥಿತಿಯನ್ನು ವ್ಯಕ್ತಪಡಿಸುತ್ತವೆ.

ಅಗ್ರಆಹಾರ ಎನ್ನುವ ಪದಗಳ ಕೂಟದಿಂದ ಅಗ್ರಹಾರ ಎನ್ನುವ ಶಬ್ದವು ರೂಪತಳೆದಿದೆ.ಅಗ್ರ ಎಂದರೆ ಶ್ರೇಷ್ಠ, ಆಹಾರ ಎಂದರೆ ದೇಶ ಅಥವ ವಾಸಸ್ಥಳ. ಅಗ್ರಹಾರವೆಂದರೆ ಉತ್ತಮರಿಗೆ ಕೊಟ್ಟ ಸ್ಥಳವೆಂದು ಸ್ಥೂಲವಾಗಿ ಹೇಳಬಹುದು. ಪ್ರಾಚೀನ ಸಾಮಾಜಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣರು ಶ್ರೇಷ್ಠ ದರ್ಜೆಯವರೆಂದು ಪರಿಗಣಿತರಾಗಿದ್ದರು. ಅವರು ವಾಸಿಸುತ್ತಿದ್ದ ನೆಲೆಗಳೇ ಅಗ್ರಹಾರ ಗಳಾದವು.[೪೬] ಇಲ್ಲಿ ಮಹಾಜನಗಳು ಹಣ ಹಾಗೂ ಭೂಮಿಯನ್ನು ದಾನವಾಗಿ ಸ್ವೀಕರಿಸುತ್ತಿದ್ದರು. ಕ್ರಿ.ಶ. ೧೨ನೇ ಶತಮಾನದ ಸಮಯಕ್ಕೆ ಬ್ರಾಹ್ಮಣರು ಪ್ರಬಲ ಭೂಮಾಲೀಕರಾಗಿ ಹೊರಹೊಮ್ಮಿದುದು ಕಂಡುಬರುತ್ತದೆ. ಇದುವರೆಗೂ ಬ್ರಾಹ್ಮಣರು ಭೂಮಿಯನ್ನು ದಾನದರೂಪದಲ್ಲಿ ಪಡೆಯುತ್ತಿದ್ದವರೂ ಕ್ರಿ.ಶ. ೧೩ನೆಯ ಶತಮಾನದ ವೇಳೆಗೆ ತಾವೂ ಕೂಡ ದೇವಾಲಯ ಮತ್ತಿತರ ಕಾರ್ಯಗಳಿಗೆ ಭೂಮಿಯನ್ನು ದಾನ ಮಾಡುವುದು, ಕೊಳ್ಳುವುದು ಮತ್ತು ಮಾರುವುದರಲ್ಲಿ ತೊಡಗಿಸಿ ಕೊಂಡಿರುವುದನ್ನು ಗಮನಿಸಿದರೆ ಪುರೋಹಿತಶಾಹಿ ವರ್ಗವೂ ಸಹ ಭೂಮಿಯನ್ನು ಹೊಂದಿ ಭೂಮಾಲಿಕರಾಗಿ ಆ ಮುಖಾಂತರ ತಮ್ಮ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳಲು ಹವಣಿಸುತ್ತಿದ್ದುದು ಕಂಡುಬರುತ್ತದೆ. ಬೊಲ್ಲರಸ ಎಂಬುವವನು ಹರಾವರಿಯಲ್ಲಿ ಸಮಗ್ರವಾಗಿ ಪಶ್ಚಿಮವಾಹಿನಿ ಗೋಪಿನಾಥದೇವರ ಅಮೃತಪಡಿಗೆ ದಾನವನ್ನು ನೀಡಿದ ವಿಷಯವನ್ನು ಶಾಸನವೊಂದು ತಿಳಿಸುತ್ತದೆ.[೪೭] ನಾರ್ವೆ ಶಾಸನವೊಂದರಲ್ಲಿ ಕೊಪ್ಪದ ಅಪ್ಪಾಜಿ ಸೇನಾಭೋವರು ಕೊಡನಾಡ ನಾರ್ವೆಯ ತುಂಗಾತೀರದಲ್ಲಿ ಗೋಪಾಲಕೃಷ್ಣ ದೇವಾಲಯವನ್ನು ನಿರ್ಮಿಸಿದ್ದು ಅಮೃತಪಡಿ, ನಂದಾದೀಪ ಮತ್ತು ಛತ್ರಕ್ಕೆ ಭೂಮಿಯನ್ನು ಕ್ರಯ ಮಾಡಿರುವ ಬಗ್ಗೆ ಉಲ್ಲೇಖವಿದೆ.[೪೮] ಕುರುವಳ್ಳಿಯ ಶಾಸನವೊಂದರಲ್ಲಿ ಮಲೆಯಾಳ ಮಠದ ಅಧಿಪತಿಯಾದ ಅಮರೇಶಪುರಿ ಶ್ರೀಪಾದರ ಕೈಯಿಂದ ಚೆನ್ನಭಂಡಾರದ ರಾಯಸದ ಹರಿಯಪ್ಪಗಳು ೨೮ ವರಹಗಳಿಗೆ ಹೆಗ್ಗಡತಿ ಕೊಪ್ಪದ ಹಳ್ಳಿಯನ್ನು ಪಡೆದುಕೊಂಡು ಮಲೆಯಾಳ ಮಠದ ವಿಶ್ವನಾಥದೇವರ ನಂದಾದೀಪಕ್ಕೆ ಮತ್ತು ತಮ್ಮ ತಾಯಿ ತಿಮ್ಮಮ್ಮನವರಿಗೆ ಶಾಶ್ವತವಾಗಿ

ಬ್ರಹ್ಮಲೋಕ ಪ್ರಾಪ್ತವಾಗಬೇಕೆಂದು ಭೂಮಿಯನ್ನು ಕ್ರಯ ಮಾಡಿದರ ಬಗ್ಗೆ ಮಾಹಿತಿ ಇದೆ.[೪೯] ಶೃಂಗೇರಿ ಮಠದ ಶ್ರೀನರಸಿಂಹಭಾರತೀ ಒಡೆಯರು ಯೋಗಸಾಮ್ರಾಜ್ಯವನ್ನು ಆಳುತ್ತಿರುವ ಕಾಲದಲ್ಲಿ ಶೃಂಗೇರಿಯ ದಂಡುಶೆಟ್ಟಿ ಶ್ರೀ ಮಲ್ಲಿಕಾರ್ಜುನ ದೇವರ ಸನ್ನಿಧಿಯಲ್ಲಿ ೭೨ ಮಂದಿ ಬ್ರಾಹ್ಮಣರಿಗೆ ಛತ್ರವನ್ನು ನೀಡಿದುದರ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ.[೫೦]

ಅಗ್ರಹಾರಗಳಲ್ಲಿದ್ದ ಪುರೋಹಿತಶಾಹಿವರ್ಗವು ವೇದ, ಶಾಸ್ತ್ರ, ಪಂಚಾಂಗ ಮತ್ತಿತರ ಕ್ಷೇತ್ರಗಳಲ್ಲಿ ಪಾಂಡಿತ್ಯ ಹೊಂದಿದ್ದರಿಂದ ಅವರು ಶೂದ್ರವರ್ಗಕ್ಕೆ ಸೇರಿದ ಆಡಳಿತಗಾರರ ವಂಶಾವಳಿ ಮತ್ತು ಪ್ರಶಸ್ತಿಗಳನ್ನು ರಚಿಸಿ ಅವರನ್ನು ಸೂರ್ಯವಂಶ ಮತ್ತು ಚಂದ್ರವಂಶಗಳಿಗೆ ಹೋಲಿಸುವುದು ಹಾಗೂ ಪೌರಾಣಿಕ ವ್ಯಕ್ತಿ/ನಾಯಕರೊಂದಿಗೆ ಹೋಲಿಕೆ ಮಾಡುವ ಅಥವ ಸಂಬಂಧ ಬೆಳೆಸುವ ಮುಖಾಂತರ ಆಳುವ ವರ್ಗದ ಸ್ಥಾನಮಾನಗಳನ್ನು ಕಾನೂನುಬದ್ಧ ಮಾಡುವುದರ ಜೊತೆಗೆ ಅವುಗಳನ್ನು ಪಾವಿತ್ರ್ಯಗೊಳಿಸಿ ಅಂದಿನ ಸಮಾಜವನ್ನು ತಮ್ಮ ನಿಯಂತ್ರಣ ಕ್ಕೊಳಪಡಿಸಿಕೊಂಡರು.

ಸಾಮಾನ್ಯವಾಗಿ ಆಳ್ವಿಕೆ ನಡೆಸಿದ ಅರಸು ಮನೆತನಗಳು ತಮ್ಮ ವಂಶವನ್ನು ಪೌರಾಣಿಕವಾಗಿ ಚಿತ್ರಿಸಿಕೊಳ್ಳುವ ಮೂಲಕ ರಾಜಪ್ರಭುತ್ವ ಮತ್ತು ಧರ್ಮಪ್ರಭುತ್ವಕ್ಕೂ ಸಂಬಂಧವನ್ನು ಕಲ್ಪಿಸಿ ವ್ಯವಸ್ಥೆಯಲ್ಲಿ ಮೇರುಸ್ಥಾನವನ್ನು ಹಾಗೂ ಸಾಮಾಜಿಕ ನಿಯಂತ್ರಣವನ್ನು ತರುವ ಪ್ರಯತ್ನ ಮಾಡಿದ್ದಾರೆ. ಈ ಕಾರಣಕ್ಕಾಗಿಯೇ ತಮ್ಮ ರಾಜಧಾನಿಯನ್ನು ನೆಲೆವೀಡು, ಅಧಿಷ್ಠಾನ ಎಂತಲೂ, ದೇವಾಲಯಗಳ ನಿರ್ಮಾಣವನ್ನು ಪುಣ್ಯಕಾರ್ಯವೆಂದು ಕರೆದಿದ್ದಾರೆ. ಇದಕ್ಕಾಗಿಯೇ ಕಿಗ್ಗ ಶಾಸನವೊಂದರಲ್ಲಿ 'ಕಲ್ಯಾಣದ ನೆಲೆವೀಡಿನೊಳ ಸುಖ ಸಂಕಥಾ ವಿನೋದದಿಂದ ರಾಜ್ಯಂಗೆಯ್ಯುತ್ತಿರೆ,' ಎಂಬ ಮಾಹಿತಿ ಇದೆ.[೫೧] ಉದಾ:- ಕದಂಬರ ಮೂಲ ಪುರುಷ ಈಶ್ವರನೆಂದೂ, ಶಿವನ ಬೆವರಹನಿಯಿಂದ ಕೆಳಗೆ ಬಿದ್ದು ಕದಂಬವಂಶ ಸ್ಥಾಪನೆಯಾಯಿತೆಂದು, ಸಾಂತರರ ರಾಜ್ಯವು ಮೂಲಪುರುಷನಾದ ಜಿನದತ್ತನಿಗೆ ನೊಕ್ಕಿಯಬ್ಬೆ ಕರುಣಿಸಿದ ಸ್ಥಳ ಹೊಂಬುಜ ಎಂದೂ, ಗಂಗರ ರಾಜ್ಯಸ್ಥಾಪನೆಗೆ ಸಿಂಹನಂದಿಯು ಕಾರಣವೆಂದು ಹೇಳಲಾಗುತ್ತದೆ.

ದೇವಾಲಯಗಳು ಮತ್ತು ಮಠಗಳ ಸಂಕೀರ್ಣದಲ್ಲಿಯೇ ಶಾಸನಗಳನ್ನು ನೆಡಿಸುವ ಪರಿಪಾಠವಿದ್ದು ಇಲ್ಲಿಗೆ ಆಗಮಿಸುವ ಜನರು ಅವುಗಳನ್ನು ಓದಿ ಅರ್ಥೈಸಿಕೊಳ್ಳುತ್ತಿದ್ದರು.ಆ ಮೂಲಕ ರಾಜಪ್ರಭುತ್ವವು ಮತ್ತು ಪುರೋಹಿತಶಾಹಿವರ್ಗ ಜನರ ಮೇಲೆ ತನ್ನ ನಿಯಂತ್ರಣವನ್ನು ಹೊಂದಿತ್ತು. ಶಾಸನಗಳನ್ನು ಬರೆಯುವವರು ಬ್ರಾಹ್ಮಣವರ್ಗದವರಾಗಿದ್ದು ಶಾಪಾಶಯ ಮತ್ತು ಪುಣ್ಯಾಶಯಗಳನ್ನು ನಿರೂಪಿಸುವುದರೊಂದಿಗೆ ಮೇಲ್ವರ್ಗದ ಹಿತವನ್ನು ಕಾಪಾಡುತ್ತಿದ್ದರು. ದಾನಗಳನ್ನು ರಕ್ಷಿಸದಿದ್ದರೆ ಅಥವಾ ಅಪಹರಿಸಿದರೆ 'ಕಾಶಿಯಲ್ಲಿ ಕಪಿಲೆಯನ್ನೂ ಬ್ರಾಹ್ಮಣರನ್ನೂ ಕೊಂದ ಪಾಪಕ್ಕೆ ಹೋಹರು' ಎಂಬ ಶಾಪಾಶಯವನ್ನು, ಪರದತ್ತಾಂದ್ವಿಗುಣಂ ಪುಣ್ಯಂ ಪರದತ್ತಾಯಂಪಾಲನಂ, ಪರದತ್ತಾಪಹರೇಣ ಸ್ವದತ್ತಂ ನಿಷ್ಫಲಂ ಭವೇತ್[೫೨] ಎಂಬಂತಹ

ಪುಣ್ಯಾಶಯಗಳನ್ನು, ಸಂಸ್ಕೃತ ಭಾಷೆಯಲ್ಲಿ ಶ್ಲೋಕಗಳನ್ನು ಶಾಸನಗಳಲ್ಲಿ ಕೆತ್ತಿಸಿರುವುದನ್ನು ಇದನ್ನು ನೋಡಿದಾಗ ಕೇವಲ ಮೇಲ್ವರ್ಗದ ರಕ್ಷಣೆ ಹಾಗೂ ಹಿತವನ್ನು ಕಾಪಾಡಿರುವುದು, ಜನಸಾಮಾನ್ಯರನ್ನು ಶಾಸನಗಳಲ್ಲಿ ನಿರ್ಲಕ್ಷಿಸಿರುವುದನ್ನು ಗಮನಿಸಿದಾಗ ಕೇವಲ ಪುರೋಹಿತ ಶಾಹಿಯು ಪಾಪ–ಪುಣ್ಯದ ಮೂಲಕ ಜನರನ್ನು ನಿಯಂತ್ರಿಸಿ, ದೇವಾಲಯ ಮತ್ತು ಮಠಗಳ ನಿರ್ಮಾಣಕ್ಕೆ ಪೂರಕ ಅಂಶವನ್ನು ನೀಡಿದರು ಎಂಬುದು ಅರ್ಥವಾಗುತ್ತದೆ.

ಅಂದಿನ ಮಠ ದೇವಾಲಯಗಳನ್ನು ಇಂದಿನ ಮಠ ದೇವಾಲಯಗಳಿಗೆ ಹೋಲಿಕೆ ಮಾಡಿ ತುಲನಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಅಂದು ಅವುಗಳು ಧರ್ಮರಕ್ಷಣೆಯ ಸೋಗಿನಲ್ಲಿ ಪುರೋಹಿತಶಾಹಿ, ಭೂಮಾಲೀಕರು, ಶ್ರೀಮಂತರು ರಾಜಪ್ರಭುತ್ವದ ಮುಷ್ಠಿಯಲ್ಲಿದ್ದವು ಎಂಬುದಾಗಿಯೂ, ಇಂದಿನ ಕೆಲವೊಂದು ಮಠ ಮತ್ತು ದೇವಾಲಯಗಳು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ರಂಗದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವುದನ್ನು ಗುರುತಿಸಬಹುದು. ವಿವಿಧ ಕಾಲಘಟ್ಟಗಳಲ್ಲಿ ಪ್ರಬಲವಾಗಿ ತಮ್ಮ ಅಸ್ತಿತ್ವವನ್ನು ಕಂಡುಕೊಂಡಂತಹ ತೀರ್ಥಮುತ್ತೂರು ಮಠ, ಕವಲೇದುರ್ಗದ ಮಠ, ಮಳಲಿಮಠ, ಮುನಿವೃಂದಮಠ, ಶೃಂಗೇರಿ ಮಠ, ಬಗ್ಗುಂಜಿಮಠ, ಶ್ರೀರಾಮಚಂದ್ರಪುರಮಠ, ಅಕ್ಷೋಭ್ಯಮಠ, ಮಲೆಯಾಳಮಠ, ಭಂಡಿಗಡಿ ಮಠ, ಹರಿಹರಪುರ ಮಠ, ಇತ್ಯಾದಿಗಳು ಶಾಸನೋಕ್ತವಾಗಿ ಉಲ್ಲೇಖವಾಗಿವೆ. ಆದರೆ ಪ್ರಸ್ತುತ ಕೆಲವೊಂದು ಮಠಗಳು ಜೀರ್ಣೋದ್ಧಾರಗೊಂಡು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಮ್ಮ ಪ್ರಾಧಾನ್ಯತೆ ಯನ್ನು ಉಳಿಸಿಕೊಂಡು ಬಂದಿವೆ. ಹಾಗೆಯೇ ಕೆಲವೊಂದು ಮಠಗಳು ಹೇಳಹೆಸರಿಲ್ಲದಂತೆ ನಶಿಸಿಹೋಗಿವೆ. ಉದಾ: ಬಗ್ಗುಂಜಿಮಠ. ರಾಜಾಶ್ರಯದ ಕೃಪೆಯಲ್ಲಿದ್ದ ಮಠಗಳು ಅಂದು ಯಥೇಚ್ಛವಾದ ದಾನಧರ್ಮಗಳನ್ನು ಸ್ವೀಕರಿಸಿ ಪ್ರಬಲಶಕ್ತಿಯಾಗಿ ಬೆಳೆದಿದ್ದರೆ ಇಂದಿನ ಮಠಗಳು ತಮ್ಮ ಭೂಮಾಲೀಕತ್ವದಿಂದ ವಿಹೀನವಾಗಿ ಭಕ್ತರ ದಾನದಲ್ಲಿಯೇ ಅಭಿವೃದ್ಧಿಯಾಗುತ್ತಾ ಬಂದಿವೆ. ಗೇಣಿ ಕಾಯಿದೆಯ ಅನ್ವಯ ಮಠಗಳು ತಮ್ಮೆಲ್ಲ ಭೂಮಿಯನ್ನು ಕಳೆದುಕೊಂಡು ಅತ್ಯಲ್ಪ ಜಮೀನಿನೊಂದಿಗೆ ತನ್ನ ಸೀಮಿತ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ತೀರ್ಥಮುತ್ತೂರು ಮಠ

ತೀರ್ಥಹಳ್ಳಿಯಿಂದ ೨೦ ಕಿ.ಮೀ. ದೂರದಲ್ಲಿರುವ ಈ ಮಠವು ಕುಪ್ಪಾರು, ಕಾರಬೈಲು, ಉಳ್ಳೂರು, ರಟ್ಟಾಡಿ ಮತ್ತು ಎರನಾಡ ಎಂಬ ಐದು ಗ್ರಾಮಗಳ ಬ್ರಾಹ್ಮಣರ ಕೇಂದ್ರವಾಗಿ 'ಪಂಚಗ್ರಾಮ ಬ್ರಾಹ್ಮಣ' ಸಮಾಜ ಎಂದು ಕರೆಯಲ್ಪಟ್ಟಿದೆ. ಈ ಮಠದ ಮಧ್ಯದಲ್ಲಿ ಶ್ರೀಗೋಪಾಲಕೃಷ್ಣ ದೇವರ ಗರ್ಭಗುಡಿ, ಸಂಕಲ್ಪಮಂಟಪ, ಪೂರ್ವದಲ್ಲಿ ಉಪ್ಪರಿಗೆ ಇರುವ ಹೆಬ್ಬಾಗಿಲು ಉಳಿದ ಮೂರು ಕಡೆ ಪೌಳಿ ಇದೆ. ಕ್ರಿ.ಶ. ೧೩೮೮ರಲ್ಲಿ ಪ್ರಥಮ ಗುರುಗಳಾದ ಶ್ರೀ ಜ್ಞಾನೇಂದ್ರ ಭಾರತಿಗಳಿಗೆ ಆಗಿನ ಶೃಂಗೇರಿಯ ೧೩ನೇ ಜಗದ್ಗುರುಗಳಾದ ಶ್ರೀಶ್ರೀಶ್ರೀ ಚಂದ್ರಶೇಖರ ಭಾರತಿಯವರು ಸನ್ಯಾಸದೀಕ್ಷೆಯನ್ನು ಕೊಟ್ಟರು. ಸುಮಾರು ೮೦ ಮುಡಿ ಅಕ್ಕಿ ಗೇಣಿ ಬರುವ ಭೂಮಿಯನ್ನು ಈ ಮಠ ಹೊಂದಿದ್ದು ಭಕ್ತರುಗಳ ನೆರವಿನಿಂದ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು.

ಕಾರಣಾಂತರಗಳಿಂದ ಗುರುಗಳಾದ ಜ್ಞಾನೇಂದ್ರಭಾರತಿಯವರು ಕೆಲವು ಶಿಷ್ಯರ ಜೊತೆಗೂಡಿ ತೀರ್ಥಹಳ್ಳಿ ತಾಲ್ಲೂಕಿನ ಚಕ್ಕೋಡಬೈಲು ಎಂಬಲ್ಲಿರುವ ಹಂಗಾರಬೈಲಿಗೆ ವಲಸೆ ಹೋಗಿ ಅಲ್ಲಿ ಮಠವನ್ನು ಕಟ್ಟಿಕೊಂಡಿದ್ದರು. ಕ್ರಿ.ಶ. ೧೪೦೮ರಲ್ಲಿ ಆಗಿನ ಗುರುಗಳಾಗಿದ್ದ ಮಾಧವ ಭಾರತಿಗಳಿಗೆ ಆದ ಸ್ವಪ್ನ ಸೂಚನೆಯಂತೆ ಪಶ್ಚಿಮವಾಹಿನಿ ತುಂಗಾನದಿಯ ತೀರದಲ್ಲಿ ಯೋಗನರಸಿಂಹ ಸ್ವಾಮಿಯ ದೇವಾಲಯವನ್ನು ಕ್ರಿ.ಶ. ೧೪೭೦ರಲ್ಲಿ ಸ್ಥಾಪಿಸಿದರು. ೪೦೦ ಎಕರೆಗಿಂತಲೂ ಹೆಚ್ಚು ಭೂಮಿಯನ್ನು ಹೊಂದಿರುವ ಮಠ 'ಶ್ರೀ ತೀರ್ಥಮುಕ್ತಾಪುರಿ ಸಂಸ್ಥಾನಂ' ಎಂಬ ಹೆಸರಿನಿಂದ ಮೆರೆದಾಡಿತು.

ಕ್ರಿ.ಶ. ೧೯೭೧ರಲ್ಲಿ ಬಂದ ಭೂಸುಧಾರಣೆ ಕಾನೂನಿನ ಅನ್ವಯ ಗೇಣಿ ಆದಾಯ ಸಂಪೂರ್ಣವಾಗಿ ನಿಂತುಹೋಯಿತು.ಈ ಮಠದಲ್ಲಿ ಪೂಜೆ ಪುನಸ್ಕಾರ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುವುದು ಕಷ್ಟವಾಯಿತು.ಈಗ ಮಠ ಶಿಥಿಲವಾಗಿದ್ದು, ಸರ್ಕಾರದ ನೆರವಿನಿಂದ ಕೆಲವು ಭಾಗಗಳು ದುರಸ್ತಿಗೊಂಡಿವೆ. ಹಾಗೆಯೇ ಈ ಮಠದಲ್ಲಿ ಗುರುಪರಂಪರೆಯು ನಿಂತುಹೋಗಿದ್ದು ಯಾವುದೇ ಅಭಿವೃದ್ಧಿಕಾರ್ಯಗಳು ನಡೆಯುತ್ತಿಲ್ಲ.

ತೀರ್ಥಮುತ್ತೂರು ಮಠದ ಕೆಲವು ಶಾಸನಗಳು ಈಗಾಗಲೇ ಪ್ರಕಟಗೊಂಡಿವೆ. ಬಿ.ಎಲ್. ರೈಸ್‌ರವರು ಸಂಪಾದಿಸಿದ 'ಎಪಿಗ್ರಾಫಿಯಾ ಕರ್ನಾಟಿಕ' ಸಂಪುಟ ಏಳರಲ್ಲಿ ಒಂದು ಶಿಲಾಶಾಸನ ಮತ್ತು ಒಂದು ತಾಮ್ರಶಾಸನವು ಪ್ರಕಟವಾಗಿದೆ. ನಂತರ 'ಎಪಿಗ್ರಾಫಿಯಕರ್ನಾಟಿಕ' ಹೊಸ ಸಂಪುಟದಲ್ಲಿ ಪಿ.ಎನ್. ನರಸಿಂಹಮೂರ್ತಿಯವರು ಪ್ರಕಟಿಸಿದ ಒಂಬತ್ತು ಶಾಸನಗಳಿವೆ.

ಇತ್ತೀಚೆಗೆ ಜಿ.ಕೆ ದೇವರಾಜಸ್ವಾಮಿಯವರು ಎರಡು ತಾಮ್ರಶಾಸನಗಳನ್ನು ಪತ್ತೆಹಚ್ಚಿದ್ದು ಅವು ಮಠದ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲುತ್ತವೆ. ಎಲ್ಲಾ ಶಾಸನಗಳಲ್ಲೂ ರಾಜರು ತೀರ್ಥಮುತ್ತೂರು ಸಂಸ್ಥಾನದ ಜ್ಞಾನೇಂದ್ರ ಭಾರತಿ ಶ್ರೀಪಾದಂಗಳಿಗೆ ನೀಡಿದ ದಾನದ ವಿವರಣೆ ಇದೆ.

ಶೃಂಗೇರಿಯ ಜಗದ್ಗುರುಗಳಾದ ಶ್ರೀಶ್ರೀಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ಸಮಕಾಲೀನರಾದ ಶ್ರೀಶ್ರೀಶ್ರೀ ನರಸಿಂಹ ಭಾರತೀ ಸ್ವಾಮಿಗಳು ಪ್ರಥಮ ಪೀಠಾಧಿಪತಿಗಳಾಗಿ ತೀರ್ಥಮುತ್ತೂರಿನ ಗುರು ಪರಂಪರೆ ಆರಂಭಗೊಂಡಂತೆ ತಿಳಿದುಬರುತ್ತದೆ.

ಕವಲೇದುರ್ಗ: ಮಹಾಮಹತ್ತಿನ ಭುವನಗಿರಿ ಸಂಸ್ಥಾನ ಮಠ

ತೀರ್ಥಹಳ್ಳಿ ತಾಲ್ಲೂಕು ಮಲೆನಾಡಿನ ಸಹ್ಯಾದ್ರಿ ಪರ್ವತದ ಸಾಲಿನಲ್ಲಿ ಮೈದಳೆದಿದೆ. ಕೆಳದಿನಾಯಕರ ನಾಲ್ಕನೆ ರಾಜಧಾನಿ ಕವಲೇದುರ್ಗ ಬೆಟ್ಟಗುಡ್ಡಗಳಿಂದ, ದಟ್ಟವಾದ ಅರಣ್ಯದಿಂದ ಕೂಡಿದ ದುರ್ಗಮ ಪ್ರದೇಶವಾಗಿದ್ದು ಯುದ್ಧ ಕಾಲದಲ್ಲಿ ರಕ್ಷಣೆಯ ತಾಣವಾಗಿದ್ದಿತು. ಕವಲೇದುರ್ಗವು ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿ ಬೆಳೆದು ಇತಿಹಾಸದ ಪುಟದಲ್ಲಿ ಅಜರಾಮರವಾಗಿದೆ. ಆರು ನೂರು ವರ್ಷಗಳ ಹಿಂದೆ ಕೆಳದಿಯ ನಾಯಕರ ಕಾಲದಲ್ಲಿ ಪ್ರಾರಂಭವಾಗಿರಬಹುದಾದ ಮಠವು ಹಿರಿಯ ಮಠವಾಗಿ ರೂಪುಗೊಂಡಿದೆ.

ಸೋಮಶೇಖರ ನಾಯಕನ ಕೊಲೆಯಾದ ನಂತರ ಅವನ ಮಡದಿ ಚೆನ್ನಮ್ಮ ರಾಜ್ಯದ ಆಡಳಿತವನ್ನು ವಹಿಸಿಕೊಂಡ ಬಳಿಕ ರಾಜರುಗಳು ಮತ್ತು ಪ್ರಧಾನಮಂತ್ರಿಗಳ ಒತ್ತಾಯದ ಮೇರೆಗೆ ಪಟ್ಟಾಭಿಷೇಕಕ್ಕೆ ಸಿದ್ಧತೆಯಲ್ಲಿದ್ದಾಗ, ತನ್ನವರಿಂದಲೇ ತೊಂದರೆಗೆ ಸಿಲುಕಿಕೊಂಡಾಗ ಧೃತಿಗೆಡದೆ ಯುದ್ಧದ ಸಕಲ ಸಿದ್ಧತೆಗಳನ್ನು ಮಾಡಿಕೊಂಡು ಬಸವಲಿಂಗ ನಾಯಕನನ್ನು ಸೆರೆಹಿಡಿದು ವೆಂಕಟಪ್ಪನಾಯಕನನ್ನು ಎದುರಿಸಲು ಶಕ್ತಿ ಇದ್ದರೂ ತಂತ್ರ ಬಳಸಿ ಬಿದನೂರು ಕೋಟೆಯಿಂದ ಕಣ್ಮರೆಯಾಗಿ ಕವಲೇದುರ್ಗದಲ್ಲಿ ಬಂದು ನೆಲೆಸುತ್ತಾಳೆ. ಕೆಳದಿ ಚೆನ್ನಮ್ಮನ ಸಾಹಸ ಹೋರಾಟಕ್ಕೆ ಕವಲೇದುರ್ಗದ ಈ ಮಠ ದಾರಿದೀಪವಾಗಿದೆ. ರಾಣಿಚೆನ್ನಮ್ಮ ಕವಲೇದುರ್ಗದ ಕೋಟೆಯಲ್ಲಿ ಇರುವ ತನಕವೂ ರಾಣಿಯ ಯೋಗಕ್ಷೇಮವನ್ನು ಮಠವೇ ನೋಡಿಕೊಂಡಿದೆ. ರಾಣಿಯ ಪ್ರತಿನಿತ್ಯದ ಧಾರ್ಮಿಕ ಪಾದೋದಕ ಹಾಗೂ ತೀರ್ಥಪ್ರಸಾದಗಳು ಮಠದಿಂದಲೇ ಹೋಗುತ್ತಿದ್ದವು.

ಪರಂಪರೆ: ಮಹಾಮಹತ್ತಿನ ಮಠವು ಉಜ್ಜಯನಿಯ ಶಾಖಾಮಠವಾಗಿದ್ದು ಶಿಷ್ಯವರ್ಗದ ಪರಂಪರೆಯನ್ನು ಹೊಂದಿದೆ. ಈ ಮಠದ ಆವರಣದಲ್ಲಿ ಒಟ್ಟು ಆರು ಗದ್ದುಗೆಗಳನ್ನು ಗುರುತಿಸಬಹುದಾಗಿದ್ದರೂ ಶ್ರೀ ವೃಷಭಲಿಂಗ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಒಂದನ್ನು ಹೊರತುಪಡಿಸಿ ಉಳಿದ ಗದ್ದುಗೆಗಳು ಯಾರ ಹೆಸರಲ್ಲಿ ನಿರ್ಮಿತವಾಗಿವೆ ಎಂದು ಗುರುತಿಸಲು ಸಾಧ್ಯವಾಗುತ್ತಿಲ್ಲ. ಈ ಮಠದ ಪರಂಪರೆಯಲ್ಲಿ ಬರುವ ಸ್ವಾಮಿಗಳು ದೇಶ ಸಂಚಾರಕ್ಕೆ ಹೋದಕಡೆ ಲಿಂಗೈಕ್ಯರಾಗಿದ್ದಾರೆ. ಇದರಿಂದಾಗಿ ಮಠದ ಪರಂಪರೆಯ ಗುರುಗಳ ಹೆಸರನ್ನು ನಿಖರವಾಗಿ ಹೇಳಲು ಆಧಾರಗಳು ಲಭ್ಯವಿಲ್ಲದಾಗಿದೆ.

ಕಲ್ಲು ಮತ್ತು ಮರಗಳ ದಿಮ್ಮಿಗಳಿಂದ ನಿರ್ಮಿಸಲ್ಪಟ್ಟಿರುವ ಮಠವು ಒಂದು ಕಲಾಕೃತಿಯಾಗಿ ರೂಪುಗೊಂಡಿದೆ. ಈ ಮಠದ ಆವರಣದಲ್ಲಿ ಶ್ರೀ ಗುರು ಮರುಳಸಿದ್ದೇಶ್ವರರ ತೋರುಗದ್ದುಗೆ, ಶಕ್ತಿ ಮಾತೆ ಚೌಡೇಶ್ವರಿ, ಈಶ್ವರಲಿಂಗ, ವೀರಭದ್ರ ದೇವಾಲಯಗಳು ಸ್ಥಾಪನೆಗೊಂಡಿವೆ. ಇಂತಹ ಧಾರ್ಮಿಕ ಪರಿಸರದಲ್ಲಿ ಶ್ರಾವಣಮಾಸ, ಕಾರ್ತಿಕಮಾಸ, ಶಿವರಾತ್ರಿಗಳನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಅಪಾರ ಭಕ್ತಸಂಪತ್ತನ್ನು ಹೊಂದಿರುವ ಮಠದಲ್ಲಿ ಎಪ್ಪತ್ತೆರಡು ತಾಮ್ರಶಾಸನಗಳು, ಶಿಲಾಶಾಸನಗಳು ದೊರೆತಿದ್ದು ಕೆಳದಿ ಅರಸರ ಇತಿಹಾಸದ ಮೇಲೆ ಭವ್ಯ ಬೆಳಕನ್ನು ಚೆಲ್ಲುತ್ತವೆ. ಮಠದ ಆವರಣದಲ್ಲಿರುವ ಪ್ರಾಚೀನ ವಸ್ತುಗಳು ಮಠದ ಕಲ್ಪನೆಯನ್ನು ಜೀವಂತವಾಗಿರಿಸಿವೆ.

ಕೆಳದಿ ಅರಸರ ಕಾಲದಲ್ಲಿ ಮಠಕ್ಕೆ ೨೦೦ ಎಕರೆ ಜಮೀನನ್ನು ದಾನವಾಗಿ ನೀಡಲಾಗಿತ್ತು. ಆದರೆ ಭೂಸುಧಾರಣೆ ಕಾಯ್ದೆಯಲ್ಲಿ ಈ ಆಸ್ತಿಯೆಲ್ಲ ಹೋಗಿ ಕೇವಲ ಐದು ಎಕರೆ ಮಾತ್ರ ಉಳಿದುಕೊಂಡಿದೆ. ಈ ಆಸ್ತಿಯನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯ ಬರುವಂತೆ ಮಾಡಿಕೊಂಡಿದ್ದಾರೆ. ಪ್ರಸ್ತುತ ಮಠದ ಸ್ವಾಮಿಗಳು ಡಾ. ಸಿದ್ಧಲಿಂಗ ಶಿವಾಚಾರ್ಯರು.

ಮಳಲಿಮಠ

ಈ ಮಠವು ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೧೫.೮ ಕಿ.ಮೀ. ದೂರದಲ್ಲಿದೆ. ಶ್ರೀ ರಂಭಾಪುರಿ ಪೀಠದ ಖಾಸಾ ಶಾಖಾಮಠವಾಗಿ ಶ್ರೀ ಮಠವು ಸ್ಥಾಪನೆಯಾಗಿದ್ದು ಶಿಷ್ಯಪರಂಪರೆಯಿಂದ ಬೆಳೆದುಬಂದಿದೆ. ಈ ಮಠಕ್ಕೆ ಸಂಬಂಧಿಸಿದಂತೆ ಎರಡು ತಾಮ್ರ ಶಾಸನಗಳು ಪ್ರಕಟವಾಗಿವೆ. ಮಳಲಿ ಶಾಸನ(೨೦೨)ದಲ್ಲಿ ರಾಣಿ ಚೆನ್ನಮ್ಮಾಜಿಯು ೬೪ ವರಹ, ಗದ್ಯಾಣ ಮತ್ತು ಒಂದು ಅಡ್ಡಕ್ಕೆ ಭೂಮಿಯನ್ನು ಬೀಡೆಯ ತಿಮ್ಮಪ್ಪನಿಂದ ಕ್ರಯಮಾಡಿ ಮಳಲಿಯ ನಾಗಾರ್ಜುನದೇವರ ಮಠಕ್ಕೆ ದಾನಮಾಡಿದ ವಿವರಣೆ ಇದೆ.[೫೩]

ಇನ್ನೊಂದು ಶಾಸನ (೨೦೩) ಕೆಳದಿ ಅರಸ ಭದ್ರಪ್ಪ ನಾಯಕನು ೧೦೨ ವರಹಗಳಿಗೆ ಭದ್ರಾಪುರದ ಹಳ್ಳಿಯಲ್ಲಿ ಭೂಕ್ರಯಮಾಡಿ ಮಳಲಿಯ ನಾಗಾರ್ಜುನ ಮಠಕ್ಕೆ ದಾನಕೊಟ್ಟಿದ್ದರ ಬಗ್ಗೆ ಮಾಹಿತಿಯನ್ನು ನೀಡುತ್ತದೆ.[೫೪]

ಪುರಾತನ ಕಾಲದಲ್ಲಿ ನಿರ್ಮಿಸಿರುವ ಕಲ್ಲಿನ ಕಟ್ಟಡದಲ್ಲಿ ಸೋಮೇಶ್ವರಲಿಂಗ ದೇವಾಲಯವನ್ನು ಸುತ್ತುವರೆದು ಮಠವನ್ನು ನಿರ್ಮಿಸಿದ್ದಾರೆ. ಮಠದ ಆವರಣದಲ್ಲಿ ರೇಣುಕಮಂದಿರ, ಚೌಡೇಶ್ವರಿ ಮಂದಿರ, ವೀರಭದ್ರೇಶ್ವರ ಮಂದಿರಗಳಿವೆ.

ಈ ಮಠದಲ್ಲಿ ಪ್ರತಿದಿನ ತ್ರಿಕಾಲಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷಪೂಜೆ, ನವರಾತ್ರಿಯಲ್ಲಿ ಒಂಬತ್ತು ದಿನ ವಿಶೇಷ ಪೂಜೆ, ದೀಪಾವಳಿ, ಕಾರ್ತಿಕ ದೀಪೋತ್ಸವದ ಎಳೆಯಾಷ್ಟಮಿ ವಿಶೇಷವಾಗಿ ಜರುಗುತ್ತವೆ. ಪ್ರಸ್ತುತ ಶ್ರೀ ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ಮಠಾಧಿಪತಿಗಳಾಗಿದ್ದು, ಪ್ರಗತಿಪರ ಚಿಂತಕರಾದ ಇವರು ಮಠವು ಸಮಾಜಮುಖಿಯಾಗಿ ಬೆಳೆಯುವಂತೆ ಮಾಡಿದ್ದಾರೆ.

ಮುನಿವೃಂದ ಮಠ

ಭೀಮನಕಟ್ಟೆ ತುಂಗಾ ಮತ್ತು ಮಾಲತಿ ನದಿಗಳ ಸಂಗಮ ಕ್ಷೇತ್ರ. ದ್ರೌಪದಿಗಾಗಿ ತುಂಗಾನದಿಗೆ ಕಟ್ಟೆಯನ್ನು ಕಟ್ಟುವ ಕಾರ್ಯವನ್ನು ಭೀಮ ಪ್ರಾರಂಭ ಮಾಡಿದಾಗ ಶ್ರೀ ಕೃಷ್ಣನ ಪ್ರತಿಜ್ಞೆಯಂತೆ ಅರ್ಧದಲ್ಲೆ ನಿಲ್ಲಿಸಿ ಕೆಳಭಾಗದ ಜನರಿಗೆ ಮತ್ತು ದೂರ್ವಾಸ ಹಾಗೂ ಅಗಸ್ತ್ಯ ಮುನಿಗಳಿಗೆ ನದಿಯನೀರನ್ನು ಬಳಸಲು ಅನುವು ಮಾಡಿಕೊಟ್ಟನು. ಪ್ರಸ್ತುತ ಮಠವು ಸಾಕಷ್ಟು ದುರ್ಬಲವಾಗಿದ್ದು ಭೂಸುಧಾರಣೆಗೂ ಮುನ್ನ ಅಪಾರ ಜಮೀನನ್ನು ಹೊಂದಿದ್ದು ನಂತರ ಕಾಲದಲ್ಲಿ ತನ್ನೆಲ್ಲ ಆಸ್ತಿಯನ್ನು ಕಳೆದುಕೊಂಡು ಈಗ ಕೇವಲ ಎರಡು ಎಕರೆ ಜಮೀನಿನಲ್ಲಿ ನಿರ್ವಹಣೆ ಮಾಡಿಕೊಂಡು ಬರುತ್ತಿದೆ.

ಶೃಂಗೇರಿ ಮಠ

ಮಠವೆಂದರೆ ವಿದ್ಯಾರ್ಥಿಗಳು ಮೊದಲಾದವರು ಅಂದರೆ ಅಧ್ಯಾಪಕರು ವಾಸ ಮಾಡುವ ಮತ್ತು ಅಧ್ಯಯನ ಮಾಡುವ ಸಂಸ್ಥೆ ಎಂಬುದು ಸಾಮಾನ್ಯವಾದ ನಿರ್ವಚನ. ಶಂಕರಾಚಾರ್ಯರು

ಸ್ಥಾಪಿಸಿದ ಮಠಗಳು ಈ ನಿರ್ವಚನವನ್ನು ದೂರಮಾಡಿ ಜನರಲ್ಲಿ ಧರ್ಮ ಪ್ರವೃತ್ತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕೆಂದು ಮತ್ತು ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ ಅದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡುವ ಕಾರ್ಯಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಿವೆ. ಶ್ರೀ ಆದಿಶಂಕರಾಚಾರ್ಯರು ರಚಿಸಿದರೆಂದು ಹೇಳಲಾಗಿರುವ 'ಮಠಾಮ್ನಾಯಿ ಮಹಾನುಶಾಸನಂ' ಎಂಬ ಕೃತಿಯಲ್ಲಿ ಮಠಗಳಿಗೆ ಸಂಬಂಧಪಟ್ಟಂತೆ ಆಮ್ನಾಯ ಸಂಪ್ರದಾಯ, ಕ್ಷೇತ್ರದೇವತೆ, ಪ್ರಥಮಾಚಾರ್ಯ, ತೀರ್ಥಬ್ರಹ್ಮಚಾರಿ, ವೇದಮಹಾವಾಕ್ಯ, ಭೌಗೋಳಿಕ ಸೀಮೆ, ಯೋಗಪಟ್ಟ ಮೊದಲಾದ ಅಂಶಗಳನ್ನು ಧರಿಸುವುದರ ಸಮರ್ಥನೆ ಮುಂತಾದ ಅಂಶಗಳು ಇವೆ. ಇಲ್ಲಿ ಮುಖ್ಯವಾಗಿ ಮಠಾಧಿಪತಿಗಳು ರಾಜರುಗಳಂತೆಯೇ ಪ್ರಜೆಗಳಿಂದ ತೆರಿಗೆಯನ್ನು ಸಂಗ್ರಹಿಸುವ ಮತ್ತು ಧರ್ಮಮಾರ್ಗದಲ್ಲಿ ನಡೆಯದವರಿಗೆ ದಂಡವನ್ನು (ಶಿಕ್ಷೆಯನ್ನು) ವಿಧಿಸುವ ಅಧಿಕಾರವನ್ನು ಹೊಂದಿರುತ್ತಾರೆಂದು ಹೇಳಲಾಗುತ್ತದೆ.

ಶೃಂಗೇರಿ ಮಠವು ಹಲವಾರು ಶಾಸನಗಳಲ್ಲಿ ಉಲ್ಲೇಖವಾಗಿದೆ.ಕ್ರಿ.ಶ.೧೪ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ಶೃಂಗೇರಿ ಮಠವು ಸಂಸ್ಥಾನವಾಗಿ ಪರಿವರ್ತನೆ ಹೊಂದಿತ್ತಲ್ಲದೆ, ಶೃಂಗೇರಿ ಜಹಗೀರು ಕೂಡ ಕ್ರಮವಾಗಿ ರೂಪುಗೊಂಡಿತು.ಶೃಂಗೇರಿ ಮಠಕ್ಕೆ ಗ್ರಾಮಗಳು, ಭೂಮಾನ್ಯಗಳು ದಾನವಾಗಿ ಬರತೊಡಗಿದವು. ವಿದ್ಯಾರಣ್ಯರ ಪ್ರೇರಣೆಯಿಂದ ಹಕ್ಕ ಮತ್ತು ಬುಕ್ಕರು ವಿಜಯನಗರ ಪ್ರತಿಷ್ಠಾಪನೆ ಮಾಡಿದ್ದರಿಂದ ಇವರು ಮತ್ತು ಶೃಂಗೇರಿ ಮಠದ ನಡುವೆ ಸಂಬಂಧ ಬೆಳೆಯಿತು. ಕ್ರಿ.ಶ. ೧೩೪೬ರ ಶಾಸನದಲ್ಲಿ ವೀರಹರಿಯಪ್ಪವೊಡೆಯರು, ಕಂಪಣವೊಡೆಯರು, ಬುಕ್ಕಂಣೊಡೆಯರು, ಮಾರಪ್ಪೊಡೆಯರು, ಮುದ್ದವೊಡೆಯರು, ಅಳಿಯ ಬಲ್ಲಪ್ಪಡಣಾಯಕರೂ, ಕುಮಾರ ಸೊವಂಣೊಡೆಯರು, ಮುಖ್ಯಮಿವೊಳಗಾದವರು ಭಾರತೀತೀರ್ಥ ಶ್ರೀ ಪಾದಂಗಳು, ಅವರ ಶಿಷ್ಯಾದಿಗಳು, ಆಸಿಂಗೇರಿಯ ತೀರ್ಥವಾಸದಲು ಅನುಷ್ಠಾನ ಮಾಡಿಕೊಂಡಿದ್ದಕ್ಕೆ ಎಂದು ಹೇಳಿ ಕಿಕ್ಕುಂದ ನಾಡೊಳಗಣ ಹೊನ್ನವಳ್ಳಿ, ಬಬ್ಬಿ, ಹರಾವರಿ, ಬಳ್ಳೂರು, ಅಂಬಲೂರು, ಬೆಳಂದೂರು, ಕೈಮಲೆಯ ಹೊಸೂರು, ಹೆದ್ಸೆ, ಹಳಕ ಮುಂತಾದ ಗ್ರಾಮಗಳನ್ನು ಮಠಕ್ಕೆ ದಾನವಿತ್ತ ಅಂಶ ತಿಳಿಸುತ್ತದೆ. ಕ್ರಿ.ಶ. ೧೩೫೬ರ ಶಾಸನದಲ್ಲಿ ಶ್ರೀ ವೀರ ಬುಕ್ಕಣೊಡೆಯ ಶೃಂಗೇರಿಗೆ ದಯಮಾಡಿಸಿ ಶ್ರೀ ವಿದ್ಯಾತೀರ್ಥಶ್ರೀಪಾದಂಗಳ ದರ್ಶನಂಗೈದು ಆ ಮಠದ ಪರಿಚಾರ್ಯಕ್ಕೂ, ಯತಿಗಳ ಭಿಕ್ಷಕ್ಕೆ ಧಾರಾಪೂರ್ವಕವಾಗಿ ಕೆಲವು ಗ್ರಾಮಗಳನ್ನು ದಾನ ನೀಡಿದ ವಿವರಣೆ ಇದೆ.[೫೫]

ಕ್ರಿ.ಶ. ೧೩೮೬ರ ಮೇ ೨೬ರ ಶನಿವಾರದಂದು ಶ್ರೀ ವಿದ್ಯಾರಣ್ಯ ಶ್ರೀಪಾದಂಗಳು ಪರಿಪೂರ್ಣರಾದರು. ಅವರ ಹೆಸರಿನಲ್ಲಿ ವಿಜಯನಗರ ಅರಸ ೨ನೇ ಹರಿಹರ ವಿದ್ಯಾರಣ್ಯಪುರ ವೆಂಬ ಅಗ್ರಹಾರವನ್ನು ಸ್ಥಾಪನೆ ಮಾಡಿದ್ದಾನೆ.

ವಿಜಯನಗರ ಚಕ್ರವರ್ತಿಗಳಲ್ಲಿ ಪ್ರಖ್ಯಾತನಾದ ಶ್ರೀಕೃಷ್ಣದೇವರಾಯನು ಕಳಿಂಗದ ವೀರಗಜಪತಿ ಯೊಡನೆ ಕ್ರಿಶ ೧೫೧೫-೧೬ರಲ್ಲಿ ಯುದ್ಧ ಮಾಡುವ ಪೂರ್ವದಲ್ಲಿ ದ್ವಿತೀಯ ಶ್ರೀಪುರುಷೋತ್ತಮ

ಭಾರತೀ ಸ್ವಾಮಿಗಳಿಂದ ಆಶೀರ್ವಾದ ಪಡೆದನೆಂದು ತಾಳಕೋಡು ಶಾಸನದಲ್ಲಿ ಹೇಳಿದೆ.[೫೬] ಅನಂತರ ಶೃಂಗೇರಿ ಗುರುಗಳ ಶಿಷ್ಯರಾದ ವಿದ್ಯಾರಣ್ಯರನ್ನು ಹಂಪೆಗೆ ಬರಮಾಡಿಕೊಂಡು ಮಠಕ್ಕೆ ಬಾರಕೂರು ರಾಜ್ಯದಲ್ಲಿಯ ಹುಯ್ಯಾರ ಮತ್ತು ಅದಕ್ಕೆ ಹೊಂದಿಕೊಂಡ ಕೊಪ್ಪಲುಗಳನ್ನು ದಾನ ಮಾಡಿದನು. ಹಾಗೂ ಗುರುಗಳ ಆಜ್ಞೆಯನ್ನು ಅಂಗೀಕರಿಸಬೇಕೆಂದು ರಾಯರ ಗ್ರಾಮಾಧಿಕಾರಿಗಳಿಗೆ ಆಜ್ಞೆ ಹೊರಡಿಸಿದ ಸಂಗತಿ ತಿಳಿದು ಬರುತ್ತದೆ.[೫೭] ಕೃಷ್ಣದೇವರಾಯನ ನಂತರ ರಾಮರಾಯನ ದುರಾಡಳಿತದಿಂದ ಕ್ರಿ.ಶ. ೧೫೬೫ರ ವಿಜಯನಗರ ಪತನಾನಂತರ ದೇಶದಲ್ಲಿ ಅರಾಜಕತೆಯುಂಟಾಯಿತು. ಇದರಿಂದಾಗಿ ಶೃಂಗೇರಿ ಸಂಸ್ಥಾನದ ಕೆಲವು ಪ್ರದೇಶಗಳು ಕೈಬಿಟ್ಟು ಹೋದವು.[೫೮]

ಕೆಳದಿ ಅರಸರು ವಿಶೇಷವಾಗಿ ಶೃಂಗೇರಿ ಸಂಸ್ಥಾನದ ರಕ್ಷಣೆಗೆ ಕಂಕಣಬದ್ಧರಾದರು. ಭದ್ರಪ್ಪನಾಯಕ, ಸೋಮಶೇಖರನಾಯಕ, ರಾಣಿಚೆನ್ನಮ್ಮಾಜಿ, ಬಸವಪ್ಪನಾಯಕ, ಇಮ್ಮಡಿ ಸೋಮಶೇಖರ ನಾಯಕ ಮೊದಲಾದವರೆಲ್ಲರೂ ಶೃಂಗೇರಿ ಮಠವನ್ನು ರಕ್ಷಣೆ ಮಾಡಿದುದಲ್ಲದೆ ಅನೇಕ ಉಂಬಳಿಗಳನ್ನು ನೀಡಿದ್ದರು. ಕಳಸದ ಬೈರವರಸ ಇಬಾರಿ ಮಠದ ಮೇಲೆ ಆಕ್ರಮಣ ಮಾಡಿದಾಗಲೂ ಕೆಳದಿ ನಾಯಕರು ರಕ್ಷಣೆ ನೀಡಿ ರಕ್ಷಿಸಿರುವುದು ಕೆಳದಿನೃಪವಿಜಯದಿಂದ ತಿಳಿದುಬರುತ್ತದೆ.[೫೯]

ಮೈಸೂರು ಒಡೆಯರಿಗೂ ಶೃಂಗೇರಿ ಪೀಠಕ್ಕೂ ಉತ್ತಮವಾದ ಸಂಬಂಧ ಮೊದಲಿನಿಂದಲೂ ಇದ್ದುದರಿಂದ ಶೃಂಗೇರಿ ಜಹಗೀರಿನ ಸ್ವತಂತ್ರ ಅಸ್ಥಿತ್ವ ಉಳಿದುಕೊಂಡು ಬಂದಿತು. ಮುಮ್ಮಡಿ ಕೃಷ್ಣರಾಜ ಒಡೆಯರು ಪ್ರವಾಸದಲ್ಲಿದ್ದ ಶ್ರೀ ನರಸಿಂಹ ಭಾರತಿ ಸ್ವಾಮಿಗಳಿಗೆ ಪತ್ರ ಬರೆದು ತಮ್ಮ ವರ್ಧಂತಿಗೂ, ಚಾತುರ್ಮಾಸ್ಯಕ್ಕೂ ಮೈಸೂರಿಗೆ ಬರಬೇಕೆಂದು ವಿಜ್ಞಾಪಿಸಿಕೊಳ್ಳುತ್ತಾರೆ. ಆಗ ಶ್ರೀಗಳು ಅಲ್ಲಿಗೆ ದಯಮಾಡಿಸಿದ್ದರಿಂದ ಶ್ರೀಮಠಕ್ಕೆ ತುಂಬಾ ಅನುಕೂಲವಾಯಿತೆಂದು ಹೇಳಿದ್ದಾರೆ.[೬೦]

ಟಿಪ್ಪುಸುಲ್ತಾನನು ಶೃಂಗೇರಿ ಮಠದೊಂದಿಗೆ ಅವಿನಾಭಾವ ಸಂಬಂಧಹೊಂದಿದ್ದನು ಎಂಬುದಕ್ಕೆ ಘಟನೆಯೊಂದು ಉಲ್ಲೇಖಾರ್ಹ. ಕ್ರಿ.ಶ. ೧೭೯೧ರಲ್ಲಿ ಲಂಬಾಣಿ ಮತ್ತು ಪಿಂಡಾರೆಯವರು ರಘುನಾಥರಾವ್ ಪಟವರ್ಧನ್ ಎಂಬುವವನ ನೇತೃತ್ವದಲ್ಲಿ ಶೃಂಗೇರಿಯನ್ನು ಲೂಟಿ ಮಾಡಿದರು. ಸಾಕಷ್ಟು ಸಂಪತ್ತನ್ನು ಲೂಟಿ ಮಾಡಿ ಅನೇಕ ಅರ್ಚಕರನ್ನು ಕೊಲ್ಲಲಾಯಿತು. ಈ ವಿಷಯ ತಿಳಿದ ಟಿಪ್ಪು ಸಚ್ಚಿದಾನಂದ ಭಾರತಿಸ್ವಾಮಿಗಳಿಗೆ ಪತ್ರದಲ್ಲಿ ಇಂಥಾ ಸ್ಥಳಕ್ಕೆ ಈಗ್ಗೆ ದ್ರೋಹಿತನಾ ಮಾಡಿದ ಮೇಲೆ ಹಸದ್ಭಿ: ಕ್ರಿಯತೇ ಕರ್ಮರುರದ್ದಿರನು ಭೂಯತೇ ಎಂಬ ಶ್ಲೋಕಾರ್ಥ ಪ್ರಕಾರ ಕಲಿಯುಗದಲ್ಲಿ ಮಾಡಿದ್ದನ್ನು ತ್ವರೆಯಿಂದಲೇ ಅವರು ಅನುಭವಿಸಬೇಕಾದೀತು ಇತ್ಯಾದಿಯಾಗಿ ಬರೆದು ಈ ಶಾರದಮ್ಮನವರ ಪ್ರತಿಷ್ಠೆ, ದೇವರ ಸೇವೆಗಳಿಗೆ ನಗದು, ದವಸಗಳನ್ನು, ಪಲ್ಲಕ್ಕಿ, ಆನೆಗಳನ್ನು ಕಳುಹಿಸಿದನು.[೬೧]

ಶೃಂಗೇರಿ ಮಠವು ಒಂದು ಸಂಸ್ಥಾನವಾಗಿ ಪೋಲಿಸ್, ಅಬ್ಕಾರಿ, ನೀರಾವರಿ ಮೊದಲಾದ ಎಲ್ಲಾ ಅಧಿಕಾರಗಳನ್ನು ಹೊಂದಿ ರೂಪುಗೊಂಡಿದ್ದು ಕ್ರಿ.ಶ. ೧೮ನೇ ಶತಮಾನದ ಉತ್ತರಾರ್ಧದಿಂದ ನಂತರದ ಅನೇಕ ಕಾರ್ಯಗಳು ಸಾಧನೆಗಳು ಅಚ್ಚರಿ ಮೂಡಿಸುತ್ತವೆ.

ಶ್ರೀಮಠದಿಂದ ಇಡೀ ತಾಲ್ಲೂಕಿನ ವ್ಯವಸ್ಥಾ ಮೋಜಣಿ (ಸರ್ವೆ ಮತ್ತು ಸೆಟಲ್‌ಮೆಂಟ್) ಮಾಡಿಸಿ ಪ್ರತಿಯೊಬ್ಬರ ಹಕ್ಕುಗಳನ್ನೂ ದಾಖಲಿಸಲಾಯಿತು.ರೆಕಾರ್ಡ್ ಆಫ್ ರೈಟ್ಸ್ ಅನ್ನು ಜಾರಿಗೆ ತಂದ ಮೊತ್ತಮೊದಲ ತಾಲ್ಲೂಕುಗಳಲ್ಲಿ ಶೃಂಗೇರಿ ಒಂದು. ಆಗಿನ ಮೈಸೂರು ಸರ್ಕಾರದ ನಿಯಂತ್ರಣದಲ್ಲಿ ಅಡಮಾನ ಬ್ಯಾಂಕ್ ಕಾರ್ಯ ನಡೆಸುತ್ತಿತ್ತು. ಕ್ರಿ.ಶ. ೧೮೮೪ರಲ್ಲಿ ಶೃಂಗೇರಿಯಲ್ಲಿ ಪುರಸಭೆಗೆ ನಾಮಕರಣಗೊಂಡ ಸದಸ್ಯರ ಮೂಲಕ ಪ್ರಾರಂಭಿಸಲು ಶ್ರೀಮಠವು ಸರ್ಕಾರಕ್ಕೆ ಯೋಜನೆ ಸಲ್ಲಿಸಿತು. ಸರ್ಕಾರವು ಬೇರೆ ತಾಲ್ಲೂಕುಗಳಲ್ಲಿದ್ದಂತೆ ಪುರಸಭೆಯನ್ನು ಮಂಜೂರು ಮಾಡಿತಾದರೂ ಶ್ರೀಮಠದ ಡೆಪ್ಯೂಟಿ ಅಮಲ್ದಾರ್‌ರ ನಿರ್ದೇಶನದಂತೆ ನಡೆಯುವಂತೆ ಏರ್ಪಡಿಸಿತು. ಕ್ರಿ.ಶ. ೧೯೫೨ರಲ್ಲಿ ಮೊದಲ ಸಾರ್ವಜನಿಕ ಅಧ್ಯಕ್ಷರು ಚುನಾಯಿತರಾಗಿದ್ದು, ಶ್ರೀಮಠವು ವಸೂಲು ಮಾಡುತ್ತಿದ್ದ 'ಸಾಯರ್' ಸ್ಥಾನದಲ್ಲಿ 'ಅಕ್ಟ್ರಾಯ್' ವಸೂಲಿ ಕ್ರಿ.ಶ. ೧೮೯೩ರಿಂದ ಪ್ರಾರಂಭವಾಯಿತು.ಈ ಆದಾಯದಲ್ಲಿ ಶ್ರೀಮಠ ಮತ್ತು ಪುರಸಭೆಗಳಿಗೆ ಅರ್ಧರ್ಧ ಪಾಲು ಇರುತ್ತಿತ್ತು.

ಕ್ರಿ.ಶ. ೧೯೦೩ರವರೆಗೆ ಶ್ರೀಮಠವೇ ಬೇರೆ ತಾಲ್ಲೂಕುಗಳಲ್ಲಿದ್ದಂತೆ ಕಂದಾಯ ವಸೂಲು ಮಾಡುತ್ತಿತ್ತು.ಆ ವರ್ಷ ತಾಲ್ಲೂಕು ಬೋರ್ಡ್ ಸ್ಥಾಪನೆಗೊಂಡು ಕ್ರಿ.ಶ. ೧೯೨೭ರವರೆಗೆ ಕಾರ್ಯ ಮಾಡಿತು. ಕ್ರಿ.ಶ. ೧೯೨೯ರಲ್ಲಿ ಸಂಪರ್ಕ, ಪೋಲೀಸ್, ನ್ಯಾಯಾಲಯ, ವೈದ್ಯಕೀಯ ಕ್ಷೇತ್ರಗಳನ್ನು ಮೈಸೂರು ಸರ್ಕಾರ ವಹಿಸಿಕೊಂಡಿತು.ಜಿಲ್ಲಾ ಬೋರ್ಡ್‌ಗೆ ಈ ಜವಾಬ್ದಾರಿಗಳನ್ನು ವಹಿಸಿಕೊಡಲಾಯಿತು. ಜಹಗೀರು ಇದ್ದಾಗ ಶೃಂಗೇರಿ ತಾಲ್ಲೂಕಿನ ಆಡಳಿತ ವ್ಯವಸ್ಥೆ ಹೇಗಿತ್ತು ಎಂಬುದಕ್ಕೆ ಕ್ರಿ.ಶ. ೧೯೪೬ರ ಜನಗಣತಿಯ ಅಂಕಿ ಅಂಶಗಳು ಅಧ್ಯಯನಾರ್ಹವಾಗಿದೆ.

ಜಹಗೀರಿನ ಆಡಳಿತವಿದ್ದಾಗಲೇ ಶೃಂಗೇರಿಯಲ್ಲಿ ಪ್ರೌಢಶಾಲೆ ಆರಂಭವಾಯಿತು. ಶಾಲೆಯನ್ನು ಪುರಸಭೆಯು ನಡೆಸುತ್ತಿದ್ದು ಸ್ಥಳವನ್ನು ಮುಫತ್ತಾಗಿ ನೀಡಿದ್ದಲ್ಲದೇ ಶ್ರೀಮಠದಿಂದ ೨೮,೦೦೦.೦೦ ರೂ.ಗಳ ಅನುದಾನವನ್ನು ಕೊಡಲಾಗಿತ್ತು.ಶ್ರೀಮಠದ ಅಧಿಕಾರಿಗಳು ಅಧ್ಯಕ್ಷರಾಗಿದ್ದು ನಿಯಮಿತ ಪಾಲುಗಾರಿಕೆಯ ಶ್ರೀ ಶಾರದಾ ಬ್ಯಾಂಕ್ ಲಿಮಿಟೆಡ್ ಪ್ರಾರಂಭವಾಗಿದ್ದೂ ಜಹಗೀರಿನ ಕಾಲದಲ್ಲೇ. ತರೀಕೆರೆ, ಜಯಪುರ, ಕೊಪ್ಪ ಮತ್ತು ಕಳಸಗಳಲ್ಲಿ ಶಾಖೆಗಳನ್ನು ಹೊಂದಿದ್ದ ಈ ಬ್ಯಾಂಕ್ ಕ್ರಿ.ಶ. ೧೯೬೦ರಲ್ಲಿ ಕರ್ನಾಟಕ ಬ್ಯಾಂಕ್‌ನಲ್ಲಿ ವಿಲೀನಗೊಂಡಿತು. ಜಹಗೀರನ ಆಡಳಿತದಲ್ಲಿ ಸಹಕಾರಾಂದೋಲನಕ್ಕೂ ಗಮನಹರಿಸಿ ಕ್ರಿ.ಶ. ೧೯೧೪ರಲ್ಲಿ ಸಹಕಾರ ಸಂಘವೊಂದು ಆರಂಭ ವಾಯಿತು. ತಾಲ್ಲೂಕು ಮಟ್ಟದಲ್ಲಿ ಆರಂಭವಾದ ಸಹಕಾರ ಸಂಘ ಇದೇ ಮೊದಲನೆಯದು.

ಕ್ರಿ.ಶ. ೧೯೫೮ರಲ್ಲಿ ಶೃಂಗೇರಿ ಜಹಗೀರು ರದ್ಧತಿ ಶಾಸನ ಬಂದ ನಂತರ ಶೃಂಗೇರಿ ತಾಲ್ಲೂಕಿನ ಆಡಳಿತ ಸಂಪೂರ್ಣವಾಗಿ ಸರ್ಕಾರದ ನಿಯಂತ್ರಣಕ್ಕೆ ಬಂತು. ಕ್ರಿ.ಶ. ೧೯೬೦-೬೧ರಲ್ಲಿ ಕೊಪ್ಪ ತಾಲ್ಲೂಕಿಗೆ ಸೇರಿದ ಕಿಗ್ಗಾ ಹೋಬಳಿಯನ್ನು ಶೃಂಗೇರಿ ತಾಲ್ಲೂಕಿಗೆ

ಸೇರಿಸಲಾಯಿತು. ಹೀಗೆ ಎರಡು ಹೋಬಳಿಗಳಿರುವ ಈ ತಾಲ್ಲೂಕು ರಾಜ್ಯದಲ್ಲೇ ಅತಿ ಚಿಕ್ಕ ತಾಲ್ಲೂಕಾಗಿದೆ.ಸರ್ಕಾರದ ನಿಯಂತ್ರಣಕ್ಕೆ ಬಂದ ಮೇಲೆ ಈ ತಾಲ್ಲೂಕಿನ ಆಡಳಿತ ಆಯಾಯ ಸಮಯ, ಕಾನೂನು, ವ್ಯವಸ್ಥೆಗಳನ್ನು ಅವಲಂಬಿಸಿ ನಡೆಯುತ್ತಿದೆ.[೬೨]

ಒಟ್ಟಾರೆಯಾಗಿ ಶೃಂಗೇರಿ ಇತಿಹಾಸಕ್ಕೆ ಸಂಬಂಧಪಟ್ಟ ಆಕರಗಳನ್ನು ಪರಿಶೀಲಿಸಿದಾಗ ಶೃಂಗೇರಿಯ ಇತಿಹಾಸ, ಪರಂಪರೆ, ಧಾರ್ಮಿಕ ಹಿನ್ನೆಲೆ ಮತ್ತು ಆಡಳಿತಾತ್ಮಕ ಅಂಶಗಳು ತಿಳಿಯುತ್ತವೆ. ಮಲೆನಾಡಿನ ನಿಸರ್ಗ ಸೌಂದರ್ಯದ ನಡುವೆ ಸ್ಥಾಪನೆಯಾಗಿರುವ ಶೃಂಗೇರಿ ಮಠ ಅವಿಚ್ಛಿನ್ನ ಪರಂಪರೆಯನ್ನು ಹೊಂದಲು ಮುಖ್ಯ ಕಾರಣ ಅದು ಆಯಾ ಕಾಲಕ್ಕೆ ಆಳುವ ವರ್ಗದೊಡನೆ ಹೊಂದಿದ್ದ ಸೌಹಾರ್ದಯುತ ಸಂಬಂಧಗಳು ಮುಖ್ಯ ಕಾರಣವಾಗಿರ ಬಹುದು.

ಬಗ್ಗುಂಜಿ ಮಠ

ಕೊಪ್ಪದಿಂದ ೧೩ ಕಿ.ಮೀ. ದೂರದಲ್ಲಿರುವ ಬಗ್ಗುಂಜಿ ಮಠ ಸಂಪೂರ್ಣವಾಗಿ ಪಾಳು ಬಿದ್ದಿದ್ದು, ಭಗ್ನಾವಶೇಷಗಳಿಂದ ಕೂಡಿದೆ. ಒಂದು ಕಾಲದಲ್ಲಿ ಬಗ್ಗುಂಜಿ ಸೀಮೆಯು ಕಳಸ–ಕಾರ್ಕಳ ಭೈರರಸ ಒಡೆಯರ ಆಳ್ವಿಕೆಗೆ ಒಳಪಟ್ಟ ನಾಡಾಗಿತ್ತು. ವೀರಭೈರರಸ ಒಡೆಯನ ಸಹೋದರಿ ಕಾಳಲದೇವಿ ಬಗ್ಗುಂಜಿ ಸೀಮೆಯನ್ನು ಆಳುತ್ತಿದ್ದಾಗ ತಮ್ಮ ಕುಲದೇವರಾದ ಕಲ್ಲುಬಸ್ತಿಯ ಪಾರ್ಶ್ವನಾಥ ತೀರ್ಥಂಕರರಿಗೆ ನಿತ್ಯಧರ್ಮಕ್ಕೆ ಬಿಟ್ಟ ಭೂದಾನ ವಿವರಣೆಯು ಶಾಸನದಲ್ಲಿದೆ.[೬೩] ಬಗ್ಗುಂಜಿ ಮಠದಲ್ಲಿದ್ದ ತಾಮ್ರಶಾಸನದಲ್ಲಿ ಕೆಳದಿ ಅರಸ ಸೋಮಶೇಖರ ನಾಯಕನು ರಾಮಪ್ಪನ ಮೂಲಕ ಬರೆಯಿಸಿ ಕಳುಹಿಸಿದ ಕ್ರಮದಲ್ಲಿ ಬಗ್ಗುಂಜಿ ಸೀಮೆಯ ಸೀತಾನದಿಯ ತೀರದಲ್ಲಿ ಕೆಂಪಿನ ಮರಿದೇವನ ವಿನಂತಿಯಮೇರೆಗೆ ಕೆಂಚವ್ವ ಕಟ್ಟಿಸಿದ ವಿರಕ್ತ ಮಠಕ್ಕೆ ನೀಡಿದ ಭೂದಾನದ ವಿವರಣೆ ಇದೆ೬೪. ಆದರೆ ಬಗ್ಗುಂಜಿ ಮಠದ ಇತಿಹಾಸದ ಅಧ್ಯಯನಕ್ಕೆ ಆಕರಗಳ ಕೊರತೆಯಿದೆ. ಈಗ ಬಗ್ಗುಂಜಿ ಮಠ ಕೇವಲ ಅವಶೇಷವಾಗಿ ಮಾತ್ರ ಉಳಿದಿದೆ.

ರಾಮಚಂದ್ರಪುರ ಮಠ-ತೀರ್ಥಹಳ್ಳಿ

ತುಂಗಾನದಿಯ ತಟದ ಸುಂದರ ಪರಿಸರದ ತೀರ್ಥಹಳ್ಳಿಯ ರಥಬೀದಿಯಲ್ಲಿರುವ ಶ್ರೀ ರಾಮಚಂದ್ರ ಮಠದ ಆರಾಧ್ಯದೇವರು ಶ್ರೀ ಲಕ್ಷ್ಮೀನರಸಿಂಹ. ಶ್ರೀಮಠದ ಪಕ್ಕದಲ್ಲಿಯೇ ಕ್ಷತ್ರಿಯ ಕುಲಾಂತಕ ಪರಶುರಾಮನಿಂದ ಸಂಸ್ಥಾಪಿತವಾದ ಶ್ರೀರಾಮೇಶ್ವರರ ದೇವಾಲಯವಿದೆ. ಈ ಮಠದ ಬಗೆಗಿನ ತೀರ್ಥಹಳ್ಳಿಯ ಮೂರು ಶಾಸನಗಳನ್ನು ರಾಮಚಂದ್ರಪುರ ಮಠದ ಮುಂಬಾಗಿಲಿನಲ್ಲಿ ನೆಡಲಾಗಿದೆ. ಮೊದಲನೇ ಶಾಸನದಲ್ಲಿ ತೀರ್ಥಹಳ್ಳಿಯ ಮಠದ ಗಂಗಾಧರಪುರಿ ಶ್ರೀಪಾದಂಗಳ ಶಿಷ್ಯರು ಅಮರೇಂದ್ರಪುರಿ ಶ್ರೀ ಪಾದಂಗಳೂ ಬೊಬ್ಬಿಯ ಶಂಕರಾನಾರಾಯಣನ ಮಗ ವಿಠಪ್ಪಗೆ ಕೊಟ್ಟ ಭೂದಾನ ಶಿಲಾಶಾಸನದ ವಿವರಣೆ ಇದೆ.[೬೫]

ಎರಡನೇ ಶಾಸನವು (ಕ್ರಿ.ಶ. ೧೪೩೧)ಸ್ವಲ್ಪ ತ್ರುಟಿತವಾಗಿದ್ದು ವಿಜಯ ನಗರದ ಅರಸ ಎರಡನೇ ದೇವರಾಯನು ಈಶ್ವರ ಸ್ವರೂಪಿ ಗಂಗಾಧರಪುರಿ ಶ್ರೀ ಪಾದರಿಗೆ ಧರ್ಮಛತ್ರಕ್ಕಾಗಿ ಭೂದಾನಮಾಡಿದ ವಿವರಣೆ ಇದೆ.[೬೬]

ಮೂರನೇ ಶಾಸನದಲ್ಲಿ (ಕ್ರಿ.ಶ. ೧೪೨೨) ಆರಗವೇಂಠೆಯ ತೀರ್ಥಹಳ್ಳಿಯ ದೇವೇಂದ್ರಪುರಿ ಶ್ರೀ ಪಾದಂಗಳ ಶಿಷ್ಯರಾದ ಗಂಗಾಧರಪುರಿಶಿಷ್ಯರು ಬುಕ್ಕರಾಜಪುರದ ರಾಮಣ್ಣರಿಂದ ಹೆನ್ನಂಗಿಯ ಭೂಮಿಯನ್ನು ತೀರ್ಥಹಳ್ಳಿಯ ಶ್ರೀ ರಾಮನಾಥದೇವರು ಶ್ರೀ ನರಸಿಂಹದೇವರ ಸನ್ನಿಧಿಯಲ್ಲಿ ಕ್ರಯಕ್ಕೆ ಪಡೆದುಕೊಂಡಿದ್ದರ ಉಲ್ಲೇಖವಿದೆ.[೬೭]

ಕ್ರಿ.ಶ. ೧೮೫೮ರಲ್ಲಿ ೩೨ನೆಯ ಪೀಠಾಧಿಪತಿಗಳಾದ ಶ್ರೀ ಮದ್ರಾಘವೇಂದ್ರಭಾರತೀ ಶ್ರೀಗಳವರು ಶ್ರೀಮಠದ ಆಡಳಿತ ವ್ಯವಸ್ಥೆಯನ್ನು ವಹಿಸಿಕೊಂಡ ನಂತರ ಶ್ರೀಮಠವು ರಾಮಚಂದ್ರಪುರಮಠದಲ್ಲಿ ಲೀನವಾಯಿತು. ನಂತರ ಈ ಮಠಕ್ಕೆ ಪ್ರತ್ಯೇಕ ಪೀಠಾಧಿಪತಿಗಳು ನಿಯುಕ್ತಿಯಾಗಲಿಲ್ಲ. ಇದೇ ಪರಿಸರದಲ್ಲಿ ತುಂಗಾನದಿಯ ತಟದಲ್ಲಿರುವ ಕುರುವಳ್ಳಿಯ ಶ್ರೀ ಗಂಗಾ–ವಿಶ್ವೇಶ್ವರ ದೇವಾಲಯದ ನಿರ್ವಹಣಾ ಕಾರ್ಯವು ಸಹ ಇದೇ ಮಠಕ್ಕೆ ಸೇರಿದ್ದಾಗಿದೆ. ಈ ಮಠದಲ್ಲಿ ಕಾರ್ತಿಕ ಅಮಾವಸ್ಯೆಯಂದು ವಿಶೇಷ ದೀಪೋತ್ಸವ, ಶ್ರೀ ನೃಸಿಂಹಜಯಂತಿ ಉತ್ಸವ ಹಾಗೂ ಶ್ರೀ ಶ್ರೀ ಅಮರೇಂದ್ರಪುರಿಗಳ ಆರಾಧನೆ ಮೊದಲಾದ ಧಾರ್ಮಿಕ ಕಾರ್ಯಗಳು ವಾರ್ಷಿಕವಾಗಿ ನಡೆಯುತ್ತವೆ.

ಪ್ರಸ್ತುತ ಹೊಸನಗರ ಶ್ರೀ ರಾಮಚಂದ್ರಪುರದ ೩೬ನೆಯ ಪೀಠಾಧಿಪತಿಗಳಾದಶ್ರೀ ಮದ್ರಾಘವೇಂದ್ರಭಾರತಿ ಸ್ವಾಮಿಗಳ ಅಧೀನದಲ್ಲಿ ಮಠದ ಆಡಳಿತ ನಿರ್ವಹಣೆ ನಡೆಯುತ್ತಿದ್ದು ಆ ಮಠದ ಒಂದು ಶಾಖಾ ಮಠವಾಗಿ ಮುನ್ನೆಡೆದುಕೊಂಡು ಬರುತ್ತಿದೆ. ಮಠವು ಭೂಸುಧಾರಣೆ ಗಿಂತ ಮೊದಲು ಸಾಕಷ್ಟು ಜಮೀನನ್ನು ಹೊಂದಿದ್ದು ನಂತರ ಕಾಯ್ದೆಯಿಂದ ತನ್ನೆಲ್ಲ ಜಮೀನುಗಳನ್ನು ಕಳೆದುಕೊಂಡು ಈಗ ಅತ್ಯಲ್ಪ ಜಮೀನಿನೊಂದಿಗೆ ಆರ್ಥಿಕ ಸಂಕಷ್ಟದೊಂದಿಗೆ ತನ್ನ ಸೀಮಿತ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಅಕ್ಷೋಭ್ಯ ಮಠ–ಬಾಳಗಾರು

ಮಧ್ವಾಚಾರ್ಯರ ಶಿಷ್ಯರಲ್ಲೊಬ್ಬರಾದ ಅಕ್ಷೋಭ್ಯತೀರ್ಥರು ಕ್ರಿ.ಶ. ೧೩೫೦ರಲ್ಲಿ ಈ ಮಠವನ್ನು ಸ್ಥಾಪಿಸಿದರು. ಇದು ಪ್ರಮುಖ ವೈಷ್ಣವ ಮಠಗಳಲ್ಲಿ ಒಂದು. ಅಕ್ಷೋಭ್ಯತೀರ್ಥರು ಇಲ್ಲಿನ ತುಂಗಾನದಿಯ ದಂಡೆಯ ಮೇಲೆ ತಪೋನಿರತರಾಗಿದ್ದು, ಜ್ಞಾನೋದಯದ ನಂತರ ಈ ವೈಷ್ಣವ ಮಠವನ್ನು ಆರಂಭಿಸಿದರು. ಈ ಮಠದ ಬಗ್ಗೆ ಬಾಳಗಾರು ಶಾಸನದಲ್ಲಿ ಸಾಕಷ್ಟು ಮಾಹಿತಿಯಿದೆ. ಇದರಲ್ಲಿ ಆರಗದ ಅಧಿಪತಿಯಾಗಿದ್ದ ವಿಠಣ ಒಡೆಯನು ಬಾಳಗಾರನ್ನು ಅಯೋಧ್ಯಪುರವೆಂದು ಮತ್ತು ಸುಲಭತೀರ್ಥ ಶ್ರೀಪಾದರಿಗೆ ಅಯೋಧ್ಯಪುರವನ್ನು ೨೨ ಪಾಲುಗಳಾಗಿ ವಿಂಗಡಿಸಿ ೨೨ ವೃತ್ತಿವಂತರಿಗೆ ಹಂಚಲಾಯಿತು ಎಂದಿದೆ.[೬೮] ಮಠದಲ್ಲಿ ಶ್ರೀರಾಮನವಮಿ, ನೃಸಿಂಹ ಜಯಂತಿ, ಅಕ್ಷೋಭ್ಯತೀರ್ಥರ ಆರಾಧನೆಗಳು ವಿಜೃಂಭಣೆಯಿಂದ

ನಡೆಯುತ್ತವೆ. ಭೂಸುಧಾರಣೆಯ ಕಾನೂನಿಗಿಂತ ಮೊದಲು ಹಲವಾರು ಹಳ್ಳಿಗಳನ್ನು ಒಳಗೊಂಡ ಭೂಮಿಯನ್ನು ಹೊಂದಿದ್ದಿತು ಆದರೆ ಭೂಸುಧಾರಣೆ ಕಾನೂನಿನ ನಂತರ ತನ್ನಲ್ಲಿದ್ದ ಆಸ್ತಿಯನ್ನು ಕಳೆದುಕೊಂಡು ಈಗ ಕೇವಲ ೮ ರಿಂದ ೧೦ ಎಕರೆಯ ಪ್ರದೇಶ ಭೂಮಿಗೆ ಸೀಮಿತವಾಗಿದೆ.

ಮಲೆಯಾಳ ಮಠ-ತೀರ್ಥಹಳ್ಳಿ

ತೀರ್ಥಹಳ್ಳಿಯ ತುಂಗಾನದಿಯ ದಕ್ಷಿಣ ಭಾಗದಲ್ಲಿ ಪ್ರತಿಷ್ಠಾಪಿತವಾದ ಮಲೆಯಾಳದ ಪ್ರಧಾನ ದೇವರು ವಿಶ್ವನಾಥ. ಆದರೆ ಮಠದ ಬಗ್ಗೆ ಅರಿಯಲು ಆಕರಗಳ ಕೊರತೆಯಿದೆ. ಪ್ರಧಾನವಾಗಿ ಮೂರು ಪ್ರಮುಖ ಶಾಸನಗಳು ಲಭ್ಯವಿದ್ದು ಮಠದ ಬಗ್ಗೆ ಅಲ್ಪ ಮಾಹಿತಿಯನ್ನು ನೀಡುತ್ತವೆ. ಕುರುವಳ್ಳಿಯ ಶಾಸನದಲ್ಲಿ ಅಮರೇಂದ್ರಪುರಿಗಳ ಶಿಷ್ಯರುಗಳೆಂದರೆ ಯಾದವೇಂದ್ರ ಮತ್ತು ದೇವೇಂದ್ರಪುರಿಯೋಗಿಗಳು ಎಂತಲೂ ಹಾಗೂ ಅಮರೇಂದ್ರಪುರಿಗಳವರು ಗಂಗಾಧರಪುರಿ ಯೋಗಿಗಳ ಶಿಷ್ಯರೆಂದು ಹೇಳಿದ್ದು ತೀರ್ಥಹಳ್ಳಿಯ ತುಂಗಾನದಿಯ ದಂಡೆಯ ಮೇಲೆ ನರಸಿಂಹ ದೇವಾಲಯವನ್ನು ಸ್ಥಾಪಿಸಿದ ಬಗ್ಗೆ ಉಲ್ಲೇಖಿಸುತ್ತದೆ. ಮುಂದುವರೆದು ದೇವೇಂದ್ರಪುರಿ ಯೋಗಿಗಳಿಂದ ೬ ಹಳ್ಳಿಗಳನ್ನು ದಾನವಾಗಿ ನೀಡಿದ್ದು ದೇವರ ನಿತ್ಯ ಪೂಜೆ ನಡೆಯಬೇಕೆಂದು ಹೇಳಿದೆ. ಹಾಗೆಯೇ ಮುಂದುವರೆದು ಶಂಕರ ಭಟ್ಟರಿಂದ ಸ್ಥಾಪಿತವಾದ ಛತ್ರಕ್ಕೆ ನೀಡಿದ ಗ್ರಾಮದಾನದ ಉಲ್ಲೇಖವಿದೆ.[೧೯]

ಕುರುವಳ್ಳಿಯ ಇನ್ನೊಂದು ಶಾಸನದಲ್ಲಿ (ಕ್ರಿ.ಶ.೧೫೮೩) ಮಲೆಯಾಳಮಠದ ಅಧಿಪತಿಯಾದ ಅಮರೇಂದ್ರಪುರಿ ಶ್ರೀಪಾದರ ಕೈಯಿಂದ ಚಿನ್ನಭಂಡಾರದ ರಾಯಸದ ಹರಿಯಪ್ಪಗಳು ೭೮ ವರಹಗಳಿಗೆ ಹೆಗ್ಗಡತೀಕೊಪ್ಪದ ಹಳ್ಳಿಯನ್ನು ಪಡೆದುಕೊಂಡು ಮಲೆಯಾಳಮಠದ ವಿಶ್ವನಾಥದೇವರ ನಂದಾದೀಪಕ್ಕೆ ಮತ್ತು ತಮ್ಮ ತಾಯಿ ತಿಮ್ಮಮ್ಮನವರಿಗೆ ಶಾಶ್ವತವಾಗಿ ಬ್ರಹ್ಮಲೋಕ ಪ್ರಾಪ್ತವಾಗಬೇಕೆಂದು ಭೂಮಿಯನ್ನು ಕ್ರಯಮಾಡಿದ ಬಗ್ಗೆ ಉಲ್ಲೇಖವಿದೆ.[೨೦]

ಕುರುವವಳ್ಳಿಯ ಶಾಸನದಲ್ಲಿ ಗಂಗಾಧರಪುರಿ ಶ್ರೀಪಾದರು ಮತ್ತು ಮಲೆಯಾಳ ಮಠದ ಪದ್ಮನಾಭ ಶ್ರೀಪಾದರು ಮಠವನ್ನು ಕಟ್ಟಿಕೊಂಡು ನಡೆಸಿದುದರ ಬಗ್ಗೆ ವಿವರಣೆ ಇದೆ.ಆದರೆ ಸಾಕಷ್ಟು ತೃಟಿತವಾಗಿದ್ದು ಮಾಹಿತಿಯ ಕೊರತೆಯಿದೆ.[೨೧] ಪ್ರಸ್ತುತ ಮಠ ಸಂಪೂರ್ಣವಾಗಿ ಪಾಳುಬಿದ್ದಿದ್ದು ಅವಶೇಷಗಳಿಂದ ಕೂಡಿದೆ.ವಿಶ್ವನಾಥ ಮಂದಿರ ಮಠದ ಮಧ್ಯದಲ್ಲಿದ್ದು ನಿತ್ಯವು ಪೂಜಿಸಲ್ಪಡುತ್ತದೆ. ಇದರ ನಿರ್ವಹಣೆಯು ರಾಮಚಂದ್ರಪುರ ಮಠದ ಅಧೀನದಲ್ಲಿ ನಡೆಯುತ್ತಿದೆ

ಮುನಿಯೂರು ಮಠ : ಭಂಡಿಗಡಿ(ಶಕಟಪುರ)

ಭಂಡಿಗಡಿ ತುಂಗಾನದಿಯ ದಡದಲ್ಲಿರುವ ಪ್ರಮುಖ ಪುಣ್ಯಕೇಂದ್ರ. ಕ್ರಿ.ಶ. ೧೪ನೇ ಶತಮಾನದಲ್ಲಿ ಬದರಿಯಿಂದ ಬಂದ ಶ್ರೀ ಶ್ರೀ ಸತ್ಯತೀರ್ಥ ಮಹಾಸ್ವಾಮಿಗಳಿಂದ ಸ್ಥಾಪಿತವಾದ ಭಂಡಿಗಡಿ ಶಕಟಪುರಂ ಸಂಸ್ಥಾನದ ತೆಂಗಿನಮಠಕ್ಕೆ ಮುನಿಯೂರು ಮಠವೆಂದು ಕರೆಯಲಾಗುತ್ತದೆ

ಶ್ರೀ ಶ್ರೀ ಸತ್ಯತೀರ್ಥ ಮಹಾಸ್ವಾಮಿಗಳವರು ತಪೋನುಷ್ಠಾನಗಳಿಗೆ ಯೋಗ್ಯ ತಾಣವನ್ನು ಅರಸುತ್ತಾ ಯಾತ್ರೆ ಕೈಗೊಂಡರು. ಪವಿತ್ರ ತೀರ್ಥಗಳ ಸ್ನಾನ, ಪುಣ್ಯಕ್ಷೇತ್ರಗಳ ದರ್ಶನದೊಂದಿಗೆ ನಿರಂತರವಾಗಿ ಸಾಗಿದ ಯಾತ್ರೆಯಲ್ಲಿ ನೈಮಿಶಾರಣ್ಯಕ್ಕೆ ಬಂದಾಗ ಶ್ರೀಶ್ರೀ ಸತ್ಯತೀರ್ಥರಿಗೊಂದು ವಿಶಿಷ್ಟ ಕನಸು ಕಂಡಿತು. ತುಂಗಾತೀರಕ್ಕೆ ಹೋಗು ಎಲ್ಲಿ ಶ್ರೀ ಮಹಾವಿಷ್ಣುವಿನ ಆಕಾರ ಸ್ವರೂಪ ಅನುಭವಕ್ಕೆ ಬರುವುದೋ ಅಲ್ಲಿಯೇ ಶ್ರೀ ವಿಷ್ಣುವನ್ನು ಸ್ಥಾಪಿಸು, ಪೂಜಿಸು ಎಂಬ ಅಮೂಲ್ಯ ಸಂದೇಶ ಲಭಿಸಿತು.

ಈತನ್ಮಧ್ಯೆ ಶ್ರೀ ಸತ್ಯತೀರ್ಥರು ದಕ್ಷಿಣ ಭಾರತ ಪ್ರವೇಶಿಸಿದರು ಮೊದಲು ಕಳಸಕ್ಕೆ ಬಂದು ರುದ್ರಪಾದತೀರ್ಥ ಮಠದಲ್ಲಿದ್ದು ಜಪತಪಗಳಲ್ಲಿ ಕೆಲಕಾಲ ಕಳೆದರು. ಅನಂತರ ತುಂಗಾತೀರದ ಶ್ರೀಶಕಟ ಮಹರ್ಷಿಗಳ ತಪೋಭೂಮಿಗೆ ಬಂದರು.ಒಂದು ಸುದಿನ ತುಂಗಾನದಿಯಲ್ಲಿ ಸ್ನಾನ ಮಾಡುವಾಗ ಶ್ರೀಸತ್ಯತೀರ್ಥರ ದಿವ್ಯ ಅನುಭವದಲ್ಲಿ ನೈಮಿಶಾರಣ್ಯದಲ್ಲಿ ಕಂಡ ಕನಸಿನ ಸಾಕ್ಷಾತ್ಕಾರವಾದಂತಾಯಿತು. ಹಾಗಾಗಿ ಇಲ್ಲಿಯೇ ಲಕ್ಷ್ಮೀಪತಿಯನ್ನು ಪ್ರತಿಷ್ಠಾಪಿಸಿ (ಕ್ರಿ.ಶ. ೧೩೩೬) ತಮ್ಮ ಪೀಠದ ಪರಂಪರೆಯನ್ನು ಮುಂದುವರೆಸಿದರು. ನಂತರ 'ಶಕಟಪುರಂ ಸಂಸ್ಥಾನ ಶ್ರೀತೆಂಗಿನಮಠ' ಎಂಬ ಹೆಸರಿನಿಂದ ಪೀಠ ಪ್ರಖ್ಯಾತವಾಯಿತು.ಆ ಪೀಠವೇ ಇಂದು 'ಶ್ರೀಜಗದ್ಗುರು ಬದರಿ ಶಂಕರಾಚಾರ್ಯ ಸಂಸ್ಥಾನ' ಶಕಟಪುರ ಶ್ರೀ ವಿದ್ಯಾಪೀಠ' ಎಂದು ಸುಪ್ರಸಿದ್ಧವಾಗಿರುವುದು. ಈ ರೀತಿ ಶ್ರೀ ಸತ್ಯತೀರ್ಥರಿಂದ ಸ್ಥಾಪಿತವಾದ ಮಠ ವಿಜಯನಗರ ಅರಸರಿಂದ ಪೋಷಿಸಲ್ಪಟ್ಟಿರುವುದು ಶಾಸನಗಳಿಂದ ತಿಳಿದು ಬರುತ್ತದೆ.

ವಿಜಯನಗರದ ಅರಸ ಚಿಕ್ಕರಾಯನು ಮುನಿಯೂರು ಮಠಕ್ಕೆ ದಾನ ನೀಡಿರುವುದಾಗಿ ಕೊಪ್ಪಶಾಸನದಲ್ಲಿ ಉಲ್ಲೇಖವಿದೆ,[೭೨] ಇನ್ನೊಂದು ಶಾಸನದಲ್ಲಿ ನೆಣಂಗಿ ನಾಡ ಹೆಗ್ಗಡೆಗಳು ಶ್ರೀಸತ್ಯತೀರ್ಥ ಶ್ರೀಪಾದರಿಗೆ ಹಾಗೂ ಅವರ ಶಿಷ್ಯ ವೈಕುಂಠತೀರ್ಥರಿಗೆ ಕೊಡುಗೆ ನೀಡಿದ ಅಂಶ ತಿಳಿದು ಬರುತ್ತದೆ.[೭೩] ಅಮರೇಶ್ವರ ತೀರ್ಥ ಶ್ರೀಪಾದರಿಗೆ ಹರಿಯಾಕ ನಾಯಕತಿಯು ಮುನಿಯೂರು ಮಠದ ಪುರುಷೋತ್ತಮತೀರ್ಥ ಹಾಗೂ ದೇವೇಂದ್ರತೀರ್ಥ ಈ ಇಬ್ಬರ ಸಾಕ್ಷಿಯಲ್ಲಿ ಭೂದಾನ ಮಾಡಿದ ವಿಷಯವನ್ನು ಕೊಪ್ಪ ಶಾಸನವು ತಿಳಿಸುತ್ತದೆ.[೭೪] ಕೋಟ್ಯಪ್ಪ ಹೆಗ್ಗಡೆಯವರು ಮುನಿಯೂರು ವೇಲು ಮಠದ ರಘುನಂದನ ತೀರ್ಥರಿಗೆ ಭೂದಾನ ನೀಡಿದ ಸಂಗತಿಯನ್ನು ಇನ್ನೊಂದು ಶಾಸನ ತಿಳಿಸುತ್ತದೆ.[೭೫]

ಶ್ರೀ ಸತ್ಯತೀರ್ಥರ ಕಾಲದಲ್ಲಿ ಜರುಗಿದ ಕೆಲವು ಸಂಗತಿಗಳು ದಾಖಲೆಗಳಲ್ಲಿ ಕಾಣಸಿಗುತ್ತವೆ. ಅವುಗಳಲ್ಲಿ ಒಂದು ಪ್ರಮುಖವಾದುದೆಂದರೆ ವಿಜಯನಗರಾಧಿಪತಿ ಬುಕ್ಕರಾಯನ ಕನಸಿನಲ್ಲಿ 'ಜಗದ್ಗುರುಗಳಿಂದ ಶ್ರೀ ಶ್ರೀ ಸತ್ಯತೀರ್ಥರಲ್ಲಿಗೆ ಹೋಗು ನಿನ್ನ ಕಷ್ಟ ಪರಿಹಾರವಾಗುವುದು ಎಂಬ ಸಲಹೆಯಂತೆ ಬುಕ್ಕರಾಯನು ಶ್ರೀ ಸತ್ಯತೀರ್ಥರಲ್ಲಿಗೆ ಬಂದನೆಂದೂ, ಕೊನೆಗೆ ಸತ್ಯತೀರ್ಥರು ಆತನನ್ನು ಕಾಶಿಗೆ ಕರೆದುಕೊಂಡು ಹೋಗಿ ದುಷ್ಟಶಕ್ತಿಯ ಭೀತಿಯಿಂದ ಮುಕ್ತಗೊಳಿಸಿದರೆಂದೂ

ಇದರಿಂದ ಸಂತುಷ್ಟನಾದ ಬುಕ್ಕನು ಶ್ವೇತ ಛತ್ರಿ, ಚಿನ್ನದ ಹಿಡಿಯಿರುವ ಚಾಮರ, ಚಿನ್ನದ ಕಿರೀಟ ಮೊದಲಾದ ಬೆಲೆ ಬಾಳುವ ಕಾಣಿಕೆಯೊಂದಿಗೆ ಹಲವಾರು ಹಳ್ಳಿಗಳನ್ನು ದಾನವಾಗಿ ನೀಡಿದನು ಎನ್ನಲಾಗಿದೆ.

ಹರಿಹರಪುರ ಮಠ

ಶ್ರೀಹರಿಹರಪುರ ಮಠವು ೧೨೦೦ ವರ್ಷಗಳಿಂದಲೂ ಅಸ್ತಿತ್ವದಲ್ಲಿದೆ. ಪಶ್ಚಿಮದಲ್ಲಿದ್ದು ಪೂರ್ವಾಭಿಮುಖವಾಗಿ ನಿಂತಿರುವ ಶ್ರೀಮಠದ ಲಕ್ಷ್ಮೀನರಸಿಂಹ (ಹರಿ), ಪೂರ್ವದಲ್ಲಿದ್ದು ಪಶ್ಚಿಮಾಭಿಮುಖವಾಗಿರುವ ದಕ್ಷಹರ ಶ್ರೀಸೋಮೇಶ್ವರ (ಹರ) ಮಧ್ಯದಲ್ಲಿ ಶ್ರೀ ಚಕ್ರದ ಮೇಲೆ ನೆಲೆನಿಂತಿರುವ ಶಾರದೆ ಹೀಗೆ ಹರಿಹರರು ಒಂದೇ ಸ್ಥಳದಲ್ಲಿ ನೆಲೆಸಿದ್ದು ಹರಿಹರರಲ್ಲಿ ಭೇದವಿಲ್ಲ ಎಂಬ ತತ್ವಸಾರುವ ಹಿನ್ನೆಲೆಯಲ್ಲಿ ಹರಿಹರಪುರ ಎಂಬ ಹೆಸರು ಊರಿಗೆ ಬಂತೆಂಬುದು ಪೌರಾಣಿಕ ಹಿನ್ನೆಲೆ. ಹರಿಹರಪುರ ಶ್ರೀಮಠವು ಹಲವಾರು ಶಾಸನಗಳಲ್ಲಿ ಉಲ್ಲೇಖವಾಗಿದೆ. ಒಂದು ಶಾಸನದಲ್ಲಿ ಹರಿಹರ ಮತ್ತು ಸಾಬಣ್ಣ ಒಡೆಯರು ಆರಗ ರಾಜ್ಯವನ್ನು ಆಳುತ್ತಿದ್ದಾಗ ಶ್ರೀಮಠದ ಗುರುಗಳಾದ ಶ್ರೀ ರಾಮಚಂದ್ರ ಸರಸ್ವತಿ ಒಡೆಯರು ತಮ್ಮ ಹೆಸರಿನ ಪ್ರತಾಪ ಹರಿಹರಪುರವನ್ನು ದಾನ ನೀಡಿದರು. ಈ ಭೂಮಿಯನ್ನು ಸರ್ವಮಾನ್ಯವಾಗಿ ರಾಮಚಂದ್ರ ಸರಸ್ವತಿ ಒಡೆಯರು ಮತ್ತು ಅವರ ಶಿಷ್ಯರು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರಬೇಕೆಂದು ಹೇಳುತ್ತದೆ.[೭೬] ಶ್ರೀಮಠದ ಗುರುಗಳಾದ ಮಾಧವ ಸರಸ್ವತಿಯವರ ಶಿಷ್ಯರಾದ ಶಂಕರ ಸರಸ್ವತಿಯವರು ಮಠಕ್ಕೆ ೭೮ ವರಹಗಳನ್ನು ಸಲ್ಲಿಸಿ, ಹರಿಹರಪುರದ ನರಸಿಂಹ ದೇವಾಲಯದ ಸೇವೆಗೆ ಭೂಮಿಯನ್ನು ಕ್ರಯಮಾಡಿದ ವಿವರಣೆ ಶಾಸನದಲ್ಲಿದೆ.[೭೭] ಶ್ರೀಮಠದ ಗುರುಗಳಾದ ರಾಮಚಂದ್ರ ಸರಸ್ವತಿ ಒಡೆಯರಿಗೆ ವಿಜಯನಗರದ ಅರಸ ಬುಕ್ಕರಾಯ ಶ್ರೀನೃಸಿಂಹದೇವರ ಪೂಜಾ ಆಚರಣೆಗೆ ಒಂದು ಗ್ರಾಮವನ್ನು ದಾನ ಮಾಡಿದುದರ ಬಗ್ಗೆ ಶಾಸನದಲ್ಲಿ ವ್ಯಕ್ತಪಡಿಸಲಾಗಿದೆ.

ಶ್ರೀಮಠದಲ್ಲಿನ ಸಾಮಾಜಿಕ ಸೇವೆಗಳು:– ಶ್ರೀಮಠದ ೨೪ನೆಯ ಯತೀಶ್ವರರಾಗಿದ್ದ ಶ್ರೀ ಸ್ವಯಂಪ್ರಕಾಶ ಅಭಿನವ ರಮಾನಂದ ಸರಸ್ವತಿ ಸ್ವಾಮಿಗಳು ಆಧ್ಯಾತ್ಮಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಹಿತ್ಯ, ಸಾಂಸ್ಕೃತಿಕವಾಗಿ ಸಮಾಜಕ್ಕೆ ನೀಡಿದ ಕೊಡುಗೆ ಅಪಾರ. ಕ್ರಿ.ಶ. ೧೯೩೯ ರಿಂದ ೧೯೯೯ರವರೆಗೆ ಸುದೀರ್ಘಕಾಲ ಪೀಠಾಧಿಪತಿಗಳಾಗಿದ್ದರು.

ಶ್ರೀ ಮಠವು ಜನಸಮುದಾಯದ ಅನುಕೂಲಕ್ಕಾಗಿ ಸಾರ್ವಜನಿಕರ ಸಹಕಾರದೊಡನೆ ಪ್ರೌಢಶಾಲೆ ಪ್ರಾರಂಭವಾಗುವಂತೆ ಪ್ರೇರೇಪಿಸಿ ಸಹಾಯಧನ ನೀಡುತ್ತಾ ಕ್ರಮೇಣ ತಮ್ಮ ಹೆಸರಿನಲ್ಲಿ ಶ್ರೀ ಅಭಿನವ ರಮಾನಂದ ಸರಸ್ವತಿಯವರು ಜ್ಯೂನಿಯರ್ ಕಾಲೇಜ್ ಸ್ಥಾಪಿಸಿದರು. ಗ್ರಾಮಾಂತರ ಪ್ರದೇಶ ನಾರ್ವೆ ಮತ್ತು ಕಿಗ್ಗದಲ್ಲಿ ಪ್ರೌಢಶಾಲೆ ಸ್ಥಾಪನೆ, ಹರಿಹರಪುರದಲ್ಲಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆ ಸ್ಥಾಪನೆ, ಶಿಶುವಿಹಾರ, ಮಹಿಳಾ ಸಮಾಜ

ಸ್ಥಾಪನೆಗೆ ಧನಸಹಾಯ, ಮುಂದೆ ಅದರ ಆಡಳಿತ ಸಮಿತಿಯ ಅಧ್ಯಕ್ಷ ಸ್ಥಾನವಹಿಸಿಕೊಂಡು ಅದು ಅಭಿವೃದ್ಧಿಪಥದಲ್ಲಿ ಮುನ್ನಡೆಯುವಂತೆ ನೋಡಿಕೊಂಡರು.ಯಾಗ-ಹೋಮ-ಹವನ-ಮುಂತಾದ ಧಾರ್ಮಿಕ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತ ಧರ್ಮ ಪ್ರಚಾರದ ನಿರ್ವಹಣೆ ಶ್ರೀಮಠದ ಮುಖ್ಯಕಾರ್ಯವಾಗಿತ್ತು. ಹರಿಹರಪುರ ಮತ್ತು ಸುತ್ತಮುತ್ತಲಿನ ಆಸ್ಪತ್ರೆಗಳಲ್ಲಿ ಗ್ರಾಮಾಂತರ ಬಡರೋಗಿಗಳ ಅನುಕೂಲಕ್ಕಾಗಿ ಶ್ರೀಮಠ ವಿಶೇಷ ಸಹಾಯ ನೀಡುತ್ತಿದೆ. ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ, ಬಡ ವಿದ್ಯಾರ್ಥಿಗಳಿಗೆ ಶುಲ್ಕ, ಪಠ್ಯಪುಸ್ತಕಗಳಿಗೆ ಶ್ರೀಮಠವು ಧನಸಹಾಯ ನೀಡುತ್ತದೆ.

ಶ್ರೀಮಠದ ಆವರಣದಲ್ಲಿ ನಿರಂತರವಾಗಿ ಹೋಮಹವನಾದಿಗಳು ನಡೆದುಕೊಂಡು ಹೋಗುವಂತೆ ಭವ್ಯವು, ವಿಶಾಲವೂ, ಕಲಾಪೂರ್ಣವೂ ಆಗಿರುವ 'ಸೋಮೇಶ್ವರ ಯಾಗಶಾಲೆ' ನಿರ್ಮಾಣ ಮಾಡಿದ್ದು ಆಸ್ತಿಕ ಜನರು ತಮ್ಮ ಸಂಕಷ್ಟ ಪರಿಹಾರ ಮಾಡಿಕೊಳ್ಳುವ ಉದ್ದೇಶದಿಂದ ಈ ಯಾಗಶಾಲೆ ನಿರ್ಮಾಣವಾಗಿದೆ. ಶ್ರೀಮಠವು ವೇದ-ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಎಲ್ಲಾ ಸೌಕರ್ಯದೊಡನೆ ವಿದ್ಯಾದಾನ ಮಾಡುತ್ತಿರುವುದು.ಶ್ರೀಮಠದ ಆವರಣದ ತುಂಗಾನದಿಯ ಸಮೀಪ ಬಾಳೆಯ ತೋಟ ಹುಲ್ಲುಗಾವಲುಗಳ ಕೃಷಿಯನ್ನು ಅಭಿವೃದ್ಧಿಪಡಿಸಿ 'ಸುಸಜ್ಜಿತ ಗೋ ಶಾಲೆ'ಯನ್ನು ನಿರ್ಮಿಸಿ ಗೋ ಸಂವರ್ಧನೆ ನಡೆಸಲಾಗುತ್ತಿದೆ.

'ಲೀವ್ ಹ್ಯಾಪಿಲಿ ಫೌಂಡೇಶನ್' ಯೋಜನೆಯ ಅಡಿಯಲ್ಲಿ ಶಿಕ್ಷಣ, ಆರೋಗ್ಯ, ಆಧ್ಯಾತ್ಮ ಈ ಮೂರು ಕ್ಷೇತ್ರಗಳಲ್ಲಿ ಪ್ರಾರಂಭಿಸಿರುವ ವ್ಯವಸ್ಥೆಗಳೆಂದರೆ,

೧. **ಜ್ಞಾನಜ್ಯೋತಿ ಯೋಜನೆ:** ವೃತ್ತಿಪರ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರತಿವರ್ಷ ಅನಾಥ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಸಾಧ್ಯವಾದಷ್ಟು ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಂಡು ಅವರ ಶಿಕ್ಷಣಕ್ಕೆ ಎಲ್ಲಾ ಸಹಾಯ ನೀಡಲಾಗುತ್ತಿದೆ.

೨. **ಆರೋಗ್ಯ ಜ್ಯೋತಿ:** ಶ್ರೀ ಮಠದ ಅಧೀನದಲ್ಲಿ ಉಚಿತ ವೈದ್ಯಕೀಯ ಸೇವೆ ನೀಡುವ ಸರಸ್ವತಿ ಸೇವಾ ಆಸ್ಪತ್ರೆ ಪ್ರಾರಂಭಿಸಲಾಗಿದೆ.

೩. **ಆನಂದ ಜ್ಯೋತಿ ಯೋಜನೆ:** ಶಾಸ್ತ್ರೀಯವಾಗಿ, ಧ್ಯಾನ,ಯೋಗ, ಪ್ರಾಣಾಯಾಮಗಳ ಕಲಿಕಾ ಅಧ್ಯಯನ ಕೇಂದ್ರ ಪ್ರಾರಂಭಿಸಲಾಗಿದೆ.

ಈ ಮೇಲಿನ ಎಲ್ಲಾ ಕಾರ್ಯಕ್ರಮ ಸಾಮಾಜಿಕ ಸೇವೆಗಳಿಗೆ ಕಾರಣರಾದವರು ಶ್ರೀಮಠದ ಯತಿವರ್ಯರಾದ ಶ್ರೀಶ್ರೀಶ್ರೀ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿಗಳು. ಪ್ರತಿಯೊಬ್ಬರೂ ಜೀವನದಲ್ಲಿ ಲೌಕಿಕವಾಗಿ ಮತ್ತು ಪಾರಮಾರ್ಥಿಕವಾಗಿ ಜಾಗೃತರಾಗಿ ಸಾರ್ಥಕ ಬದುಕನ್ನು ಸಾಗಿಸಬೇಕೆಂಬ ಸದುದ್ದೇಶದಿಂದ ಶ್ರೀಗಳವರು ಜೀವನ ಜಾಗೃತ ಅಭಿಯಾನವನ್ನು ಪ್ರಾರಂಭಿಸಿದ್ದು ಇದರ ಮೂಲಕ 'ಸಂಸ್ಕಾರ ಸಪ್ತಾಹ' ಮತ್ತು 'ಸಾಮೂಹಿಕ ಶಿವದೀಕ್ಷಾ' ಎಂಬ ಈ ಎರಡು ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ.

೩.೩. ಶಾಸನೋಕ್ತ ದೇವಾಲಯಗಳು

ದೇವಾಲಯಗಳು ಎಂಬ ಶೀರ್ಷಿಕೆಯಲ್ಲಿ ಮಠಕ್ಕೆ ಹೆಚ್ಚು ಪ್ರಾಧಾನ್ಯವೊ ದೇವಾಲಯಗಳಿಗೆ ಹೆಚ್ಚು ಪ್ರಾಶಸ್ತ್ಯವೋ ಎಂದು ಹೇಳುವ ಪ್ರಶ್ನೆಗೆ ಮಠ ಮತ್ತು ದೇವಾಲಗಳೆರಡನ್ನೂ ಒಂದೇ ಬೆರಳಿನ ತುದಿಯಿಂದ ತೋರಿಸುವ ಮೂಲಕ ಉತ್ತರ ಹೇಳಬೇಕಾಗುತ್ತದೆ. ಅಷ್ಟರಮಟ್ಟಿಗೆ ದೇವಾಲಯದ ಸಂಕೀರ್ಣದಲ್ಲಿಯೇ ಅಂದಿನ ಕಾಲದ ಮಠಗಳು ರೂಪಗೊಂಡವು. ಜಗದ್ಗುರುಗಳು ಮತ್ತು ದೇವರು ಒಂದೇ ಎಂಬುದಕ್ಕೆ ಶೃಂಗೇರಿ ಮಠವೇ ಮುಖ್ಯ ಸಾಕ್ಷಿಯಾಗಿ ನಿಲ್ಲುತ್ತದೆ. ವಿದ್ಯಾರಣ್ಯರನ್ನು ಮತ್ತು ಅವರ ಸನ್ಯಾಸಿ ಬಳಗದವರನ್ನುದ್ದೇಶಿಸಿ ಮ್ಯಾಕ್ಸವೆಬರ್ 'ಸನ್ಯಾಸಿಯು ದೇವರನ್ನು ಹೆದರಿಸಬಲ್ಲ ಮಾಂತ್ರಿಕ' ಎಂದು ಹೇಳಿರುವ ಮಾತುಗಳು ಅರ್ಥಪೂರ್ಣವಾಗಿವೆ. ಮಧ್ಯಮಲೆನಾಡಿನ ಭಾಗದಲ್ಲಿ ಹಲವಾರು ಶಾಸನೋಕ್ತ ದೇವಾಲಯಗಳು ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವು ದೇವಾಲಯಗಳು ಪಾಳು ಬಿದ್ದಿವೆ. ಇನ್ನು ಕೆಲವು ಜೀರ್ಣೋದ್ಧಾರಗೊಂಡಿವೆ. ಇನ್ನುಳಿದವುಗಳು ಹೇಳಹೆಸರಿಲ್ಲದಂತೆ ನಶಿಸಿಹೋಗಿವೆ.

ವಿಜಯನಗರದ ಅರಸರ ಸಾಮಂತರಾಗಿ ಆರಗದಲ್ಲಿ ರಾಜ್ಯಭಾರ ಮಾಡಿದ ಮಾಂಡಳಿಕರು ಮತ್ತು ಕೆಳದಿ ನಾಯಕರು ಈ ಪ್ರದೇಶದಲ್ಲಿ ಬಹುದೀರ್ಘಕಾಲ ಆಳ್ವಿಕೆ ನಡೆಸಿ ಧಾರ್ಮಿಕ ಭಾವನೆಯನ್ನು ಜನರಲ್ಲಿ ಜಾಗೃತಿಗೊಳಿಸಿ ಧರ್ಮದ ಚೌಕಟ್ಟಿನಲ್ಲಿ ಜನರನ್ನು ನಿರ್ಬಂಧಿಸುವುದರ ಜೊತೆಗೆ ತಮ್ಮ ರಾಜಕೀಯ ಪ್ರಾಬಲ್ಯವನ್ನು ವಿಸ್ತರಿಸುವ ಮೂಲಕವಾಗಿ ಮಠ ಹಾಗೂ ದೇವಾಲಯಗಳ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದರು.

ಮಧ್ಯಮಲೆನಾಡಿನ ಸಮಾಜದಲ್ಲಿ ಜಾತಿ-ಉಪಜಾತಿಗಳು, ಪಂಗಡ-ಉಪಪಗಂಡಗಳು, ಬಹುಸಂಖ್ಯಾತ-ಅಲ್ಪಸಂಖ್ಯಾತ ಮುಂತಾದ ವಿಂಗಡಣೆಯ ಮಾದರಿಯನ್ನು ಹೊಂದಿರುವುದನ್ನು ಕಂಡುಬರುತ್ತದೆ. ಜಾತಿ ಆಧಾರಿತ ಸಮಾಜ ವ್ಯವಸ್ಥೆಯ ಮಾದರಿಯಲ್ಲಿಯೇ ಮೇಲುದೇವಾಲಯ ಮತ್ತು ಕೆಳದೇವಾಲಯಗಳು ರೂಪುಗೊಂಡವು. ಮೇಲುವರ್ಗದ ದೇವತೆಗಳೆಂದರೆ ವೈದಿಕ ಧರ್ಮದ ಶಿವ, ವಿಷ್ಣು, ಬ್ರಹ್ಮ, ಶಕ್ತಿ, ಶಾರದೆ ಮುಂತಾದ ದೇವರುಗಳು ಬ್ರಾಹ್ಮಣೀಕರಣದಿಂದ ಶ್ರೀಮಂತ ದೇವತೆಗಳಾಗಿ ಇಲ್ಲಿ ಕಾಣಿಸಿಕೊಂಡವು. ಬ್ರಾಹ್ಮಣೇತರ ಗ್ರಾಮದೇವತೆಗಳು ಹಾಗೂ ಕೆಳವರ್ಗದ ದೇವತೆಗಳು ಕೆಳಸ್ತರದ ಜನರ ಆರಾಧ್ಯ ದೇವಗಳಾಗಿ ಶಪಿಸುವ ಮತ್ತು ಭಯಂಕರ ರೋಗಗಳನ್ನು ಹರಡುವ ಕ್ಷುದ್ರ ದೇವತೆಗಳಾಗಿ ರೂಪುಗೊಂಡವು. ಅವುಗಳಿಗಾಗಿ ಗುಡಿಗಳನ್ನು ನಿರ್ಮಾಣ ಮಾಡಿರುವುದನ್ನು ಗಮನಿಸಬಹುದು. ಜನಪದರು ಸೃಷ್ಟಿಸಿದ ಗ್ರಾಮದೇವತೆಗಳಿಗೆ ಬ್ರಾಹ್ಮಣರು ತಮಗಿಷ್ಟ ಬಂದ ಪುರಾಣಗಳನ್ನು ಸೃಷ್ಟಿಸಿ ಜನ ನಂಬುವಂತೆ ಮಾಡಿದರು. ಹಾಗೆಯೇ ಮುಂದುವರಿದು ಮೇಲು ದೇವತೆಗಳು ವರಗಳನ್ನು ನೀಡುವ, ಅನುಗ್ರಹಿಸುವ ದೇವತೆಗಳೆಂದು ವೈಭವೀಕರಿಸಿದರು.

ಶಾಸನಗಳ ಆಕರಗಳ ಮೂಲಕ ಅಂದಿನ ಸಮಾಜವನ್ನು ತಿರುಗಿ ನೋಡಿದಾಗ ದೇವಾಲಯಗಳು, ಮಠಗಳು ರಾಜಪ್ರಭುತ್ವದ ಸ್ಮಾರಕಗಳಾಗಿ ರೂಪುಗೊಂಡವು. ಇವುಗಳು

ರಾಜಪ್ರಭುತ್ವವನ್ನು ವೈಭವೀಕರಿಸುವ ಕೆಲಸವನ್ನು ಮಾಡಿದವು. ಇಂತಹ ಪ್ರಭುತ್ವದ ಸ್ಮಾರಕಗಳನ್ನು ಕಟ್ಟಿಸುವವರ ಹಿನ್ನೆಲೆಯಿಂದ ನೋಡಲಾಯಿತೇ ಹೊರತು ಕಟ್ಟಿದವರ, ಕುಶಲಕರ್ಮಿಗಳ ಶ್ರಮ ಅರಸುಕೇಂದ್ರಿತ ಚರಿತ್ರೆಗೆ ಪ್ರವೇಶ ಪಡೆಯೇ ಇಲ್ಲ. ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳೆರಡೂ ಒಟ್ಟೊಟ್ಟಿಗೆ ಸಾಗಿರುವುದು ಹಾಗೂ ಒಂದು ಇನ್ನೊಂದನ್ನು ಅವಲಂಬಿಸಿಕೊಂಡಿದ್ದು ಹೆಚ್ಚೆಚ್ಚು ದೇವಾಲಯಗಳು ನಿರ್ಮಾಣಗೊಳ್ಳುವುದಕ್ಕೆ ಕಾರಣವಾಯಿತು. ಬ್ರಾಹ್ಮಣರಿಗೆ, ದೇವಾಲಯಗಳಿಗೆ, ಮಠಗಳಿಗೆ ಹಾಗೂ ಇನ್ನಿತರ ಅಧಿಕಾರವರ್ಗದವರಿಗೆ ಭೂಮಿಯನ್ನು ದಾನ ನೀಡುವ ವ್ಯವಸ್ಥೆ ಹೆಚ್ಚಿದಂತೆಲ್ಲಾ ದೇವಾಲಯಗಳ ಮತ್ತು ಬಸದಿಗಳ ನಿರ್ಮಾಣ ಹೆಚ್ಚಿನ ಪ್ರಾಮುಖ್ಯತೆ ಪಡೆಯಿತು. ದೇವಾಲಯಗಳ ನಿರ್ಮಾಣ ಪುಣ್ಯಕಾರ್ಯವೆಂದು ಪ್ರಚಾರಪಡಿಸುವ ಮೂಲಕ ಜನಸಾಮಾನ್ಯರನ್ನು ದೇವರು ಮತ್ತು ಧರ್ಮದ ಹೆಸರಿನಲ್ಲಿ ನಿರ್ಬಂಧಿಸುವ ಕೆಲಸವನ್ನು ರಾಜಪ್ರಭುತ್ವ ಮತ್ತು ಪುರೋಹಿತಶಾಹಿಯ ಅಸ್ತ್ರವನ್ನಾಗಿ ಮಾಡಿಕೊಂಡಿತು. ದೇವಾಲಯಗಳ ನಿರ್ಮಾಣವು ರಾಜ್ಯ ಅನಿವಾರ್ಯತೆ ಎನ್ನುವ ರೀತಿಯಲ್ಲಿ ಚಿತ್ರಿಸಲಾಯಿತು. ಅಂತಹ ಶಾಸನೋಕ್ತ ದೇವಾಲಯಗಳೆಂದರೆ,

ಕಲಾನಾಥೇಶ್ವರ (ಕಲ್ಲಿನಾಥ) ದೇವಾಲಯ: ಆರಗ ತೀರ್ಥಹಳ್ಳಿ ಕೇಂದ್ರದಿಂದ ಪಶ್ಚಿಮಕ್ಕೆ ೧೦ ಕಿ.ಮೀ. ದೂರದಲ್ಲಿದ್ದು ಪ್ರಕೃತಿಸಿರಿಯ ಮಧ್ಯೆ ಕಂಗೊಳಿಸುತ್ತಿರುವ ಐತಿಹಾಸಿಕ ಗ್ರಾಮ. ಇಲ್ಲಿ ವಿಜಯನಗರದ ಸಾಮಂತ ಅರಸರಾದ ಆರಗದ ಒಡೆಯರು ರಾಜ್ಯಭಾರಮಾಡಿದರು. ಇಲ್ಲಿರುವ ಅತಿ ಮುಖ್ಯವಾದ ದೇವಾಲಯವು ಕಲಾನಾಥೇಶ್ವರದೇವಾಲಯವಾಗಿದ್ದು ಆರಗದ ಮೂಲಸ್ಥಾನದ ದೇವರ ಅಮೃತಪಡಿಗೆ ಬಂದ್ಯಾಗ್ರಾಮವನ್ನು ಧಾರಪೂರ್ವಕವಾಗಿ ದಾನ ನೀಡಿದ್ದು ಇಲ್ಲಿ ಕಂಡುಬರುತ್ತದೆ.[೨೮] ಈ ದೇವಾಲಯದ ಆವರಣದಲ್ಲಿ ಹುಲಿಯೊಂದಿಗೆ ಹೋರಾಡುತ್ತಿರುವ ವೀರನೊಬ್ಬನ ಉಬ್ಬು ಶಿಲ್ಪ ಕಂಡುಬರುತ್ತದೆ. ಹೊಯ್ಸಳ ಬಲ್ಲಾಳನ ಕಾಲದಲ್ಲಿ ನಿರ್ಮಿತವಾಗಿರುವ ಈ ದೇವಾಲಯವು ನಂತರದ ಕಾಲ ಘಟ್ಟಗಳಲ್ಲಿ ಸಂರಕ್ಷಣೆ ಹೊಂದಿ ಈಗಲೂ ಸುಸ್ಥಿತಿಯಲ್ಲಿ ಪೂಜೆಗೊಳ್ಳುತ್ತಿದೆ.

ಅಖಂಡೇಶ್ವರ ದೇವಾಲಯ: ಕಲಾನಾಥೇಶ್ವರ ದೇವಾಲಯದ ಹಿಂಭಾಗದಲ್ಲಿ ಸ್ವಲ್ಪವೇ ದೂರದಲ್ಲಿ ಅತ್ಯಂತ ಪ್ರಾಚೀನ ಅಖಂಡೇಶ್ವರ ದೇವಾಲಯವಿದೆ. ಶಿಥಿಲಾವಸ್ಥೆಯಲ್ಲಿದ್ದ ಈ ದೇವಾಲಯವನ್ನು ಗ್ರಾಮಸ್ಥರು ಮತ್ತು ಧರ್ಮಸ್ಥಳ ಕ್ಷೇತ್ರದ ಟ್ರಸ್ಟ್‌ನ ಸಹಯೋಗದೊಂದಿಗೆ ಅತ್ಯಂತ ವೈಜ್ಞಾನಿಕವಾಗಿ ಮತ್ತು ಪ್ರಾಚೀನ ಪಳೆಯುಳಿಕೆಗಳನ್ನು ಸೂಕ್ಷ್ಮವಾಗಿ ಬಳಸಿಕೊಂಡು, ಪ್ರಾಚೀನತೆಗೆ ಧಕ್ಕೆಬಾರದಂತೆ ಸಂರಕ್ಷಣಾ ಕಾರ್ಯ ಮಾಡಲಾಗಿದೆ.

ದೇವಸ್ಥಾನದ ಮುಂದೆ ನಿಲ್ಲಿಸಿರುವ ಶಾಸನದ ಪ್ರಕಾರ ಕ್ರಿ.ಶ. ೧೪೨೨ರಲ್ಲಿ ವಿಜಯನಗರದ ಅರಸು ಒಂದನೇ ದೇವರಾಯನ ಕಾಲದಲ್ಲಿ ಆರಗವನ್ನು ಆಳುತ್ತಿದ್ದ ಸಿರಿಗಿರಿನಾಥ ಒಡೆಯರು ಬ್ರಹ್ಮೇಶ್ವರ ದೇವರ ಅಮೃತಪಡಿ, ನಂದಾದೀಪಗಳ ಸೇವೆಗಾಗಿ ಧಾರಾಪೂರ್ವಕವಾಗಿ ದಾನ ನೀಡಿದ ವಿವರಗಳಿವೆ.[೨೯] ಅಖಂಡೇಶ್ವರ ಶಿವಲಿಂಗ ೪ ಅಡಿ ಎತ್ತರವಾಗಿದೆ. ಇದು ಅತ್ಯಂತ ಸುಂದರವಾದ ಏಕಶಿಲೆಯಲ್ಲಿ ನಿರ್ಮಾಣವಾಗಿದೆ.

ಬನಶಂಕರಿ ಆರಗ: ಇದು ಮಲೆನಾಡಿನ ವಿಶಿಷ್ಟ ದೇವತೆ. ಬನಶಂಕರಿ(ವನಶಂಕರಿ)ಯನ್ನು ಚೌಡಮ್ಮದೇವಿ ಎಂತಲೂ ಕರೆಯುವರು. ಈ ದೇವಾಲಯದ ನವೀಕರಣ ಕಾರ್ಯ ನಡೆಯುತ್ತದೆ. ಆರಗವನ್ನು ಆಳುತ್ತಿದ್ದ ಶ್ರೀ ವಿಠಂಣ್ಣ ಒಡೆಯನು ಆರಗದ ಹಿರಿಯಂಗಡಿಯ ಶ್ರೀಬನದೇವಿಯ ಅಮೃತಪಡಿಗೆ ಭೂದಾನ ನೀಡಿದ ವಿವರಣೆಯನ್ನು ಶಾಸನ ತಿಳಿಸುತ್ತದೆ.[೮೦]

ಶೃಂಗೇರಿ ಶ್ರೀ ವಿದ್ಯಾಶಂಕರ ದೇವಾಲಯ: ಇದು ದ್ರಾವಿಡ ವಾಸ್ತುಶೈಲಿಯಲ್ಲಿ ರಚನೆಯಾಗಿದ್ದು ಕ್ರಿ.ಶ. ೧೩೩೬–೫೭ರ ನಡುವಿನ ಅವಧಿಯಲ್ಲಿ ವಿಜಯನಗರ ಅರಸರಿಂದ ನಿರ್ಮಿಸಲ್ಪಟ್ಟಿತೆಂದು ಅಲ್ಲಿನ ಕಡತಗಳಿಂದಲೂ, ಶಾಸನದಲ್ಲಿ ಕ್ರಿ.ಶ. ೧೩೫೬ರಲ್ಲಿ ನಿರ್ಮಿಸಲಾಯಿತೆಂದು ತಿಳಿದುಬರುತ್ತದೆ. ಪ್ರಕೃತಿಯ ಸೌಂದರ್ಯದ ಮಡಿಲಲ್ಲಿ ತುಂಗಾನದಿಯ ಎಡದಂಡೆಗೆ ಎತ್ತರವಾದ ಜಗಲಿಯ ಮೇಲೆ ಹೊಯ್ಸಳ ವಾಸ್ತುಶೈಲಿಯಲ್ಲಿ ದೇವಾಲಯ ನಿರ್ಮಾಣವಾಗಿದೆ. ಇದು ಪೂರ್ವಾಭಿಮುಖ ವಾಗಿದ್ದು ಗರ್ಭಗುಡಿ, ಸುಕನಾಸಿ, ಹೊರಪ್ರದಕ್ಷಿಣಾಪಥ ಸೇರಿದಂತೆ ನವರಂಗ ಚೌಕವು ಇದೆ. ನವರಂಗದಲ್ಲಿರುವ ೧೨ ಕಂಬಗಳನ್ನು ದ್ವಾದಶ ರಾಶಿಗಳಿಂದ ಗುರುತಿಸಲಾಗಿದೆ. ದೇವಾಲಯದ ಹೊರಭಾಗ ಮತ್ತು ಒಳಭಾಗದಲ್ಲಿ ಸುಂದರವಾದ ಮೂರ್ತಿವಿಗ್ರಹಗಳನ್ನು ಕಾಣಬಹುದು. ಕಲಿನಾಡಿನಲ್ಲಿ ಬೆಳ್ಳೂರು ಬೊಮ್ಮಣ್ಣ ಹೆಗ್ಗಡೆಯವರು ಹಾಗೂ ಎಲ್ಲರೂ ಒಪ್ಪಿಕೊಂಡು ವಿದ್ಯಾಶಂಕರ ದೇವರಿಗೆ ಬೆಳ್ಳೂರಿನ ಕೆಲವು ಭೂಮಿಯನ್ನು ದಾನಮಾಡಿದರು.ಬೆಳ್ಳೂರು ಜನ ದೇವಸ್ಥಾನದ ಭಂಡಾರದಿಂದ ೬ ವರಹವನ್ನು ಪಡೆದುಕೊಂಡು ಹೂದೋಟವನ್ನು ದೇವಾಲಯಕ್ಕೆ ಮಾರಿದರು ಎಂದು ಶಾಸನ ತಿಳಿಸುತ್ತದೆ.[೮೧]

ಶ್ರೀ ಶಾರದ ದೇವಾಲಯ: ಶೃಂಗೇರಿಯ ಅಧಿದೇವತೆ ಶಾರದೆ. ಈಗಿರುವ ಶಾರದ ದೇವಾಲಯವನ್ನು ಕ್ರಿ.ಶ. ೧೯೦೬ರಲ್ಲಿ ನಿರ್ಮಿಸಲಾಗಿದೆ. ದ್ರಾವಿಡ ಶೈಲಿಯಲ್ಲಿ ನಿರ್ಮಾಣವಾಗಿರುವ ಸುಂದರ ಕಟ್ಟಡ, ಗರ್ಭಗುಡಿ, ಸುಕನಾಸಿ, ನವರಂಗಗಳು ಗ್ರಾನೈಟ್ ಶಿಲೆಯಿಂದ ನಿರ್ಮಾಣವಾಗಿವೆ. ದೇವಾಲಯದಲ್ಲಿ ಶಾರದೆಯ ಎರಡು ಲೋಹದ ಪ್ರತಿಮೆಗಳಿವೆ. ತಲಾ ಮೂರು ಮತ್ತು ಎರಡು ಅಡಿ ಎತ್ತರವುಳ್ಳದಾಗಿವೆ. ಅವು ಶ್ರೀ ವಿದ್ಯಾಶಂಕರ ತೀರ್ಥರ ಕಾಲಕ್ಕೆ ಸೇರಿದವುಗಳಾಗಿವೆ. ಹಿಂದೇ ಶ್ರೀ ಶಂಕರಾಚಾರ್ಯರು ಸ್ಥಾಪಿಸಿದ ಶ್ರೀ ಚಕ್ರಯಂತ್ರದ ಸ್ಥಳದಲ್ಲಿ ಪ್ರತಿಷ್ಠಾಪಿಸಲಾಗಿದೆ.

ಮುಖಮಂಟಪದಲ್ಲಿ ಸುಂದರವಾಗಿ ದ್ರಾವಿಡ ಶೈಲಿಯಲ್ಲಿ ಕೆತ್ತಿದ ೧೦ ಶಿಲಾಸ್ತಂಭಗಳಿವೆ. ಕೆಳಗೆ ಹೂವಿನ ಅಲಂಕಾರ ಮೇಲೆ ಸಿಂಹವು, ಅದರ ಮೇಲೆ ಮಾವಿನಕಾಯಿ ಆಕೃತಿಯಿಂದ ಕೂಡಿದ ಮಕರವೂ ಕೆತ್ತಲ್ಪಟ್ಟಿದೆ. ಈ ದೇವಾಲಯವು ಹಲವಾರು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಬೆಳವಾಡಿ ಗ್ರಾಮ, ಉಪಗ್ರಾಮಗಳ ಉತ್ಪನ್ನಗಳನ್ನು ಶ್ರೀ ಶಾರದಾ ಚಂದ್ರಮೌಳೀಶ್ವರ ಸ್ವಾಮಿಯ ನಿತ್ಯ ನೈವೇದ್ಯ, ದೀಪಾರಾಧನೆ, ನವರಾತ್ರಿ ಉತ್ಸವಕ್ಕೆ ಮೀಸಲಿಡಬೇಕೆಂದು ಶಾಸನವೊಂದು ತಿಳಿಸುತ್ತದೆ.[೮೨]

ಕಿಗ್ಗ–ಋಷ್ಯಶೃಂಗೇಶ್ವರ ದೇವಸ್ಥಾನ: ಹೊಂಬುಜವನ್ನು ಸಾಂತರರ ಚಿತ್ರವಾಹನ ಎಂಬ ಅರಸನು ಆಳುತ್ತಿದ್ದು ಕೀಳ್ಗಣೇಶ್ವರ ದೇವರಿಗೆ ಅಕ್ಕಿ ಮತ್ತು ಹಾಲನ್ನು ಅನುಭವಿಸುವ ಹಕ್ಕನ್ನು ದಯಪಾಲಿಸಿದ ಎಂದು ಶಾಸನವೊಂದು ತಿಳಿಸುತ್ತದೆ.[೮೩]

ಕದಂಬ ಮಂಡಲವನ್ನು ಆಳುತ್ತಿದ್ದ ಗುಣಸಾಗರನ ಉಲ್ಲೇಖವಿದೆ. ಚಿತ್ರವಾಹನ ಮತ್ತು ಅವನ ಮಡದಿ ಮಹಾದೇವಿ ಕೀಳ್ಗಣದೇವರಿಗೆ ದಾನಮಾಡಿದ ಪ್ರಸ್ತಾಪ ಇದೆ.[೮೪] ಚೆನ್ನಮ್ಮಾಜಿಯ ಕಾಲದಲ್ಲಿ ಪ್ರಧಾನಿ ಗುರುಬಸವಪ್ಪದೇವ ಉತ್ಸವ ವಿಗ್ರಹವನ್ನು ಮಾಡಿಸಿ ಶೃಂಗೇಶ್ವರ ದೇವರಿಗೆ ಸಮರ್ಪಿಸಿದ ವಿಷಯವು ಶಾಸನದಲ್ಲಿದೆ.[೮೫]

ಆನೆಗುಂದ–ಗೋಪಾಲಕೃಷ್ಣ ದೇವಾಲಯ: ಶೃಂಗೇರಿಯಿಂದ ೨ ಕಿ.ಮೀ.ದೂರದಲ್ಲಿರುವ ಗೋಪಾಲಕೃಷ್ಣದೇವಾಲಯ ಅತೀಪುರಾತನವಾದುದು. ತುಂಗಾನದಿಯ ದಡದ ಮೇಲೆ ೫೦ಜನ ಶಿವಳ್ಳಿಬ್ರಾಹ್ಮಣರಿಗೆ ದಾನ ನೀಡಿದ ಮಾಹಿತಿ ನೀಡಿದೆ.[೮೬]

ಶೃಂಗೇರಿಯ ಮಲ್ಲಿಕಾರ್ಜುನ (ಮಲಹಾನಿಕರೇಶ್ವರ): ಶ್ರೀ ಮಲಹಾನಿಕರೇಶ್ವರ ದೇವಸ್ಥಾನವು ಪಟ್ಟಣದ ಮಧ್ಯದಲ್ಲಿ ಹೆಚ್ಚು ಕಡಿಮೆ ಒಂದು ನೂರು ಸೋಪಾನಗಳ ಹಂತದಿಂದ ತಲುಪಬಹುದಾದ ಸಣ್ಣ ಬೆಟ್ಟದ ಶಿಖರದಲ್ಲಿದೆ. ನವರಂಗದಲ್ಲಿರುವ ನಾಲ್ಕು ಸ್ತಂಭಗಳು ಕಲಾತ್ಮಕವಾದ ಕೆತ್ತನೆಯ ಕೃತಿಗಳಿಂದ ಮಾಡಲ್ಪಟ್ಟಿವೆ.

ವಿಭಾಂಡಕ ಋಷಿಯು ನಶ್ವರ ಪ್ರಪಂಚದಿಂದ ಅದೃಶ್ಯರಾದ ಸ್ಥಳದ ಮೇಲ್ಭಾಗದಲ್ಲಿರುವ ಗರ್ಭಗೃಹದ ಒಳಭಾಗದಲ್ಲಿರುವ ಲಿಂಗವು ಮಲಹಾನಿಕರೇಶ್ವರ (ಆತ್ಮಲಮಲ ಅಥವಾ ಅಪವಿತ್ರಗಳನ್ನು ನಾಶಮಾಡುವ) ಎಂಬುದಾಗಿ ಕರೆಯಲ್ಪಟ್ಟಿದೆ.

ಮರದಿಂದ ರಚಿಸಲ್ಪಟ್ಟ ಹಳೆ ಕಟ್ಟಡದ ಬದಲಿಗೆ ಈಗಿರುವ ಕಟ್ಟಡವು ವಿಜಯನಗರದ ಕಾಲದಲ್ಲಿ ಕಟ್ಟಲ್ಪಟ್ಟಿರಬೇಕು. ಮಠದ ಶಿಷ್ಯರಲ್ಲೊಬ್ಬರಾದ ಪುಟ್ಟಪ್ಪಯ್ಯನವರಿಂದ ಕ್ರಿ.ಶ. ೧೬೨೧ರಲ್ಲಿ ಇದರ ಕೆಲವು ಭಾಗಗಳು ಜೀರ್ಣೋದ್ಧಾರ ಮಾಡಲ್ಪಟ್ಟಿವೆ ಎಂಬುದಾಗಿ ಶಾಸನವೊಂದು ಹೇಳುತ್ತದೆ.[೮೭] ಸ್ತ್ರೀಯೊಬ್ಬಳು ತನ್ನ ಕುಟುಂಬವು ಉದ್ಧಾರವಾಗಲೆಂದು ಮಲ್ಲಿಕಾರ್ಜುನ ದೇವರಿಗೆ ನಂದಿಯನ್ನು ಮಾಡಿಸಿದ ವಿವರಣೆಯನ್ನು ಶೃಂಗೇರಿ ಶಾಸನ ತಿಳಿಸುತ್ತದೆ.[೮೮]

ನಾರ್ವೆ ಗೋಪಾಲಕೃಷ್ಣದೇವಾಲಯ: ಶಿಲಾಮಯವಾಗಿರುವ ಈ ದೇವಾಲಯದ ಇತಿಹಾಸದ ಬಗ್ಗೆ ನಾರ್ವೆ ಶಾಸನಗಳಲ್ಲಿ ಸಾಕಷ್ಟು ಮಾಹಿತಿಯನ್ನು ಪಡೆಯಬಹುದು. ವೀರ ಗುಮ್ಮಟ ದೇವಿಯ ಮಗ ಬೈರರಸ ಒಡೆಯರ ಕಾಲದಲ್ಲಿ ಕೊಪ್ಪದ ಅಪ್ಪಾಜಿಸೇನಾಭೋವರು ಕೂಡನಾಡ ನಾರ್ವೆಯ ತುಂಗಾನದಿ ತೀರದಲ್ಲಿ ಗೋಪಾಲಕೃಷ್ಣ (ಕ್ರಿ.ಶ. ೧೫೮೮) ದೇವಾಲಯವನ್ನು ನಿರ್ಮಿಸಿದ್ದು ಅಮೃತಪಡಿ, ನಂದಾದೀಪ ಮತ್ತು ಛತ್ರಕ್ಕೆ ಭೂಮಿಯನ್ನು ಕ್ರಯಮಾಡಿರುವ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ.[೮೯] ಮುಸರೆಯ ಚಿಕ್ಕಣ್ಣ ಒಡೆಯನಿಂದ ಕೊಪ್ಪದ ಅಪ್ಪಾಜಿ

ಸೋನಾಭೋವನು ೩೦ ವರಹಗಳಿಗೆ ತೋಟವನ್ನು ನಾರ್ವೆಯ ಗೋಪಾಲಕೃಷ್ಣ ಮತ್ತು ವಿಶ್ವನಾಥ ದೇವರಿಗಾಗಿ ಕ್ರಯ ಮಾಡಿರುವ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ.[೧೦]

ಹೊಂಬುಜ ಕಮಟೇಶ್ವರ ದೇವಾಲಯ: ಇದು ಎಂಟನೆಯ ಶತಮಾನದ ರಚನೆ. ಗರ್ಭಗೃಹ, ನವರಂಗ, ಅಂತರಾಳಗಳಿಂದ ಕೂಡಿದೆ. ಈ ಗುಡಿಯಲ್ಲಿ ನಾಲ್ಕು ತರಂಗ ಬೋಧಿಗೆಗಳಿವೆ. ಇದು ದ್ವಿತಲ ದೇವಾಲಯವಾಗಿದ್ದು, ದ್ರಾವಿಡ ಶೈಲಿಯಲ್ಲಿ ನಿರ್ಮಾಣವಾಗಿದೆ. ಈ ದೇವಾಲಯದ ಗರ್ಭಗುಡಿಯ ಹೊರಭಿತ್ತಿಯಲ್ಲಿ ಪಂಚತಂತ್ರ ಮತ್ತು ರಾಮಾಯಣದ ಕಥೆಗಳ ಚಿತ್ರಗಳನ್ನು ಕೆತ್ತಲಾಗಿದೆ. ಮೊಲ ಮತ್ತು ಸಿಂಹದ ಕಥೆ, ಮೊಲ ಮತ್ತು ಆಮೆಯ ಓಟದ ಸ್ಪರ್ಧೆ, ಆನೆ ಸಿಂಹಗಳ ವಿರಸ, ಹಂಸಗಳು ಕೊಕ್ಕಿನಲ್ಲಿ ಹಿಡಿದಿರುವ ಕಡ್ಡಿಯನ್ನು ಮಧ್ಯದಲ್ಲಿ ಆಮೆ ಕಚ್ಚಿ ಹಿಡಿದಿರುವುದು. ಮಗು ಮತ್ತು ಮುಂಗುಸಿಯ, ಕಥೆ ಹೀಗೆ ಹಲವಾರು ಪೌರಾಣಿಕ ಕಥೆಗಳನ್ನು ಶಿಲ್ಪಿ ಸೊಗಸಾಗಿ ಚಿತ್ರಿಸಿದ್ದಾನೆ.

ಈ ದೇವಾಲಯಕ್ಕೆ ಕ್ರಿ.ಶ. ೧೧೨೨ರಲ್ಲಿ ಹಡವಳ ಗಂಗಯ್ಯನೂ ಹಾಗೂ ಹಾಡವಳ ಹೆಮ್ಮಾಡಿ ದೇವರಸನೂ ಹೊಲವನ್ನು ದಾನ ಮಾಡಿದರು. ಅದೇ ರೀತಿಯಲ್ಲಿ ಕೆರೆಕಳಗಿನ ಗದ್ದೆಯನ್ನು ದತ್ತಿಯಾಗಿ ಕೊಡಲು ನಂದಿಯ ಗಂಗ ಪೆರ್ಮಾಡಿ ದೇವನ ಅಪ್ಪಣೆ ಪಡೆದನು. ಅದರಂತೆ ಈ ದೇವರ ನೈವೇದ್ಯಕ್ಕೆ ಜಾತಿಯ ಕೆರೆಯ ಕೆಳಗಿನ ಗದ್ದೆ ಬಯಲುಗಳನ್ನು ದಾನ ಮಾಡಿದನು. ಹೊಂಬುಜದ ೨೭ನೇ ಶಾಸನದಲ್ಲಿ ಕ್ರಿ.ಶ. ೧೨೮೭ರಲ್ಲಿ ಮಹಾಮಾಂಡಳೇಶ್ವರ ಸೋವೇಯ ನಾಯ್ಕ, ಕೋಟಿ ನಾಯ್ಕ ಮತ್ತು ಕುಮಾರ ಸೊಡ್ಡ ನಾಯಕ ದೇವರಗಳು ಕಮಟೇಶ್ವರ ದೇವಾಲಯವನ್ನು ಪುನಃ ಪ್ರತಿಷ್ಠಾಪನೆ ಮಾಡಿ, ಹೊಸ ದತ್ತಿಗಳನ್ನು ಬಿಟ್ಟರು ಎಂದಿದೆ.

ಕ್ರಿ.ಶ. ೧೧ ಮತ್ತು ಕ್ರಿ.ಶ. ೧೨ನೆಯ ಶತಮಾನದ ವೇಳೆಗೆ ಹಲವಾರು ತಳಸಮುದಾಯಗಳು ಹಾಗೂ ವ್ಯಕ್ತಿಗಳು ಮತ್ತು ದೇವತೆಗಳನ್ನು ಶಿವನೊಂದಿಗೆ ಗುರುತಿಸಿ ತಮ್ಮ ಜಾತಿಯ ಹೆಸರುಗಳನ್ನು ಶಿವನೊಂದಿಗೆ ಬೆರೆಸಿ, ಶಿವದೇವಾಲಯಗಳನ್ನು ನಿರ್ಮಿಸುವ ಪ್ರಕ್ರಿಯೆಯನ್ನು ಈ ಸಂದರ್ಭದಲ್ಲಿ ಗುರುತಿಸಬಹುದು. ಅದೇ ರೀತಿಯಲ್ಲಿ ಅಕ್ಕಸಾಲಿ(ಸುವರ್ಣಕಾರ, ವಿಶ್ವಕರ್ಮ, ಪತ್ತಾರ, ಬಡಿಗೇರ, ಆಚಾರಿ) ಜನಾಂಗವು ಕಮಟೇಶ್ವರನ ಆರಾಧಾಕರೆಂಬ ಮಾತಿದೆ.

ಕಮಟೇಶ್ವರ ಎಂಬುದು ಶಿವಲಿಂಗಕ್ಕಿರುವ ವಿಶಿಷ್ಟ ಹೆಸರು. ಕಮಟೇಶನು ಆದಿ ಕೂರ್ಮ ಹಾಗೂ ವಿಷ್ಣುವಿನ ಹತ್ತು ಅವತಾರಗಳೊಂದು ಎನ್ನಲಾಗಿದ್ದು, ಕಮಟೇಶ್ವರ ಎಂಬುದು ಶಿವನ ಪರವಾದ ಶಬ್ದವಾಗಿದೆ. ಹೊಂಬುಜದ ೨೮ನೇ ಶಾಸನ(ಕ್ರಿ.ಶ. ೮೦೦)ದಲ್ಲಿ ಮಾಸರ ಜಕ್ಕಯ್ಯ ಹಾಗೂ ಮಾನ್ಯಖೇಟದ ಉಲ್ಲೇಖವಿದ್ದು ಜಕ್ಕಯ್ಯನೇ ಈಶ್ವರನ ಪರಮಭಕ್ತ ಎಂದು ಉಲ್ಲೇಖಿಸುತ್ತದೆ.

ಬಿಲ್ಲೇಶ್ವರ ದೇವಾಲಯ

ಹೊಂಬುಜದಿಂದ ತುಸು ದೂರದಲ್ಲಿರುವ ಬಿಲ್ಲೇಶ್ವರ ದೇವಾಲಯಗಳ ಸಮುಚ್ಚಯದಲ್ಲಿ ಗರ್ಭಗೃಹ, ನವರಂಗ, ಪ್ರದಕ್ಷಿಣಾಪಥವಿದ್ದು, ಹೊರಭಾಗದಲ್ಲಿ ಪ್ರಾಚೀನ ಶಿಲಾಮೂರ್ತಿಯಾದ

ನಂದಿ ವಿಗ್ರಹವಿದೆ. ಗರ್ಭಗೃಹದಲ್ಲಿ ಮುದ್ದಾದ ಶಿವಲಿಂಗವಿದೆ. ಗರ್ಭಗೃಹದ ಪಕ್ಕದಲ್ಲಿ ಚತುರ್ಭುಜ ನಟರಾಜನ ವಿಗ್ರಹ, ಮಹಿಷಾಸುರಮರ್ಧಿನಿ ಶಿಲ್ಪಗಳು ಅತ್ಯಂತ ಸುಂದರವಾಗಿವೆ. ಈ ದೇವಾಲಯದ ಆವರಣದಲ್ಲಿ ಕಂಡುಬರುವ ಕಾಳಭೈರವನ ಗುಡಿಯ ಗೋಡೆಯ ಮೇಲೆ ಕಂಡುಬರುವ ಶಾಸನದಲ್ಲಿ (ಕ್ರಿ.ಶ. ೧೦೬೨) ತ್ರೈಲೋಕ್ಯ ಮಲ್ಲ ವೀರ ಸಾಂತಾರನು ಕಾಳಮುಖ ಶಿವಗುರುಗಳಿಗೆ ಗೊರವರಪಳ್ಳಿ ಎಂಬ ಹಳ್ಳಿಯನ್ನು ಸರ್ವಮಾನ್ಯವನ್ನಾಗಿ ಮಾಡಿದನು ಎಂಬುದಾಗಿ ಉಲ್ಲೇಖಿವದೆ. ಗರ್ಭಗುಡಿಯಲ್ಲಿರುವ ಕಾಳಭೈರವನ ವಿಗ್ರಹವು ಒಂದು ಅಡಿಯಷ್ಟಿದೆ. ಎಡಗಾಲು ಮಡಚಿ ಬಲಗಾಲು ಊರಿದಂತೆ ಕಮಲ ಪೀಠದ ಮೇಲೆ ಕುಳಿತಿರುವ ಕಾಳಭೈರವನ ನಡುಪಟ್ಟಿ, ಯಜ್ಞೋಪವೀತ, ಕೊರಳಿನ ಸರಮಾಲೆ, ಚತುರ್ಭುಜ, ಎಡಗೈಯಲ್ಲಿ ಹಿಡಿದಿರುವ ಲಾಕುಳ (ದಂಡ) ಇವು ಕಾಣಸಿಗುತ್ತವೆ. ಕಾಳಭೈರವನ ಶಿಲ್ಪಗಳು ಹೊಂಬುಜದಲ್ಲಿ ಕಂಡು ಬರುವುದರಿಂದ ಕಾಳಮುಖ ಶೈವ ಇರುವಿಕೆಯನ್ನು ಈ ಪ್ರದೇಶದಲ್ಲಿ ಗುರುತಿಸಲಾಗಿದೆ.

ಹೊಂಬುಜದ ಪಂಚಕೂಟ ಬಸದಿ

ಸಾಂತರರ ರಾಣಿ ಚಟ್ಟಲದೇವಿಯು ಹೊಂಬುಜದಲ್ಲಿ ಕ್ರಿ.ಶ. ೧೦೭೭ರಲ್ಲಿ ಪಂಚಕೂಟ ಜಿನಾಲಯವನ್ನು ನಿರ್ಮಿಸಿದಳು. ಸಾಲಾಗಿರುವ ಐದು ಗರ್ಭಗೃಹಗಳಲ್ಲಿ ಆದಿನಾಥ, ಅಜಿತನಾಥ, ಮಹಾವೀರ, ಪಾರ್ಶ್ವನಾಥ ಮತ್ತು ಶಾಂತಿನಾಥ ಮೂರ್ತಿಗಳನ್ನು ಮೂಡಣಕ್ಕೆ ಮುಖಮಾಡಿ ನಿಲ್ಲಿಸಾಗಿದೆ. ಇಲ್ಲಿ ಜಿನರ ಹಾಗೂ ಯಕ್ಷರ ಶಿಲ್ಪಗಳು ಅತ್ಯಂತ ಸುಂದರವಾಗಿವೆ. ಅಜಿತ ಮತ್ತು ಪಾರ್ಶ್ವನಾಥ ತೀರ್ಥಂಕರರ ತಲೆಯ ಮೇಲುಗಡೆಗೆ ತೋರಿಸಿರುವ ಮುಕ್ಕೊಡೆಗಳು ವೈಶಿಷ್ಟ್ಯಪೂರ್ಣವಾಗಿವೆ. ಈ ಜಿನಾಲಯದ ಮುಂಭಾಗದಲ್ಲಿ ಎತ್ತರವಾದ ಮಾನಸ್ತಂಭವಿದೆ. ಊರ್ವೀತಿಳಕ ಎಂಬ ಹೆಸರಿನಿಂದ ಈ ಬಸದಿ ಪ್ರಸಿದ್ಧಿಯಾಯಿತು.

ಪಂಚಬಸದಿಯಲ್ಲಿ ಚಟ್ಟಲದೇವಿಯು ಆಹಾರ, ಅಭಯ, ಔಷಧ ಶಾಸ್ತ್ರ ಎಂಬ ನಾಲ್ಕು ಬಗೆಯ ದಾನಗಳನ್ನು ನೀಡಿದಳು. ಹೊಂಬುಜ ಶಾಸನದಲ್ಲಿ ಚಟ್ಟಲಾದೇವಿಯು ತನ್ನ ತಾಯಿ ಗಾವಬ್ಬರಸಿ ತಂದೆ ಅರುಮುಳಿದೇವ ತಂಗಿ ಬೀರಲಾದೇವ ತಮ್ಮ ರಾಜವಿದ್ಯಾಧರ-ಇವರ ಪರೋಕ್ಷ ವಿನಯಾರ್ಥವಾಗಿ ಈ ಪಂಚ ಬಸದಿಯನ್ನು ನಿರ್ಮಿಸಿದಳೆಂದು ಎಂದಿದೆ. ಈ (ಬಸದಿಗೆ ಚಟ್ಟಲೆ ಮತ್ತು ನಾಲ್ಕು ಸಾಕು ಮಕ್ಕಳಾದ ಭುಜಬಲಸಾಂತಾರ, ಗೊಗ್ಗಿಗ-ಗೋವಿಂದ, ನನ್ನಿಸಾಂತಾರ, ಒಡ್ಡುಗ ವಿಕ್ರಮ ಎಂಬುವವರು ಸೇರಿ ಅನೇಕಾನೇಕ ದಾನ ದತ್ತಿಗಳನ್ನು ನೀಡಿದರು.

ಮಧ್ಯಮಲೆನಾಡಿನ ಶಾಸನಗಳನ್ನು ವಿಮರ್ಶೆಗೆ ಒಳಪಡಿಸಿದಾಗ ಗಮನಿಸಬಹುದಾದ ಪ್ರಮುಖ ಅಂಶಗಳೆಂದರೆ ಅರಸೊತ್ತಿಗೆ, ಪುರೋಹಿತಶಾಹಿ, ದಾನ, ಅಗ್ರಹಾರ ಮುಂತಾದವುಗಳು. ಹತ್ತು ಮತ್ತು ಹನ್ನೊಂದನೆಯ ಶತಮಾನದ ನಂತರ ಮಧ್ಯಮಲೆನಾಡಿನಲ್ಲಿ ಮೂರ್ತಿಪೂಜೆಯನ್ನಾಧರಿಸಿದ ಆಗಮಿಕ ಬ್ರಾಹ್ಮಣ ಸಂಸ್ಕೃತಿಯ ಪೋಷಣೆ ವ್ಯಾಪಕವಾಗಿ ನಡೆಯಿತು ಸಾಂತರರು, ಕಳಸ–

ಕಾರ್ಕಳ ಪ್ರಭುಗಳು, ಆರಗ ಒಡೆಯರು, ಕೆಳದಿನಾಯಕರು ಮುಂತಾದ ಅರಸು ಮನೆತನಗಳು, ಅಗ್ರಹಾರಗಳ ದಾನ ಹಾಗೂ ಪೋಷಣೆಯನ್ನು ನಡೆಸಿಕೊಂಡುಬಂದವು.

ಈ ಕಾಲದಲ್ಲಿ ಬ್ರಾಹ್ಮಣ ವರ್ಣದ ನಿರ್ಮಾಣ ಅಗ್ರಹಾರಗಳ ಸೀಮೆಯನ್ನೂ ದಾಟಿ ವ್ಯಾಪಿಸಿತು. ಉದಾಹರಣೆಗೆ ಈ ಕಾಲದ ದೇವಾಲಯ ಸಂಸ್ಕೃತಿಯಲ್ಲಿ ಬ್ರಾಹ್ಮಣಿಕೆ ಬೇರೂರಿತು. ಹಾಗಾಗಿ ಮೂಲತಃ ಕಾಳಮುಖ ಶೈವರಿಂದ ಪೂಜಿಸಲ್ಪಟ್ಟ ಶೈವದೇವಾಲಯಗಳು ಬ್ರಾಹ್ಮಣ ಆಗಮಿಕ ಪೂಜೆ ಹಾಗೂ ಶಿಕ್ಷಣವನ್ನು ಪೋಷಿಸಿದವು. ಆ ಕಾಲದ ಜೈನರಲ್ಲೂ ಬ್ರಾಹ್ಮಣವರ್ಣ ಬೆಳೆದು ಬಂದಿತು. ಇದೇ ರೀತಿಯಲ್ಲಿ ಆಳುವ ಮನೆತನಗಳು ತಮ್ಮ ವಂಶಾವಳಿಯನ್ನು ಕಟ್ಟಿಕೊಳ್ಳುತ್ತ ತಮ್ಮನ್ನು ಕ್ಷತ್ರಿಯರೆಂದು ಗುರುತಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಅರಸರು 'ಬ್ರಹ್ಮಕ್ಷತ್ರಿಯ'ರೆಂದು ಕರೆದುಕೊಳ್ಳುವುದರ ಮೂಲಕ ತಾವು ಮೂಲತಃ ಬ್ರಾಹ್ಮಣರಾಗಿದ್ದು ಕ್ಷತ್ರಿಯ ವೃತ್ತಿಯನ್ನು ಆಧರಿಸಿದ ವಿಷಯವನ್ನು ಸಾರಿಕೊಳ್ಳುತ್ತಾರೆ.

ಹನ್ನೊಂದು ಮತ್ತು ಹನ್ನೆರಡನೆಯ ಶತಮಾನದ ಸುಮಾರಿಗೆ ಶೈವ ಸಂಪ್ರದಾಯ ಪ್ರತಿಷ್ಠಿತವರ್ಗವಾಗಿ ತಲೆ ಎತ್ತುತ್ತಿದ್ದ ಅನೇಕ ಪ್ರಾದೇಶಿಕ ಜಾತಿಗಳಿಗೆ ಒಂದು ಧಾರ್ಮಿಕ ಪ್ರತಿಷ್ಠೆಯನ್ನು ಒದಗಿಸಿದ್ದನ್ನೂ ಗುರುತಿಸಬಹುದು. ಬೇರೆ ಬೇರೆ ವೃತ್ತಿ ಸಮೂಹಗಳು, ವ್ಯಕ್ತಿಗಳು ತಮ್ಮ ದೇವತೆಯನ್ನು ಶಿವನೊಂದಿಗೆ ಗುರುತಿಸಿ, ತಮ್ಮ ಜಾತಿಯ ಅಥವಾ ವ್ಯಕ್ತಿಗತ ಹೆಸರುಗಳನ್ನು ಶಿವನಿಗೆ ನೀಡಿ ದೇವಾಲಯಗಳನ್ನು ಕಟ್ಟಿಸುವ ಪ್ರಕ್ರಿಯೆಯನ್ನು ನಾವು ಸಾಮಾನ್ಯವಾಗಿ ಇಲ್ಲಿ ಕಾಣುತ್ತೇವೆ. ಈ ಪ್ರಕ್ರಿಯೆಯಲ್ಲಿ ಸ್ಥಳೀಯ ಸಮಾಜದ ದೇವತೆಗಳು ಸಾಂಸ್ಕೃತಿಕವಾಗಿ ಶಿವರೂಪ ವನ್ನು ಧರಿಸಿ ಆಗಮಶಾಸ್ತ್ರೀಯ ಸಂಸ್ಕೃತಿಯ ತೆಕ್ಕೆಯೊಳಗೆ ಬಂದವು. ಹೀಗೆ ನಾವು ಬಿಲ್ಲೇಶ್ವರ, ಕಮ್ಮಟೇಶ್ವರ ಮುಂತಾದ ವೃತ್ತಿ ಹಿನ್ನೆಲೆಯ ದೇವತೆಗಳನ್ನೂ ಕಾಣುತ್ತೇವೆ.

ಇಲ್ಲಿನ ದೇವಾಲಯಗಳು ಕೇವಲ ಪೂಜಾ ಸ್ಥಳಗಳು ಮಾತ್ರವಾಗಿರದೇ ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳಾಗಿದ್ದವು. ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವವನ್ನು ಬಲಪಡಿಸುವ ಕೆಲಸವನ್ನು ದೇವಾಲಯಗಳು ವ್ಯವಸ್ಥಿತವಾಗಿ ಮಾಡಿದವು. ನಂತರದ ಕಾಲಘಟ್ಟಗಳಲ್ಲಿ ದೇವಾಲಯಗಳ ಜೊತೆಗೆ ಮಠಗಳು ಸೇರಿಕೊಂಡವು. ಮಧ್ಯಕಾಲೀನ ರಾಜ್ಯವ್ಯವಸ್ಥೆಯಲ್ಲಿ ರಾಜಪ್ರಭುತ್ವದಷ್ಟೇ ಪ್ರಮುಖ ಸ್ಥಾನವನ್ನು ದೇವಾಲಯಗಳು ಪಡೆದುಕೊಂಡವು. ಜಾತಿ ವ್ಯವಸ್ಥೆ ಮತ್ತು ದೇವಾಲಯಗಳು ಒಟ್ಟೊಟ್ಟಿಗೆ ಸಾಗುತ್ತಿದ್ದವು ಎನ್ನುವುದಕ್ಕೆ ಅಂದಿನ ವರ್ಗೀಕರಣ ವ್ಯವಸ್ಥೆಯಿಂದ ಸ್ಪಷ್ಟವಾಗುತ್ತದೆ. ಬ್ರಾಹ್ಮಣರಿಗೆ ಮಾತ್ರ ಗರ್ಭಗುಡಿಯೊಳಗೆ ಪ್ರವೇಶಿಸಲು ಅವಕಾಶ ನೀಡಲಾಗಿದ್ದು, ಕೆಳಅಂತಸ್ತಿನವರು ಗರ್ಭಗುಡಿಯ ಮುಂದೆ ನಿಲ್ಲುವುದು ಮುಂತಾದ ನಿಯಮಗಳು ಈಗಲೂ ದೇವಾಲಯಗಳಲ್ಲಿ ಆಚರಿಸಲಾಗುವುದು. ಪ್ರಜೆಗಳಲ್ಲಿ ಭಯ, ಭಕ್ತಿ ಮೂಡುವಂತೆ ಮಾಡುತ್ತಿದ್ದವು. ಅರಸರಿಗೆ ದೇವಾಲಯಗಳು ಅನಿವಾರ್ಯವಾಗಿರುವುದರಿಂದ ಅಪಾರವಾದ ದಾನ-ದತ್ತಿಗಳನ್ನು ನೀಡುತ್ತಿದ್ದರು. ದೇವಾಲಯದ ಪುಣ್ಯದ ಕೆಲಸ, ಮೋಕ್ಷ ಲಭಿಸುವ ಕೆಲಸ ಎನ್ನುವ ಧಾರ್ಮಿಕ ಸಂದೇಶವನ್ನು ಸಾರಲಾಯಿತು.

೩.೪. ಕುಟುಂಬ

ಕುಟುಂಬ ಪ್ರತಿಯೊಂದು ಸಮಾಜದ ಮೂಲ ಮತ್ತು ಮುಖ್ಯ ಘಟಕ. ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬಕ್ಕೆ ಪ್ರಧಾನವಾದ ಸ್ಥಾನವಿದೆ. ಹಲವು ಕುಟುಂಬಗಳು ಸೇರಿ ಒಂದು ಸಮಾಜವಾಗುವುದರಿಂದ ಸಮಾಜವೆನ್ನುವುದು ಕುಟುಂಬದ ದೊಡ್ಡ ರೂಪ. ವ್ಯಕ್ತಿ ಕುಟುಂಬದ ಕೇಂದ್ರಬಿಂದು. ಮಾನವನ ಎಲ್ಲ ಮೂಲಭೂತ ಅಗತ್ಯಗಳು ಸಾಮಾನ್ಯವಾಗಿ ಕೌಟುಂಬಿಕ ನೆಲೆಯಲ್ಲಿ ಸಾಗಿ ಬರುವುದನ್ನು ಕಾಣಬಹುದು.

ಕುಟುಂಬ ಮಾನವ ಸಮಾಜದ ಸಮಗ್ರ ಸಮೂಹಗಳಿಗೆ ಬಹುಮುಖ್ಯವಾದ ಸಾಮಾಜಿಕ ಸಂಘಟನೆಯಾಗಿದೆ. ಮೆಕೈವರ್ ಪ್ರಕಾರ 'ಕುಟುಂಬವು ನಿರ್ಧರಿತ ಲೈಂಗಿಕ ಸಂಬಂಧವನ್ನು, ಸಂತಾನೋತ್ಪತ್ತಿ ಮತ್ತು ಮಕ್ಕಳ ಪಾಲನೆ-ಪೋಷಣೆಗಳನ್ನು ಒಳಗೊಂಡಿರುವುದು' ಎಂದಿದ್ದಾರೆ. ಕುಟುಂಬವು ಜೈವಿಕ ಮಾನವನನ್ನು ಸಾಮಾಜಿಕ ಮಾನವನನ್ನಾಗಿ ಪರಿವರ್ತಿಸುವ ಒಂದು ಸಂಸ್ಥೆಯಾಗಿದ್ದು, ಇದು ವ್ಯಕ್ತಿಗೆ ಮನೆತನವನ್ನು ನೀಡುವುದು ಅಲ್ಲದೇ ಸಾಮಾಜಿಕ ಜೀವನಕ್ಕೆ ಸ್ಥಿರತೆಯನ್ನು ವೈಯಕ್ತಿಕ ಬದುಕಿಗೆ ರಕ್ಷಣೆಯನ್ನು ನೀಡುವುದು ಆಗಿದೆ.

ವ್ಯಕ್ತಿಗಳ ಸೌಖ್ಯ ಸಾಧಾರಣವಾಗಿ ಕೌಟುಂಬಿಕ ಸೌಖ್ಯದ ಮೇಲೆ ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಪುರುಷನು ಆಹಾರ, ವಸ್ತ್ರ ಮತ್ತು ರಕ್ಷಣೆಗಾಗಿ ದುಡಿಯುತ್ತಾನೆ. ಒಂದು ಶಾಸನದಲ್ಲಿ ವ್ಯಕ್ತಿ ಸುಖವಾಗಿರಬೇಕಾದರೆ 'ಅರ್ಥದೊಳ್' ಹೆಂಡಿರೋಳ್, ಸುಪುತ್ರರೊಳಂ ಬಂಧುವರ್ಗದೋಳ್, ಗೋತ್ರದೋಳ್, ಸಂಪತ್ತಿನೋಳ್ ಇರಬೇಕೆಂದು ತಿಳಿಸುತ್ತದೆ.[೯೧] ಮಧ್ಯಮಲೆನಾಡಿನ ಬಹುತೇಕ ಶಾಸನಗಳು ದಾನಶಾಸನಗಳಾಗಿದ್ದು ದಾನದ ವಿವರಣೆಯನ್ನು ಬಿಟ್ಟರೆ ಕೌಟುಂಬಿಕ ಹಿನ್ನೆಲೆಯ ಉಲ್ಲೇಖವಿರುವುದು ಬಹಳ ಅಪರೂಪ ಎನಿಸುವುದು. ಕುಟುಂಬವು ಗೋತ್ರಗಳ ಆಧಾರದ ಮೇಲೆ ಸಂಘಟಿತವಾಗಿದ್ದಿತು. ಬಾಲ್ಯ, ಯೌವನ, ಮದುವೆ, ದಾಂಪತ್ಯ, ತಾಯ್ತನ ಮುಂತಾದ ಕೌಟುಂಬಿಕ ಅಂಶಗಳ ಬಗ್ಗೆ ಶಾಸನಗಳಲ್ಲಿ ಮಾಹಿತಿಯಿಲ್ಲದಿರುವುದು ಪ್ರಮುಖ ಅಂಶಗಳಾಗಿವೆ.

ಶಾಸನಗಳ ಆಧಾರದಿಂದ ಹೆಣ್ಣುಮಕ್ಕಳ ಮದುವೆ ಯಾವ ವಯಸ್ಸಿನಲ್ಲಿ ನಡೆಯುತ್ತಿದ್ದಿತು ಎಂದು ನಿರ್ಧರಿಸುವುದು ಸಾಧ್ಯವಿಲ್ಲ. ವೈದಿಕ ಯುಗದಲ್ಲಿ ಹದಿನಾರನೆಯ ವಯಸ್ಸಿಗಿಂತಲೂ ಮೊದಲು ಹೆಣ್ಣಿನ ವಿವಾಹ ನಡೆಯುತ್ತಿದ್ದಂತಿಲ್ಲ. ಕರ್ನಾಟಕಕ್ಕೆ ಬಂದ ವಿದೇಶಿ ಪ್ರವಾಸಿ ಅಲ್ಬೆರೂನಿ ಇಲ್ಲಿ ಬಾಲ್ಯವಿವಾಹ ಜಾರಿಯಲ್ಲಿದ್ದ ಬಗ್ಗೆ ತಿಳಿಸಿರುವನು.[೯೨] ಮುಸ್ಲಿಮರ ಆಗಮನದಿಂದ ಬಾಲ್ಯ ವಿವಾಹಗಳು ಜನಪ್ರಿಯತೆಗಳಿಸಿಕೊಂಡಿರಬಹುದು. ಒಟ್ಟಿನಲ್ಲಿ 'ಕರ್ನಾಟಕದಲ್ಲಿ ಬಾಲ್ಯವಿವಾಹ ವಿದ್ದರೂ ಅತಿರೇಕಕ್ಕೆ ಹೋಗಿರಲಿಲ್ಲ ಎಂದು ಡಾ. ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯ ಪಡುತ್ತಾರೆ.[೯೩]

ಪ್ರಾಚೀನರು ಕನ್ಯಾದಾನವನ್ನು ಪುಣ್ಯದಾಯಿಯೆಂದು ಪರಿಗಣಿಸಿದ್ದರು. ಅದರಲ್ಲೂ ದೇವರ ಸನ್ನಿಧಾನದಲ್ಲಿ ಕೈಗೊಳ್ಳುವ 'ಕನ್ಯಾದಾನ' ಬಹಳ ಅಮೂಲ್ಯವಾದ ಯೋಗವೆಂಬ ಭಾವನೆ

ಪ್ರಾಚೀನರಲ್ಲಿತ್ತು. ಸಾಂತರರ ಅರಸ ವೀರಸಾಂತರನ ಪ್ರಾಣವಲ್ಲಭೆ ಜಾಗಲದೇವಿ ಪಲಬರುಂ ಬ್ರಾಹ್ಮಣರ ಕನ್ಯಾದಾನಮಂ ಮಾಡಿಸಿ' ಎಂಬುದಾಗಿ ಶಾಸನದಲ್ಲಿ ವ್ಯಕ್ತವಾಗಿದೆ.[೬೪]

ಪ್ರಾಚೀನ ಕರ್ನಾಟಕದಲ್ಲಿ ಮದುವೆಗೂ ಕರವನ್ನು ವಿಧಿಸಲಾಗುತ್ತಿತ್ತು. ಸೂರ್ಯದೇವಸ್ಥಾನದ ಸಿಡಿತಲೆ ಸ್ಮಾರಕ ಶಾಸನದ ಮೂರನೆ ಸಾಲಿನಲ್ಲಿ 'ಮದುವಣ' ಎನ್ನುವ ಪದವಿದ್ದು ಮದುವೆಯ ಮೇಲೆ ಹಾಕುತ್ತಿದ್ದ ತೆರಿಗೆ ಎಂದು ಕನ್ನಡ-ಕನ್ನಡ ನಿಘಂಟುವಿನಲ್ಲಿ ಅರ್ಥೈಸಲಾಗಿದೆ.[೬೫] ಊರ ಹಿರಿಯರು ಈ ತೆರಿಗೆಯ ಪ್ರಮಾಣವನ್ನು ನಿರ್ಧರಿಸುತ್ತಿದ್ದು ಅದು ರಾಜನ ಬೊಕ್ಕಸಕ್ಕೆ ಹೋಗುವುದಕ್ಕಿಂತ ದೇವಸ್ಥಾನ ಜೀರ್ಣೋದ್ಧಾರ, ಕೆರೆ ನಿರ್ಮಾಣಗಳಂತಹ ಕಾರ್ಯಕಕ್ಕೆ ವಿನಿಯೋಗವಾಗುತ್ತಿದ್ದಿರಬಹುದು.

ಅಳಿಯ ಸಂತಾನ

ಭಾರತದ ಕೌಟುಂಬಿಕ ವ್ಯವಸ್ಥೆಯಲ್ಲಿ ಅಳಿಯ ಸಂತಾನವೆನ್ನುವುದು ದ್ರಾವಿಡ ವರ್ಗಕ್ಕೆ ಸಂಬಂಧಪಟ್ಟ ಮಾತೃಪ್ರಧಾನ ಕುಟುಂಬ ಪದ್ಧತಿ. ಈ ವ್ಯವಸ್ಥೆಯಲ್ಲಿ ತಾಯಿಯೇ ಮನೆಯೊಡತಿ. ಕರ್ನಾಟಕದಲ್ಲಿ ಮಾತೃದೇವತೆಗೆ ಇನ್ನೂ ಪ್ರಾಧಾನ್ಯತೆ ಇದೆ ಎನ್ನಬಹುದು. ಶಾತವಾಹನರು ಮಾತೃಪ್ರಧಾನ ಕುಟುಂಬವನ್ನು ಹೊಂದಿದ್ದು ತಾಯಿಯಿಂದಲೇ ಅರಸರ ಹೆಸರು ಆರಂಭ ವಾಗಿರುವುದನ್ನು ಕಾಣಬಹುದು. ಉದಾ:- ಗೌತಮಿಪುತ್ರ ಶಾತಕರಣಿ. ಮಕ್ಕಳಿಗಿಂತ ಮನೆಗೆ ಬಂದ ಅಳಿಯಂದಿರಿಗೇ ಇಲ್ಲಿ ಹೆಚ್ಚಿನ ಗೌರವ.

ಪ್ರಾಚೀನ ದಕ್ಷಿಣ ಕನ್ನಡ ಜಿಲ್ಲೆಯ ಸಮಾಜದಲ್ಲಿ ಮಾತೃಮೂಲ ಕುಟುಂಬ ವ್ಯವಸ್ಥೆ ಮಧ್ಯಯುಗದಲ್ಲಿ ಸಾಕಷ್ಟು ಪ್ರವರ್ಧಮಾನಕ್ಕೆ ಬಂದಿತು. ಸಮಾಜದಲ್ಲಿ ಜನರ ನಡುವೆ ಏರ್ಪಟ್ಟ ಸಂಬಂಧಗಳು ಬದಲಾವಣೆಗೆ ಕಾರಣವಾದವು. ಜಯಸಿಂಹನ ಕಾಸರಗೋಡಿನ ತಳಂಗೆರೆ ಶಾಸನದಲ್ಲಿ ಅಳಿಯ ಸಂತಾನ ಪದ್ಧತಿಯಿದ್ದ ಲಕ್ಷಣಗಳು ಕಂಡುಬರುತ್ತದೆ. ಈ ಶಾಸನದಲ್ಲಿ ಉಲ್ಲೇಖಗೊಂಡಿರುವಂತೆ ರಾಜಮನೆತನಕ್ಕೆ ಸೇರಿದ ಸ್ತ್ರೀಯೊಬ್ಬಳಿಗೆ ಕಲ್ಲು, ಕಾಡು, ಬೆಟ್ಟಗಳಿಂದ ಕೂಡಿದ ಭೂಮಿಯನ್ನು 'ಕನ್ಯಾದಾನ'ವಾಗಿ ನೀಡಲಾಯಿತು. ಆಕೆ ಅಲ್ಲಿ ಕೆರೆಯೊಂದನ್ನು ಕಟ್ಟಿಸಿ ಬಂಜರು ಭೂಮಿಯನ್ನು ಕೃಷಿಯೋಗ್ಯಗೊಳಿಸಿದ್ದು ಅವಳ ಛಲ, ಶ್ರಮ ಮತ್ತು ಕಷ್ಟ ಸಹಿಷ್ಣುತೆಯನ್ನು ಎತ್ತಿ ಹಿಡಿಯುತ್ತದೆ. ಆಕೆ ಕುಟುಂಬದ ಯಜಮಾನಿಯಾಗಿದ್ದು ದಾನವಾಗಿ ಬಂದ ಭೂಮಿಯ ಮೇಲಿನ ಅಧಿಕಾರ ವಂಶಪಾರಂಪರ್ಯವಾಗಿ ಹೆಣ್ಣುಮಕ್ಕಳಿಗೆ ಸಲ್ಲಬೇಕೆಂದು ವಿಧಿಸಿದ್ದು ಈ ವ್ಯವಸ್ಥೆಯ ಲಕ್ಷಣವಾಗಿದೆ.[೬೬]

ಆಳುಪರು ತಮ್ಮ ಆಳ್ವಿಕೆಯ ಕೊನೆ ದಿನಗಳವರೆಗೂ ಅಳಿಯ ಸಂತಾನಕಟ್ಟನ್ನು ಅನುಸರಿಸಿ ದವರಲ್ಲ. ಆದರೆ ಕ್ರಿ.ಶ. ಹದಿಮೂರನೇ ಶತಮಾನದ ಮಧ್ಯಭಾಗದಲ್ಲಿ ತಮಿಳುನಾಡಿನ ಉತ್ತರಕ್ಕೆ ಪ್ರಬಲರಾಗುತ್ತಿದ್ದ ನಗಿರೆ ಮತ್ತು ಹಾಡುವಳ್ಳಿ ರಾಜ್ಯಗಳ ಅರಸು ಮನೆತನಗಳಲ್ಲಿ ಅಳಿಯ ಸಂತಾನಕಟ್ಟಿನವರಿದ್ದರು. ಈ ಅನುಕ್ರಮ ಪದ್ಧತಿಯು ಅಳಿಯ ಬಂಡದೇವನಲ್ಲಿ ತಾನು ಆಳುಪ ಸಿಂಹಾಸನದ ಹಕ್ಕುದಾರನೆಂಬ ಭಾವನೆಯನ್ನು ಹುಟ್ಟಿಸಿರಬೇಕು.[೬೭]

ಈ ಪದ್ಧತಿಯ ಉಲ್ಲೇಖಗಳು ಮಲೆನಾಡು ಮತ್ತು ಕರಾವಳಿಯ ಶಾಸನಗಳಲ್ಲಿ ಕಂಡುಬರುತ್ತವೆ. ಬೊಮ್ಮಲಾಪುರದ ಶಾಸನಗಳಲ್ಲಿ ಅಳಿಯ ಸಂತಾನದ ಉಲ್ಲೇಖವಿರುವುದರಿಂದ ಬಹುಶಃ ಈ ಭಾಗದಲ್ಲಿ ಅಳಿಯ ಸಂತಾನದ ವ್ಯವಸ್ಥೆ ಇದ್ದಿರಬಹುದು ಎಂದು ಅರ್ಥೈಸಬಹುದು. ಆಳುಪ ಮನೆತನಕ್ಕೆ ಸೇರಿದ ಜೋಗವ್ವ ತನ್ನ ಮಗಳಾದ ಪೋಚಬ್ಬರಸಿಯನ್ನು ಸಹೋದರನಾದ ಜಯಸಿಂಹನಿಗೆ ಕೊಟ್ಟು ಮದುವೆ ಮಾಡಿ ಅಳಿಯ ಸಂತಾನ ಕಟ್ಟನ್ನು ಮಂದುವರಿಸಿದಳು.[೯೮] ಈ ಪದ್ಧತಿಯ ಪ್ರಕಾರ ಅವಳ ಆಸ್ತಿ ಮಗಳಿಗೆ ಹೋಗುವುದು.

ಇಂದಿಗೂ ಉದ್ಯಾವರ, ಬಾರ್ಕೂರು, ಮಂಗಳೂರು, ಉಡುಪಿ, ಕೇರಳ ಹಾಗೂ ಮಲೆನಾಡಿನ ಕೆಲವೊಂದು ಪ್ರದೇಶಗಳಲ್ಲಿ ಅಳಿಯ ಸಂತಾನವ್ಯವಸ್ಥೆ ಜೀವಂತವಾಗಿ ಉಳಿದುಕೊಂಡು ಬಂದಿದೆ.

ಬಹುಪತ್ನಿತ್ವ

ಬಹುಪತ್ನಿತ್ವ ಪ್ರಾಚೀನ ಕಾಲದಲ್ಲಿ ಸಾಮಾಜಿಕ ಮನ್ನಣೆಯನ್ನು ಪಡೆದ ವಿಷಯವಾಗಿದ್ದಿತು. 'ರಾಜ ಬಹುವಲ್ಲಭ' ಎನ್ನುವಂತೆ ಅಸಂಖ್ಯಾತ ಸ್ತ್ರೀಯರನ್ನು ಮದುವೆಯಾಗುತ್ತಿದ್ದರು. ಹೊಯ್ಸಳ ನರಸಿಂಹನಿಗೆ ೩೮೪ ಹೆಂಡತಿಯರಿದ್ದರೆಂದು ಶಾಸನವೊಂದು ತಿಳಿಸುತ್ತದೆ. ಶಾಸನೋಕ್ತ ರಾಣಿಯರೇ ಸಾಕಷ್ಟು ಸಂಖ್ಯೆಯಲ್ಲಿ ಇದ್ದುದು ಕಂಡುಬರುತ್ತದೆ.[೯೯]

ಶ್ರೀಕೃಷ್ಣ ಪರಮಾತ್ಮನಿಗೆ ಅಷ್ಟ ಮಹಿಷಿಯರಿದ್ದ ಹಾಗೆ ರಾಜನಾದವನಿಗೆ ಅನೇಕ ರಾಣಿಯರಿದ್ದುದು ಅವರಿಗೆ 'ಪರಿಯರಸಿ' 'ಪಟ್ಟಮಹಿಷಿ' ಎಂಬ ವಿಶೇಷಣಗಳನ್ನು ಬಳಸುತ್ತಿದ್ದರು. ಕೆಲವು ಶಾಸನಗಳಲ್ಲಿ ಶಾಂತಲೆಯನ್ನು 'ಉದ್ವೃತ್ತಸವತಿ ಗಂಧವಾರಣೆ' ಎಂಬ ಬಿರುದುನಿಂದ ಕರೆಯಲಾಗಿದೆ ಹಾಗೂ ಬಹುಪತ್ನಿತ್ವದ ಜೊತೆಗೆ ರಾಣಿಯರಲ್ಲಿದ್ದ ಸವತಿ ಮಾತ್ಸರ್ಯದ ಪರಮಾವಧಿಯನ್ನು ಶಾಸನಗಳು ಎತ್ತಿ ಹೇಳುತ್ತವೆ.[೧೦೦]

ಮಧ್ಯಮಲೆನಾಡಿನ ಭಾಗದಲ್ಲಿ ಆಳ್ವಿಕೆ ನಡೆಸಿದ ರಾಜರುಗಳು ಮಾತ್ರವಲ್ಲದೆ ಅನೇಕ ಅಧಿಕಾರಿಗಳು, ಶ್ರೀಮಂತರು, ಸೇನಾಪತಿಗಳು, ವೀರರು, ಲೆಂಕರು ಒಬ್ಬರಿಗಿಂತ ಹೆಚ್ಚು ಮಡದಿಯರನ್ನು ಪಡೆದಿರುತ್ತಿದ್ದರು. ಕೆಲವರಿಗೆ ಏಕಪತ್ನಿ, ದ್ವಿಪತ್ನಿ ಮತ್ತು ಕೆಲವರಿಗೆ ಮೂರು ಜನ ಮತ್ತು ಅದಕ್ಕಿಂತಲೂ ಹೆಚ್ಚು ಪತ್ನಿಯರಿದ್ದುದು ಕಂಡುಬರುತ್ತದೆ.

ಸಾಮಾನ್ಯ ವರ್ಗಕ್ಕೆ ಬಂದರೆ ಅಲ್ಲಿ 'ಏಕಪತ್ನಿ ವಿವಾಹ' ರೂಢಿಯಿದ್ದಂತಿದೆ. ಲಭ್ಯವಿರುವ ಒಂಟಿಕೈ ಮಾಸ್ತಿ ವಿಗ್ರಹಗಳು ಈ ಸಾಮಾನ್ಯ ವರ್ಗಕ್ಕೆ ಸೇರಿದವುಗಳೇ ಅಧಿಕ ಸಂಖ್ಯೆಯಲ್ಲಿರಬಹುದು.

ಇನ್ನು ಮಧ್ಯಮಲೆನಾಡಿನ ಭಾಗಗಳಲ್ಲಿ ನೂರಾರು ಸಂಖ್ಯೆಯಲ್ಲಿ ಮಾಸ್ತಿಕಲ್ಲು ವೀರಗಲ್ಲುಗಳು ಲಭ್ಯವಾಗಿವೆ(ಆರನೇ ಅಧ್ಯಾಯ). ಇಕ್ಕೈ ವೀರ ಮಾಸ್ತಿಯ ಕಲ್ಲಿನಲ್ಲಿ ಸತಿಯು ಎರಡು ತೋಳುಗಳನ್ನು ಎತ್ತಿರುವುದರ ಜೊತೆಗೆ ಮಧ್ಯದಲ್ಲಿ ವೀರ ಕುಳಿತಿದ್ದು ಎರಡು ಕಡೆ ಆತನ ಸತಿಯರು ಕುಳಿತಿರುವ ಶಿಲ್ಪಗಳಿವೆ.

ಕೆಲವು ವೀರರು ಅಥವಾ ಸೇನಾಪತಿಗಳು ಯುದ್ಧದಲ್ಲಿ ಹೋರಾಡಿ ಮಡಿದಾಗ, ಸತಿಯನ್ನು ಆಚರಿಸಿ ಆತನ ಚಿತೆಯ ಜೊತೆಯಲ್ಲಿ ಆತನ ಮೂವರು ಪತ್ನಿಯರು ಮರಣ ಹೊಂದಿದ್ದಾಗ ಅವರ ನೆನಪಿಗಾಗಿ ಮುಕ್ಕೈ ವೀರ ಮಾಸ್ತಿಯ ವಿಗ್ರಹವನ್ನು ನೆಡುವ ಪರಿಪಾಠ ಅಂದಿನ ಕಾಲದಲ್ಲಿತ್ತು ಎಂಬುದಕ್ಕೆ ತೀರ್ಥಹಳ್ಳಿಯ ಕೆಸ್ತೂರಿನಲ್ಲಿರುವ ಮುಕ್ಕೈ ವೀರಮಾಸ್ತಿ ಅತ್ಯುತ್ತಮ ಉದಾಹರಣೆ ಎನ್ನಬಹುದು.

ಇನ್ನು ಕೆಲವು ಅರಸರಿಗೆ ೭ ಜನ ಪತ್ನಿಯರಿದ್ದರು ಎಂಬುದಕ್ಕೆ ಬಳಗಟ್ಟೆಯ ಏಳುಮಾಸ್ತಿ ವಿಗ್ರಹಗಳೆ ಸಾಕ್ಷಿಯಾಗಿವೆ. ಒಂದು ಐತಿಹ್ಯದ ಪ್ರಕಾರ ಒಳಗಟ್ಟೆ (ತೀರ್ಥಹಳ್ಳಿ) ಪ್ರಾಂತ್ಯದಲ್ಲಿ ಎಡಿಯೂರು ಹೆಗ್ಗಡೆ ಎನ್ನುವ ಸಾಮಂತ ಅರಸನು ಆಳುತ್ತಿದ್ದ. ಕ್ರಮೇಣ ಮೈಸೂರು ಸುಲ್ತಾನ ಟಿಪ್ಪುವಿಗೆ ಕೊಡುತ್ತಿದ್ದ ಕಪ್ಪಕಾಣಿಕೆಯನ್ನು ನಿಲ್ಲಿಸಿದನು. ಕೂಡಲೇ ಮೈಸೂರಿನಿಂದ ಆಗಮಿಸಿದ ಸೈನ್ಯ ಎಡಿಯೂರು ಹೆಗ್ಗಡೆಯನ್ನು ಬಂಧಿಸಿ ಮೈಸೂರಿಗೆ ಕರೆದೊಯ್ದರು. ಅಲ್ಲಿನ ಸೆರೆಮನೆಯಲ್ಲಿ ಆತ ತನ್ನ ಬೆರಳಿನಲ್ಲಿರುವ ವಜ್ರದುಂಗುರ ಸೇವಿಸಿ ಮರಣ ಹೊಂದಿದ ಸುದ್ದಿ ತಿಳಿದ ಕೂಡಲೇ ಇಲ್ಲಿ ಆತನ ೭ ಜನ ಪತ್ನಿಯರು ಸತಿಸಹಗಮನ ಆಚರಿಸಿ ಪ್ರಾಣವನ್ನು ಕಳೆದುಕೊಂಡರು. ಇಂದಿಗೂ ಇಲ್ಲಿ ೭ ವಿಗ್ರಹಗಳನ್ನು ಸಾಲಾಗಿ ನಿಲ್ಲಿಸಿ ನಿತ್ಯ ಪೂಜೆಗೈಯ್ಯುವುದನ್ನು ಕಾಣಬಹುದು.

ದಾಂಪತ್ಯ

ಮದುವೆಯಾದ ನಂತರ ಗಂಡು-ಹೆಣ್ಣು ಕೂಡಿ ಬಾಳುವುದೇ ದಾಂಪತ್ಯ. ಪತಿಯ ಧರ್ಮಾರ್ಥಕಾಮ ಮೋಕ್ಷಗಳಲ್ಲಿ ಸತಿಯು ಸಹಭಾಗಿನಿ. ಪತಿಯ ಸುಖ-ದುಃಖಗಳಲ್ಲಿಯೇ ತನ್ನ ನೋವು ನಲಿವುಗಳನ್ನು ಕಂಡುಕೊಂಡು ಜೀವನ ಪರ್ಯಂತ ಆತನ ನೆರಳಿನಂತೆ ಹಿಂಬಾಲಿಸಿ ದಾಂಪತ್ಯದಲ್ಲಿಯೇ ಜೀವನ ಸಾರ್ಥಕತೆಯನ್ನು ಪಡೆದವಳು. ಬಹಳಷ್ಟು ಶಾಸನಗಳು ದಾನಿಗಳನ್ನು ದಂಪತಿ ಸಮೇತ ಹೊಗಳಿರುವುದನ್ನು ಗಮನಿಸಬಹುದು. ಸಾಂತರರ ದೊರೆ ವೀರ ಸಾಂತರನು ತನ್ನ ಪತ್ನಿ ಜಾಗಲದೇವಿ ಜೊತೆಗೂಡಿ ದಾನ ನೀಡಿದ್ದನು ಎಂದು ಶಾಸನವೊಂದು ವಿವರಣೆ ನೀಡುತ್ತದೆ.[೧೦೧]

೩.೪. ಆರ್ಥಿಕ ವ್ಯವಸ್ಥೆ

ಯಾವುದೇ ಒಂದು ಪ್ರದೇಶದ ಪ್ರಗತಿಯ ಹೆಜ್ಜೆಯನ್ನು ಅಲ್ಲಿನ ಆರ್ಥಿಕ ಇತಿಹಾಸದಲ್ಲಿ ಗುರುತಿಸಬೇಕಾಗುತ್ತದೆ. ಭೂ ಸಂಬಂಧವಾಗಿ ವಿವಿಧ ವ್ಯವಹಾರಗಳು ಅದಕ್ಕೆ ತಕ್ಕಂತೆ ಬೆಳೆದುಬಂದ ವ್ಯಾಪಾರ, ವ್ಯವಹಾರಗಳು ಒಂದು ಬಗೆಯ ಸುಸಂಬದ್ಧತೆಯನ್ನು ಬೆಳೆಸಿಕೊಂಡು ಬಂದಂತೆ ತೋರುತ್ತದೆ. ಆರ್ಥಿಕ ಕ್ಷೇತ್ರದ ಆಗುಹೋಗುಗಳೇ ಹಿಂದಿನಿಂದ ಇಂದಿನವರೆಗೂ ಎಲ್ಲಾ ರಂಗಗಳನ್ನು ಸಮತೋಲನದಲ್ಲಿಡುವ ನಿಯಂತ್ರಕಗಳಾಗಿ ಕೆಲಸ ಮಾಡುತ್ತಾ ಬಂದಿವೆ.

ಕೌಟಿಲ್ಯನ ಪ್ರಕಾರ 'ಪ್ರಾಚೀನ ಭಾರತದ ಸಮಾಜ ಸರಳವಾಗಿರದೇ ಸಂಕೀರ್ಣವಾಗಿದ್ದು ಆರ್ಥಿಕ, ರಾಜಕೀಯ, ನೈತಿಕ ಹಾಗೂ ಸಾರ್ವಜನಿಕ ಆಡಳಿತ ಅಂಶಗಳನ್ನು ಒಳಗೊಂಡಿದೆ.

ಆಡಳಿತ ಮತ್ತು ಆರ್ಥಿಕ ವ್ಯವಸ್ಥೆ ಒಂದಕ್ಕೊಂದು ಪೂರಕವಾಗಿದೆ' ಎಂಬುದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವ್ಯಕ್ತವಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರ ಆಡಳಿತ ಮತ್ತು ಆರ್ಥಿಕಾಂಶಗಳ ಮೇಲೆ ಬೆಳಕು ಚೆಲ್ಲುವ ಕೃತಿಯಾಗಿದೆ.

ಮಧ್ಯಮಲೆನಾಡಿನ ಆರ್ಥಿಕ ವ್ಯವಸ್ಥೆಯನ್ನು ಶಾಸನಗಳ ಮುಖಾಂತರ ಅಧ್ಯಯನ ಮಾಡಿದಾಗ ವಿಪುಲವಾದ ಮಾಹಿತಿಗಳು ದೊರೆಯುತ್ತವೆ. ನೂರಾರು ಶಾಸನಗಳಲ್ಲಿ ಕಂಡುಬರುವ ವಿವರಗಳಿಂದ ಆ ಕಾಲದ ಆರ್ಥಿಕ ವ್ಯವಸ್ಥೆಯನ್ನು ಕಟ್ಟಿಕೊಡಲು ಇಲ್ಲಿ ಸ್ವಲ್ಪ ಪ್ರಯತ್ನಿಸಲಾಗಿದೆ. ಶಾಸನೋಕ್ತ ವೃತ್ತಿಗಳು, ಅಳತೆ ಮತ್ತು ತೂಕ, ವರ್ತಕ ಶ್ರೇಣಿಗಳು, ನಾಣ್ಯಗಳು ಮುಂತಾದ ವಿಷಯಗಳಿಗೆ ಸಂಬಂಧಿಸಿದ ಹಾಗೆ ದೊರೆಯುವ ವಿವರಗಳು ಅತ್ಯಂತ ವೈವಿಧ್ಯತೆಯಿಂದ ಕೂಡಿದ್ದು ಅವುಗಳನ್ನು ಅರ್ಥವ್ಯವಸ್ಥೆಯ ಅಡಿಯಲ್ಲಿ ಅಧ್ಯಯನ ಮಾಡಲಾಗಿದೆ.

ಕೃಷಿ

ಮಧ್ಯಮಲೆನಾಡಿನಲ್ಲಿ ಕೃಷಿ ಪ್ರಧಾನ ವೃತ್ತಿಯಾಗಿತ್ತು ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಮಠಗಳಿಗೆ, ಅಗ್ರಹಾರಗಳಿಗೆ, ಬ್ರಾಹ್ಮಣರಿಗೆ, ದೇವಾಲಯಗಳಿಗೆ ಮತ್ತು ವೀರರಿಗೆ ನೀಡಿದ ದಾನಗಳಲೆಲ್ಲಾ ಭೂದಾನವೇ ಪ್ರಮುಖವಾಗಿ ಗೋಚರವಾಗುತ್ತಿತ್ತು. ಭೂಮಿದಾನಕ್ಕೆ ಸಮನಾದುದಿಲ್ಲ ಭೂಮಿಗೆ ಸಮನಾದ ಐಶ್ವರ್ಯವಿಲ್ಲವೆಂದು ಶಿಕಾರಿಪುರ ಶಾಸನವು ತಿಳಿಸುತ್ತದೆ.[೧೦೩] ಭೂತಾಯಿಯನ್ನು ಇಂದಿಗೂ ಪೂಜಿಸುತ್ತಿದ್ದು ಸಕಲ ಜೀವರಾಶಿಗೆ ಅನ್ನ ನೀಡುವಳು ಎಂಬ ಬಹುಪೂಜ್ಯವಾದ ಭಾವನೆ ಎಲ್ಲರಲ್ಲಿಯೂ ಇದೆ. ಅಂದಿನ ಕಾಲದಲ್ಲಿ ಹಲವಾರು ರೀತಿಯ ಭೂಮಿಯ ವರ್ಗಗಳಿದ್ದವು ಎಂಬುದನ್ನು ಶಾಸನಗಳು ತಿಳಿಸುತ್ತವೆ.

ಉಂಬಳಿ ಭೂಮಿ: ಮುಖ್ಯವಾಗಿ ಜೀವನಾಧಾರಕ್ಕಾಗಿ ಕೊಡುವ ಭೂಮಿಯೇ ಉಂಬಳಿ ಭೂಮಿ. ಮಠಗಳು ಕೆಲವರ ಸೇವೆಯನ್ನು ಪರಿಗಣಿಸಿ ಅಂತವರಿಗೆ ಭೂಮಿಯನ್ನು ಉಂಬಳಿಯಾಗಿ ನೀಡುತ್ತಿದ್ದವು ಎಂಬುದಾಗಿ ಅಂದಗೆರೆ ಶಾಸನವು ಹೇಳುತ್ತದೆ.

ಉತ್ತಾರ ಭೂಮಿ: ಮಠಗಳು ವಿಶೇಷ ಸೇವೆಯನ್ನು ಸಲ್ಲಿಸಿದವರಿಗೆ ಕೆಲವು ಸಂದರ್ಭಗಳಲ್ಲಿ ಕಂದಾಯ ರಹಿತ ಭೂಮಿಯನ್ನು ದಾನ ಮಾಡುತ್ತಿದ್ದ ಭೂಮಿ.

ಅಗ್ರಹಾರಗಳ ಭೂಮಿ: ಧರ್ಮಶಾಸ್ತ್ರದ ಅಧ್ಯಯನ ನಡೆಸಲೋಸುಗ ಅಗ್ರಹಾರಗಳಲ್ಲದ ಬ್ರಾಹ್ಮಣರಿಗೆ ಭೂದಾನ ನಡೆಸಲಾಗುತ್ತಿತ್ತು.

ಸರ್ವಮಾನ್ಯ ಭೂಮಿ: ಎಲ್ಲಾ ತೆರಿಗೆಗಳಿಂದ ಮುಕ್ತವಾದ ಭೂಮಿಯನ್ನು ಸರ್ವಮಾನ್ಯ ಭೂಮಿಯೆಂದು ಪರಿಗಣಿಸಲಾಗುವುದು.

ಅರ್ಧಮಾನ್ಯ: ತೆರಿಗೆಯಲ್ಲಿ ಅರ್ಧ ರಿಯಾಯ್ತಿ ಪಡೆದ ಭೂಮಿಯನ್ನು ಅರ್ಧಮಾನ್ಯ ಭೂಮಿಯೆಂದು ಪರಿಗಣಿಸಲಾಗುವುದು.

ಗುತ್ತಿಗೆ ಭೂಮಿ: ಜಮೀನುದಾರ ತನ್ನ ಭೂಮಿಯನ್ನು ಚಿಕ್ಕ ಹಿಡುವಳಿದಾರರಿಗೆ ಕೊಟ್ಟು ಅವರಿಂದ ಗೇಣಿಯನ್ನು ಪಡೆಯುವ ವ್ಯವಸ್ಥೆ.

ಶಾಸನಗಳಲ್ಲಿ ಇನ್ನು ಅನೇಕ ರೀತಿಯ ಜಮೀನುಗಳ ವಿಷಯ ಪ್ರಸ್ತಾಪವಿದೆ. ಸಾಮಾನ್ಯವಾಗಿ ಜಮೀನುಗಳನ್ನು ದೇವಮಾತೃಕ ಮತ್ತು ನದಿಮಾತೃಕ ಎಂದು ಎರಡು ವಿಭಾಗಗಳಾಗಿ ವಿಂಗಡಿಸಿರುವುದು ಕಂಡುಬರುತ್ತದೆ. ಮಳೆಯ ನೀರನ್ನು ಆಶ್ರಯಿಸಿ ಬೆಳೆಯುವ ಜಮೀನುಗಳನ್ನು ದೇವಮಾತೃಕಗಳೆಂದು, ನದಿ - ಕೆರೆ ಮುಂತಾದವುಗಳನ್ನು ಆಶ್ರಯಿಸಿ ಬೆಳೆಯುವ ಜಮೀನುಗಳನ್ನು ನದಿಮಾತೃಕಗಳೆಂದು ಗುರುತಿಸುತ್ತೇವೆ. ಮಧ್ಯಮಲೆನಾಡಿನ ಬಹಳಷ್ಟು ಶಾಸನಗಳಲ್ಲಿ ಗದ್ದೆ ಬೆದ್ದಲು, ತೋಟ ತುಡಿಕೆ, ಮಕ್ಕಿಹಕ್ಕಲು, ಕುಂಮರೆ ಎಂಬ ಉಲ್ಲೇಖವಿದೆ. ಇಲ್ಲಿನ ಪ್ರಧಾನವಾದ ಬೆಳೆಗಳೆಂದರೆ ಭತ್ತ, ಅಡಿಕೆ, ಮೆಣಸು, ಬಾಳೆ, ವೀಳ್ಯದೆಲೆ, ತೆಂಗು, ಕಾಫಿ, ಏಲಕ್ಕಿ ಮುಂತಾದವುಗಳ ಉಲ್ಲೇಖವಿದೆ. ಉದಾ:- ಹೊಸಕೊಪ್ಪ (೨೪೪) ಶಾಸನದಲ್ಲಿ ದೇವಮಾತೃಕವನ್ನು 'ಕಾಡಾರಂಭ' ಎಂದು ನದಿಮಾತೃಕವನ್ನು 'ನೀರಾರಂಭ' ಎಂದು ಗುರುತಿಸಿದೆ.[೧೦೩] ಅಡಿಕೆ ತೋಟಕ್ಕೆ ಸಂಬಂಧಿಸಿದ ದಾಖಲೆಗಳು ಕಡತಗಳಲ್ಲಿ ಸಾಕಷ್ಟಿವೆ.[೧೦೪] ಶಾಸನಗಳ ಜೊತೆಗೆ ಆನುಷಂಗಿಕ ಆಕರಗಳಾದ ಶೃಂಗೇರಿ ಮಠದ ಕಡತಗಳಲ್ಲಿ ತೋಟದ ಬಗ್ಗೆ ಮಾಹಿತಿಯನ್ನು ಪಡೆಯಬಹುದು.

೭೦೦ ಮರದ ಸ್ವಾಸ್ಥೆಯನ್ನು ಬೊಮ್ಮನ ಅಳಿಯ ನಾಗನಿಗೆ, ಕಳವಾಡಬಾಗಿ ಹಗಡೂರು ನಾಡ ಎಡೆಹಳ್ಳಿ ಗ್ರಾಮದಲ್ಲಿ ೭೦೦ ಅಡಿಕೆ ಮರದ ದಟ್ಟ ವರಾಡವನ್ನು ತೆತ್ತು ಈ ತೋಟವನ್ನು ಪಡೆದಿದ್ದಕ್ಕೆ ೮ ವರಹ ಮತ್ತು ೪ ಹಣವನ್ನು ಶೃಂಗೇರಿ ಮಠಕ್ಕೆ ಸಮರ್ಪಿಸಿದನು. ಅಡಿಕೆಮರ ಪಡೆದಿದುದಕ್ಕೆ ಪ್ರತಿವರ್ಷ ೪ ವರಹ ೨ ಹಣವನ್ನು ಸಲ್ಲಿಸುವುದಾಗಿ ಕರಾರಿಗೆ ಒಪ್ಪಿಕೊಂಡಿದ್ದಾರೆ.[೧೦೫]

ಭೂಮಿಯ ವಿಧಗಳು

ಜಮೀನುಗಳನ್ನು ಅವುಗಳ ಸ್ವರೂಪ ಮತ್ತು ಗುಣಮಟ್ಟದ ಆಧಾರದ ಮೇಲೆ ಶಾಸನಗಳಲ್ಲಿ ಉಲ್ಲೇಖಿಸಿರುವರು. ಹಲವಾರು ಗದ್ದೆಗಳಾದ ಕೆಳಗಣಗದ್ದೆ, ಸಂಪಿಗೆ ಗದ್ದೆ, ಕೊಡಲಗದ್ದೆ, ತೆಂಗಲು ದಡ, ಹಂಗರನ ಹಾಳಿ, ಮುಂಡಗಹಾಳಿ, ಕೊಡಗಿಗದ್ದೆ, ಬೆದ್ದಲು, ತೆಂಕಲು ಹಕ್ಕಲು, ಮೂಡಲು ಬೆಟ್ಟ, ತೆಂಕಲೂ ಬೆಟ್ಟ, ಪಡವಲಹಳ್ಳಿ, ಬಸಗಲುಹೊಳೆ, ಮೇಲಣಹಾಳಿ, ಕೇದಗೆಯ ಹಾಳಿ, ಬಿದಿರುಹಾಳಿ ಇತ್ಯಾದಿ. ಮಕ್ಕಿಹಕ್ಕಲು ವ್ಯವಸಾಯ ಯೋಗ್ಯವಲ್ಲದ ಭೂಮಿಯೆಂದು ಭಾವಿಸಬಹುದಾಗಿದೆ. ಬಹಳಷ್ಟು ಶಾಸನಗಳು ಗಣ್ಣ ಎಂಬ ಭೂಮಿಯನ್ನು ಉಲ್ಲೇಖಿಸುತ್ತವೆ ಹಾಗೂ ದೊಡ್ಡ ದೊಡ್ಡ ಗದ್ದೆಗಳಿಗೆ ಹಾಳಿ ಎಂಬ ಪದದ ಆಚರಣೆ ಈಗಲೂ ರೂಢಿಯಲ್ಲಿದೆ.

ನೀರಾವರಿ

ಕೃಷಿ ಸಮೃದ್ಧಿಯಾಗಿರಬೇಕಾದರೆ ಅದರ ಜೊತೆ ನೀರಾವರಿ ವ್ಯವಸ್ಥೆಯೂ ಇರಬೇಕು. ಕೃಷಿ ಸಂಪೂರ್ಣವಾಗಿ ಮಳೆಯನ್ನೇ ಅವಲಂಬಿಸಿರಲು ಸಾಧ್ಯವಿಲ್ಲದಿದ್ದರಿಂದ ಕೃಷಿಗೆ ಕೃತಕ

ನೀರಿನ ವ್ಯವಸ್ಥೆ ಅನಿವಾರ್ಯ. ಮಳೆಯನ್ನೇ ಅವಲಂಬಿಸದ ಕೃಷಿ ಉತ್ಪಾದನೆ ಹೆಚ್ಚಿಸಲು ನೀರಾವರಿ ಸಂಪನ್ಮೂಲಗಳು ಅತ್ಯವಶ್ಯ. ಈ ನಿಟ್ಟಿನಲ್ಲಿ ಕೆರೆ-ಕಾಲುವೆಗಳನ್ನು, ಬಾವಿಗಳನ್ನೂ, ದೇವಾಲಯಗಳನ್ನು ನಿರ್ಮಿಸುವುದು ಬಹಳ ಪುಣ್ಯದ ಕಾರ್ಯವೆಂದು ಪ್ರಾಚೀನರು ಭಾವಿಸಿದ್ದರು. ಮಧ್ಯಮಲೆನಾಡಿನ ಶಾಸನಗಳಲ್ಲಿ ಕೆರೆಗಳ ನಿರ್ಮಾಣ ಮತ್ತು ನೀರಾವರಿ ವ್ಯವಸ್ಥೆಯ ಮಾಹಿತಿ ಬಹಳ ಅಲ್ಪವೆಂದೇ ಹೇಳಬಹುದು. ಇಲ್ಲಿ ಹೆಚ್ಚಾಗಿ ಕೆರೆ, ಬಾವಿಗಳನ್ನು ನಿರ್ಮಾಣ ಮಾಡಿದಂತೆ ಕಾಣುವುದಿಲ್ಲ. ಆರಗದಲ್ಲಿ ವಿರುಪ ಸಮುದ್ರ ಕೆರೆಯನ್ನು ನಿರ್ಮಿಸಿದ ಉಲ್ಲೇಖವಿದೆ. ಪ್ರಕೃತಿಯೇ ನೀರಿನಾಸರೆಯನ್ನು ಒದಗಿಸಿದ್ದರಿಂದ ನಂತರ ಕೆರೆ ನೀರಾವರಿಯನ್ನು ಜನರು ನಿರ್ಲಕ್ಷಿಸಿದರು ಎಂದು ಹೇಳಬಹುದು. ಮಲೆನಾಡಿನ ಬಹಳಷ್ಟು ಶಾಸನಗಳಲ್ಲಿ 'ಕಾಡಾರಂಭ' ಎಂಬ ಪದದ ಉಲ್ಲೇಖ ಇರುವುದರಿಂದ ನದಿ, ಕೆರೆ, ಕಾಲುವೆಗಳಿಗೆ ಬದಲಾಗಿ ಮಳೆಯು ಯಥೇಚ್ಛವಾಗಿ ಬೀಳುತ್ತಿದ್ದರಿಂದ ಮಳೆಯ ನೀರನ್ನೇ ಆಶ್ರಯಿಸಿದರು ಹಿನ್ನೆಲೆಯಲ್ಲಿ ಕೆರೆ, ಬಾವಿಗಳ ನಿರ್ಮಾಣವನ್ನು ನಿರ್ಲಕ್ಷಿಸಿದರು ಎನ್ನಲಾಗಿದೆ.

ಸಾಗುವಳಿ ಭೂಮಿಯನ್ನು ದಾನವಾಗಿ ಕೊಡುವಾಗ ಅದರ ಬಿತ್ತನೆಯ ಸಾಮರ್ಥ್ಯವನ್ನು ಉಲ್ಲೇಖಿಸಿರುವುದು ಸಾಮಾನ್ಯವಾದ ಪದ್ಧತಿ. ಇಲ್ಲಿರುವ ಕೆಲವು ಶಾಸನಗಳು ಇದನ್ನು ದೃಢೀಕರಿಸುತ್ತೇವೆ. ಶೃಂಗೇರಿಯ ಶಾಸನವೊಂದರಲ್ಲಿ ಎರಡು ಗ್ರಾಮಗಳನ್ನು ದಾನವಾಗಿ ಕೊಟ್ಟು ಅವುಗಳ ಉತ್ಪನ್ನ ೨೨೫ ಸಲಗೆ ಭತ್ತ ಎಂದಿದೆ.[೧೦೬]

ವೃತ್ತಿಗಳು ಮತ್ತು ಉದ್ದಿಮೆಗಳು

ಕೃಷಿ ಮತ್ತು ತೋಟಗಾರಿಕೆಯು ಅಂದಿನ ಕಾಲದ ಪ್ರಧಾನ ವೃತ್ತಿಗಳಾಗಿದ್ದರೂ ಇನ್ನಿತರ ವೃತ್ತಿಗಳು ಆಚರಣೆಯಲ್ಲಿದ್ದವು ಮತ್ತು ಅವುಗಳು ಅಗತ್ಯವಾಗಿದ್ದವು ಎನ್ನುವ ಅಂಶವನ್ನು ಶಾಸನಗಳು ತಿಳಿಸುತ್ತವೆ. ಆದರೆ ಬೇರೆ ಬೇರೆ ವೃತ್ತಿಗಳು ಮತ್ತು ಉದ್ದಿಮೆಗಳ ಹೆಸರುಗಳನ್ನು ಹೇಳುತ್ತಿದ್ದರೂ ಸವಿಸ್ತಾರವಾದ ವಿವರಗಳನ್ನು ನೀಡುತ್ತಿಲ್ಲ, ನೇಯ್ಗೆಯು ಪ್ರಧಾನವಾದ ಉದ್ದಿಮೆಯಾಗಿದ್ದಿತು. ಒಂದು ಶಾಸನದಲ್ಲಿ ಮಗ್ಗದ ಉಲ್ಲೇಖವಿದೆ.[೧೦೭] ಬಟ್ಟೆಯನ್ನು ನೇಯಲು ಮಗ್ಗಗಳನ್ನು ಬಳಸುತ್ತಿದ್ದರು. ಇದರಲ್ಲಿ ಜೇಡರ ಮಗ್ಗ ಎಂಬ ಮಾಹಿತಿ ಇದೆ. ಕೆಲವು ಕವಲೇದುರ್ಗ ಶಾಸನಗಳಲ್ಲಿ ಪಟ್ಟೆ[೧೦೮], ಪಠವಳಿ[೧೦೯], ಝುಲ್ಲಿ ಪಟ್ಟೆ[೧೧೦] ಎಂಬ ಉಲ್ಲೇಖಗಳಿದ್ದು, ಅವುಗಳು ಬೆಲೆಬಾಳುವ ರೇಷ್ಮೆವಸ್ತುಗಳಾಗಿದ್ದು ಶ್ರೀಮಂತರಿಗೆ ಮತ್ತು ದೇವರಿಗೆ ನೀಡುವ ವಸ್ತುಗಳಾಗಿವೆ. ರೇಷ್ಮೆ ಬಟ್ಟೆಗಳನ್ನು ನೇಯುವವರಿಗೆ ಪಟ್ಟೆಗಾರರೆಂದು ಕರೆಯುತ್ತಿದ್ದರು. ನೇಯ್ಗೆ ವೃತ್ತಿಯವರನ್ನು ಜೇಡ ಅಥವಾ ಜಾಡ ಎಂದು ಗುರುತಿಸಲಾಗಿದೆ.

ಅಂದಿನ ಕಾಲದಲ್ಲಿ ನಗರ ವ್ಯವಸ್ಥೆಯೂ ನಿರ್ಮಾಣಗೊಳ್ಳುವುದಕ್ಕೆ ಕೈಗಾರಿಕೆಗಳು ಮತ್ತು ಅವುಗಳಲ್ಲಿ ನಿರತರಾಗಿದ್ದ ಕುಶಲಕರ್ಮಿಗಳು ಹೆಚ್ಚಿನಮಟ್ಟಿಗೆ ಕಾರಣವಾಗಿ ಕಂಡುಬರುತ್ತದೆ. ಹೆಚ್ಚಿನ ಉದ್ಯಮಿಗಳು ಕೃಷಿ ಆಧಾರಿತವಾಗಿದ್ದವು. ಅಂತಹ ಉದ್ದಿಮೆಗಳೆಂದರೆ, ಎಣ್ಣೆ ತಯಾರಿಕೆ, ಬೆಲ್ಲ ತಯಾರಿಕೆ, ಬಟ್ಟೆ ನೇಯುವಿಕೆ ಮುಂತಾದವು.

ಎಣ್ಣೆ ತೆಗೆಯುವುದು ಒಂದು ಪ್ರಮುಖ ಉದ್ದಿಮೆಯಾಗಿರಬಹುದು. ತೈಲಿಗರು ಎಣ್ಣೆಯ ಬೀಜಗಳನ್ನು ಗಾಣಕ್ಕೆ ಹಾಕಿ ಎಣ್ಣೆಯನ್ನು ತೆಗೆಯುತ್ತಿದ್ದರು. ಎಣ್ಣೆ ಅಂದಿನ ವ್ಯಾಪಾರದ ಸರಕಾಗಿದ್ದು ಬಹಳಷ್ಟು ಶಾಸನಗಳಲ್ಲಿ ಎಣ್ಣೆಯ ಉಲ್ಲೇಖವಿದೆ.

ಬೆಲ್ಲ ಮತ್ತು ಸಕ್ಕರೆಗಳನ್ನು ಮಾರಾಟ ಮಾಡುತ್ತಿದ್ದ ವಿಷಯ ಶಾಸನಗಳಲ್ಲಿ ವ್ಯಕ್ತವಾಗಿದೆ. ಇವುಗಳು ಮಾರಾಟದ ಪ್ರಧಾನ ವಸ್ತುಗಳಾಗಿದ್ದವು[೧೧೧]. ಕಬ್ಬಿನ ರಸವನ್ನು ಗಾಣದಲ್ಲಿ ಹಿಂಡಿ ಅನಂತರ ಸಕ್ಕರೆ ಬೆಲ್ಲವನ್ನು ತಯಾರಿಸುತ್ತಿದ್ದರು. ಗಾಣಗಳ ಮೇಲೆ ಸುಂಕ ಹಾಕುತ್ತಿದ್ದರು ಎಂಬುದಕ್ಕೆ ಶಾಸನವೊಂದರಲ್ಲಿ 'ಆಲೆಸುಂಕ' ಎಂದು ಉಲ್ಲೇಖವಿದೆ.[೧೧೨]

ಗಣಿಗಾರಿಕೆಯು ಅಂದಿನ ಸಂದರ್ಭದಲ್ಲಿ ಒಂದು ಉದ್ದಿಮೆಯಾಗಿ ರೂಪುಗೊಳ್ಳಲಾರಂಭಿಸಿತು. ಆದರೆ ಈ ಕುರಿತು ಹೆಚ್ಚಿನ ಮಾಹಿತಿಗಳು ಸಿಗುವುದಿಲ್ಲ. ಕಬ್ಬಿಣದ ಕೈಗಾರಿಕೆ, ಕೈಗಾರಿಕೋದ್ಯಮದಲ್ಲಿ ಮೊದಲ ಸ್ಥಾನವನ್ನು ಪಡೆದುಕೊಂಡಿದ್ದಿತು ಎನ್ನುವುದು ತಿಳಿದುಬರುತ್ತದೆ. ಕೃಷಿ ಮತ್ತು ಕೃಷಿಯೇತರ ಕೆಲಸಗಳಿಗೆ ಕಬ್ಬಿಣದಿಂದ ತಯಾರಿಸಿದ ಉಪಕರಣಗಳು ಬೇಕಾಗುತ್ತಿತ್ತು. ಈ ಉಪಕರಣಗಳನ್ನು ಉತ್ಪಾದಿಸುವವರು ಕಮ್ಮಾರರು ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರು. ಕಬ್ಬಿಣದ ಸಲಕರಣೆಗಳು ಕೃಷಿಯಲ್ಲಿ ಹೆಚ್ಚಿನ ಬೇಡಿಕೆಯನ್ನು ಹೊಂದಿದ್ದವು. ಇವುಗಳ ಜೊತೆಗೆ ಯುದ್ಧಕ್ಕೆ ಬೇಕಾದ ಸಲಕರಣೆಗಳು ಅಷ್ಟೇ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದವು. ಅರಸೊತ್ತಿಗೆಗೆ ಯುದ್ಧ ಅನಿವಾರ್ಯವಾಗಿದ್ದರಿಂದಾಗಿ ಯುದ್ಧಕ್ಕೆ ಬೇಕಾದ ಆಯುಧಗಳು ಉತ್ಪಾದನೆಯು ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿತ್ತು. ಈ ಎಲ್ಲಾ ವಿಧದ ಆಯುಧಗಳನ್ನು ಉತ್ಪಾದಿಸಲು ಕಮ್ಮಾರರು, ಲೋಹಕಾರರು ಉಲ್ಲೇಖ ಶಾಸನಗಳಲ್ಲಿದೆ. ಬೆಜ್ಜವಳ್ಳಿಯ ವೀರಮಾಸ್ತಿ ಶಿಲ್ಪದಲ್ಲಿ ಉಕ್ಕಿನ ಹುರುಪೆಗಳಿಂದ ಕೂಡಿದ ಕಬ್ಬಿಣದ ಕವಚವು ಸವಾರನ ಕಾಲಿನವರೆಗೂ ಮುಚ್ಚಿರುವ, ಲೋಹದ ಕವಚ ತೊಟ್ಟಿರುವುದನ್ನು ತಲೆಗೆ ಶಿರಸ್ತ್ರಾಣ ಹಾಕಿರುವುದನ್ನು ಕಾಣಬಹುದಾಗಿದೆ.

ಶಾಸನಗಳಲ್ಲಿ 'ಕಂಚಗಾರವೋಣಿ'[೧೧೩] ಎಂಬ ಉಲ್ಲೇಖವಿದ್ದು ಕಂಚಗಾರರು ಕಂಚಿನ ಪಾತ್ರೆಗಳ ತಯಾರಿಯಲ್ಲಿ ನಿಷ್ಣಾತರಾಗಿದ್ದರು. ಒಂದು ಶಾಸನದಲ್ಲಿ ಮುಕ್ತಿಹರಿಹರಪುರ ಅಗ್ರಹಾರಕ್ಕೆ ಶೈವ ಅಕ್ಕಸಾಲಿ, ಬಡಗಿ, ಕಮ್ಮಾರ ಈ ಮೂರು ಒಕ್ಕಲುಗಳು ಮಹಾಜನಗಳ ಸೇವೆ ಮಾಡಿಕೊಂಡು ಸುಖದಲ್ಲಿ ಇರುವುದು ಎಂದಿದೆ.[೧೧೪] ಇನ್ನಿತರ ವೃತ್ತಿಕಾರರೆಂದರೆ 'ಕಂದಾಚಾರ'[೧೧೫], ತಳವಾರ[೧೧೬], ದೀವರ[೧೧೭], ಮಾಲೆಗಾರ[೧೧೮] ಪ್ರಸ್ತಾಪ ಕಂಡುಬರುತ್ತದೆ.

ಕಂಚುಕಾರರು ದಿನನಿತ್ಯ ಬಳಕೆಯ ಪಾತ್ರೆಗಳನ್ನಲ್ಲದೆ ಲೋಹದ ಮೂರ್ತಿಗಳನ್ನೂ ತಯಾರಿಸುತ್ತಿದ್ದರು. ಮರದಿಂದ ವಿವಿಧ ರೀತಿಯ ವಸ್ತುಗಳನ್ನು ತಯಾರಿಸುವವರನ್ನು ಬಡಗಿಗಳು ಎಂದು ಕರೆಯುತ್ತಿದ್ದರು. ಇವರು ವಾಸದ ಮನೆಗಳನ್ನು ಪೀಠೋಪಕರಣಗಳನ್ನು, ಗಾಡಿ, ಬಂಡಿ, ರಥಗಳನ್ನು ನಿರ್ಮಿಸುತ್ತಿದ್ದರು. ಆಭರಣಗಳನ್ನು ತಯಾರಿಸುವ ಕುಶಲ ಕಾರ್ಮಿಕರು ಅಕ್ಕಸಾಲಿಗರಾಗಿದ್ದು ಆಭರಣ ತಯಾರಿಕೆಯಲ್ಲಿ ತಾಂತ್ರಿಕ ಜ್ಞಾನವನ್ನು ಪಡೆದಿದ್ದರು.

ಕ್ರಿ.ಶ ಹನ್ನೊಂದನೇ ಶತಮಾನದ ನಂತರ ಕರ್ನಾಟಕದ ಶಾಸನಗಳಲ್ಲಿ ತಳಸಮುದಾಯದ (ಅಯಗಾರ) ಬಗ್ಗೆ ಕೆಲವು ಪ್ರಸ್ತಾಪಗಳು ಸಿಗುತ್ತವೆ. ಈ ತಳಸಮುದಾಯವನ್ನು ಕುರಿತು ಹಿಂದಿನ ಕೆಲವು ಶಾಸನಗಳು ಬಿಡಿಬಿಡಿಯಾಗಿ ಪ್ರಸ್ತಾಪಿಸುತ್ತವೆ. ಆದರೆ ನಂತರದ ಶಾಸನಗಳಲ್ಲಿ ಕೆಳಸಮುದಾಯಗಳ ಉಲ್ಲೇಖ ಗುಂಪುಗುಂಪಾಗಿ ಬಂದಿರುವುದು ವಿಶೇಷ. ತೀರ್ಥಹಳ್ಳಿ ಶಾಸನವೊಂದರಲ್ಲಿ ಪಂಚಕಾರುಕ[೧೧೯] ಎಂಬ ಪದದ ಉಲ್ಲೇಖವಿದ್ದು ಕಮ್ಮಾರ, ಅಕ್ಕಸಾಲಿಗ, ಬಡಗಿ, ಕಂಚುಗಾರ ಹಾಗೂ ಶಿಲ್ಪಿಗಳು ಈ ಕುಲಕ್ಕೆ ಸೇರಿದವರು. ಇವರ ಜೊತೆಗೆ ಅಸ್ಪೃಶ್ಯರೆಂದು ಗುರುತಿಸುವ ಸಮಗಾರ ಹೊಲೆಯರಂಥ ಕೆಳಸಮುದಾಯಗಳು ಸಮಾನ ಮಾನ್ಯತೆ ಪಡೆದಿರುವುದು ವಿಶೇಷ. ತಳಸಮುದಾಯದವರನ್ನು ಶಾಸನಗಳಲ್ಲಿ ಸಮಸ್ತ ನಾಡವರು[೧೨೦] ಎಂದು ಗುರುತಿಸಲಾಗಿದೆ. ಇಂತಹ ಸಂಗತಿಗಳನ್ನು ಬರಿಶುಷ್ಕ ಜಾತಿನಿಷ್ಠ ಸ್ತರಗಳಲ್ಲಿಟ್ಟು ನೋಡುವುದಕ್ಕಿಂತ ಕುಲಕಸುಬುಗಳ ವೃತ್ತಿ ಸಮುದಾಯಗಳ ಸಹಜ ಸ್ಥಿತಿಯಲ್ಲಿಟ್ಟು ನೋಡಬೇಕು. ಪಂಚಕಾರುಕ ವೃತ್ತಿ ಕೇವಲ ಉತ್ಪಾದನೆ ಮತ್ತು ಸೇವೆಯಾಗಿರದೇ ಅದೊಂದು ಜೀವನ ವಿಧಾನವಾಗಿತ್ತು.

ಶಾಸನಗಳ ಮೇಲಿನ ಹೆಚ್ಚಿನ ಅಧ್ಯಯನದಿಂದ ನಮಗೆ ಗೋಚರಿಸುವ ಪ್ರಮುಖ ವಿಶೇಷತೆಗಳೆಂದರೆ ರಾಜನ ಯುದ್ಧ, ದೇವಾಲಯಗಳ ನಿರ್ಮಾಣ ಹಾಗೂ ದಾನ ಕಾರ್ಯಗಳ ಶ್ರೇಷ್ಠತೆಯನ್ನು ಹೇಳುತ್ತದೆಯೇ ಹೊರತು ಒಂದು ಸಂಪೂರ್ಣ ಸಮಾಜ, ಸಂಸ್ಕೃತಿಗಳ ಅಧ್ಯಯನ ಗೌಣವಾಗಿ ಕಾಣುತ್ತದೆ. ತಳಸಮುದಾಯಗಳು ಸಮಾಜದಲ್ಲಿ ಬಹು ಸಂಖ್ಯಾತರಾಗಿದ್ದರೂ ಅಲ್ಪಸಂಖ್ಯಾತರ ನಿಯಂತ್ರಣದಲ್ಲಿದ್ದರು. ಕಸುಬುದಾರ ವರ್ಗಗಳ ಚರ್ಚೆ ಶಾಸನಗಳಲ್ಲಿ ಗೌಣವಾಗಿದೆ.

ಮಾಪನಗಳು

ಅಳತೆ

ಪ್ರಾಚೀನ ಕರ್ನಾಟಕದ ಅಳತೆ ಮತ್ತು ತೂಕಗಳು ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿದ್ದವು. ಅವುಗಳು ಒಂದೊಂದು ಕಾಲಘಟ್ಟದಲ್ಲಿ ಬದಲಾಗಿರುವುದನ್ನು ಗುರುತಿಸಬಹುದು. ಹೊಲಗಳಲ್ಲಿ ಬಿತ್ತಿದ ಬೀಜದ ಪ್ರಮಾಣದ ಮೇಲೆ ಅದರ ಅಳತೆಯನ್ನು ಗುಣಿಸುತ್ತಿದ್ದರು. ಕೆಲವೊಮ್ಮೆ ಅಳತೆಕೋಲುಗಳನ್ನು ಉಪಯೋಗಿಸುತ್ತಿದ್ದು ಇವುಗಳು ಸ್ಥಳದಿಂದ ಸ್ಥಳಕ್ಕೆ ಬೇರೆಯಾಗಿರುವುದನ್ನು ಕಾಣಬಹುದು. ಕೆಲವೊಂದು ಅಳತೆಕೋಲುಗಳನ್ನು ನಿರ್ದಿಷ್ಟ ಅಳತೆಯ ಮೇಲೆ, ಊರಿನ ಹೆಸರಿನ ಮೇಲೆ, ವ್ಯಕ್ತಿಗಳ ಹೆಸರಿನ ಮೇಲೆ, ವರ್ಣದ ಹೆಸರಿನ ಮೇಲೆ ಹೀಗೆ ವೈವಿಧ್ಯಮಯವಾಗಿ ಬಳಸಿರುವುದು ಕಂಡುಬರುತ್ತದೆ.[೧೨೧]

ಶೃಂಗೇರಿಯ ಒಂದು ಶಾಸನದಲ್ಲಿ ಅಗ್ರಹಾರ ಹಾಗೂ ವೃತ್ತಿಗಳನ್ನು ಪಡೆದ ಬ್ರಾಹ್ಮಣರ ಉಲ್ಲೇಖವಿದೆ. ಈ ವೃತ್ತಿಗಳನ್ನು ವಿವರಿಸುವಾಗ 'ಒಂಬತ್ತು ಗಂಟಿನ ಹಾಯದ ಕೋಲು' ಎಂಬ ಅಳತೆಯ ಕೋಲನ್ನು ಹೆಸರಿಸಿದೆ. ಅಷ್ಟೇ ಅಲ್ಲದೇ ಭೂಮಿಯನ್ನು ಅಳತೆ ಮಾಡಿಸಿ ಸಂಬಂಧಪಟ್ಟ ಬ್ರಾಹ್ಮಣರಾದ ನರಹರಿ ಭಟ್ಟರಿಗೆ, ಹರವರಿ ಭಟ್ಟರಿಗೆ, ಪಾಪಂಣಗಳಿಗೆ ೧೫ ಕೋಲು ಭೂಮಿಯನ್ನು, ಮಾಧವ ಭಟ್ಟರಿಗೆ, ಅಲ್ಲಾಳ ಭಟ್ಟರಿಗೆ ೧೭ ಕೋಲು ಭೂಮಿಯನ್ನು,

ಹರಿತಿ ಗೋತ್ರದ ಮಾಧವ ಭಟ್ಟರಿಗೆ ೧೬ ಕೋಲು ಭೂಮಿಯನ್ನು ನೀಡಿದ ಬಗ್ಗೆ ವಿವರಣೆ ಇದೆ.[೧೨೨] ಅಂದರೆ ಮುಂದೆ ವ್ಯಾಜ್ಯಗಳು ಬರದಂತೆ ಭೂಮಿಯನ್ನು ಅಳತೆ ಮಾಡಿಸಿ, ಅವರಿಂದ ಒಪ್ಪಿಗೆ ಪಡೆದು ಭೂಮಿಯನ್ನು ನೀಡುವ ಪದ್ಧತಿಯಿದ್ದಿತೆಂದು ತಿಳಿದುಬರುತ್ತದೆ.

ಇನ್ನೊಂದು ಶಾಸನದಲ್ಲಿ ಒಂದು ಗೃಹ ನಿವೇಶನಕ್ಕೆ ೭ ಕೋಲು ಎಂಬ ಉಲ್ಲೇಖವಿದೆ.[೧೨೩] ಮನೆಗಳನ್ನು, ನಿವೇಶನಗಳನ್ನು ಅಳೆಯಲು ಸಾಮಾನ್ಯವಾಗಿ 'ಕಯಿ' (ಕೆಯ್-ಹಸ್ತ)ಯನ್ನು ಮಾಪನವಾಗಿ ಬಳಸುತ್ತಿದ್ದಿರಬಹುದು. ತೀರ್ಥಹಳ್ಳಿಯ ಒಂದು ಶಾಸನದಲ್ಲಿ ಕೆಸವಿನ ಮನೆಯ ಕೆರೆಯ ಕೆಯಿ ಮಾವಿನ ಕೆಯಿ ಹೊಸಗದ್ದೆಯ ಕೆಯಿ ಎಂಬುದರ ಉಲ್ಲೇಖವಿದೆ.[೧೨೪] ಕೈಯಳತೆಯು ನಿರ್ದಿಷ್ಟವಾದ ಮಾಪನವಾಗಿದ್ದು ಅದು ಮನುಷ್ಯರ ಕೈ ಉದ್ದವನ್ನು ಸೂಚಿಸುತ್ತದೆ.

ಅಳತೆಕೋಲುಗಳ ಸಹಾಯದಿಂದ ಹೊಲಗಳನ್ನು 'ಕಮ್ಮ'(ಕಂಚಿ)ಗಳಿಂದ ಅಳೆಯುತ್ತಿದ್ದರು. ಒಂದು ಶಾಸನದಲ್ಲಿ 'ಸುಂಕ ಕಾರುಕ ಗ್ರಾಮ ಗದ್ಯಾಣಸಹ ಸರ್ವ್ವಾದಾಯ ೧೩೦ ಕಮ್ಮ ಮಾಡಿದ' ಎಂದಿದೆ.[೧೨೫] ಕಂಬಗಳ ಪ್ರಮಾಣದಲ್ಲಿ ಜಮೀನುಗಳನ್ನು ಅಳೆಯುವುದು ಆ ಕಾಲದಲ್ಲಿ ವಿಶೇಷವಾಗಿ ಬಳಕೆಯಾಗಿದ್ದಿತು. ಆದರೆ ಅವುಗಳ ಪ್ರಮಾಣವನ್ನು ಆಧುನಿಕ ಮಾಪನಕ್ಕೆ ಹೊಂದಿಸುವುದು ಕಠಿಣವಾಗುತ್ತದೆ.

ಮಧ್ಯಮಲೆನಾಡಿನ ಬಹಳಷ್ಟು ಶಾಸನಗಳಲ್ಲಿ ಭೂಮಿಯನ್ನು ಕುರಿತು ಹೇಳುವಾಗ ನಿರ್ದಿಷ್ಟ ಪ್ರಮಾಣದ ಮಣ್ಣು ಎಂದು ಕರೆದಿದೆ. ಹಾಗೆ ಮಣ್ಣು ಎಂದು ಹೇಳಿದಾಗ ಅದು ತೋಟತುಡಿಕೆ, ಗದ್ದೆಬೆದ್ದಲು, ಮಕ್ಕಿಹಕ್ಕಲುಗಳನ್ನು ಸೂಚಿಸಬಹುದು. ಕೆಲವು ಸಾರಿ ಮಣ್ಣು ಪದದ ಮುಂದೆ ಬೆದ್ದಲು ಅಥವ ತೋಟ ಎಂಬ ವಿವರ ಬರುತ್ತದೆ.

ವ್ಯಾಪಾರ ಸಾಮಗ್ರಿಗಳು, ಧಾನ್ಯ ಮತ್ತು ದ್ರವ ಪದಾರ್ಥಗಳನ್ನು ಅಳತೆ ಮಾಡಲು ಕೊಳಗ, ಖಂಡುಗ, ಬಳ್ಳ, ಮಾನ, ಸೊಲ್ಲಗೆ, ಸೊಂಟಿಗಳನ್ನು ಬಳಸುತ್ತಿದ್ದರು. ಶಾಸನಗಳಲ್ಲಿ ಯಥೇಚ್ಛವಾಗಿ ಕೊಳಗ ಮತ್ತು ಖಂಡುಗ ಎಂಬ ಪದಗಳನ್ನು ಬಳಸಿದ್ದು ಬಹಳ ವಿಶೇಷ. ಇವುಗಳ ಪ್ರಮಾಣದ ಮೇಲೆ ಭೂಮಿಯಲ್ಲಿ ಬಿತ್ತನೆ ಮಾಡುತ್ತಿದ್ದರು.

ಅಳತೆಗಳಲ್ಲಿ ವೀಸ[೧೨೬], ಅರೆವೀಸ[೧೨೭], ಕೊಡವೀಸ[೧೨೮], ಮೂಲವೀಸ[೧೨೯], ಸಲಗೆ[೧೩೦], ಹಾಗಾ[೧೩೧] ಬಳಕೆಯಾಗುತ್ತಿದ್ದವು. ಬಹುಶಃ ದ್ರವರೂಪದ ಪದಾರ್ಥಗಳನ್ನು ಇದೇ ಮಾನಗಳಿಂದ ಅಳೆಯುತ್ತಿದ್ದರು. ದ್ರವರೂಪದ ಪದಾರ್ಥಗಳು ಅಳೆಯುವಾಗ ಸೊಲ್ಲಗೆ ವಿಶೇಷವಾಗಿ ಬಳಕೆಯಾಗಿದ್ದಿತು. ರಾಜಾದಿತ್ಯನು ಕೊಡುವ ಅಳತೆಗಳ ವಿವಿಧ ಹೀಗಿದೆ.

೪ ಗಿದ್ದ	=	೧ ಸೊಲ್ಲಗೆ
೪ ಸೊಲ್ಲಗೆ	=	೧ ಮಾನ
೪ ಮಾನ	=	೧ ಬಳ್ಳ

೪ ಬಳ್ಳ = ೧ ಕೊಳಗ

೨೦ ಕೊಳಗ = ೧ ಖಂಡುಗ

ಶಾಸನಗಳ ಪ್ರಯೋಗವನ್ನು ಮತ್ತು ರಾಜಾದಿತ್ಯನು ಕೊಡುವ ವಿವರವನ್ನು ಗ್ರಹಿಸಿ ಖಂಡುಗ ದೊಡ್ಡ ಮಾನವೆಂದು, ದಳ ಸಣ್ಣ ಮಾನವೆಂದು ಭಾವಿಸಬಹುದು.[೧೩೨] ಬಳ್ಳವು ಹೇರಿನ ಒಂದಂಶದ ಅಳತೆಯಾಗಿದೆ.

ತೂಕ

ಪದಾರ್ಥಗಳನ್ನು ಅಳೆಯುವ ಪದ್ಧತಿಯಂತೆ ತೂಗುವ ಪದ್ಧತಿಯು ಇದ್ದಿತು. ಮಧ್ಯಮಲೆನಾಡು ಶಾಸನಗಳಲ್ಲಿ ಚಿನ್ನ, ಬೆಳ್ಳಿ ಮತ್ತು ಇತರೆ ವಸ್ತುಗಳನ್ನು ಹೆಸರಿಸುವಾಗ ಹಲ, ಬಿಸಗೆ ಮತ್ತು ಸೇರು ಎಂಬ ತೂಕಗಳನ್ನು ಉಲ್ಲೇಖಿಸಲಾಗಿದೆ.

ಶೃಂಗೇರಿಯ ಅನಂತನಾಥ ವಿಗ್ರಹದ ಪೀಠದ ಮೇಲಿನ ಶಾಸನದಲ್ಲಿ ಅನಂತನಾಥ ಪ್ರತಿಮೆಯ ತೂಕ ಪಲ ಎಂಬುದು ತೂಕ ಸೂಚಕ ಪದವಾಗಿದ್ದು ಅದು ೩ ತೊಲಗಳ ತೂಕ ಪ್ರಮಾಣದೆಂದು ಕೆ.ವಿ. ರಮೇಶರವರು ಅಭಿಪ್ರಾಯಪಡುತ್ತಾರೆ. ೧೮೦ ಹಲ ಎಂದಿದೆ.[೧೩೩] ಪಲ ಅಥವ ಹಲ ಎನ್ನುವುದು ತೊಲ ಎಂಬ ತೂಕದ ಉಪಭಾಗ. ಇದೇ ಬಸದಿಯಲ್ಲಿರುವ ಚಂದ್ರನಾಥ ಕಂಚಿನ ಪ್ರತಿಮೆಯ ಪೀಠದ ಮೇಲಿನ ಶಾಸನದಲ್ಲಿ (ಕ್ರಿ.ಶ. ೧೫೨೩) ಚಂದ್ರನಾಥ ಪ್ರತಿಮೆಯ ತೂಕ ೧೯ ಬಿಸಿಗೆ ಎಂದಿದೆ.[೧೩೪] ಕಳಸ ಶಾಸನದಲ್ಲಿ (ಕ್ರಿ.ಶ. ೧೭೨೧) ಕಳಸೇಶ್ವರನಿಗೆ ಅರ್ಪಿಸಿದ ಚಿನ್ನದ ಮುಖವಾಡದ ತೂಕ ೯೨೦ 'ಗ' ಎಂದಿದೆ.[೧೩೫] ಇಲ್ಲಿ 'ಗ' ಎಂದರೆ ಗದ್ಯಾಣವೇ ಇರಬೇಕು. ಇಲ್ಲಿ ನಿರ್ದಿಷ್ಟವಾಗಿ ತೂಕ ಎಂಬ ಪದವನ್ನು ಬಳಸಲಾಗಿದೆ. ಸಿದ್ದಮ್ಮಾಜಿಯು ಕಳಸೇಶ್ವರನಿಗೆ ಬೆಳ್ಳಿಯ ಮುಖವಾಡವನ್ನು ದಾನವಾಗಿ ಅರ್ಪಿಸಿದಳು. ಇದರ ತೂಕ ೪ ಸೇರು. ಆ ಕಾಲದಲ್ಲಿ ಸೇರು ಅಳತೆ ಮತ್ತು ತೂಕದ ಮಾಪನವನ್ನಾಗಿ ಬಳಸಲಾಗುತ್ತಿದ್ದಿತು. ಶೃಂಗೇರಿಯ ಜೇನುತುಪ್ಪ ೬ ಸೇರು ಎಂದಿದೆ. ಈಗಲೂ ಈ ಪದ್ಧತಿ ಈ ಭಾಗದಲ್ಲಿ ರೂಢಿಯಲ್ಲಿದೆ. ರಾಜಾದಿತ್ಯನು ಹೇಳುವ ಪದ್ಯದಿಂದ ತೂಕದ ಈ ಕೋಷ್ಟಕವನ್ನು ಗುರುತಿಸಬಹುದು.[೧೩೬]

೪ ಸುವರ್ಣ = ೧ ಕರ್ಷ

೪ ಕರ್ಷ = ಒಂದು ಪಲ

೨೦ ಪಲ = ಒಂದು ಬಿಸಗೆ

೫ ಬಿಸಗೆ = ಒಂದು ತೊಲ

೨೦ ತೊಲ = ೧ ಬಾರ

ಹೇರು

ಕೆಲವು ಪದಾರ್ಥಗಳು ಹೇರಿನ ಲೆಕ್ಕದಲ್ಲಿ ಕಾಣಿಸಲ್ಪಡುತ್ತಿದ್ದವು. ಶಾಸನಗಳಲ್ಲಿ ಅಡಕೆ, ಮೆಣಸು, ಎಲೆ ಮುಂತಾದವುಗಳನ್ನು ಹೇರಿನ ಲೆಕ್ಕದಲ್ಲಿಡುವುದು ಉಲ್ಲೇಖವಾಗಿದೆ. ಇವುಗಳನ್ನು ಹೊತ್ತೊಯ್ಯುವ ಹೇರೆತ್ತುಗಳ ಉಲ್ಲೇಖ ಶಾಸನಗಳಲ್ಲಿವೆ. ಆರಗದ ಶಾಸನದಲ್ಲಿ 'ಗಾಡಿಹೇರು' ಎಂಬ ಪದವನ್ನು ಗುರುತಿಸಲಾಗಿದೆ.[೧೩೭] ಕೊಪ್ಪ ಶಾಸನದಲ್ಲಿ ಎಲೆಯಹೇರು ಎಂದಿದೆ.[೧೩೮] ಆ ಕಾಲದಲ್ಲಿಯೂ ತೂಕ ಮತ್ತು ಅಳತೆಗಳಲ್ಲಿ ವಂಚನೆ ಮಾಡುವ ಪ್ರವೃತ್ತಿ ಜನರಲ್ಲಿ ಇದ್ದಿರಬಹುದು. ಆದರೆ ಇವುಗಳನ್ನು ನಿವಾರಿಸಲು ಅಧಿಕಾರಿಗಳು ಇದ್ದ ಹಾಗೆ ಶಾಸನಗಳಲ್ಲಿ ವ್ಯಕ್ತವಾಗಿಲ್ಲ. 'ಪೇರು' ಎಂಬುದು ಹೊರೆ ಎಂಬುದಕ್ಕೆ ಸಂವಾದಿಯಾಗಿದ್ದು ಒಂದು ಚೀಲ ಅಥವ ಒಂದು ಬಾರಿ ಹೊರತಕ್ಕ ಒಂದು ಸಾಮಾನ್ಯ ಅಳತೆ ಸೂಚಕವಾಗಿದೆ.

ವ್ಯಾಪಾರ

ವ್ಯಾಪಾರಿ ವೃತ್ತಿಯನ್ನು ಉತ್ಪಾದಕ, ವಿನಿಮಯ ಮತ್ತು ಉತ್ಪಾದಕ ವಿನಿಮಯ ಮತ್ತು ಇತರ ಎಂದು ವಿಭಾಗಿಸಲಾಗಿದೆ.[೧೩೯] ಆದರೆ ಮಲೆನಾಡಿನ ಶಾಸನಗಳಲ್ಲಿ ವ್ಯಾಪಾರದ ಬಗ್ಗೆ ವ್ಯಕ್ತವಾಗಿರುವ ಮಾಹಿತಿ ಬಹಳ ಕಡಿಮೆ.

ಅಕ್ಕಿ, ಭತ್ತ, ರಾಗಿ, ಉಪ್ಪು, ಹುಳಿ, ವಿದಳ, ಎಣ್ಣೆ, ತುಪ್ಪ, ಬೇಳೆ, ಬೆಲ್ಲ, ಕಾಯಿ, ಕತ್ತ, ಕಾಚು ಕೊಬ್ಬರಿ, ಜವಳಿ, ಉತ್ತುತ್ತೆ, ಖರ್ಜೂರ, ಹೊಗೆಸೊಪ್ಪು, ಇಂಗು, ಜೀರಿಗೆ, ಸಾಸುವೆ, ಮೆಂತೆ, ಈರುಳ್ಳಿ, ಬೆಳ್ಳುಳ್ಳಿ, ಅರಿಸಿನ ಶುಂಠಿ ಮೊದಲಾದ ವಸ್ತುಗಳು ವ್ಯಾಪಾರದ ಪ್ರಮುಖ ಸರಕಾಗಿದ್ದವು ಎಂಬುದನ್ನು ಶಾಸನವೊಂದರಲ್ಲಿ ತಿಳಿಸಲಾಗಿದೆ.[೧೪೦]

ಸರಕುಗಳನ್ನು ಗ್ರಾಮ - ಪಟ್ಟಣಗಳಲ್ಲಿರುವ ವರ್ತಕರು ಪಾದಮಾರ್ಗ, ಜಲಮಾರ್ಗಗಳ ಮೂಲಕ ಸಾಗಿಸುತ್ತಿದ್ದರು. ಸಾಗಾಣಿಕೆಗೆ ಕೋಣ, ಕತ್ತೆ, ಎತ್ತು ಮತ್ತು ಕುದುರೆಗಳನ್ನು ಬಳಸುತ್ತಿದ್ದರು. ಎತ್ತುಗಳ ವರ್ಣ ಮತ್ತು ವಯಸ್ಸನ್ನು ಬರೆಯಿಸಿ ಎಷ್ಟು ಪ್ರಮಾಣದ ಸರಕನ್ನು ಹೇರಿಕೊಂಡು ಹೋಗುತ್ತಿದ್ದೇವೆಂದು ಎಂದು ತೀರ್ಥಹಳ್ಳಿ ಶಾಸನದಲ್ಲಿ ಹೇಳಲಾಗಿದೆ.[೧೪೧] ಬಿಕ್ಕಹಳ್ಳಿ ಶಾಸನದಲ್ಲಿ ಪಾದಮಾರ್ಗದ ಹೆದ್ದಾರಿಯನ್ನು 'ಬಂಡಿಯ ಹೆದ್ದಾರಿ' ಎಂದು ಉಲ್ಲೇಖಿಸಿದೆ.[೧೪೨] ಕವಲೇದುರ್ಗದ ಕೆಲವು ಶಾಸನಗಳಲ್ಲಿ ೧೦ ಎತ್ತಿನ ಸಾಗಣೆ ಸರಕು ಎಂದಿದೆ. ಬಹುಶಃ ಮಧ್ಯಮಲೆನಾಡಿನ ಶಾಸನಗಳಲ್ಲಿ ವ್ಯಕ್ತವಾಗಿರುವಂತೆ ಒಳನಾಡಿನ ವ್ಯಾಪಾರವು ವ್ಯಾಪಕವಾಗಿ ಬೆಳೆದಿದ್ದುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಆದರೆ ಹೊರನಾಡಿನ ವ್ಯಾಪಾರ ಎಷ್ಟು ವ್ಯಾಪಕವಾಗಿ ನಡೆಯುತ್ತಿತ್ತು ಎಂದು ಖಚಿತವಾಗಿ ಹೇಳುವುದು ಕಷ್ಟವಾಗುತ್ತದೆ.

ಅಂಗಡಿಗಳು, ಪೇಟೆ ಮತ್ತು ಪಟ್ಟಣಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ದೇವಸ್ಥಾನಗಳ ಸುತ್ತಮುತ್ತಲಿನ ಸ್ಥಳ ವ್ಯಾಪಾರ ಕೇಂದ್ರವಾಗಿರುತ್ತಿತ್ತು. ಗಾಡಿಗ್ಗೆರೆ ಶಾಸನದಲ್ಲಿ ವಿಠಂಣಗಳು ಆರಗದ ಹಿರಿಯಂಗಡಿಯ ಪಟ್ಟಣಸ್ವಾಮಿ ಎಂಬ ಉಲ್ಲೇಖವಾಗಿದೆ.[೧೪೩] ಅಂಗಡಿಗಳಿಗೆ ವಿವಿಧ

ಹೆಸರುಗಳನ್ನು ಕೊಡುತ್ತಿದ್ದರು ಎಂಬುದು ಆರಗದ ಶಾಸನದಿಂದ ಸ್ಪಷ್ಟವಾಗುತ್ತದೆ. ಅದರಲ್ಲಿ ಆರಗ ಪಟ್ಟಣದ 'ಹಿರಿಯಂಗಡಿಯ ಶ್ರೀಬನದ ದೇವಿ' ಎಂದು ಶಾಸನದಲ್ಲಿ ಕರೆಯಲಾಗಿದೆ.[೧೪೪] ಆರಗವು 'ಮೂರು ಪಟ್ಟಣ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದಿತು.[೧೪೫] ಕವಲೇದುರ್ಗದ ಒಂದು ಶಾಸನದಲ್ಲಿ ಆರಗ ವೇಂಠೆಯಲ್ಲಿ ಆರಗ, ಕೊಡೂರು, ಯಡೆಹಳ್ಳಿ, ಆವಿನಹಳ್ಳಿ, ಕರೂರು, ಬಿದರೂರು, ಮೊಸರೂರು, ಮಾಳೇನಹಳ್ಳಿ ಎಂಬ ಎಂಟು ಪೇಟೆಗಳಿದ್ದವು ಎಂದಿದೆ.[೧೪೬]

ಪಟ್ಟಣಸ್ವಾಮಿ ಒಂದು ಹುದ್ದೆ ಅಥವ ಸ್ಥಾನ. ಯಾವುದೇ ಗ್ರಾಮದಲ್ಲಿ ಸಂತೆ ಆರಂಭವಾದರೆ ಅದು ಪಟ್ಟಣವಾಗಿ ಮಾರ್ಪಾಡಾಗುತ್ತಿತ್ತು. ಪಟ್ಟಣಸ್ವಾಮಿ ಸ್ಥಾನವನ್ನು ಸಾಮಾನ್ಯವಾಗಿ ರಾಜನೋ ಅಥವ ಆ ಪ್ರದೇಶದ ಹಿರಿಯ ಅಧಿಕಾರಿಯೋ ಕೊಡುತ್ತಿದ್ದರೆಂದು ಭಾವಿಸಲು ಅವಕಾಶವಿದೆ. ಒಂದು ಪಟ್ಟಣದ ವರ್ತಕ ಸಂಘದ ಮುಖ್ಯಸ್ಥನನ್ನು ಪಟ್ಟಣಸ್ವಾಮಿ ಎಂಬುದಾಗಿ ಕರೆಯುತ್ತಿದ್ದರೆಂದು ಎಂ. ಚಿದಾನಂದಮೂರ್ತಿಯವರು ಅಭಿಪ್ರಾಯಪಡುತ್ತಾರೆ.[೧೪೭]

ತೀರ್ಥಹಳ್ಳಿಯ ಒಂದು ಶಾಸನದಲ್ಲಿ ಆರಗ ಮೂರು ಪಟ್ಟಣಕ್ಕೆ ಮುಖ್ಯಸ್ಥರಾದ ಪಟ್ಟಣಸ್ವಾಮಿ ಯಾದ ಮಾನಿಕಸೆಟ್ಟಿಯವರ ಮಕ್ಕಳು ಸೊಟ್ಟಿಸೆಟ್ಟಿಯರು ಎಂಬುದಾಗಿ ಉಲ್ಲೇಖಿಸಿದೆ.[೧೪೮] ಪಟ್ಟಣಸ್ವಾಮಿಯು ಆರಗದ ಅರಸು ಪ್ರಧಾನರೂ ಆಗಿದ್ದರು ಎಂಬುದಾಗಿ ಶಾಸನದಲ್ಲಿ ಬರೆಯಲಾಗಿದ್ದು ಆರಗದ ಪಟ್ಟಣಸ್ವಾಮಿ ಮಾದಿಸೆಟ್ಟಿ ಎಂಬುದಾಗಿಯೂ, ಬಿಕ್ಕಳ್ಳಿ ಶಾಸನದಲ್ಲಿ ಆರಗದ ಪಟ್ಟಣಸ್ವಾಮಿ ಮಾಣಿಸೆಟ್ಟಿ ಎಂದು ಕರೆದಿದೆ.[೧೪೯] ಬಹಳಷ್ಟು ಶಾಸನಗಳು ಆರಗವನ್ನು, ಆರಗವೇಂಠೆ (ಪೇಟೆ) ಎಂತಲೂ ಕರೆದಿವೆ. ಬೊಮ್ಮಲಾಪುರ ಶಾಸನವು ಆರಗದ ಪಟ್ಟಣಸ್ವಾಮಿ ಮಾಣಿಸೆಟ್ಟಿ, ನಾಗಿಸೆಟ್ಟಿ, ಚಂನ್ನಿ ಸೆಟ್ಟಿ ಎಂಬುದಾಗಿ ಕರೆದಿದೆ.[೧೫೦]

ಪಟ್ಟಣಸ್ವಾಮಿ ಪಟ್ಟಣಕ್ಕೆ ಒಬ್ಬನೇ ಇರುತ್ತಿದ್ದ. ಆದರೆ ಪಟ್ಟಣ ವಿಶಾಲವಾಗಿದ್ದರೆ ಅದರ ಅಗತ್ಯಕ್ಕೆ ಅನುಗುಣವಾಗಿ ಹೆಚ್ಚು ಜನ ಪಟ್ಟಣ ಸ್ವಾಮಿಗಳಿರುತ್ತಿದ್ದರು ಎಂಬುದಕ್ಕೆ ಮೇಲಿನ ಶಾಸನವೇ ಸಾಕ್ಷಿಯಾಗಿದೆ.

ಅಂದಿನ ರಾಜ ಮನೆತನಗಳ ಕಾಲದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ವ್ಯವಸ್ಥೆಯ ಬಗ್ಗೆ ಶಾಸನಗಳಲ್ಲಿ ವಿಪುಲವಾದ ಮಾಹಿತಿಗಳು ಲಭ್ಯವಾಗುವುದಿಲ್ಲ. ಸಾಂತಳಿಗೆ ಸಾವಿರ, ಆರಗ, ಹೊಂಬುಜ, ಮಂಗಳೂರು, ಬಾರ್ಕೂರು, ಕಾರ್ಕಳ ಮುಂತಾದ ಪ್ರದೇಶಗಳು ವ್ಯಾಪಾರ ಕೇಂದ್ರಗಳಾಗಿದ್ದವು ಎಂದು ಊಹಿಸಬಹುದು. ವಿಜಯನಗರ ಸಾಮ್ರಾಟರು ಪ್ರಮುಖವಾಗಿ ಮಂಗಳೂರು ಬಂದರಿನ ಮೂಲಕ ಅರೇಬಿಯಾದಿಂದ ಯುದ್ಧದ ಕುದುರೆಗಳನ್ನು ತರಿಸಿ ಕೊಳ್ಳುತ್ತಿದ್ದರಿಂದ ಈ ಭಾಗದಲ್ಲಿ ಬಾಹ್ಯ ವ್ಯಾಪಾರವು ಚಾಲ್ತಿಯಲ್ಲಿದ್ದಿತು ಎನ್ನಬಹುದು. ಮಧ್ಯಮಲೆನಾಡಿನ ಬಹಳಷ್ಟು ಶಾಸನಗಳಲ್ಲಿ ಉಲ್ಲೇಖವಾಗಿರುವ ಪದ ಹಲರು[೧೫೧] ಆಗಿನ ಕಾಲದ ವರ್ತಕ ಸಂಘಗಳು ಆಗಿರಬೇಕು. ಕವಲೇದುರ್ಗದ ಬಹಳಷ್ಟು ಶಾಸನಗಳಲ್ಲಿ 'ಸೆಟ್ಟಿಕಾರ'[೧೫೨] ಎಂಬ ಪದದ ಉಲ್ಲೇಖವಿದ್ದುದನ್ನು ಗಮನಿಸಿದರೆ ಇವರು ಕೆಳದಿ ಅರಸರ ಕಾಲದ ಪ್ರಮುಖ

ವರ್ತಕರಾಗಿರಬೇಕು ಇಲ್ಲವೆ ಸಂಘವಾಗಿದ್ದಿರಬೇಕು. ಇವರಿಬ್ಬರೂ ಶ್ರೀಮಂತ ವ್ಯಾಪಾರಿಗಳಾಗಿದ್ದು ದಾನಗಳನ್ನು ರಕ್ಷಿಸಿ ಮತ್ತು ಪೋಷಿಸಿ ನಿರ್ವಹಿಸುವ ಜವಾಬ್ದಾರಿ ವಹಿಸಿಕೊಂಡಿದ್ದರು. ನಕರ[೧೫೩] ಮತ್ತು ಹಂಜಮಾಣ[೧೫೪] ಎಂಬ ವರ್ತಕ ಸಂಘಗಳು ದಕ್ಷಿಣ ಕನ್ನಡ ಭಾಗದಲ್ಲಿ ಪ್ರಬಲರಾಗಿದ್ದರು. ಹಲವು ವರ್ತಕರು ಶ್ರೀಮಂತರಾಗಿದ್ದು ಅನೇಕ ದೇವಾಲಯಗಳನ್ನು ಜಿನಗೇಹ ಹಾಗೂ ಕೆರೆಗಳನ್ನು ನಿರ್ಮಿಸಿದ್ದರು.

ತೆರಿಗೆ ಮತ್ತು ಸುಂಕ

ಪ್ರಜಾ ಸಮುದಾಯವು ಕೃಷಿ ಕ್ಷೇತ್ರದಲ್ಲಿ, ವಾಣಿಜ್ಯ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಿದಂತೆ ಆದಾಯದ ಪ್ರಮಾಣವು ಹೆಚ್ಚಿತು. ಅದರ ನಿಗದಿತ ಭಾಗವನ್ನು ಧಾನ್ಯ ಅಥವಾ ಹಣದ ರೂಪದಲ್ಲಿ ರಾಜಭಂಡಾರಕ್ಕೆ ಸಲ್ಲಿಸುವ ಕ್ರಮ ಹಿಂದಿನಂತೆಯೇ ಇತ್ತಾದರೂ ತೆರಿಗೆಯ ಬಗೆಗಳು ಹೆಚ್ಚಿದ್ದವು. ಪ್ರತಿಯೊಂದು ಊರಿನ ಭೂಮಿ, ಮತ್ತಿತರ ಆಸ್ತಿ, ಉತ್ಪನ್ನಗಳು, ವ್ಯಾಪಾರೋತ್ಪನ್ನಗಳ ಮೇಲೂ ಸುಂಕವನ್ನು ವಿಧಿಸಲಾಗುತ್ತಿತ್ತು. ಅದನ್ನೆಲ್ಲ ಸಂಗ್ರಹಿಸಿ ರಾಜಭಂಡಾರಕ್ಕೆ ಸಲ್ಲಿಸಬೇಕಿದ್ದಿತು.

ರಾಜನಿಗೆ ಹಲವಾರು ಮೂಲಗಳಿಂದ ಆದಾಯ ಬರುತ್ತಿತ್ತು. ಈ ಆದಾಯದ ಪ್ರಮುಖ ಭಾಗ ಪ್ರಜೆಗಳಿಂದ ಸಂಗ್ರಹಿಸುತ್ತಿದ್ದ ತೆರಿಗೆಗಳ ಮೂಲಕವೇ ರಾಜ್ಯಕ್ಕೆ ಸಂದಾಯವಾಗುತ್ತಿತ್ತು. ಭೂಕಂದಾಯವೇ ರಾಜ್ಯದ ಪ್ರಧಾನ ಆದಾಯವಾಗಿದ್ದರೂ ಇನ್ನಿತರ ಹಲವಾರು ತೆರಿಗೆಗಳನ್ನು ಪ್ರಜೆಗಳ ಮೇಲೆ ವಿಧಿಸಲಾಗುತ್ತಿತ್ತು. ಇದಕ್ಕೆ ಸಂಬಂಧಿಸಿದ ಅನೇಕ ತೆರಿಗೆ ಮತ್ತು ಸುಂಕಗಳನ್ನು ಮಧ್ಯಮಲೆನಾಡಿನ ಶಾಸನಗಳನ್ನು ಅಧ್ಯಯನ ಮಾಡಿದಾಗ ಸತ್ಯ ಸಂಗತಿ ಹೊರಬೀಳುತ್ತದೆ.

ತೋಟದೆರೆ[೧೫೫] : ತೋಟದ ಮೇಲೆ ವಿಧಿಸುತ್ತಿದ್ದ ತೆರಿಗೆ.

ಆಲೆದೆರೆ[೧೫೬] : ಆಲೆಮನೆಗಳ ಮೇಲೆ ವಿಧಿಸುತ್ತಿದ್ದ ತೆರಿಗೆ.

ಹೊದಿಕೆ ದೆರೆ[೧೫೭] : ಒಂದು ಬಗೆಯ ತೆರಿಗೆ.

ಪಂಚಕಾರುಕ ತೆರೆ[೧೫೮]: ಬಡಗಿ, ಕಮ್ಮಾರ, ಅಕ್ಕಸಾಲಿ, ಕಂಚುಗಾರ ಮತ್ತು ಶಿಲ್ಪಿ ಎಂಬ ಐದು ಕುಶಲಕರ್ಮಿಗಳ ಮೇಲಿನ ತೆರಿಗೆ.

ಕುಳ[೧೫೯]: ಬೇಸಾಯ ಮಾಡುವ ರೈತನು ಸರಕಾರಕ್ಕೆ ಕೊಡಬೇಕಾದ ಕಂದಾಯ.

ಬಿರಾಡ[೧೬೦]: ಇದು ಕೋಟೆಯನ್ನು ಸುಭದ್ರಗೊಳಿಸಲು, ರಿಪೇರಿ ಮಾಡಲು ಮತ್ತು ನಿರ್ವಹಣೆಗಾಗಿ ಆಕರಿಸುತ್ತಿದ್ದ ವಿಶೇಷ ತೆರಿಗೆ.

ಸಿದಾಯ: ಬಹಳಷ್ಟು ಶಾಸನಗಳಲ್ಲಿ ವ್ಯಕ್ತವಾಗಿರುವ ತೆರಿಗೆ ಇದು ಒಂದು ರೀತಿಯ ದವಸ ಅಥವ ರೂಪದ ತೆರಿಗೆ ಎನ್ನಬಹುದು. ಆರ್.ಎಸ್. ಪಂಚಮುಖಿಯವರು ಇದನ್ನೂ ಆದಾಯ ತೆರಿಗೆ ಎಂದೂ ಟಿ.ವಿ. ಮಹಾಲಿಂಗಂ ಅವರು ನಗದು ರೂಪದ ಸಂಗ್ರಹಿತ ತೆರಿಗೆ ಎಂದೂ, ಬಿ.ಎ. ಸಾಲೆತ್ತೂರ್ ಅವರು ನಿಗದಿತ ಬಾಡಿಗೆಯೆಂದೂ, ಕೆ.ವಿ. ರಮೇಶರವರು

ಯಾವುದೋ ನಿರ್ಧರಿತ ತೆರಿಗೆ ಎಂದು ಅಭಿಪ್ರಾಯ ಪಡುತ್ತಾರೆ. ಇದು ನಗದಾಗಿಯೇ ಸಂಗ್ರಹವಾಗುತ್ತಿದ್ದುದು ಸ್ಪಷ್ಟವಾದ ವಿಷಯವಾಗಿ ತಿಳಿದುಬರುತ್ತದೆ.[೧೬೧]

ಈ ಮೇಲಿನ ತೆರಿಗೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವುಗಳ ಸ್ವರೂಪ ಮತ್ತು ವೈವಿಧ್ಯತೆಯನ್ನು ತಿಳಿಯಬಹುದು. ಕೆಲವೊಂದು ತೆರಿಗೆಗಳು ಅರ್ಥೈಸಲಾಗದಷ್ಟು ಕಠಿಣವಾಗಿವೆ. ಅಂತಹ ತೆರಿಗೆಗಳ ಅಧ್ಯಯನ ಅರ್ಥ ಸಂದಿಗ್ಧವಾಗಿವೆ. ಮೇಲ್ಕಾಣಿಸಿದ ತೆರಿಗೆಗಳು ನೇರ ತೆರಿಗೆಗಳಾಗಿದ್ದು, ಜನತೆ ಹೊರಲಾರದಷ್ಟು ಭಾರವಾಗಿದ್ದವು ಎಂದೇ ಹೇಳಬಹುದು.

ಶ್ರೋತೃಗುತ್ತಿಗೆ[೧೬೨] : ವೇದಾಧ್ಯಯನ ಮಾಡಿದ ಬ್ರಾಹ್ಮಣರಿಗೆ ತೆರಿಗೆ ಇಲ್ಲದಂತೆ ಕೊಟ್ಟ ಭೂಮಿಯ ಗೊತ್ತುವಳಿ ಕರಾರು.

ಮೂಲಗುತ್ತಿಗೆ[೧೬೩] : ಮೊದಲಿನಿಂದಲೂ ಪಡೆದಿರುವ ಗುತ್ತಿಗೆ.

ಕಟ್ಟುಗುತ್ತಿಗೆ[೧೬೪] : ನಿಗದಿಯಾದ ಗುತ್ತಿಗೆ, ಗಡಿಯ ಭತ್ತ

ಶಿಸ್ತು (ಸಿಸು)[೧೬೫]**: ಭೂ ತೆರಿಗೆ** ಕವಲೇದುರ್ಗದ ಅನೇಕ ಶಾಸನಗಳಲ್ಲಿ (ಶಿವಪ್ಪ ನಾಯಕನ) ಶಿಸ್ತು ಕಂದಾಯ ಪದ್ಧತಿಯ ಮಾಹಿತಿ ಇದೆ. ಇದು ಭೂಕಂದಾಯ ತೆರಿಗೆ ಆಗಿತ್ತು.ಪ್ರತಿಯೊಂದು ಹಳ್ಳಿಯಲ್ಲೂ ಭೂಮಿಯನ್ನು ಆರಿಸಿ, ಅದನ್ನು ಸರ್ಕಾರಿ ವೆಚ್ಚದಲ್ಲಿ ಸಾಗುವಳಿ ಮಾಡುವುದು, ಅಧಿಕಾರಿಗಳು ಬಿತ್ತನೆ ಬೀಜ, ಉಳುಮೆ, ಗೊಬ್ಬರ, ಕೂಲಿ ಮುಂತಾದವುಗಳ ಖರ್ಚು-ವೆಚ್ಚಗಳನ್ನು ಪರಿಷ್ಕರಿಸಿ ಭೂಮಿಯ ಉತ್ಪನ್ನದ ಆಧಾರದ ಮೇಲೆ ಕಂದಾಯ ವಿಧಿಸುವ ಪದ್ಧತಿಯನ್ನು ಶಿವಪ್ಪ ನಾಯಕ ಜಾರಿಗೆ ತಂದನು. ಆ ಪ್ರಕಾರವಾಗಿ ಭೂಮಿಯನ್ನು ವಿಂಗಡಿಸಿ ಕಂದಾಯವನ್ನು ನಿಗದಿಗೊಳಿಸುವುದು. ಕಂದಾಯ ನಿಗದಿಯಲ್ಲಿ ೧೦೦೦ ಅಡಿಕೆ ಮರಗಳನ್ನು ಒಂದು ಘಟಕವಾಗಿ ಪರಿಗಣಿಸಲಾಯಿತು.

ಹುಡಿಕೆ ಕಾರುಕ[೧೬೬] : ಬೆಸ್ತರಿಂದ ಪಡೆಯುವ ತೆರಿಗೆ(ಭರಣಿ, ಕರಂಡ ತಯಾರಿಸುವ ಕೈಕೆಲಸಗಾರರ ಮೇಲೆ ಹಾಕುವ ತೆರಿಗೆ).

ಹಂಬುಕಾರುಕ[೧೬೭]**:** ಬೇಟೆಯಾಡುವ ಬೇಡರಿಂದ ಪಡೆಯುವ ತೆರಿಗೆ.

ಕೊಡವೀಸ[೧೬೮]**:** ಇದು ವರ್ತಕ ಸಂಘದ ಮೇಲೆ ಸರಕಾರವು ವಿಧಿಸುತ್ತಿದ್ದ ತೆರಿಗೆಯಾಗಿತ್ತು.

ಮೇಲಿನ ತೆರಿಗೆಗಳನ್ನು ಪರಿಶೀಲಿಸಿದಾಗ ತೆರಿಗೆ ಪದ್ಧತಿ ಸಾಕಷ್ಟು ಕ್ಲಿಷ್ಟಕರವಾಗಿದ್ದಿತು ಎನ್ನಬಹುದು. ಸಂಗ್ರಹಿಸಿದ ಧಾನ್ಯ ಅಥವಾ ಹಣವನ್ನು ಯಾವ ರೀತಿಯಲ್ಲಿ ಲೆಕ್ಕವಿಡುತ್ತಿದ್ದರು ಎಂಬುದು ತಿಳಿಯದಾಗಿದೆ. ಸಂಗ್ರಹಿಸಿದ ಧಾನ್ಯಗಳನ್ನು ಸಂರಕ್ಷಿಸಲು ಉಗ್ರಾಣಗಳಿರುತ್ತಿದ್ದವೋ ಅಥವಾ ಇಲ್ಲವೋ ಎಂಬುದಕ್ಕೆ ಶಾಸನಗಳಲ್ಲಿ ಮಾಹಿತಿ ಇಲ್ಲ, ಸುಂಕಾಧಿಕಾರಿಗಳು ರೈತರಿಂದ ತೆರಿಗೆಗಳನ್ನು ಸಂಗ್ರಹಿಸಲು ಸುಗ್ಗಿಯ ಕಾಲದಲ್ಲಿ ಬರುತ್ತಿದ್ದರು. ಆದರೆ ಸುಂಕಾಧಿಕಾರಿಗಳ

ವಿರುದ್ಧ ರೈತರು ಪ್ರತಿಭಟಿಸಿದುದನ್ನು ನಾವು ಮಲೆನಾಡಿನ ಶಾಸನಗಳಲ್ಲಿ ಕಾಣಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಅಧಿಕಾರಿಗಳು ಜನರನ್ನು ತೆರಿಗೆಗಾಗಿ ಹಿಂಸಿಸಿದುದನ್ನು ಶಾಸನಗಳು ವ್ಯಕ್ತಪಡಿಸಿಲ್ಲ.

ಬ್ರಾಹ್ಮಣರಿಗೆ ಹಾಗೂ ಇನ್ನಿತರ ಮೇಲ್ವರ್ಗದ ಅಧಿಕಾರಿಗಳಿಗೆ ತೆರಿಗೆ ವಿನಾಯಿತಿ ಇದ್ದು, ಭೂಮಿಯನ್ನು ಅವರಿಗೆ ದಾನ ನೀಡುವ ವ್ಯವಸ್ಥೆ ಗಟ್ಟಿಯಾಗಿ ಬೆಳೆದಿದ್ದಿತು. ಇದರಿಂದಾಗಿ ಪುರೋಹಿತಶಾಹಿ ವರ್ಗ ಮತ್ತು ಭೂಮಾಲೀಕ ವರ್ಗದವರು ತಮಗಿಷ್ಟ ಬಂದಂತೆ ಭೂಮಿಯನ್ನು ಅನುಭವಿಸಬಹುದಿತ್ತು. ಅತಿಯಾದ ತೆರಿಗೆಗಳನ್ನು ಹೇರುವುದರ ಮೂಲಕ ಹಳ್ಳಿಗಳನ್ನು ತಮ್ಮ ಹತೋಟಿಗೆ ಇಟ್ಟುಕೊಳ್ಳುವಲ್ಲಿ ಮೇಲ್ವರ್ಗದವರು ಯಶಸ್ವಿಯಾದರು.

ಸುಂಕಾಧಿಕಾರಿಗಳು

ತೆರಿಗೆಗಳನ್ನು ಮತ್ತು ಸುಂಕಗಳನ್ನು ಅಧಿಕಾರಿಗಳು ವ್ಯವಸ್ಥಿತವಾಗಿ ಹಾಗೂ ಕ್ರಮಬದ್ಧವಾಗಿ ಸಂಗ್ರಹಿಸಿ ಸರ್ಕಾರಕ್ಕೆ ಸಲ್ಲಿಸುತ್ತಿದ್ದರು. ಸುಂಕಗಳನ್ನು ವಸೂಲಿ ಮಾಡಲು ದೊಡ್ಡ ದೊಡ್ಡ ಪ್ರದೇಶಗಳಿಗೆ ಸುಂಕಹೆಗ್ಗಡೆಗಳು ನೇಮಕವಾಗಿರುತ್ತಿದ್ದರು.[೧೫೯] ಒಂದು ಶಾಸನದಲ್ಲಿ ಕೊಪ್ಪದ ನಾಡ 'ಸುಂಕಾಧಿಕಾರಿ' ಮಾದಂಣನ ಮಗ ನಾಗಂಣ್ಣ ಮಾಡಿದ ಧರ್ಮ ಎಂಬುದಾಗಿ ವಿವರಣೆ ನೀಡುತ್ತದೆ.[೧೬೦] ಕವಲೇದುರ್ಗ ಶಾಸನದಲ್ಲಿ ಸುಂಕದ ಠಾಣೆಗಳಲ್ಲಿ ಎತ್ತುಗಳ ವರ್ಣ ವಯಸ್ಸನ್ನು ಬರೆಸಿ ಹೇರಿಕೊಂಡು ಎಂಬುದಾಗಿ ವಿವರಣೆ ನೀಡುತ್ತದೆ. ಮಠವೊಂದಕ್ಕೆ ಹೇರೆತ್ತುಗಳ ಮೇಲಿನ ಸಾಗಣೆ ಸುಂಕ ಪಾವತಿಗೆ ವಿನಾಯಿತಿ ಎಂಬುದಾಗಿ ಶಾಸನವೊಂದರಲ್ಲಿ ಮಾಹಿತಿ ಇದೆ.[೧೬೧]

ಮುಸಲ್ಮಾನರಿಗೂ ಕೆಳದಿ ಅರಸರ ಕಾಲದಲ್ಲಿ ಹಿಂದೂಗಳು ತೆರಿಗೆಗಳನ್ನು ಸಲ್ಲಿಸಿದರು ಎಂಬುದಕ್ಕೆ ಶಾಸನದಲ್ಲಿ 'ಅವರು ತುರುಕರಿಗೆ ಪಗುದಿ ತೆರುಥಾರ' ಎಂದು ಹೇಳಿದ್ದು ತುರುಕರಿಗೆ ತೆರಿಗೆ ನೀಡುವ ಅಂಶವನ್ನು ತಿಳಿಸುವುದು.[೧೬೨]

ವೀರಶೈವ ಅಥವ ಲಿಂಗಾಯತ ಮಠಗಳಿಗಾಗಿ ಹೇರೆತ್ತುಗಳ ಮೂಲಕ ಸಾಗಿಸುವ ಸಾಮಾನು ಸರಂಜಾಮುಗಳ ಮೇಲಿನ ಸಾಗಣೆ ಸುಂಕಗಳನ್ನು ಮನ್ನಾ ಮಾಡಿದುದ್ದು ಕವಲೇದುರ್ಗ ಶಾಸನದಲ್ಲಿ ವ್ಯಕ್ತವಾಗುತ್ತದೆ.

ಹಣ ಮತ್ತು ಬಡ್ಡಿ

ಹಣವನ್ನು ಬಡ್ಡಿಗೆ ಕೊಡುವುದು ಬಹು ಹಿಂದಿನಿಂದಲೂ ರೂಢಿಯಲ್ಲಿದೆ. ಸಾಲವನ್ನು ಕೊಡುವಾಗ ವಸ್ತುಗಳನ್ನು ಮತ್ತು ಭೂಮಿಯನ್ನು ಅಡವಿಡುವ ಪದ್ಧತಿ ಇದ್ದಂತೆ ಶಾಸನಗಳಿಂದ ತಿಳಿದುಬರುತ್ತದೆ. ಕವಲೇದುರ್ಗದ ಶಾಸನವೊಂದರಲ್ಲಿ ಸುಂಕದ ಸಿದ್ಧಬಸವಯ್ಯನ ಮಗ ನಂಜಣ್ಣನು ಕೆಂಚವ್ವನ ಹತ್ತಿರ ೩೦೦ ವರಹ ಸಾಲವನ್ನು ತೆಗೆದುಕೊಂಡು ತೀರಿಸಲಾಗದೆ ಹಣ ಹಾಗೂ ಹಣದ ಬಡ್ಡಿ ಹೇರಳವಾದದ್ದರಿಂದ ಭೂಮಿಯನ್ನು ಆಕೆಗೆ ಅಡವಿಟ್ಟು ನಂತರ ಆಕೆಯ ಅನುಮತಿಯ ಮೇರೆಗೆ ಕೆಂಪಿನ ಮನೋಹರ ದೇವರಿಗೆ ಭೂಮಿಯನ್ನು ಮಾರಾಟ

ಮಾಡಲಾಯಿತು ಎಂದಿದೆ.[೧೭೩] ಇದರಿಂದಾಗ ಸಾಲ ಪಡೆಯುವಾಗ ಭೂಮಿಯನ್ನು ಆಧಾರವಾಗಿಡುವುದು ಕಂಡುಬರುತ್ತದೆ. ಒಂದು ಶಾಸನದಲ್ಲಿ ತಿರಳೆಬೈಲು ಪಟ್ಟಂಣನ ಹತ್ತಿರ ಸಾಲ ಕೊಂಡ ರಾಮಂಣಗಳು ಹನ್ನೆರಡು ಹೊಂನ್ನಿಗೆ ಬಡ್ಡಿ ಹನ್ನೆರಡು ಸಲಗೆ ಭತ್ತಕ್ಕೆ ತಮ್ಮ ಹಲಸಿನಹಳ್ಳಿ ಭೂಮಿಯನ್ನು ಅವರಿಗೆ ಭೋಗ್ಯಾದಿಯಾಗಿ ಇರಿಸಿದರು ಎಂದಿದೆ.[೧೭೪] ಬಡ್ಡಿಯ ಆಸೆಗಾಗಿ ಹಣವನ್ನು, ಸಾಲವನ್ನು ನೀಡುವುದು ಆಗಿನ ಕಾಲದಲ್ಲಿ ಸಾಮಾನ್ಯವಾಗಿದ್ದಿತು.

ಕಾಲ ಕಳೆದಂತೆ ಪ್ರಗತಿ ಕಾಣುತ್ತ ಬಂದ ವಾಣಿಜ್ಯ ಕ್ಷೇತ್ರವು ರಾಜಭಂಡಾರಕ್ಕೆ ಮತ್ತು ಅದನ್ನೇ ವೃತ್ತಿಯಾಗಿ ನಿರ್ವಹಿಸುತ್ತಿದ್ದ ವ್ಯಕ್ತಿ ಅಥವಾ ಸಂಘಗಳಿಗೆ ಆದಾಯ ತರತಕ್ಕ ಇನ್ನೊಂದು ಪ್ರಮುಖ ಮೂಲವಾಗಿತ್ತು. ಬಡ್ಡಿ ವ್ಯವಹಾರವು ಇದ್ದು, ಅದನ್ನು ಕೆಲವೊಮ್ಮೆ ದೇವಾಲಯಗಳಿಗೆ ಬಿಡುವ ಪರಿಪಾಠವಿತ್ತು.

ನಾಣ್ಯಗಳು: ಪ್ರಾಚೀನ ಕಾಲದಲ್ಲಿ ನಿಮಾನ ಪದ್ಧತಿಯು ರೂಢಿಯಲ್ಲಿದ್ದಿತು. ಅದರಿಂದ ಆಗಿನ್ನೂ ನಾಣ್ಯಗಳ ಮುದ್ರಣ, ಅವುಗಳ ಬಳಕೆಯ ಅವಶ್ಯಕತೆಯ ಅರಿವು ಜನರಿಗಿರಲಿಲ್ಲ. ವಾಣಿಜ್ಯ ವ್ಯವಹಾರದ ಅಭಿವೃದ್ಧಿಯಿಂದ ಸಂಪತ್ತಿನ ಪ್ರಮಾಣ ಜಾಸ್ತಿಯಾಗಿ ಅದನ್ನು ರಕ್ಷಿಸುವ ಕೆಲಸ ಕಷ್ಟಕರವಾಯಿತು. ಹೆಚ್ಚು ಸಂಪತ್ತನ್ನು ಕಡಿಮೆ ಸ್ಥಳಗಳಲ್ಲಿ ಕೂಡಿಡುವ ಉಪಾಯದ ಸಲುವಾಗಿ ಆಯಾ ಕಾಲಘಟ್ಟದಲ್ಲಿ ಹಲವು ಮೌಲ್ಯವುಳ್ಳ ಲೋಹದ ನಾಣ್ಯಗಳನ್ನು ಮುದ್ರಿಸುವ ರೂಢಿ ಜಾರಿಗೆ ಬಂದಿತು.

ನಾಣ್ಯಕ್ಕೆ ಸಂಬಂಧಿಸಿದ ಹಲವಾರು ಪದಗಳು ಶಾಸನಗಳಲ್ಲಿ ಉಲ್ಲೇಖವಾಗಿವೆ. ನಾಣ್ಯಗಳ ಹೆಸರುಗಳೆಂದರೆ ಗದ್ಯಾಣ, ವರಹ, ಹೊನ್ನು, ಹಣ, ಬೇಳೆ, ಹಾಗ ಮತ್ತು ರೂಪಾಯಿ. ವಿಜಯನಗರ ಕಾಲದಲ್ಲಿ ಗದ್ಯಾಣ, ವರಹ, ಹೊನ್ನು ಒಂದೇ ಮೌಲ್ಯದ ನಾಣ್ಯಗಳಾಗಿದ್ದವು ಎಂಬುದನ್ನು ತಿಳಿಸುತ್ತದೆ.[೧೭೫] ಒಂದು ಶಾಸನದಲ್ಲಿ ೪೩ ಹೊನ್ನಿನ ಮೊತ್ತವೊಂದನ್ನು ಉಲ್ಲೇಖಿಸಿ, ಅದನ್ನು ಎರಡು ಭಾಗಗಳಾಗಿ ಮಾಡಿ ಮೊದಲನೆಯ ಭಾಗದ ೨೫ ಗದ್ಯಾಣಗಳನ್ನು ಒಂದು ವ್ಯವಹಾರಕ್ಕೆ ಕೊಟ್ಟು ಮಿಕ್ಕ ೧೮ ಗದ್ಯಾಣಗಳನ್ನು ಶೃಂಗೇರಿಯ ಶ್ರೀಮಠಕ್ಕೆ ಕಾಣಿಕೆಯಾಗಿ ಕೊಟ್ಟ ವಿಷಯ ಇದರಲ್ಲಿ ಉಕ್ತವಾಗಿದೆ.[೧೭೬] ಗದ್ಯಾಣ, ಕಲೆಸನ ಹಾಗೂ ಚಿನ್ನ ಜತಿ, ಕಾಸು ಇತ್ಯಾದಿಗಳು ವಿಜಯನಗರದ ನಾಣ್ಯಗಳಾಗಿದ್ದು ಅವುಗಳು ಬಂಗಾರ, ಬೆಳ್ಳಿ ಮತ್ತು ತಾಮ್ರದ ಲೋಹಗಳಿಂದ ಮಾಡಲ್ಪಟ್ಟ ನಾಣ್ಯಗಳಾಗಿದ್ದವು. ಕೆಳದಿ ನಾಯಕರ ಕಾಲದಲ್ಲಿ ವರಹ (ಗದ್ಯಾಣ) ಹೊನ್ನು, ಧರಣ, ಹಣ, ಮುಪಾಗ, ಅಡ್ಡ ಹಾಗೂ ಬೆಳೆ ವೀಸ, ಅರವೀಸ ಮತ್ತು ಕಾಸುಗಳು ಅವರೋಹ ಶ್ರೇಣಿಯ ನಾಣ್ಯಗಳಾಗಿದ್ದವು.

ಕೆಳದಿ ನಾಯಕರ ಬೆಳ್ಳಿಯ ನಾಣ್ಯಗಳು ದೊರೆತಿಲ್ಲ. ಆದರೆ ಬೆಳ್ಳಿಯ ನಾಣ್ಯಗಳು ಚಲಾವಣೆಯಲ್ಲಿದ್ದವು ಎಂದು ವಿದೇಶಿ ಬರಹಗಾರ ಹೇಳಿದ್ದು, 'ತಾರ್' ಎಂಬ ಬೆಳ್ಳಿಯ ನಾಣ್ಯಗಳನ್ನು ನೋಡಿದುದಾಗಿ ತಿಳಿಸಿದ್ದಾನೆ. ಅಷ್ಟೇ ಅಲ್ಲದೇ ಅದು ನಾಲ್ಕು ತಾಮ್ರದ ನಾಣ್ಯಗಳಿಗೆ ಸಮ ಎಂದು ಹೇಳಿದ್ದಾನೆ.[೧೭೭] ಎಲ್ಲಾ ಶಾಸನಗಳು ಮತ್ತು ವಿದೇಶಿ ಬರಹಗಾರರ ಮಾಹಿತಿಯನ್ನು ಆಧರಿಸಿ ಕೆಳದಿ ನಾಯಕರ ಕಾಲದ ನಾಣ್ಯಗಳ ಕೋಷ್ಟಕವನ್ನು ಈ ರೀತಿ ರಚಿಸಲಾಗಿದೆ.

ವರಹ	=	ಗದ್ಯಾಣ	=	೫೨ ಗ್ರೇನ್	=	೨	ಹೊನ್ನು
೧ ಹೊನ್ನು	=	೨ಧರಣ	=	೨೬ ಗ್ರೇನ್	=	೫	ಹಣ
೩/೪ ಹಣ	=	ಮುಪ್ಪಾಗ	=	೩.೫ ಗ್ರೇನ್			
೧ ಹಣ	=	೨ ಅಡ್ಡ	=	೫ ಗ್ರೇನ್			
೧ ಅಡ್ಡ	=	೨ ಹಾಗ	=	೨.೫ ಗ್ರೇನ್			
೧ ಹಾಗ	=	೨ ಬೇಳೆ	=	೧.೨೫ ಗ್ರೇನ್			
೧ ಹಾಗ	=	೪ ವೀಸ	=	೧.೨೫ ಗ್ರೇನ್			
೧ ವೀಸ	=	೨೬ ಅರೆವೀಸ	=	೬.೬ ಗ್ರೇನ್			
೧ ಹಾಗ	=	೧೬ ಕಾಸು	=	೧.೨೫ ಗ್ರೇನ್			
೧ ತಾರ	=	೪ ಕಾಸು					
೧ ಅರೆವೀಸ	=	೨ ಕಾಸು ೧೮೬					

ನಾಣ್ಯಗಳಲ್ಲಿ ಪ್ರಸಿದ್ಧವಾದುದು ಗದ್ಯಾಣ. ಇದರ ತೂಕ ಸುಮಾರು ೯೬ ಗ್ರಾಂ. ಎಂಬುದು ಡಾ, ಅಲ್ತೇಕರರೂ, ಸುಮಾರು ೬೦ ಗ್ರಾಂಗಳೆಂದು ಡಾ. ಅಪ್ಪಾದೊರೈ ಅವರೂ ಅಭಿಪ್ರಾಯ ಪಡುತ್ತಾರೆ.[೧೮೭]

ಕಡತಗಳು ಹಾಗೂ ಇನ್ನಿತರ ಆನುಷಂಗಿಕ ಆಧಾರಗಳಾದ ನಿರೂಪ ಬಿನ್ನವತ್ತಳೆ ಮತ್ತು ಲೆಕ್ಕಾಚಾರದ ದಾಖಲೆಗಳಲ್ಲಿ ಗದ್ಯಾಣದೊಂದಿಗೆ ವರಹವನ್ನು ನಮೂದಿಸಲಾಗಿದೆ. ಹೆಚ್ಚಿನ ಕಡತಗಳಲ್ಲಿ ಗದ್ಯಾಣಕ್ಕೆ 'ಗ' ಎಂದು ಬರೆಯಲಾಗಿದೆ. ತೆರಿಗೆಗೆ ಸಂಬಂಧಿಸಿದ ದಾಖಲೆಗಳಲ್ಲಿ ವರಹದ ಬದಲಾಗಿ ಗದ್ಯಾಣ ಪದದ ಬಳಕೆಯಾಗುತ್ತದೆ.[೧೮೮]

ಗದ್ಯಾಣದ ಕೆಳಗಿನ ನಾಣ್ಯವೇ ಹೊನ್ನು. ಹೊನ್ನು=ಅರ್ಧ ವರಹ ೧/೨ ಹಣ ಹೊನ್ನಿನ ಕೆಳಗಿನ ನಾಣ್ಯ, ಹಣ=ವರಹದ ೧/೧೦ ಭಾಗ, ಹೊನ್ನಿನ ೧/೫ ಭಾಗ ಹಣದ ನಂತರ ಮುಪಾಗ, ಮುಪಾಗ=ಹಣದ ೩/೪ ಭಾಗ, ಮುಪಾಗದ ಕೆಳಗಿನ ನಾಣ್ಯ ಅಡ್ಡ, ಅಡ್ಡ= ಹಣದ ೧/೨ ಭಾಗ, ಅಡ್ಡದ ಕೆಳಗಿನ ನಾಣ್ಯವೇ ಹಾಗ. ಹಾಗ=ಹಣದ ೧/೪ ಭಾಗ, ಹಾಗೆಯೇ ಕೆಳಗಿನ ಬೆಲೆಯ ನಾಣ್ಯವೇ ಬೇಳೆ, ಬೇಳೆ=ಹಾಗದ ೧/೨ ಭಾಗ, ವೀಸವು ಬೇಳೆಗಿಂತ ಕಡಿಮೆ ಮೌಲ್ಯದ ನಾಣ್ಯ. ವೀಸ=ಹಾಗದ ೧/೪ ಭಾಗ) ವೀಸದ ಅರ್ಧವೇ ಅರೆವೀಸ, ಕಾಸು ಎಂದರೆ ಹಾಗದ ೧೬/೧ ಭಾಗವಾಗಿದೆ.

ತುಳುನಾಡಿನಲ್ಲಿ ಒಂದು ಸಾವಿರಕ್ಕೂ ಹೆಚ್ಚು ವರ್ಷಗಳ ಕಾಲ ರಾಜ್ಯಭಾರ ಮಾಡಿದ ಅಳುಪರು ಚಂದ್ರವಂಶಕ್ಕೆ ಸೇರಿದ್ದು ಮೀನ ಲಾಂಛನವನ್ನು ಹೊಂದಿದ್ದರು. ಇವರು ಪಾಂಡ್ಯ

ವಂಶದವರೆಂದು ಈ ವಂಶದ ಕೆಲವು ಅರಸರು ಪಂಡಿತ ಪಾಂಡ್ಯ, ಪಾಂಡ್ಯ ಧನಂಜಯ ಎಂಬ ಬಿರುದುಗಳನ್ನು ಧರಿಸಿರುವರು. ಪಾಂಡ್ಯ ಧನಂಜಯನ ನಾಲ್ಕು ವಿಧದ ನಾಣ್ಯಗಳು ಸಿಗುತ್ತವೆ.

ಒಂದನೆಯದು: ಮುಂಭಾಗ: ಒಂದು ಮೀನು, ಎಡಕ್ಕೆ ಶಂಕ, ಬಲಕ್ಕೆ ಚೌರಿ. ಹಿಂಭಾಗ: ಶ್ರೀ ಪಾಂಡ್ಯ ಧನಂಜಯ ಎಂಬ ನಾಗರಿ ಬರಹ.

ಎರಡನೆಯದು: ಮುಂಭಾಗ: ಎರಡು ಮೀನುಗಳು, ಎಡಕ್ಕೆ ಶಂಕ, ಬಲಕ್ಕೆ ಚೌರಿ.ಹಿಂಭಾಗ: ಮೇಲಿನ ನಾಣ್ಯದಂತೆ ಬರಹ.

ಮೂರನೆಯದು: ಮುಂಭಾಗ: ಎರಡು ಮೀನುಗಳು, ಬಲಕ್ಕೆ ಪೂರ್ಣಕುಂಭ, ಎಡಕ್ಕೆ ದೀಪಸ್ತಂಭ.ಹಿಂಭಾಗ: ಶ್ರೀ ಪಾಂಡ್ಯ ಧನಂಜಯ ಎಂಬ ಕನ್ನಡ ಬರಹ.

ನಾಲ್ಕನೆಯದು: ಮುಂಭಾಗ: ಅಡ್ಡವಾಗಿರುವ ಒಂದರ ಮೇಲೊಂದರಂತೆ ಎರಡು ಮೀನುಗಳು. ಹಿಂಭಾಗ: ಶ್ರೀ ಪಾಂಡ್ಯ ಧನಂಜಯ ಎಂಬ ಕನ್ನಡ ಬರಹ.[೧೮೦] ಆಳುಪರು ತಮ್ಮನ್ನು ಪಾಂಡ್ಯ ವಂಶೀಯರೆಂದು ಕರೆದುಕೊಂಡಿದ್ದು, ಪಾಂಡ್ಯ ಧನಂಜಯ, ಪಾಂಡ್ಯಪಂಡಿತ ಎಂಬ ಬಿರುದುಗಳನ್ನು ಆಳುಪ ಅರಸರು ಧರಿಸಿದ್ದು ಪಾಂಡ್ಯ ಗದ್ಯಾಣವೆಂಬ ನಾಣ್ಯವನ್ನು ಚಲಾವಣೆಗೆ ತಂದರು. ಇವರ ನಾಣ್ಯವೇ ಅತಿ ಪ್ರಾಚೀನವಾದುದು.

ಕೊಪ್ಪ ತಾಲ್ಲೂಕಿನ ಸರ್ವಮಾನ್ಯ ಗ್ರಾಮಗಳಿಂದ ಸರ್ವಜಿತು ಸಂವತ್ಸರದಲ್ಲಿ ಹೈದರಿ ೧೬೧ ಅಂದರೆ ಒಂದುನೂರ ಅರವತ್ತೊಂದು ಗದ್ಯಾಣ ಎಂಟು ಹಣ ಒಂದು ಮುಪಾಗ ಮತ್ತು ಒಂದು ಬೇಳೆ ಆದಾಯವಿತ್ತೆಂದು ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಿ.ಶ. ೧೮೨೮ರಲ್ಲಿ ಕವಲೇದುರ್ಗದ ಮಾಮಲೆದಾರ ಅಪ್ಪಣ್ಣಯ್ಯಗೆ ಕಳುಹಿಸಿದ ನಿರೂಪದಿಂದ ತಿಳಿದುಬರುತ್ತದೆ.

ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು ಕಮ್ಮಟ, ಟಂಕಸಾಲೆಗಳೆಂದು ಕರೆಯುತ್ತಿದ್ದರು. ವಿಶ್ವಕರ್ಮರೆಂದು ಕರೆದುಕೊಳ್ಳುವ ಅಕ್ಕಸಾಲಿಗಳನ್ನು ರಾಜನು ಕಮ್ಮಟಗಳಲ್ಲಿ ನೇಮಿಸಿ ಕೊಳ್ಳುತ್ತಿದ್ದನು.[೧೮೧] ಕೆಲವೊಮ್ಮೆ ದೇವಸ್ಥಾನವು ಟಂಕಸಾಲೆಯಾಗಿ ಕಾರ್ಯನಿರ್ವಹಿಸುತ್ತಿತ್ತು, ವಿಜಯನಗರ ಅರಸರು ಕರ್ನಾಟಕದ ಕರಾವಳಿ ತೀರವನ್ನು ತಮ್ಮ ಆರ್ಥಿಕ ಕೇಂದ್ರವನ್ನಾಗಿ ಮಾಡಿಕೊಂಡು ವಿದೇಶಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಈ ಮೂಲಕವೇ ಸಾಧಿಸಿದರು. ಸ್ಥಳೀಯವಾಗಿ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ತರುವುದರಿಂದ ವ್ಯವಹಾರವನ್ನು ಸುಲಭಗೊಳಿಸಬಹುದೆಂದು ತಿಳಿದ ಇವರು ಬಾರಕೂರು ಮತ್ತು ಮಂಗಳೂರುಗಳಲ್ಲಿ ನಾಣ್ಯ ಮುದ್ರಣದ ಟಂಕಸಾಲೆಗಳನ್ನು ಸ್ಥಾಪಿಸಿದರು. ಬಾರಕೂರಿನಲ್ಲಿ ಮುದ್ರಿತವಾದ ನಾಣ್ಯವು 'ಬಾರಕೂರು ಗದ್ಯಾಣ'[೧೮೨] ಎಂದು ಮಂಗಳೂರಿನಲ್ಲಿ ಮುದ್ರಣಗೊಂಡ ನಾಣ್ಯ 'ಮಂಗಳೂರು ಗದ್ಯಾಣ'[೧೮೩] ಎಂದು ಹೆಸರಿನಿಂದ ಚಲಾವಣೆಗೆ ಬಂದವು.

ಭೂ ಒಡೆತನ

ರಾಜನ ನಿಯಂತ್ರಣಕ್ಕೆ ಸಮಗ್ರ ರಾಜ್ಯದ ಭೂಒಡೆತನ ಮತ್ತು ಸಂಪತ್ತು ಒಳಪಟ್ಟಿದ್ದರೂ ಅಂತಿಮವಾಗಿ ಆಸ್ತಿಯನ್ನು ಹೊಂದುವ ಹಕ್ಕು ಆ ಕಾಲದ ಪ್ರಜೆಗಳಿಗೆ ಇದ್ದಿತು ಎಂಬ ಅಂಶ ಮನವರಿಕೆಯಾಗುತ್ತದೆ. ಈ ಮೇಲಿನ ಶಾಸನವನ್ನು ಗಮನಿಸಿದರೆ ಒಬ್ಬ ವ್ಯಕ್ತಿಗೆ ಜಮೀನನ್ನು ಅಡವು ಇಡುವ ಅವಕಾಶ ಇದೆ ಎನ್ನುವಾಗ, ಅದು ಆ ವ್ಯಕ್ತಿಯ ಭೂಮಾಲೀಕತ್ವವನ್ನು ಪ್ರತಿಪಾದಿಸುತ್ತದೆ. ಮಧ್ಯಮಲೆನಾಡಿನ ಬಹಳಷ್ಟು ಶಾಸನಗಳು ದಾನ ಶಾಸನಗಳಾಗಿದ್ದರಿಂದ ಇದರಲ್ಲಿ ರಾಜನು ಮಠಗಳಿಗೆ, ದೇವಾಲಯಗಳಿಗೆ, ಅಗ್ರಹಾರಗಳಿಗೆ, ಬ್ರಾಹ್ಮಣರಿಗೆ, ಭೂದಾನ ಮಾಡಿದ ಸಮಗ್ರ ವಿವರಣೆ ಇರುವುದನ್ನು ಗಮನಿಸಿದಾಗ ಹೆಚ್ಚಾಗಿ ಭೂಒಡೆತನ ಈ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಸೇರಿತ್ತು ಎನ್ನಬಹುದು. ಇವುಗಳು ಭೂಮಿಯನ್ನು ರೈತರಿಗೆ ಗುತ್ತಿಗೆ ಹಾಗೂ ಗೇಣಿಯ ರೂಪದಲ್ಲಿ ಕೊಟ್ಟು ಅವರಿಂದ ಕಂದಾಯವನ್ನು ಸಂಗ್ರಹಿಸಿ ಸರ್ಕಾರಕ್ಕೆ ಸಲ್ಲಿಸುತ್ತಿದ್ದರು. ಹೀಗೆ ಭೂಮಿಯನ್ನು ಪಡೆದ ಪ್ರಜೆಗಳು ಅವುಗಳ ಮೇಲೆ ಸಂಪೂರ್ಣ ಅಧಿಕಾರ ಹೊಂದಿದ್ದರು ಎಂದು ಹೇಳಬಹುದು.

ಮಧ್ಯಮಲೆನಾಡಿನಲ್ಲಿ ಯಾವ ರೀತಿಯ ಉತ್ಪಾದನಾ ವ್ಯವಸ್ಥೆಯು ರೂಢಿಯಲ್ಲಿದ್ದಿತು ಎಂಬುದಕ್ಕೆ ಸ್ಪಷ್ಟವಾದ ಮಾಹಿತಿ ಲಭ್ಯವಾಗುವುದಿಲ್ಲ. ಅರಸ, ಭೂಮಾಲೀಕರು, ಬ್ರಾಹ್ಮಣರು ಹಾಗೂ ರೈತರು ಎಂಬಂತಹ ಉತ್ಪಾದಕ ಮತ್ತು ಅನುತ್ಪಾದಕ ವರ್ಗಗಳು ಯಾವ ರೀತಿ ಸಂಬಂಧ ಹೊಂದಿದ್ದವು ಎಂಬುದರ ಸ್ಪಷ್ಟ ಚಿತ್ರಣ ಸಿಗುವುದಿಲ್ಲ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಊಳಿಗಮಾನ್ಯತೆ, ಭೂಮಾಲೀಕತ್ವ, ಪುರೋಹಿತಶಾಹಿ ಹಾಗೂ ದಾನ ಎಂಬ ನಾಲ್ಕು ಅಂಶಗಳನ್ನು ಇಟ್ಟುಕೊಂಡು ಯಾವ ರೀತಿಯ ಉತ್ಪಾದನಾ ವ್ಯವಸ್ಥೆ ಅಸ್ತಿತ್ವದಲ್ಲಿತ್ತು ಎನ್ನುವುದನ್ನು ಪತ್ತೆ ಹಚ್ಚುವ ಪ್ರಯತ್ನ ಮಾಡಲಾಗಿದೆ. ಉತ್ಪಾದನಾ ವ್ಯವಸ್ಥೆ ಕೇವಲ ಆರ್ಥಿಕ ಚಟುವಟಿಕೆಗಳಿಗಷ್ಟೇ ಸೀಮಿತವಾಗಿರದೇ ಸಾಮಾಜಿಕ ಸ್ಥಿತ್ಯಂತರಗಳ ಸ್ವರೂಪವನ್ನು ಪರಿಚಯಿಸುತ್ತದೆ. ಈ ಅವಧಿಯಲ್ಲಿ ಊಳಿಗಮಾನ್ಯ ಲಕ್ಷಣಗಳನ್ನು ವಿವರಿಸುವ ಅನೇಕ ಅಂಶಗಳು ಗೋಚರಿಸುತ್ತವೆ. ಅವುಗಳೆಂದರೆ ಸಾಮಂತ ಅರಸರ ಪ್ರಾಬಲ್ಯ, ಬ್ರಾಹ್ಮಣರು ಮತ್ತು ಧಾರ್ಮಿಕ ಸಂಸ್ಥೆಗಳು, ಭೂದಾನಗಳು, ಭೂಮಾಲೀಕತ್ವ ಮುಂತಾದವುಗಳು ರಾಜಪ್ರಭುತ್ವದ ಶ್ರೇಣೀಕರಣವನ್ನು ಪ್ರತಿನಿಧಿಸುತ್ತವೆ. ಸಾಮ್ರಾಟನ ಅಡಿಯಾಳುಗಳಾಗುತ್ತಿದ್ದ ಸಾಮಂತನು ಪ್ರಾದೇಶಿಕ ಆಡಳಿತದ ಜವಾಬ್ದಾರಿಯನ್ನು ಹೊಂದಿದ್ದನು.

ಭೂಮಿಯನ್ನು ದಾನ ನೀಡುವ ಪದ್ಧತಿ ಆರಂಭದ ಕಾಲಘಟ್ಟದಿಂದ ಕೆಳದಿ ನಾಯಕರ ಅವಧಿಯವರೆಗೂ ವ್ಯಾಪಕವಾಗಿ ಹರಡಿತು ಎನ್ನುವುದು ದಾನಶಾಸನಗಳಿಂದ ತಿಳಿದುಬರುತ್ತದೆ. ಊಳಿಗಮಾನ್ಯ ವ್ಯವಸ್ಥೆಯ ಅಸ್ತಿತ್ವ ಮತ್ತು ಬೆಳವಣಿಗೆಯಲ್ಲಿ ಈ ಪದ್ಧತಿಯು ಪ್ರಮುಖ ಸ್ಥಾನ ಪಡೆದುಕೊಳ್ಳುತ್ತದೆ. ಭೂದಾನದ ಕಲ್ಪನೆಯು ಇಲ್ಲಿನ ಸಾಮಾಜಿಕ, ಆರ್ಥಿಕ ಜೀವನದಲ್ಲಿ ಮಹತ್ತರ ಬದಲಾವಣೆಗಳನ್ನು ತಂದಿತು. ಇದು ನೂತನ ಮಾಲೀಕತ್ವದ ಸೃಷ್ಟಿಗೆ ಕಾರಣವಾಯಿತು. ಬ್ರಹ್ಮದೇಯ ಭೂಮಿಯನ್ನು ಪಡೆದ ಬ್ರಾಹ್ಮಣರು ಮಹಾಜನರಾಗಿ ಆಡಳಿತ ನಡೆಸಲಾರಂಭಿಸಿದರು.

ಇಲ್ಲಿನ ದೇವಾಲಯಗಳಂತೂ ಅಪಾರ ದಾನದತ್ತಿಗಳಿಂದಾಗಿ ಭೂಮಾಲೀಕರಂತೆ ಕಾಣಿಸಿಕೊಂಡವು. ಈ ಬದಲಾವಣೆಗಳು ಉತ್ಪಾದಕ ವರ್ಗದ ಶೋಷಣೆಯನ್ನು ಹೆಚ್ಚಿಸಿತು. ಈಗಾಗಲೇ ವಿವರಿಸಿರುವಂತೆ ಮಧ್ಯಮಲೆನಾಡಿನಲ್ಲಿ ಸಾಮ್ರಾಟನ ಅಧೀನದಲ್ಲಿನ ಸಾಮಂತರ ರಾಜ್ಯ, ಕೃಷಿ ಆಧಾರಿತ ಅರ್ಥವ್ಯವಸ್ಥೆ, ಪುರೋಹಿತಶಾಹಿಯ ಭೂಮಾಲೀಕತ್ವ, ದಾನ ನೀಡುವ ಪದ್ಧತಿ ಮುಂತಾದ ಲಕ್ಷಣಗಳು ಶ್ರೇಣೀಕೃತ ಸಾಮಾಜಿಕ, ಆರ್ಥಿಕ ವ್ಯವಸ್ಥೆಯನ್ನು ಸೂಚಿಸುವುದರ ಮೂಲಕ ಊಳಿಗಮಾನ್ಯ ವ್ಯವಸ್ಥೆಯನ್ನು ದೃಢೀಕರಿಸುತ್ತವೆ.

ಧಾರ್ಮಿಕ ಮತ್ತು ಸಾರ್ವಜನಿಕ ಸೇವೆಗೆಂದು ದಾನದ ರೂಪದಲ್ಲಿ ಪಡೆದ ಭೂಮಿ ಭೂ ಮಾಲೀಕತ್ವದ ಸೃಷ್ಟಿಗೆ ಕಾರಣವಾಗಿರುವುದನ್ನು ಮಧ್ಯಮಲೆನಾಡಿನ ಶಾಸನಗಳು ನಿರೂಪಿಸುತ್ತವೆ. ಇಲ್ಲಿನ ಶೇಕಡ ೮೦ ಶಾಸನಗಳು ದಾನಶಾಸನಗಳಾಗಿದ್ದು ದಾನದ ರೂಪದಲ್ಲಿ ಭೂಮಿಯನ್ನು ಪಡೆದ ವ್ಯಕ್ತಿ ಅಥವಾ ಸಂಸ್ಥೆಯೇ ಆ ಭೂಮಿಯ ಮೇಲಿನ ಒಡೆತನವನ್ನು ಹೊಂದಿರುತ್ತಿದ್ದರು. ತೀರ್ಥಹಳ್ಳಿಯ ಅಂದಗೆರೆ ಶಾಸನದಲ್ಲಿ ಬ್ರಾಹ್ಮಣರಿಗೆ ನೀಡುತ್ತಿದ್ದ ದಾನ ಬ್ರಹ್ಮದೇಯವಾಗಿದ್ದು ಅದು ಹೊಸ ಬ್ರಾಹ್ಮಣ ಭೂಮಾಲೀಕ ವರ್ಗವನ್ನು ಸೃಷ್ಟಿಸಿತು. ಅದೇ ರೀತಿ ದೇವಾಲಯ ಮಠಗಳಿಗೆ ದಾನ ನೀಡಲಾಗುತ್ತಿದ್ದು, ಭೂಮಾಲೀಕರಂತೆ ವರ್ತಿಸುವಂತೆ ಮಾಡಿತು. ಹೆಚ್ಚೆಚ್ಚು ಭೂಮಿಯನ್ನು ದಾನ ನೀಡುವುದರ ಮೂಲಕ ಈ ಪ್ರದೇಶದ ಮೇಲೆ ಹತೋಟಿಯನ್ನು ಸಾಧಿಸುವುದು ಅರಸು ಮನೆತನಗಳಿಗೆ ಅನಿವಾರ್ಯವಾಗಿತ್ತು. ರಾಜ್ಯದ ಮೇಲೆ ಅರಸೊತ್ತಿಗೆ ಪ್ರಭಾವವನ್ನು ಬೀರಿ ಇಲ್ಲವೇ ಸೈನಿಕ ಬಲವನ್ನು ಪ್ರಯೋಗಿಸಿ ಸಂಪೂರ್ಣ ಹತೋಟಿ ಸಾಧಿಸುವುದು ಸಾಧ್ಯವಿರಲಿಲ್ಲ. ಈ ಕಾರಣಕ್ಕಾಗಿಯೇ ಇಲ್ಲಿನ ಸಾಮಂತ ಅರಸರು ಧರ್ಮದ ಮೊರೆಹೋಗುವುದು ಅನಿವಾರ್ಯವಾಗಿದ್ದಿತು. ಮಧ್ಯಮಲೆನಾಡಿನ ಅರ್ಥ ವ್ಯವಸ್ಥೆಯು ಭೂ ಆಧಾರಿತವಾದ್ದರಿಂದಾಗಿ ಭೂಮಿಯ ಖಾಸಗಿ ಒಡೆತನ ಹೆಚ್ಚು ಪ್ರಾಮುಖ್ಯತೆಯನ್ನು ಗಳಿಸಿಕೊಂಡಿತು. ಇದು ಇಲ್ಲಿನ ಭೂಮಾಲೀಕ ಮಧ್ಯವರ್ತಿಗಳ ಹುಟ್ಟಿಗೂ ಕಾರಣವಾಯಿತು.

ಮಧ್ಯಮಲೆನಾಡಿನ ಅಂದಿನ ಶ್ರೇಣಿಕೃತ ಸಮಾಜ ವ್ಯವಸ್ಥೆಯಲ್ಲಿ ಪುರೋಹಿತಶಾಹಿ ವರ್ಗ ನಿರ್ಣಾಯಕ ಪಾತ್ರವನ್ನು ವಹಿಸಿದ್ದರು. ಇವರು ಅರಸ ಮತ್ತೆ ರೈತರ ನಡುವೆ ಕೊಂಡಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರು ಕೃಷಿಕರು ಮತ್ತು ಉತ್ಪಾದಕ ವರ್ಗಗಳ ಮೇಲೆ ನಿಯಂತ್ರಣ ಸಾಧಿಸಿದರು. ದಾನ-ಧರ್ಮದ ಮೂಲಕ ಜಮೀನು ಮತ್ತು ಅಧಿಕಾರವನ್ನು ಪಡೆದ ಪುರೋಹಿತಶಾಹಿ ವರ್ಗ ಅದೇ ಅಧಿಕಾರವನ್ನು ಬಳಸಿ ಸಮಾಜದ ಕೆಳವರ್ಗದ ಮೇಲೆ ಹತೋಟಿ ಸಾಧಿಸಿದರು. ಭೂಮಾಲೀಕತ್ವದ ಸಿದ್ಧಾಂತವೆಂದರೆ ಬ್ರಾಹ್ಮಣತ್ವದ ಸಿದ್ಧಾಂತಗಳೇ ಆಗಿದ್ದವು. ಈ ಸಿದ್ಧಾಂತಗಳಿಂದ ಕೂಡಿದ ಉತ್ಪಾದನಾ ವ್ಯವಸ್ಥೆ ರೂಪುಗೊಳ್ಳಲಾರಂಭಿಸಿತು. ಇದರಿಂದಾಗಿ ಇಲ್ಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಹಲವಾರು ಸ್ತರಗಳು ರೂಪುಗೊಂಡು ಪರಸ್ಪರ ಸಂಬಂಧಗಳು ಅಸ್ಪಷ್ಟಗೊಳ್ಳಲಾರಂಭಿಸಿದರು.

ಮಧ್ಯಮಲೆನಾಡಿನ ಶಾಸನಗಳ ಆಳವಾದ ಅಧ್ಯಯನದಿಂದ ಕಂಡುಬರುವ ಅಂಶಗಳೆಂದರೆ ಮಧ್ಯಕಾಲೀನ ಕಾಲಘಟ್ಟದಲ್ಲಿ ಎರಡು ರೀತಿಯ ಭೂಮಾಲೀಕ ವರ್ಗಗಳು ಅಸ್ತಿತ್ವದಲ್ಲಿದ್ದನ್ನು ಗುರುತಿಸಬಹುದು. ಅವುಗಳೆಂದರೆ ಭೂಮಿಯನ್ನು ದಾನದ ರೂಪದಲ್ಲಿ ಪಡೆದುಕೊಂಡ ಪುರೋಹಿತಶಾಹಿ ವರ್ಗ ಹಾಗೂ ಭೂಮಿಯನ್ನು ಮೊದಲೇ ಹೊಂದಿದ ಭೂಮಾಲೀಕ ಪಂಗಡಗಳು. ಅನುತ್ಪಾದಕ ವರ್ಗವಾಗಿ ಬ್ರಾಹ್ಮಣರು ಉತ್ಪಾದನೆಯ ಮೇಲೆ ನೇರ ಹತೋಟಿ ಸಾಧಿಸುವಂತಾಗಿ, ಕೃಷಿಕರು ಪ್ರಾತಿನಿಧ್ಯವನ್ನು ಕಳೆದುಕೊಂಡರು. ಮಧ್ಯಮಲೆನಾಡಿನ ಭೂ ಆಧಾರಿತ ಅರ್ಥ ವ್ಯವಸ್ಥೆಯ ಪುರೋಹಿತಶಾಹಿ ಭೂಮಾಲೀಕರ ಸುತ್ತ ಹೆಣೆದುಕೊಂಡಿತ್ತು. ಇವರು ಕೃಷಿಕರ ಪಾಲಿಗೆ ಅರಸರಂತೆಯೇ ಕಾಣಿಸಿಕೊಂಡಿದ್ದರು. ಕೃಷಿಕರು ಮತ್ತು ಇತರ ಉತ್ಪಾದಕ ವರ್ಗದವರು ಸಮಾಜದ ಕೆಳಸ್ತರಕ್ಕೆ ದೂಡಲ್ಪಟ್ಟರು. ಇದರಿಂದಾಗಿ ಮಧ್ಯಯುಗದ ಸಮಯದಲ್ಲಿ ಭೂಮಿಯನ್ನು ಕೊಳ್ಳುವ ಹಾಗೂ ಆ ಮೂಲಕ ಭೂಮಾಲೀಕರಾಗುವ ಪ್ರಕ್ರಿಯೆಗಳು ನಡೆದವು ಎಂಬ ತೀರ್ಮಾನಕ್ಕೆ ಬರಲಾಗಿದೆ.

ಉಪಸಂಹಾರ

ಸುಮಾರು ಹತ್ತು ಶತಮಾನಗಳ ಸುದೀರ್ಘ ಕಾಲ ಅಧ್ಯಯನದ ಒಳಗೊಂಡಿರುವ ಈ ಒಂದು ಸಂಶೋಧನೆಯ ವ್ಯಾಪ್ತಿಯಲ್ಲಿ ಅಂದಿನ ಮಲೆನಾಡು ಪ್ರದೇಶವು ಸುಖಿರಾಜ್ಯವಾಗಿತ್ತೇ? ಅಥವಾ ಕಷ್ಟಕರವಾಗಿದ್ದಿತೆ? ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಬಹಳ ಸುಲಭವಾದ ಕೆಲಸವಲ್ಲ. ಸುಖದ ಪರಿಕಲ್ಪನೆ ಪ್ರತಿಯೊಂದು ಕಾಲಘಟ್ಟದಲ್ಲಿ ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತದೆ. ಇದರಿಂದಾಗಿ ಆಧುನಿಕ ಬದುಕಿನಲ್ಲಿ ನಿಂತು ಅಂದಿನ ಜೀವನ ಮೌಲ್ಯಗಳನ್ನು ತೂಗಿ ನೋಡುವುದು ಸರಿಯೇ ಸಾಧುವೇ ಎನ್ನುವ ಪ್ರಶ್ನೆ ಎದುರಾಗುವುದು.

ಆಂತರಿಕ ವ್ಯಾಪಾರವು ಸಮೃದ್ಧವಾಗಿತ್ತು ಎಂಬುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಹಣದ ಪರಿಕಲ್ಪನೆ ಅದ್ಭುತವಾಗಿದೆ. ತೆರಿಗೆಗಳು ಮತ್ತು ಸುಂಕಗಳು ತೀರ ಅತಿಯಾಯಿತೇನೋ ಎನಿಸುತ್ತದೆ. ವೈಯಕ್ತಿಕ ವಿಷಯಗಳೂ ತೆರಿಗೆ ವ್ಯಾಪ್ತಿಗೆ ಒಳಪಟ್ಟಿರುವುದು ಆಶ್ಚರ್ಯವೆನಿಸುತ್ತದೆ. ಸಮೃದ್ಧ ನೀರಿನಾಸರೆ ಮಲೆನಾಡಿನಲ್ಲಿದ್ದುದರಿಂದ ಕೆರೆ - ಕಟ್ಟೆಗಳ ನಿರ್ಮಾಣದಲ್ಲಿ ನಿರ್ಲಕ್ಷ್ಯ ವಹಿಸಿದರು ಎನ್ನಬಹುದು.

ಆದರೆ ಈ ಪ್ರದೇಶದಲ್ಲಿ ಯುದ್ಧಗಳು, ಹೋರಾಟಗಳು, ತ್ಯಾಗ, ಬಲಿದಾನ, ಸತಿಪದ್ಧತಿ ಮುಂತಾದವುಗಳು ಯಥೇಚ್ಛವಾಗಿ ನಡೆದಿದ್ದು, ಇದರಲ್ಲಿಯೇ ಪ್ರಜೆಗಳು ನಿಜವಾದ ಸುಖವನ್ನು ಕಂಡಿದ್ದರು. ಆದರೆ ಪ್ರಾಚೀನ ಮಧ್ಯಮಲೆನಾಡು ಸುಖಿ ರಾಜ್ಯವಾಗಿದ್ದಿತೆ? ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟಸಾಧ್ಯ.

ಕೊನೆ ಟಿಪ್ಪಣಿಗಳು

೧. ಪ್ರಭುಶಂಕರ ವಿಶ್ವಧರ್ಮ ದರ್ಶನ ಸಂಪುಟ-೧, ಪು.ಸಂ ೧೪.

೨. ಚಿದಾನಂದಮೂರ್ತಿ ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಪು.ಸಂ. ೧೧೫.

೩. ಇದೇ ಪು.ಸಂ. ೧೨೦.

೪. ಮಂಜುನಾಥ ಸಿ.ಯು, ಶಾಸನಗಳು ಮತ್ತು ಕರ್ಣಾಟಕ ಸಂಸ್ಕೃತಿ ಚಿತ್ಕಲ ಪ್ರಕಾಶನ, ಕುಪ್ಪಂ, ೨೦೧೨, ಪು.ಸಂ. ೬೩.

೫. ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ ಸಂ, ಮಲೆಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. ೫೩.

೬. ಪೂರ್ವೋಕ್ತ: ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ, ಪು.ಸಂ. ೬೩.

೭. ಇದೇ, ಪು.ಸಂ. ೫೮.

೮. ಇದೇ, ಪು.ಸಂ. ೬೪.

೯. ಎಕ ೧೫, ಹೊಸನಗರ, ೧೨೨, ಕ್ರಿ.ಶ. ೧೪೨೫.

೧೦. ಪೂರ್ವೋಕ್ತ: ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ, ಪು.ಸಂ. ೫೫.

೧೧. ಇದೇ, ಪು.ಸಂ. ೬೪.

೧೨. ಇದೇ, ಪು.ಸಂ. ೬೫.

೧೩. ಇದೇ, ಪು.ಸಂ. ೬೫.

೧೪. ಇದೇ, ಪು.ಸಂ. ೬೫.

೧೫. ಇದೇ, ಪು.ಸಂ. ೬೫.

೧೬. ಇದೇ, ಪು.ಸಂ. ೬೫.

೧೭. ಇದೇ, ಚಿಕ್ಕಮಗಳೂರು ೧೭೭ ಕ್ರಿ.ಶ. ೧೧ನೇ ಶತಮಾನ.

೧೮. ಇದೇ, ಕೊಪ್ಪ ೨ ಕ್ರಿ.ಶ. ೧೫೩೦.

೧೯. ಇದೇ, ಕೊಪ್ಪ ೬ ಕ್ರಿ.ಶ. ೧೫೯೮.

೨೦. ಇದೇ, ತೀರ್ಥಹಳ್ಳಿ ೩೦ ಕ್ರಿ.ಶ. ೧೦೯೦–೯೧.

೨೧. ಇದೇ, ತೀರ್ಥಹಳ್ಳಿ ೩೧ ಕ್ರಿ.ಶ.

೨೨. ಇದೇ, ತೀರ್ಥಹಳ್ಳಿ ೨೨೬ ಕ್ರಿ.ಶ. ೧೪೭೭.

೨೩. ಇದೇ, ಶೃಂಗೇರಿ ೨೬ ಕ್ರಿ.ಶ. ೧೧೬೧.

೨೪. ಇದೇ, ಶೃಂಗೇರಿ ೨೫ ಕ್ರಿ.ಶ. ೧೧೫೦.

೨೫. ಪೂರ್ವೋಕ್ತ: ಮಂಜುನಾಥ ಸಿ.ಯು. ಪು.ಸಂ. ೫.

೨೬. ಪೂರ್ವೋಕ್ತ: ಹೆಗಡೆ ರಾಜಾರಾಮ ಮತ್ತು ಅಶೋಕ ಶೆಟ್ಟರ್ ಪು.ಸಂ. ೬೬.

೨೭. ಎಕ ೧೫, ಹೊಸ ನಗರ ೫೫, ಕ್ರಿ.ಶ. ೧೨೦೭.

೨೮. ಇದೇ, ಶಿಕಾರಿಪುರ ೧೩೬.

೨೯. ಇದೇ, ಚಿಕ್ಕಮಗಳೂರು ೧೩೫ ಕ್ರಿ.ಶ. ೧೦೬೫

೩೦. ಇದೇ, ಚಿಕ್ಕಮಗಳೂರು ೧೭೮ ಕ್ರಿ.ಶ. ೧೧ನೇ ಶತಮಾನ.

೩೧. ಪೂರ್ವೋಕ್ತ: ಹೆಗಡೆ ರಾಜಾರಾಮ ಮತ್ತು ಅಶೋಕ ಶೆಟ್ಟರ್, ಪು.ಸಂ ೨೭೮.

೩೨. ಇದೇ, ನರಸಿಂಹರಾಜಪುರ ೩೬ ಕ್ರಿ.ಶ. ೧೫೫೩.

೩೩. ಪೂರ್ವೋಕ್ತ: ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ, ಪು.ಸಂ ೨೭೮.

೩೪. ಇದೇ, ತೀರ್ಥಹಳ್ಳಿ ೪೦ ಕ್ರಿ.ಶ. ೧೬೨೭.

೩೫. ಇದೇ, ತೀರ್ಥಹಳ್ಳಿ ೫೫ ಕ್ರಿ.ಶ. ೧೬೪೧.

೩೬. ಇದೇ, ತೀರ್ಥಹಳ್ಳಿ ೧೧೯ ಕ್ರಿ.ಶ. ೧೬೬೮.

೩೭. ಪ್ರಭಾಕರ ಎಂ.ಎನ್, ದೇವಾಲಯ ವಾಸ್ತು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. ೧೭.

೩೮. ಪೂರ್ವೋಕ್ತ: ಮಂಜುನಾಥ ಸಿ.ಯು, ಪು.ಸಂ ೩೭೪.

೩೯. ಇದೇ, ತೀರ್ಥಹಳ್ಳಿ ೧೬ ಕ್ರಿ.ಶ. ೧೪೦೪.

೪೦. ಇದೇ, ತೀರ್ಥಹಳ್ಳಿ ೨೧ ಕ್ರಿ.ಶ. ೧೪೨೪.

೪೧. ಇದೇ, ತೀರ್ಥಹಳ್ಳಿ ೨೦ ಕ್ರಿ.ಶ. ೧೪೦೪.

೪೨. ಎಂ.ಎ. ಪ್ರಭಾಕರ, ಉದಯವಾಣಿ ಪತ್ರಿಕೆ, ೧೬ ಮಾರ್ಚ್ ೨೦೧೪, ಪು.೦

೪೩. ಮೋಹನ್‌ಕೃಷ್ಣ ರೈ, ಪ್ರಭುತ್ವ ಮತ್ತು ಜನತೆ, ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪು.ಸಂ, ೧೯೩.

೪೪. ಇದೇ, ತೀರ್ಥಹಳ್ಳಿ ೧೪೫, ಕ್ರಿ.ಶ. ೧೩೪೬.

೪೫. ಇದೇ, ನರಸಿಂಹರಾಜಪುರ ೧೯, ಕ್ರಿ.ಶ. ೧೫೬೯.

೪೬. ಹಿರೇಮಠ ಎಸ್.ಎಂ. ಶಾಸನ ಪರಿಭಾಷೆ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೫, ಪು.ಸಂ. ೨೦.

೪೭. ಇದೇ, ಶೃಂಗೇರಿ ೭೭, ೧೪ನೇ ಶತಮಾನ.

೪೮. ಇದೇ, ಕೊಪ್ಪ ೧೧, ಕ್ರಿ.ಶ. ೧೫೮೮.

೪೯. ಇದೇ, ತೀರ್ಥಹಳ್ಳಿ ೧೧೯, ಕ್ರಿ.ಶ. ೧೫೮೩.

೫೦. ಇದೇ, ಶೃಂಗೇರಿ ೩, ಕ್ರಿ.ಶ. ೧೭೫೮.

೫೧. ಇದೇ, ಶೃಂಗೇರಿ ೬೦, ಕ್ರಿ.ಶ. ೧೧ನೇ ಶತಮಾನ.

೫೨. ಪ್ರಭಾಕರ ಎಂ.ಎ., ವಿಜಯಕರ್ನಾಟಕ ಪತ್ರಿಕೆ ೩ ಮಾರ್ಚ್ ೨೦೧೩, ಪು.ಸಂ. ೫.

೫೩. ಇದೇ, ತೀರ್ಥಹಳ್ಳಿ ೨೦೨ ಕ್ರಿ.ಶ. ೧೬೭೨.

೫೪. ಇದೇ, ತೀರ್ಥಹಳ್ಳಿ ೨೦೩ ಕ್ರಿ.ಶ. ೧೬೪೧.

೫೫. ಇದೇ, ಶೃಂಗೇರಿ ೧ ಕ್ರಿ.ಶ. ೧೩೪೬.

೫೬. ಇದೇ, ಶೃಂಗೇರಿ ೪೯ ಕ್ರಿ.ಶ. ೧೫೨೯-೩೦'.

೫೭. ಶಾಸ್ತ್ರೀ ಎ.ಕೆ. ಶೃಂಗೇರಿ ಧರ್ಮ ಸಂಸ್ಥಾನ ಶ್ರೀಮಠ, ೧೯೮೩ ಪು.ಸಂ. ೩೪-೩೫.

೫೮. ಶಾಮಶಾಸ್ತ್ರೀ ಆರ್. ಲಿಂಗಣಕವಿಯ ಕೆಳದಿನೃಪವಿಜಯ, ಸರ್ಗ ನಂ. ೬೧, ಮೈಸೂರು ೧೯೨೧ ಪು.ಸಂ. ೮೨.

೫೯. ಇದೇ, ಪು.ಸಂ. ೮೫.

೬೦. ಪೂರ್ವೋಕ್ತ: ಶಾಸ್ತ್ರಿ ಎ.ಕೆ., ಪು.ಸಂ. ೩೨೪-೩೨೫.

೬೧. ಇದೇ, ಪು.ಸಂ. ೧೮೯-೧೯೦.

೬೨. ಲೇಖನ ಗಿರಿಧರಶಾಸ್ತ್ರೀ ಸಿ.ವಿ. ಭಾಮತಿ ವಾರ್ಷಿಕ ಸಂಚಿಕೆ ಶ್ರೀ ಜೆ.ಸಿ.ಬಿ.ಎಂ. ಕಾಲೇಜು, ಶೃಂಗೇರಿ ೨೦೦೫-೨೦೦೬ ಪು.ಸಂ. ೯೪, ೯೫.

೬೩. ಇದೇ, ಕೊಪ್ಪ ೨, ಕ್ರಿ.ಶ. ೧೫೩೦.

೬೪. ಇದೇ, ಕೊಪ್ಪ ೧೪, ಕ್ರಿ.ಶ. ೧೭೧೯.

೬೫. ಇದೇ, ತೀರ್ಥಹಳ್ಳಿ ೧೫೦, ಕ್ರಿ.ಶ. ೧೪೫೬.

೬೬. ಇದೇ, ತೀರ್ಥಹಳ್ಳಿ ೧೫೧, ಕ್ರಿ.ಶ. ೧೪೩೧-೩೨.

೬೭. ಇದೇ, ತೀರ್ಥಹಳ್ಳಿ ೧೫೨, ಕ್ರಿ.ಶ. ೧೪೨೨.

೬೮. ಇದೇ, ತೀರ್ಥಹಳ್ಳಿ ೧೮೧, ಕ್ರಿ.ಶ. ೧೫ನೇ ಶತಮಾನ.

೬೯. ಇದೇ, ತೀರ್ಥಹಳ್ಳಿ ೧೧೮, ಕ್ರಿ.ಶ. ೧೫೬೪.

೭೦. ಇದೇ, ತೀರ್ಥಹಳ್ಳಿ ೧೧೯ ಕ್ರಿ.ಶ. ೧೫೮೩.

೭೧. ಇದೇ, ತೀರ್ಥಹಳ್ಳಿ ೧೨೩ ಕ್ರಿ.ಶ. ೧೪೩೭.

೭೨. ಇದೇ, ಕೊಪ್ಪ ೨೬ ಕ್ರಿ.ಶ. ೧೩೮೧.

೭೩. ಇದೇ, ಕೊಪ್ಪ ೨೪ ಕ್ರಿ.ಶ. ೧೫೯೪.

೭೪. ಇದೇ, ಕೊಪ್ಪ ೨೪ ಕ್ರಿ.ಶ. ೧೫೯೪.

೭೫. ಇದೇ, ಕೊಪ್ಪ ೨೭ ಕ್ರಿ.ಶ. ೧೪೪೮.

೭೬. ಇದೇ, ಕೊಪ್ಪ ೩೧ ಕ್ರಿ.ಶ. ೧೩೯೨.

೭೭. ಇದೇ, ಕೊಪ್ಪ ೩೦ ಕ್ರಿ.ಶ. ೧೪೧೦.

೭೮. ಇದೇ, ತೀರ್ಥಹಳ್ಳಿ ೧೬, ಕ್ರಿ.ಶ. ೧೪೦೪.

೭೯. ಇದೇ, ತೀರ್ಥಹಳ್ಳಿ ೨೧, ಕ್ರಿ.ಶ. ೧೪೨೪.

೮೦. ಇದೇ, ತೀರ್ಥಹಳ್ಳಿ ೨೦ ಕ್ರಿ.ಶ. ೧೪೦೪.

೮೧. ಇದೇ, ಶೃಂಗೇರಿ ೫೩, ಕ್ರಿ.ಶ. ೧೩೯೨-೯೩.

೮೨. ಇದೇ, ಶೃಂಗೇರಿ ೩೦, ಕ್ರಿ.ಶ. ೧೭೬೦.

೮೩. ಇದೇ, ಶೃಂಗೇರಿ ೫೫, ಕ್ರಿ.ಶ. ೭ನೇ ಶತಮಾನ.

೮೪. ಇದೇ, ಶೃಂಗೇರಿ ೫೬, ಕ್ರಿ.ಶ. ೭ನೇ ಶತಮಾನ.

೮೫. ಇದೇ, ಶೃಂಗೇರಿ ೬೧ ಕ್ರಿ.ಶ. ೧೬೭೮.

೮೬. ಇದೇ, ಶೃಂಗೇರಿ ೭೦, ಕ್ರಿ.ಶ. ೧೬೩೯.

೮೭. ಇದೇ, ಶೃಂಗೇರಿ ೫, ಕ್ರಿ.ಶ. ೧೬೨೧.

೮೮. ಇದೇ, ಶೃಂಗೇರಿ ೬, ಕ್ರಿ.ಶ. ೧೬ನೇ ಶತಮಾನ.

೮೯. ಇದೇ, ಕೊಪ್ಪ ೧೧, ಕ್ರಿ.ಶ. ೧೫೮೮.

೯೦. ಇದೇ, ಕೊಪ್ಪ ೧೨, ಕ್ರಿ.ಶ. ೧೫೭೮.

೯೧. ಇದೇ, ಕಡೂರು ೨೪೭, ಕ್ರಿ.ಶ. ೧೨೭೨.

೯೨. ಪೂರ್ವೋಕ್ತ: ಚೆನ್ನಕ್ಕ ಎಲಿಗಾರ, ಪು.ಸಂ. ೧೪.

೯೩. ಪೂರ್ವೋಕ್ತ: ಮಂಜುನಾಥ ಸಿ.ಯು., ಪು.ಸಂ. ೧೯೪.

೯೪. ಪೂರ್ವೋಕ್ತ: ಚೆನ್ನಕ್ಕ ಎಲಿಗಾರ, ಪು.ಸಂ. ೧೭.

೯೫. ಸಿಡಿತಲೆ ವೀರಗಲ್ಲು, ಸೂರ್ಯ ದೇವಸ್ಥಾನ ಕೊಪ್ಪ.

೯೬. ಶೈಲಾ ಟಿ.ವರ್ಮ, ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ. ೧೮೭.

೯೭. ರಮೇಶ ಕೆ.ವಿ., ಶರ್ಮ ಎಂ.ಜೆ., ತುಳುನಾಡಿನ ಅರಸು ಮನೆತನಗಳು, ಎಸ್‌ಡಿಎಂ ಪ್ರಕಾಶನ ಮಾಲೆ, ಉಜಿರೆ, ಪು.ಸಂ. ೨೪.

೯೮. ಪೂರ್ವೋಕ್ತ: ಚೆನ್ನಕ್ಕ ಎಲಿಗಾರ, ಪು.ಸಂ. ೨೪.

೯೯. ಪೂರ್ವೋಕ್ತ: ಮಂಜುನಾಥ ಸಿ.ಯು., ಪುಸಂ. ೧೯೫.

೧೦೦. ಇದೇ, ಪು.ಸಂ. ೧೯೭.

೧೦೧. ಪೂರ್ವೋಕ್ತ: ಚೆನ್ನಕ್ಕ ಎಲಿಗಾರ, ಪು.ಸಂ. ೨೮.

೧೦೨. ಪೂರ್ವೋಕ್ತ: ಮಂಜುನಾಥ ಸಿ.ಯು., ಪು.ಸಂ. ೨೧೬.

೧೦೩. ಇದೇ, ತೀರ್ಥಹಳ್ಳಿ ೨೧೪, ಕ್ರಿ.ಶ. ೧೪೩೪.

೧೦೪. ಪೂರ್ವೋಕ್ತ: ಶಾಸ್ತ್ರೀ ಎ.ಕೆ, ಪು.ಸಂ. ೧೪೪–೧೪೫.

೧೦೫. ಶೃಂಗೇರಿಯ ಕಡತ ೧, ದಾಖಲೆ ೩೫.

೧೦೬. ಇದೇ, ಶೃಂಗೇರಿ ೩, ಕ್ರಿ.ಶ. ೧೭೫೮.

೧೦೭. ಇದೇ, ತೀರ್ಥಹಳ್ಳಿ ೧೦೨, ಕ್ರಿ.ಶ. ೧೭೮೯.

೧೦೮. ಇದೇ, ತೀರ್ಥಹಳ್ಳಿ ೪೬, ಕ್ರಿ.ಶ. ೧೬೭೪.

೧೦೯. ಇದೇ, ತೀರ್ಥಹಳ್ಳಿ ೧೨೧, ಕ್ರಿ.ಶ ೧೪೪೦–೪೧.

೧೧೦. ಇದೇ, ತೀರ್ಥಹಳ್ಳಿ ೪೨, ಕ್ರಿ.ಶ. ೧೬೪೨.

೧೧೧. ಇದೇ, ತೀರ್ಥಹಳ್ಳಿ ೪೨, ಕ್ರಿ.ಶ. ೧೬೪೨.

೧೧೨. ಇದೇ, ತೀರ್ಥಹಳ್ಳಿ ೧೦೨, ಕ್ರಿ.ಶ. ೧೭೮೯.

೧೧೩. ಇದೇ, ತೀರ್ಥಹಳ್ಳಿ ೧೩೭, ಕ್ರಿ.ಶ. ೧೪೦೪.

೧೧೪. ಇದೇ, ತೀರ್ಥಹಳ್ಳಿ ೨೦೫, ಕ್ರಿ.ಶ. ೧೪೦೪.

೧೧೫. ಇದೇ, ತೀರ್ಥಹಳ್ಳಿ ೧೩೪, ಕ್ರಿ.ಶ. ೧೭೦೨.

೧೧೬. ಇದೇ, ತೀರ್ಥಹಳ್ಳಿ ೧೩೪, ಕ್ರಿ.ಶ. ೧೭೦೨.

೧೧೭. ಇದೇ, ತೀರ್ಥಹಳ್ಳಿ ೧೦೫, ಕ್ರಿ.ಶ. ೧೬೩೨.

೧೧೮. ಇದೇ, ಕೊಪ್ಪ ೨೫ ಕ್ರಿ.ಶ. ೧೩೭೮.

೧೧೯. ಇದೇ, ತೀರ್ಥಹಳ್ಳಿ ೧೫೮, ಕ್ರಿ.ಶ. ೧೫೭೩.

೧೨೦. ಇದೇ, ತೀರ್ಥಹಳ್ಳಿ ೧, ಕ್ರಿ.ಶ. ೧೪೦೪.

೧೨೧. ಪೂರ್ವೋಕ್ತ: ಮಂಜುನಾಥ ಸಿ.ಯು., ಪು.ಸಂ. ೨೨೪.

೧೨೨. ಇದೇ, ಶೃಂಗೇರಿ ೭೨, ಕ್ರಿ.ಶ. ೧೪೧೭.

೧೨೩. ಇದೇ, ಶೃಂಗೇರಿ ೭, ಕ್ರಿ.ಶ. ೧೬೯೫.

೧೨೪. ಇದೇ, ತೀರ್ಥಹಳ್ಳಿ ೧೨೭, ಕ್ರಿ.ಶ. ೧೪೭೦.

೧೨೫. ಇದೇ, ತೀರ್ಥಹಳ್ಳಿ ೨೦, ಕ್ರಿ.ಶ. ೧೪೦೪.

೧೨೬. ಇದೇ, ಶೃಂಗೇರಿ ೨೬, ಕ್ರಿ.ಶ. ೧೧೬೧.

೧೨೭. ಇದೇ, ಶೃಂಗೇರಿ ೪೬, ಕ್ರಿ.ಶ. ೧೬೪೨.

೧೨೮. ಇದೇ, ತೀರ್ಥಹಳ್ಳಿ ೫, ಕ್ರಿ.ಶ. ೧೫೭೭.

೧೨೯. ಇದೇ, ತೀರ್ಥಹಳ್ಳಿ ೪೬, ಕ್ರಿ.ಶ. ೧೬೭೪.

೧೩೦. ಇದೇ, ತೀರ್ಥಹಳ್ಳಿ ೧೧೬, ಕ್ರಿ.ಶ. ೧೫ನೇ ಶತಮಾನ.

೧೩೧. ಇದೇ, ತೀರ್ಥಹಳ್ಳಿ ೪೬, ಕ್ರಿ.ಶ. ೧೬೭೪.

೧೩೨. ಪೂರ್ವೋಕ್ತ: ಮಂಜುನಾಥ ಸಿ.ಯು, ಪು.ಸಂ. ೨೨೮.

೧೩೩. ಇದೇ, ಶೃಂಗೇರಿ ೨೭, ಕ್ರಿ.ಶ. ೧೫೨೩.

೧೩೪. ಇದೇ, ಶೃಂಗೇರಿ ೨೮, ಕ್ರಿ.ಶ. ೧೫೨೩.

೧೩೫. ಇದೇ, ಮೂಡಿಗೆರೆ ೯೧, ಕ್ರಿ.ಶ. ೧೭೨೧.

೧೩೬. ಪೂರ್ವೋಕ್ತ: ಮಂಜುನಾಥ ಸಿ.ಯು., ಪು.ಸಂ. ೨೨೯.

೧೩೭. ಇದೇ, ತೀರ್ಥಹಳ್ಳಿ ೧೫, ಕ್ರಿ.ಶ. ೧೪೦೫.

೧೩೮. ಇದೇ, ಕೊಪ್ಪ ೮, ಕ್ರಿ.ಶ. ೧೩೨೭.

೧೩೯. ಪೂರ್ವೋಕ್ತ: ಮಂಜುನಾಥ ಸಿ.ಯು., ಪು.ಸಂ. ೨೨೯.

೧೪೦. ಇದೇ, ತೀರ್ಥಹಳ್ಳಿ ೮೩, ಕ್ರಿ.ಶ. ೧೭೧೧.

೧೪೧. ಇದೇ, ತೀರ್ಥಹಳ್ಳಿ ೮೩, ಕ್ರಿ.ಶ. ೧೭೧೧.

೧೪೨. ಇದೇ, ತೀರ್ಥಹಳ್ಳಿ ೧೮೩, ಕ್ರಿ.ಶ. ೧೪೦೧.

೧೪೩. ಇದೇ, ತೀರ್ಥಹಳ್ಳಿ ೧೩೯, ಕ್ರಿ.ಶ. ೧೪೧೫.

೧೪೪. ಇದೇ, ತೀರ್ಥಹಳ್ಳಿ ೧೫, ಕ್ರಿ.ಶ. ೧೪೦೫.

೧೪೫. ಇದೇ, ತೀರ್ಥಹಳ್ಳಿ ೧೬, ಕ್ರಿ.ಶ. ೧೪೦೪.

೧೪೬. ಇದೇ, ತೀರ್ಥಹಳ್ಳಿ ೪೬, ಕ್ರಿ.ಶ. ೪೬೭೪.

೧೪೭. ಪೂರ್ವೋಕ್ತ: ಮಂಜುನಾಥ ಸಿ.ಯು., ಪು.ಸಂ. ೨೪೫.

೧೪೮. ಇದೇ, ತೀರ್ಥಹಳ್ಳಿ ೧೩೮, ಕ್ರಿ.ಶ. ೧೪೦೪.

೧೪೯. ಇದೇ, ತೀರ್ಥಹಳ್ಳಿ ೧೮೩, ಕ್ರಿ.ಶ. ೧೪೦೧.

೧೫೦. ಇದೇ, ಕೊಪ್ಪ ೧೯, ಕ್ರಿ.ಶ. ೧೪೦೪.

೧೫೧. ಇದೇ, ತೀರ್ಥಹಳ್ಳಿ ೨೯, ಕ್ರಿ.ಶ. ೧೩೬೩.

೧೫೨. ಇದೇ, ತೀರ್ಥಹಳ್ಳಿ ೬೩, ಕ್ರಿ.ಶ. ೧೬೪೧.

೧೫೩. ಎಸ್.ಐ.ಐ. ಸಂಪುಟ ೧, ಭಾಗ ಎರಡು, ನಂ. ೪೫೦.

೧೫೪. ಇದೇ, ಪು.ಸಂ ೪೫೯.

೧೫೫. ಇದೇ, ತೀರ್ಥಹಳ್ಳಿ ೧೩೭, ಕ್ರಿ.ಶ. ೧೪೦೪.

೧೫೬. ಇದೇ, ತೀರ್ಥಹಳ್ಳಿ ೧೩೭, ಕ್ರಿ.ಶ. ೧೪೦೪.

೧೫೭. ಇದೇ, ತೀರ್ಥಹಳ್ಳಿ ೧೩೭, ಕ್ರಿ.ಶ. ೧೪೦೪.

೧೫೮. ಇದೇ, ಶೃಂಗೇರಿ ೪೪, ಕ್ರಿ.ಶ. ೧೬೨೮.

೧೫೯. ಇದೇ, ತೀರ್ಥಹಳ್ಳಿ ೧೪೩, ಕ್ರಿ.ಶ. ೧೬೯೮.

೧೬೦. ಇದೇ, ತೀರ್ಥಹಳ್ಳಿ ೧೪೩, ಕ್ರಿ.ಶ. ೧೬೯೮.

೧೬೧. ಪೂರ್ವೋಕ್ತ: ಶೈಲಾ ಟಿ.ವರ್ಮ, ಪು.ಸಂ. ೧೬೭.

೧೬೨. ಇದೇ, ತೀರ್ಥಹಳ್ಳಿ ೨೧೨, ಕ್ರಿ.ಶ. ೧೪೧೭.

೧೬೩. ಇದೇ, ಶೃಂಗೇರಿ ೭೨, ಕ್ರಿ.ಶ. ೧೪೧೭.

೧೬೪. ಇದೇ, ತೀರ್ಥಹಳ್ಳಿ ೨೨೩ ಕ್ರಿ.ಶ. ೧೬೬೫.

೧೬೫. ಇದೇ, ತೀರ್ಥಹಳ್ಳಿ ೮೯ ಕ್ರಿ.ಶ. ೧೬೬೭.

೧೬೬. ಇದೇ, ತೀರ್ಥಹಳ್ಳಿ ೧೦೬ ಕ್ರಿ.ಶ. ೧೬೩೧.

೧೬೭. ಇದೇ, ತೀರ್ಥಹಳ್ಳಿ ೧೦೬, ಕ್ರಿ.ಶ. ೧೬೩೧.

೧೬೮. ಇದೇ, ತೀರ್ಥಹಳ್ಳಿ ೫೭, ಕ್ರಿ.ಶ. ೧೬೯೪.

೧೬೯. ಪೂರ್ವೋಕ್ತ: ಮಂಜುನಾಥ ಸಿ.ಯು., ಪು.ಸಂ. ೨೬೭.

೧೭೦. ಇದೇ, ಕೊಪ್ಪ ೮ ಕ್ರಿ.ಶ. ೧೩೨೭.

೧೭೧. ಇದೇ, ತೀರ್ಥಹಳ್ಳಿ ೧೮೯ ಕ್ರಿ.ಶ. ೧೬೬೮.

೧೭೨. ಇದೇ, ತೀರ್ಥಹಳ್ಳಿ ೧೮೯ ಕ್ರಿ.ಶ. ೧೬೬೮.

೧೭೩. ಇದೇ, ತೀರ್ಥಹಳ್ಳಿ ೬೮, ಕ್ರಿ.ಶ. ೧೬೯೦.

೧೭೪. ಇದೇ, ತೀರ್ಥಹಳ್ಳಿ ೧೫೨, ಕ್ರಿ.ಶ. ೧೪೨೨.

೧೭೫. ಚಟ್ನಿಸ್ ಕೆ.ಎನ್., ಕೆಳದಿ ಪಾಲಿಟಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು.ಸಂ. ೧೯೯.

೧೭೬. ಇದೇ ಪು.ಸಂ. ೧೯೯.

೧೭೭. ನರಸಿಂಹಮೂರ್ತಿ ಎ.ವಿ., ಕರ್ನಾಟಕ ನಾಣ್ಯ ಪರಂಪರೆ, ಕನ್ನಡ ಪುಸ್ತಕ ಪ್ರಾಧಿಕಾರ, ಪು.ಸಂ. ೧೯೪.

೧೭೮. ಪೂರ್ವೋಕ್ತ: ಚಿದಾನಂದಮೂರ್ತಿ ಎಂ., ಪು.ಸಂ. ૩೮೮, ૩೯.

೧೭೯. ಪೂರ್ವೋಕ್ತ: ಶಾಸ್ತ್ರೀ ಎ.ಕೆ., ಶೃಂಗೇರಿ ಧರ್ಮ ಸಂಸ್ಥಾನ, ಪು.ಸಂ. ೧೭೧.

೧೮೦. ಪೂರ್ವೋಕ್ತ: ನರಸಿಂಹಮೂರ್ತಿ ಎ.ವಿ., ಪು.ಸಂ. ೨೧೫-೨೧೬.

೧೮೧. ಪೂರ್ವೋಕ್ತ: ಚಿದಾನಂದಮೂರ್ತಿ ಎಂ., ಪು.ಸಂ. ૩೮೭.

೧೮೨. ಎಸ್.ಐ.ಐ. Vol, VII No. ೨೨૩,೨ ૩೧, ೨૩೦.

೧೮૩. ಇದೇ, ಪು.ಸಂ ೧೮೯, ೨೨૩.

•••

ಅಧ್ಯಾಯ : ನಾಲ್ಕು

ಶಾಸನಗಳಲ್ಲಿ ಜನಸಾಮಾನ್ಯರು

ಅಧ್ಯಾಯ : ನಾಲ್ಕು

ಶಾಸನಗಳಲ್ಲಿ ಜನಸಾಮಾನ್ಯರು

ಮಧ್ಯಮಲೆನಾಡಿನ ಶಾಸನಗಳಲ್ಲಿ ಆಚಾರ - ವಿಚಾರಗಳ ಕುರಿತು ಸಾಕಷ್ಟು ವಿಚಾರಗಳನ್ನು ಸಂಶೋಧಿಸಿ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಬಹುದಾಗಿದೆ. ಸಾಮಾಜಿಕ, ಕೌಟುಂಬಿಕ, ಧಾರ್ಮಿಕ ಆಚಾರ–ವಿಚಾರಗಳ ಬಗ್ಗೆ ಶಾಸನಗಳು ಅಲ್ಪ ಪ್ರಮಾಣದ ಮಾಹಿತಿಯನ್ನು ನೀಡುವುದರ ಮೂಲಕ ಹಲವಾರು ಅಂಶಗಳನ್ನು ವ್ಯಕ್ತಪಡಿಸುತ್ತವೆ. ಕೆಲವೊಂದು ಕಟ್ಟುಪಾಡುಗಳು, ನಡತೆ, ಸಂಪ್ರದಾಯ, ವಿಷಯ ಪ್ರಸ್ತಾಪ, ವಿವೇಚನೆ, ಸಂಶಯ, ಆಲೋಚನೆ ಮುಂತಾದ ಅಂಶಗಳನ್ನು ಅಭಿವ್ಯಕ್ತಗೊಳಿಸುತ್ತವೆ. ಇಂದಿಗೂ ಆಚರಿಸಲ್ಪಡುತ್ತಿರುವ ಕೆಲವೊಂದು ಆಚರಣೆಗಳನ್ನು ಕೆಲವು ಶಾಸನಗಳು ಉಲ್ಲೇಖಿಸುತ್ತವೆ.

ಅಂದಿನ ಸಮಾಜದಲ್ಲಿ ಕೆಳಸ್ತರ ಅಥವಾ ಅಲಕ್ಷಿತ ವರ್ಗವಾದ ಜನಸಾಮಾನ್ಯರ ಚರಿತ್ರೆಯನ್ನು ಶಾಸನದ ಮೂಲಕ ಅಧ್ಯಯನ ಮಾಡಲು ಹೊರಟಾಗ ಸಾಮಗ್ರಿಗಳ ಮಾಹಿತಿ ಕಡಿಮೆ ಎಂದೆನಿಸಿಕೊಳ್ಳುತ್ತದೆ. ಸೈದ್ಧಾಂತಿಕ ಖಚಿತ ನಿಲುವುಗಳಿಲ್ಲದ್ದರಿಂದ ಸ್ಪಷ್ಟವಾದ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ. ಇಲ್ಲಿನ ಶಾಸನಗಳು ಮೇಲ್ವರ್ಗದ ಧೋರಣೆಗಳು ಪರವಾಗಿಯೇ ಇದೆ. ಇಲ್ಲಿ ರಾಜಕೇಂದ್ರಿತ ಮತ್ತು ಪುರೋಹಿತಶಾಹಿ ಚಿಂತನೆಗಳಿಂದ ಕೂಡಿದ್ದು ಊಳಿಗಮಾನ್ಯ ಪದ್ಧತಿಯನ್ನು ವ್ಯಕ್ತಪಡಿಸುತ್ತವೆ. ರಾಜಪ್ರಭುತ್ವದ ಧೋರಣೆಗಳನ್ನು ವೈಭವೀಕರಿಸುವುದಕ್ಕೆ ಭೂಮಾಲೀಕತ್ವದ ಚಿಂತನೆಗಳು ಹಾಗೂ ದಾನವನ್ನು ಶಾಸನಗಳು ಮಾಧ್ಯಮವಾಗಿ ಬಳಸಿಕೊಂಡಿವೆ. ಸಮಾಜದಲ್ಲಿ ಬಹುಸಂಖ್ಯಾತರಾಗಿದ್ದ ಜನಸಾಮಾನ್ಯರ ಬದುಕನ್ನು ನಿರ್ಲಕ್ಷಿಸಿದ್ದನ್ನು ಶಾಸನದುದ್ದಕ್ಕೂ ಕಂಡುಬರುತ್ತದೆ. ರಾಜಕುಟುಂಬ ಮತ್ತು ಪುರೋಹಿತಶಾಹಿ ವರ್ಗಗಳು, ಅಧಿಕಾರಗಳು ಮೇಲ್ವರ್ಗದಲ್ಲಿ ಗುರುತಿಸಿಕೊಂಡರೆ ಇನ್ನುಳಿದವರು ಕೆಲವರ್ಗದಲ್ಲಿ ಜನಸಾಮಾನ್ಯರಾಗಿ ಪರಿವರ್ತನೆ ಗೊಂಡರು. ಇವರುಗಳು, ಉತ್ಪಾದಕ ವರ್ಗದವರಾಗಿದ್ದು ಅನುತ್ಪಾದಕ ವರ್ಗದಿಂದ ಶೋಷಣೆ ಹಾಗೂ ಅವಮಾನವನ್ನು ಎದುರಿಸಬೇಕಾಯಿತು. ಜನಸಾಮಾನ್ಯರು ಸೈನಿಕರಾಗಿ, ವೀರರಾಗಿ, ಮಹಾಸತಿಯರಾಗಿ, ಲೆಂಕರರು ಹಾಗೂ ಗರುಡರಾಗಿ ತಮ್ಮ ಒಡೆಯನ ರಕ್ಷಣೆಗಾಗಿ ಪ್ರಾಣದ ಹಂಗನ್ನು ತೊರೆದು ಹೋರಾಡಿದುದ್ದನ್ನು ಶಾಸನಗಳಲ್ಲಿ ಕಾಣಬಹುದಾಗಿದೆ.

೪.೧. ಆಚಾರ - ವಿಚಾರ

ಗೋತ್ರದ ಜೊತೆಗೆ ಹಲವಾರು ಬಳಿಗಳು ವೈದಿಕ ಧರ್ಮದಲ್ಲಿ ಪ್ರಸ್ತಾಪವಾಗಿವೆ. ಕೊಪ್ಪದ ಶಾಸನವೊಂದರಲ್ಲಿ 'ತೊಳಹರಬಳಿ'ಯ ಬೊಂಮರಸ ಹೆಗ್ಗಡೆ ಎಂತಲೂ[೧], ತೀರ್ಥಹಳ್ಳಿಯ ಶಾಸನದಲ್ಲಿ 'ಗಂಗರ ಬಳಿ'ಯ ಮುತ್ತೂರ ಬೊಮ್ಮಣ ಹೆಗ್ಗಡೆಯರು ಬಸದಿಯ ಅಮೃತಪಡಿಗೆ ೧೨ ಖಂಡಗ ಭೂಮಿಯನ್ನು ದಾನವಾಗಿ ಕೊಟ್ಟಿರುವ ವಿವರಣೆ ಇದೆ.[೨]

ಅಂದಿನ ಕಾಲದಲ್ಲಿ ಸ್ತ್ರೀಯರು ತಮ್ಮ ಮನೆತನಕ್ಕೆ ಒಳ್ಳೆಯದಾಗಲೆಂದು ದೇವರಲ್ಲಿ ಹರಕೆ ಕೊಡುವುದು ಸಾಮಾನ್ಯವಾದ ಆಚರಣೆಯಾಗಿದ್ದಿತು. ಇದಕ್ಕೆ ಪೂರಕವೆನ್ನುವಂತೆ ಶಾಸನವೊಂದರಲ್ಲಿ ಮಹಿಳೆಯೊಬ್ಬಳು ಶೃಂಗೇರಿಗೆ ಬಂದು ತನ್ನ ಕುಲ ಕುಟುಂಬಕ್ಕೆ ಒಳ್ಳೆಯದಾಗಲೆಂದು ಶೃಂಗೇರಿಯ ಮಲ್ಲಿಕಾರ್ಜುನ ದೇವರಿಗೆ ನಂದಿಯ ವಿಗ್ರಹವನ್ನು ಪ್ರತಿಷ್ಠಾಪಿಸಿದಳು ಎಂದಿದೆ.[೩]

ದಾನ - ಧರ್ಮಗಳನ್ನು ಮಾಡುವುದು ಸಾಮಾನ್ಯವಾಗಿ ಎಲ್ಲಾ ಧರ್ಮದ ಆಚರಣೆ ಮತ್ತು ಸಂಪ್ರದಾಯ. ಇದಕ್ಕೆ ಯಾವುದೇ ಕಾನೂನಿನ ನಿಯಂತ್ರಣವಿಲ್ಲ. ಹಿಂದೂ ಧರ್ಮದಲ್ಲಿ ದಾನಕ್ಕೆ ವಿಶೇಷ ಪ್ರಾಧಾನ್ಯತೆ ಇದ್ದು, ದಾನವನ್ನು ಕೊಡುವುದು ಗುಪ್ತವಾಗಿರಬೇಕು ಎಂದಿದೆ. ಇಂತಹ ದಾನವನ್ನೂ ಎಲ್ಲಾ ಕಾಲದಲ್ಲೂ ಯಾವಾಗ ಬೇಕಾದರೂ ನೀಡುವಂತಿಲ್ಲ. ದಾನ ನೀಡುವ ಸಮಯ ಪುಣ್ಯ ಕಾಲವಾಗಿರಬೇಕೆಂದು ಶಾಸನಗಳು ತಿಳಿಸುತ್ತವೆ. ವಾರದ ಲೆಕ್ಕದಲ್ಲಿ ದಾನ ನೀಡುವುದು ಸೋಮವಾರ ಪುಣ್ಯಕಾಲದ ಸಮಯವೆಂದು ಶಾಸನವೊಂದು ತಿಳಿಸುತ್ತದೆ.[೪] ಸಂಕ್ರಾಂತಿ ಗ್ರಹಣ, ಶನಿತ್ರಯೋದಸಿ, ಸೂರ್ಯಗ್ರಹಣ, ಚಂದ್ರಗ್ರಹಣ, ಶಿವರಾತ್ರಿ ಮುಂತಾದ ಶುಭ ದಿನಗಳಂದು ದಾನ ನೀಡಿದರೆ ಕಾಶಿಯಲ್ಲಿ ಸಾವಿರ ಕಪಿಲಗಳನ್ನು ದಾನ ನೀಡಿದಷ್ಟೇ ಪುಣ್ಯದ ಫಲ ದೊರಕುವುದೆಂದು ಶಾಸನಗಳು ತಿಳಿಸುತ್ತವೆ.

ಇಂದಿಗೂ ಆಚರಿಸಲ್ಪಡುವ ಕೆಲವು ಹಬ್ಬಗಳು ಮತ್ತು ಕೆಲವೊಂದು ಆಚರಣೆಗಳನ್ನು ಕೆಲವು ಶಾಸನಗಳು ಉಲ್ಲೇಖಿಸುತ್ತವೆ. ಶೃಂಗೇರಿಯ ಶಾಸನವೊಂದರಲ್ಲಿ ಹಬ್ಬಗಳಾದ ಗೋಕುಲಾಷ್ಟಮಿ, ಉತ್ತಾನ ದ್ವಾದಶಿ, ವಸಂತ ಪೂಜೆ, ಕಾರ್ತೀಕ ಪೂಜೆ ಮುಂತಾದವುಗಳ ವಿವರಣೆ ಇದೆ.[೫] ಇನ್ನೊಂದು ಶಾಸನದಲ್ಲಿ ವ್ಯಾಸಪೂಜೆ ಮತ್ತು ಶಂಕರಾಚಾರ್ಯರ ಆರಾಧನೆಯ ಉಲ್ಲೇಖಗಳು ಕಾಣಬರುತ್ತವೆ.[೬] ತೀರ್ಥಹಳ್ಳಿ ಶಾಸನದಲ್ಲಿ ಉಲ್ಲೇಖವಾಗಿರುವ ಪ್ರಮುಖ ಹಬ್ಬಗಳೆಂದರೆ ಮಹಾನವಮಿ, ಕಾರ್ತಿಕಮಾಸ, ರಥಸಪ್ತಮಿ,[೭] ಮಕರ ಸಂಕ್ರಾಂತಿ,[೮] ದೀಪಾವಳಿ[೯] ಮುಂತಾದವು ಇವುಗಳನ್ನು ಇಂದಿಗೂ ಶ್ರದ್ಧಾಭಕ್ತಿಯಿಂದ ಜನರು ಆಚರಿಸುವರು. ಪಂಚಾಮೃತ ಅಭಿಷೇಕಕ್ಕೆ ಬೇಕಾಗುವ ವಸ್ತುಗಳಾದ ಜೇನುತುಪ್ಪ, ಹಾಲು, ಮೊಸರು, ತುಪ್ಪ ಮತ್ತು ಬಾಳೆಹಣ್ಣು ಮುಂತಾದ ವಸ್ತುಗಳ ಉಲ್ಲೇಖದ ಜೊತೆಗೆ ಶ್ರೀಗಂಧ, ದೂಪ, ಕರ್ಪೂರ, ತಾಂಬೂಲ ಇತ್ಯಾದಿ ಪೂಜಾ ಸಾಮಗ್ರಿಗಳ ಪಟ್ಟಿಯನ್ನು ಶಾಸನಗಳಲ್ಲಿ ಕಾಣಬಹುದಾಗಿದೆ.[೧೦]

ದೇವಾಲಯಗಳಲ್ಲಿ ಭಗವಂತನನ್ನು ಸಜೀವ ಸರ್ವಾಂತರ್ಯಾಮಿ ಎಂದು ತಿಳಿದು ಎಲ್ಲ ರೀತಿಯ ಭೋಗಗಳನ್ನು ಆತನಿಗೆ ಸಮರ್ಪಿಸುವುದು ರೂಢಿಯಲ್ಲಿರುವ ಅಂಶ. ಹೀಗೆ ಸಲ್ಲಿಸುವ

ಭೋಗಗಳಲ್ಲಿ ಅಷ್ಟಾಂಗಪೂರ್ವ ಅಂಗಭೋಗದಲ್ಲಿ ಒಳಪಡುತ್ತದೆ. ಅಷ್ಟಾಂಗಪೂರ್ವ ಆಚರಣೆಗೆ ಕುಂಕುಮ, ಕರ್ಪೂರ, ಅಡಕೆ, ಎಲೆ, ಗಂಧ, ಬಿಳಿಯ ಅಕ್ಷತೆ, ದೂಪ, ದೀಪ ಮುಂತಾದವುಗಳನ್ನು ಕಾಲಕಾಲಕ್ಕೆ ನಿಯತವಾಗಿ ಅರ್ಪಿಸುವುದಕ್ಕೆ ಹಾಗೂ ನೈವೇದ್ಯಕ್ಕೆ ದಿನಂಪ್ರತಿ ಸ್ಯಾವಿಗೆ ಪಾಯಸ, ಯಣ್ಣೇಘಾರಿಗೆ, ಒತ್ಸ್ಯಾವಿಗೆ, ರಸಬಾಳೆ ಹಣ್ಣನ್ನು ಸಮರ್ಪಿಸಬೇಕೆಂದು ಶಾಸನದಲ್ಲಿ ಉಕ್ತವಾಗಿದೆ.[೧೧]

ದೇವಾಲಯಗಳು ಜಮೀನುದಾರರಂತೆ ಕಾರ್ಯನಿರ್ವಹಿಸುತ್ತಿದ್ದು ಮಾತ್ರವಲ್ಲದೆ ಸಂಗೀತ ಮತ್ತು ನರ್ತನದ ಹೆಸರಿನಲ್ಲಿ ಮಹಿಳೆಯರನ್ನು ಶೋಷಿಸುವ ಕೇಂದ್ರಗಳೂ ಆಗಿದ್ದವು. ಅಂದಿನ ಸಮಾಜದಲ್ಲಿ ಹೆಣ್ಣಿನ ಶೋಷಣೆ ಎಷ್ಟು ತೀವ್ರವಾಗಿತ್ತು ಎನ್ನುವುದಕ್ಕೆ ಶಾಸನಗಳು ಸಾಕ್ಷಿಗಳಾಗಿವೆ. ಸ್ತ್ರೀಯರನ್ನು ದೇವಾಲಯಗಳ ಸೇವೆಗಾಗಿ ಬಿಡಲಾಯಿತು. ಈ ಉದ್ದೇಶಕ್ಕಾಗಿಯೇ ದೇವಾಲಯಗಳಲ್ಲಿ ಅಂಗಭೋಗ-ರಂಗಭೋಗ ಸೇವೆಯನ್ನು ಹೆಚ್ಚಿಸಲಾಯಿತು. ಈ ರೀತಿ ಶೋಷಣೆಗೊಳಪಟ್ಟವರಲ್ಲಿ ಕೆಳವರ್ಗದ ಮಹಿಳೆಯರಷ್ಟೇ ಅಲ್ಲದೇ ಮೇಲ್ವರ್ಗದ ಮಹಿಳೆಯರು ಇರುತ್ತಿದ್ದರು. ಇವರು ನರ್ತನ-ಗಾಯನಗಳಲ್ಲಿ, ಸಂಗೀತ ವಾದ್ಯಗಳಲ್ಲಿ ಮತ್ತು ಪಗಡೆ, ಚದುರಂಗದಾಟಗಳಲ್ಲಿ ಪರಿಣಿತ ರಾಗಿರಬೇಕಿದ್ದಿತ್ತು. ಪುರುಷ ಪ್ರಧಾನ ಸಮಾಜವನ್ನು ತಮ್ಮ ಗಾನ ನರ್ತನಗಳಿಂದ ರಂಜಿಸುವ ಒತ್ತಾಯಕ್ಕೆ ಒಳಗಾಗಿದ್ದರು. ಇದರಲ್ಲಿ ಲೈಂಗಿಕ ಶೋಷಣೆಯ ಸೇರಿದ್ದಿತು. ಪ್ರಭುತ್ವದ ಆಸೆಗಳನ್ನು ಪೂರೈಸುವುದು ಅಪರಾಧವಲ್ಲ. ಅಂಗ-ರಂಗಭೋಗ ಮುಂದುವರಿಸಿಕೊಂಡು ಹೋಗಬೇಕು ಎಂಬ ಧೋರಣೆ ಅಂದಿನ ಸಮಾಜದಲ್ಲಿತ್ತು. ಇದಕ್ಕಾಗಿ ಧರ್ಮವನ್ನು ಬಳಸಿಕೊಳ್ಳಲಾಯಿತು. ಆಳುವ ವರ್ಗ ಈ ಪದ್ಧತಿಗೆ ಮಾನ್ಯತೆ ನೀಡಿ ಇದೊಂದು ಪುಣ್ಯಕಾರ್ಯ ಎನ್ನುವ ಮೂಢನಂಬಿಕೆ ಯನ್ನು ಸಮಾಜದಲ್ಲಿ ಮೂಡಿಸುವ ಕೆಲಸ ಮಾಡಿತು. ಆದ್ದರಿಂದ ಜನಸಾಮಾನ್ಯ ಈ ವ್ಯವಸ್ಥೆಯಿಂದ ಮೋಸ ಹೋದರು. ಮಧ್ಯಮಲೆನಾಡು ಕೂಡ ಈ ವ್ಯವಸ್ಥೆಯಿಂದ ಹೊರತಾಗಿರಲಿಲ್ಲ.

ದೇವಾಲಯಗಳಲ್ಲಿ ನೃತ್ಯ ಒಂದು ಧಾರ್ಮಿಕ ಆಚರಣೆಯಾಗಿದ್ದು ಇದಕ್ಕಾಗಿ ನರ್ತಕಿಯರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಶಾಸನವೊಂದರಲ್ಲಿ ಶಿರಿಪತಿಯ ನರಸಿಂಹ ದೇವರ ಅಂಗ ರಂಗಭೋಗದ ಸಲುವಾಗಿ ಎಂಬ ಉಲ್ಲೇಖವಿದೆ.[೧೨] ಕವಲೇದುರ್ಗ ಶಾಸನದಲ್ಲಿ ನರ್ತಕಿಯಾದ ಪುಟ್ಟತಾಯಿ ಜಮಖಂಡಿ ಚೆನ್ನಿಯು ಮಹಂತಿನ ಮಠವನ್ನು ನಿರ್ಮಿಸಿದರ ಬಗ್ಗೆ ಮಾಹಿತಿ ಇದೆ.[೧೩] ಇನ್ನೊಬ್ಬ ನರ್ತಕಿಯಾದ ಶಿವಲಿಂಗಿಯ ಕೋರಿಕೆಯಂತೆ ಭೂಕ್ರಯವನ್ನು ಮಾಡಿ ಮಹಂತಿನ ಮಠಕ್ಕೆ ದಾನ ಮಾಡಿದ ಬಗ್ಗೆ ಶಾಸನದಲ್ಲಿ ವಿವರಣೆ ಇದೆ.[೧೪] ಇದರಿಂದಾಗಿ ನರ್ತಕಿಯರು ದೇವಾಲಯ ಮತ್ತು ಮಠಗಳ ರಂಗಭೋಗದಲ್ಲಿ ನಿಷ್ಣಾತರಾಗಿದ್ದರು ಎಂಬುದಾಗಿ ಭಾವಿಸಬಹುದು.

ಸತಿ ಆಚರಣೆಯು ಮಧ್ಯಕಾಲೀನ ಯುಗದ ನಂತರದ ಕಾಲದಿಂದ ಪ್ರಸಿದ್ಧಿಗೆ ಬಂದಿತು. ಪತಿವ್ರತಾಚರಣೆ ಹಿಂದೂ ಸ್ತ್ರೀಯರ ಒಂದು ಸಂಪ್ರದಾಯ. ಸತಿಯ ಆಚರಣೆಯಲ್ಲಿ ಭಾಗವಹಿಸು ವವರು ಹೆಚ್ಚಾಗಿ ಕ್ಷತ್ರಿಯ ವಂಶದವರೇ. ಆದರೆ ಶಾಸನಗಳಲ್ಲಿ ಮೇಲ್ವರ್ಗದವರು ಸತಿಯಾಗಿ ಉಲ್ಲೇಖವಾಗಿರುವುದು ಸಾಕಷ್ಟು ವಿರಳ. ಆರಂಭದಲ್ಲಿ ರಾಜಮನೆತನ, ಸಾಮಂತ ಮನೆತನದವರು

ಸತಿಪದ್ಧತಿಯನ್ನು ಅನುಸರಿಸಿದರೆ ನಂತರದಲ್ಲಿ ಕ್ಷತ್ರಿಯ ಕುಲದವರು ಆತ್ಮಾರ್ಪಣೆ ಮತ್ತು ವೀರತ್ವದ ಸಂಕೇತವಾಗಿ ಸಮಾಜದಲ್ಲಿ ಈ ಆಚರಣೆಯನ್ನು ಮುಂದುವರಿಸಿಕೊಂಡು ಬಂದರು.

ಮಧ್ಯಮಲೆನಾಡಿನಲ್ಲಿ ಅಧಿಕ ಪ್ರಮಾಣದಲ್ಲಿ ಸತಿಯ ವಿಗ್ರಹಗಳು ಲಭಿಸುತ್ತವೆ. ಒಕ್ಕೈ ಇಕ್ಕೈ, ಮುಕ್ಕೈ ಮಾಸ್ತಿ ವಿಗ್ರಹಗಳು ಮತ್ತು ವೀರಮಾಸ್ತಿ ವಿಗ್ರಹಗಳನ್ನು ಹೇರಳ ಸಂಖ್ಯೆಯಲ್ಲಿ ಸಂಗ್ರಹಿಸಲಾಗಿದೆ. ಕೆಲವೊಂದು ಪ್ರದೇಶಗಳಲ್ಲಿ ಒಂದು ಮಾಸ್ತಿಕಲ್ಲು ದೊರೆತರೆ ಅದಕ್ಕೆ ವ್ಯತಿರಿಕ್ತವಾಗಿ ಕೆಲವೊಂದು ಭಾಗದಲ್ಲಿ ಮೂರು, ಐದು ಏಳು ಮಾಸ್ತಿ ವಿಗ್ರಹಗಳನ್ನು ಸಾಲಾಗಿ ನಿಲ್ಲಿಸಿರುವುದು ಹಾಗೂ ಕೆಲವೊಂದು ಮಾಸ್ತಿಯ ವಿಗ್ರಹಗಳಿಗೆ ಪೂಜೆ ನಡೆಯುತ್ತಿರುವುದು ಕಂಡುಬಂದಿದೆ.

ಒಟ್ಟಿನಲ್ಲಿ ಮಧ್ಯಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಹೇರಳವಾಗಿ ಮಾಸ್ತಿಯ ಕುರುಹುಗಳು ಕಂಡುಬರುತ್ತವೆ. ಬಹುಶಃ ಪರಕೀಯರ ದಾಳಿ, ಒತ್ತಾಯದ ಮತಾಂತರ ಕಾರಣಕ್ಕಾಗಿ ಮಾಸ್ತಿಯಾದವರ ಸಂಖ್ಯೆ ವೃದ್ಧಿಸಿರಬೇಕು ಇಲ್ಲವೆ.

ಇನ್ನೊಂದು ಪ್ರಮುಖವಾದ ವಿಷಯವೇನೆಂದರೆ ತೀರ್ಥಹಳ್ಳಿಯ ಒಂದು ಶಾಸನದಲ್ಲಿ ಸಂಗಮದೇವ ಮತ್ತು ಸಂಗಾಯಿ ಅವರು ಹಸು, ಕರು, ಗೃಹೋಪಕರಣಗಳು ಸೇರಿದಂತೆ ತಮ್ಮೆಲ್ಲ ಸೊತ್ತನ್ನು ಶ್ರೀಗಿರಿಯ ಮಲ್ಲಿಕಾರ್ಜುನ ದೇವರಿಗೆ ಸಮರ್ಪಿಸಿದರು. ಅವರು ಬಹು ಪ್ರಾಮಾಣಿಕತೆಯಿಂದ ಈ ದಾನ ಮಾಡಿದರು.[೧೫] ಹಾಗೆಯೇ ಇನ್ನೊಂದು ಶಾಸನದಲ್ಲಿ ಇವರುಗಳು ತಾವಿದ್ದ ಗೃಹವನ್ನು ಕೊಟ್ಟರು. ಬ್ರಾಹ್ಮಣರ ಊಟ–ನಿದ್ರೆಗಳಿಗಾಗಿ ಹತ್ತು ಜನ ಜಂಗಮರ ಊಟೋಪಚಾರಕ್ಕಾಗಿ 'ಅಟ್ಟಿಕ್ಕುವ' ಇಬ್ಬರು ಬ್ರಾಹ್ಮಣರು ಮತ್ತು ಎಂಜಲು ತೆಗೆಯುವ ಶೂದ್ರ ಸ್ತ್ರೀಯೊಬ್ಬಳನ್ನು ನೇಮಿಸಿಕೊಳ್ಳಲಾಯಿತು. ಈ ಆದರ್ಶ ದಂಪತಿಗಳದು 'ಆಡುವ ಮಾತು ಒಂದು, ಮಾಡುವ ಕಾರ್ಯ ಒಂದು,[೧೬] ಇಂಥ ತ್ಯಾಗ ನಿಜಕ್ಕೂ ಅಪರೂಪ. ಇದು ಅಂದಿನ ಕಾಲದ ಆಚರಣೆಯನ್ನು ಅಭಿವ್ಯಕ್ತಗೊಳಿಸುತ್ತದೆ.

ಮಧ್ಯಯುಗೀನ ಕಾಲಾವಧಿಯಲ್ಲಿ ಸಮಾಜ ಅತ್ಯಂತ ಸಂಕೀರ್ಣ ರಚನೆಯಿಂದ ಕಂಡಿದ್ದಿತು. ಸಮಾಜದ ವಿವಿಧ ಸ್ತರಗಳು ಸ್ಪಷ್ಟವಾಗಿ ಗೋಚರವಾಗುವ, ಒಟ್ಟಿಗೆ ಇರುವ ಹಾಗೂ ಪ್ರತ್ಯೇಕವಾಗಿ ನಿಲ್ಲುವ ಲಕ್ಷಣಗಳು ಕಂಡುಬಂದವು. ಸಾಮಾಜಿಕ ತಾರತಮ್ಯತೆಯಿಂದಾಗಿ, ಸಾಮಾಜಿಕ ರಚನೆ ಭಿನ್ನ ಸ್ವರೂಪವನ್ನು ಪಡೆದುಕೊಳ್ಳಲಾರಂಭಿಸಿತು. ಇಲ್ಲಿ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಬಿಗಿ ಹಿಡಿತವನ್ನು ಕಾಣಬಹುದು. ಆಗಿನ ಕಾಲದ ಶಾಸನಗಳನ್ನು ಅಭ್ಯಸಿಸಿದಾಗ ಜಾತಿಪದ್ಧತಿ ಪ್ರಬಲ ರಚನೆಯಾಗಿ ಕಂಡುಬರುತ್ತದೆ. ಪುರೋಹಿತಶಾಹಿಯು ಈ ವ್ಯವಸ್ಥೆಯ ಸ್ಥಾಪಕನಾಗಿ ಹಾಗೂ ನಿರ್ದೇಶಕನಾಗಿ ಕಾರ್ಯನಿರ್ವಹಿಸಿದ್ದನ್ನು ಕಾಣಬಹುದು. ರಾಜಪ್ರಭುತ್ವವು ತನ್ನ ಉದ್ದೇಶ ಸಾಧನೆಗಾಗಿ ಜಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿತು. ಮೇಲ್ವರ್ಗದ ಒಲವನ್ನು ಗಳಿಸಲು ಅರಸರಿಗೆ ಜಾತಿ ಪದ್ಧತಿಯನ್ನು ಯಥಾಪ್ರಕಾರ ಮುಂದುವರೆಸಿಕೊಂಡು ಹೋಗುವುದು ಅನಿವಾರ್ಯವಾಗಿದ್ದಿತು. ಈ ಉದ್ದೇಶಕ್ಕೆ ಪುರೋಹಿತಶಾಹಿಯ ಸಂಪೂರ್ಣ ಬೆಂಬಲ

ದೊರಕಿತು. ಅಂದಿನ ಸಮಾಜವು ವೃತ್ತಿ ಆಧಾರದ ಮೇಲೆ ರೂಪುಗೊಂಡಿದ್ದು ಕ್ರಮೇಣ ವರ್ಣವ್ಯವಸ್ಥೆಗೆ ಪರಿವರ್ತನೆಗೊಂಡು ನಂತರ ಜಾತಿ ವ್ಯವಸ್ಥೆಗೆ ಬದಲಾದುದನ್ನು ಕಾಣಬಹುದು. ಮೇಲ್ವರ್ಗದವರು ಸಾಮಾಜಿಕ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ವೇದಗಳ ಮೂಲಕ ಕಾನೂನಿನ ಚೌಕಟ್ಟನ್ನು ನಿರ್ಮಿಸಿಕೊಂಡರು. ಈ ಪ್ರದೇಶದಲ್ಲಿ ಅಲ್ಪಸಂಖ್ಯಾತರಾಗಿದ್ದ ಬ್ರಾಹ್ಮಣರು ಬಹುಸಂಖ್ಯಾತ ಕೆಳವರ್ಗವನ್ನು ಹತೋಟಿಯಲ್ಲಿಡಲು ಈ ಧಾರ್ಮಿಕ ಚೌಕಟ್ಟು ಅನಿವಾರ್ಯವಾಗಿತ್ತು.

ಎಲ್ಲಾ ವರ್ಗಗಳಲ್ಲಿ ಬ್ರಾಹ್ಮಣ ವರ್ಗ ಶ್ರೇಷ್ಠ ಎಂಬುದು ಸಾರ್ವತ್ರಿಕವಾಗಿ ಒಪ್ಪಿತವಾಗಿದ್ದಿತು. ಮೊದಲನೆಯದು ಬ್ರಾಹ್ಮಣ, ಕೊನೆಯದು ಹೊಲೆಯ ಎನ್ನುವ ವಿವರಗಳಿವೆ. ಇದು ಮಧ್ಯಮಲೆನಾಡಿನ ಅಂದಿನ ಕಾಲಘಟ್ಟದ ಶ್ರೇಣೀಕೃತ ಸಮಾಜ ವ್ಯವಸ್ಥೆ ಯಥಾವತ್ತಾದ ಚಿತ್ರಣವಾಗಿ ಕಂಡುಬರುತ್ತದೆ. ಜಾತಿಗಳು ಹದಿನೆಂಟು ಎಂಬುದು ಒಂದು ಅಂಗೀಕೃತವಾಗಿದ್ದು ಕಾಣುತ್ತದೆ. ವಚನಕಾರರಾದ ಸೊಡ್ಡಳ ಬಾಚರಸ ಮತ್ತು ಅಂಬಿಗರ ಚೌಡಯ್ಯ ಮನುಷ್ಯನ ದೇಹದ ಪ್ರತಿಯೊಂದು ಅಂಗಕ್ಕೂ ಒಂದೊಂದು ಜಾತಿಯನ್ನು ಸಮೀಕರಿಸಿ ಹದಿನೆಂಟು ಜಾತಿಗಳ ಉಲ್ಲೇಖ ಮಾಡಿದ್ದಾರೆ.

ಮಧ್ಯಮಲೆನಾಡಿನ ಶಾಸನಗಳು ಚತುವರ್ಣ ವ್ಯವಸ್ಥೆಯನ್ನು ಹಾಗೂ ಮೇಲ್ವರ್ಗ ಮತ್ತು ಕೆಳವರ್ಗದ ಜನಾಂಗಗಳ ಹೆಸರನ್ನು ತಿಳಿಸುತ್ತವೆ. ಶಾಸನಗಳಲ್ಲಿ 'ಹದಿನೆಂಟು ಜಾತಿ', 'ನೂರೊಂದು ಕುಲ'[೧೭] ಎಂಬ ಪದಗಳ ವಿಪುಲ ಉಲ್ಲೇಖಗಳನ್ನು ಗಮನಿಸಿದರೆ ಆ ಕಾಲದಲ್ಲಿ ಹದಿನೆಂಟು ಜಾತಿಗಳನ್ನು ಸಾಮಾಜಿಕವಾಗಿ ಒಪ್ಪಿಕೊಂಡಿದ್ದರೆಂದು ಭಾವಿಸಬೇಕಾಗುತ್ತದೆ. ವಿವಿಧ ಉದ್ಯೋಗಗಳನ್ನು ಗಮನಿಸಿ ಸಮಾಜವನ್ನು ಹದಿನೆಂಟು ಜಾತಿಗಳಾಗಿ ವಿಭಜಿಸಿರಬಹುದು.

ಕೆಳಹಂತವೆಂದು ಪರಿಗಣಿತವಾದ ಅನೇಕ ಜಾತಿ ಮತ್ತು ವೃತ್ತಿಗಳು ಒಂದೇ ಎಂಬಂತೆ ಭಾವಿಸಲ್ಪಟ್ಟಿವೆ. ಶಾಸನಗಳಲ್ಲಿ ಕಂಡುಬರುವ ಅಂತಹ ವೃತ್ತಿಗಳು ಹೀಗಿವೆ; ಅಕ್ಕಸಾಲಿ, ಬಡಗಿ, ಕಮ್ಮಾರ,[೧೮] ಕಂದಾಚಾರ, ತಳವಾರ,[೧೯] ಕುಂಬಾರ,[೨೦] ಪಂಚಕಾರುಕ,[೨೧] ಸೇವಕ,[೨೨] ಮಾಲೆಗಾರ[೨೩] ಇನ್ನೂ ಮುಂತಾದ ವೃತ್ತಿಕಾರರ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ.

ವರ್ಣವ್ಯವಸ್ಥೆಯಲ್ಲಿ ಕೊನೆಯವರಾದ ಶೂದ್ರರು ತಮ್ಮಲ್ಲೇ ಹಲವಾರು ಜಾತಿ, ಉಪಜಾತಿಗಳಾಗಿ ವಿಭಜನೆ ಹೊಂದಿದ್ದರು. ಶೂದ್ರರಲ್ಲಿ ಮುಖ್ಯವಾಗಿ ವೃತ್ತಿಯ ಆಧಾರದ ಮೇಲೆ ಪಂಗಡಗಳು ಉಪಪಂಗಡಗಳು ರಚನೆಗೊಂಡಿತ್ತು. ಶೂದ್ರರು ಇತರ ಜಾತಿಗಳಿಗಾಗಿ ದುಡಿಯುವ ಒತ್ತಾಯಕ್ಕೊಳಗಾಗಿದ್ದರು. ಇವರು ಕೃಷಿ, ಕೈಗಾರಿಕೆ, ವ್ಯಾಪಾರ ಇನ್ನಿತರ ವೃತ್ತಿಗಳಲ್ಲೂ ಪರಿಣಿತರಾಗಿದ್ದರು. ಶೂದ್ರರು ಹಳ್ಳಿಗಳ ಮತ್ತು ಪಟ್ಟಣಗಳ ಹೊರವಲಯಗಳಲ್ಲಿ ಮೇಲ್ಜಾತಿಗಳಿಂದ ಪ್ರತ್ಯೇಕವಾಗಿ ವಾಸ ಮಾಡುವ ಒತ್ತಾಯಕ್ಕೊಳಗಾಗಿದ್ದರು. ಇಂತಹ ಶೂದ್ರರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಕ್ಷೀಣಿಸುವಂತೆ ಮಾಡಿ ಜೀತದಾಳುಗಳನ್ನಾಗಿ ಪರಿವರ್ತಿಸಲಾಯಿತು.

ಇದೊಂದು ವ್ಯವಸ್ಥಿತ ತಂತ್ರವಾಗಿದ್ದು ಮಧ್ಯಮಲೆನಾಡಿನಲ್ಲಿ ಈ ಕುರಿತು ಕೆಲವು ಉದಾಹರಣೆಗಳು ಸಿಗುತ್ತವೆ. ಇವರುಗಳು ಭೂಮಿಯ ಒಡೆಯರಾಗಿರಲಿಲ್ಲ ಹಾಗೂ ವೃತ್ತಿಯಾಗಿ ವ್ಯವಸಾಯವನ್ನು ಮಾಡುತ್ತಿರಲಿಲ್ಲ. ಶಾಸನವೊಂದರಲ್ಲಿ 'ಭೂಮಿಗೆ ಸಲ್ಲುವ ಹೊಲೆಯಾಳುಗಳು'[೨೪] ಎಂಬ ಪದದ ಉಲ್ಲೇಖವಿದ್ದನ್ನು ಗಮನಿಸಿದರೆ ಹೊಲಗಳಲ್ಲಿ ಕೆಲಸ ಮಾಡುವ ಜೀತದಾಳುಗಳಾಗಿ, ಸಮಾಜದಲ್ಲಿ ಅಸ್ತಿತ್ವವೇ ಇಲ್ಲದ ರೀತಿಯಲ್ಲಿ ಜೀವನ ನಡೆಸುವ ಒತ್ತಾಯಕ್ಕೆ ಅವರು ಒಳಗಾಗಿದ್ದರು. ಜೀವನಪೂರ್ತಿ ಇನ್ನೊಬ್ಬರ ಒಳಿತಿಗಾಗಿ ದುಡಿಯುವ ಈ ವರ್ಗವನ್ನು ಅಸ್ಪೃಶ್ಯರನ್ನಾಗಿ ಪರಿಗಣಿಸಿದ್ದು ಆಶ್ಚರ್ಯಕರವಾಗಿ ಕಂಡುಬರುತ್ತದೆ.

ಶೂದ್ರ ಸ್ತ್ರೀಯರು ಅಂದಿನ ಸಮಾಜದಲ್ಲಿ ಶೋಷಣೆ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗಿದ್ದರು. ಜೀತದಾಳುಗಳಾಗಿ, ಸೇವಕಿಯರಾಗಿ ಇನ್ನೊಬ್ಬರ ಮನೆ ಮತ್ತು ದೇವಾಲಯಗಳಲ್ಲಿ ಎಂಜಲು ತೆಗೆಯುವ ಕೆಲಸದಲ್ಲಿ ನಿರತರಾಗಿದ್ದರು ಎನ್ನುವುದಕ್ಕೆ ಶಾಸನವೊಂದರಲ್ಲಿ 'ಎಂಜಲು ತೆಗೆಯುವ ಶೂದ್ರತಿ'[೨೫] ಎಂಬ ವಿಷಯವಿದ್ದು ಇವರುಗಳು ಸಾಮಾಜಿಕ ಕಟ್ಟಳೆಗೆ ಒಳಗಾಗಿದ್ದರು ಎನ್ನುವ ಅಂಶ ಮನವರಿಕೆಯಾಗುವುದು. ಇಂದಿಗೂ ಕುಕ್ಕೆ ಸುಬ್ರಮಣ್ಯ ದೇವಸ್ಥಾನದಲ್ಲಿ ನಡೆಯುವ ಮಡೆಸ್ನಾನ ಆಚರಣೆಯಲ್ಲಿ ಬ್ರಾಹ್ಮಣರು ಉಂಡುಹೋದ ಎಂಜಲು ಎಲೆಯ ಮೇಲೆ ಕೆಳವರ್ಗದವರು ಉರುಳು ಸೇವೆ ಮಾಡಿ ಹರಕೆ ತೀರಿಸಿಕೊಳ್ಳುವುದನ್ನು ಪರಿಗಣಿಸಬಹುದಾಗಿದೆ.

೪.೨. ದೇವಾಲಯ ಮತ್ತು ಕೆರೆಗಳ ನಿರ್ಮಾಣ

ದೇವಾಲಯ ಮತ್ತು ಕೆರೆಗಳ ನಿರ್ಮಾಣ ಆ ಕಾಲದ ಪ್ರಮುಖ ಪುಣ್ಯಕಾರ್ಯವೆಂದು ಪರಿಗಣಿತವಾಗಿದ್ದಿತು. ಎಲ್ಲಾ ಪುಣ್ಯಕಾರ್ಯಗಳಿಗಿಂತಲೂ ಈಶ್ವರ ಪ್ರತಿಷ್ಠೆ ಮೊತ್ತ ಮೊದಲನೆಯದೆಂದು 'ಈಶ್ವರ ಪ್ರತಿಷ್ಠೆ ಮಾಡಿದವನೀಶ್ವರನೆಯಕ್ಕು' ಎಂದು ನಂಬಿಹಬ್ಬೆಯ ನಾಯಕನು ಹಟ್ಟೀಶ್ವರ ದೇವಾಲಯವನ್ನು 'ಕಲ್ವೆಸನ'ದಲ್ಲಿ ನಿರ್ಮಿಸಿದುದಾಗಿ ಒಂದು ಶಾಸನ ತಿಳಿಸುತ್ತದೆ.[೨೬] ದೇವಸ್ಥಾನಗಳು ಭಕ್ತಿ ಮತ್ತು ನಿಷ್ಠೆಯ ಪ್ರತೀಕಗಳು. ಮಧ್ಯಮಲೆನಾಡಿನ ಶಾಸನಗಳಲ್ಲಿ ಬಹಳಷ್ಟು ದಾನಶಾಸನಗಳಾಗಿದ್ದರಿಂದ ದೇವಾಲಯಗಳ ಪೂಜಾಕಾರ್ಯಗಳಿಗೆ, ದುರಸ್ತಿ ಕಾರ್ಯಗಳ ನಿರ್ವಹಣೆಯ ಖರ್ಚು ವೆಚ್ಚಗಳಿಗಾಗಿ ಸಾಕಷ್ಟು ದಾನವನ್ನು ಮಾಡುತ್ತಿದ್ದರು. ಕೆಲವೊಂದು ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯಿಂದ ದೇವಾಲಯಗಳು ನಿರ್ಮಾಣವಾದರೂ ಮುಂದೆ ಆ ದೇವಾಲಯದ ಸಂರಕ್ಷಣೆ ಇಡೀ ಊರಿನ ಜನತೆಯ ಜವಾಬ್ದಾರಿಯಾಗಿದ್ದಿತು.

ದೇವಾಲಯಗಳನ್ನು ಸಾಮಾನ್ಯವಾಗಿ ರಾಜರು, ಸಾಮಂತರು, ರಾಣಿಯರು, ದಂಡನಾಯಕರು, ಅಧಿಕಾರಿಗಳು, ಸನ್ಯಾಸಿಗಳು ನಿರ್ಮಾಣ ಮಾಡುತ್ತಿದ್ದರು. ಹಾಗೆಯೇ ಜನಸಾಮಾನ್ಯರೂ ದೇವಾಲಯಗಳನ್ನು ನಿರ್ಮಿಸಿದ ಉದಾಹರಣೆಗಳುಂಟು. ಅಂಥ ದೇವಾಲಯಗಳು ಮಧ್ಯಮಲೆನಾಡಿನ ಕೆಲವೊಂದು ಪ್ರದೇಶಗಳಲ್ಲಿ ಕಂಡುಬಂದಿದ್ದು ಇವುಗಳು ಈಗಲೂ ಪೂಜಿ ಸಲ್ಪಡುತ್ತಿದ್ದು ತಮ್ಮ ಹಿಂದಿನ ಭವ್ಯತೆಯನ್ನು, ಪರಿಶುದ್ಧತೆಯನ್ನು ಕಾಪಾಡಿಕೊಂಡು ಬಂದಿವೆ.

ಈ ಭಾಗದ ಶಾಸನಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದಾಗ ಕಂಡುಬರುವ ಸತ್ಯಸಂಗತಿ ಎಂದರೆ ಜನಸಾಮಾನ್ಯರು ದೇವಾಲಯಗಳ ನಿರ್ಮಾಣಕ್ಕೆ ಪ್ರಾಧಾನ್ಯತೆ ಕೊಡುವುದಕ್ಕೆ ಬದಲಾಗಿ ಯಥೇಚ್ಛವಾಗಿ ದಾನ - ಧರ್ಮಗಳನ್ನು ನೀಡಿರುವುದು. ಅನೇಕ ಗ್ರಾಮಗಳನ್ನು ಹಾಗೂ ಹಣವನ್ನು ದೇವಾಲಯದ ನಿತ್ಯಪೂಜೆಗೆ ಬಿಟ್ಟಿರುವುದಕ್ಕೆ ಶಾಸನಗಳಲ್ಲಿ ವಿಪುಲವಾದ ಮಾಹಿತಿಯಿದೆ. ಸಮಾಜದ ಎಲ್ಲಾ ವರ್ಗದವರು ದೇವಾಲಯ ನಿರ್ಮಾಣದಲ್ಲಿ ಆಸಕ್ತಿ ತಳೆದು ಕಾರ್ಯಪ್ರವೃತ್ತರಾಗಿರುವುದು ಶಾಸನಗಳಲ್ಲಿ ಎದ್ದುಕಾಣುವ ಅಂಶವಾಗಿದೆ.

ಶೃಂಗೇರಿಯ ಒಂದು ಶಾಸನವು ೫೦ ಮಂದಿ ಶಿವಳ್ಳಿ ಬ್ರಾಹ್ಮಣರು ಆನೆಗುಂದದಲ್ಲಿ ಗೋಪಾಲಕೃಷ್ಣ ದೇವರನ್ನು ಸಚ್ಚಿದಾನಂದ ಭಾರತಿಯವರ ಮೂಲಕ ಪ್ರತಿಷ್ಠಾಪಿಸಿದ ವಿಷಯವನ್ನು ತಿಳಿಸುತ್ತದೆ.[೨೭] ಶೃಂಗೇರಿ ಮಠದ ಪೀಠಾಧಿಪತಿಗಳಿಂದ ಅಪ್ಪಣೆ ಪಡೆದು ಅವಧಾನಿ ರಾಜಗೋಪಾಲ ಭಟ್ಟನು ಮಲ್ಲಿಕಾರ್ಜುನ ದೇವಾಲಯದ ಉತ್ತರ ಭಾಗದಲ್ಲಿ ದೇವಾಲಯದ ನಿರ್ಮಾಣ ಹಾಗೂ ಅದರಲ್ಲಿ ನೀಲಕಂಠ ಮತ್ತು ಪಾರ್ವತಿ ದೇವಿಯರ ಪ್ರತಿಷ್ಠೆಯನ್ನು ಮಾಡಿದ ಬಗ್ಗೆ ಶಾಸನದಲ್ಲಿ ವಿವರಣೆ ಇದೆ.[೨೮] ಹಲುಮಿಡಿಯ ದೇವರಸೆಟ್ಟಿಯು ಶೃಂಗೇರಿಯ ಬಸ್ತಿಯಲ್ಲಿ ೧೮೦ ಹಲ ತೂಕದ ಅನಂತನಾಥನ ಪ್ರತಿಮೆಯನ್ನು ಪ್ರತಿಷ್ಠಾಪಿಸಿದರೆ[೨೯] ಇನ್ನೊಬ್ಬ ವ್ಯಕ್ತಿ ಬೊಮ್ಮಣ್ಣ ಸೆಟ್ಟಿಯು ೧೯ ಬೆಸಿಗೆ ತೂಕದ ಚಂದ್ರನಾಥನ ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಪುಣ್ಯವನ್ನು ಸಂಪಾದಿಸಿಕೊಂಡನು.[೩೦]

ಶ್ರೀಸಾಮಾನ್ಯನಾದ ಹೆಚ್ಚೆತಿಮ್ಮಯ್ಯನು ಬಗ್ಗುಂಜಿ ಮಾಗಣಿಯ ಸೀತಾ ನದಿ ತೀರದ ಹೆದ್ಸೆ ಗ್ರಾಮದಲ್ಲಿ ಶಿಲಾಮಯ ದೇವಾಲಯವನ್ನು ನಿರ್ಮಿಸಿ ಅದರಲ್ಲಿ ಉಮಾಮಹೇಶ್ವರ, ಗೋಪಾಲಕೃಷ್ಣ, ದುರ್ಗಾದೇವಿ, ಮಹಾಗಣಪತಿ, ಸೂರ್ಯನಾರಾಯಣಸ್ವಾಮಿ ಎಂಬ ೫ ದೇವರುಗಳನ್ನು ಪ್ರತಿಷ್ಠಾಪನೆ ಮಾಡಿಸಿದ. ಈತನ ಕೋರಿಕೆಯ ಮೇರೆಗೆ ಮೈಸೂರು ಕೃಷ್ಣರಾಜ ಒಡೆಯರು ಗಂಜೂರಿನವನಾದ ಅಮಲ್ದಾರ ಮನಘೂರು ಫಯಾಜ್ ಎಂಬಾತನನ್ನು ಕಳುಹಿಸಿಕೊಟ್ಟು ಸೀತಾ ನದಿ ತೀರದ ಕೆಲವು ಭೂ ಪ್ರದೇಶಗಳನ್ನು ದೇವರುಗಳ ನೈವೇದ್ಯ, ದೀಪಗಳ ಹಾಗೂ ಬ್ರಾಹ್ಮಣರ ಆಹಾರಗಳಿಗಾಗಿ ದಾನವೀಯಲಾಯಿತು[೩೧] ಎಂದು ತಿಳಿಸುತ್ತದೆ. ಕೊಪ್ಪದ ಅಪ್ಪಾಜಿಸೇನಭೋವನು ತುಂಗಾ ತೀರದ ನಾರ್ವೆ ಎಂಬ ಊರಿನಲ್ಲಿ ಗೋಪಾಲಕೃಷ್ಣ ದೇವರನ್ನು ಪ್ರತಿಷ್ಠಾಪನೆ ಮಾಡಿಸಿದನು.[೩೨]

ಮೇಳಿಗೆಯ ಶಾಸನದಲ್ಲಿ ಬೊಮ್ಮಣ್ಣಶೆಟ್ಟಿಯು ಅನಂತನಾಥ ಬಸದಿಯನ್ನು ಶಿಲಾಮಯವಾಗಿ ನಿರ್ಮಿಸಿ, ದೇವರಿಗೆ ಭೂಮಿದಾನ ಮತ್ತು ಧನದಾನ ಮಾಡಿದ ವಿಷಯ ಅದು ದಾಖಲಿಸುತ್ತದೆ.[೩೩] ಕೃಷ್ಣದೇವ ಎಂಬುವನು ನರಸಿಂಹಪುರದ ಬಳಗೋಡಿನಲ್ಲಿ ಲಕ್ಷ್ಮೀನಾರಾಯಣ ದೇಗುಲದ ನಿರ್ಮಾಣ ಮತ್ತು ದೇವ ಪ್ರತಿಷ್ಠಾಪನೆ ಮಾಡಿದ ವಿಷಯವನ್ನು ಶಾಸನವೊಂದು ದಾಖಲಿಸುತ್ತದೆ.[೩೪] ದೇಮಾಯಿಯು ಕ್ರಿ.ಶ. ೧೫೭೩ರಲ್ಲಿ ಆಗುಂಬೆಯ ಗೋಪಾಲಕೃಷ್ಣ ದೇವಾಲಯದ ಪ್ರವೇಶ ದ್ವಾರವನ್ನು ಬಹುಶಃ ಮಾಡಿಸಿದಳು. ಆಕೆ ಹೆದ್ಸೆ ಪ್ರದೇಶದ ನಚ್ಚಾ ದೇವಯಮ್ಮನ ಮೊಮ್ಮಗಳೆಂದು

ಆಗುಂಬೆ ಶಾಸನದಲ್ಲಿ ಮಾಹಿತಿಯಿದೆ.[೩೫] ಜಂಬಿಟ್ಟಿಗೆ ನೀಲಕಂಠೇಶ್ವರ ದೇವಾಲಯವನ್ನು ಆರಗದ ಶಂಕರಪುರದ ದೇವಪ್ಪ ಮತ್ತು ಆತನ ಮಕ್ಕಳಾದ ಮಲ್ಲಿಕಾರ್ಜುನ ಹಾಗೂ ಶಂಕರನಾರಾಯಣ ಕಟ್ಟಿಸಿದರು. ಕಟ್ಟಿದಾತ ಕಾಳಣ್ಣ ಸಹಾಯ ಮಾಡಿದವನು ಸೂರಳಿ ತಿಮ್ಮಣ್ಣ ಎಂದಿದೆ.[೩೬]

ಹೀಗೆ ದೇವಸ್ಥಾನಗಳ ನಿರ್ಮಾಣದಲ್ಲಿ ಜನಸಾಮಾನ್ಯರೂ ಭಾಗಿಯಾಗಿದ್ದರು. ಆದರೆ ಎಲ್ಲೂ ತಮ್ಮ ಹೆಸರನ್ನು ಪ್ರತಿಷ್ಠೆಯ ದೃಷ್ಟಿಯಿಂದ ಹೇಳಿಕೊಂಡಿಲ್ಲ. ದೇವಾಲಯಗಳನ್ನು ಸಾರ್ವಜನಿಕ ಉದ್ದೇಶಗಳಿಗೆ ನಿರ್ಮಾಣ ಮಾಡಿದರೇ ಹೊರತು ವೈಯಕ್ತಿಕವಾಗಿ ಅಲ್ಲ ಎನ್ನುವ ಅಂಶ ನಮಗೆ ಮನವರಿಕೆಯಾಗುತ್ತಿದೆ.

ಜೀರ್ಣೋದ್ಧಾರ

ದೇವಾಲಯಗಳ ಸಂರಕ್ಷಣೆಗೆ, ನಿರಂತರ ಪೂಜಾಕಾರ್ಯಗಳಿಗೆ ದಾನ-ಧರ್ಮಗಳು ನಡೆಯುತ್ತಿದ್ದವು ಎಂಬುದನ್ನು ಇಲ್ಲಿನ ನೂರಾರು ಶಾಸನಗಳು ನಿರೂಪಿಸುತ್ತವೆ. ಯಾವುದಾದರೂ ಕಾರಣಗಳಿಂದ ದೇವಾಲಯಗಳು ಹಾಳುಬಿದ್ದರೆ ಅಂತಹ ಸಮಯದಲ್ಲಿ ದಾನಿಗಳು ಮುಂದೆ ಬಂದು ಜೀರ್ಣೋದ್ಧಾರ ಮಾಡಿಸಿ ಅನೇಕ ದಾನಗಳನ್ನು ನೀಡುತ್ತಿದ್ದರು. ದೇವಾಲಯಗಳನ್ನು ಕಟ್ಟಿಸುವುದು ಎಷ್ಟು ಪುಣ್ಯ ಕಾರ್ಯವೆಂದು ಭಾವಿಸಲಾಗುತ್ತಿದ್ದಿತ್ತೋ ಹಾಗೆ ಅವುಗಳ ಜೀರ್ಣೋದ್ಧಾರವು ಪುಣ್ಯಕಾರ್ಯವೆಂದು ಭಾವಿಸಲಾಗುತ್ತಿತ್ತು. ಅಂತಹ ಜೀರ್ಣೋದ್ಧಾರಕ್ಕಾಗಿ ಮಾಡಿದ ದಾನವನ್ನು ಹೇಳುವ ಕೆಲವು ಶಾಸನಗಳು ದೊರೆಯುತ್ತವೆ. ಆಗುಂಬೆಯ ಗೋಪಾಲಕೃಷ್ಣ ದೇವಾಲಯದ ಮುಖಮಂಟಪವನ್ನು ಕೋಟಿಯಣ್ಣ ಹೆಗ್ಗಡೆಯ ಮೊಮ್ಮಗಳು ದುಗ್ಗಮ್ಮ ದುರಸ್ತಿ ಮಾಡಿಸಿದಳು ಹಾಗೂ ಬೊಮ್ಮರಸ ಹೆಗ್ಗಡೆಯ ಸೇವೆಯನ್ನು ಆಗುಂಬೆ ಶಾಸನವೊಂದರಲ್ಲಿ ಉಲ್ಲೇಖಿಸಲಾಗಿದೆ.[೩೭] ಬಿಳಿಗಿರಿಯ ಗಂಗರಸಯ್ಯನ ಮಗನಾದ ಪುಟ್ಟಪ್ಪಯ್ಯನು ಶೃಂಗೇರಿಯ ಮಲ್ಲಿಕಾರ್ಜುನ ದೇವರ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿ ಆ ದೇವತಾ ಸೇವೆಗೆ ವೃತ್ತಿವಂತರಿಂದ ಒಂದು ಸಾರಿಗೆ ೪೫ ವರಹಗಳ ಮೌಲ್ಯದ ಉತ್ಪಾದನೆ ನೀಡುವಂತಹ ಭೂಮಿಯನ್ನು ಕೊಂಡುಕೊಂಡು ಮಠದ ಪೂಜೆ ಮತ್ತು ಇತರ ಸೇವೆಗಳಿಗಾಗಿ ದಾನವನ್ನು ನೀಡಿದನು ಎಂಬುದಾಗಿ ಶೃಂಗೇರಿ ಶಾಸನ ತಿಳಿಸುತ್ತದೆ.[೩೮]

ದೇವಾಲಯಗಳು ಆಸ್ತಿಕ ಜನರ ಆರಾಧನಾ ಕೇಂದ್ರಗಳು. ದೇವಾಲಯಗಳು ಮತ್ತು ದಾನ ಸಂರಕ್ಷಣೆ ನಿರಂತರವಾಗಿ ಮುಂದುವರೆದುಕೊಂಡು ಹೋಗಬೇಕೆನ್ನುವುದು ಜನರ ಆಶಯವಾಗಿದ್ದಿತು. ಇಂತಹ ಪುಣ್ಯ ಸ್ಥಳಗಳಲ್ಲಿ ನಂದಾದೀಪ ನಿರಂತರವಾಗಿ ಬೆಳಗುತ್ತಿರಬೇಕೆಂದು ದಾನಿಗಳ ಆಕಾಂಕ್ಷೆಯಾಗಿದ್ದಿತು. ದೀಪಕ್ಕೆ ಬೇಕಾದ ಎಣ್ಣೆಗೆ ಶಾಶ್ವತ ವ್ಯವಸ್ಥೆಯನ್ನೂ ಮಾಡಿರುತ್ತಿದ್ದರು.

ಕೆರೆಗಳ ನಿರ್ಮಾಣ

ಕೆರೆಗಳು ಭೂಮಿಯ ಮೇಲಿನ ಸಕಲ ಜೀವರಾಶಿಗಳಿಗೂ ಆಶ್ರಯ ತಾಣ. ಇಂತಹ ಕೆರೆಗಳ ನಿರ್ಮಾಣ ಪುಣ್ಯಕಾರ್ಯವೆಂದು ಅಂದಿನ ಕಾಲದಲ್ಲಿ ಬಗೆದಿದ್ದರು. ಇದಕ್ಕಾಗಿಯೇ

'ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಗಾರಮಂ ಮಾಡಿಸು' ಎಂದು ತಾಯಿ ಹಾಲು ನೀಯುವಾಗ ಕಂದನಿಗೆ ಕಿವಿಯಲ್ಲಿ ಹೇಳುವ ಈ ಪಿಸುಮಾತನ್ನು ಗಮನಿಸಿದಾಗ ಕೆರೆ ಬಾವಿಯ ನಿರ್ಮಾಣಕ್ಕೆ ಕೊಟ್ಟ ಪ್ರಾಶಸ್ತ್ಯ ಎಂತಹುದು ಎನ್ನುವುದು ಅರ್ಥವಾಗುತ್ತದೆ. ಆದರೆ ಮಧ್ಯಮಲೆನಾಡಿನ ಶಾಸನಗಳನ್ನು ಅವಲೋಕಿಸಿದಾಗ ಕೆರೆಗಳ ನಿರ್ಮಾಣದಂತಹ ಕಾರ್ಯ ಶಾಸನಗಳಲ್ಲಿ ಉಲ್ಲೇಖವಾಗಿರುವುದು ಬಹು ವಿರಳ. ಏಕೆಂದರೆ ಮಲೆನಾಡಿನಲ್ಲಿ ಪ್ರಕೃತಿಯೇ ನೀರಿನ ಆಸರೆಯನ್ನು ಒದಗಿಸಿರುವುದರಿಂದ ಕೆರೆಗಳ ನಿರ್ಮಾಣದ ಅಗತ್ಯವಿರಲಿಲ್ಲ ಎನ್ನಬಹುದು.

ಕೆರೆ ಕಟ್ಟಿಸಿದ ಪ್ರತಿಯೊಬ್ಬರ ಬಗ್ಗೆಯೂ ಶಾಸನಗಳಿರುವುದಿಲ್ಲ. ಕೆರೆ ಕಟ್ಟಿದಾತ ಶಾಸನದಲ್ಲಿ ದಾಖಲಿಸುವಷ್ಟು ಗಣ್ಯನಾಗಿದ್ದರೆ, ಪ್ರಮುಖನಾಗಿದ್ದರೆ ಅಥವಾ ವರ್ಚಸ್ಸನ್ನು ಹೊಂದಿದ್ದರೆ ಮಾತ್ರ ಶಾಸನಿಸಿರುವುದು ಕಾಣಬಹುದು. ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದ ಜನರು ತಮ್ಮ ಹೆಸರನ್ನೇ ದೇವಾಲಯಗಳಿಗೆ ಇಡುವುದು ಸಾಮಾನ್ಯವಾಗಿತ್ತು. ಅದೇ ರೀತಿ ಕೆರೆಗಳಿಗೂ ತಮ್ಮ ಹೆಸರನ್ನೇ ಇಟ್ಟ ಉದಾಹರಣೆಗಳು ಕೆಲವು ಶಾಸನಗಳಲ್ಲಿ ಕಂಡುಬರುತ್ತದೆ. ತೀರ್ಥಹಳ್ಳಿಯ ಶಾಸನದಲ್ಲಿ ಬುಕ್ಕರಾಯನ ಪುತ್ರ ವಿರೂಪಾಕ್ಷನು ಆರಗದಲ್ಲಿ ವಿರುಪ ಸಮುದ್ರಕೆರೆಯನ್ನು ಕಟ್ಟಿಸಿದನು ಎಂಬ ಉಲ್ಲೇಖವಿದೆ.[೩೯] ಕೌದವಳ್ಳಿ ಶಾಸನದಲ್ಲಿ 'ಅಗಸೆಟ್ಟಿ' ಎಂಬುವವನು 'ಅಗಸೆಟ್ಟಿ ಕೆರೆ' ಎಂಬ ಕೆರೆಯನ್ನು ಕಟ್ಟಿಸಿದ ಪ್ರಸ್ತಾಪವಿದೆ.[೪೦] ನಗರ ಶಾಸನವೊಂದರಲ್ಲಿ 'ಪಟ್ಟಣಸ್ವಾಮಿ ನೊಕ್ಕಯ್ಯ ಶೆಟ್ಟಿ'ಯು ಕೆರೆ ಕಟ್ಟಿಸಿ ನೂರು ಗದ್ಯಾಣಗಳಿಂದ ಉಗುರೆ ತೊರೆಯನ್ನು ಕೆರೆಗೆ ಹರಿಯುವಂತೆ ಮಾಡಿದನೆಂದು ಹೇಳುತ್ತದೆ.[೪೧]

ಕೆರೆಗಳ ನಿರ್ವಹಣೆ ಮತ್ತು ಉತ್ತಮ ಭವಿಷ್ಯಕ್ಕಾಗಿ ಹಲವಾರು ವ್ಯವಸ್ಥೆಗಳನ್ನು ನಿರ್ಮಿಸಲಾಗಿತ್ತು ಎಂಬುದು ಸಾಮಾನ್ಯ ವಿಷಯ. ತೀರ್ಥಹಳ್ಳಿಯ ಶಾಸನವೊಂದರಲ್ಲಿ 'ಕೆರೆಯಲ್ಲಿ ಹೂಳು ತುಂಬಿ ನೀರು ಹರಿಯದೇ ಅನುಪಯುಕ್ತವಾದಲ್ಲಿ ಅಚ್ಚುಕಟ್ಟಿಗೆ ಸೇರಿದ ಜಮೀನಿನ ತೆರಿಗೆಯಲ್ಲಿ ವಿನಾಯಿತಿ ನೀಡಲಾಗುತ್ತಿತ್ತು'[೪೨] ಎಂದಿದೆ.

ನೆರೆ ಹಾವಳಿ, ಅತಿವೃಷ್ಟಿ, ಅನಾವೃಷ್ಟಿ ಸಂದರ್ಭಗಳಲ್ಲಿ ಪ್ರಕೃತಿ ವಿಕೋಪದಿಂದ ನಷ್ಟವಾಗುವ ಸನ್ನಿವೇಶದಲ್ಲಿ ಕಂದಾಯವನ್ನು ಪೂರ್ಣ ಮನ್ನಾ ಮಾಡಲಾಗುತ್ತಿತ್ತು, ಅಥವಾ ಸ್ವಲ್ಪ ಭಾಗ ಕೊಡುವ ವ್ಯವಸ್ಥೆ ಇತ್ತು. ಬಿರಾಡದ ರೂಪದಲ್ಲಿ ಕ್ರಿ.ಶ. ೧೬೪೦ರಲ್ಲಿ ಸಹಾಯ ನೀಡಿದ ಬಗ್ಗೆ ಉಲ್ಲೇಖವಿದೆ.[೪೩]

ಕೆರೆಗಳಿಂದ, ನದಿಗಳಿಂದ ಕಾಲುವೆಗಳನ್ನು ತೋಡಿ ನೀರನ್ನು ಹೊಲಗದ್ದೆ, ತೋಟಗಳಿಗೆ ಹಾಯಿಸಿಕೊಳ್ಳುತ್ತಿದ್ದರು. ಆರಗದ ಶಾಸನಗಳಲ್ಲಿ 'ಕಾಡಾರಂಭ' ಮತ್ತು 'ನಾಡಾರಂಭ' ಎಂಬ ಪದವನ್ನು ಅಭ್ಯಸಿಸಿದಾಗ ನದಿ, ಕೆರೆ ಹಾಗೂ ಮಳೆಯ ನೀರನ್ನು ಆಶ್ರಯಿಸಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ.

೪.೩. ಹೋರಾಟ ಮಾಡಿದ ವೀರರು

ಕರ್ನಾಟಕದ ಕೆಲವು ವೀರಗಲ್ಲುಗಳ ಶ್ಲೋಕದಲ್ಲಿರುವಂತೆ ವೀರನಾದವನು ಯುದ್ಧದಲ್ಲಿ ಜಯಿಸಿದರೆ ಲಕ್ಷ್ಮೀ. ಸತ್ತರೆ ಸ್ವರ್ಗ ಪ್ರಾಪ್ತಿಯಾಗುವುದು ಎಂಬ ನಂಬಿಕೆಯಿಂದಾಗಿ ವೀರರು ತಮ್ಮ ವೀರತನವನ್ನು ಯುದ್ಧರಂಗದಲ್ಲಿ ಪ್ರದರ್ಶಿಸುತ್ತಿದ್ದರು. ಇಂತಹ ವೀರತನಕ್ಕೆ ಸಮಾಜದಲ್ಲಿ ಅಂದು ಗೌರವ ಮನ್ನಣೆಗಳು ಪ್ರಾಪ್ತವಾಗುತ್ತಿತ್ತು. ವೀರರಿಗಾಗಿ ಹಾಕಿಸುತ್ತಿದ್ದ ಹಲವಾರು ವೀರಗಲ್ಲುಗಳು ಹಾಗೂ ಶಾಸನೋಕ್ತ ವೀರಗಲ್ಲುಗಳು ಮಧ್ಯಮಲೆನಾಡಿನ ಭಾಗಗಳಲ್ಲಿ ಯಥೇಚ್ಛವಾಗಿ ಲಭ್ಯವಾಗಿದ್ದು ವೀರರ ಕಲಿತನಕ್ಕೆ ಹೆಸರುವಾಸಿಯಾಗಿದೆ. ಇಲ್ಲಿ ಸಿಡಿತಲೆ, ಆತ್ಮಬಲಿ, ತುರುಗೋಳ್ ಪೆಣ್ಬುಯಲ್, ಹುಲಿಬೇಟೆ ವೀರಗಲ್ಲುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಿದ್ದು ಅವು ವೀರರ ಹೋರಾಟದ ಸಾಹಸವನ್ನು ವರ್ಣಿಸುತ್ತವೆ. ತಮ್ಮ ರಾಜನಿಗೋಸ್ಕರ, ಊರಿಗೋಸ್ಕರ, ಸಮಾಜದ ಉಳಿವಿಗೋಸ್ಕರ ಹೋರಾಡಿದ ವೀರರ ಕಲಿತನಗಳು ಶಾಸನಗಳಲ್ಲಿ ಪ್ರತಿಬಿಂಬಿತವಾಗಿವೆ.

ಕ್ರಿ.ಶ. ೧೨೫೪ರಲ್ಲಿ ಸಿಂಘಳ ದೇವನ ದಳವಾಯಿಯಾದ ಸಾರಂಗದೇವನು ಮಹಾ ಮಾಂಡಳಿಕ ಹರಿಚವೆಗ್ಗಡೆ ಮತ್ತಿತರ ಮೇಲೆ ದಾಳಿ ಮಾಡಿ ಕೋದೂರನ್ನು ಸುಟ್ಟು ಹಾಕಿದಾಗ ಗಂಡುಗಲಿ ರಾಜಿಕನ ಜಕ್ಕನೆಂಬ ವೀರ ಆತನನ್ನು ಸೋಲಿಸಿದನು; ಆದರೆ ಯುದ್ಧದಲ್ಲಿ ಮಡಿದನು.[೪೪] ಹಲ್ಲುಸಾಲೆಯ ಒಂದನೇ ವೀರಗಲ್ಲಿನಲ್ಲಿ ಸಗಡವಳ್ಳಿಯನ್ನು ಆಳುತ್ತಿದ್ದ ಸಿರಿಯಮ್ಮ ಹೆಗ್ಗಡೆಯರು ಅಣ್ಣಮ್ಮ ಹೆಗ್ಗಡೆಯವರ ಮೇಲೆ ದಾಳಿ ಮಾಡಿ ಅವನನ್ನು ಸೋಲಿಸಿ ಮುತ್ತಿಗೆ ಹಾಕಿದ್ದ ಹೆದ್ದೂರು ನಾಡಿನಿಂದ ಶತ್ರುಗಳನ್ನು ಹೊಡೆದೋಡಿಸಿದನು.[೪೫] ಇಲ್ಲಿನ ಎರಡನೇ ವೀರಗಲ್ಲಿನಲ್ಲಿ ಮರುವರ್ಷವೇ ಸಿರಿಯಮ್ಮ ವೆಗ್ಗಡೆ ಮತ್ತು ಅಣ್ಣವೆಗ್ಗಡೆಯ ನಡುವೆ ಯುದ್ಧ ನಡೆದು ಹೆದ್ದೂರು ನಾಡನ್ನು ಶತ್ರುಗಳು ಕೊಳ್ಳೆಹೊಡೆದಾಗ ಸಿರಿಯಮ್ಮ ವೆಗ್ಗಡೆ ಹಾಗೂ ಆತನ ಮಾವ ಹೊಯ್ಸಯ್ಯ ಮರಣ ಹೊಂದಿದರು ಎಂಬುದಾಗಿ ವೀರಗಲ್ಲಿನ ಶಾಸನವಾಗಿದೆ.[೪೬]

ತೀರ್ಥಹಳ್ಳಿಯ ಒಂದು ಶಾಸನದಲ್ಲಿ ಸಿರಿಗಿರಿನಾಥ ಒಡೆಯರು ಆರಗ ರಾಜ್ಯವನ್ನು ಆಳುತ್ತಿರುವಾಗ ಸಾಂತಳಿಕೆ ನಾಡಿನ ಕೊಳವಳಿಯಲ್ಲಿ ನಡೆದ ಯುದ್ಧದಲ್ಲಿ ಬೊಮ್ಮರಸ ಹೆಗಡೆಯವರ ಮಗ ವೀರಪುಟ್ಟ ಹೆಗಡೆಯು ಪ್ರದರ್ಶಿಸಿದ ಪರಾಕ್ರಮವು ಕುಮಾರ ರಾಮನಾಥನ ವೀರತನಕ್ಕೆ ಸರಿಸಮಾನವಾದುದು. ಆತ ರಣರಂಗದಲ್ಲಿ ಹೋರಾಡಿ 'ಅಂಬುಗೂಡಾಗಿ' ಸ್ವರ್ಗವನ್ನು ಸೂರೆಗೊಂಡನು[೪೭] ಎಂದಿದೆ. ಇನ್ನು ಕೆಲವು ವೀರರು ಯುದ್ಧದಲ್ಲಿ ಹೋರಾಡಿ ಮಡಿದರು. ಅವರುಗಳೆಂದರೆ ಅರ್ಜುನ,[೪೮] ಲೋಕ ಭೀಮನೆನಿಸಿದ ಬೀರದೇವನನ್ನು ಅಪ್ಸರೆಯರು ಹೂವಿನ ವಿಮಾನದಲ್ಲಿ ಕುಳ್ಳಿರಿಸಿ ಸ್ವರ್ಗಕ್ಕೆ ಕೊಂಡೊಯ್ದರು.[೪೯]

ಹುಲಿಸರದ ಕಾಡಿನಲ್ಲಿ ಇತ್ತೀಚೆಗೆ ವೀರಗಲ್ಲನ್ನು ಅನ್ವೇಷಣೆ ಮಾಡಿದ್ದು ಶಿಲ್ಪ ಮತ್ತು ಶಾಸನ ಪಾಠ ಮನೋಹರವಾಗಿವೆ. ೬ ಅಂತಸ್ತುಗಳನ್ನು ಹೊಂದಿದ್ದು ೮ ಅಡಿ ಎತ್ತರವಿದ್ದು ರಣರಂಗಕ್ಕೆ ವೀರ ಬರುತ್ತಿರುವ ದೃಶ್ಯವಿದೆ. ಹೊಯ್ಸಳರ ಸಾಮಂತರಾಗಿ ರಾಜ್ಯಪಾಲನೆ ಮಾಡುತ್ತಿದ್ದ ಸಾಂತರರ ಬಿರುದುಗಳು ಈ ವೀರಗಲ್ಲಿನಲ್ಲಿವೆ. ಹೊಯ್ಸಳರ ಸಾಮಂತ ದೊರೆ

ಸೋಡಾಳದೇವ ಹಾಗೂ ಎಬರನಾಯಕನ ಜೊತೆ ನಡೆದ ಯುದ್ಧದಲ್ಲಿ ಬೊಮ್ಮೆಯ ಎಂಬ ವೀರ ಮರಣ ಹೊಂದಿದ ಎಂದಿದೆ.

ಹೆದ್ದೂರಿನ ಮಲ್ಲಿಕಾರ್ಜುನ ದೇವಾಲಯದ ಮುಂಭಾಗದಲ್ಲಿ ಲಿಪಿಸಹಿತ ಎರಡು ವೀರಗಲ್ಲನ್ನು ಅಧ್ಯಯನ ಮಾಡಲಾಗಿದ್ದು ೪ ಹಂತಗಳನ್ನು ಹೊಂದಿದ್ದು ೫ ಅಡಿ ಎತ್ತರವಿದ್ದು ಬರವಣಿಗೆಯು ತ್ರುಟಿತಗೊಂಡಿದೆ. ಒಂದನೇ ವೀರಗಲ್ಲಿನಲ್ಲಿ ಪ್ರಮುಖ ವೀರನಾದ ಲಿಂಗಣ ಹಾಗೂ ಇನ್ನೊಬ್ಬ ವ್ಯಕ್ತಿ ಮರಣ ಹೊಂದಿದ ದಾಖಲೆಯಿದೆ. ಎರಡನೇ ವೀರಗಲ್ಲಿನಲ್ಲಿ ಮರಣ ಹೊಂದಿದ ತೈಲಪಗೌಡನ ಬಗ್ಗೆ ಮಾಹಿತಿಯಿದೆ.

ಮುನ್ನೂರಿನ ತುರುಗೋಳ್ ಪೆಣ್ಬುಯಲ್ ವೀರಗಲ್ಲನ್ನು ಹೊಸದಾಗಿ ಅನ್ವೇಷಣೆ ಮಾಡಿದ್ದು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಇದು ೫ ಅಡಿ ಎತ್ತರವಿದ್ದು ನಾಲ್ಕು ಹಂತಗಳಿಂದ ಕೂಡಿದೆ. ಶಾಸನ ಲಿಪಿಯು ತ್ರುಟಿತವಾಗಿದ್ದು ಪಾಠ ಸ್ಪಷ್ಟವಾಗುತ್ತಿಲ್ಲ. ಈವೂರ ತುರುವು ತುಳಿದು ಬಾಳಗಮ್ಮ ಎಂಬುವನು ಮಡಿದ ಎಂದಿದೆ. ಆದರೆ ಹಸುವು ತುಳಿದು ಸತ್ತನೆಂಬುದು ಶಾಸನೋಕ್ತ ಉಲ್ಲೇಖವು ಮೊದಲನೆಯದಾಗಿದೆ.

ಯುದ್ಧದಲ್ಲಿ ಹೋರಾಡಿ ಮಡಿದವರನ್ನು ವೀರರು ಎನ್ನುವ ವಿಶೇಷಣದಿಂದ ಕರೆಯಲಾಗುತ್ತಿತ್ತು. ಇಂತಹ ಒಂದು ಕಲ್ಪನೆಯಲ್ಲಿ ವೀರ, ವೀರಮರಣ, ವೀರಸ್ವರ್ಗ ಎನ್ನುವ ಪದಗಳು ಪರಿಚಯವಾದವು. ಇಲ್ಲಿ ರಾಜಪ್ರಭುತ್ವದ ಮಹತ್ವಾಕಾಂಕ್ಷೆ ಧೋರಣೆಗಳು ಹಾಗೂ ವೈದಿಕ ಹಿನ್ನೆಲೆಯ ಮೋಕ್ಷ ಸಾಧನೆಯ ಆಮಿಷಗಳು ಜಂಟಿಯಾಗಿ ಕೆಲಸ ಮಾಡಿರುವುದನ್ನು ಕಾಣಬಹುದಾಗಿದೆ. ಪುರೋಹಿತ ವರ್ಗ ಮತ್ತು ಕ್ಷತ್ರಿಯರ ನಡುವಿನ ಸಂಬಂಧ ಗಟ್ಟಿಯಾಗಿ ಸಾಗುತ್ತಾ ವೀರಮರಣಗಳ ಸಂಖ್ಯೆ ಜಾಸ್ತಿಯಾಯಿತು. ಶಾಸನಗಳಲ್ಲಿ ವೀರತ್ವದ ಮೌಲ್ಯವನ್ನು ಎತ್ತಿಹಿಡಿದು ಧಾರ್ಮಿಕ ಚೌಕಟ್ಟಿನೊಳಗೆ ಪ್ರತಿಬಂಧಿಸಲಾಯಿತು. ಒಂದು ಮನೆತನದಲ್ಲಿ ಯಾರಾದರೂ ವೀರಮರಣ ಹೊಂದಿದರೆ ಆ ಮನೆತನಕ್ಕೆ ಗೌರವ ಪ್ರಾಪ್ತಿಯಾಗುತ್ತಿತ್ತು. ಸತ್ತ ವ್ಯಕ್ತಿಯ ಬಂಧುಗಳು ವೀರ ಎನ್ನುವ ಪದವನ್ನು ತಮ್ಮ ಹೆಸರಿನ ಮುಂದೆ ಹೆಮ್ಮೆಯಿಂದ ಹಾಕಿಸುತ್ತಿದ್ದರು. ಇದು ವೀರಮರಣಕ್ಕೆ ಪ್ರೋತ್ಸಾಹ ನೀಡಿದಂತೆ ಆಗುತ್ತಿತ್ತು. ನಾವು ಇಲ್ಲಿ ಗಮನಿಸಬೇಕಾಗಿರುವ ಪ್ರಮುಖ ಅಂಶವೆಂದರೆ ವೀರಮರಣವನ್ನು ಅಂದಿನ ಸಮಾಜ ಒಂದು ಸಿದ್ಧಾಂತದ ಹಿನ್ನೆಲೆಯಲ್ಲಿ ಒಪ್ಪಿಕೊಂಡಿದ್ದಿತು. ಮಧ್ಯಮಲೆನಾಡಿನಲ್ಲಿ ಲಭ್ಯವಿರುವ ವೀರಗಲ್ಲುಗಳನ್ನು ಅವಲೋಕಿಸಿದಾಗ ರಾಜಪ್ರಭುತ್ವದ ದರ್ಪದಲ್ಲಿ ಪ್ರಜಾವರ್ಗ ಸ್ವಯಂ ವೀರರಾಗಬೇಕಾದ ಅನಿವಾರ್ಯತೆಯು ಇದ್ದಿತು. ಗ್ರಾಮೀಣ ಭಾಗದಲ್ಲಿ ಪ್ರಭುತ್ವದ ಪರವಾಗಿ ಹೋರಾಡುವ ವೀರರ ಪಡೆಯು ಇದ್ದಿತು ಎಂಬುದಾಗಿ ತಿಳಿಯಬಹುದಾಗಿದೆ. ಅರಸು ಕೇಂದ್ರಿತ ಮತ್ತು ಪುರೋಹಿತಶಾಹಿಯ ನಡುವಿನ ಧೋರಣೆಗಳಲ್ಲಿ ವೀರತ್ವ ಎಂಬುದು ದಾಸ್ಯದ ಸಂಕೇತವಾಗಿ ರೂಪುಗೊಂಡಿದ್ದಿತು. 'ಜಯಿಸಿದರೆ ಲಕ್ಷ್ಮೀ, ಸತ್ತರೆ ಸ್ವರ್ಗ' ಎಂಬಂತಹ ಆಮಿಷ ರೂಪದ

ಮೌಲ್ಯವನ್ನು ವೈದಿಕ ಪರಂಪರೆಯ ಹಿನ್ನೆಲೆಯಲ್ಲಿ ಮೇಲ್ವರ್ಗ ಪ್ರಚಾರ ಮಾಡಿದುದರಿಂದ ಅಂದಿನ ಸಮಾಜದ ಜನಸಾಮಾನ್ಯರ ಮೇಲಿನ ಹಿಡಿತವನ್ನು ಧರ್ಮದ ಸೋಗಿನಲ್ಲಿ ಬಂಧಿಸಲಾಯಿತು.

ಮಲೆನಾಡಿನ ಪ್ರದೇಶವು ವೀರರ ಕಲಿತನ, ಹೋರಾಟಕ್ಕೆ ಪ್ರಾಚೀನ ಕಾಲದಿಂದಲೂ ಹೆಸರುವಾಸಿಯಾಗಿದ್ದಿತು. ನಾಡಿನ ರಕ್ಷಣೆಗೆ ಒಡೆಯನ ಪರವಾಗಿ ತನ್ನ ಋಣ ತೀರಿಸಲು, ಬೇಟೆಗಾಗಿ, ದುಷ್ಟಮೃಗಗಳ ನಾಶಕ್ಕಾಗಿ ಹೀಗೆ ನಾನಾ ಕಾರಣಗಳಿಗಾಗಿ ಶೌರ್ಯ ಪ್ರದರ್ಶನವನ್ನು, ಅಸಾಧಾರಣ ಕಲಿತನವನ್ನು ಪ್ರಕಟಿಸಿರುವುದು ಹಲವಾರು ಶಾಸನಗಳಲ್ಲಿ ನಿರೂಪಿತವಾಗಿರುವುದನ್ನು ಕಾಣಬಹುದು. ಇಂದಿಗೂ ವೀರ ವಿಗ್ರಹಗಳನ್ನು ಗುಡಿಗಳಲ್ಲಿಟ್ಟು ಪೂಜಿಸುವ ಪರಿಪಾಠವಿದ್ದು ಇದಕ್ಕೆ ವೀರಬನಗಳ ನಿರ್ಮಾಣವೇ ಸಾಕ್ಷಿಯಾಗಿವೆ.

೪.೪. ಶಾಸನ ಸಾಹಿತ್ಯ

ಒಂದು ಭಾಷಾ ಮಾಧ್ಯಮದ ಮೂಲಕ ಸೃಷ್ಟಿಯಾಗುವ ಎಲ್ಲವನ್ನೂ ನಾವು ಸಾಹಿತ್ಯವೆಂದು ಪರಿಗಣಿಸಬಹುದು. ಹೀಗೆ ಸೃಷ್ಟಿಯಾಗುವ ಗ್ರಂಥ ಸಮೂಹವನ್ನು ಸ್ಥೂಲವಾಗಿ ಎರಡು ಭಾಗಗಳಾಗಿ ವರ್ಗೀಕರಿಸಬಹುದು. ಶುದ್ಧ ಸಾಹಿತ್ಯಿಕ ಕೃತಿಗಳು ಮತ್ತು ಶಾಸ್ತ್ರಸಾಹಿತ್ಯ ಕೃತಿಗಳು. ಶುದ್ಧ ಸಾಹಿತ್ಯ ಮಾತಿನ ಕಲೆ, ಶಾಸ್ತ್ರ, ಸಾಹಿತ್ಯದ ವೈಜ್ಞಾನಿಕ ನಿರೂಪಣೆ. ಸಾಮಾನ್ಯವಾಗಿ ಸಾಹಿತ್ಯ ಹೃದಯ ಸಂಬಂಧಿಯಾದುದು, ಶಾಸ್ತ್ರ ಬುದ್ಧಿ ಪ್ರಧಾನವಾದುದು ಒಂದರ ಗುರಿ ಆನಂದಾನುಭೂತಿ, ಇನ್ನೊಂದರ ಉದ್ದೇಶ ಜ್ಞಾನ ಪ್ರಸಾರ ಭಾಷೆಯ ಮಹತ್ವ ಹೆಚ್ಚುವುದು. ಇವೆರಡೂ ಬಗೆಯ ಸಾಹಿತ್ಯದ ಸೃಷ್ಟಿ ಸಮೃದ್ಧಿಯಿಂದ. ಈ ದೃಷ್ಟಿಯಿಂದ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ ಮತ್ತು ಬೇರೆಯಾವ ಭಾಷೆಯಲ್ಲೂ ಕಾಣದ ವಿಶಿಷ್ಟ ಲಕ್ಷಣಗಳಿಂದಲೂ ಕೂಡಿದೆ.

ಶಾಸನಗಳು ಬೇರೆ ಬೇರೆ ಕಾಲದಲ್ಲಿ ಮತ್ತು ಬೇರೆ ಬೇರೆ ಲಿಪಿ ಭಾಷೆ ಮತ್ತು ಶೈಲಿಗಳಲ್ಲಿ ರಚಿತವಾದ ಸಾಂಸ್ಕೃತಿಕ ದಾಖಲೆಗಳು; ಮುಖ್ಯವಾಗಿ ಇತಿಹಾಸದ ಮೂಲ ಆಕರಗಳು. ಒಂದು ನಿರ್ದಿಷ್ಟ ಸಂಗತಿಯನ್ನು ದಾಖಲಿಸುವುದಷ್ಟೇ ಶಾಸನಗಳ ಪ್ರಧಾನ ಉದ್ದೇಶ. ಆರಂಭದ ಹಂತದಲ್ಲಿ ವಿಷಯ ನಿರೂಪಣೆಗಷ್ಟೇ ಸೀಮಿತವಾಗಿದ್ದ ಮತ್ತು ತುಂಬ ಸರಳ ರಚನೆಗಳಾಗಿದ್ದ ಶಾಸನಗಳು ಕ್ರಮೇಣ ಸಾಹಿತ್ಯಿಕವಾಗಿ ಕೂಡ ಗಮನಾರ್ಹವೆನಿಸಿದವು. ಎಷ್ಟೋ ಶಾಸನಗಳು ಕಿರುಕಾವ್ಯಗಳಾದವು. ವಾಚಕರ, ಕೇಳುಗರ ಹೃದಯಗಳಲ್ಲಿ ರಸಾನುಭವಗಳನ್ನು ಉಂಟುಮಾಡುವಷ್ಟು ಸಶಕ್ತವಾಗಿವೆ. ಕೆಲವೊಮ್ಮೆ ಸುಂದರ ಸೋಪಜ್ಞ ವರ್ಣನೆ, ಬಿಗಿಬಂಧ, ಉಪಮ ಅಲಂಕಾರಗಳಿಂದ ಕೂಡಿದ ಕಾವ್ಯ ಸಮಾನ ಶಾಸನಗಳು ರಚನೆಯಾದವು.

ಮಧ್ಯಮಲೆನಾಡಿನ ಕೆಲವೊಂದು ಶಾಸನಗಳು ಸಾಹಿತ್ಯಿಕ ದೃಷ್ಟಿಯಿಂದ ಸಮೃದ್ಧಿಯಾಗಿದ್ದರೆ, ಇನ್ನುಳಿದ ಶಾಸನಗಳು ಸಾಹಿತ್ಯಿಕ ದೃಷ್ಟಿಯಿಂದ ನೀರಸವಾಗಿವೆ. ಶೃಂಗೇರಿಯಲ್ಲಿ ಲಭ್ಯವಿರುವ

ತಾಮ್ರಶಾಸನಗಳು ಸಾಂಪ್ರದಾಯಿಕ ಶುದ್ಧ ಶೈಲಿಯಲ್ಲಿ ಬರೆಯಲ್ಪಟ್ಟಿವೆ. ಕೊಪ್ಪದ ಶಾಸನಗಳಲ್ಲಿ ಸಾಹಿತ್ಯಿಕ ಅಂಶಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ತೀರ್ಥಹಳ್ಳಿಯ ಶಾಸನಗಳು ಭಾಷಿಕವಾಗಿ ಮತ್ತು ಸಾಹಿತ್ಯಿಕವಾಗಿ ಗಮನಾರ್ಹವೆನಿಸಿವೆ.

ಮಧ್ಯಮಲೆನಾಡಿನ ಶಾಸನಗಳಲ್ಲಿ ಉಲ್ಲೇಖವಾಗಿರುವ ಲೇಖಕ ಎಂಬ ಪದ ಪ್ರಯೋಗ ಕವಿಗೆ ಅನ್ವಯವಾಗುತ್ತದೆಯೋ ಅಥವಾ ಲಿಪಿಕಾರನಿಗೋ ಎಂಬುದು ಸ್ಪಷ್ಟವಾಗುವುದಿಲ್ಲ. ಹಲವಾರು ಶಾಸನಗಳಲ್ಲಿ ಮಾಹಿತಿ ನೀಡಿರುವ ಸೇನಭೋವ ಎಂಬ ಅಧಿಕಾರಿಗಳೇ ಶಾಸನಪಾಠದ ಕರಡನ್ನು ಸಿದ್ಧಪಡಿಸುತ್ತಿದ್ದರು ಎಂದು ಊಹಿಸಬಹುದು.

ಶಾಸನಗಳಲ್ಲಿ ಹೆಚ್ಚಾಗಿ ಬಳಕೆಯಾಗಿರುವ ವೃತ್ತಗಳೆಂದರೆ ಶ್ಲೋಕ ಮತ್ತು ಕಂದ, ಶಾರ್ದೂಲ ವಿಕ್ರೀಡಿತ, ಮತ್ತೇಭವಿಕ್ರೀಡಿತ, ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರೆ, ಮಹಾಸ್ರಗ್ಧರೆ, ಶಾಲಿನಿ, ಉಪಜಾತಿ, ವಸಂತ ತಿಲಕ ವೃತ್ತಗಳು, ವಿರಳವಾಗಿ ಆರ್ಯ, ಆರ್ಯಗೀತಿ, ವೃತ್ತಗಳು ಶಾಸನ ರಚನೆಯಲ್ಲಿ ಬಳಕೆಯಾಗಿವೆ. ಇವುಗಳಲ್ಲಿ ಅಶುದ್ಧವೂ, ಅಸಮಗ್ರವೂ ಉಂಟು.

ಆರಂಭದಲ್ಲಿ ಸ್ವಸ್ತಿ, ಸಿದ್ದಮ್ ಎಂದು ಆರಂಭಗೊಳ್ಳುತ್ತಿದ್ದ ಶಾಸನಗಳಲ್ಲಿ ಕ್ರಮೇಣವಾಗಿ ಶಿವ, ವಿಷ್ಣು, ಜಿನ, ಗಣಪತಿ, ಸೂರ್ಯ, ರಾಮ, ವೆಂಕಟೇಶ ಹೀಗೆ ಹಲವು ದೇವತೆಗಳ ಸ್ತುತಿಗಳು ಸೇರ್ಪಡೆಯಾದವು. ತುಂಬ ಜನಪ್ರಿಯವಾದ ಈ ಶ್ಲೋಕ ಬಾಣನ ಹರ್ಷಚರಿತದ ಮಂಗಳಪಪ್ಯ, ನಮಸ್ತುಂಗ ಶಿರಶ್ಚುಂಬಿ ಚಂದ್ರ..............................ಮೂಲ ಸ್ತಂಭಾ ಯ ಶಂಭವೇ॥

ಕ್ರಿ.ಶ. ಏಳನೆಯ ಶತಮಾನದಲ್ಲಿದ್ದ ಅಕಳಂಕನ ಪ್ರಮಾಣ ಸಂಗ್ರಹದ ಮಂಗಳ ಶ್ಲೋಕ ಬಹುಪಾಲು ಜಿನಶಾಸನಗಳಲ್ಲಿ ಕಂಡುಬರುತ್ತದೆ. ಶ್ರೀಮತ್ಪರ ಗಂಭೀರ..................... ಜಿನಶಾಸನಂ॥ ವಿಷ್ಣುವಿನ ವರಾಹಾವತಾರದ ಸ್ತುತಿ ಹಲವು ಶಾಸನಗಳಲ್ಲಿ ಸುಪರಿಚಿತವಾಗಿದೆ. ಹರೇರ್ಲಿಲಾವ ರಾಹಸ್ಯ..................................ಛತ್ರ ಶ್ರಿಯಂದದೌ॥ ಸೂರ್ಯ ಸ್ತುತಿಯಲ್ಲಿ ಸೂರ್ಯನಾರಾಯಣಃ ಪಾಯಾದ ಪಾಯಾಜ್ಜಗತಾಂಪ್ರಯಂಕ್ರಮಾತ್ತಪಂತಿ ವರ್ಷಂತಿ ಹಿಮಯಂತಿ ತಪಯಂತಿ ವಃ॥ ಎಂದಿದೆ. ಎಲ್ಲಾ ಶಾಸನದ ಕೊನೆಯ ಭಾಗದಲ್ಲಿ ಪ್ರಸಿದ್ಧ ಪುರಣೋಕ್ತ ಶ್ಲೋಕಗಳಿರುತ್ತವೆ. ಅಂತಹ ಖ್ಯಾತ ಶ್ಲೋಕಗಳಲ್ಲಿ ಶಾಪಾಶಯ ಮತ್ತು ಪುಣ್ಯಾಶಯಗಳು ಸಂಸ್ಕೃತ ಭಾಷೆಯಲ್ಲಿವೆ. ಸ್ವದತ್ತಾಂ ಪರದತ್ತಾಂ ವಾಯೋಹರೇತಿ ವಸುಂಧರಾ। ಷಷ್ಠಿರ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ। ಎಂಬ ವರ್ಣನೆ ಇದೆ.

ಶಾಸನಗಳಲ್ಲಿ ಪತ್ನಿ ಅಥವಾ ಹೆಂಡತಿಯನ್ನು ಶಾಸನಕವಿಗಳು ಪುಣ್ಯಸ್ತ್ರೀ, ಕುಲವಧು, ಮನೋರಮೆ, ಮದವಳಿಗೆ, ಮನೋನಯನ ವಲ್ಲಭೆ, ಮಾನಸಕಳಹಂಸೆ, ಚಿತ್ತಪ್ರಿಯೆ ಎಂಬಿತ್ಯಾದಿ ಮೋಹಕ ಶಬ್ದಗಳಿಂದ ವರ್ಣಿಸಿದ್ದಾರೆ. ಮಡಿದ ವೀರನ ಕುರಿತು ಮೆರೆದು ಸುರಲೋಕ ಪ್ರಾಪ್ತನಾದ, ಲೋಕಾಂತರ ಪ್ರಾಪ್ತನಾದ, ಸ್ವರ್ಗವ ಸೂರೆಗೊಂಡ, 'ಅಂಬುಗೊಡಾಗಿ ಸ್ವರ್ಗವನ್ನು

ಸೂರೆಕೊಂಡದಕೆ ಸುರಲೋಕಕ್ಕೆ ದಾಳಿಯಿಕ್ಕದಂ' ಎಂಬಂತಹ ಪದಗಳನ್ನು ಬಳಸಿ ಕ್ಷಾತ್ರ ಪ್ರವೃತ್ತಿಯನ್ನು ವೈಭವೀಕರಿಸಿರುವುದನ್ನು ಶಾಸನಗಳಲ್ಲಿ ಕಾಣಬಹುದು.

ಮಧ್ಯಮಲೆನಾಡಿನ ಶಾಸನಗಳು ಸಾಹಿತ್ಯಿಕ ದೃಷ್ಟಿಯಿಂದಲೂ ಗಮನಾರ್ಹವಾದವು, ಪ್ರಾಪ್ತವಾಗಿರುವ ಶಾಸನಗಳು ಕನ್ನಡ ಭಾಷೆ ಮತ್ತು ಲಿಪಿಗಳಲ್ಲಿವೆ. ಕೆಲವು ತಾಮ್ರಶಾಸನಗಳಲ್ಲಿ ಬಳಸಿರುವ ಭಾಷೆ ಸಂಸ್ಕೃತ. ಹಲವು ಶಾಸನ ಕವಿಗಳನ್ನು ಹೆಸರಿಸದೇ ಇರುವುದು ದುರದೃಷ್ಟಕರ ಸಂಗತಿ. ಶಾಸನಗಳಲ್ಲಿ ಯಥೇಚ್ಛವಾಗಿ ಸಂಸ್ಕೃತ ಶ್ಲೋಕಗಳನ್ನು ಬಳಸಲಾಗಿದ್ದು ಶಾಪಾಶಯ ಮತ್ತು ಪುಣ್ಯಾಶಯಗಳನ್ನು ನೇರವಾಗಿ ಮನಮುಟ್ಟುವಂತೆ ವರ್ಣಿಸಲಾಗಿದೆ. ಸಂಸ್ಕೃತ ವೃತ್ತಗಳು ಮತ್ತು ಖ್ಯಾತ ಕರ್ಣಾಟಕ ವೃತ್ತಗಳನ್ನು ಬಳಸಿ ವಿಪುಲ ಸಾಹಿತ್ಯ ರಾಶಿಯನ್ನು ಕವಿಗಳು ರಚಿಸಿದ್ದಾರೆ.

ಕೆಲವು ಶಾಸನಗಳು ಹೇಳುವುದು ಒಂದು ದಾನ, ದತ್ತಿ ಇಲ್ಲವೇ ದೇವಾಲಯ ನಿರ್ಮಾಣ ಇತ್ಯಾದಿಗಳನ್ನು ಕುರಿತೇ ಆದರೂ, ಅದರಲ್ಲಿಯೇ ತನ್ನ ಕಾವ್ಯಶಕ್ತಿ ವ್ಯಕ್ತವಾಗುವುದಕ್ಕೆ ಬೇಕಾದ ಹಿನ್ನೆಲೆಯನ್ನು ಹಾಕಿಕೊಳ್ಳುತ್ತಾನೆ ಶಾಸನ ಕವಿ. ಶ್ಲೋಕದಿಂದ ಪ್ರಾರಂಭವಾಗಿ ಶಾಸನ ಅಂತಿಮವಾಗಿ ಮುಕ್ತಾಯಗೊಳ್ಳುವ ಶಾಪಾಶಯದವರೆಗೂ ಅನೇಕ ವರ್ಣನೆಗಳು ಸೌಂದರ್ಯ ಸಂಸ್ಕೃತಿ ಹಾಗೂ ವೀರರ ಉದಾತ್ತ ಆದರ್ಶಗಳನ್ನು ಚಿರಂತನಗೊಳಿಸಿವೆ.

ಶಾಸನದ ಉದ್ದೇಶ ಸಾಹಿತ್ಯ ನಿರ್ಮಾಣವಲ್ಲ ಆದರೂ ಕವಿಯ ಪ್ರತಿಭೆಯಿಂದ ನಿರೂಪಣೆ, ಹದ ಅಲಂಕಾರ, ಕಲ್ಪಕತೆ ಇತ್ಯಾದಿಗಳಿಂದ ಕೂಡಿದ ಶಾಸನ ಪದ್ಯಗಳು ರಸಾನುಭವವನ್ನು ನೀಡುತ್ತವೆ. ಕನ್ನಡಸಾಹಿತ್ಯ ಹಾಗೂ ಶಾಸನಸಾಹಿತ್ಯದ ನಡುವಿನ ಸಾಮರಸ್ಯ ಹಾಗೂ ಸಾಮ್ಯತೆಯನ್ನು ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ.

ನೂರಾರು ಉತ್ತಮ ಶಾಸನಗಳು ಕವಿಗಳ ಪ್ರತಿಭಾಶಕ್ತಿಗೆ ಸಾಕ್ಷಿಯಾಗಿವೆ. ಸ್ಥಳದ ಅಭಾವದ ಕಾರಣದಿಂದ ಶಾಸನಸಾಹಿತ್ಯಕ್ಕೆ ಅನೇಕ ಮಿತಿಗಳಿದ್ದರೂ ಕೂಡ ಸಿಕ್ಕ ಸ್ವಲ್ಪ ಸ್ಥಳಾವಕಾಶದಲ್ಲಿಯೇ ತಮ್ಮ ಪ್ರತಿಭೆಯ ಮೂಲಕ ಸಾಹಿತ್ಯಕ ಪಾಠಗಳನ್ನು ಶಾಸನಗಳಲ್ಲಿ ನಿರ್ಮಿಸಿರುವ ಹಲವು ಕವಿಗಳಿದ್ದಾರೆ. ಒಂದು ಶಾಸನ ರಚನೆಯಾಗಬೇಕಾದರೆ ಕವಿ, ಲಿಪಿಕಾರ ಹಾಗೂ ರೂವಾರಿಗಳು ಬಹಳ ಮುಖ್ಯರಾಗಿರುವುದನ್ನು ಗಮನಿಸಬಹುದು.

ಯಾವುದೇ ಒಂದು ಸಾಹಿತ್ಯ ಒಂದು ಕಾಲದ ಸಾಮಾಜಿಕ ಸಂದರ್ಭದಲ್ಲಿ ಆವಿರ್ಭವಿಸ ಬೇಕಾದರೆ ಅದು ತನ್ನೆಲ್ಲಾ ಆಶಯ ಕೃತಿಗಳು, ಆಕೃತಿಗಳು ಆಯಾ ಸಮಾಜದ ಒತ್ತಡ ವಿನ್ಯಾಸಗಳ ಫಲಿತಾಂಶವೇ ಆಗಿರುತ್ತದೆ ಎಂದು ಹೇಳುವುದಾದರೆ, ವಿಭಿನ್ನ ಕಾಲಘಟ್ಟದಲ್ಲಿ ರಚನೆಯಾದ ಶಾಸನಸಾಹಿತ್ಯವು ಆಯಾ ಸಮಾಜದ ಸಾಂಸ್ಕೃತಿಕ ಕಥನವನ್ನು ಕಟ್ಟಿಕೊಳ್ಳಲು ಹೇಗೆ ಸಹಾಯವಾಗಿದೆ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಹನ್ನೊಂದನೆಯ ಶತಮಾನದಲ್ಲಿ ಧಾರ್ಮಿಕ ವೀರರನ್ನು ಕ್ಷಾತ್ರ ವೀರರನ್ನು ನಾಯಕರನ್ನಾಗಿ ಮಾಡಿಕೊಂಡು ಅರಸೊತ್ತಿಗೆಯ ಕೈಗೊಂಬೆಯಾಗಿ ಸೃಷ್ಟಿಯಾದ ಸಾಹಿತ್ಯ ಕೃತಿಗಳನ್ನು, ದಿಗ್ವಿಜಯ

ಸಾಧನೆಗಳನ್ನು, ಮೌಲ್ಯವನ್ನು, ಧರ್ಮನಿಷ್ಠೆಯನ್ನು ಮಧ್ಯಮಲೆನಾಡಿನ ಶಾಸನಗಳು ಪ್ರಚಾರ ಮಾಡಿವೆ. ಆರಂಭದ ಶಾಸನಗಳಲ್ಲಿ ಮಹಾರಾಜಾಧಿರಾಜ, ರಾಜಪರಮೇಶ್ವರ, ಮಹಾಮಾಂಡಳಿಕ, ಪರನಾರಿಸಹೋದರ ಎಂಬಂತಹ ಬಿರುದುಗಳ ಸ್ಥಾನದಲ್ಲಿ ಶ್ರೀವೀರಪ್ರತಾಪ, ಶ್ರೀಮಲ್ಲಿಕಾರ್ಜುನದೇವ, ಶ್ರೀಪದ್ಮಾವತೀಲಬ್ಧವರಪ್ರಸಾದಿತ ಎಂಬಂತಹ ಬಿರುದುಗಳುಳ್ಳ ಹೆಸರುಗಳಲ್ಲಿ ಕಾಣಿಸಿಕೊಳ್ಳುತ್ತವೆ.

ಈ ಭಾಗದ ಶಾಸನಸಾಹಿತ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಶಾಸನಗಳಲ್ಲಿ ಪುರೋಹಿತ ಶಾಹಿ ವರ್ಗದ ಪ್ರಾಬಲ್ಯವನ್ನು, ಸಂರಕ್ಷಣೆಯನ್ನು ವೈಭವೀಕರಿಸಲಾಗಿದೆ. ಪ್ರಾಪ್ತವಾಗಿರುವ ಎಲ್ಲಾ ಶಾಸನಗಳು ದಾನಶಾಸನಗಳಾಗಿದ್ದರಿಂದ ಅರಸರು ಪುರೋಹಿತಶಾಹಿಗಳಿಗೆ, ಬ್ರಾಹ್ಮಣ ವರ್ಗಕ್ಕೆ, ದೇವಾಲಯ ಹಾಗೂ ಮಠಗಳಿಗೆ ನೀಡಿದ ದಾನಗಳೇ ಆಗಿದ್ದರಿಂದ ಶಾಸನಸಾಹಿತ್ಯದ ರಚನೆಯಲ್ಲಿ ಮೇಲ್ವರ್ಗವು ತನ್ನ ಪ್ರಾಬಲ್ಯವನ್ನು ಮೆರೆದಿರುವುದನ್ನು ಗುರುತಿಸಬಹುದು. ಕೊಟ್ಟ ದಾನವನ್ನು ಸಂರಕ್ಷಿಸುವಂತೆ ಹಾಗೆಯೇ ಮುಂದುವರಿಸಿಕೊಂಡು ಹೋಗುವಂತೆ ನಿರ್ದೇಶನವನ್ನು ಶಾಸನಗಳಲ್ಲಿ ಹೇರಿದ್ದರಿಂದ ಯಜಮಾನ ಸಂಸ್ಕೃತಿ ಹಾಗೂ ಪುರೋಹಿತಶಾಹಿಯ ಮೂಲಕ ಸಾಮಾಜಿಕ ಕಟ್ಟುಪಾಡುಗಳನ್ನು ನಿರ್ಮಾಣ ಮಾಡಲು ಪ್ರಯತ್ನಿಸಿದರು.

ಶಾಸನಸಾಹಿತ್ಯವು ಕೇವಲ ಪುರೋಹಿತಶಾಹಿ ವರ್ಗದ ಅರಸರ ಅಧೀನವಾಗಿತ್ತಾಗ ಆ ಸಮಾಜದ ಸಂಪೂರ್ಣ ಮಿಡಿತಗಳಿಗೆ ಮಲೆನಾಡಿನ ಶಾಸನಗಳು ತೆರೆದುಕೊಳ್ಳಲಿಲ್ಲವೆಂದು ಹೇಳಬಹುದು. ಸಾಹಿತ್ಯದಲ್ಲಿ ಜನಸಾಮಾನ್ಯರ ಬಗೆಗಿನ ವಿಚಾರಣೆಗಳನ್ನು ನಿರ್ಲಕ್ಷಿಸಿದ್ದನ್ನು ಗಮನಿಸಿದರೆ ಸಮಾಜದ ಬಹುಸಂಖ್ಯಾತ ವರ್ಗವನ್ನು ಕಡೆಗಣಿಸಿ ಅಲ್ಪಸಂಖ್ಯಾತರ ಹಿತವನ್ನು ವೈಭವೀಕರಿಸಿದ್ದು ಸಮಾಜದಲ್ಲಿನ ಭೇದ–ಭಾವವನ್ನು ಪ್ರಸರಣ ಮಾಡಿದಂತಾಗಿದೆ.

ಕ್ಷಾತ್ರ ತೇಜಸ್ಸು, ಪರಾಕ್ರಮಗಳು ಮುಖ್ಯ ಮೌಲ್ಯವಾದ ಕಾಲದಲ್ಲಿ ವೀರರ ಕಥೆಗಳನ್ನು ಅವರ ಯುದ್ಧ – ದಿಗ್ವಿಜಯಗಳ ಸಾಧನೆಯನ್ನು ವಿಶೇಷವಾಗಿ ವರ್ಣಿಸಿರುವುದು ತಿಳಿದಿರುತ್ತದೆ. ಯುದ್ಧದ ಭೀಕರತೆ, ಕೋಲಾಹಲ, ಯುದ್ಧದ ನಂತರ ವೀರನ ಸ್ವರ್ಗಪ್ರಾಪ್ತಿಯನ್ನು ಕವಿಗಳು ಮನಮುಟ್ಟುವಂತೆ ವರ್ಣಿಸಿದ್ದಾರೆ. 'ಸಾಂತಳಿಗೆ ನಾಡ ಕೊಳವಳಿಗೆ ಪಠಾವಳಿ ಬಂದು ಕಾದಿದಲ್ಲಿ ಆ ಬೊಮ್ಮರಸ ಹೆಗ್ಗಡೆಯರ ಮಗ ಪುಟಗಡೆ ದಳವನ್ನು ಮುರಿದ ಆರಣದೊಳಗೆ ಕುಮಾರರಾಮನಾಥನ ಪ್ರತಾಪವಾಗಿ ಅಂಬುಗೂಡಾಗಿ ಸ್ವರ್ಗವನ್ನು ಸೂರೆಗೊಂಡ.[೫೦] ಈ ವರ್ಣನೆಯಲ್ಲಿ ಪುಟ್ಟಗಡೆ ವೀರನನ್ನು ಕುಮಾರ ರಾಮನಾಥನೆಂಬ ಸಾಹಸಿಗೆ ಹೋಲಿಸಲಾಗಿದೆ.

ರಣರಂಗದಲ್ಲಿ ಮೊಳಗುವ ರಣಕಹಳೆ, ರಣಭೇರಿಗಳು ನುಗ್ಗಿಬರುವ ಸೈನ್ಯವು ವೀರನ ಮನಸ್ಸಿನಲ್ಲಿ ರಣೋತ್ಸಾಹವನ್ನು ಉಕ್ಕಿಸುತ್ತವೆ. ಮೂರು ಜಗದ ವೀರ, ಗಂಡುಗಲಿ ರಾಜಿಗನ ಜಕ್ಕನು ಯುದ್ಧ ರಂಗದಲ್ಲಿ ಶತ್ರುಗಳ ತಲೆಯನ್ನು ಚೆಂಡಾಡುತ್ತಿದ್ದ. ಕಾದಿದ ಯುದ್ಧದಲ್ಲಿ ಶತೃಗಳ ಮುಂಡಗಳೇ ಆಡುತ್ತಿದ್ದವು ಎಂಬ ವರ್ಣನೆ ಇದೆ.

ಈ ತ್ರಿಜ್ಜಗದೊಳ್ ತಡೆ ಮೆಚ್ಚೆಗಂಡನಂ।
ಗಂಡಗಲ್ಲಿ ರಾಜಗನ ಜಕ್ಕನು ಬಂಡಣದೊಗಳದಿರ್ಚ್ಚೆ ನಿಳರಿಪುವೈರಿಗಳಂ ।
ಸೆಂಡಾಡುತಿದ್ದ ತಲೆಗಳು ।
ಮುಂಡಗಳೆದಾಡುತಿದವು ಇವ ಕಾದಿದ ರಣದೊಳ್।[೫೧]

ಈ ಕಂದಪದ್ಯದಲ್ಲಿ ವೀರನ ದರ್ಪ, ಉತ್ಸಾಹ, ಆಟಾಟೋಪಗಳ ವರ್ಣನೆಯ ವೀರತನವನ್ನು ಹೊಮ್ಮಿಸುವುದಕ್ಕೆ ಈ ಪದ್ಯ ಓಜಸ್ಸಿನಿಂದ ಕೂಡಿರುತ್ತದೆ.

ಹಲ್ಲುಸಾಲೆ ಶಾಸನವೊಂದರಲ್ಲಿ ಸಗಡವಳ್ಳಿ ಯನ್ನಾಳುತ್ತಿದ್ದ ಗಂಡರಗೋವ ಸಿರಿಯಮ್ಮ ಹೆಗ್ಗಡೆ ಹಾಗೂ ಮಾವನಾದ ಹೊಯ್ಸಯ್ಯರು, ಅಣ್ಣಪ್ಪ ಹೆಗ್ಗಡೆ ಎಂಬುವವನ ವಿರುದ್ಧ ಹೋರಾಡಿ ಪ್ರಾಣತ್ಯಾಗ ಮಾಡಿದ ವಿವರಣೆಯಲ್ಲಿ ಕವಿ ಸಮಯವನ್ನು ಬಳಸಿಕೊಂಡು ತನ್ನ ಕಲ್ಪನೆಯನ್ನು ಈ ರೀತಿಯಾಗಿ ಹರಿಯಬಿಡುತ್ತಾನೆ.

ರಣದಲು ಬಿದ್ದ ಸಿರಿಯಮ್ಮನ ಮಾವ ಹೊಯ್ಸಯಂತಂದು
ಅಳಿಯನ ಹೆಣನ ನೆಡಗಲ್ಸಿಕೊಂಡು ಉಭಯ ಸತ್ತಿಗೆಯ ಹದಿಕೆಯಂ ಕೊಂಡೆಯ್ದು
ಮಾರ್ಬಲದೊಳ್ ಕುದುರೆಯೆಂ ತಿವಿದಿಬ್ಬ ಹೆಣಮಯಂ ಮಾಡಿ[೫೨]

ಇಂತಹ ವರ್ಣನೆಯನ್ನು ಶಾಸನಗಳಲ್ಲಿ ನೋಡಬಹುದು.

ಯುದ್ಧದಲ್ಲಿ ಹೋರಾಡಿ ಸಾಹಸವನ್ನು ಪ್ರದರ್ಶಿಸಿ, ಮರಣ ಹೊಂದಿದ ವೀರರಿಗೆ ವೀರಗಲ್ಲನ್ನು ನೆಟ್ಟು, ಅವರ ಕುಟುಂಬಕ್ಕೆ ಭೂಮಿಯನ್ನು, ಹಣವನ್ನು ನೀಡುತ್ತಿದ್ದರು ಎಂಬುದಕ್ಕೆ ಹಲ್ಲುಸಾಲೆಯ ಇನ್ನೊಂದು ಶಾಸನದಲ್ಲಿ ಸಿರಿಯಮ್ಮ ಹೆಗ್ಗಡೆಯು ತನ್ನ ಶತ್ರುವಾದ ಅಣ್ಣಮ್ಮ ವೆಗ್ಗಡೆ ಎಂಬುವವನ ಜೊತೆ ಕಾದಾಡಿ ಪ್ರಾಣತ್ಯಾಗ ಮಾಡಿದ ನೆನಪಿಗಾಗಿ ವೀರಗಲ್ಲನ್ನು ನೆಟ್ಟು ಭೂಮಿ ಹಾಗೂ ಹಣವನ್ನು ನೀಡಿದುದರ ಬಗ್ಗೆ ಹಾಗೂ ದಾನವನ್ನು ಸ್ವೀಕರಿಸಿದ ಕನ್ನೆಯನ ನಾಗನ ಉಲ್ಲೇಖ ಈ ಶಾಸನದಲ್ಲಿದೆ.[೫೩]

ವೀರಗಲ್ಲು ಶಾಸನಗಳಲ್ಲಿ ಕವಿಗಳು ಜನತೆಯಲ್ಲಿ ಕ್ಷಾತ್ರ ಪ್ರವೃತ್ತಿಯನ್ನು ಉತ್ತೇಜಿಸುವ ಸಲುವಾಗಿ ಯುದ್ಧರಂಗದಲ್ಲಿ ವೀರನು ಗೆದ್ದರೆ ಲಕ್ಷ್ಮೀ, ಸತ್ತರೆ ಸುರಲೋಕ ಪ್ರಾಪ್ತಿಯಾಗುತ್ತದೆ ಎಂಬಂತಹ ಸತ್ಯವನ್ನು ಕವಿಗಳು ಶ್ಲೋಕಾರ್ಥದಲ್ಲಿ ವರ್ಣಿಸುವುದರ ಮುಖೇನ ಜನಮನದಲ್ಲಿ ಹೋರಾಟದ ಪ್ರಜ್ಞೆಯನ್ನು ಪಸರಿಸಿದರು. ಇದಕ್ಕೆ ನಿದರ್ಶನವೆನ್ನುವಂತೆ ನಾಬಳ ಶಾಸನದಲ್ಲಿ ಆರಗದ ಮಾಂಡಳಿಕನಾದ ದೇವಪ್ಪ ಡಣಾಯಕ ಒಡೆಯನು ಆಳುತ್ತಿದ್ದಾಗ ಹಲ್ಲುಸಾಲೆಯಲ್ಲಿ ಕೋಟಿಯಪ್ಪ ಹೆಗ್ಗಡೆ ಮತ್ತು ಬೊಮ್ಮರಸ ಹೆಗ್ಗಡೆ ನಡುವೆ ನಡೆದ ಕಾಳಗದಲ್ಲಿ ಕೋಟಿಯಪ್ಪ ಹೆಗ್ಗಡೆ ಮರಣ ಹೊಂದಿದ್ದನ್ನು ಕವಿಯು ಚಂಪಕಮಾಲೆಯಲ್ಲಿ ಈ ರೀತಿ ವರ್ಣಿಸಿದ್ದಾನೆ.

ನರಸೀಸಂಭವಕೋಟಿ ನೃಪಾಲ ದೇವತಾ ಪ್ರಸರದ ಭೋಗಮಂಬಯಸಿ
ತಾಂ ಸುರಲೋಕಕ್ಕೆ ದಾಳಿಯಿಕ್ಕಿದಂ[೧೫೪]

ಎಂಬಂತಹ ವರ್ಣನೆಗಳು ವೀರತ್ವದ ಕಲ್ಪನೆ ಹಾಗೂ ವೀರ ಪರಂಪರೆಗೆ ಧ್ಯೋತಕವೆನಿಸುತ್ತವೆ.

ಮಧ್ಯಮಲೆನಾಡಿನ ಶಾಸನಗಳಲ್ಲಿ ಕವಿಗಳು ರಾಜನನ್ನು ಹೊಗಳಿರುವುದನ್ನು ಗಮನಿಸಿದಾಗ ಅವರುಗಳು ರಾಜಾಶ್ರಯದಲ್ಲಿ ರಾಜರು ಮತ್ತು ಪುರೋಹಿತರೊಂದಿಗೆ ನೇರವಾದ ಸಂಪರ್ಕವನ್ನಿಟ್ಟು ಕೊಂಡಿದ್ದರು ಎನ್ನುವುದು ಅರಿವಾಗುತ್ತದೆ. ವಿಜಯನಗರದ ಅರಸ ಬುಕ್ಕರಾಜನನ್ನು ವರ್ಣಿಸುವ ಶಾಸನದಲ್ಲಿ,

ಕರ್ಣಾಂತೇ ಚಾಮರಂತೀಂ ಪ್ರಬಡಪರಿಮಿತಂ ದೈಗಿಭೀನಾಮಿಭಿನಾಂ
ಸೀಮಂತೆ ಮೌಕ್ತಿಕಂತೀಂ ವಿಬುಧ ಪತಿಪೂರೀ ಸೀಮ್ನಿ ಸೀಮಾಂತಿನೀನಾಂ।
ಆಭೋಗಾದ್ಭೋಗವತ್ಯಾಂ ಫಣಿಪತಿ ಫಣಿನೀಕಂಚುಕಂತೀ ಕನಂತೀಂ
ಕೀರ್ತಿಂ ತಾಂ ಸೋತು ಮೇತಾಂ ಪ್ರಭವತಿ ಕತಮೋಬುಕ್ಕ ಭೂಪಸ್ಯಲೋಕೇ॥[೩೩]

ಕಿವಿಯ ಕೊನೆಯಲ್ಲಿ ಚಾಮರದಂತಿರುವ ಬೈತಲೆಯ ಸ್ಥಾನದಲ್ಲಿ ಮೌಕ್ತಿಕ ಮಣಿಯಂತಿರುವ ಪಂಡಿತರ ಪರಿಷತ್ ಸೀಮೆಯಲ್ಲಿ ನಾರಿಯಂತಿರುವ ಹಾಗೆಯೇ ಭೋಗವತಿಯರ ಭೋಗಗಳಿಂದ ನಾಗಕನ್ನಿಕೆಯರ ಕಂಚುಕದಂತೆ ಶೋಭಿಸುತ್ತಿರುವ ಕೀರ್ತಿಯುಳ್ಳ ರಾಜ್ಯಲಕ್ಷ್ಮಿಯನ್ನು ಸ್ತೋತ್ರ ಮಾಡಲು ಬುಕ್ಕಭೂಪತಿಯ ರಾಜ್ಯದಲ್ಲಿ ಯಾವನು ತಾನೇ ಸಮರ್ಥನಾದನು? ಎಂದು ಕವಿಯೊಬ್ಬ ಪ್ರಶ್ನಿಸುತ್ತಾನೆ.

ಕೆಳದಿ ಸದಾಶಿವರಾಯನ ಪರಾಕ್ರಮವನ್ನು ಯಶಸ್ವಿ ರೂಪಕ ಚಿತ್ರದ ಮೂಲಕ ಕವಿಯು ಸಾಹಿತ್ಯದ ರಚನೆಯಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

ಕೆಳದಿ ಸದಾಶಿವಭೂಪೇ ಕರದೃತಚಾಪೆ ಕಟಾಕ್ಷಕೃತ ಕೋಪೆ।
ಅಹಿತಬಲಂ ರಹಿತಬಲಂ ಜಹದಬಲಂ ಬಹಳ ಮತ್ತಿತೃಣಕಬಳಂ॥[೩೬]

ತನಗೆ ಎದುರಾದ ಶತ್ರುಗಳನ್ನು ದಮನ ಮಾಡಲು ಕೆಳದಿ ಸದಾಶಿವರಾಯನು ಕರದಲ್ಲಿ ಬಿಲ್ಲನ್ನು ಹಿಡಿಯುತ್ತಿರಲು, ಕಡೆಗಣ್ಣು ಕೆಂಪಾಗಿ ಇರಲು, ಶತ್ರುಗಳ ಬಲವು ಬಲರಹಿತವಾಗಿ, ಅಬಲರಾಗಿ ಹೆಚ್ಚು ಹೆಚ್ಚಾಗಿ ತೃಣಕ ಬಳವನ್ನು (ಹುಲ್ಲಿನ ಮುಷ್ಠಿ) ತಿನ್ನಬೇಕಾಗಿ ಬರುವುದು.

ಶಾಸನಗಳಲ್ಲಿ ದೇವ-ದೇವಿಯರ ವರ್ಣನೆಯನ್ನು ಕವಿ ಮನಮುಟ್ಟುವಂತೆ ಬರೆದಿದ್ದಾನೆ.

ವಿದ್ಯಾಕೈರವ ಕೌಮುದೀಂ ಶೃತಿಶಿರಸ್ಸೀಮಂತ ಮುಕ್ತಾಮಣಿಂ
ದಾರಾನ್‌ಪದ್ಮಭುವ ಸ್ತ್ರೀಲೋಕ ಜನನೀಂ ವಂದೇ ಗಿರಾಂ ದೇವತಾಂ ।
ಯತ್ಪಾದಾಬ್ಜನಮಸ್ಕ್ರಿಯಾ: ಸುಕೃತಿನೋ ಸಾರಸ್ವತ ಪ್ರಕ್ರಿಯಾ
ಭೀಜನ್ಯಾಸಬುವೋ ಭವಂತಿ ಕವಿತಾನಾಟೈಕ ಜೀವಾತವ ॥[೩೭]

ವಿದ್ಯೆಯೆಂಬ ನೈದಿಲೆಗೆ ಬೆಳದಿಂಗಳಾದ, ವೇದವೆಂಬ ಬೈತಲೆಯ ಮುತ್ತಿನ ಮಣಿಯಂತಹ, ಸ್ತ್ರೀಲೋಕದ ಹುಟ್ಟಿಗೆ ಕಾರಣಳಾದ ಬ್ರಹ್ಮನ ಹೆಂಡತಿ ವಾಗ್ದೇವಿಯಾದ ಶಾರದೆಗೆ ನಮಸ್ಕಾರ. ಶಾರದೆಯ ಚರಣ ಕಮಲಗಳಿಗೆ ನಮಿಸುವುದರಿಂದ ಕವಿತೆ ಶಾಸ್ತ್ರಗಳಲ್ಲಿ ಆರಂಭದ

ಬೀಜಾರೋಪವಾಗಿ ಕವಿತಾಶಕ್ತಿಯು ವೃದ್ಧಿಸುತ್ತದೆ. ಇಲ್ಲಿ ಶಾರದೆಯೇ ಜ್ಞಾನ, ವಿದ್ಯೆಯ ಸಂಕೇತ ಎಂಬ ಮೋಹಕ ವರ್ಣನೆ ಒಳಗೊಂಡಿದೆ.

ಶೃಂಗೇರಿಯ ಶಾಸನವೊಂದರಲ್ಲಿ ಸಂಸ್ಕೃತ ಶಾರ್ದೂಲವಿಕ್ರೀಡಿತ ವೃತ್ತದ ಛಂದಸ್ಸಿನಲ್ಲಿ ಗಣನಾಥನನ್ನು ಈ ರೀತಿಯಲ್ಲಿ ವರ್ಣನೆ ಮಾಡಲಾಗಿದೆ.

ದೇವನಾಂಸರಿತೋ ಜಲೈರವಿರಳಾಂ ಕ್ರೀಡಾಮ್ಮುಹುರ್ಬಾವಯಂ
ಸ್ಥೂಲೈರ್ಬಿಂದು ಭಿರಾಕಿರನ್ನಿಜವಪುಃ ಕೃತ್ಸ್ನಾಂಚ ವಿಶ್ವಂಭರಾಂ।
ಲೋಕಾನಾಂ ಪೃಥು ಮೇಘಕಾತುಕಧಿಯಂ ಸುಪಾದಯನ್ನಾದರಾದ್ದಿಶ್ಯಾದ್ವಃ
ಸುಖಸಂಪದಂ ಕರಿವರಗ್ರೀವೊದ್ರಿ ಕನ್ಯಾಸುತಃ ॥[೫೮]

ದೇವತೆಗಳು ಸರೋವರದ ನೀರಿನಲ್ಲಿ ನಿರಂತರವಾಗಿ ಆಡುತ್ತಾ ಬೃಹತ್ತಾದ ನೀರಿನ ಹನಿಗಳನ್ನು ತನ್ನ ಮೈಯ ಮೇಲಕ್ಕೂ ವಿಶ್ವಕ್ಕೂ (ಭೂಮಿಗೂ) ಸಿಂಪಡಿಸುತ್ತಿರುವ, ನೋಡುವ ಜನರಿಗೆ ದೊಡ್ಡ ಮೋಡದಂತೆ ಕಾಣಿಸುವ ಪರ್ವತ ರಾಜನ ಮಗಳ ಮಗನಾದ ಆನೆಮೊಗದ ಗಣಪತಿಯು ಎಲ್ಲರಿಗೂ ಸುಖ ಸಂಪತ್ತನ್ನು ನೀಡಲಿ ಎಂದು ಬಣ್ಣಿಸುತ್ತದೆ. ಆದರೆ ಎಲ್ಲೂ ಕವಿಯು ತನ್ನ ಹೆಸರನ್ನು ಉಲ್ಲೇಖಿಸದೆ ಇರುವುದು ದುರಾದೃಷ್ಟಕರ.

ಮಧ್ಯಮಲೆನಾಡಿನ ಶಾಸನಗಳಲ್ಲಿ ಸಂಸ್ಕೃತ ಭಾಷೆಯ ಛಂದಸ್ಸುಗಳನ್ನು ಕವಿಮಹಾಶಯರು ಯಥೇಚ್ಛವಾಗಿ ಬಳಸಿಕೊಂಡಿದ್ದಾರೆ.

ಶಿವನು ಈ ಲೋಕದ ಒಡೆಯ, ವಿಶ್ವದ ಸೃಷ್ಟಿಕರ್ತ ಎಂದು ಹೇಳುವ ಶೃಂಗೇರಿಯ ಶಾಸನದಲ್ಲಿ[೫೯] ಛಿಂದನ್ನೇಕೋ ವ್ಯಾಪಿ, ಸ್ವಯಂ ಪ್ರಕಾಶನಾದ ಸಕಲ ಚರಾಚರಗಳಲ್ಲೂ ವ್ಯಾಪಿಸಿಕೊಂಡಿರುವ, ನಿತ್ಯಸತತೋದಿತೋ ವಿಭುಃ ಶಾಂತಃ॥ ಅಂದರೆ ವಿನಾಶರಹಿತನಾದ ಶಾಂತನಾಗಿ ಅದ್ವೈತನಾಗಿರುವ, ಜಯಂತಿ ಜಗದೇಕ ಬೀಜಂ; ಜಗತ್ತಿನಲ್ಲಿ ಎಲ್ಲಾ ಕ್ರಿಯೆಗಳಿಗೂ ಕಾರಣೀಭೂತನಾದ ಶಿವನು ಆತನನ್ನು ಅನುಗ್ರಹಿಸಿದನು. ಯಸ್ಯಾನು ಗ್ರಾಹಕಃ ಶಂಭುಃ ಎಂಬುದಾಗಿ ಕವಿತಾ ವರ್ಣನೆಯು ದೈವಭಕ್ತಿಯನ್ನು ಹಾಗೂ ಶಿವಶಕ್ತಿಗೆ ಹೊಂದುವ ಆರ್ಯ ಮಾತ್ರ ಛಂದಸ್ಸನ್ನು ಇಲ್ಲಿ ಭಕ್ತಿಭಾವಕ್ಕೆ ಹದಗೊಳಿಸಿರುವುದು ವಿಶಿಷ್ಟವಾಗಿದೆ.

ಜೈನ ಧರ್ಮವು ಈ ಪ್ರದೇಶದಲ್ಲಿ ರಾಜಾಶ್ರಯವನ್ನು ಪಡೆದುಕೊಂಡಿದ್ದು ೧೨ನೆಯ ಶತಮಾನದವರೆಗೂ ಉಚ್ಛ್ರಾಯ ಸ್ಥಿತಿಯನ್ನು ತಲುಪಿ ಶಾಸನ ರಚನೆಯಲ್ಲಿ ಕವಿಗಳು ವಿಪುಲವಾದ ಸಾಹಿತ್ಯವನ್ನು ಉಣಬಡಿಸಿರುವರು. ಮೇಳಿಗೆ ಜೈನ ಧರ್ಮದ ಕೇಂದ್ರವಾಗಿದ್ದಿತು. ಮೇಳಿಗೆ ಶಾಸನದಲ್ಲಿ ಸ್ರಗ್ಧರೆ ಸಂಸ್ಕೃತ ವೃತ್ತವನ್ನು ಆಧರಿಸಿ ಜಿನೇಶನ ವರ್ಣನೆ ಈ ರೀತಿ ಇದೆ.

ಶ್ರೀ ಮದ್ಗೀರ್ವಾಣ ಚಕ್ರೇತ್ಫಣಿಪತಿ ಮಕುಟೋದ್ಭಾಸಿ ಮಾಣಿಕ್ಯ ಮಾಲಾ
ರೋಚಿಃ ಪ್ರಕ್ಷಾಲಿತಃ ಶ್ರೀ ಚರಣ ಸರಸಿಜದ್ವಂದ್ವ ಬಾಭಾಸ್ಯಮಾನಃ ।

ಮಾನಸ್ತಂಭಾಂಬುಜಾತಾಕರಕಲಿತಲಸತ್ಪಾತಿಕಾದ್ಯುದ್ವಶೋಭೋ

ಸೌಸ್ಯಾತ್ಸಂತೋಷಯನ್ ಶ್ರೀಸಮವಸೃತಿಪತಿರ್ಭ್ರಾತ್ಯಂನೋ ಜಿನೇಶಃ॥೬೦

ಗೀರ್ವಾಣ ಚಕ್ರದಲ್ಲಿ ಸರ್ಪದ ಹೆಡೆಯಲ್ಲಿರುವ ಮಣಿಯ ಕಿರಣಗಳು ಜಿನೇಶನ ಪಾದಗಳನ್ನು ತೊಳೆಯುತ್ತಿರುವಂತೆ, ಮಾನಸ್ತಂಭದ ಅಂಬುಜವನ್ನು ಕೈಯಲ್ಲಿ ಹಿಡಿದುಕೊಂಡ ಕಾರಣದಿಂದ ಉಂಟಾದ ಕೊಳದ ಕಮಲದಂತೆ ಶೋಭೆಯುಳ್ಳ ಸಂಪತ್ತಿಗೆ ಸಮನಾದ ಜಿನೇಶನಿಗೆ ನಮಸ್ಕಾರಗಳು ಎಂದಿದ್ದು ಪ್ರಕೃತಿಯ ಹಲವಾರು ಅಂಶಗಳನ್ನು ಜಿನೇಶನಿಗೆ ಹೋಲಿಕೆ ಚಪಲಕ್ಕೂ ಕವಿಗಳು ಒಳಗಾಗಿದ್ದಾರೆ.

ಶಾಲಿನಿ: ಶಾಲಿನ್ಯುಕ್ತಾಮ್ತೌತಣೌಗೋಬ್ಧಿ ಲೋಕೈಃ

ಇದು ಹನ್ನೊಂದು ಅಕ್ಷರಗಳ ವೃತ್ತ ಪ್ರತಿಪಾದದಲ್ಲಿ ಮಗಣ, ತಗಣ, ತಗಣ ಮತ್ತು ಎರಡು ಗುರುಗಳು ಇರಬೇಕು. ನಾಲ್ಕನೇ ಅಕ್ಷರ ಯತಿ, ಬಹಳಷ್ಟು ಶಾಸನಗಳಲ್ಲಿ ಶಾಲಿನಿ ಛಂದಸ್ಸನ್ನು ಬಳಸಿ ವರ್ಣನೆ ಮಾಡಲಾಗಿದೆ. ಶ್ರೀ ರಾಮಚಂದ್ರನು ಧರ್ಮಪಾಲನೆಯ ಕರ್ಮದಲ್ಲಿ ತೊಡಗಿಕೊಂಡ ರಾಜರುಗಳಿಗೆ ಧರ್ಮಸೇತುವಿನ ರೂಪದಲ್ಲಿ ಇರುತ್ತಾನೆ. ಅಂತಹ ಶ್ರೀರಾಮನು ನಮ್ಮನ್ನು ಆಯಾ ಕಾಲಕ್ಕೆ ಸರಿಯಾಗಿ ಪಾಲಿಸಲಿ ಅಥವಾ ಅವನೇ ನಮ್ಮನ್ನು ಪಾಲಿಸಲು ಯೋಗ್ಯನಾಗಿದ್ದಾನೆ. ಇಂತಿರುವ ಶ್ರೀರಾಮನು ಮುಂದೆ ಬರಲಿರುವ ರಾಜರುಗಳನ್ನು ರಕ್ಷಿಸಲಿ ಹೀಗೆಂದು ಶ್ರೀರಾಮಚಂದ್ರನನ್ನು ಮತ್ತೆ ಮತ್ತೆ ಪ್ರಾರ್ಥಿಸಲಾಗಿದೆ ಎಂಬಂತಹ ತಾತ್ಪರ್ಯವು ಶೃಂಗೇರಿ ಶಾಸನದಲ್ಲಿದೆ.

ಸಾಮಾನ್ಯೋಯಂ, ಧರ್ಮಸೇತು ನೃಪಾಣಾಂ।

ಕಾಲೇ ಕಾಲೇ ಪಾಲನಿಯೋ ಭವದ್ಭಿಃ

ಸಾರ್ವನೇತಾನ್ಭಾಪಿನಃ ಪ್ರಾರ್ಥಿವೇಂದ್ರ

ಭೂಯೋ ಭೂಯೋ ಯಾಚತೇ ರಾಮಚಂದ್ರಃ೬೧

ರಾಮಾಯಣದ ಸೇತುಬಂಧ, ರಾಮನ ಧರ್ಮನಿಷ್ಠೆ, ರಾಮನ ಧೀರತೆ, ಮರ್ಯಾದಾ ಪುರುಷೋತ್ತಮ ಎಂಬಂತಹ ಮಾತುಗಳು ಶಾಸನಗಳಲ್ಲಿ ಮತ್ತೆ ಮತ್ತೆ ಅನುರಣಿತಗೊಳ್ಳುತ್ತವೆ.

ಮಾಲಿನಿ:– ನನಮಯಯಯುತೇಯಂ ಮಾಲಿನೀ ಭೋಗಿ ಲೋಕೈಃ

ಹದಿನೈದು ಅಕ್ಷರಗಳ ವೃತ್ತ ಪ್ರತಿ ಪಾದದಲ್ಲಿಯೂ ನಗಣ, ನಗಣ, ಮಗಣ, ಯಗಣ ಮತ್ತು ಯಗಣ ಇರುತ್ತದೆ(ಭಕ್ತಿ–ಧರ್ಮ–ದೇವರು ಪ್ರಧಾನವಾಗಿದ್ದ ಕಾಲದಲ್ಲಿ ದೇವತಾ ವರ್ಣನೆ ವಿಶೇಷ ಎನಿಸುತ್ತದೆ.). ಅಂತಹ ಸುಂದರವಾದ ಶಿವನ ವರ್ಣನೆಯು ಕ್ರಿ.ಶ. ೧೫೬೪ರ ಕುರುವಳ್ಳಿಯ ಶಾಸನದಲ್ಲಿ ಕವಿತಾ ಸಾಹಿತ್ಯ ಮೂಡಿಬಂದಿದೆ.

ಜಯತಿ। ಭುವನ। ತ್ರಾತಃಪೋ। ಷಿತಪ್ರಾ। ಣಿಜಾತಃ ।

ಸಕಲಹೃದಯ ಯಾತಃ ಸತ್ಕಟಾಕ್ಷ ಪ್ರಪಾತಃ

ಅಮರನಿಕರನಾಥ ಪ್ರಸ್ತುತೋರು ಪ್ರಗಾಧಃ
ಶಿರಸಿಶಶಿನಾಥ ಸ್ತ್ರಾಯತಾಂ ವಿಶ್ವನಾಥಃ ॥[೨]

ಜಗತ್ತಿಗೆ ತಂದೆಯಾಗಿರುವ ಎಲ್ಲಾ ಪ್ರಾಣಿಗಳನ್ನು ಪೋಷಿಸುತ್ತಿರುವ ಜನರ ಹೃದಯಗಳಲ್ಲಿ ನೆಲೆಸಿರುವ, ಕರುಣಾದೃಷ್ಟಿಯನ್ನು ಭಕ್ತರೆಡೆ ಬೀರುವ, ದೇವತೆಗಳಿಂದ ಪೂಜಿಸಲ್ಪಡುವ, ತಲೆಯ ಮೇಲೆ ಚಂದ್ರನಿಗೆ ಆಶ್ರಯವನ್ನು ಕೊಟ್ಟಿರುವ ವಿಶ್ವನಾಥನಾದ ಶಿವನು ನಮ್ಮನ್ನು ರಕ್ಷಿಸಲಿ ಎಂದಿದೆ. ಶೈವ ಧರ್ಮವೇ ಪ್ರಧಾನವಾಗಿದ್ದ ಆ ಕಾಲದಲ್ಲಿ ಶಿವನ ಹಲವಾರು ರೀತಿಯ ವರ್ಣನೆಗಳು ಶಾಸನಗಳಲ್ಲಿ ಅನಾವರಣಗೊಂಡಿವೆ.

ಉಪಜಾತಿಯ ಛಂದಸ್ಸಿನಲ್ಲಿ ಕಂಡುಬರುವ ಪ್ರಕೃತಿಯ ವರ್ಣನೆಗಳಲ್ಲಿ ಕೆಲವನ್ನಾದರೂ ಶಾಸನಕವಿ ವರ್ಣಿಸಲು ಅವಕಾಶ ಮಾಡಿಕೊಳ್ಳುತ್ತಾನೆ.

ಆದಿತ್ಯ ಚಂದ್ರವನಿಲೋನ ಲಶ್ಚೆ
ದ್ಯೌರ್ಭೂಮಿರಾಪೋಹೃದಯಂ ಯಮಶ್ಚ
ಅಹಶ್ಚ ರಾತ್ರಿಶ್ಚ ಉಭೇಚ ಸಂದ್ಯೇ
ಧರ್ಮಶ್ಚ ಜಾನಾತಿ ನರಸ್ಯವೃತ್ತಂ ।[೩]

ಸೂರ್ಯ, ಚಂದ್ರ, ವಾಯು ಅಗ್ನಿ, ಭೂಮಿ, ನೀರು, ಹೃದಯ, ಯಮ ದಿನರಾತ್ರಿ ಸಾಯಂಕಾಲ, ಧರ್ಮ ಇವಿಷ್ಟು ಮನುಷ್ಯನ ವ್ಯವಹಾರಗಳನ್ನು ತಿಳಿದುಕೊಂಡಿರುತ್ತವೆ ಎಂಬುದಾಗಿ ಹೇಳುತ್ತದೆ.

ವ್ಯಕ್ತಿ ಚಿತ್ರಣದ ಹೆಸರಿನ ಹಿನ್ನೆಲೆಯಲ್ಲಿ ವಸಂತತಿಲಕ ವೃತ್ತದಲ್ಲಿ ಜೈವಾತೃಕನೆಂಬುವವನ ಗುಣವನ್ನು ತೀರ್ಥಹಳ್ಳಿ ಶಾಸನವು ಕಟ್ಟಿಕೊಡುತ್ತದೆ.

ತಸ್ಮಾದುದನ್ವತ ಇವೇಂದುರುದಾರ ಕೀರ್ತಿ
ರ್ಜಾತಃ ಕಲಾವಲಿ ವಿಲಾಸ ನಿವಾಸ ಭೂಮಿಃ॥
ಜೈವಾತೃಕಃ ಕಲಿತ ಕೀರ್ತಿ ಕಲಾಪ ಚಂಚ
ಚಂದ್ರಾತಪೋ ವಿಜಯರಾಯ ಮಹೀಮಹೇಂದ್ರಃ ॥[೪]

ಚಂದ್ರನಂತೆ ಶುಭ್ರವಾದ ಕೀರ್ತಿಯುಳ್ಳ, ಸಕಲಕಲೆಗಳನ್ನು ಬಲ್ಲಂತಹ ಕಲಾ ಪ್ರಪಂಚದಲ್ಲಿ ಪ್ರಸಿದ್ಧನಾದ ಚಂದ್ರನಂತೆ ಶುಭ್ರ ತೇಜಸ್ಸನ್ನು ಹೊಂದಿದ ಜೈವತೃಕನೆಂಬುವವನು ಅವನ ಮಗನಾಗಿದ್ದನು. ಇಂತಹ ವ್ಯಕ್ತಿಯ ವರ್ಣನೆಗಳು ಶಾಸನಗಳಲ್ಲಿ ಪುನರಪಿ ಕಾಣಿಸಿಕೊಳ್ಳುತ್ತವೆ.

ವಸಂತ ತಿಲಕ:– ಉಕ್ತಾವಸಂತ ತಿಲಕಾ ತಭ ಜಾಜಗೌಗಃ

ತೂದೂರು ಶಾಸನದಲ್ಲಿ ಕವಿಯು ಗಣಪತಿಯನ್ನು ವರ್ಣನೆಯ ಮೂಲಕ ಕೊಂಡಾಡಿದ್ದಾನೆ. ಇದು ಹದಿನಾಲ್ಕು ಅಕ್ಷರಗಳ ವೃತ್ತ; ಪ್ರತಿಪಾದದಲ್ಲೂ ತಗಣ, ಭಗಣ, ಜಗಣ, ಜಗಣ ಮತ್ತು ಎರಡು ಗುರುಗಳು ಇವೆ.

ಪಾಯಾದ್ಗಜೇಂದ್ರವದನಃ ಸ ಇಮಾಂ ತ್ರಿಲೋಕೀಂ
ಯಸ್ಯೋದ್ಧೃತೇನ ಗಗನೇ ಮಹತಾಕರೇಣ।
ಮೂಲವಲಗ್ನಸಿ ತದಂತಬಿಸಾಂಕುರೇಣ
ನಾಳಾಯಿತಂ ತಪನಬಿಂಬ ಸರೋರುಹಸ್ಯ ॥[೬೨]

ಗಣಪತಿಯು ತನ್ನ ಸೊಂಡಿಲನ್ನು ಆಕಾಶದತ್ತ ಮೇಲಕ್ಕೆ ಬೀಸಿದಾಗ ಅದು ಕೆರೆಯಲ್ಲಿ ಪ್ರತಿಬಿಂಬವಾಗಿ ಕಮಲದ ನಾಳದಂತೆ ಕಾಣಿಸುತ್ತಿತ್ತು. ಕಮಲವನ್ನು ಸೂರ್ಯನಿಗೆ ಹಾಗೂ ಸೊಂಡಿಲನ್ನು ಕಮಲದ ನಾಳಕ್ಕೆ ಹೋಲಿಸಿರುವುದು ಕವಿಯ ಕಲ್ಪನೆ ಅದ್ಭುತವಾಗಿದೆ.

ಶಾಸನಸಾಹಿತ್ಯದಲ್ಲಿ ಕವಿಜನರು ವಿಪುಲವಾದ ಸಾಹಿತ್ಯರಾಶಿಯನ್ನು ಸೃಷ್ಟಿಸಿದ್ದಾರೆ. ಮೇಲ್ವರ್ಗವನ್ನು ತೃಪ್ತಿಪಡಿಸುವ ಉದ್ದೇಶದಿಂದ ಅವರನ್ನು ಸಾಹಿತ್ಯರೂಪದಲ್ಲಿ ವೈಭವೀಕರಿಸಿದ್ದಾರೆ. ದಾನಗಳನ್ನು ಪಡೆದವರು ಕೇವಲ ಪುರೋಹಿತರು ಹಾಗೂ ಬ್ರಾಹ್ಮಣ ವರ್ಗದವರಾಗಿದ್ದರಿಂದ ಅವರ ಸಂರಕ್ಷಣೆಗೆ ಧರ್ಮದಲ್ಲಿ ಶಾಪಾಶಯ ಮತ್ತು ಪುಣ್ಯಾಶಯಗಳನ್ನು ತಿಳಿಸುವುದರ ಮೂಲಕ ಕೇವಲ ಉಚ್ಚವರ್ಗಕ್ಕೆ ಪ್ರಾಧಾನ್ಯತೆ ನೀಡಿದರೇ ಹೊರತು ಕೆಳಸಮುದಾಯಗಳನ್ನು ವಿವಿಧ ಕಟ್ಟುಪಾಡುಗಳ ಮುಖೇನ ನಿರ್ಬಂಧಿಸುವುದರೊಂದಿಗೆ ಮೇಲ್ವರ್ಗದ ಹಿತವನ್ನು ಕಾಪಾಡುವುದರಲ್ಲಿ ಯಶಸ್ವಿಯಾದರು. ಇದಕ್ಕೆ ಪೂರಕವಾಗಿ ಶಾಸನವೊಂದರಲ್ಲಿ

ಎಕ್ಯೈವ ಭಗೀನಿ ಲೋಕೇ ಸರ್ವೆಷಾ
ಮೇವ ಭುಬುಜಾಂ । ನಭೊಗ್ಯಾನ
ಕರಗ್ರಹ್ಯಾ ವಿಪ್ರದತ್ತ ವ ಸುಂಧರಾ ॥[೬೩]

"ರಾಜರಿಗೆ ಈ ಲೋಕದಲ್ಲಿ ಒಬ್ಬಳೇ ತಂಗಿ. ಅದೆಂದರೆ ಬ್ರಾಹ್ಮಣರಿಗೆ ಕೊಟ್ಟಂಥ ಭೂಮಿ ಅದನ್ನು ಭೋಗಿಸಬಾರದು ಅಥವ ಅಪಹರಿಸಬಾರದು ಬ್ರಾಹ್ಮಣರ ಸಂಪತ್ತೆನ್ನುವುದು ವಿಷಕ್ಕಿಂತಲೂ ಅಪಾಯಕಾರಿ" ಎನ್ನುವುದರ ಮೂಲಕ ಪುರೋಹಿತಶಾಹಿ ವರ್ಗವನ್ನು ದೈವೀ ಮಟ್ಟಕ್ಕೇರಿಸಲು ಶಾಸನ ಕವಿಗಳೇ ಕಾರಣಕರ್ತರಾದರು. ಬ್ರಾಹ್ಮಣರಿಗೆ ನೀಡಿದ ದಾನವನ್ನು ಕೆಡಿಸಿದರೆ ಅಥವ ಅಪಹರಿಸಿದರೆ ಒದಗುವ ಕೇಡು ಮತ್ತು ಅವರಿಗೆ ಒದಗುವ ಪಾಪವನ್ನು ತಿಳಿಸುವುದರ ಮೂಲಕ ದಾನವನ್ನು ರಕ್ಷಿಸುವ ಹಾಗೆಯೇ ದಾನವನ್ನು ಕಾಪಾಡುವಂತೆ ಆಮಿಷ ಒಡ್ಡುವುದರ ಮೂಲಕ ದಾನ ನೀಡುವುದಕ್ಕಿಂತಲೂ, ನೀಡಿರುವ ದಾನವನ್ನು ಸಂರಕ್ಷಿಸುವುದರಿಂದಲೇ ಹೆಚ್ಚಿನ ಶ್ರೇಯಸ್ಸು ಲಭಿಸುತ್ತದೆ. ದಾನವಾಂ ಪಾಲಯೋರ್ಮದ್ಯೆ ದಾನ ಶ್ರೀಯೋನು ಪಾಲನುಂ ದಾನತ್ಸರ್ಗಮಾವಾಪ್ನೋತಿ ಪಾಲನಾದ ಚ್ಯುತಂ ಪದಂ, ದಾನ ಮಾಡುವುದರಿಂದ ಸ್ವರ್ಗವು ಲಭಿಸಿದರೆ ದಾನದ ಪಾಲನೆಯಿಂದ ಅಚ್ಯುತ ಪದವಿಯು ದೊರೆಯುತ್ತದೆ ಎನ್ನುವ ಅಂಶಗಳನ್ನು ಸೇರಿಸಲಾಯಿತು. ದಾನವನ್ನು ರಕ್ಷಿಸಿದರೆ ಕಾಶಿಯಲ್ಲಿ ಬ್ರಾಹ್ಮಣರನ್ನು, ಕಪಿಲೆಯನ್ನು ರಕ್ಷಿಸಿದಷ್ಟು ಪುಣ್ಯ ಲಭಿಸಿದಂತೆ ಎಂಬಂತಹ ಪುಣ್ಯಾಶ್ರಯವನ್ನು, ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡರೆ

ಬ್ರಾಹ್ಮಣರನ್ನು, ಕಪಿಲೆಯನ್ನು ಕೊಂದ ಪಾಪಕ್ಕೆ ಹೋಗುವವರು ಎಂಬಂತಹ ಶಾಪಾಶಯಗಳನ್ನು ಪರಿಶೀಲಿಸಿದಾಗ ಮೇಲೆ ಹೇಳಿದಂತೆ ಕೇವಲ ಒಂದು ಸಮುದಾಯವನ್ನು ಓಲೈಸುವ ಪ್ರಕ್ರಿಯೆಯನ್ನು ಶಾಸನಕವಿಗಳು ನಿರೂಪಿಸಿದರು ಎನ್ನಬಹುದು.

ಉಪಗೀತಿ: ಆರ್ಯಾ ಪದಾರ್ಥತುಲ್ಯೇ ದಲದ್ವಯೇ ಪ್ರಾಹುರುಪಗೀತಮ್ ।

ಇದರಲ್ಲಿ ನಾಲ್ಕು ಪಾದಗಳು; ಒಂದು ಮತ್ತು ಮೂರನೇ ಪಾದಗಳಲ್ಲಿ ೧೨ ಮಾತ್ರೆಗಳು ಎರಡು ಮತ್ತು ನಾಲ್ಕನೇ ಪಾದಗಳಲ್ಲಿ ಹದಿನೈದು ಮಾತ್ರೆಗಳು ಬರುವವು. ಕವಲೇದುರ್ಗ ಶಾಸನದಲ್ಲಿ ಉಪಗೀತಿಯ ವೃತ್ತವೊಂದು ಶಾಪಾಶಯವನ್ನು ತಿಳಿಸುವುದು.[೬]

ವೃತ್ತಿಛೇದ ವಿದೌ ದ್ವಿಜಾರ್ಥ (೧೨ ಮಾತ್ರೆಗಳು)
ಹರಣೇ ಮಿತ್ರಾಪದಾಂ ವಾರಣೇ (೧೫ ಮಾತ್ರೆಗಳು)
ಸಂಪ್ರಾಪ್ತಿ ಶರಣೆಕಳ (೧೨ ಮಾತ್ರೆಗಳು)
ತ್ರಹರಣೇ ಸ್ವಾಮ್ಯ ಕ್ಷಿಗೋಗ್ರಹೆ । (೧೫ ಮಾತ್ರೆಗಳು)

ಜೀವನೋಪಾಯದ ವೃತ್ತಿಯನ್ನು ಛೇದಿಸಿದಂತಹ, ಬ್ರಾಹ್ಮಣರ ಸಂಪತ್ತನ್ನು ಅಪಹರಿಸಿದಂತಹ, ಮಿತ್ರರುಗಳ ಆಪತ್ತುಗಳನ್ನು ನಿವಾರಿಸದೇ ಇರುವಂತಹ, ಸಂಪ್ರಾಪ್ತರಂತವರನ್ನೂ ರಕ್ಷಿಸದೇ ಇರುವಂತಹ, ಪರಸ್ತ್ರೀಯರನ್ನು ಅಪಹರಿಸಿರುವಂತಹ, ಭೂಮಿ ಗೋವುಗಳನ್ನು ಅಪಹರಿಸಿದಂತಹ ಶಾಪಕ್ಕೆ ತುತ್ತಾಗುವರು ಎಂಬಂತಹ ಶಾಪಾಶಯಗಳನ್ನು ವಿಧಿಸುವುದರ ಮೂಲಕ ಸಾಮಾಜಿಕ ವ್ಯವಸ್ಥೆಯನ್ನು ಕಟ್ಟುಪಾಡುಗಳ ಮೂಲಕ ಬಂಧಿಸುವ ಯತ್ನವನ್ನು ಕವಿಗಳು ಸಾಹಿತ್ಯದ ಮೂಲಕ ಮಾಡಿದರು.

ಶಾಸನಗಳಲ್ಲಿ ಯಥೇಚ್ಛವಾಗಿ ಸಾಹಿತ್ಯರಾಶಿಯನ್ನು ಉಣಬಡಿಸಿದ್ದಾರೆ. ಕೆಲವೊಂದು ಶ್ಲೋಕಗಳು ಹಾಗೂ ವೃತ್ತ ಛಂದಸ್ಸುಗಳು ಪುನರಾವರ್ತನೆಯಾಗಿವೆ. ಕೆಲವೊಂದು ಸಾಲುಗಳು ನೇರವಾಗಿ ಮನ ಮುಟ್ಟುವಂತಹವುಗಳು. ಬೊಮ್ಮಲಾಪುರದ ಶಾಸನದಲ್ಲಿ ಸೂರ್ಯಸ್ತುತಿಯಲ್ಲಿನ ತಪಂತಿ, ವರ್ಷಂತಿ ಮತ್ತು ಹಿಮಯಂತಿ ಎಂಬ ಶಬ್ದಗಳು ಪರಿಣಾಮಕಾರಿಯಾಗಿ ಮೂರು ಕಾಲಮಾನ ಗಳನ್ನು ಕ್ರಮವಾಗಿ ಬೇಸಗೆ, ಮಳೆಗಾಲ ಮತ್ತು ಚಳಿಗಾಲಗಳನ್ನು ಸಂಕೇತಿಸುತ್ತವೆ.

ಮಾಸ್ತಿಕಲ್ಲು ಮತ್ತು ವೀರಗಲ್ಲು ಶಿಲ್ಪಗಳಿಗೆ ಮಲೆನಾಡು ತವರುಮನೆ ಇದ್ದಂತೆ; ಅಕ್ಷರಸ್ಥ ಹೇಗೆ ಶಾಸನಗಳನ್ನು ತಿಳಿಯಲು ಸಾಧ್ಯವೋ ಅದೇ ರೀತಿ ಅನಕ್ಷರಸ್ಥನಾದವನು ತಿಳಿಯಲಿ ಎಂದು ಶಿಲ್ಪಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿರುವುದು ತಿಳಿಯುತ್ತದೆ. ಶಾಸನ ಶಿಲ್ಪಗಳು ಇಂದಿಗೂ ಅಚ್ಚಳಿಯದೇ ಇದ್ದು ಅವುಗಳು ಮೂಕಸಾಕ್ಷಿಯಾಗಿ ಚರಿತ್ರೆಯನ್ನು ಹೇಳುತ್ತವೆ. ಆಕಳು, ಕರು, ಸೂರ್ಯ, ಚಂದ್ರ ಮತ್ತು ದಾನಗಳನ್ನು ನಾಶ ಮಾಡಿದರೆ ದೊರೆಯುವ ಶಾಪಾಶಯವನ್ನೂ, ಜಿನ ಅಥವ ಶಿವಲಿಂಗಗಳ ಮುಂದೆ ಕುಳಿತಿರುವ ವ್ಯಕ್ತಿ ಮುಕ್ತಿಯನ್ನು ಪಡೆದ ಎಂಬುದನ್ನು ಸೂಕ್ಷ್ಮವಾಗಿ ತಿಳಿಸುತ್ತವೆ.

ಈ ರೀತಿಯಾಗಿ ಶಾಸನಗಳಲ್ಲಿ ಸಾಹಿತ್ಯ, ಸಾಹಿತ್ಯೇತರ ಅಂಶಗಳನ್ನು ಗಮನಿಸಬಹುದು. ಕಂದ, ವೃತ್ತಗಳು, ಖ್ಯಾತ ಕರ್ನಾಟಕ ವೃತ್ತಗಳು, ತ್ರಿಪದಿ, ಗದ್ಯ ಹೀಗೆ ಹಲವು ವಿಧವಾಗಿ ಬಳಕೆಯಾಗಿದ್ದು ಇಲ್ಲಿ ಕಿರುಸಾಹಿತ್ಯ ಕೃತಿಗಳು ಮೈತಳೆದಿವೆ. ಈ ಸಾಹಿತ್ಯ ಭಾಗಗಳ ಅಧ್ಯಯನದಿಂದ ಕನ್ನಡ ಸಾಹಿತ್ಯ ಚರಿತ್ರೆಯ ರಚನೆಗೆ ಹೊಸ ಹೊಸ ಪ್ರೇರಣೆಗಳು ದೊರಕುತ್ತವೆ.

೪.೫. ಯುದ್ಧವಾದ್ಯಗಳು

ಯುದ್ಧಗಳಿಗೆ ಹೊರಡುವಾಗ ಹಾಗೂ ಯುದ್ಧರಂಗದಲ್ಲಿ ಸೈನಿಕರಿಗೆ ಉತ್ಸಾಹ, ಹುಮ್ಮಸ್ಸು ತುಂಬಲು ನಾನಾ ಬಗೆಯ ವಾದ್ಯಗಳನ್ನು ಮೊಳಗಿಸುತ್ತಿದ್ದ ವರ್ಣನೆ ಅನೇಕ ಸಾಹಿತ್ಯಕೃತಿಗಳಲ್ಲಿ ಮತ್ತು ಶಾಸನಗಳಲ್ಲಿ ನಿರೂಪಿತಗೊಂಡಿವೆ. ವೀರಗಲ್ಲು ಶಿಲ್ಪಗಳಲ್ಲಿ ಸಾಕಷ್ಟು ಪ್ರಮಾಣದ ವಾದ್ಯಗಳ ಚಿತ್ರಣಗಳನ್ನು ಗುರುತಿಸಬಹುದಾಗಿದೆ. ಪಂಪನ ವಿಕ್ರಮಾರ್ಜುನವಿಜಯದಿಂದ ನಮಗೆ ಶಂಖ, ಕಹಳೆ, ಭೇರಿ, ಪಣವ, ಝಲ್ಲರಿ, ಮೃದಂಗ ಮುಂತಾದವುಗಳನ್ನು ಯುದ್ಧರಂಗದಲ್ಲಿ ಮೊಳಗಿಸುತ್ತಿದ್ದರೆಂದು ತಿಳಿಯುತ್ತದೆ. ಕುಮಾರರಾಮನ ಸಾಂಗತ್ಯದಿಂದ ಈ ಪಟ್ಟಿಯು ಇನ್ನೂ ವಿಸ್ತೃತ ರೂಪದಲ್ಲಿ ದೊರೆಯುತ್ತದೆ.[೬೮]

ಪ್ರಸ್ತುತ ಮಧ್ಯಮಲೆನಾಡಿನ ಹಲವಾರು ಪ್ರದೇಶಗಳಲ್ಲಿ ವೀರಮಾಸ್ತಿಗಲ್ಲು ಹಾಗೂ ವೀರಗಲ್ಲು ಶಿಲ್ಪಗಳಲ್ಲಿ ಹಲವಾರು ಸಂಗೀತವಾದ್ಯಗಳನ್ನು ಗುರುತಿಸಬಹುದು. ಚೀಪುಗೋಡು ವೀರಮಾಸ್ತಿಯಲ್ಲಿ ಸೈನಿಕನೊಬ್ಬ ಯುದ್ಧರಂಗದಲ್ಲಿ ಕಹಳೆಯನ್ನೂದುತ್ತಿರುವ ಶಿಲ್ಪವಿದೆ. ಕಬಸೆ ವೀರಗಲ್ಲಿನಲ್ಲಿ ಸೈನಿಕನೊಬ್ಬ ತಮಟೆ ಬಾರಿಸುತ್ತ, ಇನ್ನೊಬ್ಬ ಕಂಸಾಳೆ ಬಾರಿಸುವ, ಕೊಳಲನ್ನೂದುವವ, ಮೃದಂಗ ಬಾರಿಸುವವ, ಇನ್ನೊಬ್ಬ ನಾದಸ್ವರವನ್ನೂದುತ್ತ ಯುದ್ಧರಂಗಕ್ಕೆ ಸಾಗುತ್ತಿರುವ ಚಿತ್ರಣಗಳಿವೆ. ಹುಲಿಸರದ ಕಾಡಿನ ಮಧ್ಯೆ ಇರುವ ಸುಂದರವಾದ ವೀರಗಲ್ಲಿನ ಒಂದು ಸಾಲಿನಲ್ಲಿ ವೀರನನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಹೊತ್ತೊಯ್ಯುವ ಅಪ್ಸರೆಯರು ಮೃದಂಗ, ಜಾಗಟೆಯನ್ನು ಬಾರಿಸುತ್ತ ಸಾಗುತ್ತಿರುವ ಶಿಲ್ಪಗಳಿವೆ. ಇನ್ನೊಂದು ಸಾಲಿನಲ್ಲಿ ನೃತ್ಯ ಮಾಡುತ್ತಿರುವವರು ಮೃದಂಗ, ಚಕ್ರತಾಳ, ತುತ್ತೂರಿಯನ್ನು ಊದುತ್ತಿದ್ದಾರೆ. ಬೆಜ್ಜವಳ್ಳಿಯ ವೀರಮಾಸ್ತಿಯಲ್ಲಿ ವೀರನೊಬ್ಬ ಯುದ್ಧರಂಗದಲ್ಲಿ ತುತ್ತೂರಿಯನ್ನು ಊದುತ್ತಿದ್ದಾನೆ. ಸಿಂಹಾದ್ರಿಯ ಒಕ್ಕೈ ವೀರಮಾಸ್ತಿಯಲ್ಲಿ ಯುದ್ಧರಂಗದಲ್ಲಿರುವ ಸೈನಿಕರು ಮೃದಂಗವನ್ನು, ಕೆಲವರು ಕಹಳೆಯನ್ನೂದುತ್ತಿದ್ದಾರೆ.

ಮೀಗಾದ ಒಕ್ಕೈ ವೀರಮಾಸ್ತಿಯಲ್ಲಿ ದೊಡ್ಡದಾದ ವೀಣೆಯ ಚಿತ್ರವಿದ್ದು ಸತಿಯು ಸಂಗೀತ ಪ್ರಿಯೆ ಅಥವಾ ಹಾಡುಗಾರ್ತಿಯಾಗಿರಬಹುದು ಎಂಬುದು ಗೋಚರವಾಗುತ್ತದೆ. ಹರೂರು ವೀರಗಲ್ಲಿನಲ್ಲಿ ವೀರನನ್ನು ಪಲ್ಲಕ್ಕಿಯಲ್ಲಿ ಕೊಂಡೊಯ್ಯುವ ಅಪ್ಸರೆಯರು ಕಹಳೆಯನ್ನೂದುತ್ತ ಸಾಗುತ್ತಿರುವ ಚಿತ್ರಣವಿದೆ.

ಹೆದ್ದೂರಿನ ವೀರಗಲ್ಲಿನಲ್ಲಿ ಯುದ್ಧರಂಗದ ಮಧ್ಯೆ ಸೈನಿಕನೊಬ್ಬ ಕಹಳೆಯನ್ನೂದುವ ಚಿತ್ರ ಶುಭದ ಸಂಕೇತವಾಗಿದೆ. ಸೂರ್ಯ ದೇವಸ್ಥಾನದ ಸಿಡಿತಲೆ ವೀರಗಲ್ಲಿನಲ್ಲಿ ಪುರುಷನೊಬ್ಬ ಯುದ್ಧದ ಸಮಯದಲ್ಲಿ ಮೃದಂಗ ಬಾರಿಸುತ್ತಿರುವ ಚಿತ್ರಣವನ್ನು ಕಾಣಬಹುದು. ಅಗಳ ಬಾಗಿಲು ಶಾಸನವೊಂದರಲ್ಲಿ ಚಕ್ರವಾದ್ಯ ಎಂಬುದರ ಉಲ್ಲೇಖವಿದೆ.

ಯುದ್ಧವಾದ್ಯಗಳ ಬಗ್ಗೆ ವೀರಗಲ್ಲುಗಳಿಂದ ದೊರೆಯುವ ಮಾಹಿತಿ ಅತ್ಯಲ್ಪವೆಂದೇ ಹೇಳಬಹುದು. ಏಕೆಂದರೆ ವೀರಗಲ್ಲು ಪಾತದಲ್ಲಿ ಎಲ್ಲಿಯೂ ವಾದ್ಯಗಳ ಪ್ರಾಮುಖ್ಯತೆಯನ್ನು ವ್ಯಕ್ತಪಡಿಸಿಲ್ಲ. ಕೇವಲ ಶಿಲ್ಪಗಳ ಆಧಾರದಿಂದ ಅಂದಿನ ಕಾಲದ ವಾದ್ಯಗಳನ್ನು ಅವಲೋಕಿಸಬಹುದು. ವಾದ್ಯಕಾರರೆಲ್ಲರೂ ನಿರಾಯುಧರಾಗಿರುವಂತೆ, ಯುದ್ಧರಂಗದ ಮಧ್ಯೆ ಅಥವಾ ಅಂಚಿನಲ್ಲಿ ನಿಂತಿರುವಂತೆ ಚಿತ್ರಿತವಾಗಿರುವುದರಿಂದ ಬಹುಶಃ ಇವರನ್ನು ಯುದ್ಧದಲ್ಲಿ ಕೊಲ್ಲುತ್ತಿರಲಿಲ್ಲ.[೧೯] ಯುದ್ಧದ ಆರಂಭಕ್ಕೆ ಮತ್ತು ಯುದ್ಧದ ಅಂತ್ಯಕ್ಕೆ ಯಾವ ಬಗೆಯ ವಾದ್ಯವನ್ನು ಬಾರಿಸುತ್ತಿದ್ದರು ಎಂಬುದರ ಬಗೆಗೆ ಜಿಜ್ಞಾಸೆ ಇದೆ. 'ಧರ್ಮಕಹಳೆ' ಒಂದು ಬಗೆಯ ಕೊಂಬನ್ನು ಊದಿಸಿದರೆ, ಅದು ಯುದ್ಧ ನಿಲ್ಲುವುದಕ್ಕೆ ಸೂಚನೆ. 'ಕೂಚುನಗಾರಿ' ಎಂಬ ಒಂದು ಬಗೆಯ ನಗಾರಿಯನ್ನು ಬಾರಿಸಿದರೆ ಮುಂದಕ್ಕೆ ಹೊರಡಬೇಕೆಂದು ಸೂಚನೆ; ಹೀಗೆ ಹಲವಾರು ಸೂಚನೆಗಳಿಗಾಗಿ ಯುದ್ಧವಾದ್ಯಗಳು ಪಾಳೆಯಗಾರರ ಕಾಲದಲ್ಲಿದ್ದುವೆಂದು ಶ್ರೀ ಎಂ.ಎಸ್. ಪುಟ್ಟಣ್ಣನವರು ತಿಳಿಸುತ್ತಾರೆ.[೨೦]

ಕೊನೆ ಟಿಪ್ಪಣಿಗಳು

೧. ಎಕ ೧೨ ಕೊಪ್ಪ ೬, ಕ್ರಿ.ಶ. ೧೫೯೮.

೨. ಇದೇ, ತೀರ್ಥಹಳ್ಳಿ ೨೧೫ ಕ್ರಿ.ಶ. ೧೬೧೦.

೩. ಇದೇ, ಶೃಂಗೇರಿ ೭, ಕ್ರಿ.ಶ. ೧೬೯೫.

೪. ಇದೇ, ತೀರ್ಥಹಳ್ಳಿ ೨೦೦, ಕ್ರಿ.ಶ. ೧೪೦೭.

೫. ಇದೇ, ಶೃಂಗೇರಿ ೩೬, ಕ್ರಿ.ಶ. ೧೬೩೦.

೬. ಇದೇ, ಶೃಂಗೇರಿ ೩೯, ಕ್ರಿ.ಶ ೧೭೩೭.

೭. ಇದೇ, ೧೩ ತೀರ್ಥಹಳ್ಳಿ ೧೯೩, ಕ್ರಿ.ಶ. ೧೭೦೨.

೮. ಇದೇ, ತೀರ್ಥಹಳ್ಳಿ ೧೯೯, ಕ್ರಿ.ಶ. ೧೪೦೬.

೯. ಇದೇ, ತೀರ್ಥಹಳ್ಳಿ ೧೭೩, ಕ್ರಿ.ಶ. ೧೧೦೩.

೧೦. ಇದೇ, ತೀರ್ಥಹಳ್ಳಿ ೧೮, ಕ್ರಿ.ಶ. ೧೪೦೪.

೧೧. ಇದೇ, ತೀರ್ಥಹಳ್ಳಿ ೨೦, ಕ್ರಿ.ಶ. ೧೪೦೪.

೧೨. ಇದೇ, ತೀರ್ಥಹಳ್ಳಿ ೧೪೫, ಕ್ರಿ.ಶ. ೧೩೪೬.

೧೩. ಇದೇ, ತೀರ್ಥಹಳ್ಳಿ ೭೯, ಕ್ರಿ.ಶ. ೧೬೭೩.

೧೪. ಇದೇ, ತೀರ್ಥಹಳ್ಳಿ ೯೬, ಕ್ರಿ.ಶ.೧೬೬೨.

೧೫. ಇದೇ, ತೀರ್ಥಹಳ್ಳಿ ೧೧೫, ಕ್ರಿ.ಶ. ೧೪೨೪.

೧೬. ಇದೇ, ತೀರ್ಥಹಳ್ಳಿ ೧೧೬, ಕ್ರಿ.ಶ. ೧೫ನೇ ಶತಮಾನ.

೧೭. ಇದೇ, ತೀರ್ಥಹಳ್ಳಿ ೨೩, ಕ್ರಿ.ಶ. ೧೩೭೭.

೧೮. ಇದೇ, ತೀರ್ಥಹಳ್ಳಿ ೨೦೫, ಕ್ರಿ.ಶ. ೧೪೦೪.

೧೯. ಇದೇ, ತೀರ್ಥಹಳ್ಳಿ ೧೩೪, ಕ್ರಿ.ಶ. ೧೭೦೨.

೨೦. ಇದೇ, ತೀರ್ಥಹಳ್ಳಿ ೫, ಕ್ರಿ.ಶ. ೧೫೭೭.

೨೧. ಇದೇ, ಶೃಂಗೇರಿ ೧೪, ಕ್ರಿ.ಶ. ೧೬೦೩.

೨೨. ಇದೇ, ಕೊಪ್ಪ ೧೪, ಕ್ರಿ.ಶ. ೧೭೭೯.

೨೩. ಇದೇ, ಕೊಪ್ಪ ೨೫, ಕ್ರಿ.ಶ. ೧೩೭೮.

೨೪. ಇದೇ, ಕೊಪ್ಪ ೧೬, ಕ್ರಿ.ಶ. ೧೪೦೩.

೨೫. ಇದೇ, ತೀರ್ಥಹಳ್ಳಿ ೧೧೬, ಕ್ರಿ.ಶ. ೧೫ನೇ ಶತಮಾನ.

೨೬. ಪೂರ್ವೋಕ್ತ, ಮಂಜುನಾಥ ಸಿ.ಯು., ಪು.ಸಂ. ೩೫೮.

೨೭. ಇದೇ, ಶೃಂಗೇರಿ ೭೦, ಕ್ರಿ.ಶ. ೧೬೫೯.

೨೮. ಇದೇ, ಶೃಂಗೇರಿ ೭, ಕ್ರಿ.ಶ. ೧೬೯೫.

೨೯. ಇದೇ, ಶೃಂಗೇರಿ ೨೭, ಕ್ರಿ.ಶ. ೧೫೨೩.

೩೦. ಇದೇ, ಶೃಂಗೇರಿ ೨೮, ಕ್ರಿ.ಶ. ೧೫೨೩.

೩೧. ಎಕ ೧೨ ಕೊಪ್ಪ ೩೯, ಕ್ರಿ.ಶ. ೧೮೭೯.

೩೨. ಇದೇ, ಕೊಪ್ಪ ೧೧, ಕ್ರಿ.ಶ. ೧೫೮೮.

೩೩. ಇದೇ, ತೀರ್ಥಹಳ್ಳಿ ೨೧೫, ಕ್ರಿ.ಶ. ೧೬೧೦.

೩೪. ಇದೇ, ತೀರ್ಥಹಳ್ಳಿ ೧೮೦, ಕ್ರಿ.ಶ. ೧೫೬೦.

೩೫. ಇದೇ, ತೀರ್ಥಹಳ್ಳಿ ೧೪, ಕ್ರಿ.ಶ. ೧೫೭೩.

೩೬. ಇದೇ, ಕೊಪ್ಪ ೪೩, ಕ್ರಿ.ಶ. ೧೭೩೩.

೩೭. ಇದೇ, ತೀರ್ಥಹಳ್ಳಿ ೧೨, ಕ್ರಿ.ಶ. ೧೭೫೩–೫೪.

೩೮. ಇದೇ, ಶೃಂಗೇರಿ ೫, ಕ್ರಿ.ಶ. ೧೬೨೧.

೩೯. ಇದೇ, ತೀರ್ಥಹಳ್ಳಿ ೧೫೮, ಕ್ರಿ.ಶ. ೧೫೭೩.

೪೦. ಇದೇ, ತೀರ್ಥಹಳ್ಳಿ ೧೩೮. ಕ್ರಿ.ಶ. ೧೪೦೪.

೪೧. ಪೂರ್ವೋಕ್ತ, ಹೆಗಡೆ ರಾಜಾರಾಮ ಮತ್ತು ಶೆಟ್ಟರ್ ಅಶೋಕ (ಸಂ), ಪು.ಸಂ. ೨೯.

೪೨. ಹೆಗಡೆ ರಾಜಾರಾಮ, ಸಂಪಾದಕರು, ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. ೫೬.

೪೩. ಇದೇ, ಪು.ಸಂ. ೭೯.

೪೪. ಇದೇ, ತೀರ್ಥಹಳ್ಳಿ ೧೩೫, ಕ್ರಿ.ಶ. ೧೨೫೪.

೪೫. ಇದೇ, ತೀರ್ಥಹಳ್ಳಿ ೨೨೭, ಕ್ರಿ.ಶ. ೧೨೫೦.

೪೬. ಇದೇ, ತೀರ್ಥಹಳ್ಳಿ ೨೨೮, ಕ್ರಿ.ಶ. ೧೩ನೇ ಶತಮಾನ.

೪೭. ಇದೇ, ತೀರ್ಥಹಳ್ಳಿ ೧೨೯, ಕ್ರಿ.ಶ. ೧೪೩೨.

೪೮. ಇದೇ, ತೀರ್ಥಹಳ್ಳಿ ೨೫೫, ಕ್ರಿ.ಶ. ೧೫ನೇ ಶತಮಾನ.

೪೯. ಇದೇ, ತೀರ್ಥಹಳ್ಳಿ ೨೧೬, ಕ್ರಿ.ಶ. ೧೨–೧೩ನೇ ಶತಮಾನ.

೫೦. ಇದೇ, ತೀರ್ಥಹಳ್ಳಿ ೧೨೯, ಕ್ರಿ.ಶ. ೧೪೩೨.

೫೧. ಇದೇ, ತೀರ್ಥಹಳ್ಳಿ ೧೩೫, ಕ್ರಿ.ಶ. ೧೨೫೪.

೫೨. ಇದೇ, ತೀರ್ಥಹಳ್ಳಿ ೨೨೭, ಕ್ರಿ.ಶ. ೧೨೫೦.

೫೩. ಇದೇ, ತೀರ್ಥಹಳ್ಳಿ ೨೨೮, ಕ್ರಿ.ಶ. ೧೩ನೇ ಶತಮಾನ.

೫೪. ಇದೇ, ತೀರ್ಥಹಳ್ಳಿ ೧೭೭, ಕ್ರಿ.ಶ. ೧೪೬೮.

೫೫. ಇದೇ, ಶೃಂಗೇರಿ ೩೧, ಕ್ರಿ.ಶ. ೧೩೮೪.

೫೬. ಇದೇ, ತೀರ್ಥಹಳ್ಳಿ ೨೧೦, ಕ್ರಿ.ಶ. ೧೬೬೬.

೫೭. ಇದೇ, ತೀರ್ಥಹಳ್ಳಿ ೧೬೯, ಕ್ರಿ.ಶ. ೧೬೧೦.

೫೮. ಇದೇ, ಶೃಂಗೇರಿ ೩೧, ಕ್ರಿಶ ೧೩೮೪.

೫೯. ಇದೇ, ಶೃಂಗೇರಿ ೫, ಕ್ರಿ.ಶ. ೧೬೨೧.

೬೦. ಇದೇ ,ತೀರ್ಥಹಳ್ಳಿ ೨೧೫, ಕ್ರಿ.ಶ. ೧೬೧೦.

೬೧. ಇದೇ, ಶೃಂಗೇರಿ ೧, ಕ್ರಿ.ಶ. ೧೩೪೬.

೬೨. ಇದೇ, ತೀರ್ಥಹಳ್ಳಿ ೧೧೮, ಕ್ರಿ.ಶ. ೧೫೬೪.

೬೩. ಇದೇ, ಶೃಂಗೇರಿ ೨, ಕ್ರಿ.ಶ. ೧೬೦೩.

೬೪. ಇದೇ, ತೀರ್ಥಹಳ್ಳಿ ೧೫೫, ಕ್ರಿ.ಶ. ೧೪೬೩.

೬೫. ಇದೇ, ತೀರ್ಥಹಳ್ಳಿ ೧೬೯, ಕ್ರಿ.ಶ. ೧೩೬೭.

೬೬. ಇದೇ, ಶೃಂಗೇರಿ ೩೪, ಕ್ರಿ.ಶ. ೧೪೩೨.

೬೭. ಇದೇ, ತೀರ್ಥಹಳ್ಳಿ ೪೬, ಕ್ರಿ.ಶ. ೧೬೭೪.

೬೮. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.ಸಂ ೨೧೯, ೨೦೦೪.

೬೯. ಪೂರ್ವೋಕ್ತ: ಚಿದಾನಂದಮೂರ್ತಿ ಎಂ., ಪು.ಸಂ. ೨೭೮.

೭೦. ಪೂರ್ವೋಕ್ತ: ಶೇಷಶಾಸ್ತ್ರಿ ಆರ್., ಪು.ಸಂ. ೨೧೯.

ಅಧ್ಯಾಯ : ಐದು

ಶಾಸನಗಳಲ್ಲಿ ಮಹಿಳಾ ಸ್ಥಿತಿಗತಿ

ಅಧ್ಯಾಯ : ಐದು

ಶಾಸನಗಳಲ್ಲಿ ಮಹಿಳಾ ಸ್ಥಿತಿಗತಿ

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀ ಮತ್ತು ಪುರುಷರಿಬ್ಬರು ಅವಶ್ಯ ಮತ್ತು ಅನಿವಾರ್ಯ ಘಟಕಗಳು. ಇವರಿಬ್ಬರೂ ಸಮಾಜದ ಕೇಂದ್ರಬಿಂದು. ದೇಹಕ್ಕೆ ಎರಡು ಕಣ್ಣುಗಳು ಹೇಗೆ ಅಗತ್ಯವೋ ಹಾಗೆಯೇ ಸಮಾಜಕ್ಕೆ ಸ್ತ್ರೀಯರು-ಪುರುಷರು ಕೂಡ. ಕೌಟುಂಬಿಕ ನೆಲೆಯಲ್ಲಿ ಆಕೆ ಪುರುಷನಿಗೆ ಮಡದಿಯಾಗಿ ಮಾತೆಯಾಗಿ, ಅನೇಕ ಮೌಲ್ಯಯುತ ಪಾತ್ರಗಳನ್ನು ನಿರ್ವಹಿಸುತ್ತಿದ್ದಾಳೆ. ಸ್ತ್ರೀ ಕೌಟುಂಬಿಕ ಮತ್ತು ಸಾಮಾಜಿಕ ರಂಗಗಳಲ್ಲಿ ತನ್ನದೇ ಆದಂತಹ ಬದುಕಿನ ನೆಲೆಯನ್ನು ಕಂಡುಕೊಂಡಿರುವುದು ಕುತೂಹಲಕಾರಿ ಸಂಗತಿಯಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರಿಗಿದ್ದ ಅಲ್ಪಾವಕಾಶಗಳಲ್ಲಿ ತನ್ನ ಸಾಮರ್ಥ್ಯ ಮತ್ತು ಪ್ರೌಢಿಮೆಯನ್ನು ಹೇಗೆ ವ್ಯಕ್ತಪಡಿಸಿದಳು ಎಂಬುದನ್ನು ಶಾಸನಗಳು ನಿರೂಪಿಸುತ್ತವೆ.

ಭಾರತೀಯ ಸಮಾಜದಲ್ಲಿ ಸ್ತ್ರೀಯು ಅತ್ಯಂತ ಉನ್ನತ ಪ್ರಾಧಾನ್ಯತೆಯನ್ನು ಋಗ್ವೇದದ ಕಾಲದಲ್ಲಿ ಕಂಡುಕೊಂಡಿದ್ದು ನಂತರದ ಕಾಲದಲ್ಲಿ ಕ್ರಮೇಣವಾಗಿ ಸಮಾಜದಲ್ಲಿ ದ್ವಿತೀಯ ದರ್ಜೆಯ ಪ್ರಜೆಯಾಗಿ ತನ್ನ ಅಸ್ತಿತ್ವವನ್ನು ಕಂಡುಕೊಂಡಳು. ಪುರುಷ ಆಕೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಹಲವಾರು ಹುನ್ನಾರಗಳನ್ನು ನಡೆಸಿದನು. 'ನಾಸ್ತ್ರೀ ಸ್ವಾತಂತ್ರಂ ಅರ್ಹತಿ' ಎಂಬ ಉಕ್ತಿಯಂತೆ ಆಕೆಯನ್ನು ಪುರುಷ ತನ್ನ ರಕ್ಷಣೆಯಲ್ಲಿರುವಂತೆ ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎನ್ನುತ್ತಾ ಆಕೆಯನ್ನು ನಿರ್ಬಂಧಗಳಲ್ಲಿ ಬಂಧಿಸುವ ಪ್ರಯತ್ನವನ್ನು ಮಾಡತೊಡಗಿದನು.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀ ಜೀವನ ಹಲವಾರು ಏರಿಳಿತಗಳನ್ನು ಕಂಡಿದೆ. ಸಿಂಧೂ ನಾಗರಿಕತೆಯ ಕಾಲದಲ್ಲಿ ಮಾತೃಪ್ರಧಾನ ಕುಟುಂಬ ಇತಿಹಾಸವನ್ನು ಕಾಣಬಹುದು. ಇಲ್ಲಿ ಭಗ್ನಾವಶೇಷಗಳಿಂದ ಕೂಡಿದ ಮಾತೃಮೂರ್ತಿಗಳು ಲಭಿಸಿವೆ. ಪುರುಷಪ್ರಧಾನ ಆರ್ಯ ಸಂಸ್ಕೃತಿಯ ಆರಂಭದೊಂದಿಗೆ ಇಲ್ಲಿನ ಸ್ತ್ರೀಯರ ಸ್ಥಾನಮಾನದಲ್ಲಿ ಪಲ್ಲಟವುಂಟಾಗ ತೊಡಗಿದಾಗ ಅವರು ತಮ್ಮ ಸ್ವತಂತ್ರ ವ್ಯಕ್ತಿತ್ವವನ್ನು ಕಳೆದುಕೊಂಡರು. ಕರ್ನಾಟಕದಲ್ಲಿ ಹನ್ನೆರಡನೇ ಶತಮಾನದ ಸಮಾಜೋ-ಧಾರ್ಮಿಕ ಆಂದೋಲನವು ಸಮಾಜದಲ್ಲಿ ಒಂದು ಪುನಶ್ಚೇತನ ತರುವ ಪ್ರಯತ್ನ ಮಾಡಿತು. ಶಾಸನಗಳಲ್ಲಿ ಬಿಂಬಿತವಾಗಿರುವ ಸ್ತ್ರೀಯರ ಬದುಕಿನ ಎಳೆಗಳಿಗೂ

ಸಾಮಾಜಿಕ ವ್ಯವಸ್ಥೆಗೂ ಸಂಬಂಧವಿದೆ. ಸಾಮಾಜಿಕ ರೂಢಿಗಳನ್ನು, ನಡವಳಿಕೆಗಳನ್ನು ಸಾಹಿತ್ಯ, ಶಾಸನಗಳು, ನೀತಿ ಸಂಹಿತೆಗಳು ಪ್ರತಿಬಿಂಬಿಸುತ್ತವೆ ಮತ್ತು ಪುನರ್‌ಸೃಷ್ಟಿಸುತ್ತವೆ. ಆ ಮೂಲಕ ವ್ಯಕ್ತವಾಗುವ ಸ್ತ್ರೀತ್ವದ ಪರಿಕಲ್ಪನೆಯ ಆಯಾಮಗಳು ಯಾವುವು? ಶಾಸನಗಳು ಕಟ್ಟಿಕೊಡುವ ಸ್ತ್ರೀ ಸಮಾಜದ ವಿವಿಧತೆ ಎಂಥದ್ದು? ಅಂತಹ ಸ್ತ್ರೀಜಗತ್ತು ನಿರ್ಮಾಣವಾಗುವುದರ ಹಿಂದಿನ ಒತ್ತಡಗಳೇನು? ಹೀಗೆ ರೂಪಿತಗೊಂಡ ಸ್ತ್ರೀಯರ ಬದುಕು ಮತ್ತು ಸಾಮಾಜಿಕ ಸಂಬಂಧಗಳು ಎಂಥವು? ವಿವಿಧ ಕಾಲಘಟ್ಟಗಳಲ್ಲಿ ಬದಲಾದ ಸಾಮಾಜಿಕ ಮೌಲ್ಯಗಳು ಸ್ತ್ರೀ ಸಮಾಜದಲ್ಲಿ ಉಂಟುಮಾಡಿದ ಏರುಪೇರುಗಳು, ಸಂಭ್ರಮ, ಸಂಘರ್ಷ, ಸಂಚಲನೆಗಳೇನು? ಎಂಬುದನ್ನು ಅರಿಯುವ ಅಗತ್ಯವಿದೆ. ಸಮಾಜದಲ್ಲಿ ಒಪ್ಪಿತವಾದ ಪರಿಚಿತ ಸ್ತ್ರೀಯ ಜೀವನ ಮೌಲ್ಯಗಳನ್ನೇ, ಮಾದರಿಗಳನ್ನೇ ಶಾಸನಗಳು ಬಿಂಬಿಸಿವೆ. ವಿವಾಹದ ಸಂಸ್ಥೆ ಹಾಗೂ ಸ್ತ್ರೀ ಪುರುಷ ಸಂಬಂಧವೇ ಕೇಂದ್ರಬಿಂದುವಾಗಿ ಇಲ್ಲಿನ ಸ್ತ್ರೀ ಚಿತ್ರಣ ಅದರ ಸುತ್ತ ಸುತ್ತುವುದನ್ನು ಕಾಣುತ್ತೇವೆ.

ಕೌಟುಂಬಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಸಾಂಪ್ರದಾಯಿಕ ಚಟುವಟಿಕೆಗಳಲ್ಲಿ ಸ್ತ್ರೀಯರು ತೊಡಗಿಕೊಂಡಿರುವುದನ್ನು ಇಲ್ಲಿನ ಶಾಸನಗಳು ಉಲ್ಲೇಖಿಸಿವೆ. ಸ್ತ್ರೀತ್ವದ ನಿಷ್ಕರ್ಷೆಯಲ್ಲಿ ತಾಯ್ತನವು ಬಹಳ ಪ್ರಮುಖ ಸ್ಥಾನ ಪಡೆದಿದೆ. ಆದರೆ ಈ ತಾಯ್ತನವು ಕುಟುಂಬದಲ್ಲಿ ವಿವಾಹದ ಚೌಕಟ್ಟಿನೊಳಗಿದ್ದಾಗ ಅದಕ್ಕೆ ಪುರಸ್ಕಾರವಿರುತ್ತಿತ್ತು. ತಾಯಿಯರ ಹೆಸರಿನಲ್ಲಿ ದೊರೆಗಳು, ಅಧಿಕಾರಿಗಳು, ಸಿರಿವಂತರು ಹಲವು ಗ್ರಾಮಗಳನ್ನು ನಿರ್ಮಾಣ ಮಾಡಿ ಗೌರವ ಸಲ್ಲಿಸಿದ್ದಾರೆ. ಸೋದರಿಯರಾಗಿ ಒಡಹುಟ್ಟಿದವರಿಗೆ ಗೌರವ ಸಲ್ಲಿಸಿದ್ದಾರೆ. ದೇವಾಲಯಗಳನ್ನು ನಿರ್ಮಾಣ ಮಾಡಿದ್ದಾರೆ. ಅದೇ ರೀತಿ ಬಹುಪತ್ನಿತ್ವದ ಒತ್ತಡಗಳಿಗೆ ಸಿಕ್ಕಿ ತಮ್ಮ ಅಸ್ಮಿತೆಯನ್ನು ಪಡೆದುಕೊಳ್ಳಲು ಹೆಣಗಿದ್ದಾರೆ. ಪಟ್ಟದ ಕುವರರನ್ನು ಹಡೆದುಕೊಡಲಾರದಕ್ಕಾಗಿ ಮೂಲೆ ಗುಂಪಾಗಿದ್ದಾರೆ. ಆ ಭಾಗ್ಯ ಪಡೆದವರಷ್ಟೇ ಮತ್ತೆ ಮತ್ತೆ ಹೊಗಳಿಕೆಗೆ ಪಾತ್ರರಾಗಿದ್ದಾರೆ. ಗಂಡನನ್ನು ಕಳೆದುಕೊಂಡು ಪಾತಿವ್ರತಕ್ಕಾಗಿ ಮಹಾಸತಿಯರಾಗಿದ್ದಾರೆ. ಸತಿಯಾಗದೇ ಗಂಡನ ಸ್ಮಾರಕ ನಿಲ್ಲಿಸಿ ಗೌರವ ಸೂಚಿಸಿದ್ದಾರೆ. ಮದುವೆಯಾಗಿ ಗಂಡನ ಸಾಲಕ್ಕೆ ಬಾಧ್ಯಸ್ಥಳಾಗಿದ್ದಾಳೆ. ಗಂಡನ ಸಾವಿನ ನಂತರ ಸ್ಥಾನಮಾನ ಒಡೆತನಕ್ಕಾಗಿ ಹೋರಾಟ ಮಾಡಿ ಪಡೆದಿದ್ದಾಳೆ. ವಿಧವೆಯಾದರೂ ರಾಜಪ್ರಭುತ್ವದ, ಅಧಿಕಾರಿ ವರ್ಗದ ಜೊತೆ ಆಡಳಿತಾತ್ಮಕ, ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡವರಿದ್ದಾರೆ. ಕುಲಸ್ತ್ರೀ, ಪುಣ್ಯಸ್ತ್ರೀ ಎನಿಸಿ ಸಂಭ್ರಮಿಸಿದವರಿದ್ದಾರೆ. ಪಾತ್ರದವರಾಗಿ, ವೇಶ್ಯೆಯರಾಗಿ, ಪುರುಷರ ಭೋಗವಸ್ತುವಾದುದಲ್ಲದೇ ಅವರ ದ್ವೇಷಾಸುಯೆಗಳಿಗೆ ಸಿಕ್ಕಿ ಸಾವಿಗೂ ಕಾರಣರಾಗಿದ್ದಾರೆ. ದೇವಾಲಯ, ಕೆರೆ - ಕಟ್ಟೆಗಳನ್ನು ನಿರ್ಮಿಸುವಷ್ಟು ಆರ್ಥಿಕ ಸಬಲತೆ ಮತ್ತು ಸ್ವಾತಂತ್ರ್ಯ ಇದ್ದ ಸ್ತ್ರೀಯರು ಪುಣ್ಯಕ್ಕಾಗಿ ಹಂಬಲಿಸುವ ಸ್ತ್ರೀಯರನ್ನು ಇಲ್ಲಿನ ಶಾಸನಗಳಲ್ಲಿ ಕಾಣಬಹುದು. ಸಾಮಾನ್ಯ ವರ್ಗದ ಸ್ತ್ರೀಯರು ಕೃಷಿಕರಾಗಿ, ಮಾಲೆಗಾರ್ತಿಯರಾಗಿ, ತೈಲಿಗ ಸ್ತ್ರೀಯರಾಗಿ, ಪರಿಚಾರಕಿಯರಾಗಿ, ಅರಮನೆಯ ಸೇವಕರಾಗಿ ಹಾಗೂ ವಿವಿಧ ವಾದ್ಯಗಳನ್ನು ನುಡಿಸುವ ಸಂಗೀತಗಾರ್ತಿಯರಾಗಿ (ಉದಾಹರಣೆಗೆ ಸಿಂಹಾದ್ರಿಯ ವೀರಗಲ್ಲಿನಲ್ಲಿ ಮಹಿಳೆಯರು

ವಾದ್ಯಗಳನ್ನು ನುಡಿಸುತ್ತಿರುವರು) ವೀರ ಮತ್ತು ಸತಿಯನ್ನು ಪಲ್ಲಕ್ಕಿಯಲ್ಲಿ ಹೊತ್ತೊಯ್ಯುವ ಸ್ತ್ರೀಯರಾಗಿ ಸಮಾಜದ ಎಲ್ಲಾ ಕ್ಷೇತ್ರದಲ್ಲೂ ಕಾಣಿಸಿಕೊಂಡಿದ್ದಾರೆ.

ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂದು ಮನು ಹೇಳಿದ್ದರೂ ಮಧ್ಯಮಲೆನಾಡಿನ ಮಟ್ಟಿಗೆ ಕೆಲವು ಸ್ತ್ರೀಯರು ಸ್ವಾತಂತ್ರ್ಯವನ್ನು ಪಡೆದು ಉತ್ತಮ ಆಡಳಿತಗಾರ್ತಿಯರಾಗಿರುವ ಸತ್ಯವನ್ನು ಶಾಸನಗಳು ಹೇಳುತ್ತವೆ. ಮಲೆನಾಡಿನ ರಾಣಿಯರಿಗೆ ದೊರೆತ ಅವಕಾಶದಿಂದ ಅವರು ರಾಜಕೀಯ, ಧಾರ್ಮಿಕ, ಆಡಳಿತ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಪಡೆದಿದ್ದರು ಎನ್ನಬಹುದು.

ಮಧ್ಯಮಲೆನಾಡಿನ ಶಾಸನಗಳಲ್ಲಿ ಮಹಿಳೆಯ ಸ್ಥಿತಿ ಹಾಗೂ ಉಲ್ಲೇಖ ಅತ್ಯಲ್ಪ ಪ್ರಮಾಣವೆಂದೇ ಪರಿಗಣಿಸಬಹುದು. ಆಕೆಯ ಸರ್ವತೋಮುಖ ಜೀವನ ವಿಧಾನ ಶಾಸನಗಳಲ್ಲಿ ಅಭಿವ್ಯಕ್ತವಾಗಿ ರುವುದು ಕೊರತೆಯ ವಿಚಾರವಾಗಿದ್ದರೂ, ಶಾಸನಗಳನ್ನು ತಲಸ್ಪರ್ಶಿಯಾಗಿ ಮಾಡಿದರೆ ವಾಸ್ತವ ಅಂಶಗಳನ್ನು ಗುರುತಿಸಬಹುದು.

ಇಲ್ಲಿನ ಶಾಸನಗಳಲ್ಲಿ ವಿಶೇಷವಾಗಿ ಮೇಲ್ವರ್ಗದ ಮಹಿಳೆಯರು ಮತ್ತು ರಾಣಿಯರು ದೇವಸ್ಥಾನ ಮಠಗಳ ನಿರ್ಮಾಣ ಮತ್ತು ಜೀರ್ಣೋದ್ದಾರ ಮಾಡಿದ ಉಲ್ಲೇಖವಿದ್ದರೆ, ಸಾಮಾನ್ಯ ಸ್ತ್ರೀಯರ ಪಾತ್ರ ಬಹಳ ಕಡಿಮೆ ಎಂದೇ ಹೇಳಬಹುದು. ಸಮಾಜದಲ್ಲಿ ಚಾತುರ್ವರ್ಣ ವ್ಯವಸ್ಥೆಯನ್ನು ಶಾಸನಗಳು ನಿರೂಪಿಸುತ್ತವೆ. ಶಾಸನವೊಂದರಲ್ಲಿ 'ಎಂಜಲು ತೆಗೆವ ಶೂದ್ರ್ರತಿ' ಎಂಬ ಉಲ್ಲೇಖವಿದ್ದು[೧] ಶೂದ್ರ ಸ್ತ್ರೀಯರ ಬದುಕು ಹೇಗಿತ್ತು ಎಂಬ ವಿಷಯ ಮನವರಿಕೆ ಯಾಗುತ್ತದೆ.

೫.೧. ಬಾಲ್ಯ ಮತ್ತು ವಿದ್ಯಾಭ್ಯಾಸ

ಸ್ತ್ರೀ ಸ್ವಾತಂತ್ರ್ಯ ಹಾಗೂ ಗೌರವವನ್ನು ಸಂಪಾದಿಸಿದ್ದು ಕ್ರಮೇಣ ನಂತರ ವೈದಿಕ ಕಾಲದಲ್ಲಿ ಪ್ರಾಧಾನ್ಯತೆಯನ್ನು ಕಳೆದುಕೊಂಡು, ಪುರುಷ ಪ್ರಧಾನವಾಗಿ ಸಮಾಜದಲ್ಲಿ ಗೋಚರಿಸಿಕೊಂಡ. ಈ ಹೊತ್ತಿಗೆ ಸ್ತ್ರೀ ಎನ್ನುವವಳು ವೇದಾಧ್ಯಯನಕ್ಕೆ, ಧಾರ್ಮಿಕ ಕ್ರಿಯೆಗಳಿಗೆ, ಉಪನಯನಕ್ಕೆ ಅನರ್ಹಳಾಗಿ, ಕೌಟುಂಬಿಕ ನೆಲೆಯಲ್ಲಿ ಕೇವಲ ಅಲಂಕಾರಿಕ ವಸ್ತುವಾಗಿ ಮಾರ್ಪಟ್ಟಳು. ಗಂಡು ಮಗುವಿನ ಜನನವನ್ನು ಉತ್ಸಾಹದಿಂದ ನಿರೀಕ್ಷಿಸುತ್ತಿದ್ದರೇ ಹೊರತು ಹೆಣ್ಣು ಮಗುವಿಗಾಗಿ ಸ್ವಾಗತಿಸುತ್ತಿದುದು ಕಂಡುಬರುವುದಿಲ್ಲ. ಒಂದು ಶಾಸನದಲ್ಲಿ ಶಂಕರಾಚಾರ್ಯ ಎನ್ನುವನು ಕೊಪ್ಪದೀಶ್ವರ ಪಾದಾಂಬುಜವನ್ನು ಅರ್ಪಿಸಿ, ಮಡದಿಯೊಂದಿಗೆ ವ್ರತನಿಯಮಗಳನ್ನು ಮಾಡಿ ಆ ದೇವರ ವರಪ್ರಸಾದದಿಂದ ಕೊಪ್ಪದೇವನೆಂಬ ಮಗನನ್ನು ಪಡೆದ ವಿಷಯ ಬರುತ್ತದೆ.[೨] ತಮ್ಮ ಸಾವಿನ ನಂತರ ತಮಗೂ ತಮ್ಮ ಪಿತೃಗಳಿಗೂ ಪಿಂಡವನ್ನು ಹಾಕುವ ಅಧಿಕಾರ ಪುತ್ರನಿಗೆ ಮಾತ್ರ, ಅಲ್ಲದೆ ತಂದೆ ಮಾಡಿದ ಧರ್ಮವನ್ನು ಕಾಪಾಡಿಕೊಂಡು ಬರುವವನು ಗಂಡುಮಗನೇ, ಸುಪುತ್ರನನ್ನು 'ಕುಲದೀಪಕ' ಎಂದು ಶಾಸನಗಳು ಕರೆದಿವೆ.[೩] ನಾರ್ವೆಯ ಆತ್ಮಬಲಿ ವಿಗ್ರಹದಲ್ಲಿ ಸೇವಕನು ಒಡೆಯನಿಗೆ ಗಂಡು ಮಗುವಾದರೆ

ಶಿರವನ್ನರ್ಪಿಸುವುದಾಗಿ ಹರಕೆ ಹೊತ್ತನು. ಅದರಂತೆ ಒಡೆಯನಿಗೆ ಗಂಡು ಮಗುವಾದಾಗ ತನ್ನ ಶಿರಚ್ಛೇದನ ಮಾಡಿದ ಬಗ್ಗೆ ವಿವರಣೆ ಹಾಗೂ ಐತಿಹ್ಯವಿದೆ. ಗಂಡು ಮಗುವಿಗಾಗಿ ಹಾರೈಸಿಯೇ ಗರ್ಭಿಣಿಗೆ ಸೀಮಂತ ಕಾರ್ಯ ಅಸ್ತಿತ್ವಕ್ಕೆ ಬಂದಿರುವುದು.[೪]

ಸ್ತ್ರೀಯರ ವಿದ್ಯಾಭ್ಯಾಸವನ್ನು ಅಂದಿನ ಕಾಲದಲ್ಲಿ ಅವಲೋಕಿಸಿದಾಗ ಹಲವಾರು ಏರುಪೇರುಗಳನ್ನು ಕಾಣಬಹುದು. ವೇದ ಯುಗದಲ್ಲಿ ಸ್ತ್ರೀ-ಪುರುಷರಿಬ್ಬರೂ ಸಾಮೂಹಿಕವಾಗಿ ಶಿಕ್ಷಣ ಪಡೆದುಕೊಂಡಿದ್ದು, ಸತಿಯರು ವೈದಿಕ ಮಂತ್ರಗಳನ್ನು ರಚಿಸುವಷ್ಟು ಪಾಂಡಿತ್ಯವನ್ನು ಪಡೆದುಕೊಂಡಿದ್ದು ಕಾಲಕ್ರಮೇಣ ವಿದ್ಯೆಯಿಂದ ವಿಮುಖರಾಗುವ ಹಂತಕ್ಕೆ ಬಂದು ನಿಂತರು. ಸ್ತ್ರೀಯರು ಉಪನಯನದಿಂದ ವಂಚಿತರಾಗಿದ್ದು ಮತ್ತು ಮದುವೆಯ ವಯಸ್ಸು ಹದಿನಾರರಿಂದ ಹತ್ತು ಅಥವಾ ಹನ್ನೊಂದಕ್ಕೆ ಇಳಿದಿದ್ದು" ಅವರ ವಿದ್ಯಾಭ್ಯಾಸದ ಹಿನ್ನಡೆಗೆ ಬಹುದೊಡ್ಡ ಕಾರಣಗಳಾಗಿ ಪರಿಣಮಿಸಿದವು.[೫]

ಮಧ್ಯಮಲೆನಾಡಿನ ಅನೇಕ ರಾಣಿಯರು ಮತ್ತು ಉನ್ನತ ವರ್ಗದ ಸ್ತ್ರೀಯರು ವಿದ್ಯಾವಂತರಾಗಿದ್ದರು ಎಂಬುದಕ್ಕೆ ಅವರ ದೀರ್ಘಕಾಲದ ಆಡಳಿತ ವೈಖರಿಯೇ ಪ್ರಧಾನ ಅಂಶವಾಗಿ ಗೋಚರವಾಗುವುದು. ಕೆಳವರ್ಗದ ಸ್ತ್ರೀಯರು ವಿದ್ಯಾಭ್ಯಾಸದಿಂದ ವಂಚಿತರಾಗಿದ್ದರು ಎನ್ನುವುದಕ್ಕೆ ಶಾಸನದಲ್ಲಿ ಸ್ತ್ರೀಸಾಮಾನ್ಯಳು ಯಾವುದೇ ರೀತಿಯ ಆಡಳಿತ ಹಾಗೂ ಸಾಮಾಜಿಕ ವಲಯದಲ್ಲಿ ತನ್ನ ಬದುಕಿನ ನೆಲೆಯನ್ನು ಕಂಡುಕೊಂಡಿದ್ದು ವ್ಯಕ್ತವಾಗುವುದಿಲ್ಲ. ಈ ಭಾಗದ ಬಹುಪಾಲು ಪ್ರದೇಶಗಳನ್ನು ದೀರ್ಘಕಾಲದವರೆಗೆ ಆಳಿದ ಕೆಳದಿರಾಣಿ ಚೆನ್ನಮ್ಮಾಜಿ, ಕಳಸ-ಕಾರ್ಕಳ ಭೈರರಸ ಒಡೆಯರ ರಾಣಿ, ಬಗ್ಗುಂಜಿ ಸೀಮೆಯನ್ನಾಳುತ್ತಿದ್ದ ಕಾಳಲಮಹಾದೇವಿ, ಸಾಂತರರ ರಾಣಿಯರಾದ ಜಾಗಲದೇವಿ ಹಾಗೂ ಚಟ್ಟಲದೇವಿಯರು ರಾಜ್ಯದ ಆಡಳಿತ ವಿಷಯಗಳಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರಕಟಿಸಿರುವುದನ್ನು ನೋಡಿದರೆ ಅವರಿಗೆ ಅದಕ್ಕೆ ಅಗತ್ಯವಾದ ಶಿಕ್ಷಣ ಲಭ್ಯವಾಗಿದ್ದಿತ್ತೆಂದು ಗ್ರಹಿಸಬೇಕಾಗುತ್ತದೆ.

ಮಹಿಳೆಯರ ಶಿಕ್ಷಣದ ಬಗ್ಗೆ ಶಾಸನಗಳಲ್ಲಿ ಹೆಚ್ಚಿನ ಮಾಹಿತಿ ಲಭಿಸುವುದಿಲ್ಲ. ಪುರೋಹಿತಶಾಹಿಯ ಕಟ್ಟುಕಟ್ಟಳೆಗಳಿಂದಾಗಿ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಬೇಕಾಯಿತು. ವಿದ್ಯಾಭ್ಯಾಸಕ್ಕೆ ಬಿಟ್ಟಿರುವ ದಾನ-ದತ್ತಿಗಳು ಪುರುಷ ಶಿಕ್ಷಣಕ್ಕೆ ಮೀಸಲಾಗಿದ್ದವು. ಪ್ರಭು ವರ್ಗದ ಮಹಿಳೆಯರು ಶಿಕ್ಷಣವನ್ನು ಹೊಂದಿರುತ್ತಿದ್ದರೂ ಅದು ಹೆಚ್ಚಾಗಿ ಸಂಗೀತ, ನೃತ್ಯಗಳಿಗೆ ಸೀಮಿತವಾಗಿರುತ್ತಿತ್ತು. ವೈದಿಕ ಧರ್ಮಗ್ರಂಥಗಳು ಸಂಗೀತಕ್ಕೆ ಅಧಿಕೃತತೆಯನ್ನು ನೀಡುವ ಕೆಲಸವನ್ನು ಮಾಡಿದವು. ಅರಸುಮನೆತನಗಳಿಗೆ ಸಂಬಂಧಿಸಿದ ಮಹಿಳೆಯನ್ನು ಹೊರತುಪಡಿಸಿದರೆ ಇಲ್ಲಿನ ಶಿಕ್ಷಣದಲ್ಲಿ ತರಬೇತಿ ಪಡೆದವರೆಂದರೆ ದೇವದಾಸಿಯರು. ಇವರು ಪುರುಷ ಪ್ರಭುತ್ವದ ಲಾಸ್ಯ ಬದುಕಿಗಾಗಿ ಸೃಷ್ಟಿಗೊಂಡ ಒಂದು ಶೋಷಿತ ವರ್ಗ. ನೃತ್ಯ ಮತ್ತು ಸಂಗೀತದಲ್ಲಿನ ಪರಿಣತಿಯು ಇವರಿಗೆ ಹೊಸ ಬದುಕನ್ನು ನೀಡುವ ಬದಲು ಲೈಂಗಿಕ ಶೋಷಣೆಗೆ ದಾರಿ ಮಾಡಿಕೊಟ್ಟಿದ್ದನ್ನು ಕಾಣಬಹುದು. ಅನೇಕ ಸಾಮಾನ್ಯ ಸ್ತ್ರೀಯರು ಸ್ವತಃ ವಿದ್ಯೆಯಿಂದ ವಂಚಿತರಾಗಿದ್ದರೂ ದೇವಾಲಯ

ಹಾಗೂ ಮಠಗಳ ನಿರ್ಮಾಣ, ಜೀರ್ಣೋದ್ಧಾರ ಹಾಗೂ ದಾನ ಧರ್ಮಗಳಲ್ಲಿ ನಿರತರಾಗಿದ್ದರು ಎಂಬುದಕ್ಕೆ ಶಾಸನಗಳಲ್ಲಿ ಉಲ್ಲೇಖಗಳಿವೆ. ಕೋಟೆಯಣ್ಣ ಹೆಗ್ಗಡೆಯ ಮಗಳಾದ ದುಗ್ಗಮ್ಮ ಎಂಬುವವಳು ಆಗುಂಬೆಯ ಗೋಪಾಲಕೃಷ್ಣ ದೇವರ ಮುಖಮಂಟಪವನ್ನು ಜೀರ್ಣೋದ್ಧಾರ ಮಾಡಿದ್ದರೆ,[೬] ಬೋಕಸ್ತಾ ಸಿದ್ದಬಸವಯ್ಯನ ಹೆಂಡತಿ ವೀರಮ್ಮ ತನ್ನ ಮಗ ಭದ್ರಯ್ಯನ ಹೆಸರಿನಲ್ಲಿ ಮಹಂತಿನ ಮಠವನ್ನು ನಿರ್ಮಿಸಿದಳು.[೭] ಬಗ್ಗುಂಜಿ ಸೀಮೆಯಲ್ಲಿ ಸೀತಾ ನದಿ ದಡದ ಮೇಲೆ ಕೆಂಚವ್ವ ವಿರಕ್ತಮಠವನ್ನು ಕಟ್ಟಿಸಿದಳು ಎಂಬುದಾಗಿ ಶಾಸನದಲ್ಲಿ ಉಲ್ಲೇಖವಿದೆ.[೮] ಸಿಂಗಣ್ಣ ಜೋಯಿಸನ ಅಣ್ಣನ ಮಗಳು ಲಖ್ಖಂಗಳು ದೇವರಿಗೆ ಭೂದಾನ ನೀಡಿದ ಉಲ್ಲೇಖವಿದೆ.[೯] ಶೃಂಗೇರಿಯ ಶಾಸನವೊಂದರಲ್ಲಿ ವಿಷ್ಣುಭಟ್ಟರ ಪುತ್ರಿ ನರಸಮ್ಮ ಎಂಬ ಸಾಮಾನ್ಯ ಸ್ತ್ರೀ ದೇವರಿಗೆ ಭೂದಾನ ನೀಡಿದ ವಿವರಣೆ ಇದೆ.[೧೦] ಈ ಎಲ್ಲಾ ಅಂಶಗಳ ಹಿಂದೆ ಪುಣ್ಯ ಸಂಪಾದನೆಯೇ ಸ್ತ್ರೀಯರಿಗೆ ಪ್ರಧಾನವಾಗಿದ್ದುದ್ದನ್ನು ಶಾಸನಗಳಲ್ಲಿ ಗುರುತಿಸಬಹುದು.

೫.೨. ವೈವಾಹಿಕ ಜೀವನ

ವಿವಾಹ ಹೆಣ್ಣಿನ ಜೀವನದ ಮಹತ್ತರವಾದ ಘಟ್ಟ. ತಾನು ಹುಟ್ಟಿ ಬೆಳೆದ ಪರಿಸರವನ್ನು ಬಿಟ್ಟು ಭಿನ್ನವಾದ ಪರಿಸರದಲ್ಲಿ ಬದುಕನ್ನು ಕಟ್ಟಿಕೊಳ್ಳುವುದು ಹೆಣ್ಣಿನ ದೃಷ್ಟಿಯಿಂದ ಸಂದಿಗ್ಧವಾದುದೇ ಸರಿ.

ಶಾಸನಗಳ ಆಧಾರದಿಂದ ಸಾಮಾನ್ಯವಾಗಿ ಹೆಣ್ಣಿಗೆ ಎಷ್ಟನೆಯ ವಯಸ್ಸಿನಲ್ಲಿ ಮದುವೆ ಮಾಡುತ್ತಿದ್ದರೆಂದು ಊಹಿಸುವುದು ಕಷ್ಟವಾಗುತ್ತದೆ. ಕ್ರಿಸ್ತಶಕದ ಆರಂಭದಿಂದೀಚೆಗೆ ಬಂದ ಯಾಜ್ಞವಲ್ಕ ಮುಂತಾದ ಸ್ಮೃತಿಕಾರರು ಹುಡುಗಿಯು ಋತುಮತಿಯಾಗುವ ಮೊದಲೇ ಅವಳ ವಿವಾಹವನ್ನು ನೆರವೇರಿಸಬೇಕೆಂದು ನಿರ್ಬಂಧ ನಿಯಮ ವಿಧಿಸುತ್ತಾರೆ.[೧೧] ಇದನ್ನು ಅವಲೋಕಿಸಿದಾಗ ಅಂದಿನ ಕಾಲದಲ್ಲಿ ಬಾಲ್ಯವಿವಾಹ ರೂಢಿಯಲ್ಲಿದ್ದಿತು ಎನ್ನುವುದು ಸ್ಪಷ್ಟವಾಗುತ್ತದೆ.

ಮದುವೆಯಾದ ಹೆಣ್ಣನ್ನು 'ಕೊಡಗೂಸು' ಎಂದು ಕರೆಯುತ್ತಿದ್ದರು. ಮದುವೆಯನ್ನು ಶಾಸನಗಳು 'ಕನ್ಯಾದಾನ' ಎಂದು ಕರೆದಿವೆ.[೧೨] ಶಾಸನವೊಂದರಲ್ಲಿ ಹೆಣ್ಣಿಗೆ ಕನ್ಯಾದಾನ ಗಂಡಿಗೆ ಮೂಲವಾಗಿ ಎಂಬ ಮಾಹಿತಿ ಇದೆ.[೧೩] ಮದುವೆ ಸಮಾರಂಭದಲ್ಲಿ ವಿಧಿಸುತ್ತಿದ್ದ ಚಪ್ಪರ ಹಾಗೂ ಮದುವೆ ತೆರಿಗೆಯನ್ನು ಎಲ್ಲರೂ ಕೊಡಬೇಕಿದ್ದಿತು. ಸೂರ್ಯ ದೇವಸ್ಥಾನದಲ್ಲಿ ಸಿಡಿತಲೆ ವೀರಗಲ್ಲಿನ ಶಾಸನದಲ್ಲಿ 'ಮದುವಣಿ'ಎಂಬ ಪದವಿದ್ದು ಇದರ ಅರ್ಥ ಮದುವೆ ಮೇಲೆ ಹಾಕುತ್ತಿದ್ದ ತೆರಿಗೆ ಎಂದು ಕನ್ನಡ-ಕನ್ನಡ ನಿಘಂಟಿನಲ್ಲಿ ಅರ್ಥೈಸಲಾಗಿದೆ. ಪ್ರಾಚೀನ ಕರ್ನಾಟಕದಲ್ಲಿ ಮದುವೆಗೂ ಕರವನ್ನು ವಿಧಿಸಲಾಗುತ್ತಿತ್ತು. ಊರ ಹಿರಿಯರು ಈ ತೆರಿಗೆಯ ಪ್ರಮಾಣವನ್ನು ನಿಶ್ಚಯಿಸುತ್ತಿದ್ದು ಅದು ರಾಜನ ಬೊಕ್ಕಸಕ್ಕೆ ಹೋಗುವುದಕ್ಕಿಂತ ದೇವಸ್ಥಾನಗಳ ಜೀರ್ಣೋದ್ಧಾರ, ಕೆರೆ ನಿರ್ಮಾಣಗಳಂತಹ ಕಾರ್ಯಕ್ಕೆ ವಿನಿಯೋಗಿಸುತ್ತಿದ್ದಿರಬಹುದು.

ಶಾಸನದಲ್ಲಿ ವಿವಾಹದ ಬಗ್ಗೆ ಹೇಳುತ್ತಾ 'ವಿಜಯಲಕ್ಷ್ಮಿ ವಿವಾಹ ಮಹೋತ್ಸವವಂ' ಎಂಬ ಉಲ್ಲೇಖವಿದೆ.[೧೪] ಮದುವೆಯಲ್ಲಿ ವರನಿಗೆ ಉಡುಗೊರೆ ಕೊಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದಿತು. ಇಂತಹ ಉಡುಗೊರೆ ಸಮಾರಂಭದಲ್ಲಿ ರಾಜ ಅಥವಾ

ಮಂತ್ರಿಯೋ ಭಾಗವಹಿಸುತ್ತಿದ್ದನು. ಉನ್ನತ ವರ್ಗದಲ್ಲಿಯೇ ಹೆಚ್ಚಾಗಿ ವಿವಾಹ ಉಡುಗೊರೆಯು ಚಾಲ್ತಿಯಲಿದ್ದುದನ್ನು ಶಾಸನಗಳು ನಿರೂಪಿಸುತ್ತವೆ. ಶಾಸನವೊಂದರಲ್ಲಿ ಘಂಟೆವೊಡೆಯರ ಪುತ್ರಿಯಾದ ಘಂಟೆ ಅಂಮ್ಮಾಜಿಯವರನ್ನು ಕೆಳದಿ ರಾಜ್ಯದ ಸದಾಶಿವ ನಾಯಕರ ಮಗನಾದ ಭದ್ರಪ್ಪ ನಾಯಕನಿಗೆ ವಿವಾಹ ಮಾಡಿಕೊಡುವ ಸಂದರ್ಭದಲ್ಲಿ ೫೦೦ ವರಹದ ಗ್ರಾಮವಾದ ನಜೂರು ಅರಂದೂರನ್ನು ಭದ್ರಪ್ಪ ನಾಯಕರಿಗೆ ಧಾರಾಪೂರ್ವಕವಾಗಿ ದಾನ ಮಾಡಿದ ಬಗ್ಗೆ ಉಲ್ಲೇಖವಿದೆ.[೧೫] ಹದವಳೆಯ ತೈಲಪ ಹೆಗ್ಗಡೆಯ ತಂಗಿ ತಂಗಣ್ಣ ಹೆಗ್ಗಡತಿ ತನ್ನ ಅಳಿಯ ನಾಗಪ್ಪನಿಂದ ವಿಜಯಪುರದ ದಾಸಿಮರಸರಿಗೆ ಭೂಮಿಯನ್ನು ಧಾರಾಪೂರ್ವಕವಾಗಿ ಧಾರೆಯ ನ್ನೆರೆದುಕೊಟ್ಟ ವಿವರಣೆಯು ಶಾಸನದಲ್ಲಿದೆ.[೧೬]

ಈಗಿನಂತೆಯೇ ಆಗಲೂ ಅಂತರ್ಜಾತಿಯ ವಿವಾಹಗಳಿಗೆ ಪ್ರೋತ್ಸಾಹವಿರಲಿಲ್ಲ. ಆದರೆ ಹೊಯ್ಸಳ ವಂಶವು ಇದಕ್ಕೆ ಅಪವಾದವಾಗಿದ್ದಿತು. ಬಿಟ್ಟಿದೇವ ವೈಷ್ಣವ, ಶಾಂತಲೆ ಜಿನಭಕ್ತೆ ಯಾಗಿದ್ದರೂ ಧಾರ್ಮಿಕ ಸಾಮರಸ್ಯವಿದ್ದಿತು. ಹೀಗಾಗಿ ವೈಷ್ಣವರೂ, ಜೈನರೂ, ಶೈವರೂ ಪರಸ್ಪರ ಮದುವೆಯಾಗಿರುವುದನ್ನು ಕಾಣಬಹುದು. ಆದರೆ ಮಧ್ಯಮ ಹಾಗೂ ಕೆಳವರ್ಗದವರಲ್ಲಿ ಅಂತರ್ಜಾತಿಯ ವಿವಾಹ ಪದ್ಧತಿ ಕಟ್ಟುನಿಟ್ಟಾಗಿ ಜಾರಿಯಲ್ಲಿದ್ದುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಮಾಲೆಗಾರ ಗವುಂಡನಿಂದ ಸುಳಗೋಡು ಮಾರಪ್ಪಗೆ ಕರಿಗೆರಿಸಿನ ಗ್ರಾಮವನ್ನು ದಾನವಾಗಿ ನೀಡಲಾಯಿತು. ಆದರೆ ಆತ ಬೇರೆ ಜಾತಿಯವರನ್ನು ವಿವಾಹವಾಗಿ ಆತ ಜಾತಿಗೆಟ್ಟು ಅಪರಾಧ ಮಾಡಿದ ಸಂಬಂಧ ಆ ಭೂಮಿಯನ್ನು ವಶಪಡಿಸಿಕೊಳ್ಳಲಾಯಿತು ಎಂದಿದೆ.[೧೭] ಅಳಿಯ ಸಂತಾನ ವ್ಯವಸ್ಥೆಯಲ್ಲಿ ಮಾತೃ ಪ್ರಾಧಾನ್ಯತೆಯನ್ನು ಗಳಿಸಿದ್ದು ಆಕೆಯು ಮನೆಯೊಡತಿ ಯಾಗಿರುವಳು. ಇದು ಬಹುಶಃ ಶಾತವಾಹನರ ವಂಶದಿಂದಲೇ ಆರಂಭವಾಗಿರಬಹುದು. ಶಾತವಾಹನರ ಎಲ್ಲಾ ಅರಸರ ಹೆಸರುಗಳೂ ಮಾತೃಮೂಲದಿಂದ ಪ್ರಾರಂಭವಾಗುವವು. ಕರಾವಳಿ ಹಾಗೂ ಮಧ್ಯಮಲೆನಾಡಿನ ಶಾಸನಗಳಲ್ಲಿ ಅಳಿಯ ಸಂತಾನದ ಪ್ರಾಮುಖ್ಯತೆಯು ಗೋಚರವಾಗುವುದರಿಂದ ಮನೆಗೆ ಬಂದ ಅಳಿಯನಿಗೆ ಹೆಚ್ಚು ಗೌರವ. ಬೊಮ್ಮಲಾಪುರದ ಶಾಸನದಲ್ಲಿ ಅಳಿಯ ಸಂತಾನದ ವಿವರಗಳಿರುವುದರಿಂದ ಬಹುಶಃ ಈ ಭಾಗದಲ್ಲಿ ಈ ವ್ಯವಸ್ಥೆಯು ಇದ್ದಿರಬಹುದೆಂದು ಭಾವಿಸಬಹುದು.

ಬಹುಪತ್ನಿತ್ವ ಪದ್ಧತಿ ಬಹುಪ್ರಾಚೀನ ಕಾಲದಿಂದಲೂ ಮನ್ನಣೆ ಪಡೆದ ಸಾಮಾಜಿಕ ವ್ಯವಸ್ಥೆಯಾಗಿದ್ದು ರಾಜನಾದವನು ಅಸಂಖ್ಯಾತ ಸ್ತ್ರೀಯರನ್ನು ಮದುವೆಯಾಗುತ್ತಿದ್ದನು. ಮಧ್ಯಮಲೆನಾಡಿನ ಭಾಗಗಳಲ್ಲಿ ಆಳ್ವಿಕೆ ನಡೆಸಿದ ರಾಜರುಗಳು ಮಾತ್ರವಲ್ಲದೆ ಅಧಿಕಾರಿಗಳು, ಶ್ರೀಮಂತರು, ಸೇನಾಪತಿಗಳು, ವೀರರು, ಲೆಂಕರು, ಒಬ್ಬರಿಗಿಂತ ಹೆಚ್ಚು ಮಡದಿಯರನ್ನು ಹೊಂದಿರುತ್ತಿದ್ದರು. ಕೆಲವರು ಏಕಪತ್ನಿ, ದ್ವಿಪತ್ನಿ ಕೆಲವರು ಮೂರು ಜನ ಮತ್ತು ಅದಕ್ಕಿಂತಲೂ ಹೆಚ್ಚು ಪತ್ನಿಯರನ್ನು ಹೊಂದಿರುತ್ತಿದ್ದರು. ಮಧ್ಯಮಲೆನಾಡಿನ ವೀರಮಾಸ್ತಿ ಶಿಲ್ಪಗಳ ಅಧ್ಯಯನ ಮಾಡಿದಾಗ ಒಕ್ಕೈ. ಇಕ್ಕೈ, ಮುಕ್ಕೈ ಮತ್ತು ೫ ಹಾಗೂ ೭ ಸ್ತ್ರೀಯರ ಶಿಲ್ಪಗಳಿರುವುದನ್ನು

ನೋಡಿದಾಗ ಬಹುಪತ್ನಿತ್ವ ಪದ್ಧತಿ ಉನ್ನತ ವರ್ಗದಲ್ಲಿಯೂ, ಏಕಪತ್ನಿತ್ವ ಪದ್ಧತಿ ಜನಸಾಮಾನ್ಯರಲ್ಲಿಯೂ ರೂಢಿಯಲ್ಲಿದ್ದುದನ್ನು ಅರ್ಥೈಸಿಕೊಳ್ಳಬಹುದು. ಇದಕ್ಕೆ ಸಂಬಂಧಿಸಿದಂತೆ ಹಲವಾರು ಮಾಸ್ತಿಕಲ್ಲು, ವೀರಗಲ್ಲು ಹಾಗೂ ವೀರಮಾಸ್ತಿ ಕಲ್ಲುಗಳನ್ನು ಉದಾಹರಣೆಯಾಗಿ ನೀಡಬಹುದು.

೫.೩. ವಿಧವಾ ಪದ್ಧತಿ

ಸತಿಪದ್ಧತಿ ಉಪಸ್ಥಿತಿಗೇರಿದ್ದ ಮಧ್ಯಕಾಲೀನ ಯುಗದಲ್ಲಿ ವಿಧವಾ ವಿವಾಹ ನಿಷೇಧವಾಗಿತ್ತು. ಅಂತೆಯೇ ವಿಧವೆಯ ಬದುಕು ದಾರುಣವಾಗಿತ್ತು. ಅವಳು ಒಬ್ಬ ಯೋಗಿನಿಯ ಜೀವನ ನಡೆಸಬೇಕಾಗಿತ್ತು. ನೆಲದಲ್ಲಿ ಮಲಗಿ ದಿನಕ್ಕೊಂದೇ ಸಲ ಸರಳ ಆಹಾರ ಸೇವಿಸಿ, ಶ್ವೇತ ವಸ್ತ್ರಧಾರಿಣಿಯಾಗಿ ಆಭರಣಗಳನ್ನು, ಅಲಂಕಾರಗಳನ್ನು ವರ್ಜಿಸಬೇಕಾಗಿತ್ತು. ಅಲ್ಲದೆ ತಮ್ಮನ್ನು ಕುರೂಪಿಯಾಗಿಸಲು ತಲೆಕೂದಲನ್ನು ಬೋಳಿಸಬೇಕಾಗಿತ್ತು. ಧಾರ್ಮಿಕ ಆಚರಣೆಗಳಲ್ಲಿ ಈ ಬಾಳನ್ನು ಕಳೆಯಬೇಕಾಗಿತ್ತು. ಅವಳ ನಿಯಮ ಭ್ರಷ್ಟತೆ ಪರಲೋಕದಲ್ಲಿರುವ ಅವಳ ಗಂಡನ ಸ್ವಾಸ್ಥ್ಯಕ್ಕೆ ಸಂಚಕಾರ ತರುವುದಲ್ಲದೆ ಅವಳು ಅವನನ್ನು ಮುಂದಿನ ಜನ್ಮದಲ್ಲಿ ಪಡೆಯಲು ವಿಘ್ನಕಾರಿಯೆಂದು ಭಾವಿಸಲಾಗುತ್ತಿತ್ತು. ಕುಟುಂಬದಲ್ಲಿ ನಡೆಯುವ ಮದುವೆ, ಪೂಜಾ ಮುಂತಾದ ಶುಭಕಾರ್ಯಗಳಲ್ಲಿ ಅವಳು ಭಾಗವಹಿಸುವುದನ್ನು ನಿಷೇಧಿಸಲಾಗಿತ್ತು. ಸತ್ತ ಮನುಷ್ಯನ ಆಧ್ಯಾತ್ಮಿಕ ಉನ್ನತಿಗಾಗಿ ಇವಳನ್ನು ಕಾರಣವಾಗಿರಿಸಿ, ಸೇವಕರಿಂದಲೂ ನಿರ್ಲಕ್ಷ್ಯಕ್ಕೊಳಗಾಗುವಂತಹ ಅತ್ಯಂತ ವೇದನಾಪೂರ್ಣ ಬದುಕು ಅವಳಿಗೆ ಕೊಡಲಾಯಿತು. ಇಂತಹ ಪರಿಸ್ಥಿತಿಯಲ್ಲಿ ಆಕೆ ಬದುಕುವುದಕ್ಕಿಂತ ಗಂಡನ ಜೊತೆ ಸಹಗಮನ ಮಾಡಲು ಇಚ್ಛಿಸುವುದು ಸಹಜವಾಗಿತ್ತು.

ಪ್ರಾಚೀನ ಕರ್ನಾಟಕದಲ್ಲಿ ಪತಿಯ ಮರಣಾನಂತರದ ವಿಧವೆಯರ ಬದುಕು ತುಂಬಾ ಶೋಚನೀಯವಾಗಿದ್ದಿತೆಂದು ಹೇಳಬಹುದು. ಕೆಲವು ವಿಧವೆಯರು ಸಂತೋಷದಿಂದ ಅಗ್ನಿಪ್ರವೇಶ ಕೈಗೊಳ್ಳುತ್ತಿದ್ದರು. ಉಳಿದವರು ಜೀವನದುದ್ದಕ್ಕೂ ಧರ್ಮಾಸಕ್ತರಾಗಿ ಕಾಲ ಕಳೆಯುತ್ತಿದ್ದರು. ಆದರೆ ಮಧ್ಯಮಲೆನಾಡಿನ ಶಾಸನಗಳಲ್ಲಿ ಮರುಮದುವೆ, ನಿಯೋಗಗಳಂತಹ ವಿಷಯಗಳು ನಿರೂಪಿತವಾಗಿಲ್ಲ. ಕ್ರಿ.ಶ. ೪೫೦ರ ಸುಮಾರಿಗೆ ಅಗ್ನಿಪ್ರವೇಶ ಮಾಡಿರಬಹುದಾದ ರವಿವರ್ಮನ ರಾಣಿಯ ಉಲ್ಲೇಖ ನಮ್ಮ ನಾಡಿನ ಸಹಗಮನದ ಪ್ರಥಮ ಉದಾಹರಣೆ ಎನಿಸಿದೆ.[೧೮] ಬಸವಯುಗದ ಕ್ರಾಂತಿಯಿಂದಾಗಿ ಈ ಪದ್ಧತಿ ಉತ್ತರ ಕರ್ನಾಟಕದಲ್ಲಿ ಸ್ವಲ್ಪ ಕ್ಷೀಣಿಸಿದರೂ ನಂತರದ ಕಾಲದಲ್ಲಿ ತನ್ನ ಪ್ರಖರತೆಯನ್ನು ಪಡೆದುಕೊಂಡಿತು.

ಮೊದಲಿಗೆ ರಾಜವರ್ಗದಲ್ಲಿ ಈ ಪದ್ಧತಿ ಬೆಳೆದು ಬಂದು ನಂತರದಲ್ಲಿ ಮಧ್ಯಮವರ್ಗದಲ್ಲಿ ಪ್ರಾಧಾನ್ಯತೆಯನ್ನು ಪಡೆದುಕೊಂಡಿತು. ಅಂದಿನ ಕಾಲದಲ್ಲಿ ಯುದ್ಧಗಳು, ಹೋರಾಟಗಳು ಬಹಳ ನಡೆಯುತ್ತಿದ್ದುದರಿಂದ ವಿಧವೆಯರ ಸಂಖ್ಯೆ ಜಾಸ್ತಿಯಾಗಿದ್ದಿರಬಹುದು ಎನಿಸುತ್ತದೆ.

ಕೆಳವರ್ಗದಲ್ಲಿ ಸತಿ ಹೋಗದೇ ಉಳಿದ ವಿಧವೆಯರ ಸ್ಥಿತಿ ಶೋಚನೀಯವಾಗಿದ್ದರೂ ಮೇಲ್ವರ್ಗದ ಸ್ತ್ರೀಯರು ಪತಿಯ ಮರಣಾನಂತರ ರಾಜಮಾತೆಯಾಗಿ, ರಾಣಿಯರಾಗಿ ಸಾಮ್ರಾಜ್ಯದ

ಕಾರ್ಯವನ್ನು ನಿರ್ವಹಿಸಿರುವರು. ಕೆಳದಿ ಚೆನ್ನಮ್ಮಾಜಿ, ಕಾಳಲಮಹಾದೇವಿ ಮುಂತಾದವರು ಸ್ವತಂತ್ರವಾಗಿ ರಾಜ್ಯಭಾರ ಮಾಡಿದುದು ಸರ್ವವಿಧಿತ. ಆದರೆ ಮಧ್ಯಮಲೆನಾಡಿನ ಶಾಸನಗಳಲ್ಲಿ ವೈಧವ್ಯದ ಬಗ್ಗೆ ಅಲ್ಪ ಮಾಹಿತಿ ಇದ್ದು ಹೆಚ್ಚಿನ ಮಾಹಿತಿಗಾಗಿ ಶೃಂಗೇರಿ ಮಠದ ದಾಖಲೆ ಮತ್ತು ಕಡತಗಳನ್ನು ಪರಿಶೀಲಿಸಲಾಗಿದೆ.

ಇಲ್ಲಿನ ಸಮಾಜವು ಪುರುಷ ಪ್ರಧಾನವಾಗಿದ್ದು ಹೆಣ್ಣು ಎರಡನೇ ದರ್ಜೆಯವಳಾಗಿದ್ದು ಆಕೆಯ ಬದುಕಿನ ಎಲ್ಲಾ ಹಂತಗಳಲ್ಲಿ ಶೋಷಣೆ ನಡೆಯುತ್ತಿತ್ತು. ವೈದಿಕ ಶಾಸ್ತ್ರದ ಕಟ್ಟುಕಟ್ಟಳೆಗಳನ್ನು ಆಕೆಯ ಮೇಲೆ ಹೇರಲಾಗಿದ್ದು ಗಂಡನ ಮರಣದ ನಂತರದ ಬದುಕು ಶೋಚನೀಯವಾಗಿದ್ದಿತು. ಚಾತುರ್ವರ್ಣ ವ್ಯವಸ್ಥೆಯಲ್ಲಿಯೇ ಆಕೆ ಶೂದ್ರಳಾಗಿ ವೈಧ್ಯವ್ಯದ ಜೀವನ ಮಾಡಿದ್ದನ್ನು ಕಾಣಬಹುದು. ಪುರೋಹಿತಶಾಹಿಯ ಬಿಗಿ ಹಿಡಿತದಲ್ಲಿ ಧರ್ಮದ ಸೋಗಿನಲ್ಲಿ ಆಕೆಯನ್ನು ಬಂಧಿಸುವ ಕಾರ್ಯ ನಡೆದಿತ್ತು. ಕೆಲವೊಂದು ಸಂದರ್ಭದಲ್ಲಿ ಶಾಸನಗಳಲ್ಲಿ ಉಲ್ಲೇಖವಾಗಿರುವಂತೆ ವಿಧವೆಯನ್ನು ಮಾರುವ ಹಂತಕ್ಕೆ ಬಂದಿದ್ದನ್ನು ಗಮನಿಸಿದರೆ ಆಕೆಯ ಬದುಕು ಎಂತಹದ್ದು ಎಂಬುದು ಅರ್ಥವಾಗುತ್ತದೆ.

ವಿಧವೆಯಾದವಳು ತನ್ನ ಗಂಡ ಮಾಡಿದ ಸಾಲಕ್ಕೆ ಬಾಧ್ಯಸ್ಥಳಾಗುತ್ತಿದ್ದು ಅದನ್ನು ತೀರಿಸುವುದು ಅವಳ ಕರ್ತವ್ಯವಾಗಿದ್ದಿತು. ಶೃಂಗೇರಿಯ ಒಂದು ದಾಖಲೆಯಲ್ಲಿ ಜಗದ್ಗುರುಗಳಾದ ಶ್ರೀ ಸಚ್ಚಿದಾನಂದ ಭಾರತಿಗಳು ವಿದ್ಯಾರಣ್ಯಪುರ ಅಗ್ರಹಾರದಲ್ಲಿನ ಭೂಮಿಯನ್ನು ಕಪನೀಪತಿ ಭಟ್ಟನ ಹೆಂಡತಿ ತಿಮ್ಮವ್ವಳ ವಂಶದವರಿಗೆ ದಾನವಾಗಿ ನೀಡಿದ್ದು ಅವರು ಪುತ್ರ ಸಂತಾನವಿಲ್ಲದೆ ಮರಣ ಹೊಂದಿದ ಮೇಲೆ ತನ್ನ ಜೀವನ ನಿರ್ವಹಣೆಗೆ ಮತ್ತು ತನ್ನ ಗಂಡ ಮಾಡಿದ ಸಾಲವನ್ನು ತೀರಿಸಲು ಗಂಡ ಮತ್ತು ಪಿತೃಗಳಿಗೆ ಪುಣ್ಯಪ್ರಾಪ್ತಿಯಾಗಬೇಕೆಂದು ತಿಮ್ಮವ್ವಳ ೧೨ ವರಹ ಉತ್ಪತ್ತಿಯುಳ್ಳ ಭೂಮಿಯನ್ನು ವಾಲೆ ಸಿಂಗಣ್ಣನು ಕ್ರಯಕ್ಕೆ ತೆಗೆದುಕೊಂಡು ಕೇಂದ್ರ ಖಜಾನೆಗೆ ೨೪ ವರಹಗಳ ಕಾಣಿಕೆ ನೀಡಿ, ಆ ವಿಧವೆ ತಿಮ್ಮಕ್ಕಳ ಅಂತ್ಯ ಕಾಲದವರೆಗೆ ಅವಳಿಗೆ ಅನ್ನ, ವಸ್ತ್ರ ಕೊಟ್ಟು ಎಲ್ಲಾ ವ್ಯವಸ್ಥೆ ಮಾಡಬೇಕೆಂದು ಕೆಳದಿ ದೊರೆ ಇಮ್ಮಡಿ ಸೋಮಶೇಖರ ನಾಯಕರು ಆಜ್ಞೆ ಹೊರಡಿಸಿದ ಸಂಗತಿಯು ಈ ಕಡತದ ದಾಖಲೆಯಿಂದ ತಿಳಿದುಬರುತ್ತದೆ.[೧೯]

ಶೃಂಗೇರಿ ಮಠದ ಪಾರುಪತ್ಯಕಾರ ನರಸೀಭಟ್ಟರು 'ಗೋಧಿ' ಎಂಬ ವಿಧವೆಯನ್ನು ಗೋಧಿಯ ಸಹೋದರನೇ ಚಿಂತಾಮಣಿಭಟ್ಟಗೆ ಹನ್ನೆರಡು ವರಹಗಳಿಗೆ ಮಾರಾಟ ಮಾಡಿದರೆಂದು ಇದೆ. ಬಹುಶಃ ಈ ಚಿಂತಾಮಣಿಭಟ್ಟನು ತನ್ನ ಸಹೋದರಿ ಅನಾಥೆಯಾಗಿ ಮನೆಯಿಂದ ಮನೆಗೆ ಅಲೆಯದೇ ತನ್ನ ಮನೆಯಲ್ಲಿಯೇ ಮರ್ಯಾದೆಯಿಂದಿರಲೆಂದು ಚಾವಡಿಯಿಂದ ತಾನೇ ಖರೀದಿಸಿದನೆಂದು ತೋರುತ್ತದೆ.[೨೦]

ಕ್ರಿ.ಶ. ೧೮೧೮ರಲ್ಲಿ ಶೃಂಗೇರಿ ಮಠದ ಪಾರುಪತ್ಯೆದಾರ ವೆಂಕಟಾಚಲ ಶಾಸ್ತ್ರಿಗಳು ಚಾವಡಿಗೆ ಕೊಪ್ಪದ ಸೀಮೆಯ ಸೀಸಲೇ ಮಂಜನ ಹೆಂಡತಿ ಫಣಿ ಎಂಬ ವಿಧವೆಯನ್ನು ಅಹೋಬಲ ಸೋಮಯಾಜಿಗಳಿಗೆ ಮೂರು ವರಹಗಳಿಗೆ ಮಾರಿದರೆಂದು ತಿಳಿಸುತ್ತದೆ.[೨೧]

ಕ್ರಿ.ಶ. ೧೮೧೬ರ ದಾಖಲೆಯಲ್ಲಿ ಪಾದೆ ಮಠದ ಸುಬ್ಬಯ್ಯ ಅಡಿಗರಿಗೆ ಆರಗದ ಸುಬ್ಬಮ್ಮನು ಬರೆಸಿಕೊಟ್ಟು ತುಂಡು ಮಾನ್ಯದ ಸ್ವಾಸ್ಥಿಕ್ರಯದ ಪಟ್ಟಿಯಲ್ಲಿ ವಿಧವೆಯರು ಯಾರಾದರೂ ಇದ್ದರೆ ಅವರ ಜೀವನ ನಿರ್ವಹಣೆಗಾಗಿ ಆಸ್ತಿ ಮತ್ತು ಹಣವು ದೊರೆಯುತ್ತಿತ್ತೆಂದು ತಿಳಿಯುತ್ತದೆ. ಪತಿಯ ಮರಣ ನಂತರ ಸ್ತ್ರೀಯರು ಮುತ್ತೈದೆ ಸಂಕೇತವಾದ ಮಂಗಳಸೂತ್ರವನ್ನು ಇಂದು ಕಳಚುತ್ತಾರೆ. ಆದರೆ ಅಂದಿನ ಕಾಲದಲ್ಲಿ ಪತಿಯ ಮರಣಾನಂತರ ಕಾಲುಂಗುರ, ಕಿವಿಯೋಲೆ, ಬಳೆ, ಕುಂಕುಮ ಇತ್ಯಾದಿಗಳನ್ನು ಧರಿಸುತ್ತಿದ್ದರೋ, ಇಲ್ಲವೋ ಎಂಬುದಕ್ಕೆ ಶಾಸನಗಳಲ್ಲಿ ಉಲ್ಲೇಖವಿಲ್ಲ. ಬ್ರಾಹ್ಮಣ ಸಂಪ್ರದಾಯದಲ್ಲಿ ವಿಧವಾ ಪರಿಸ್ಥಿತಿಯು ಅತ್ಯಂತ ದಯನೀಯ ಹಂತವನ್ನು ತಲುಪಿತ್ತು.

೫.೪. ಸತಿ ಪದ್ಧತಿ

ಸತಿ ಎಂಬ ಪದ ಈಗ ಪದ್ಧತಿಯನ್ನು ಸೂಚಿಸುವ ಪದವಾಗಿ ಬಳಸಲ್ಪಡುತ್ತೇವೆ. ಆಗಿನ ಕಾಲದಲ್ಲಿ ಈ ಪದ ಸಹಗಮನ ಮಾಡಿದ ಹೆಂಗಸನ್ನು ಸೂಚಿಸುವ ಪದವಾಗಿದ್ದು ಮಹಾಸತಿ, ಮಾಸ್ತಿಕಲ್ಲು, ಮಾಸ್ತಿ, ಸತಿಕಲ್ಲು - ಇವೆಲ್ಲ ಸಮಾನ ಅರ್ಥವುಳ್ಳ ಪದಗಳಾಗಿವೆ. ಪ್ರಾಚೀನ ಮತ್ತು ಮಧ್ಯಕಾಲೀನ ಜಗತ್ತಿನ ಬೇರೆ ಬೇರೆ ಸಮಾಜಗಳಲ್ಲಿ ಧಾರ್ಮಿಕ ನಂಬುಗೆ ಮತ್ತೆ ಸಮಾಜದ ಒಪ್ಪಿಗೆಗಳಿಂದ ಬೆಳೆದುಬಂದ ಆಚರಣೆಗಳಲ್ಲಿ ಆತ್ಮಬಲಿಯೂ ಒಂದು. ಅಂದಿನ ಕಾಲದ ಸಹಗಮನದ ಹುಟ್ಟಿನ ಕಾರಣಗಳನ್ನು ವಿಶ್ಲೇಷಿಸಿದರೆ ಭಾರತ ಮಾತ್ರವಲ್ಲದೇ ಸಹಗಮನ ಪ್ರಚಲಿತವಿದ್ದ ಎಲ್ಲಾ ದೇಶಗಳಲ್ಲೂ ಪ್ರಚಲಿತವಿದ್ದ ನಂಬಿಕೆ ಒಂದೇ. ಅದು ಗಂಡನ ಸಾವಿನ ಜೊತೆಗೆ ಹೆಂಡತಿಯು ಸತ್ತು ಇನ್ನೊಂದು ಲೋಕದಲ್ಲಿ ಸಹಭಾಗಿನಿಯಾಗಿರಬೇಕೆಂಬ ನಂಬಿಕೆ.

ಪ್ರಾಚೀನ ಜನರು ಈ ಲೋಕಕ್ಕಿಂತ ಇನ್ನೊಂದು ಲೋಕವಿದೆಯೆಂದು ತಿಳಿದಿದ್ದು ಅವನಿಗೆ ಪ್ರಿಯವಾದ ವಸ್ತುಗಳನ್ನು ಸಲ್ಲಿಸಬೇಕೆಂದು ನಂಬಿದ್ದರು. ಮಡಿದ ರಾಜನ ಅಥವ ವೀರನ ಜೊತೆಯಲ್ಲಿ ಅವನ ವಿಧವೆಯನ್ನು ಸುಡುವ ಪದ್ಧತಿ ಪ್ರಾಚೀನ ಭಾರತದಲ್ಲಿ ಮಾತ್ರವಲ್ಲ ಪ್ರಾಚೀನ ಗ್ರೀಸ್, ಜರ್ಮನಿ, ಯುರೋಪ್ ಇನ್ನು ಮುಂತಾದ ದೇಶದ ಜನಾಂಗಗಳಲ್ಲಿ ಹಿಂದಿನಿಂದಲೂ ನಡೆದು ಬಂದಿದೆ.[೨೨]

ಈಜಿಪ್ಟಿನ ಸಹಗಮನದ ಬಗ್ಗೆ ಜಗತ್ತಿನ ಅತ್ಯಂತ ಪ್ರಸಿದ್ಧ ಪುರಾತತ್ವ ಶೋಧಕರಲ್ಲೊಬ್ಬನೆಂದು ಹೆಸರು ಪಡೆದ ಚೈಲ್ಡ್ ಎಂಬ ಇತಿಹಾಸತಜ್ಞ ತನ್ನ ಪುಸ್ತಕದಲ್ಲಿ ಸತಿಪದ್ಧತಿಯನ್ನು ಉಲ್ಲೇಖಿಸಿದರೆ, ಇನ್ನೊಬ್ಬ ಇತಿಹಾಸಜ್ಞ ಉಪೇಂದ್ರ ಠಾಕೂರ್ ಹೇಳುವಂತೆ ಗ್ರೀಕ್ ರಾಜರ ಚರಿತ್ರೆಯಲ್ಲಿ ಎವಡ್ನ ಎಂಬ ರಾಣಿ ತನ್ನ ಗಂಡನ ಚಿತೆಯಲ್ಲಿ ಹಾರಿ ಪ್ರಾಣ ಬಿಡುವ ಮಾಹಿತಿ ಇದೆ.

ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ಸಹಗಮನ ಕಡ್ಡಾಯವಾಗಿರದಿದ್ದರೂ ಸಂತೋಷದಿಂದ ಮಹಿಳೆಯರೇ ಸ್ವೀಕರಿಸಿದ ಸಂದರ್ಭ ಹೆಚ್ಚು. ಇದರ ಉಗಮದ ಬಗ್ಗೆ ನಿಖರ ಉಲ್ಲೇಖ

ಇಲ್ಲದಿದ್ದರೂ ಪತಿನಿಂದೆಯನ್ನು ಸಹಿಸದೆ ತಂದೆ ದಕ್ಷಬ್ರಹ್ಮನ ಯಜ್ಞಕುಂಡಕ್ಕೆ ತನ್ನನ್ನು ಸಮರ್ಪಿಸಿಕೊಂಡ ಸತಿದೇವಿಯ ಘಟನೆಯೇ ಸತಿ ಪರಂಪರೆಗೆ ಮೂಲ ಪ್ರೇರಣೆಯಾಗಿರಬಹುದು.

ರಾಮಾಯಣ ಕಾಲದಲ್ಲಿ ದಶರಥನ ಹೆಂಡತಿ ಕೌಸಲ್ಯೆ ತಾನು ಸಹಗಮನ ಮಾಡುತ್ತೇನೆಂದು ಹೇಳುವುದು ಸತಿಯ ಆಚರಣೆಯ ಕುರುಹುಗಳನ್ನು ಹೇಳಿದರೂ ಆಕೆ ಸಹಗಮನ ಮಾಡಲಿಲ್ಲವೆನ್ನುವುದು ಗಮನಾರ್ಹ. ಮಹಾಭಾರತದಲ್ಲಿ ಮಾದ್ರಿ ತನ್ನ ಪತಿ ಪಾಂಡು ಸತ್ತನಂತರ ಸಹಗಮನ ಮಾಡುವುದು, ವಸುದೇವನ ನಾಲ್ಕು ಜನ ಪತ್ನಿಯರೂ ಕೊಂಡವನ್ನೇರಿ ಸಹಗಮನ ಮಾಡಿದುದನ್ನು ಪರಿಶೀಲಿಸಿದರೆ ಅಂದಿನ ಕಾಲದ ಸಮಾಜದಲ್ಲಿ ಸತಿ ಆಚರಣೆಯನ್ನು ಬಲಗೊಳಿಸುವ ಪ್ರಯತ್ನ ನಡೆಯುತ್ತಿದ್ದಿರಬೇಕು.

ಸ್ಮೃತಿ, ಪುರಾಣ, ಧರ್ಮಶಾಸ್ತ್ರಗಳು ಕ್ರಿ.ಶ.ದ ಆರಂಭದಿಂದ ಸತಿ ಆಚರಣೆಗೆ ಒಪ್ಪಿಗೆ ಕೊಟ್ಟಿರುವುದನ್ನು ಕಾಣಬಹುದು. ಕ್ರಿ.ಶ. ೧೦೦ರ ವಿಷ್ಣುಸ್ಮೃತಿಯು ಸಹಗಮನವನ್ನು ತರ್ಕಬದ್ಧವಾಗಿ ವಿವರಿಸುತ್ತದೆ. ಕಾಳಿದಾಸನೂ 'ಕುಮಾರ ಸಂಭವ'ದಲ್ಲಿ ರತಿಯ ಸಹಗಮನದ ಸನ್ನಿವೇಶವನ್ನು ವಿವರಿಸುತ್ತಾನೆ. ಕ್ರಿ.ಶ. ೬೦೦ರಲ್ಲಿ ಹರ್ಷವರ್ಧನನ ತಾಯಿ ಯಶೋಮತಿ ಚಿತೆಯೇರುವ ಹಾಗೂ ಆತನ ಸಹೋದರಿ ರಾಜಶ್ರೀ ವಿಧವೆಯಾದಾಗ ಸತಿಯಾಗುವುದನ್ನು ಹರ್ಷವರ್ಧನ ತಪ್ಪಿಸಿದ್ದು ಬಾಣಭಟ್ಟನ ಹರ್ಷಚರಿತ್ರೆಯಲ್ಲಿ ವಿವರವಾಗಿ ಕೊಡಲಾಗಿದೆ.

ಪ್ರಸಿದ್ಧ ಸಂಶೋಧಕ ಡಾ. ಬಸವರಾಜ ಕಲ್ಗುಡಿಯವರ ಪ್ರಕಾರ ಕ್ರಿ.ಶ. ೮ನೇ ಶತಮಾನದಿಂದ ಕ್ರಿ.ಶ. ೧೨ನೇ ಶತಮಾನದವರೆಗೆ ಸತಿಪದ್ಧತಿಯ ಆಚರಣೆಗಳಲ್ಲಿ ಗಮನಾರ್ಹವಾದ ಬದಲಾವಣೆಗಳಾದವು. ಆ ಕಾಲದಲ್ಲಿ ಸ್ತ್ರೀಯನ್ನು ಗಂಡಿನ ಪ್ರಭುತ್ವಕ್ಕೆ ಧಾರ್ಮಿಕ ನಿಯಮಗಳಿಗೆ ಅಮಾನುಷವಾಗಿ ಒಳಪಡಿಸಲಾಯಿತು.

ಉತ್ತರ ಭಾರತದಲ್ಲಿ ಕ್ರಿ.ಶ. ೯ರಿಂದ ಕ್ರಿ.ಶ. ೧೧ನೇ ಶತಮಾನದ ನಡುವೆ ಅತಿಹೆಚ್ಚು ಸಂಖ್ಯೆಯಲ್ಲಿ ರಜಪೂತರು ಸತಿ ಆಚರಿಸಿದರು. ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವದ ಹೊಸ ಹೊಸ ಪ್ರಯೋಗಗಳಿಗೆ ಬಲಿಯಾದವರಲ್ಲಿ ಮಹಿಳೆಯರೇ ಜಾಸ್ತಿ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಸಹಗಮನ ಮತ್ತು ಅನುಗಮನ. ಈ ಪದ್ಧತಿಗಳು ಅತ್ಯಂತ ಕ್ರೂರವಾಗಿದ್ದು ಹೆಣ್ಣಿನ ಬದುಕನ್ನೇ ಪ್ರಶ್ನಿಸುವ ಸ್ವರೂಪದಾಗಿದ್ದವು. ಪತಿಯು ಸತ್ತಾಗ ಅವನ ಶವದ ಜೊತೆಯಲ್ಲಿಯೇ ಚಿತೆಯಿರುವುದು ಸಹಗಮನವಾದರೆ, ಪತಿಯು ಎಲ್ಲೋ ದೂರದ ಊರಿನಲ್ಲಿ ಮಡಿದ ಸುದ್ದಿ ಕೇಳಿ ಪ್ರಾಣ ಬಿಡುವುದು ಅನುಗಮನ ಪದ್ಧತಿ. ಇದಕ್ಕೆ ಪ್ರಮುಖ ಉದಾಹರಣೆ ದೇಕಬ್ಬೆ. ಬದುಕಿನುದ್ದಕ್ಕೂ ಸಮಾಜದಲ್ಲಿನ ಪುರುಷನ ಅಧೀನಳಾಗೆ ಉಳಿದು ಸಾವಿನಲ್ಲೂ ಅಸಹಜ ಅಂತ್ಯವನ್ನು ಕಾಣಬೇಕಾಗಿರುವುದು ಮಹಿಳೆಯ ಬದುಕಿನ ದುರಂತವಾಗಿ ಕಂಡುಬರುತ್ತದೆ. ಗಂಡು ತಾನು ಸತ್ತು ನಂತರ ತನ್ನ ಹೆಂಡತಿ ಇನ್ನೊಬ್ಬರ ವಶವಾಗಬಾರದೆಂಬ ಸ್ವಾರ್ಥ

ಮತ್ತು ಅಸೂಯೆಯಿಂದ ಆರಂಭಗೊಂಡು ನಂತರ ಅದಕ್ಕೊಂದು ಧಾರ್ಮಿಕ ಚೌಕಟ್ಟನ್ನು ನಿರ್ಮಿಸಿ ವೈಭವೀಕರಿಸಲಾಯಿತು.

ಸತಿ ಪದ್ಧತಿಯ ಸೃಷ್ಟಿಗೆ ಕಾರಣವಾದ ಎಲ್ಲ ಅಂಶಗಳು ಅಂದಿನ ಸಾಮಾಜಿಕ ರಚನೆಯನ್ನು ಸೂಚಿಸುತ್ತವೆ. ಪ್ರಭುತ್ವದ ವ್ಯವಸ್ಥೆ, ಪಿತೃಪ್ರಧಾನ ಕೌಟುಂಬಿಕ ರಚನೆ, ಪುರುಷ ಪ್ರಧಾನ ಸಮಾಜ ಹಾಗೂ ಪುರೋಹಿತಶಾಹಿಯ ಪ್ರವೇಶ ಇವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಸತಿ ಪದ್ಧತಿಯನ್ನು ಪೋಷಿಸಿಕೊಂಡು ಬಂದ ವ್ಯವಸ್ಥೆಗಳೇ ಆಗಿವೆ. ಸ್ವರ್ಗೀಯ ಕಲ್ಪನೆಯನ್ನು ಜನಸಾಮಾನ್ಯರಲ್ಲಿ ಹುಟ್ಟು ಹಾಕಿ ಆ ಹಿನ್ನೆಲೆಯಲ್ಲಿ ಸತಿ ಹೋಗುವುದನ್ನು ಸಮರ್ಥಿಸಿ ಕೊಳ್ಳಲಾಯಿತು. ಗಂಡಿನ ದೌರ್ಜನ್ಯಕ್ಕೊಳಪಟ್ಟು ಆತ್ಮಹತ್ಯೆ ಮಾಡಿಕೊಳ್ಳುವ ಮಹಿಳೆಯರನ್ನು ಪುರುಷಪ್ರಧಾನ ಸಮಾಜ ಮಹಾಸತಿಗಳೆಂದು ವೈಭವೀಕರಿಸಿತು. ಬದುಕಿದ್ದಾಗ ಆಕೆಯ ಮೇಲೆ ದೌರ್ಜನ್ಯವೆಸಗಿ ಸಹಗಮನವಾದ ಮೇಲೆ ಗಂಡನನ್ನು ಮೆಟ್ಟಿ ನಿಲ್ಲುವ ಶಕ್ತಿದೇವತೆಯಾಗಿ ರೂಪುಗೊಳ್ಳುವುದು ನಿಜವಾಗಿಯೂ ಕುತೂಹಲಕಾರಿಯಾದ ಸಂಗತಿಯಾಗಿದೆ. ಮಧ್ಯಮಲೆನಾಡಿನ ಅನೇಕ ಪ್ರದೇಶಗಳಲ್ಲಿ ಅಂತಹ ಮಾಸ್ತಿಗಲ್ಲು, ವೀರ ಮಾಸ್ತಿಗಲ್ಲುಗಳನ್ನು ಕಾಣುವುದರ ಮೂಲಕ ಅಂದಿನ ಸಮಾಜದಲ್ಲಿನ ರಾಜಪ್ರಭುತ್ವ ಮತ್ತು ಪುರೋಹಿತಶಾಹಿಯ ಸ್ವಾರ್ಥ ಮತ್ತು ಪ್ರತಿಷ್ಠೆಯನ್ನು ಗುರುತಿಸಬಹುದು.

ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ದಕ್ಷಿಣ ಭಾರತದಲ್ಲಿ ಅದು ತೀರಾ ಹೊಸ ರೂಪವೆನಿಸಿತು. ಕರ್ನಾಟಕದಲ್ಲಿ ಕದಂಬರಾಜ ರವಿವರ್ಮನ ಹೆಂಡತಿ ಸತಿ ಹೋದುದನ್ನು ಹೇಳುವ ೫ನೇ ಶತಮಾನದ ಸಂಸ್ಕೃತ ಶಾಸನ ಬಿಟ್ಟರೆ ಆ ಕಾಲದ ಸತಿ ಘಟನೆಗಳನ್ನು ಉಲ್ಲೇಖಿಸುವ ಶಾಸನಗಳು ತೀರಾ ಅಪರೂಪ. ರನ್ನನ ಅಜಿತನಾಥ ಪುರಾಣದಲ್ಲಿ ಗುಂಡಮಬ್ಬೆಯ ಅನುಗಮನದ ಉಲ್ಲೇಖವಿದೆ.

ಯುದ್ಧದಲ್ಲಿ ಹೋರಾಟ ಮಾಡಿದ ವೀರನ ಪತ್ನಿಯರು ಶತ್ರುಗಳ ಬಲತ್ಕಾರವನ್ನು ತಾಳಲಾರದೆ ಅಧಿಕ ಸಂಖ್ಯೆಯಲ್ಲಿ ಸಹಗಮನ ಕೈಕೊಳ್ಳುತ್ತಿರಬೇಕು ಎನಿಸುತ್ತದೆ. ಬಹಳಷ್ಟು ಗ್ರಾಮಗಳಲ್ಲಿ ಮಾಸ್ತಿಕಲ್ಲುಗಳು, ವೀರ ಮಾಸ್ತಿಕಲ್ಲುಗಳು ಮತ್ತು ಒಂದೇ ಕಲ್ಲಿನಲ್ಲಿ ವೀರ ಮತ್ತು ಮಾಸ್ತಿಯರ ಶಿಲ್ಪಗಳಿರುವುದನ್ನು ಗಮನಿಸಬಹುದು. ಸತ್ತ ವ್ಯಕ್ತಿಯ ಜೊತೆ ಮಡದಿಯರಲ್ಲದೆ ಅವನ ವೇಶ್ಯೆಯರು ಸಹಗಮನ ಮಾಡುತ್ತಿದ್ದರು.[೨೩]

ದಕ್ಷಿಣ ಭಾರತದಲ್ಲಿ ಕ್ರಿ.ಶ. ೧೦ನೆಯ ಶತಮಾನದವರೆಗೆ ಸಹಗಮನ ಪದ್ಧತಿಯು ಹೆಚ್ಚು ಪ್ರಚಾರಕ್ಕೆ ಬರಲಿಲ್ಲ. ಸಹಗಮನವನ್ನು ಮಾಡಿ 'ಮಹಾಸತಿ'ಯಾದವರ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳೇ ಮಾಸ್ತಿಕಲ್ಲುಗಳು. ಇದರಲ್ಲಿ ಸಹಗಮನ ಮತ್ತು ಅನುಗಮನಗಳೆಂಬ ಎರಡು ರೀತಿಯ ಪ್ರಾಣತ್ಯಾಗವನ್ನು ಗುರುತಿಸಬಹುದು. ಅನುಗಮನಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಕ್ರಿ.ಶ. ೧೦೫೭ರ ಬೆಳತೂರಿನ ಶಾಸನ. ದೇಕಬ್ಬೆ ಪತಿಯನ್ನಗಲಿ ಇರಲಿಚ್ಚಿಸದ ಆಕೆ

ಅನುಗಮನಕ್ಕೆ ಸಿದ್ಧಳಾದಳು. ಸಾಮಾನ್ಯವಾಗಿ ಸಹಗಮನ ಕ್ಷತ್ರಿಯ ಅದರಲ್ಲಿಯೂ ಹೋರಾಟ ವರ್ಗದ ಮಹಿಳೆಯರಲ್ಲಿ ಆಚರಣೆಯಲ್ಲಿದ್ದ ಪದ್ಧತಿಯಾಗಿದ್ದಿತು.

ವಿಜಯನಗರದ ಅರಸ ವೀರಬುಕ್ಕರಾಯನ ಕುಮಾರ ವೇದಗಿರಿ ವಿರುಪ್ಪಣ್ಣನ ರಾಣೀವಾಸದ ಮುಂಜಾದೇವಿ ಆರಗದ ವೀರಭದ್ರ ದೇವರಿಗೆ ಯಥೇಚ್ಛವಾಗಿ ದಾನ ಮಾಡಿ ಅಚಂದ್ರಾರ್ಕಸ್ಥಾಯಿಯಾಗಿ ಮಾಡಿಸಿದ್ದು ಕೊನೆಗೆ ತನ್ನ ಪತಿಯಾದ ವೇದಗಿರಿ ವಿರುಪಣ್ಣನ ಕೂಡಿ ಸ್ವರ್ಗದ ಸೂರೆಗೊಂಡಳು ಎಂಬುದಾಗಿ ಆರಗ ಶಾಸನದಲ್ಲಿ ಉಲ್ಲೇಖವಿದೆ.[೨೪] ಮೇಗರವಳ್ಳಿಯ ಕಾಡಿನ ಮಧ್ಯೆ ಇರುವ ಅಪರೂಪದ ಲಿಖಿತ ಮಾಸ್ತಿಕಲ್ಲಿನಲ್ಲಿರುವ ಬರಹವೆಂದರೆ ಆರಗ ರಾಜ್ಯವನ್ನಾಳುತ್ತಿರುವ ರಾಯ ವಿಠಂಣ ಒಡೆಯರ ಕಾಲದಲ್ಲಿ ಮೇಗರವಳ್ಳಿಯ ನಾಗಕ್ಕ ಮಹಾಸತಿಯಾದಳು ಎಂಬ ಉಲ್ಲೇಖವಿದೆ.[೨೫]

ಅಹಿಂಸಾ ಮತ್ತು ವೈರಾಗ್ಯ ಜೈನ ಧರ್ಮದ ಉದಾತ್ತ ಬೋಧನೆಗಳಾಗಿವೆ. ಜೈನ ಯತಿಗಳು ಸಮಾಧಿ ಮರಣಕ್ಕೆ ವಿಶೇಷವಾದ ಪ್ರಾಧಾನ್ಯತೆಯನ್ನು ನೀಡಿದ್ದರೂ ಮಲೆನಾಡಿನ ಕೆಲವು ಶಾಸನಗಳಲ್ಲಿ ಸನ್ಯಾಸವಿಧಿ ಮತ್ತು ಸಮಾಧಿಮರಣ ಹೆಚ್ಚಾಗಿ ಕಂಡುಬರುವುದು. ತಾನು ಬದುಕಲಾರನೆಂಬ ಪ್ರಸಂಗದಲ್ಲಿ ಉಪವಾಸ ವ್ರತ ಹಿಡಿದ ಸಾಯುವುದು ಸಮಾಧಿಮರಣವಾಗಿದ್ದು ಸ್ತ್ರೀಯರಿಗೆ ಸಂಬಂಧಿಸಿದ ಈ ನಿಶ್ಚಿತ ಪ್ರಸಂಗಗಳು ಶಾಸನಗಳಲ್ಲಿ ಕಂಡುಬರುತ್ತವೆ.

ಕ್ರಿ.ಶ. ೧೧೯೦-೯೧ರ ಕಣಿವೆ ಶಾಸನದಲ್ಲಿ ಹೊಯ್ಸಳ ದೇವನ ಕೋಶಾಧಿಕಾರಿ ಚಂದಿಮಯ್ಯನ ಹೆಂಡತಿ ಬೊಪ್ಪವ್ವೆಯು ಶುಕ್ಲ ಸಂವತ್ಸರದ ಪುಷ್ಯಮಾಸದಲ್ಲಿ ಸನ್ಯಾಸವನ್ನು ಗೆಯ್ದಳು, ಅವಳಿಗೆ ಸಮಾಧಿ ಸಹಿತ ಸ್ವರ್ಗ ಪ್ರಾಪ್ತಿಯಾದುದು ಎಂದಿದೆ.[೨೬] ಮತ್ತೊಂದು ಶಾಸನದಲ್ಲಿ ಶ್ರೀ ಗುಣಸೇನ ಸೈದ್ಧಾನ್ತಿದೇವನ ಶಿಷ್ಯನಾದ ಹಾದಿಗಲ್ಲು ಗುಡಿಯಪ್ಪ ಗೌಡನ ಹೆಂಡತಿ ಕಾಳಿಗಾವುಂಡಿಯು ಸಮಾಧಿವಿಧಿಯಂ ಮುಡಿಪು ಸುರಲೋಕ ಪ್ರಾಪ್ತಿಯಾದಳು ಎಂದಿದೆ.[೨೭] ಎಂ.ಎಸ್. ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯಲ್ಲಿ ಸಹಗಮನದ ವಿಷಯ ನಿರೂಪಿತವಾಗಿದೆ. ಸಹಗಮನ ಮಾಡುತ್ತಿದ್ದ ಹೆಣ್ಣಿಗೆ ದೊರೆಯುತ್ತಿದ್ದ ಹಳದಿ ಸೀರೆ, ಅರಿಶಿಣ, ಕುಂಕುಮ, ತಾಂಬೂಲ ಮುಂತಾದ ವಸ್ತುಗಳು ಸರಕಾರದಿಂದ ದೊರೆಯುತ್ತಿದ್ದವು ಎಂದೂ ಮತ್ತು ಗಂಡನ ಸಂಗಡವೇ ಜೀವ ಸಹಿತ ಚಿತೆಯನ್ನು ಏರಿದ ಹೆಂಗಸು ಉರಿಯನ್ನು ತಾಳಲಾರದೇ ಎದ್ದು ಓಡಿ ಬಂದಲ್ಲಿ ರಾಜ್ಯಕ್ಕೆ ಹಾನಿ ತಟ್ಟುವುದೆಂದು ಅದಕ್ಕೆ ಅಡ್ಡಿಯಾಗದಿರುವ ಹಾಗೆ ಮದ್ದು ತುಂಬಿದ ಗಡಿಗೆ, ಬಾಣಗಳು, ಎಣ್ಣೆ ತುಪ್ಪದ ಗಡಿಗೆಗಳು ಇವುಗಳೆಲ್ಲವನ್ನು ಚಿತೆಯ ಮಧ್ಯಭಾಗದಲ್ಲಿಯೂ ಇಡುವುದರ ಬಗ್ಗೆ ವಿವರಣೆ ಇದೆ.[೨೮]

ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಸತಿ ಪದ್ಧತಿಯ ನಿರ್ಮೂಲನೆಗೆ ಮಧ್ಯಕಾಲೀನ ಇತಿಹಾಸದಲ್ಲಿ ಮೊದಲಿಗೆ ಕಾಣಿಸಿಕೊಂಡ ಪೋರ್ಚುಗೀಸ್ ಗವರ್ನರ್ ಅಲ್ಫನ್ಸೋ ಅಲ್ಬುಕರ್ಕ, ಅಕ್ಬರ್ ಮುಂತಾದವರು ಸಾಕಷ್ಟು ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಆನಂತರ ರಾಜರಾಮ

ಮೋಹನರಾಯ್‌ರವರು ಲಾರ್ಡ್‌ವಿಲಿಯಂ ಬೆಂಟಿಂಕ್ ಸಹಕಾರದಿಂದ ಕ್ರಿ.ಶ. ೧೮೨೯ರಲ್ಲಿ ಕಾನೂನಿನ ಮೂಲಕ ನಿಷೇಧಿಸಲ್ಪಟ್ಟರೂ ಉತ್ತರ ಭಾರತದ ಕೆಲವು ಕಡೆ ಸತಿಸಹಗಮನ ಪ್ರಕರಣಗಳು ಕಂಡುಬರುತ್ತಿದ್ದವು. ರಾಜಸ್ಥಾನದ ಹಥಿದೆಹ್ ಎಂಬ ಗ್ರಾಮದಲ್ಲಿ ಕ್ರಿ.ಶ. ೧೯೮೦ರಲ್ಲಿ ನೂರಾರು ಗ್ರಾಮಸ್ಥರ ಸಮ್ಮುಖದಲ್ಲಿ ಸರಸ್ವತಿ ಎಂಬುವವಳು ತನ್ನ ಗಂಡ ಹೀರಾಲಾಲನ ಚಿತೆಯಲ್ಲಿ ಭಸ್ಮವಾದ ವಿಷಯ ತಿಳಿದುಬರುತ್ತದೆ. ನಾಗಪುರದ ರಜಪೂತ ಮಹಿಳೆ ಸುಗನ್ ಕನ್ವರ್ ಎಂಬುವವಳು, ರಾಜಸ್ಥಾನದ ರೂಪ ಕನ್ವರ್ ಎಂಬುವವರು, ಉತ್ತರ ಪ್ರದೇಶದ ಚರಣ್ ಷಾ ಎಂಬುವವರು ಕ್ರಿ.ಶ. ೧೯೯೯ ರಂದು ಸತಿಯಾದ ವಿಷಯ ವರದಿಯಾಗಿದೆ.[೨೯]

ಇತ್ತೀಚೆಗೆ ಬಿಹಾರ ರಾಜ್ಯದ ಸಹರ್ಸಾ ಜಿಲ್ಲೆಯ ಪರ್ಮಿನಿಯಾ ಎಂಬುವಲ್ಲಿ ೬೫ ವರ್ಷದ ಮಹಿಳೆಯೊಬ್ಬಳು ಪತಿಯ ಚಿತೆಗೆ ಹಾರಿ ಸತಿಹೋದ ಘಟನೆ ಡಿಸೆಂಬರ್ ೧೫ರ ೨೦೧೪ರ ಪ್ರಜಾವಾಣಿ ಪತ್ರಕೆಯಲ್ಲಿ ಪ್ರಕಟವಾಗಿದೆ. ತನ್ನ ಗಂಡನ ಅಂತ್ಯ ಸಂಸ್ಕಾರ ಮುಗಿಸಿ ಎಲ್ಲರೂ ಮನೆಗೆ ಬಂದಾಗ ದಹ್ಯಾದೇವಿ ಅಂತ್ಯಸಂಸ್ಕಾರದ ಸ್ಥಳದತ್ತ ಧಾವಿಸಿ ಚಿತೆಗೆ ಹಾರಿ ಮೃತಪಟ್ಟಳು. ಕೂಡಲೇ ಆಕೆಯ ಅಂತ್ಯವಿಧಗಳನ್ನು ಸಹ ಕುಟುಂಬ ಸದಸ್ಯರು ನೆರವೇರಿಸಿದರು ಎಂಬುದರ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಕೊನೆ ಟಿಪ್ಪಣಿಗಳು

೧. ಎಕ ೧೩ ತೀರ್ಥಹಳ್ಳಿ ೧೧೬, ಕ್ರಿ.ಶ. ೧೫ನೆಯ ಶತಮಾನ.

೨. ಪೂರ್ವೋಕ್ತ; ಮಂಜುನಾಥ ಸಿ.ಯು. ಪು.ಸಂ. ೧೯೧.

೩. ಪೂರ್ವೋಕ್ತ; ಚಿದಾನಂದಮೂರ್ತಿ ಎಂ., ಪು.ಸಂ. ೪೦೮, ೪೨೯.

೪. ಇದೇ, ಪು.ಸಂ. ೪೨೯.

೫. ಪೂರ್ವೋಕ್ತ; ಮಂಜುನಾಥ ಸಿ.ಯು., ಪು.ಸಂ. ೨೦೯.

೬. ಎಕ ೧೩ ತೀರ್ಥಹಳ್ಳಿ ೧೨, ಕ್ರಿ.ಶ. ೧೭೫೩–೫೪.

೭. ಇದೇ, ತೀರ್ಥಹಳ್ಳಿ ೫೦, ಕ್ರಿ.ಶ. ೧೭೨೩.

೮. ಎಕ ೧೨ ಕೊಪ್ಪ ೧೪, ಕ್ರಿ.ಶ. ೧೭೨೯.

೯. ಇದೇ, ಕೊಪ್ಪ ೧೨, ಕ್ರಿ.ಶ. ೧೫೭೮.

೧೦. ಎಕ ೧೧ ಶೃಂಗೇರಿ ೮, ಕ್ರಿ.ಶ. ೧೬೦೮.

೧೧. ಪೂರ್ವೋಕ್ತ; ಚಿದಾನಂದಮೂರ್ತಿ ಎಂ, ಪು.ಸಂ. ೪೧೨.

೧೨. ಪೂರ್ವೋಕ್ತ; ಮಂಜುನಾಥ ಸಿ.ಯು., ಪು.ಸಂ. ೧೯೪.

೧೩. ಎಕ ೧೩ ತೀರ್ಥಹಳ್ಳಿ ೧೯೫, ಕ್ರಿ.ಶ. ೧೩೮೪.

೧೪. ಇದೇ, ತೀರ್ಥಹಳ್ಳಿ ೧೭೩, ಕ್ರಿ.ಶ. ೧೧೧೩.

೧೫. ಇದೇ, ತೀರ್ಥಹಳ್ಳಿ ೪೪, ಕ್ರಿ.ಶ. ೧೬೬೬.

೧೬. ಇದೇ, ತೀರ್ಥಹಳ್ಳಿ ೧೯೫, ಕ್ರಿ.ಶ. ೧೩೮೪.

೧೭. ಎಕ ೧೨ ಕೊಪ್ಪ ೬, ಕ್ರಿ.ಶ. ೧೫೫೮.

೧೮. ಪೂರ್ವೋಕ್ತ: ಚೆನ್ನಕ್ಕ ಎಲಿಗಾರ, ಪು.ಸಂ. ೪೨.

೧೯. ಶಾಸ್ತ್ರಿ ಎ.ಕೆ. ಕಡತ ೧೬೦ ದಾಖಲೆ ೪ ದಿ ರೆಕಾರ್ಡ ಆಫ್ ಶೃಂಗೇರಿ ಮಠ ರಿಲೇಟಿಂಗ್ ಟು ಕೆಳದಿ ಮ್ಯೂಸಿಯಂ ಆಂಡ್ ರೀಸರ್ಚ್ ಬ್ಯೂರೋ ಕೆಳದಿ ೨೦೦೧, ಪು.ಸಂ. ೪೯, ೫೦.

೨೦. ಪೂರ್ವೋಕ್ತ: ಶಾಸ್ತ್ರಿ ಎ.ಕೆ., ಕಡತ ೪೨ ದಾಖಲೆ ೩೪, ಕಡತ ೪೪, ಪು.ಸಂ. ೧೮೩.

೨೧. ಪೂರ್ವೋಕ್ತ; ಶಾಸ್ತ್ರಿ ಎ.ಕೆ. ಕಡತ ೨೮, ದಾಖಲೆ ೭೨, ಪು.ಸಂ. ೧೮೨, ೧೮೩.

೨೨. ಪೂರ್ವೋಕ್ತ; ಮಂಜುನಾಥ ಸಿ.ಯು., ಪು.ಸಂ. ೪೫೯.

೨೩. ಇದೇ, ಪುಟ ಸಂಖ್ಯೆ ೪೫೯.

೨೪. ಎಕ ೧೩ ತೀರ್ಥಹಳ್ಳಿ ೨೩, ಕ್ರಿ.ಶ. ೧೩೭೭.

೨೫. ಇದೇ, ತೀರ್ಥಹಳ್ಳಿ ೨೧೩, ಕ್ರಿ.ಶ. ೧೪೧೭.

೨೬. ಇದೇ, ತೀರ್ಥಹಳ್ಳಿ ೩೦, ಕ್ರಿ.ಶ. ೧೯೯೦–೯೧.

೨೭. ಇದೇ, ತೀರ್ಥಹಳ್ಳಿ ೨೨೬, ಕ್ರಿ.ಶ. ೧೪೭೭.

೨೮. ಪೂರ್ವೋಕ್ತ; ಮಂಜುನಾಥ ಸಿ.ಯು. ಪು.ಸಂ. ೪೬೨, ೪೬೩.

೨೯. ಇದೇ, ಪು.ಸಂ. ೪೬೩.

•••

ಅಧ್ಯಾಯ : ಆರು

ವೀರಗಲ್ಲು ಮತ್ತು ಮಾಸ್ತಿಗಲ್ಲು ಶಿಲ್ಪಗಳಲ್ಲಿ ಕಾಣುವ ಸ್ತ್ರೀ ಸಮುದಾಯ

ಅಧ್ಯಾಯ : ಆರು

ವೀರಗಲ್ಲು ಮತ್ತು ಮಾಸ್ತಿಗಲ್ಲು ಶಿಲ್ಪಗಳಲ್ಲಿ ಕಾಣುವ ಸ್ತ್ರೀ ಸಮುದಾಯ

ದ್ವಾವಿಮೌ ಪುರುಷೌ ಲೋಕೇಸೂರ್ಯಮಂಡಲ ಭೇದಿನೌ
ಪರಿವ್ರಾಡ್ಯೋಗ ಯುಕ್ತಾಶ್ಚರಣೇ ಚೌಭಿಮುಖೇಹತಃ

ಎಂಬ ಶ್ಲೋಕದಂತೆ ಸೂರ್ಯಮಂಡಲವನ್ನು ಭೇದಿಸುವ ಸಮರ್ಥರು ಈ ಲೋಕದಲ್ಲಿರುವವರು ಇಬ್ಬರೇ, ಒಬ್ಬ ಯೋಗನಿಷ್ಠನಾದ ಸನ್ಯಾಸಿ, ಇನ್ನೊಬ್ಬ ರಣರಂಗವನ್ನು ಪ್ರವೇಶ ಮಾಡಿ ವೀರತ್ವ ಪ್ರದರ್ಶಿಸಿ ಸಾಯುವನೊಬ್ಬ ಎಂಬ ಮೌಲ್ಯಯುತ ಭಾವನೆ ಜನರ ಮನದಲ್ಲಿ ಆಳವಾಗಿ ಬೇರೂರತೊಡಗಿದಾಗ ವೀರಮರಣದ ಬಗ್ಗೆ ಅತಿಯಾದ ನಂಬಿಕೆ ಶ್ರದ್ಧೆಯುಂಟಾಗಿ ವೀರಮರಣಗಳು ಉಂಟಾಗತೊಡಗಿದವು. ಇಂತಹ ವೀರರು ಇಹಲೋಕದಲ್ಲೂ ಪರಲೋಕದಲ್ಲೂ ಪೂಜೆಗೆ ಅರ್ಹರೆನಿಸಿಕೊಂಡರು.[೧] ಜಿತೇನಲಭ್ಯತೇ ಲಕ್ಷ್ಮೀ ಮೃತೇನಪಿ ಸುರಾಂಗನಾ, ಕ್ಷಣ ವಿಧ್ವಂಸಿನೀ ಕಾಯೆಕಾ ಚಿಂತಾ ಮರಣೆ ರಣೆ॥ ಯುದ್ಧದಲ್ಲಿ ಜಯಿಸಿದರೆ ವಿಜಯಲಕ್ಷ್ಮೀ ಮಡಿದರೇ ಸ್ವರ್ಗಲಕ್ಷ್ಮೀ ಎಂದು ಶಾಸನಗಳು ಸಾರುತ್ತವೆ

ಯುದ್ಧವೀರರ ಪಡೆ ಪ್ರಾಚೀನ ಕಾಲದಲ್ಲಿ ಎರಡು ಬಗೆಯಾಗಿದ್ದಿತು

೧. ಜೋಳವಾಳಿ ೨. ಲೆಂಕವಾಳಿ

ಜೋಳ ಎಂದರೆ ಅನ್ನದ ಋಣಕ್ಕಾಗಿ ಯಜಮಾನನ ಆಳಾಗುತ್ತಿದ್ದ ಹೋರಾಟಗಾರರು ಎಂಬ ಅರ್ಥವನ್ನು ಸೂಚಿಸಿದರೆ, ಲೆಂಕವಾಳಿ ಪದ್ಧತಿಯೆಂದರೆ ಹಳ್ಳಿಗಳಲ್ಲಿ ತಮ್ಮ ತಮ್ಮ ಗ್ರಾಮ ರಕ್ಷಣೆಗೋಸ್ಕರ ಇದ್ದ ಯೋಧರ ಪಡೆ. ಇಂತಹ ವೀರರು ಮರಣ ಹೊಂದಿದಾಗ ನೆಡುವ ಕಲ್ಲುಗಳು ವೀರಗಲ್ಲುಗಳಾಗುತ್ತಿದ್ದವು.

ಇನ್ನು ವೀರರು ತುರುಗೋಳ್, ಪೆಣ್ಬುಯಲ್, ಎರವೆಸ, ಊರುಳಿವು ಎಂಬ ಪ್ರಮುಖ ಉದ್ದೇಶಗಳಿಗೆ ಬದ್ಧರಾಗಿ ವೀರ ಮರಣವನ್ನಪ್ಪುತ್ತಿದ್ದ ಪ್ರತಿಯೊಂದು ಊರಿನಲ್ಲಿ ಇಂದಿಗೂ ವೀರ ಸ್ಮಾರಕಗಳನ್ನು ಕಾಣಬಹುದು.

ಮಾನವ ಜನಾಂಗದಲ್ಲಿ ವೀರತ್ವಕ್ಕೆ ವಿಶಿಷ್ಟವಾದ ಸ್ಥಾನವಿದೆ. ವಿಶ್ವದ ಅನೇಕ ಮಹಾಕಾವ್ಯಗಳು ವೀರತ್ವದ ವೈಭವೀಕರಣದ ಆಶಯವುಳ್ಳವುಗಳಾಗಿವೆ. ಪುರುಷ ಪರಾಕ್ರಮಕ್ಕೆ ಇಹ ಮತ್ತು

ಪರಲೋಕದಲ್ಲೂ ಸದ್ಗತಿ ಸಿಗುವುದೆಂಬ ನಂಬಿಕೆ ವೇದ ಕಾಲದಿಂದಲೂ ಪ್ರಚಾರದಲ್ಲಿದ್ದಿತು. ಯಾರು ಯುದ್ಧಗಳಲ್ಲಿ ಪರಾಕ್ರಮದಿಂದ ಕಾದಾಡಿ ಮೃತರಾಗಿ ವೀರ ಸ್ವರ್ಗದಲ್ಲಿ ನೆಲೆಸುತ್ತಿರುವರೋ, ಯಾರು ಸಹಸ್ರ ಸಂಖ್ಯೆಯಲ್ಲಿ ದಾನ ಮಾಡಿ, ಯಜ್ಞಾನುಷ್ಠಾನ ಕರ್ಮ ಮಾಡಿ ಉತ್ತಮ ಲೋಕಗಳಲ್ಲಿ ವಾಸಿರುವವರೋ ಅಂತಹ ಪಿತೃಗಳ ಬಳಿಗೆ ಹೋಗು ಆತ್ಮವೇ; ಇದು ಋಗ್ವೇದ ಸಂಹಿತೆಯಲ್ಲಿನ ಸೂಕ್ತಿ. ಪಿತೃಗಳ ಪರಾಕ್ರಮಗಳನ್ನು ಧ್ಯಾನಿಸುತ್ತಾ ಅದನ್ನು ಉಳಿಸಿ ಪೋಷಿಸುವ ಸಂಸ್ಕೃತಿಯೊಂದು ವೇದಕಾಲದಲ್ಲೂ ಇತ್ತು ಎಂದು ತಿಳಿಯುತ್ತದೆ.[೨]

ಭಾರತದ ಮಹಾಕಾವ್ಯಗಳಲ್ಲೂ ವೀರತ್ವದ ಬಗ್ಗೆ ಗೌರವ ಅಭಿಮಾನವಿದ್ದುದರಿಂದ ಯುದ್ಧ ವಿದ್ಯೆಯ ಕಲಿಕೆ ಅಗತ್ಯವೆನಿಸಿತು. ಶಸ್ತ್ರ ಸಂಪತ್ತೇ ವೀರನಾಯಕನಿಗೆ ಶೋಭೆ ಎನಿಸಿತು. ಭಾರತೀಯ ದೈವಗಳಲ್ಲಿ ವೀರತ್ವಕ್ಕೆ ಪ್ರಾಧಾನ್ಯತೆಯಿದೆ ಎನ್ನುವುದಕ್ಕೆ ದೇವರುಗಳ ಕೈಯಲ್ಲಿ ಒಂದಲ್ಲ ಒಂದು ಆಯುಧವಿರುವುದೇ ಸಾಕ್ಷಿಯಾಗಿದೆ.

ಕೆಲವು ವಿಧವೆಯರು ಗಂಡನ ಮರಣದ ನಂತರ ಉಳಿದ ಜೀವನವನ್ನು ಕಠಿಣ ವ್ರತಗಳಲ್ಲಿ ಕಳೆಯುತ್ತಿದ್ದರು. ಇನ್ನು ಕೆಲವು ಮಹಿಳೆಯರು ಪತಿಯ ಸಾವಿನ ನಂತರ ಗಂಡಸಿ ನಂತೆಯೇ ನಾಡಪ್ರಭುತ್ವವನ್ನು ವಹಿಸಿ ನಾಡನ್ನು ಮುನ್ನಡೆಸಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಉದಾ: ಕೆಳದಿ ಚೆನ್ನಮ್ಮಾಜಿ.

ಪ್ರಾಚೀನ ಮಲೆನಾಡಿನ ಜನಾಂಗಗಳು ಈ ಲೋಕದಂತೆಯೇ ಇನ್ನೊಂದು ಲೋಕವಿದೆ ಎಂದು ಬಹುವಾಗಿ ನಂಬಿದ್ದರು. ಗಂಡನ ಮರಣ ನಂತರ ಅವಳು ಸ್ವಪ್ರೇರಣೆಯಿಂದ ಅಥವ ಬಲಾತ್ಕಾರವಾಗಿ ಪತಿಯ ಜೊತೆಗೆ ಚಿತೆಯೇರುವ ಪದ್ಧತಿ ಭಾರತದಲ್ಲಿ ರೂಢಿಯಲ್ಲಿದ್ದಿತು. ಈ ಪರಂಪರೆಯು ಕರ್ನಾಟಕದ ಮಧ್ಯಮಲೆನಾಡಿನಲ್ಲಿಯೂ ಕಂಡುಬರುತ್ತದೆ.

ಕ್ರಿ.ಶ. ಸುಮಾರು ೬ನೆಯ ಶತಮಾನದಿಂದಲೂ ಸತಿ ಆಚರಣೆ ಕಂಡುಬರುತ್ತದೆ. ಈ ಮಹಾಸತಿ ಆಚರಣೆಯಲ್ಲಿ ಸಹಗಮನ ಮತ್ತು ಅನುಗಮನ ಎಂಬ ಎರಡು ವಿಧಗಳನ್ನು ಅನುಸರಿಸುತ್ತಿದ್ದರು. ಮರಣಹೊಂದಿದ ಪತಿಯೊಂದಿಗೆ ಅಗ್ನಿಪ್ರವೇಶ ಮಾಡುವುದು ಸಹಗಮನವಾದರೆ ದೂರದ ಪ್ರದೇಶದಲ್ಲಿ ಮಡಿದ ಪತಿಯ ಶವ ಸಿಗದೆ ಹೋದರೆ ಆತನ ಪ್ರಿಯವಾದ ಒಂದು ವಸ್ತುವಿನೊಡನೆ ಅಗ್ನಿ ಪ್ರವೇಶಗೈಯುವುದು ಅನುಗಮನ. ಇಂತಹ ಮಹಾಸತಿಯಾದವರಿಗೋಸ್ಕರ ಮಾಸ್ತಿಗಲ್ಲುಗಳನ್ನು ನೆಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿ ಬಂದಿದೆ. ಅದರಲ್ಲೂ ಮಧ್ಯಮಲೆನಾಡಿನ ಭಾಗದಲ್ಲಿ ಇಂತಹ ವೀರಗಲ್ಲು, ಮಾಸ್ತಿಗಲ್ಲುಗಳು ಹೇರಳ ಸಂಖ್ಯೆಯಲ್ಲಿ ಸಿಗುತ್ತವೆ. ಮಲೆನಾಡಿನಲ್ಲಿಯೇ ಏಕೆ ಇಂತಹ ಸತಿಪದ್ಧತಿ ವೈಭವೀಕರಿಸಲು ಕಾರಣ ಎಂಬುದುನ್ನು ಅಧ್ಯಯನದಲ್ಲಿ ಸೂಕ್ಷ್ಮವಾಗಿ ಅವಲೋಕಿಸಲಾಗಿದೆ. ಸ್ತ್ರೀ ಸಮುದಾಯ ಈ ಭಾಗದಲ್ಲಿ ಹೆಚ್ಚು ಶೋಷಣೆಗೆ ಒಳಗಾಗಿತ್ತೆ? ಅಥವ ಭಯ ಹಾಗೂ ದೈವಿಕ ಶಕ್ತಿಗಳ ಪ್ರೇರಣೆಯೇ ಅಥವಾ ಪಾತಿವ್ರತ ಆಚರಣೆಯೇ? ಅಥವಾ ವೈದಿಕ ಆಚರಣೆಯ ಹಿನ್ನೆಲೆಯಲ್ಲಿ ದಾಸ್ಯ ಪ್ರವೃತ್ತಿಯೇ ಎಂಬಂಥ ಪ್ರಶ್ನೆಗೆ ಉತ್ತರ ಹುಡುಕುವುದಾಗಿದೆ.

ಮಧ್ಯಮಲೆನಾಡಿನ ಪ್ರದೇಶಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಹೇರಳ ಸಂಖ್ಯೆಯಲ್ಲಿ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ಪತ್ತೆಯಾಗಿದ್ದು, ಅವುಗಳ ತಲಸ್ಪರ್ಶಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಪ್ರತಿಯೊಂದು ಗ್ರಾಮಗಳಲ್ಲೂ, ಹಳ್ಳಿಗಳಲ್ಲೂ, ಊರುಗಳಲ್ಲೂ ಕಂಡುಬಂದಿವೆ. ಮೂರು ತಾಲ್ಲೂಕುಗಳಲ್ಲಿನ ಬಹಳಷ್ಟು ಗ್ರಾಮಗಳಿಗೂ ಭೇಟಿಕೊಟ್ಟು ಅವುಗಳನ್ನು ಕಲೆ ಹಾಕಲಾಗಿದೆ. ವೀರಗಲ್ಲುಗಳಲ್ಲಿನ ಅಲಂಕಾರಗಳನ್ನು ವಿಶ್ಲೇಷಿಸಿದಾಗ ಅವುಗಳ ಅಲಂಕಾರಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಒಂದು ಸಾಧಾರಣ ಅಲಂಕಾರ, ಇನ್ನೊಂದು ವಿಶೇಷ ಅಲಂಕಾರ. ಸಾಮಾನ್ಯವಾಗಿ ಎರಡು ಅಡಿ ವೀರಗಲ್ಲಿನಿಂದ ಪ್ರಾರಂಭವಾಗಿ ಎಂಟು ಅಡಿಯವರೆಗೆ ಮುಕ್ತಾಯಗೊಳ್ಳುತ್ತವೆ. ಕೆಲವೊಂದು ವೀರಗಲ್ಲುಗಳು ನಾಲ್ಕರಿಂದ ಆರು ಹಂತಗಳನ್ನು ಹೊಂದಿದ್ದು ವಿಶಾಲವಾದ ಶಿಲ್ಪಾಕೃತಿಗಳಿಂದ ಕೆತ್ತಲ್ಪಟ್ಟಿವೆ. ಇನ್ನು ಕೆಲವು ವೀರಗಲ್ಲುಗಳು ಯಾವುದೇ ಅಂತಸ್ತುಗಳನ್ನು ಹೊಂದದೆ ಕೇವಲ ವೀರನ ಚಿತ್ರವನ್ನು ಹೊಂದಿವೆ. ಕಲ್ಲಿನ ಕೆತ್ತನೆಯಲ್ಲಿ ಬಳಪ ಹಾಗೂ ಕಪ್ಪು ಶಿಲೆಯನ್ನು ಬಳಸಿದ್ದು ಬಳಪದ ಕಲ್ಲಿನಲ್ಲಿನ ಅಲಂಕಾರಗಳು ಕಪ್ಪುಕಲ್ಲಿನ ಅಲಂಕಾರಕ್ಕಿಂತ ಸೌಂದರ್ಯಯುತವಾಗಿದೆ. ಆಗುಂಬೆ ಮಾಸ್ತಿಕಲ್ಲು, ಕಣಿವೆಯ ನಿಷಿಧಿಗಲ್ಲು, ಕೊಳವಳ್ಳಿಯ ಮಾಸ್ತಿಕಲ್ಲುಗಳಲ್ಲಿ ಬರಹವನ್ನು ಕಾಣಬಹುದು.

ಪ್ರಾಪ್ತವಾಗಿರುವ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ಹೋಲಿಕೆಯಲ್ಲಿ ಒಂದರಂತೆ ಮತ್ತೊಂದಿಲ್ಲ. ಎಲ್ಲವುದರಲ್ಲಿಯೂ ಸೂಕ್ಷ್ಮತೆ ಗಮನಿಸಿದಾಗ ವೈಶಿಷ್ಟ್ಯತೆ ಗೋಚರವಾಗುತ್ತದೆ. ಈ ಕಲ್ಲುಗಳ ಹೊರಮೈ ಸುತ್ತಲೂ ಪ್ರಭಾವಳಿಯನ್ನು ರಚಿಸಿದ್ದು ಒಳಭಾಗದಲ್ಲಿ ವಿಗ್ರಹಗಳಿವೆ, ಶಿಲ್ಪಾಕೃತಿಗಳಿವೆ. ಮೇಲ್ಭಾಗ ತ್ರಿಕೋನಾಕಾರದಲ್ಲಿದ್ದು ಮಕರತೋರಣ ಮತ್ತು ಮಧ್ಯದಲ್ಲಿ ಸಿಂಹದ ಬಾಯಿಯ ಕೆತ್ತನೆಯಿದೆ.

೬.೧. ವೀರಗಲ್ಲುಗಳಲ್ಲಿ ಅಲಂಕಾರ

ಸಾವು ಎಂಬುದು ಒಂದು ಕ್ಷಣದಲ್ಲಿ ಮಾನವನನ್ನು ಇಲ್ಲವಾಗಿಸುವ ಸ್ಥಿತಿಯಾದುದರಿಂದ ಸಾಮಾನ್ಯವಾಗಿ ಇದರ ಬಗ್ಗೆ ಲೋಕದ ಉದ್ದಗಲದ ಜನಮಾನಸದಲ್ಲಿ ಸಹಜವಾಗಿ ಬೆಳೆದುಬಂದ ಭಾವನೆಗಳು ಭಯ, ಕ್ರೋಧ, ಭೀತಿ, ಆಕರ್ಷಣೆ ಮತ್ತು ವಿಕರ್ಷಣೆಗಳು. ಸತ್ತ ಆತ್ಮದ ಬಗ್ಗೆ ಪ್ರೀತಿ ಇದ್ದರೂ ಕಳೇಬರದ ಬಗ್ಗೆ ಭೀತಿ, ಈ ವೈರುಧ್ಯಗಳಿಂದ ಶವಸಂಸ್ಕಾರ ಕ್ರಮ ಹುಟ್ಟಿರಬಹುದು. ಇತಿಹಾಸಪೂರ್ವ ಕಾಲದಿಂದಲೂ ಶವಸಂಸ್ಕಾರ, ವಿಧಾನ, ಸಮಾಧಿ ಮತ್ತು ಮುಂದೆ ನೀಡಲಾಗಿರುವ ಬಲಿ ಕಾಣಿಕೆಗಳ ವಿಚಾರದಲ್ಲಿ ಜಗತ್ತಿನಾದ್ಯಂತ ಒಂದು ಸಾಮ್ಯತೆ ಕಾಣಿಸಿಕೊಳುತ್ತದೆ. ಇದಕ್ಕೆ ಕಾರಣ ಸಾವಿನ ಬಗ್ಗೆ ಮಾನವನ ಮೂಲಭೂತ ಭಾವನೆಗಳು ಒಂದೇ ಆಗಿರುವುದು.

ಗತಿಸಿದ ಮಾನವನನ್ನು ಸಮಾಧಿ ಮಾಡಿದ ನಿರ್ದಿಷ್ಟ ಸ್ಥಳದ ಗುರುತಿಗಾಗಿ ಕೆಲವು ಗುರುತುಗಳನ್ನು, ಸಂಕೇತಗಳನ್ನು ಅಲ್ಲಿ ನೆಡುವ ಸಂಪ್ರದಾಯ ಆರಂಭವಾಗಿ ಕ್ರಮೇಣ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳನ್ನು ಸಾಧಕರ ನೆನಪಿಗಾಗಿ ಪ್ರತಿಷ್ಠಾಪಿಸುವ ವೀರಪರಂಪರೆ ಪ್ರಾರಂಭವಾಯಿತು.

ಹೀಗೆ ವೀರಮರಣ ಸ್ಮಾರಕಗಳನ್ನು ಶಿಲೆ, ಚಿತ್ರಕಲೆ, ಬರಹಶಿಲೆ, ಚಿತ್ರಬರಹಶಿಲೆ ಹಾಗೂ ಗುಡಿಗಳ ರೂಪದಲ್ಲಿ ಕಾಣಬಹುದು.

ವೀರಗಲ್ಲು, ಮಾಸ್ತಿಗಲ್ಲು, ಆತ್ಮಬಲಿ, ಸಿಡಿತಲೆ, ನಿಷಿಧಿಗಲ್ಲುಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆತಿದ್ದು ಅತ್ಯಮೂಲ್ಯವಾದ ಮಾಹಿತಿಗಳನ್ನು ನೀಡುತ್ತವೆ. ಕೇವಲ ವೀರನ ಮತ್ತು ಸತಿಯ ಶಿಲ್ಪದಿಂದ ಪ್ರಾರಂಭವಾಗಿ ಕೊನೆಯಲ್ಲಿ ೫ ಮತ್ತು ೬ನೆಯ ಅಂತಸ್ತಿನವರೆಗೆ ಎಂಟು ಅಡಿಯವರೆಗಿನ ಬೃಹತ್ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ಶೋಧನಾಕಾರ್ಯವನ್ನು ಕೈಕೊಂಡಾಗ ದೊರೆತಿವೆ. ವೀರಗಲ್ಲುಗಳು ಅಲಂಕಾರದಲ್ಲಿ ಅದ್ಭುತ ಸೌಂದರ್ಯವನ್ನು ವ್ಯಕ್ತಪಡಿಸಿವೆ. ಎಲ್ಲಾ ವೀರಗಲ್ಲುಗಳಲ್ಲಿ ಸೂಕ್ಷ್ಮತೆಯನ್ನು ಗಮನಿಸಿದಾಗ ಸಾಕಷ್ಟು ಭಿನ್ನತೆಯನ್ನು ವೈವಿಧ್ಯತೆಯನ್ನು ಪರಿಶೀಲಿಸಬಹುದು.

ಹೆಚ್ಚಿನ ವೀರಗಲ್ಲುಗಳ ಶಿಲ್ಪಗಳು ಉಬ್ಬುಶಿಲ್ಪದ ರೂಪದಲ್ಲಿವೆ. ವೀರಗಲ್ಲುಗಳಲ್ಲಿ ಅಪ್ಸರೆಯರು ಮೇನೆಯಲ್ಲಿ ಮೋಡದ ನಡುವೆ ಸ್ವರ್ಗಕ್ಕೆ ವೀರನ ಜೊತೆಯಲ್ಲಿ ಹಾರುವುದನ್ನು ಚಿತ್ರಿಸಲಾಗಿದೆ. ಗೆದ್ದರೆ ಇಹಲೋಕದಲ್ಲಿ ಲಕ್ಷ್ಮಿಯೂ, ಸತ್ತರೆ ಸ್ವರ್ಗದಲ್ಲಿ ಸುರಾಂಗನೆಯರು ದೊರಕುತ್ತಾರೆಂಬ ನಂಬಿಕೆ ಇದಕ್ಕೆ ಕಾರಣವಿರಬಹುದು. ವೀರನ ಕೈಯಲ್ಲಿ ಬಿಲ್ಲು ಅಥವ ಬಾಕು ಇದ್ದು ತಲೆಕೂದಲನ್ನು ನೆತ್ತಿಯ ಮೇಲೆ ಗಂಟು ಕಟ್ಟಿರುವುದು, ಸೊಂಟಕ್ಕೆ ಬಟ್ಟೆಯ ಪಟ್ಟಿ ಬಿಗಿದಂತೆಯೂ ಕಟ್ಟಿರುವುದು ವೀರಗಲ್ಲುಗಳಲ್ಲಿನ ವಿಶೇಷ ಅಲಂಕಾರ. ಉದಾ: ಮಂಡಗದ್ದೆ ವೀರಗಲ್ಲು.

ಎಲ್ಲಾ ವೀರಗಲ್ಲುಗಳಲ್ಲಿ ಪ್ರಧಾನವಾಗಿ ಪುರುಷರ ಶಿಲ್ಪಾಕೃತಿಗಳನ್ನೇ ಕೆತ್ತಲಾಗಿದ್ದು, ಸ್ತ್ರೀಯರ ವಿಗ್ರಹಗಳನ್ನು ಕಡೆಗಣಿಸಲಾಗಿದೆ. ವೀರನ ಸ್ವರ್ಗಾರೋಹಣ ಹಂತದಲ್ಲಿ ಮಾತ್ರ ಅಪ್ಸರೆಯರು ಆತನನ್ನು ಸ್ವರ್ಗಕ್ಕೆ ಮೇನೆಯಲ್ಲಿ ಹೊತ್ತೊಯ್ಯುವ ಶಿಲ್ಪವನ್ನು ಬಿಂಬಿಸಲಾಗಿದೆ.

ಪ್ರತಿಯೊಂದು ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರ ವಿಗ್ರಹ, ಮಧ್ಯದಲ್ಲಿ ಶಿವಲಿಂಗವನ್ನು ಪೂಜಿಸುವ ಯತಿಯ ಚಿತ್ರ ಹಾಗೂ ಅಲಂಕೃತವಾಗಿ ಮಂಡಿಯೂರಿ ಮಲಗಿರುವ ಬಸವನ ವಿಗ್ರಹವನ್ನು ಮತ್ತು ಶಿವಲಿಂಗಕ್ಕೆ ಆನೆಗಳು ಸೊಂಡಿಲಿನಿಂದ ಜಲಪ್ರೋಕ್ಷಣೆ ಮಾಡುತ್ತಿರುವ ದೃಶ್ಯವನ್ನು ಸಾಧಾರಣವಾಗಿ ಕಾಣಬಹುದು

ಹರೂರು ಮಕ್ಕಿ ವೀರಗಲ್ಲುಗಳಲ್ಲಿನ ೪ನೆಯ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಪಲ್ಲಕ್ಕಿಯಲ್ಲಿ ಹೊತ್ತೊಯ್ಯುತ್ತಿದ್ದು, ಇದರೊಳಗೆ ಕುಳಿತಿರುವ ವೀರನು ಒಂದು ಕಾಲನ್ನು ಮೇಲಕ್ಕೆ ಎತ್ತಿದ್ದು, ಇನ್ನೊಂದು ಕಾಲನ್ನು ಕೆಳಕ್ಕೆ ಇಳಿಬಿಟ್ಟಿದ್ದು ರಾಜ ಗಾಂಭೀರ್ಯದಿಂದ ಕುಳಿತಿದ್ದಾನೆ. ಒಂದನೆಯ ಹಂತದ ಮೇಲ್ಭಾಗದಲ್ಲಿ ಸಿಂಹ ಬಾಯಿಯ ಶಿಲ್ಪವಿದ್ದು, ಅದರ ಕೆಳಗೆ ಮಂಟಪದೊಳಗಿರುವ ಶಿವಲಿಂಗ ಹಾಗೂ ಗಂಟೆ, ಗೆಜ್ಜೆಸರ, ಕಾಲ್ಕಡಗದಿಂದ ಅಲಂಕೃತವಾದ ಬಸವನ ವಿಗ್ರಹವಿದೆ. ಕೆಲವು ಮಾಸ್ತಿಗಲ್ಲುಗಳಲ್ಲಿ ಅಪ್ಸರೆಯರು ವೀರ ಮತ್ತು ಸತಿಯನ್ನು ವೇಗವಾಗಿ ಪಲ್ಲಕ್ಕಿಯಲ್ಲಿ ಹೊತ್ತೊಯ್ಯುತ್ತಿದ್ದಾರೆ. ಇದರ ಪಕ್ಕದಲ್ಲಿ ಸಾಲಾಗಿ ಚಿತ್ರಿಸಿರುವ ಪದ್ಮ

ಚಿತ್ರಗಳಿವೆ. ಹಾಗೆಯೇ ವೀರ ಮತ್ತು ಸತಿಯ ಎರಡು ಕಡೆ ಒಂದರ ಮೇಲೊಂದರಂತೆ ಪೇರಿಸಿರುವ ಮಡಿಕೆಗಳು ಅಥವಾ ಧಾನ್ಯದ ಚಿತ್ರಗಳಿವೆ. ವೀರಮಾಸ್ತಿಯ ಸುತ್ತಲೂ ಅಂಚಿನಲ್ಲಿ ಹೂವು ಬಳ್ಳಿಗಳ ಚಿತ್ರಗಳಿದ್ದು ಮನೋಹರವಾಗಿರುವುದನ್ನು ಕಾಣಬಹುದು. ಪಲ್ಲಕ್ಕಿಯು ಅಲಂಕೃತವಾಗಿದ್ದು ಅದರ ಅಂಚುಗಳನ್ನು ಮಣಿಗಳಿಂದ ಸುಂದರಗೊಳಿಸಿರುವುದನ್ನು ಕಾಣಬಹುದು ಉದಾ: ಗಂಡಘಟ್ಟ ಒಕ್ಕೈ ವೀರಮಾಸ್ತಿ.

ಹಲವು ವೀರ ಮಾಸ್ತಿಗಲ್ಲುಗಳು ಉಬ್ಬುಶಿಲ್ಪಾಕೃತಿಗಳಿಂದ ಕೂಡಿದ್ದು ಬೇಲೂರಿನ ಶಿಲಾಬಾಲಿಕೆಯರನ್ನು ಹೋಲುವ ನೃತ್ಯ ಭಂಗಿಯಲ್ಲಿದ್ದಾರೆ. ನೃತ್ಯ ಮಾಡುತ್ತಿರುವ, ಸಂಗೀತದ ಪರಿಕರಗಳನ್ನು ನುಡಿಸುತ್ತಿರುವ, ಕನ್ನಡಿಯಲ್ಲಿ ಅಲಂಕಾರ ಮಾಡಿಕೊಳ್ಳುವ ದೃಶ್ಯಗಳನ್ನು ಹಾಗೂ ವೀರ ಮತ್ತು ಸತಿ ಪಲ್ಲಕ್ಕಿಯಲ್ಲಿ ಲಕ್ಷ್ಮೀನಾರಾಯಣನ ಭಂಗಿಯಲ್ಲಿದ್ದು ಅತ್ಯಂತ ಆಕರ್ಷಣೀಯವಾಗಿವೆ. ಉದಾ: ಸಿಂಹಾದ್ರಿಯ ಒಕ್ಕೈ ವೀರಮಾಸ್ತಿ.

ವೀರಗಲ್ಲುಗಳು ಕೇವಲ ಪುರುಷರು ಮತ್ತು ಸ್ತ್ರೀಯರ ಅಲಂಕಾರಕ್ಕೆ ಮಾತ್ರ ಸೀಮಿತವಾಗಿರದೇ ಪ್ರಾಣಿಗಳಾದ ಕುದುರೆ, ಹಸು, ಗೂಳಿ, ಆನೆ, ಹುಲಿ ಮುಂತಾದವುಗಳನ್ನು ಸೊಗಸಾಗಿ ಚಿತ್ರಿಸಲಾಗಿದೆ. ಕುದುರೆಗಳನ್ನು ಸುಂದರವಾಗಿ ಅಲಂಕರಿಸಲಾಗಿದ್ದು, ದೊಡ್ಡದಾದ ಹಾರಗಳು, ಕೀಲುಕುದುರೆಯ ಮಾದರಿಯಲ್ಲಿ ಮೊಣಕಾಲಿನವರೆಗೂ ಜೂಲವನ್ನು ಹಾಕಿದ್ದು ಕುದುರೆಯ ಗೊರಸನ್ನು ವಿಶೇಷವಾಗಿ ಕೆತ್ತಲಾಗಿದೆ. ಉದಾ : ಶಿರೂರು ಒಕ್ಕೈ ವೀರಮಾಸ್ತಿ, ಬೆಜ್ಜವಳ್ಳಿ ವೀರಮಾಸ್ತಿ.

ವೀರ ಮಾಸ್ತಿಗಲ್ಲುಗಳಲ್ಲಿ ಸಾಧಾರಣವಾಗಿ ಸತಿಯು ನಿಂಬೆಹಣ್ಣನ್ನು ಹೆಬ್ಬೆರಳಿನ ಮಧ್ಯ ಇಟ್ಟುಕೊಂಡಿರುವುದನ್ನು ಚಿತ್ರಿಸಿರುವುದು ಸರ್ವೇಸಾಧಾರಣವಾದ ಅಂಶ. ಆದರೆ ತಲಗೋಡಿನ್ ವೀರಮಾಸ್ತಿಯಲ್ಲಿ ಸತಿಯು ನಿಂಬೆಹಣ್ಣನ್ನು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯ ಚಂದ್ರಾಕಾರದಲ್ಲಿ ಹಿಡಿದಿರುವುದು ವಿಶೇಷವಾಗಿದೆ. ಇಲ್ಲಿ ಲಿಂಗದ ಮೇಲೆ ಆನೆಗಳು ಸೊಂಡಿಲಿನಿಂದ ಪೂರ್ಣಕುಂಭದಲ್ಲಿ ಜಲಪ್ರೋಕ್ಷಣೆ ಮಾಡುತ್ತಿರುವುದು ಪ್ರಮುಖ ಸಂಗತಿಯಾಗಿರುವುದು.

ಕೋಟೆಹೊಸಕೊಪ್ಪ ಒಕ್ಕೈ ವೀರಮಾಸ್ತಿಯಲ್ಲಿ ಅಲಂಕಾರವಾದ ಶಿಲ್ಪಾಕೃತಿಗಳಿದ್ದು, ನಾಲ್ಕನೆಯ ಹಂತದಲ್ಲಿ ಸಾಲಾಗಿ ಸಾಗುತ್ತಿರುವ ಹಸುಗಳು ಆಕರ್ಷಣೀಯವಾಗಿವೆ. ಬಹುಶಃ ವೀರ ತುರುಗೋಳ್ ಕಾಳಗದಿಂದ ಮರಣ ಹೊಂದಿರುವುದಕ್ಕಾಗಿ ಆತನ ಪತ್ನಿಯ ಸಹಗಮನವನ್ನು ವ್ಯಕ್ತಪಡಿಸುತ್ತಿರಬಹುದು.

ಮುನ್ನೂರಿನ ತುರುಗೋಳ್ ವೀರಗಲ್ಲಿನಲ್ಲಿ ಹೋರಾಟದ ದೃಶ್ಯಗಳಿದ್ದು ಹಸು(ಗೂಳಿ)ವೊಂದು ವೀರಾವೇಶದಿಂದ ಪುರುಷನನ್ನು ತುಳಿದು ಸಾಯಿಸುತ್ತಿರುವುದು ಅಪರೂಪದ ದೃಶ್ಯವಿದೆ.

ಆರಗದ ವೀರಗಲ್ಲಿನಲ್ಲಿ ಆನೆಗಳನ್ನು ಯುದ್ಧದಲ್ಲಿ ಬಳಸಿರುವುದನ್ನು ಚಿತ್ರಿಸಲಾಗಿದೆ. ಆರಗದ ಮಾಂಡಳಿಕರು ವಿಜಯನಗರದ ಬಂಧುಗಳಾಗಿದ್ದು ದೀರ್ಘಕಾಲ ಆರಗವನ್ನು ರಾಜಧಾನಿಯನ್ನಾಗಿ

ಮಾಡಿಕೊಂಡು ಆಳ್ವಿಕೆ ನಡೆಸಿರುವರು. ವಿಜಯನಗರದ ಅರಸರು ಆನೆಗಳನ್ನು ಯುದ್ಧ ಕಾಲದಲ್ಲಿ ಸಾಕಷ್ಟು ಬಳಸುತ್ತಿದ್ದುದರಿಂದ ಇಲ್ಲಿಯ ಸಾಮಂತರು ಆನೆಗಳನ್ನು ಯುದ್ಧದಲ್ಲಿ ಬಳಸಿರಬಹುದು ಎಂಬುದಕ್ಕೆ ಸಾಕ್ಷಿಯಾಗಿದೆ.

ಬೊಬ್ಬಿಯ ವೀರಗಲ್ಲಿನಲ್ಲಿ ಹುಲಿ ಜೊತೆಗೆ ವೀರನು ಹೋರಾಡುತ್ತಿರುವ ದೃಶ್ಯವಿದ್ದು ಬಹಳ ಅಪರೂಪವೆನಿಸುತ್ತದೆ.

ಮೀಗಾದ ಒಕ್ಕೈ ವೀರಮಾಸ್ತಿಯಲ್ಲಿ ಸತಿಯು ನಿಂಬೆಹಣ್ಣನ್ನು ಭುಜದ ಮೇಲೆ ಇಟ್ಟುಕೊಂಡಿದ್ದು ಪಕ್ಕದಲ್ಲಿ ದೊಡ್ಡದಾದ ತಂಬೂರಿ ಇರುವುದು ಗಮನಾರ್ಹ ಅಂಶವಾಗಿದೆ. ಬಹುಶಃ ಆಕೆ ಸಂಗೀತಗಾರ್ತಿಯಾಗಿದ್ದಿರಬಹುದು.

ಹಾಲಮುತ್ತೂರಿನ ಒಕ್ಕೈ ವೀರಮಾಸ್ತಿಯಲ್ಲಿ ವೀರನ ಪಕ್ಕದಲ್ಲಿ ಹಾವಿನ ಹೆಡೆಯ ಚಿತ್ರ ಕಂಡುಬರುವುದು. ಬಹುಶಃ ವೀರನು ಹಾವಿನಿಂದ ಮರಣ ಹೊಂದಿರಬಹುದು ಎಂದು ತಿಳಿಯಬಹುದು.

ಕೊಪ್ಪ ಪಟ್ಟಣದಲ್ಲಿರುವ ಒಕ್ಕೈ ವೀರಮಾಸ್ತಿಯಲ್ಲಿ ಸತಿಯ ಬಲಗೈ ಹಸ್ತದ ಮಧ್ಯೆ ಚಕ್ರಾಕಾರದ ಕಮಲದ ಚಿಹ್ನೆ ಎರಡು ಬೆರಳಿನ ಮಧ್ಯೆ ನಿಂಬೆ ಹಣ್ಣು ಹಿಡಿದಿರುವ, ಕೆಳಹಂತದಲ್ಲಿ ಹುಲಿಯೊಂದು ಓಡುತ್ತಿರುವ ಅಪರೂಪ ದೃಶ್ಯ ಇದೆ.

ಹೆದ್ದೂರು ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿರುವ ಎರಡು ವೀರಗಲ್ಲುಗಳು ಸೂಕ್ಷ್ಮ ಕೆತ್ತನೆಯಿಂದ ಕೂಡಿದ್ದು ಎಲ್ಲಾ ಕಡೆಯ ಅಂಚಿನಲ್ಲಿ ಹೂ ಬಳ್ಳಿಗಳ ಚಿತ್ರಗಳನ್ನು ಮನೋಹರವಾಗಿ ಶಿಲ್ಪಿ ಚಿತ್ರಿಸಿದ್ದಾನೆ. ಒಂದನೇ ವೀರಗಲ್ಲಿನ ಲಲಾಟದ ಮಧ್ಯದಲ್ಲಿ ಸಿಂಹಬಾಯಿ ಮತ್ತು ಅದರ ಎರಡೂ ಕಡೆ ಅತ್ಯಂತ ಸುಂದರವಾದ ಪ್ರಭಾವಳಿಯನ್ನು ಕಾಣಬಹುದು. ಎರಡನೇ ವೀರಗಲ್ಲಿನ ಲಲಾಟದ ಮಧ್ಯದಲ್ಲಿ ಸೂರ್ಯಕಾಂತಿ ಹೂವನ್ನು ಹೋಲುವ ಶಿಲ್ಪ, ಕಮಾನಿನ ಆಕಾರದಲ್ಲಿರುವ ಮೂರು ಸುತ್ತಿನ ಮಂಟಪ, ಈ ಮಂಟಪದ ಒಳಗೆ ಇನ್ನೊಂದು ಮಂಟಪವಿದ್ದು ಅಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಯತಿಯ ಶಿಲ್ಪವಿದೆ. ಮಂಟಪದ ಮೇಲ್ಭಾಗದ ಕಿರೀಟ ಹಾಗೂ ಎರಡೂ ಕಡೆ ಕಮಲವಿದ್ದು, ಶಿಲ್ಪಿಯು ಸುಂದರವಾದ ವೀರಗಲ್ಲನ್ನು ನಿರ್ಮಿಸಿದ್ದಾನೆ.

ಹುಲಿಸರದ ದುರ್ಗಾಪರಮೇಶ್ವರಿ ದೇವಾಲಯದ ಆವರಣದಲ್ಲಿರುವ ವೀರಗಲ್ಲು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ್ದು, ಅದ್ಭುತ ಅಲಂಕಾರವನ್ನು ಹೊಂದಿದೆ. ಇದರ ಮಧ್ಯದಲ್ಲಿ ಸುಂದರವಾದ ಪಲ್ಲಕ್ಕಿಯ ಮಂಟಪದ ಒಳಗೆ ವೀರ ಕುಳಿತಿದ್ದು, ಮಂಟಪದ ಕೆಳಗೆ ಸಿಂಹದ ತಲೆಯಾಕೃತಿ ಇದ್ದು ಅಪ್ಸರೆಯರು ಮತ್ತು ವೀರರ ಸಹಚರರನ್ನು ಮನೋಜ್ಞವಾಗಿ ಚಿತ್ರಿಸಲಾಗಿದೆ.

ಹುಲಿಸರದ ಕಾಡಿನ ಮಧ್ಯೆ ಇರುವ ಬೃಹತ್ ಗಾತ್ರದ ವೀರಗಲ್ಲು ೮ ಅಡಿ ಎತ್ತರ ೩ ಅಡಿ ಅಗಲವಿದ್ದು ಆರು ಹಂತಗಳಿಂದ ಕೂಡಿದ್ದು, ಶಿಲ್ಪ ವೈಭವದ ಮೆರಗನ್ನು ತಿಳಿಸುತ್ತದೆ.

ಬಹುಶಃ ಇಂತಹ ದೊಡ್ಡದಾದ ವೀರಗಲ್ಲು ಈ ಭಾಗದಲ್ಲಿ ಇಲ್ಲಿಯವರೆಗೂ ದೊರೆತಿಲ್ಲ. ಲಿಪಿ ಸಹಿತ ವೀರಗಲ್ಲು ಅಲಂಕಾರದಲ್ಲೂ ಕಡಿಮೆ ಇಲ್ಲ ಎನಿಸುತ್ತದೆ. ಕೆಳಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ, ಅವರೆಲ್ಲರೂ ಸಂಗೀತದ ಪರಿಕರಗಳನ್ನು ನುಡಿಸುತ್ತಿರುವ ದೃಶ್ಯವಿದೆ. ಐದನೇ ಹಂತದಲ್ಲಿ ಆಭರಣ ಧರಿಸಿದ ವೀರನು ಹೋರಾಡುತ್ತಿರುವ ಸಂಪೂರ್ಣ ಯುದ್ಧ ರಂಗದ ವರ್ಣನೆಯೇ ಇಲ್ಲಿದೆ. ನಾಲ್ಕನೇ ಹಂತದಲ್ಲಿ ವೀರನು ಅಲಂಕೃತವಾದ ಕುದುರೆಯ ಮೇಲೆ ಕುಳಿತು ಹೋರಾಡುತ್ತಿದ್ದಾನೆ. ಮೂರನೇ ಹಂತದಲ್ಲಿ ಅಲಂಕೃತವಾದ ಮಂಟಪದಲ್ಲಿ ವೀರನು ಕುಳಿತಿರುವ ದೃಶ್ಯ, ಅವನನ್ನು ಸ್ವರ್ಗಕ್ಕೆ ಹೊತ್ತೊಯ್ಯುತ್ತಿರುವ ಅಪ್ಸರೆಯರ ಚಿತ್ರಗಳಿವೆ. ಎರಡನೇ ಹಂತದಲ್ಲಿ ಸಂಗೀತದ ಪರಿಕರಗಳನ್ನು ಹಿಡಿದ ವೀರರು ನೃತ್ಯ ಮಾಡುತ್ತಿರುವ ದೃಶ್ಯಗಳಿವೆ. ಒಂದನೇ ಹಂತದ ಮಧ್ಯದಲ್ಲಿ ಶಿವಲಿಂಗ, ಅದನ್ನು ಪೂಜಿಸುತ್ತಿರುವ ಇಬ್ಬರು ಯತಿಯರಿದ್ದಾರೆ. ಬಲಗಡೆ ಕೈ ಮುಗಿದು ಕುಳಿತಿರುವ ವೀರ, ಎಡಗಡೆ ಮಂಡಿಯೂರಿ ಮಲಗಿರುವ ಅಲಂಕೃತ ಬಸವನ ವಿಗ್ರಹವಿದೆ. ಲಲಾಟ ಒಂದರ ಮೇಲೊಂದರಂತೆ ಮೂರು ಮಂಟಪಗಳು, ವೀರನ ವಿಗ್ರಹಗಳು, ಸುತ್ತಲೂ ಅಲಂಕೃತವಾದ ಪ್ರಭಾವಳಿಯಿಂದ ಕೂಡಿದ್ದು ಮನಮೋಹಕವಾಗಿದೆ.

೬.೨. ಮಹಿಳೆಯರ ಅಲಂಕಾರ

ಪ್ರಾಚೀನ ಕರ್ನಾಟಕದಲ್ಲಿ ಮಾಸ್ತಿಯಾಗುವವಳನ್ನು ಸಮಾಜ ಪವಿತ್ರ ದೃಷ್ಟಿಯಿಂದ ನೋಡುತ್ತಿತ್ತು. ಒಬ್ಬ ವೀರನಿಗೆ ಸಮಾನವಾದ ಸ್ಥಾನವನ್ನು ಮಹಾಸತಿ ಪಡೆದುಕೊಳ್ಳುತ್ತಿದ್ದಳು. ಸಾಮಾನ್ಯವಾಗಿ ಬಿಡಿಬಿಡಿಯಾಗಿ ಸಿಗುವ ಮಾಸ್ತಿಗಳು ಕೆಲವು ಸ್ಥಳಗಳಲ್ಲಿ ಗುಂಪುಗುಂಪಾಗಿ ಕಾಣಿಸಿಕೊಳ್ಳುತ್ತವೆ.

ಮಾಸ್ತಿಶಿಲೆಗಳಲ್ಲಿ ಹೆಚ್ಚಿನವು ಚಿತ್ರಶಿಲೆಗಳಾಗಿದ್ದು ಸಹಗಮನ ಮಾಡಿದ ಸ್ತ್ರೀಯ ಹಸ್ತವನ್ನು ಸಂಕೇತಿಸುವ ಹಸ್ತಶಿಲ್ಪ, ಸ್ತ್ರೀವಿಗ್ರಹ ಅಥವಾ ಸ್ತ್ರೀ ಪುರುಷರ ವಿಗ್ರಹಗಳ ರೂಪದಲ್ಲಿರುತ್ತವೆ. ಹಸ್ತವನ್ನು ಶಿಲ್ಪಗಳಲ್ಲಿ ಮೇಲೆತ್ತಿರುವ ಚಿತ್ರ ಸಾಮಾನ್ಯ. ಮಾಸ್ತಿಯ ಬಲಗೈ ಸೌಭಾಗ್ಯದ ಸಂಕೇತವೆಂಬ ನಂಬಿಕೆ ಇದೆ. ಎರಡಕ್ಕಿಂತ ಹೆಚ್ಚು ಕೈಗಳ ಮಾಸ್ತಿ ಅಪರೂಪ. ಕಲ್ಲಿನಿಂದ ಹೊರಟ ಸ್ತ್ರೀಯ ಕೈಗಳು ಕಂಕಣದಿಂದ ಅಲಂಕೃತವಾಗಿರುತ್ತವೆ. ಮೇಲೆತ್ತಿದ ಬಲಗೈ ಮುತ್ತೈದೆಯಾಗಿ ಪತಿಯೊಂದಿಗೆ ಸ್ವರ್ಗವೇರುವ ಸತಿ ಜನತೆಗೆ ಕೊಡುವ ಆಶೀರ್ವಾದ ಹಸ್ತವೆಂದು ಭಾವಿಸಲಾಗುತ್ತದೆ.

ಮಾಸ್ತಿಗಲ್ಲುಗಳಲ್ಲಿ ಪ್ರಧಾನವಾಗಿ ಮಹಿಳೆಯರು ಮತ್ತು ಮಹಿಳಾ ಅಲಂಕಾರವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಲು ಪ್ರಯತ್ನ ಮಾಡಲಾಗಿದೆ. ಕೆಲವೊಂದು ಮಾಸ್ತಿಕಲ್ಲುಗಳಲ್ಲಿ ಮಹಿಳೆಯ ಅಲಂಕಾರವಿದ್ದರೆ, ಇನ್ನು ಕೆಲವೊಂದು ಮಾಸ್ತಿಕಲ್ಲುಗಳಲ್ಲಿ ಹಲವಾರು ಮಹಿಳೆಯರ ಅಲಂಕಾರದ ದೃಶ್ಯಗಳನ್ನು ಕಾಣಬಹುದು. ಮಹಿಳೆಯು ಸರ್ವಾಲಂಕಾರಭೂಷಿತಳಾಗಿ ಗೋಚರಿಸುವ ಮಾಸ್ತಿಕಲ್ಲುಗಳಿಗೇನೂ ಕೊರತೆಯಿಲ್ಲ. ಮಹಿಳೆಯು ತಾನು ಸತಿಯಾಗಿರುವ ದೃಶ್ಯ, ಅಪ್ಸರೆಯಾಗಿರುವ ಚಿತ್ರಗಳು, ಮುತ್ತೈದೆಯಾಗಿರುವ, ಸಹಚಾರಿಯಾಗಿರುವುದನ್ನು ಶಿಲ್ಪಗಳಲ್ಲಿ ಬಿಂಬಿಸಲಾಗಿದೆ.

ಕೆಲವು ಮಾಸ್ತಿಗಲ್ಲುಗಳಲ್ಲಿ ಮಹಿಳೆ ಯುದ್ಧರಂಗದಲ್ಲಿ ನಿಂತಿರುವ ದೃಶ್ಯಾವಳಿಗಳನ್ನು ಚಿತ್ರಿಸಲಾಗಿದೆ. ಉದಾ: ಬೆಜ್ಜವಳ್ಳಿಯ ವೀರ ಮಾಸ್ತಿಕಲ್ಲು.

ಮಾಸ್ತಿಕಲ್ಲುಗಳಲ್ಲಿ ಮಹಿಳೆಯನ್ನು ಸಂಪೂರ್ಣವಾಗಿ ಅಲಂಕಾರಭೂಷಿತೆಯಾಗಿ ಚಿತ್ರಿಸಲಾಗಿದೆ. ಬಹಳಷ್ಟು ವೀರಗಲ್ಲುಗಳಲ್ಲಿ ಸತಿ ಕೇದಿಗೆ ಹೂವನ್ನು ಕಮಾನಿನಾಕಾರದಲ್ಲಿ ತಲೆಯ ಹಿಂಭಾಗದಲ್ಲಿ ಮುಡಿದಿದ್ದಾಳೆ. ಉದಾ:- ಮಂಡಗದ್ದೆ ಮತ್ತು ಹುಲಿಸರ ವೀರಮಾಸ್ತಿಯಲ್ಲಿ. ಕೆಲವೊಂದು ಸಂದರ್ಭದಲ್ಲಿ ಹಾಗೂ ಕೊಗ್ರೆ ಒಕ್ಕೈ ವೀರಮಾಸ್ತಿ ಮಹಿಳೆ ತಲೆಗೂದಲನ್ನು ಎಡ ಕಿವಿಯ ಹಾಗೂ ಬಲ ಕಿವಿಯ ಮೇಲೆ ಗಂಟು ಕಟ್ಟಿರುವ ಚಿತ್ರಗಳು ಮತ್ತು ನೆತ್ತಿಯ ಮೇಲೆ ತುರುಬುಗಳನ್ನು ಕಟ್ಟಿರುವುದು ವಿಶೇಷವೆನಿಸುತ್ತದೆ. ಆದರೆ ಜಡೆಯನ್ನು ಹೆಣೆದಿರುವುದು ಬಹಳ ಅಪರೂಪ. ಉದಾ:- ಚಿಕ್ಕನಕೊಡಿಗೆ ಮಾಸ್ತಿಗಲ್ಲಿನಲ್ಲಿ ಆಕೆಯ ಜಡೆಯು ಮೊಣಕಾಲಿನವರೆಗೂ ಇಳಿಬಿದ್ದಿರುವುದು ಬಹಳ ಗಮನಾರ್ಹ ಅಂಶವಾಗಿ ಕಂಡುಬರುತ್ತದೆ.

ವೀರಮಾಸ್ತಿ ಮತ್ತು ಮಾಸ್ತಿಕಲ್ಲುಗಳಲ್ಲಿ ಎಲ್ಲಾ ಮಹಿಳೆಯರು ಕಿವಿಗೆ ಓಲೆಯನ್ನು ಧರಿಸಿರುವರು, ಕೆಲವೊಂದು ಮಹಿಳೆಯರು ಚಕ್ರಾಕಾರದ ಜುಮುಖಿ ಧರಿಸಿರುವರು. ಉದಾ: ಬೆಜ್ಜವಳ್ಳಿಯ ಒಕ್ಕೈ ವೀರಮಾಸ್ತಿ. ಇನ್ನೊಂದು ಮಹಿಳಾಶೃಂಗಾರ ಸಾಧನವಾದ ಬೈತಲೆಬೊಟ್ಟು ಧರಿಸಿರುವುದನ್ನು ಬಹಳಷ್ಟು ಮಾಸ್ತಿಕಲ್ಲುಗಳಲ್ಲಿ ಕಾಣಬಹುದು.

ಕಂಠೀಹಾರ ಅಂದು ಮತ್ತು ಇಂದಿನ ಮಹಿಳೆಯರು ಇಷ್ಟಪಡುವ ಸುಂದರ ಆಭರಣ. ಮಾಸ್ತಿಕಲ್ಲುಗಳಲ್ಲಿ ಮಹಿಳೆಯರು ಎರಡು ಹಾಗೂ ಮೂರು ಸುತ್ತಿನ ಹಾರವನ್ನು ಧರಿಸಿರುವರು. ಕೆಲವೊಂದು ಹಾರಗಳ ತುದಿಯಲ್ಲಿ ಪದಕವಿರುವುದನ್ನು ಗಮನಿಸಬಹುದು. ಕೆಲವೊಮ್ಮೆ ಹಾರಗಳು ಕುತ್ತಿಗೆಯಿಂದ ಆರಂಭವಾಗಿ ಎರಡು ಸ್ತನಗಳ ಮಧ್ಯೆ ವಕ್ಷಸ್ಥಳದವರೆಗೂ ಇಳಿಬಿದ್ದಿರುವುದನ್ನು ವೀಕ್ಷಿಸಬಹುದು.

ಮಣಿಯ ಹಾರವನ್ನು ಮಹಿಳೆಯರು ಅಂದಿನ ಕಾಲದಲ್ಲಿ ಅಲಂಕಾರದ ಸಾಧನವನ್ನಾಗಿ ಬಳಸುತ್ತಿದ್ದರು. ಕೊಗ್ರೆಯ ಒಕ್ಕೈ ವೀರಗಲ್ಲಿನಲ್ಲಿ ಮಹಿಳೆಯು ನಾಲ್ಕು ಮಣಿಹಾರಗಳನ್ನು ಧರಿಸಿರುವಳು.

ಸತಿಯು ಬಲಗೈ ತೋಳಿನ ಹಸ್ತವನ್ನು ಎತ್ತಿ ಹಿಡಿದು ಶುಭ ಕೋರುವುದು ಮಾಸ್ತಿಕಲ್ಲಿನ ವಿಶೇಷತೆ. ಹಸ್ತದಲ್ಲಿ ಪದ್ಮ ಚಿತ್ರವಿರುವುದು; ನಿಂಬೆ ಹಾಗೂ ಮಾದಲ ಹಣ್ಣುಗಳು ಹಲವು ಕಲ್ಲುಗಳಲ್ಲಿ ಕಂಡುಬರುವವು. ಬೆರಳಿಗೆ ಒಂದು ಹಾಗೂ ಎರಡು ಸುತ್ತಿನ ಉಂಗುರಗಳನ್ನು ಧರಿಸಿರುವುದು, ಕೈ ತುಂಬಾ ಬಳೆಗಳು ಅಲಂಕಾರದ ಇನ್ನೊಂದು ವಿಶೇಷ ಎನ್ನಬಹುದು. ಕೆಲವೊಮ್ಮೆ ಐದು ಬೆರಳುಗಳಿಗೂ ಉಂಗುರವಿರುವುದನ್ನೂ ಕಾಣಬಹುದು. ಉದಾ:- ಅಗಸರಕೊಪ್ಪದ ಒಕ್ಕೈ ವೀರಮಾಸ್ತಿ. ಕೆಲವೊಮ್ಮೆ ಮಣಿಯ ಬಳೆಗಳು ಹಾಗೂ ಸಾದಾ ಬಳೆಗಳನ್ನು ಸತಿ ಧರಿಸಿರುವಳು.

ತೋಳುಬಂಧಿ ಇಲ್ಲದ ವೀರಗಲ್ಲು ಮತ್ತು ಮಾಸ್ತಿ ಕಲ್ಲುಗಳನ್ನು ಕಾಣಲು ಸಾಧ್ಯವೇ ಇಲ್ಲ ಎಂದೆನಿಸುತ್ತದೆ. ಒಂದು ಸುತ್ತಿನ ತೋಳುಬಂಧಿ, ಎರಡು ಸುತ್ತು ಹಾಗೂ ಮೂರು ಸುತ್ತಿನ ತೋಳುಬಂಧಿಯನ್ನು ಸ್ತ್ರೀ ಮತ್ತು ಪುರುಷರಿಬ್ಬರೂ ಧರಿಸಿರುವರು.

ವಸ್ತ್ರಾಲಂಕಾರದಲ್ಲಿ ಮಹಿಳೆಯರು ಅದ್ಭುತ ಚಮತ್ಕಾರವನ್ನು ವ್ಯಕ್ತಪಡಿಸಿರುವರು. ಸೊಂಟದ ಸುತ್ತ ಒಂದು, ಎರಡು ಹಾಗೂ ಮೂರು ಸುತ್ತಿನ ಪಟ್ಟಿಯನ್ನು ಧರಿಸಿರುವರು. ಸೊಂಟದಿಂದ ಬಂದಿರುವ ಅಡ್ಡ ಹಾಗೂ ಉದ್ದ ನೆರಿಗೆಯ ಲಂಗ ಕೆಲವೊಂದು ಮಾಸ್ತಿಗಲ್ಲುಗಳಲ್ಲಿ ಮೊಣಕಾಲಿನ ಹಾಗೂ ಪಾದದವರೆಗೂ ಇರುವುದನ್ನು ಗಮನಿಸಬಹುದು.

ಉದಾ: ಆರಗದ ಒಕ್ಕೈ ವೀರಮಾಸ್ತಿ, ಬೆಜ್ಜವಳ್ಳಿಯ ವೀರಮಾಸ್ತಿ, ಹುಲಿಸರರ ವೀರಮಾಸ್ತಿ ಇತ್ಯಾದಿ

ಸಿಂಹಾದ್ರಿಯ ಒಕ್ಕೈ ವೀರಮಾಸ್ತಿಯ ಕೆಳಹಂತದಲ್ಲಿ ಮಹಿಳೆಯರು ಕೆಲವು ಸಂಗೀತ ಪರಿಕರಗಳನ್ನು ನುಡಿಸುತ್ತಿರುವರು. ಮಧ್ಯದಲ್ಲಿರುವ ಮಹಿಳೆಯು ಎಡಗೈಯಲ್ಲಿ ಕನ್ನಡಿ ಹಿಡಿದು ನೃತ್ಯ ಹಾಗೂ ಅಲಂಕಾರ ಮಾಡಿಕೊಳ್ಳುವುದನ್ನು ಪರೀಕ್ಷಿಕೊಳ್ಳುವಂತಿದೆ.

೬.೨.೧. ಕೇಶಾಲಂಕಾರ

ಮನುಷ್ಯನ ದೇಹಾಲಂಕಾರದಲ್ಲಿ ಕೇಶಾಲಂಕಾರವೂ ಒಂದು. ಪ್ರಾಚೀನ ಮತ್ತು ಮಧ್ಯ ಕಾಲೀನ ಹಂತದಲ್ಲಿ ಸ್ತ್ರೀ ಮತ್ತು ಪುರುಷರಲ್ಲಿ ತಮ್ಮ ತಲೆಕೂದಲನ್ನು ಜಡೆ ಹಾಕುವ ಹಾಗೂ ತುರುಬು ಕಟ್ಟುವ ಆಚರಣೆ ರೂಢಿಯಲ್ಲಿತ್ತು. ನಂತರ ಯೂರೋಪಿಯನ್ನರ ಆಗಮನ ಮತ್ತು ಸಂಸ್ಕೃತಿಯ ಮುಂದುವರಿಕೆಯಿಂದ ತಮ್ಮ ತಲೆಕೂದಲನ್ನು ವಿವಿಧ ವಿನ್ಯಾಸದಲ್ಲಿ ಕತ್ತರಿಸುವ ಪರಿಪಾಠ ರೂಢಿಗೆ ಬಂತು. ಮಾನವರ ವಿವಿಧ ಶೈಲಿಯ ಕೇಶಾಲಂಕಾರವನ್ನು ನಮ್ಮ ಮಾಸ್ತಿಕಲ್ಲು ಮತ್ತು ವೀರಗಲ್ಲುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅಂದಿನ ಕಾಲದ ನೈಜ ವಿನ್ಯಾಸವನ್ನು ಅರಿಯಬಹುದು. ಪ್ರಾಪ್ತವಾಗಿರುವ ವೀರಗಲ್ಲು ಮತ್ತು ಮಾಸ್ತಿಕಲ್ಲಿನಲ್ಲಿರುವ ಕೇಶಾಲಂಕಾರವನ್ನು ಈ ರೀತಿಯಾಗಿ ಅರ್ಥೈಸಬಹುದು. ಹರೂರು ವೀರಗಲ್ಲಿನಲ್ಲಿ ಅಪ್ಸರೆಯರು ತಲೆಯ ಕೇಶವನ್ನು ದೊಡ್ಡದಾಗಿ ತುರುಬು ಕಟ್ಟಿದ್ದಾರೆ. ಮೂರನೇ ಹಂತದಲ್ಲಿ ನಾಲ್ವರು ವೀರರು ಒಂದು ಬಣದವರಾಗಿದ್ದು ಉದ್ದನೆಯ ಜಡೆಯನ್ನು ಹಾಕಿದ್ದಾರೆ. ಇವರಿಗೆ ಪ್ರತಿಸ್ಪರ್ಧಿಯಾಗಿರುವವರೂ ತಲೆಕೂದಲನ್ನು ಗಂಟು ಕಟ್ಟಿದ್ದಾರೆ. ವೀರನು ಕೇಶವನ್ನು ತಲೆಯ ನೆತ್ತಿಯಲ್ಲಿ ತುರುಬು ಕಟ್ಟಿದ್ದು, ಸುತ್ತಲೂ ಮುಂಡಾಸವಿದೆ. ಬಲಗಡೆ ಮತ್ತು ಎಡಗಡೆ ಅಪ್ಸರೆಯರು ತಲೆಕೂದಲನ್ನು ನೆತ್ತಿಯ ಬಲಗಡೆ ತುರುಬು ಕಟ್ಟಿದ್ದು ಉಳಿದ ಕೇಶದ ತುದಿಯನ್ನು ಕೆಳಕ್ಕೆ ಇಳಿಬಿಟ್ಟಿದ್ದಾರೆ. ಗಂಡಘಟ್ಟದಲ್ಲಿ ನಿಂತಿರುವ ವೀರಮಾಸ್ತಿಯಲ್ಲಿ ಶಸ್ತ್ರಧಾರಿಯಾಗಿರುವ ವೀರರು ತಲೆಗೂದಲನ್ನು ಗಂಟು ಕಟ್ಟಿದ್ದು, ಇನ್ನು ಕೆಲವರು ತುರುಬು ಕಟ್ಟಿದ್ದಾರೆ. ಕೋಟೆ ಹೊಸಕೊಪ್ಪದ ಒಂದನೇ ಒಕ್ಕೈ ವೀರಮಾಸ್ತಿಯಲ್ಲಿ ಪುರುಷರು ತಲೆಕೂದಲನ್ನು ಗಂಟು ಕಟ್ಟಿದ್ದಾರೆ.

ಜೆ.ಸಿ.ಬಿ.ಎಂ. ಕಾಲೇಜು ಆವರಣದಲ್ಲಿ ನಿಲ್ಲಿಸಲಾಗಿರುವ ವೀರಗಲ್ಲಿನಲ್ಲಿ ಎಲ್ಲಾ ವೀರರೂ ತಮ್ಮ ತಲೆಕೂದಲನ್ನು ನೆತ್ತಿಯಿಂದ ಜಡೆ ಹೆಣೆದು ಎಡಗಡೆ ಮತ್ತು ಬಲಗಡೆ ಇಳಿಬಿಟ್ಟಿದ್ದಾರೆ.

ಸಿಂಹಾದ್ರಿಯ ಒಕ್ಕೈ ವೀರಮಾಸ್ತಿಯಲ್ಲಿ ಪುರುಷರು ತಲೆಕೂದಲನ್ನು ನೆತ್ತಿಯ ಮೇಲೆ ಸುರುಳಿಯಾಕಾರದಲ್ಲಿ ಕಟ್ಟಿದ್ದಾರೆ. ವೀರನು ತಲೆಕೂದಲನ್ನು ನೆತ್ತಿಯ ಮೇಲೆ ಜಡೆ ಹೆಣೆದು ಸುರುಳಿ ಸುತ್ತಿದ್ದು ಈಶ್ವರನ ಸ್ವರೂಪವನ್ನು ಹೋಲುವನು.

ಹುಲ್ಸೆಯ ಒಕ್ಕೈ ವೀರಮಾಸ್ತಿಯ ಎರಡನೆಯ ಹಂತದಲ್ಲಿ ವೀರನ ಸಹಚರನೊಬ್ಬ ತನ್ನ ಜಡೆಯನ್ನು ನೆತ್ತಿಯ ಮೇಲೆ ಸುರುಳಿಯಾಕಾರದಲ್ಲಿ ಸುತ್ತಿದ್ದಾನೆ.

ಕೋರನಕೊಡಿಗೆಯ ಒಕ್ಕೈ ವೀರಮಾಸ್ತಿಯ ಎರಡನೇ ಹಂತದಲ್ಲಿ ಸತಿಯು ತಲೆಯ ಕೇಶವನ್ನು ಸರಳವಾಗಿ ಸುತ್ತಿದ್ದು, ವೀರನು ತ್ರಿಭುಜಾಕಾರದಲ್ಲಿ ಸುತ್ತಿದ್ದಾನೆ. ಹೆಗ್ಗರಸು ವೀರಮಾಸ್ತಿಯಲ್ಲಿ ಕೆಲವು ವೀರರು ತಲೆಕೂದಲನ್ನು ಗಂಟು ಕಟ್ಟಿದ್ದರೆ, ಉಳಿದವರು ಬೆನ್ನಿನವರೆಗೂ ತಲೆಕೂದಲನ್ನು ಜಡೆ ಹೆಣೆದು ಪೃಷ್ಠ ಭಾಗದವರೆಗೂ ಇಳಿ ಬಿಟ್ಟಿದ್ದಾರೆ.

ಬೋಳೂರು ವೀರಮಾಸ್ತಿಯ ಎರಡನೇ ಹಂತದಲ್ಲಿ ಯತಿಯು ಶಿವಲಿಂಗವನ್ನು ಪೂಜಿಸುತ್ತಿದ್ದು, ಬೆನ್ನಿನ ತುಂಬಾ ತಲೆಕೂದಲನ್ನು ಇಳಿಬಿಟ್ಟಿದ್ದಾನೆ.

ಮೀಗಾದ ಒಕ್ಕೈ ವೀರಮಾಸ್ತಿಯಲ್ಲಿ ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುವ ಅಪ್ಸರೆಯರು ತಲೆಕೂದಲನ್ನು ತುರುಬು ಕಟ್ಟಿದ್ದಾರೆ.

ಕೊಡಕಣಿಯ ವೀರಮಾಸ್ತಿಯಲ್ಲಿ ವೀರನು ತಲೆಯ ನೆತ್ತಿಯ ಮೇಲಿನಿಂದ ನೀಳವಾದ ಜಡೆಯನ್ನು ಬಲಭಾಗದಲ್ಲಿ ಇಳಿಬಿಟ್ಟಿದ್ದಾನೆ. ಇಲ್ಲಿ ಅಪ್ಸರೆಯರು ಕೇಶವನ್ನು ತುರುಬು ಕಟ್ಟಿದ್ದಾರೆ. ಹಾಗೆಯೇ ನೆಮ್ಮಾರಿನ ವೀರಗಲ್ಲಿನಲ್ಲಿ ಅಪ್ಸರೆಯರು ತಮ್ಮ ಕೇಶವನ್ನು ತುರುಬು ಕಟ್ಟಿದ್ದಾರೆ.

ನಾರ್ವೆಯ ಆತ್ಮಬಲಿ ಸಿಡಿತಲೆಯ ವಿಗ್ರಹದಲ್ಲಿ ವೀರ ಆತ್ಮಬಲಿ ಮಾಡಿಕೊಂಡಿದ್ದು, ಅವನು ತಲೆಕೂದಲನ್ನು ತಲೆಯ ಸುತ್ತಲೂ ಸುತ್ತಿದ್ದಾನೆ.

ಹಾಲಮುತ್ತೂರಿನ ಒಕ್ಕೈ ವೀರಮಾಸ್ತಿಯಲ್ಲಿ ಬಲಭಾಗದಲ್ಲಿ ಕುಳಿತಿರುವ ಸತಿ ತಲೆ ಕೂದಲನ್ನು ತಲೆಯ ಬಲಭಾಗದಲ್ಲಿ ಗಂಟು ಕಟ್ಟಿದ್ದು ಅದರ ಸುತ್ತಲೂ ಬಿಗಿಯಾಗಿ ಕಟ್ಟಿರುವ ಮಣಿಯ ಹಾರವಿದೆ. ಪಕ್ಕದಲ್ಲಿ ಕುಳಿತ ವೀರ ಎದೆಯವರೆಗೂ ಕೈಮುಗಿದು ತಲೆಯ ಕೂದಲನ್ನು ನೆತ್ತಿಯ ಮೇಲೆ ಸುರುಳಿಯಾಗಿ ಕಟ್ಟಿದ್ದಾನೆ. ತಲೆಯ ಸುತ್ತಲೂ ಮುಂಡಾಸವಿದ್ದು ಅದರ ಉಳಿಕೆಯ ತುದಿಯನ್ನು ಕಿವಿಯ ಪಕ್ಕದಲ್ಲಿ ಇಳಿಬಿಟ್ಟಿದ್ದಾನೆ.

ಕೊಗ್ರೆಯ ಒಕ್ಕೈ ವೀರಮಾಸ್ತಿಯು ಅದ್ಭುತ ಅಲಂಕಾರದಿಂದ ಕೂಡಿದ್ದು, ವೀರನು ಜಡೆಯನ್ನು ಸುರುಳಿಯಾಗಿ ನೆತ್ತಿಯ ಮೇಲೆ ಸುತ್ತಿದ್ದು, ಅದರ ತುದಿಯನ್ನು ಇಳಿಬಿಟ್ಟಿದ್ದಾನೆ. ಇವನ ಪಕ್ಕದಲ್ಲಿರುವ ಸತಿ ತಲೆಯ ಹಿಂಭಾಗ ತುರುಬು ಕಟ್ಟಿದ್ದು ಎರಡು ಸಾಲಿನಲ್ಲಿ ಕೇದಿಗೆ

ಹೂವನ್ನು ಚಕ್ರಾಕಾರದಲ್ಲಿ ಮುಡಿದಿದ್ದಾಳೆ. ಕೊಪ್ಪದ ೫ನೇ ಒಕ್ಕೈ ನಿಷಧಿಕಲ್ಲಿನಲ್ಲಿ ಸತಿಯು ತಲೆಕೂದಲನ್ನು ತುರುಬು ಕಟ್ಟಿದ್ದಾಳೆ. ಚಿಕ್ಕನಕೊಡಿಗೆ ಮಾಸ್ತಿಶಿಲ್ಪದಲ್ಲಿ ಸತಿಯ ಒಂದೇ ಶಿಲ್ಪವಿದ್ದು ಬೆನ್ನಿನ ಹಿಂಭಾಗದಿಂದ ಬಂದಿರುವ ಜಡೆಯು ಮೊಣಕಾಲಿನವರೆಗೂ ಇಳಿಬಿದ್ದಿದೆ.

ಮಂಡಗದ್ದೆಯ ಒಂದನೇ ವೀರಮಾಸ್ತಿಯಲ್ಲಿ ಸ್ತ್ರೀ ಮತ್ತು ಪುರುಷರಿಬ್ಬರು ಅಲಂಕೃತರಾಗಿದ್ದು ಸತಿಯು ತಲೆಯ ಹಿಂಭಾಗ ಕಮಾನಿನಾಕಾರದಲ್ಲಿ ಕೇದಿಗೆ ಹೂವುಗಳನ್ನು ಮುಡಿದಿದ್ದು ಉದ್ದವಾದ ಜಡೆ ಬೆನ್ನಿನಿಂದ ಮೊಣಕಾಲಿನವರೆಗೂ ಇದೆ.

ಇಲ್ಲಿನ ಎರಡನೆಯ ವೀರಮಾಸ್ತಿಯು ಉಬ್ಬು ಶಿಲ್ಪವಾಗಿದ್ದು, ವೀರ ಬಲಭಾಗದಲ್ಲಿ ನಿಂತಿದ್ದು, ತಲೆಕೂದಲನ್ನು ಬಲಭಾಗದ ಕಿವಿಯ ಮೇಲೆ ಗಂಟು ಕಟ್ಟಿದ್ದಾನೆ. ಎಡಭಾಗದಲ್ಲಿ ನೃತ್ಯ ಭಂಗಿಯಲ್ಲಿರುವ ಸತಿ ತಲೆಯಲ್ಲಿ ೧೨ ಕೇದಿಗೆ ಹೂವುಗಳನ್ನು ಕಮಾನಿನ ಆಕಾರದಲ್ಲಿ ದೊಡ್ಡದಾಗಿ ಮುಡಿದಿದ್ದು, ಆ ಎಲ್ಲಾ ಹೂವುಗಳನ್ನು ಮಣಿಯ ಹಾರದಿಂದ ಕಟ್ಟಲಾಗಿದೆ. ಮೂರನೇ ಮಾಸ್ತಿಕಲ್ಲಿನಲ್ಲಿ ಸತಿಯು ತಲೆಕೂದಲನ್ನು ಬಿಚ್ಚಿರುವುದು ವಿಶೇಷವಾಗಿದೆ.

ಹೆದ್ದೂರಿನಲ್ಲಿ ಒಂದನೇ ವೀರಗಲ್ಲಿನ ನಾಲ್ಕನೇ ಹಂತದಲ್ಲಿ ವೀರನ ತಲೆಯ ಸುತ್ತಲೂ ಮುಂಡಾಸ ಸುತ್ತಿದ್ದು, ಅದರ ತುದಿಯ ವಸ್ತ್ರವನ್ನು ಹೊರಗೆ ಬಿಟ್ಟಿದ್ದಾನೆ. ಇವನ ಬಲಭಾಗದ ಪುರುಷ ತಲೆಯ ನೆತ್ತಿಯ ಮೇಲೆ ಸ್ವಲ್ಪಕೂದಲನ್ನು ಕಟ್ಟಿದ್ದು ಉಳಿದ ಕೇಶವನ್ನು ಎರಡು ಕಿವಿಯವರೆಗೂ ಇಳಿಬಿಟ್ಟಿದ್ದಾನೆ. ವೀರನ ಎಡಭಾಗದಲ್ಲಿರುವ ಪುರುಷ ನೆತ್ತಿಯ ಮೇಲೆ ತುರುಬು ಕಟ್ಟಿದ್ದು, ಉಳಿದ ಕೂದಲನ್ನು ಎರಡೂ ಕಿವಿಯವರೆಗೂ ಇಳಿಬಿಟ್ಟಿದ್ದಾನೆ. ಎರಡನೇ ಹಂತದ ಮಧ್ಯದಲ್ಲಿ ಕೈಮುಗಿದು ಕುಳಿತಿರುವ ವೀರನು ಕೇಶವನ್ನು ನೆತ್ತಿಯ ಮೇಲೆ ಗಂಟು ಕಟ್ಟಿದ್ದಾನೆ. ವೀರನ ಎಡಭಾಗದಲ್ಲಿ ಅಲಂಕೃತವಾದ ಅಪ್ಸರೆ ವೀರನನ್ನು ದಿಟ್ಟಿಸಿ ನೋಡುತ್ತಿದ್ದು, ತಲೆಯ ಬಲಭಾಗದಲ್ಲಿ ತುರುಬು ಕಟ್ಟಿದ್ದಾಳೆ. ಒಂದನೇ ಹಂತದ ಮಧ್ಯದಲ್ಲಿ ಎತ್ತರದ ಕಲ್ಲಿನ ಮೇಲೆ ಶಿವಲಿಂಗವಿದ್ದು, ಅಲ್ಲಿ ನಿಂತಿರುವ ಯತಿ ತನ್ನ ಕಮಂಡಲದಿಂದ ಲಿಂಗದ ಮೇಲೆ ಜಲಪ್ರೋಕ್ಷಣೆ ಮಾಡುತ್ತಾ ಪೂಜಿಸುತ್ತಿದ್ದು, ಜಡೆಯು ಸೊಂಟದವರೆಗೂ ಇಳಿಬಿದ್ದಿದೆ. ಇವನು ಕಾಳಮುಖ ಯತಿಯೇ ಆಗಿದ್ದಾನೆ.

ಎರಡನೇ ವೀರಗಲ್ಲಿನಲ್ಲಿ ಪುರುಷರ ಹೋರಾಟದ ಮತ್ತು ನರ್ತನದ ಶಿಲ್ಪಗಳಿದ್ದು, ತಲೆಯ ಕೇಶವನ್ನು ಕೆಲವರು ನೆತ್ತಿಯ ಮೇಲೆ ಗಂಟು ಕಟ್ಟಿದ್ದರೆ, ಇನ್ನುಳಿದವರು ಕಿವಿಯ ಎಡಗಡೆ ಮತ್ತು ಬಲಗಡೆ ತುರುಬು ಕಟ್ಟಿದ್ದಾರೆ.

ಒಂದನೇ ಹಂತದಲ್ಲಿ ಯತಿಯು ಶಿವಲಿಂಗವನ್ನು ಪೂಜಿಸುತ್ತಿದ್ದು, ಇವನ ಜಡೆಯು ನೆತ್ತಿಯಿಂದ ಹೊರಟಿದ್ದು. ಪೃಷ್ಠ ಭಾಗದವರೆಗೂ ಇಳಿಬಿದ್ದಿದೆ. ಮಂಟಪದ ಹೊರಗಿರುವ ಇನ್ನೊಬ್ಬ ಯತಿಯ ಜಡೆಯು ಹಾಗೆಯೇ ಇದೆ.

ಬೆಜ್ಜವಳ್ಳಿಯ ವೀರಮಾಸ್ತಿಯ ಮೂರನೇ ಹಂತದಲ್ಲಿ ಮೂರು ಜನ ಪುರುಷರಿದ್ದು ಬಲಭಾಗದ ಮೊದಲನೆಯವ ಎರಡು ಕೈಗಳನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದು, ತಲೆಕೂದಲನ್ನು ಎಡಭಾಗದಲ್ಲಿ ಗಂಟು ಕಟ್ಟಿದ್ದಾನೆ. ಎಡಭಾಗದಲ್ಲಿರುವ ಪುರುಷ ಎಡಗಡೆ ತಿರುಗಿದ್ದು, ಎಡಗೈಯಿಂದ ತುತ್ತೂರಿಯನ್ನು ಊದುತ್ತಾ ಸಾಗುತ್ತಿದ್ದು, ತಲೆಗಿಂತಲೂ ದೊಡ್ಡದಾದ ತುರುಬು ಕಟ್ಟಿದ್ದಾನೆ. ಎರಡನೇ ಹಂತದಲ್ಲಿ ವೀರನು ತಲೆಕೂದಲನ್ನು ಕಿವಿಯ ಎಡಭಾಗದಲ್ಲಿ ಗಂಟು ಕಟ್ಟಿದ್ದು, ತಲೆಗೆ ಮುಂಡಾಸ; ಆದರೆ ತುದಿಯ ಜುಟ್ಟನ್ನು ಕೆಳಗೆ ಇಳಿಬಿಟ್ಟಿದ್ದಾನೆ. ಇಲ್ಲಿರುವ ಇನ್ನೊಬ್ಬ ಪುರುಷ ವೀರನ ತಲೆಯವರೆಗೂ ಛತ್ರಿಯನ್ನು ಹಿಡಿದಿದ್ದು, ತಲೆಕೂದಲನ್ನು ನೆತ್ತಿಯ ಮೇಲೆ ಗಂಟು ಕಟ್ಟಿದ್ದಾನೆ.

ಎಡಭಾಗದಲ್ಲಿ ಸತಿ ಬಲತೋಳನ್ನು ಎತ್ತಿ ನಿಂತ ಭಂಗಿಯಲ್ಲಿದ್ದು ತಲೆಕೂದಲನ್ನು ಎಡ ಕಿವಿಯ ಮೇಲ್ಭಾಗ ತುರುಬು ಕಟ್ಟಿದ್ದು, ಉಳಿದ ಕೂದಲನ್ನು ಎರಡು ಕಿವಿಯ ಹಿಂಭಾಗದಲ್ಲಿ ಇಳಿಬಿಟ್ಟಿದ್ದಾಳೆ. ನೆತ್ತಿಯ ಹಿಂಭಾಗದಲ್ಲಿ ಸಾಲಾಗಿ ಕಮಾನಿನ ಆಕಾರದಲ್ಲಿ ಕೇದಿಗೆ ಹೂವುಗಳನ್ನು ಮುಡಿದಿದ್ದಾಳೆ.

ಒಂದನೇ ಹಂತದಲ್ಲಿ ಮಂಟಪದೊಳಗೆ ಶಿವಲಿಂಗವನ್ನು ಕಮಂಡಲದಿಂದ ಪೂಜಿಸುತ್ತಿರುವ ಯತಿಯ ತಲೆಕೂದಲು (ಹೆರಳು) ನೀಳವಾಗಿದ್ದು ಬೆನ್ನಿನ ತುಂಬಾ ಹರಡಿದೆ.

ಹುಲಿಸರ ವೀರಗಲ್ಲಿನ ಎರಡನೇ ಹಂತದಲ್ಲಿ ಪಲ್ಲಕ್ಕಿಯ ಹಿಂಭಾಗ ಮತ್ತು ಮುಂಭಾಗದಲ್ಲಿ ತಲಾ ಇಬ್ಬರು ಅಪ್ಸರೆಯರಿದ್ದು, ತಲೆಯ ಕೂದಲನ್ನು ನೆತ್ತಿಯ ಮೇಲೆ ಗಂಟು ಕಟ್ಟಿದ್ದು, ಅದರ ಸುತ್ತಲೂ ಬೈತಲೆ ಸರವಿದೆ.

ಒಂದನೇ ಹಂತದಲ್ಲಿ ಲಿಂಗವನ್ನು ಎರಡು ಕಡೆಯಿಂದ ಯತಿಗಳು ಕಮಂಡಲದಿಂದ ಪೂಜಿಸುತ್ತಿದ್ದು ಬೆನ್ನಿನ ತುಂಬಾ ನೀಳವಾದ ಜಡೆಯಿದ್ದು ಪೃಷ್ಠ ಭಾಗದವರೆಗೂ ಇಳಿಬಿದ್ದಿದೆ. ಬಲಭಾಗದಲ್ಲಿ ಕೈಮುಗಿದು ಕುಳಿತಿರುವ ವೀರ ತಲೆಕೂದಲನ್ನು ಬಲಭಾಗದಲ್ಲಿ ಗಂಟು ಕಟ್ಟಿದ್ದಾನೆ.

ಅಗಸರಕೊಪ್ಪ ಒಕ್ಕೈವೀರಮಾಸ್ತಿಯಲ್ಲಿ ಯತಿಯು ಶಿವಲಿಂಗವನ್ನು ಪೂಜಿಸುತ್ತಿದ್ದು, ಯತಿಯ ಜಡೆಯು ಒಂದರ ಮೇಲೊಂದು ಜಡೆಯಿದ್ದು ಪೃಷ್ಠ ಭಾಗದವರೆಗೂ ಇಳಿಬಿದ್ದಿದೆ.

ತಿರಲೆಬೈಲು ಒಕ್ಕೈ ವೀರಮಾಸ್ತಿಯ ಮೂರನೆಯ ಹಂತದಲ್ಲಿ ವೀರ ಮತ್ತು ಸತಿ ಕೈ ಮುಗಿದು ಪದ್ಮಾಸನದಲ್ಲಿ ಕುಳಿದಿದ್ದು ತಲೆಕೂದಲನ್ನು ಇಬ್ಬರೂ ತಲೆಯ ಎಡಭಾಗದಲ್ಲಿ ಮುಡಿ ಕಟ್ಟಿದ್ದಾರೆ. ಶಿವಲಿಂಗವನ್ನು ಪೂಜಿಸುವ ಯತಿಯ ಶಿಖೆಯು ನೀಳವಾಗಿದ್ದು, ಪೃಷ್ಠ ಭಾಗದವರೆಗೂ ಇಳಿಬಿದ್ದಿದೆ.

ಕಬಸೆ ವೀರಗಲ್ಲಿನಲ್ಲಿ ನಾಲ್ಕನೆಯ ಹಂತದಲ್ಲಿರುವ ಪುರುಷರು ತಲೆಗೂದಲನ್ನು ಗಂಟು ಕಟ್ಟಿದ್ದಾರೆ. ಮೂರನೆಯ ಹಂತದಲ್ಲಿ ಯುದ್ಧನಿರತರಾದ ಪುರುಷರು ತಲೆಕೂದಲನ್ನು ಎಡಭಾಗದ ಕಿವಿಯ ಮೇಲೆ ತುರುಬು ಕಟ್ಟಿದ್ದಾರೆ, ಉಳಿದವರು ನೀಳವಾದ ಜಡೆಯನ್ನು ಹೊಂದಿರುವರು.

ಕಬಸೆ ವೀರಗಲ್ಲು ೫ ಅಡಿ ಎತ್ತರದ ವೀರಗಲ್ಲು, ನಾಲ್ಕು ಹಂತಗಳನ್ನು ಹೊಂದಿದ್ದು ನಾಲ್ಕನೆಯ ಹಂತದಲ್ಲಿ ಪುರುಷರು ತಲೆಕೂದಲನ್ನು ಗಂಟು ಕಟ್ಟಿದ್ದಾರೆ. ಮೂರನೆಯ ಹಂತದಲ್ಲಿ ಪುರುಷರು ತಲೆಕೂದಲನ್ನು ಎಡಭಾಗದ ಕಿವಿಯ ಮೇಲೆ ಗಂಟು ಕಟ್ಟಿದ್ದಾರೆ. ೨ನೇ ಹಂತದಲ್ಲಿ ಯುದ್ಧ ನಿರತರಾಗಿರುವ ಪುರುಷರಲ್ಲಿ ಕೆಲವರು ತಲೆಕೂದಲನ್ನು ಗಂಟು ಕಟ್ಟಿರುವರು, ಇನ್ನುಳಿದವರು ನೀಳವಾದ ಜಡೆಯನ್ನು ಹೊಂದಿರುವರು.

ಹುಲಿಸರದ ವೀರಗಲ್ಲಿನಲ್ಲಿ ಅಪ್ಸರೆಯರು ತಲೆಯ ಹಿಂಭಾಗದಲ್ಲಿ ಸಾಲಾಗಿ ಚಕ್ರಾಕಾರದಲ್ಲಿ ಕೇದಿಗೆಯ ಹೂವುಗಳನ್ನು ಮುಡಿದಿದ್ದಾರೆ. ಪುರುಷರು ತಲೆಕೂದಲನ್ನು ನೆತ್ತಿಯ ಮೇಲೆ ಲಿಂಗದಾಕಾರದಲ್ಲಿ ಕಟ್ಟಿದ್ದು ಉಳಿದ ಕೇಶವನ್ನು ಕೆಳಭಾಗದಲ್ಲಿ ಇಳಿಬಿಟ್ಟಿದ್ದಾರೆ. ಯತಿಗಳು ಜಟೆಯನ್ನು ಪೃಷ್ಠ ಭಾಗದವರೆಗೂ ಇಳಿಬಿಟ್ಟಿದ್ದಾರೆ. ವೀರನು ತಲೆಕೂದಲನ್ನು ಗಂಟು ಕಟ್ಟಿದ್ದಾನೆ.

ವೀರಗಲ್ಲು ಮತ್ತು ಮಾಸ್ತಿಗಲ್ಲುಗಳಲ್ಲಿ ಸ್ತ್ರೀಯರ ವಿಗ್ರಹಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಸ್ತ್ರೀಯರು ಕೇದಿಗೆಯ ಹೂವುಗಳನ್ನು ಯಥೇಚ್ಛವಾಗಿ ಮುಡಿದಿರುವುದನ್ನು ಶಿಲ್ಪಿಗಳಲ್ಲಿ ಕಾಣಬಹುದು. ಆದರೆ ಬೇರೆ ಯಾವುದೇ ಹೂವುಗಳನ್ನು ಮುಡಿದಿರುವುದು ಸ್ಪಷ್ಟವಾಗುವುದಿಲ್ಲ. ವಿಶೇಷವಾಗಿ ಕೇದಿಗೆಯನ್ನೇ ಯಾಕೆ ಉಪಯೋಗಿಸುತ್ತಿದ್ದರು ಎಂಬುದಕ್ಕೆ ಉತ್ತರ ಹುಡುಕಬೇಕಾಗುತ್ತದೆ. ಬದಲಾದ ಕಾಲಘಟ್ಟದಲ್ಲಿ ಬ್ರಾಹ್ಮಣರು ರಾಜವಂಶದವರು, ಸತಿಯಾಗುವುದಕ್ಕೆ ಬದಲಾಗಿ ವೀರಯೋಧ ಅಥವ ನಾಯಕನ ಪತ್ನಿಯರು ಸತಿಯಾಗುವ ಸಂಪ್ರದಾಯ ಮತ್ತು ಸತಿ ವ್ರತಾಚರಣೆ ಸಮಾಜದಲ್ಲಿ ರೂಢಿಗೆ ಬಂದಿತು. ಹೂವುಗಳನ್ನು ಮುಡಿಯುವುದು ಹಾಗೂ ದೇವರಿಗೆ ಅರ್ಪಿಸುವುದರಲ್ಲಿಯೂ ವರ್ಗವ್ಯವಸ್ಥೆಯನ್ನು ಕಾಣಬಹುದು. ಕೇದಿಗೆ ಹೂವುಗಳನ್ನು ಮುಡಿಯುವವರು ಹೆಚ್ಚಾಗಿ ಸಮಾಜದ ಕೆಳವರ್ಗದ ಜನರೆಂದು ಭಾವಿಸಬಹುದು. ಇಂದಿನ ಉತ್ತರ ಕರ್ನಾಟಕದ ಬಹುಪಾಲು ಪ್ರದೇಶಗಳಲ್ಲಿ ಪೂಜಿಸುವ ಶೂದ್ರ ದೇವತೆಗಳಿಗೆ ಕೇದಿಗೆ ಹೂವುಗಳನ್ನು ಅರ್ಪಿಸುವುದು ವಾಡಿಕೆಯಲ್ಲಿದೆ. ಇದರಿಂದಾಗಿ ಕೇದಿಗೆ ಹೂವುಗಳನ್ನು ಮುಡಿಯುವವರು ಹಾಗೂ ಉಪಯೋಗಿಸುವವರು ಸಮಾಜದ ಕೆಳವರ್ಗದ ಮಹಿಳೆಯವರಾಗಿದ್ದು, ಸತಿಯಾಗುತ್ತಿದ್ದವರು ಆ ವರ್ಗದ ಮಹಿಳೆಯರೇ ಜಾಸ್ತಿ ಎನ್ನುವ ಅಂಶ ಮನದಟ್ಟಾಗುತ್ತದೆ.

ಅಂದಿನ ಕಾಲದ ವೀರಮಾಸ್ತಿಗಲ್ಲುಗಳಲ್ಲಿನ ಸ್ತ್ರೀ ಪುರುಷರ ಕೇಶವಿನ್ಯಾಸವನ್ನು ಅಭ್ಯಸಿಸಿದಾಗ ವಿವಿಧ ಶೈಲಿಯಲ್ಲಿ ಕೇಶಾಲಂಕಾರ ಮಾಡಿಕೊಳ್ಳುತ್ತಿದ್ದರು; ಇವರಿಬ್ಬರೂ ವಿವಿಧ ರೀತಿಯಲ್ಲಿ ತುರುಬು ಕಟ್ಟಿರುತ್ತಿದ್ದರು. ಪುರುಷರು ತಲೆಕೂದಲನ್ನು ಕಿವಿಯ ಪಕ್ಕದಲ್ಲಿಯೂ ನೆತ್ತಿಯ ಮೇಲೆ ಲಿಂಗದಾಕಾರದಲ್ಲಿಯೂ ಕಟ್ಟುತ್ತಿದ್ದರು. ಸ್ತ್ರೀ ಪುರುಷರಿಬ್ಬರೂ ಜಡೆಯನ್ನು ಬಿಡುತ್ತಿದ್ದರು. ಶಿವಲಿಂಗವನ್ನು ಪೂಜಿಸುತ್ತಿರುವ ಯತಿಯು ಕೆಲವೊಮ್ಮೆ ನೀಳವಾದ ಜಡೆಯನ್ನು ಹೊಂದಿದ್ದರೆ ಕೆಲವೊಂದು ಬಾರಿ ಬೆನ್ನಿನ ತುಂಬಾ ಕೇಶರಾಶಿ ಹರಡಿದ್ದು ಪೃಷ್ಠ ಭಾಗದವರೆಗೂ ಇಳಿಬಿದ್ದಿರುವುದು ವಿಶೇಷವೆನಿಸುತ್ತದೆ.

೬.೨.೨. ಆಭರಣಗಳು

ಮಾನವ ಅಲಂಕಾರ ಪ್ರಿಯ, ಮನುಷ್ಯನು ತನ್ನ ದೇಹಾಲಂಕಾರ ಮಾಡಿಕೊಳ್ಳಲು ಆಭರಣಗಳನ್ನು ಬಳಸುತ್ತ ತನ್ನ ಅಂದವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾ ಬಂದಿದ್ದಾನೆ. ಸಿಂಧೂ ನಾಗರಿಕತೆಯಿಂದ ಆಭರಣಗಳ ಬಳಕೆ ಪ್ರಾರಂಭವಾಗಿ ಆಧುನಿಕ ಯುಗದವರೆಗೂ ವಿವಿಧ ವಿನ್ಯಾಸದ ಆಭರಣಗಳನ್ನು ಮನುಷ್ಯ ಉಪಯೋಗಿಸುತ್ತಿದ್ದಾನೆ. ಆಭರಣಗಳು ಮಾನವನ ಅಂದವನ್ನು ಮತ್ತು ಪ್ರತಿಷ್ಠೆಯನ್ನು ಹೆಚ್ಚಿಸುವ ಸಾಧನಗಳಾಗಿದ್ದು, ಪ್ರಾಚೀನ ಮತ್ತು ಮಧ್ಯಯುಗದ ಮಾನವನ ಆಭರಣಗಳು ಯಾವ ರೀತಿಯಲ್ಲಿ ಮಾಸ್ತಿಕಲ್ಲು ಮತ್ತು ವೀರಗಲ್ಲುಗಳಲ್ಲಿ ಮಲೆನಾಡಿನ ಭಾಗಗಳಲ್ಲಿ ಅಭಿವ್ಯಕ್ತಗೊಂಡಿವೆ ಎಂಬುದನ್ನು ನಾವು ತಿಳಿಯಬಹುದು.

ಹರೂರು ವೀರಗಲ್ಲಿನ ಮೂರನೇ ಹಂತದಲ್ಲಿ ವೀರರು ಉದ್ದನೆಯ ಜಡೆ ಹಾಕಿದ್ದು, ಕೈ ಕಡಗ, ಕರ್ಣಕುಂಡಲ, ಕಾಲುಂದಗೆ ಧರಿಸಿರುವರು. ಎರಡನೇ ಹಂತದಲ್ಲಿ ವೀರನು ಧ್ಯಾನರೂಪದಲ್ಲಿ ಕುಳಿತಿದ್ದು ತೋಳುಬಂಧಿ, ಕಾಲ್ಕಡಗ, ಕೊರಳಲ್ಲಿ ದಪ್ಪನಾದ ಒಂದು ಕಂಠೀಹಾರ, ಕರ್ಣಕುಂಡಲ ಧರಿಸಿದ್ದಾನೆ. ಇಲ್ಲಿನ ಅಪ್ಸರೆಯರು ಬೈತಲೆಬೊಟ್ಟು, ಓಲೆ, ದೊಡ್ಡದಾದ ಮಣಿಯಹಾರ, ಬಳೆ ಹಾಗೂ ತೋಳುಬಂಧಿ ಧರಿಸಿರುವರು.

ಗಂಡಘಟ್ಟದ ಒಂದನೇ ವೀರಮಾಸ್ತಿಯಲ್ಲಿ ನಾಲ್ಕನೇ ಹಂತದಲ್ಲಿ ಪುರುಷರು ಯುದ್ಧ ಮಾಡುತ್ತಿದ್ದು ಕರ್ಣಕುಂಡಲ, ತೋಳುಬಂಧಿ, ಕಾಲ್ಕಡಗ ಹೊಂದಿರುವರು. ಒಂದನೇ ಹಂತದಲ್ಲಿ ವೀರನು ಬೆಂಕಿಯ ಜ್ವಾಲೆಯಲ್ಲಿ ಕುಳಿತಿದ್ದು ಕೊರಳಿನ ಸುತ್ತ ದಪ್ಪನಾದ ಕಂಠೀ ಹಾರ ಧರಿಸಿದ್ದಾನೆ.

ಕೋಟೆ ಹೊಸಕೊಪ್ಪದ ಎರಡನೇ ಒಕ್ಕೈವೀರಮಾಸ್ತಿಯ ಎರಡನೇ ಹಂತದಲ್ಲಿ ಸತಿಯ ಬಲಗೈ ತೋಳನ್ನು ಎತ್ತಿದ್ದು, ಆ ಕೈತುಂಬಾ ಬಳೆಗಳು ಹಾಗೂ ತೋಳುಬಂಧಿ ಇದೆ.

ಶ್ರೀ ಜೆ.ಸಿ.ಬಿ.ಎಂ. ಕಾಲೇಜು ಆವರಣದಲ್ಲಿನ ವೀರಮಾಸ್ತಿ ವಿಗ್ರಹದಲ್ಲಿ ಸತಿಯು ನೃತ್ಯರೂಪದಲ್ಲಿದ್ದು, ಸೊಂಟದ ಸುತ್ತ ಬಿಗಿಯಾದ ಮಣಿಹಾರದ ಪಟ್ಟಿ ಕಟ್ಟಿದ್ದು, ಕೊರಳಲ್ಲಿ ಪದಕ ಧರಿಸಿದ್ದಾಳೆ.

ಸಿಂಹಾದ್ರಿಯ ಒಕ್ಕೈ ವೀರಮಾಸ್ತಿಯ ಎರಡನೇ ಹಂತದಲ್ಲಿ ವೀರನು ತನ್ನ ಎರಡು ತೋಳುಗಳಿಗೂ ಎರಡೆರಡು ತೋಳುಬಂಧಿಗಳನ್ನು, ಕೊರಳಿನ ಸುತ್ತ ದಪ್ಪನಾದ ಹಾರವನ್ನು ಧರಿಸಿರುವನು. ಸತಿಯು ತೋಳುಬಂಧಿ, ಬಳೆಗಳು, ಕಂಠೀಹಾರ ಧರಿಸಿದ್ದು, ದೊಡ್ಡದಾದ ಕಾಸಿನ ಸರವು ಕೊರಳಿನಿಂದ ಕುಳಿತಿರುವ ಮುಂಗಾಲಿನವರೆಗೂ ಇಳಿಬಿದ್ದಿದೆ. ಪಕ್ಕದಲ್ಲಿ ಅಪ್ಸರೆಯರು ಸೊಂಟಕ್ಕೆ ಪಟ್ಟಿ, ಡಾಬು, ಕಾಲ್ಕಡಗ ಧರಿಸಿರುವರು.

ಹುಲ್ಸೆಯ ಒಕ್ಕೈ ವೀರಮಾಸ್ತಿಯ ಐದನೇ ಹಂತದಲ್ಲಿ ವೀರರು ಕರ್ಣಕುಂಡಲ ತೋಳುಬಂಧಿ, ಪದಕದ ಹಾರವನ್ನು ಮತ್ತು ಎಲ್ಲಾ ಪುರುಷರು ದಪ್ಪನಾದ ಕಾಲ್ಕಡಗ ಹೊಂದಿರುವರು.

ಮೂರನೇ ಹಂತದಲ್ಲಿ ವೀರನು ನೃತ್ಯಭಂಗಿಯಲ್ಲಿ ನಿಂತಿದ್ದು ಕಂಠೀಹಾರ, ಕರ್ಣಕುಂಡಲವನ್ನು, ಉಳಿದ ಸಹಚರರು ತೋಳುಬಂಧಿ ಹಾಗೂ ಹಾರಗಳನ್ನು ಧರಿಸಿರುವರು. ಎರಡನೇ ಹಂತದಲ್ಲಿ ಸತಿಯು ಬಲಗೈ ಹಸ್ತವನ್ನು ಎತ್ತಿದ್ದು ಹೆಬ್ಬೆರಳಿನಲ್ಲಿ ಉಂಗುರ, ಮೂರು ದೊಡ್ಡ ಬಳೆಗಳು ನಂತರ ಸಾದಾ ಬಳೆಗಳು, ಓಲೆ, ತೋಳಬಂಧಿ, ಕೈಕಡಗ, ಕೊರಳಿಗೆ ದಪ್ಪನಾದ ಕಂಠೀಹಾರ ಧರಿಸಿದ್ದಾಳೆ.

ಉಳವಳ್ಳಿಯ ಒಕ್ಕೈ ವೀರಮಾಸ್ತಿಯ ಎರಡನೇ ಹಂತದಲ್ಲಿ ಸತಿಯು ಆಕರ್ಷಕ ಓಲೆಯನ್ನು ಧರಿಸಿದ್ದು ದೊಡ್ಡದಾದ ಹಾರ ಸ್ತನಗಳ ಮಧ್ಯದಿಂದ ವಕ್ಷಸ್ಥಳದವರೆಗೂ ಇದೆ.

ಮೀಗಾದ ಒಕ್ಕೈ ವೀರಮಾಸ್ತಿಯ ಎರಡನೇ ಹಂತದಲ್ಲಿ ಪಲ್ಲಕ್ಕಿಯನ್ನು ಹೊತ್ತೊಯ್ಯುವ ಅಪ್ಸರೆಯರು ದಪ್ಪದ ಕಾಲ್ಕಡಗ, ಸೊಂಟಕ್ಕೆ ವಡ್ಯಾಣ ಕಟ್ಟಿದ್ದಾರೆ. ಸತಿಯು ಬಳೆ, ಉಂಗುರ, ಡಾಬು ಧರಿಸಿದ್ದು ನಿಂಬೆಹಣ್ಣನ್ನು ಭುಜದ ಮೇಲಿಟ್ಟಿದ್ದಾಳೆ. ಪಕ್ಕದಲ್ಲಿ ದೊಡ್ಡದಾದ ತಂಬೂರಿ ಇದೆ. ಇದರಿಂದಾಗಿ ಆಕೆ ಸಂಗೀತಪ್ರಿಯೆ ಅಥವ ಹಾಡುಗಾರ್ತಿಯಾಗಿರಬಹುದು ಎಂಬ ಅಂಶ ಮನವರಿಕೆಯಾಗುತ್ತದೆ.

ನಾರ್ವೆಯ ಆತ್ಮಬಲಿ ವಿಗ್ರಹದಲ್ಲಿ ಸೇವಕನು ತನ್ನ ರುಂಡವನ್ನು ಬಲಗೈಯಲ್ಲಿ ಹಿಡಿದಿದ್ದು, ಕಿವಿಯಲ್ಲಿ ಕರ್ಣಕುಂಡಲ, ಹಾಗೆಯೇ ಇಲ್ಲಿನ ವೀರನ ವಿಗ್ರಹದಲ್ಲಿ ಆತ ಕೊರಳಲ್ಲಿ ದೊಡ್ಡದಾದ ಹಾರ, ಕಾಲ್ಕಡಗ ಹೊಂದಿರುವನು. ಹಾಲಮುತ್ತೂರಿನ ಒಕ್ಕೈ ವೀರಮಾಸ್ತಿಯಲ್ಲಿ ಬಲಗೈ ಹಸ್ತವನ್ನು ಎತ್ತಿ ಹಿಡಿದಿರುವ ಸ್ತ್ರೀಯು ಮೂರು ಮಣಿಯ ಬಳೆಗಳು, ಸಾದಾಬಳೆಗಳು, ತೋಳು ಬಂಧಿಯನ್ನು ಧರಿಸಿದ್ದಾಳೆ. ಪಕ್ಕದಲ್ಲಿ ಕುಳಿತಿರುವ ಸತಿಯ ತಲೆಯ ಸುತ್ತಲೂ ಮಣಿಯ ಹಾರ, ಜುಮುಕಿ, ಕಂಠೀಹಾರ, ಅದಕ್ಕೊಂದು ಪದಕವಿದೆ. ಕೈಯಲ್ಲಿ ಬಳೆ ಹಾಗೂ ತೋಳುಬಂಧಿ ಹಾಗೂ ಕಟೀಬಂಧವಿದೆ. ಪಕ್ಕದಲ್ಲಿ ಕುಳಿತವನು ತೋಳುಬಂಧಿ ಕೈಕಡಗ ಹಾಗೂ ಕೊರಳ ತುಂಬಾ ಹಾರಗಳನ್ನು ಧರಿಸಿದ್ದಾನೆ.

ಬಂಡಿಗಡಿಯ ಒಂದನೇ ಒಕ್ಕೈ ವೀರಮಾಸ್ತಿಯ ಎರಡನೇ ಹಂತದಲ್ಲಿ ಬಲಗೈ ಹಸ್ತವನ್ನು ಎತ್ತಿ ಹಿಡಿದಿರುವ ತೋಳಿನಲ್ಲಿ ಕೈ ತುಂಬಾ ಬಳೆಗಳು ಹಾಗೂ ತೋಳುಬಂಧಿ ಇವೆ.

ಕೊಗ್ರೆಯ ವೀರಮಾಸ್ತಿಯಲ್ಲಿ ಸತಿಯ ಬಲಗೈ ತೋಳಿನ ಶಿಲ್ಪವಿದ್ದು, ಎರಡು ಬೆರಳಿನ ಮಧ್ಯೆ ನಿಂಬೆಹಣ್ಣು ಹಸ್ತದಲ್ಲಿ ಪದ್ಮ, ಹೆಬ್ಬೆರಳಿಗೆ ಎರಡು ಸುತ್ತಿನ ಉಂಗುರ, ದಪ್ಪನಾದ ಕಡಗದ ರೀತಿಯ ಬಳೆಗಳಿವೆ. ಇದರ ಪಕ್ಕದಲ್ಲಿ ಕುಳಿತಿರುವ ಸತಿಯು ಕಿವಿಯಲ್ಲಿ ಜುಮುಕಿ, ಕೊರಳಿಗೆ ದಪ್ಪನಾದ ಕಂಠೀಹಾರ, ಕೈ ತುಂಬಾ ಬಳೆಗಳು, ತೋಳುಬಂಧಿ ಧರಿಸಿರುವಳು. ವೀರನ ಗಂಭೀರ ವದನದಲ್ಲಿ ಮೀಸೆ, ಕರ್ಣಕುಂಡಲ, ಕೊರಳಿನಲ್ಲಿ ನಾಲ್ಕು ಮಣಿಯ ಹಾರಗಳಿವೆ. ತೋಳಿನಲ್ಲಿ ದಪ್ಪನಾದ ಮಣಿಯ ಕಟ್ಟು ಧರಿಸಿದ್ದಾನೆ.

ಕೊಪ್ಪ ಪಟ್ಟಣದ ಐದನೇ ಒಕ್ಕೈ ವೀರಮಾಸ್ತಿಯ ಬಲಭಾಗದಲ್ಲಿ ಕುಳಿತಿರುವ ವೀರ ಕೊರಳಿಗೆ ಒಂದು ಹಾರವನ್ನು, ತೋಳುಬಂಧಿಯನ್ನು ಕಟೀಬಂಧವನ್ನು ಧರಿಸಿದ್ದಾನೆ.

ಮಂಡಗದ್ದೆಯ ಒಂದನೇ ವೀರಮಾಸ್ತಿಯು ಉಬ್ಬುಶಿಲ್ಪವಾಗಿದ್ದು, ವೀರನು ಉದ್ದನೆಯ ಬಿಲ್ಲನ್ನು ಎರಡು ಕೈಗಳಿಂದ ಹಿಡಿದಿದ್ದಾನೆ. ಸೊಂಟದಲ್ಲಿ ಖಡ್ಗ ಧರಿಸಿದ್ದು, ಕೊರಳಲ್ಲಿ ಹಾರ, ಕಾಲಲ್ಲಿ ಕಡಗ, ಉದ್ದನೆಯ ಮಣಿಹಾರವು ವಕ್ಷಸ್ಥಳದವರೆಗೂ ಇಳಿಬಿದ್ದಿದೆ.

ಇಲ್ಲಿನ ಎರಡನೇ ವೀರಮಾಸ್ತಿಯಲ್ಲಿ ವೀರ ಮತ್ತು ಸತಿ ನೃತ್ಯರೂಪದಲ್ಲಿ ಒಟ್ಟಿಗೆ ನಿಂತಿದ್ದು, ವೀರ ಕರ್ಣಕುಂಡಲ, ಕೊರಳಲ್ಲಿ ದೊಡ್ಡದಾದ ಮೂರು ಹಾರಗಳನ್ನು ಕೈಯಲ್ಲಿ ಕಡಗ ಸೊಂಟದ ಪಟ್ಟಿ, ಕಾಲ್ಕಡಗ ಧರಿಸಿದ್ದಾನೆ. ಸತಿಯು ಎಡಭಾಗದಲ್ಲಿ ಸರ್ವಾಲಂಕಾರಭೂಷಿತೆ ಯಾಗಿ ನೃತ್ಯಭಂಗಿಯಲ್ಲಿ ನಿಂತಿದ್ದು ಕಿವಿಯಲ್ಲಿ ಜುಮುಕಿ, ಉಬ್ಬಿರುವ ಸ್ತನಗಳ ಮಧ್ಯದಿಂದ ಉದ್ದವಾದ ಪದಕದ ಹಾರ ವಕ್ಷಸ್ಥಳದವರೆಗೂ ಇದೆ. ಎರಡು ಕಾಲಿಗೂ ದಪ್ಪನಾದ ಕಾಲುಂದಗೆ ಹೊಂದಿದ್ದಾಳೆ.

ಹೆದ್ದೂರಿನ ಒಂದನೇ ವೀರಗಲ್ಲಿನ ನಾಲ್ಕನೇ ಹಂತದಲ್ಲಿ ಪುರುಷರು ಪರಸ್ಪರ ಹೋರಾಡುತ್ತಿದ್ದು ಕೊರಳಲ್ಲಿ ಕಂಠೀಹಾರ, ಕರ್ಣಕುಂಡಲ, ತೋಳಿನಲ್ಲಿ ಮಣಿಯ ಮೂರು ಪಟ್ಟಿಗಳು ಕಾಲಿನಲ್ಲಿ ದಪ್ಪನಾದ ಮೂರು ಕಡಗಗಳಿವೆ. ಬಲಭಾಗದ ಪುರುಷ ತೋಳುಬಂಧಿ, ದಪ್ಪನಾದ ಕಾಲುಗಳಿಗೆ ಮೂರು ಕಡಗಗಳನ್ನು ಧರಿಸಿದ್ದಾನೆ. ಎಡಭಾಗದಲ್ಲಿರುವ ಪುರುಷ ಕಂಠೀಹಾರ, ಎರಡು ಸುತ್ತಿನ ತೋಳುಬಂಧಿ, ಕೈಯಲ್ಲಿ ಮೂರು ಕಡಗಗಳು ಹಾಗೂ ಎರಡು ಕಾಲಿಗೂ ಒಂದೊಂದು ಕಾಲ್ಕಡಗ ಧರಿಸಿದ್ದಾನೆ.

ಎರಡನೇ ಹಂತದಲ್ಲಿ ಶಿವಲಿಂಗದ ಪಕ್ಕದಲ್ಲಿ ಕುಳಿತಿರುವ ವೀರ ತೋಳುಬಂಧಿ ಕಂಠೀಹಾರ, ಕಾಲ್ಕಡಗ ಧರಿಸಿದ್ದಾನೆ. ಲಿಂಗದ ಎಡಭಾಗದಲ್ಲಿ ಅಲಂಕೃತಳಾದ ಅಪ್ಸರೆ ಸೊಂಟದ ಮೇಲೆ ಕೈಯಿಟ್ಟಿದ್ದು, ಹಾರ, ಕೈಬಳೆ, ತೋಳುಬಂಧಿ, ಕಟೀಬಂಧ ಹೊಂದಿರುವಳು.

ಒಂದನೇ ಹಂತದಲ್ಲಿ ಯತಿಯು ಶಿವಲಿಂಗವನ್ನು ಪೂಜಿಸುತ್ತಿದ್ದು, ಕೊರಳಲ್ಲಿ ರುದ್ರಾಕ್ಷಿ ಕೈಕಡಗ, ಕಾಲ್ಕಡಗ ಕಟ್ಟಿದ್ದಾನೆ. ಲಿಂಗದ ಮುಂದೆ ಮಂಡಿ ಎತ್ತಿ ಮಲಗಿರುವ ಸುಂದರವಾದ ಬಸವ, ಕೊರಳಲ್ಲಿ ಅಂದವಾದ ಗೆಜ್ಜೆಯ ಸರ, ಭುಜದ ಹಿಂದೆ ಮೂರು ಸುತ್ತಿನ ಮಣಿಯ ಹಾರ ಹೊಕ್ಕಳದವರೆಗೂ ಇಳಿಬಿದ್ದಿದೆ.

ಬೆಜ್ಜವಳ್ಳಿಯ ವೀರಮಾಸ್ತಿಯು ಅತ್ಯಂತ ಸೂಕ್ಷ್ಮ ಕೆತ್ತನೆಯಿಂದ ಕೂಡಿದ್ದು ಮೂರನೇ ಹಂತದಲ್ಲಿ ಮೂರುಜನ ಪುರುಷರಿದ್ದು, ಬಲಭಾಗದಲ್ಲಿರುವ ಪುರುಷ ದೊಡ್ಡದಾದ ಕರ್ಣ ಕುಂಡಲ, ಕೊರಳಲ್ಲಿ ಕಂಠೀಹಾರ, ತೋಳುಬಂಧಿ, ಕೈಕಡಗ ಹಾಗೂ ಕಾಲ್ಕಡಗ ಧರಿಸಿದ್ದಾನೆ. ಎಡ ಭಾಗದಲ್ಲಿರುವ ಪುರುಷ ಬಲಭಾಗದ ಪುರುಷನ ಮಾದರಿಯಲ್ಲಿಯೇ ಆಭರಣ ಧರಿಸಿದ್ದು, ಕಾಲಿಗಿಂತಲೂ ದೊಡ್ಡದಾದ ಕಾಲ್ಕಡಗ ತೊಟ್ಟಿರುವುದು ವಿಶೇಷವಾಗಿದೆ.

ಎರಡನೇ ಹಂತದಲ್ಲಿ ವೀರನು ಕುದುರೆಯ ಮೇಲೆ ಕುಳಿತಿದ್ದು ತಲೆಗೆ ಮುಂಡಾಸದ ಕಿರೀಟ, ಕರ್ಣಕುಂಡಲ, ಕಂಠೀಹಾರಕ್ಕೊಂದು ಪದಕ, ಕೈಗಿಂತಲೂ ದೊಡ್ಡದಾದ ತೋಳಬಂಧಿ,

ಕೈಕಡಗ, ಕಾಲ್ಕಡಗ, ಕಾಲುಂದಗೆ ಇದೆ. ವೀರನಿಗೆ ಛತ್ರಿ ಹಿಡಿದಿರುವ ಪುರುಷರು ಕರ್ಣಕುಂಡಲ ಕೈಕಡಗ, ತೋಳುಬಂಧಿ, ಕಚ್ಚೆಪಂಚೆ, ಕಾಲ್ಕಡಗ ಹಾಗೂ ಕಾಲುಂದಗೆ ಧರಿಸಿದ್ದಾರೆ. ಎಡಭಾಗದಲ್ಲಿ ಸತಿ ತೋಳನ್ನು ಎತ್ತಿ ನಿಂತ ಭಂಗಿಯಲ್ಲಿದ್ದು, ಸರ್ವಾಲಂಕಾರ ಭೂಷಿತೆಯಾಗಿದ್ದಾಳೆ. ಬೈತಲೆ ಸರ, ಬೊಟ್ಟು, ಕಿವಿಗೆ ಚಕ್ರಾಕಾರದ ಜುಮುಕಿ, ಐದು ಎಳೆಯ ದೊಡ್ಡದಾದ ಕಂಠೀಹಾರ, ಅದಕ್ಕೊಂದು ಪದಕವಿದೆ. ತೋಳುಗಳಿಗೆ ಚಕ್ರಾಕಾರದ ಎರಡೆರಡು ತೋಳುಬಂಧಿ ಎರಡು ಕೈಗಳಿಗೆ ತಲಾ ಎಂಟೆಂಟು ಬಳೆಗಳನ್ನು ಧರಿಸಿದ್ದು, ಎತ್ತಿರುವ ಬಲಗೈ ಹಸ್ತದ ಹೆಬ್ಬೆರಳಿನ ಮೇಲೆ ನಿಂಬೆಹಣ್ಣನ್ನು ಇಟ್ಟುಕೊಂಡಿದ್ದು, ಎಲ್ಲಾ ಬೆರಳುಗಳಿಗೂ ಉಂಗುರಗಳಿವೆ. ಕೊರಳಿನಿಂದ ಒಂದು ಹಾರ ಬಂದಿದ್ದು, ಅದು ಎರಡು ಸ್ತನಗಳ ಮಧ್ಯದಿಂದ ಬಂದಿದ್ದು ವಕ್ಷಸ್ಥಳದವರೆಗೂ ಇದ್ದು ತುದಿಯಲ್ಲಿ ಪದಕವಿದೆ.

ಒಂದನೇ ಹಂತದಲ್ಲಿ ಕಮಂಡಲದಿಂದ ಪೂಜಿಸುವ ಯತಿಯು ನೀಳವಾದ ಜಡೆ, ಕಾಲುಂದಗೆ ಧರಿಸಿದ್ದಾನೆ. ಲಿಂಗದ ಪಕ್ಕದಲ್ಲಿ ಮುಂಗಾಲನ್ನು ಎತ್ತಿ ಮಲಗಿರುವ ಬಸವನ ಕಾಲಿನಲ್ಲಿ ಕಡಗ, ಕೊರಳಿಗೆ ಗೆಜ್ಜೆಯ ಹಾರ ಹಾಗೂ ಮುಖವಾಡವಿದ್ದು ಬೆನ್ನಿನಿಂದ ಇಳಿಬಿಟ್ಟಿರುವ ಮಣಿಯ ಹಾರವಿದೆ.

ಅಗಸರ ಕೊಪ್ಪದ ಒಕ್ಕೈವೀರಮಾಸ್ತಿಯಲ್ಲಿ ಕಲ್ಲಿನಿಂದ ಹೊರಟಿರುವ ಬಲ ತೋಳನ್ನು ಸತಿ ಎತ್ತಿದ್ದು ನೀಳವಾದ ಐದು ಬೆರಳುಗಳಿಗೆ ಉಂಗುರಗಳನ್ನು ಧರಿಸಿದ್ದಾಳೆ. ಕೈಯಲ್ಲಿ ದಪ್ಪನಾದ ಎರಡು ಬಳೆಗಳು ಮತ್ತು ತೋಳುಬಂಧಿ ಹೊಂದಿದ್ದಾಳೆ.

ತಿರಳೆಬೈಲು ಒಕ್ಕೈ ವೀರಮಾಸ್ತಿಯಲ್ಲಿ ಕೆಳಹಂತದಿಂದ ಹೊರಟಿರುವ ಬಲಗೈ ತೋಳನ್ನು ಎತ್ತಿದ್ದು ಕೈಯಲ್ಲಿ ಒಂದು ಕಡಗ ಹಾಗೂ ಎರಡು ಬಳೆಗಳಿವೆ. ತೋಳುಬಂಧಿ ಧರಿಸಿದ್ದು, ಅದರ ಮೇಲ್ಭಾಗದಲ್ಲಿ ಪದ್ಮದ ಚಿತ್ರವಿದೆ.

ವೀರಗಲ್ಲು/ಮಾಸ್ತಿಕಲ್ಲುಗಳಲ್ಲಿನ ಸ್ತ್ರೀ–ಪುರುಷರ ಶಿಲ್ಪಾಕೃತಿಗಳನ್ನು ವೀಕ್ಷಿಸಿದಾಗ ಇವರಿಬ್ಬರೂ ಆಭರಣಪ್ರಿಯರಾಗಿದ್ದರು ಎನ್ನುವ ಅಂಶ ಮನವರಿಕೆಯಾಗುತ್ತದೆ. ಓಲೆ, ಕಂಠೀಹಾರ, ಪದಕದ ಸರ, ಕರ್ಣಕುಂಡಲ, ತೋಳುಬಂಧಿ, ಕಡಗ, ಬಳೆ, ಉಂಗುರ ಮುಂತಾದವುಗಳು ಎಲ್ಲರೂ ಧರಿಸುವ ಸಾಮಾನ್ಯವಾದ ಆಭರಣಗಳಾಗಿದ್ದವು. ಆದರೆ ವಿಶೇಷತೆ ಎಂದರೆ ಯಾವ ಸ್ತ್ರೀ ವಿಗ್ರಹದಲ್ಲಿಯೂ ಮೂಗುತಿಯನ್ನು ಕೆತ್ತಿರುವುದು ಕಂಡುಬರುವುದಿಲ್ಲ. ಬಹುಶಃ ಮೂಗುತಿಯ ರಚನೆಯು ಶಿಲ್ಪಿಗೆ ಕಷ್ಟವಾಗಿದೆಯೋ ಅಥವಾ ಅದನ್ನು ಕಡೆಗಣಿಸಿದ್ದಾನೆಯೋ ಎನ್ನುವ ಅಂಶ ಸ್ಪಷ್ಟವಾಗುವುದಿಲ್ಲ.

ಕಬಸೆ ವೀರಗಲ್ಲಿನಲ್ಲಿ ಪುರುಷನು ಕರ್ಣಕುಂಡಲ, ಕೈಕಡಗ, ದಪ್ಪನಾದ ಕಾಲ್ಕಡಗ, ಕುತ್ತಿಗೆಯ ಸುತ್ತಲೂ ಎರಡು ಸುತ್ತಿನ ಕಂಠೀಹಾರ, ಎರಡು ಸುತ್ತಿನ ತೋಳಬಂಧಿ ಧರಿಸಿದ್ದು, ಎಲ್ಲರೂ ಹೋರಾಡುವ ದೃಶ್ಯಗಳಿವೆ.

ನಿವಣೆ ವೀರಗಲ್ಲಿನಲ್ಲಿ ವೀರನು ಶತ್ರುವಿನೊಡನೆ ಹೋರಾಡುತ್ತಿದ್ದು, ಕರ್ಣಕುಂಡಲ ಕಂಠೀಹಾರ, ತೋಳುಬಂಧಿ, ಕಾಲ್ಕಡಗ, ಬತ್ತಳಿಕೆ ಧರಿಸಿದ್ದಾನೆ.

೬.೨.೩. ಉಡುಗೆ - ತೊಡುಗೆಗಳು

ಪ್ರಾಚೀನ ಕಾಲದಲ್ಲಿ ಮಾನವರು ತಮ್ಮ ದೇಹವನ್ನು ಮರದ ಎಲೆ, ತೊಗಟೆ ಮತ್ತು ಪ್ರಾಣಿಗಳ ಚರ್ಮದಿಂದ ರಕ್ಷಿಸಿಕೊಳ್ಳುತ್ತಿದ್ದರು. ಕ್ರಮೇಣ ಮಾನವನಲ್ಲಿ ನಾಗರಿಕತೆಯ ಸಂಸ್ಕೃತಿ ಪ್ರಾರಂಭವಾದೊಡನೆ ವಿವಿಧ ವಿನ್ಯಾಸದ ಉಡುಪುಗಳನ್ನು ಧರಿಸುವುದನ್ನು ಅನುಭವಕ್ಕೆ ತಂದುಕೊಂಡನು. ಮಧ್ಯಕಾಲೀನ ಮತ್ತು ನಂತರದ ಕಾಲಘಟ್ಟದಲ್ಲಿ ಸ್ತ್ರೀ ಪುರುಷರಿಬ್ಬರೂ ವಿವಿಧ ಮಾದರಿಯ ವಸ್ತ್ರಗಳನ್ನು ಧರಿಸಲು ಆರಂಭಿಸಿದರು. ಇವರ ವಸ್ತ್ರಾಲಂಕಾರವನ್ನು ನಾವು ಮಾಸ್ತಿಕಲ್ಲು ಮತ್ತು ವೀರಗಲ್ಲುಗಳಲ್ಲಿ ಸೂಕ್ಷ್ಮವಾಗಿ ತಲಸ್ಪರ್ಶಿ ಅಧ್ಯಯನ ಮಾಡಬಹುದು.

ಹರೂರು ವೀರಗಲ್ಲಿನಲ್ಲಿ ವೀರರು ಧರಿಸಿರುವ ವಸ್ತ್ರ ತುಂಬಾ ಅಲಂಕಾರಯುತವಾಗಿದೆ. ಸೊಂಟದ ಸುತ್ತ ಉಡುಪು ಧರಿಸಿದ್ದು, ಉಳಿಕೆ ವಸ್ತ್ರವನ್ನು ನೆರಿಗೆಯಾಗಿ ಮುಂಭಾಗದಲ್ಲಿ ಇಳಿಬಿಟ್ಟಿದ್ದಾರೆ. ಎರಡನೇ ಹಂತದಲ್ಲಿ ವೀರನು ಧ್ಯಾನ ರೂಪದಲ್ಲಿ ಕುಳಿತಿದ್ದು, ತಲೆಯ ಸುತ್ತಲೂ ಮುಂಡಾಸು ಅದರ ಉಳಿಕೆ ತುದಿಯನ್ನು ಕೆಳಗೆ ಬಿಟ್ಟಿದ್ದಾನೆ. ಸೊಂಟದ ಸುತ್ತ ದಪ್ಪನಾದ ವಸ್ತ್ರವಿದ್ದು, ವೀರಗಚ್ಚೆಯನ್ನು ಹಾಕಿದ್ದಾನೆ. ಅಪ್ಸರೆಯರು ಚೌರಿ ಬೀಸುತ್ತಿದ್ದು, ಸೊಂಟದ ಸುತ್ತ ಎರಡು ಪಟ್ಟಿಯ ವಸ್ತ್ರವಿದ್ದು ಮುಂಗಾಲಿನವರೆಗೂ ನೆರಿಗೆ ಲಂಗವಿದೆ.

ಗಂಡಘಟ್ಟದ ಒಂದನೇ ವೀರಮಾಸ್ತಿಯಲ್ಲಿ ಶಸ್ತ್ರಧಾರಿ ಪುರುಷರಿದ್ದು, ಸೊಂಟದ ಸುತ್ತಲೂ ವಸ್ತ್ರವನ್ನು ಸುತ್ತಿದ್ದು ವೀರಗಚ್ಚೆಯ ನೆರಿಗೆ ಲಂಗದಾಕಾರದಲ್ಲಿದೆ. ಕೋಟೆ ಹೊಸಕೊಪ್ಪದ ಒಂದನೇ ಒಕ್ಕೈ ವೀರಮಾಸ್ತಿಯಲ್ಲಿ ಶಸ್ತ್ರಧಾರಿ ಪುರುಷರಿದ್ದು ಸೊಂಟದ ಸುತ್ತಲೂ ವಸ್ತ್ರವಿದ್ದು ತೊಡೆಯವರೆಗೂ ಬಿಗಿಯಾದ ಉಡುಪು ಧರಿಸಿದ್ದಾರೆ.

ಜೆ.ಸಿ.ಬಿ.ಎಂ. ಕಾಲೇಜು ಆವರಣದ ವೀರಗಲ್ಲಿನಲ್ಲಿ ಯುದ್ಧದ ಕುದುರೆಗೆ ಜೀನನ್ನು ಕಾಲಿನ ಗೊರಸಿನವರೆಗೂ ಹಾಕಿರುವುದು ವಿಶೇಷವಾಗಿದೆ. ವೀರನು ಸೊಂಟದ ಮೇಲೆ ಕೈ ಇಟ್ಟಿದ್ದು, ಸೊಂಟದ ಸುತ್ತಲೂ ಬಿಗಿಯಾದ ಉಡುಪು ಸೊಂಟದ ಕೆಳಗಿನ ವೀರಗಚ್ಚೆ ಮೊಣಕಾಲಿನವರೆಗೂ ಇದೆ. ಸಿಂಹಾದ್ರಿಯ ಒಕ್ಕೈ ವೀರಮಾಸ್ತಿಯಲ್ಲಿ ಅಪ್ಸರೆಯರು ಕಾಲಿನ ತುದಿಯವರೆಗೂ ನೆರಿಗೆಯುಳ್ಳ ಉದ್ದನೆಯ ಲಂಗ, ಇದರಲ್ಲಿ ಅಡ್ಡ ಮತ್ತು ಉದ್ದ ಪಟ್ಟಿಗಳಿವೆ.

ಹುಲ್ಸೆಯ ಒಕ್ಕೈ ವೀರಮಾಸ್ತಿಯ ಐದನೇ ಹಂತದಲ್ಲಿ ವೀರರು ಸೊಂಟದ ಸುತ್ತ ಬಿಗಿಯಾದ ವಸ್ತ್ರ ಸುತ್ತಿದ್ದು, ನೆರಿಗೆಯಾಕಾರದ ವಸ್ತ್ರ ತೊಡೆಯವರೆಗೂ ಬಿಗಿಯಾಗಿದ್ದು (ವೀರಗಚ್ಚೆ) ಮುಂಭಾಗದಲ್ಲಿ ಭರತನಾಟ್ಯ ರೂಪದಲ್ಲಿ ಬಟ್ಟೆಯನ್ನು ಇಳಿಬಿಟ್ಟಿದ್ದಾರೆ. ಮೂರನೇ ಹಂತದಲ್ಲಿ ಪುರುಷರು ಪರಸ್ಪರ ಕೈಕೈ ಹಿಡಿದು ಮಾತನಾಡುತ್ತಿದ್ದಾರೆ. ವೀರನ ಕೈಯಲ್ಲಿ ಆಯುಧ, ಮೂರು ನೆರಿಗೆಯುಳ್ಳ ಲಂಗ ಹಾಗೆಯೇ ಮಧ್ಯದಲ್ಲಿ ಗೊಂಡೆಯಾಕಾರದಲ್ಲಿ

ಇಳಿಬಿಟ್ಟಿರುವ ವಸ್ತ್ರ, ಉಳಿದ ಸಹಚರರು ಕಾಲಿನ ಪಾದದವರೆಗೂ ನೆರಿಗೆಯ ಲಂಗ ಹಾಗೂ ಸೊಂಟದ ಸುತ್ತ ಪಟ್ಟಿ ಇದೆ.

ಉಳವಳ್ಳಿಯ ಒಕ್ಕೈ ವೀರಮಾಸ್ತಿಯಲ್ಲಿ ನಗುಮುಖದಲ್ಲಿ ಬೆಂಕಿಯ ಜ್ವಾಲೆಯಲ್ಲಿ ಸ್ತ್ರೀಯು ಕುಳಿತಿದ್ದು ಮಂಡಿಯವರೆಗೂ ಮೂರು ನೆರಿಗೆಯ ಚಂದ್ರಾಕಾರದ ಲಂಗವನ್ನು ಧರಿಸಿದ್ದಾಳೆ. ಶಿರೂರು ಒಕ್ಕೈ ವೀರಮಾಸ್ತಿಯಲ್ಲಿ ಕುದುರೆಯು ಅಲಂಕೃತವಾಗಿದ್ದು, ಕೀಲುಕುದುರೆ ಮಾದರಿಯ ಮೊಣಕಾಲಿನವರೆಗೂ ವಸ್ತ್ರವಿರುವುದು ವಿಶೇಷವಾಗಿದೆ. ಮೀಗಾದ ಒಕ್ಕೈ ವೀರಮಾಸ್ತಿಯಲ್ಲಿ ಸಹಸೈನಿಕರಲ್ಲಿ ಸೊಂಟದಿಂದ ವಸ್ತ್ರ ಮುಂಗಾಲಿನವರೆಗೂ ನೆರಿಗೆಯುಳ್ಳ ಮುಂಭಾಗದಲ್ಲಿ ಗೊಂಡೆಗಳು ಇಳಿಬಿದ್ದಿವೆ. ಇಲ್ಲಿರುವ ಅಪ್ಸರೆಯರು ಸೊಂಟಕ್ಕೆ ವಡ್ಯಾಣ ಕಟ್ಟಿದ್ದಾರೆ.

ನಾರ್ವೆಯ ಆತ್ಮಬಲಿ ವಿಗ್ರಹದಲ್ಲಿ ಸೇವಕನು ಸೊಂಟದ ಸುತ್ತಲೂ ದಪ್ಪನಾದ ಪಟ್ಟಿಯನ್ನು, ತೊಡೆಯವರೆಗೂ ಬಿಗಿಯಾಗಿ ಉಡುಪು ಧರಿಸಿದ್ದಾನೆ. ಇಲ್ಲಿನ ವೀರನ ವಿಗ್ರಹದಲ್ಲಿ ಇವನು ಸೊಂಟದ ಕೆಳಕ್ಕೆ ನೆರಿಗೆಯ ಉಡುಪು ಹೊಂದಿದ್ದು ಮಧ್ಯದಲ್ಲಿ ಗೊಂಡೆಗಳು ಇಳಿಬಿದ್ದಿವೆ. ಇಲ್ಲಿನ ಒಕ್ಕೈ ವೀರಮಾಸ್ತಿಯಲ್ಲಿ ಸತಿಯು ಅಟ್ಟಣಿಕೆಯ ಮೇಲೆ ಕೈ ಮುಗಿದು ಕುಳಿತಿದ್ದು ನೆರಿಗೆಯ ಲಂಗದಿಂದ ತನ್ನ ಮಡಚಿರುವ ಕಾಲನ್ನು ಮುಚ್ಚಿಕೊಂಡಿದ್ದಾಳೆ.

ಹಾಲಮುತ್ತೂರಿನ ಒಕ್ಕೈ ವೀರಮಾಸ್ತಿಯಲ್ಲಿ ಸತಿಯ ಸೊಂಟದ ಸುತ್ತಲೂ ಪಟ್ಟಿಯಿದ್ದು, ಪದ್ಮಾಸನದಲ್ಲಿ ಕುಳಿತ ಈಕೆಯ ಕಾಲನ್ನು ಲಂಗದಿಂದ ಮುಚ್ಚಲಾಗಿದ್ದು, ಮುಂಭಾಗದ ಐದು ನೆರಿಗೆಯಿದ್ದು ತುದಿಯಲ್ಲಿ ಗೊಂಡೆಯನ್ನು ಇಳಿಬಿಡಲಾಗಿದೆ. ವೀರನು ನಗುಮುಖದಲ್ಲಿ ಕುಳಿತಿದ್ದು ಸೊಂಟದಿಂದ ಬಂದ ವಸ್ತ್ರ ತೊಡೆಯವರೆಗೂ ಇದ್ದು, ಮಧ್ಯಭಾಗದಿಂದ ನೆರಿಗೆ ವಸ್ತ್ರ ಇಳಿಬಿಟ್ಟಿದ್ದಾನೆ. ಇಲ್ಲಿನ ವೀರಮಾಸ್ತಿಯಲ್ಲಿ ಪುರುಷರು ಯುದ್ಧನಿರತರಾಗಿದ್ದು ಸೊಂಟದ ಸುತ್ತಲೂ ದಪ್ಪನಾದ ವಸ್ತ್ರವನ್ನು ಸುತ್ತಿದ್ದು ತೊಡೆಯವರೆಗೂ ಬಿಗಿಯಾದ ಉಡುಪು ಇದೆ.

ಬಂಡಿಗಡಿಯ ಒಂದನೇ ಒಕ್ಕೈ ವೀರಮಾಸ್ತಿಯಲ್ಲಿ ನೃತ್ಯ ಮಾಡುತ್ತಿರುವ ಸ್ತ್ರೀಯರಿದ್ದು ನೆರಿಗೆಯುಳ್ಳ ವಸ್ತ್ರವನ್ನು ಹೊಂದಿದ್ದು, ಸತಿಯು ಮಡಚಿರುವ ಕಾಲುಗಳನ್ನು ನೆರಿಗೆ ಲಂಗದಿಂದ ಮುಚ್ಚಿದ್ದಾಳೆ. ಎರಡನೇ ಒಕ್ಕೈ ವೀರಮಾಸ್ತಿಯಲ್ಲಿ ಪುರುಷರು ವೀರಗಚ್ಚೆಯನ್ನು ತೊಟ್ಟಿದ್ದಾರೆ. ಪಕ್ಕದಲ್ಲಿ ಕುಳಿತಿರುವ ಅಪ್ಸರೆಯರು ನೆರಿಗೆಯ ಉಡುಪು ಹೊಂದಿದ್ದಾರೆ.

ಕೊಗ್ರೆಯ ಒಕ್ಕೈ ವೀರಮಾಸ್ತಿಯಲ್ಲಿ ಸತಿ ಮತ್ತು ವೀರ ಸರ್ವಾಲಂಕಾರಭೂಷಿತರಾಗಿದ್ದು ಸತಿಯು ನೆರಿಗೆ ಲಂಗವನ್ನು ತೊಟ್ಟಿದ್ದು ಮುಂಭಾಗದಲ್ಲಿ ಮೂರು ಗೊಂಡೆಗಳಿವೆ. ವೀರನು ವೀರಗಚ್ಚೆಯನ್ನು ಧರಿಸಿದ್ದು ಸೊಂಟದ ಸುತ್ತಲೂ ಪಟ್ಟಿಯಿದೆ. ಇದರ ಮುಂಭಾಗದಲ್ಲಿ ಮೂರು ಗೊಂಡೆಯಾಕಾರದ ಹಾರಗಳನ್ನು ಇಳಿಬಿಡಲಾಗಿದೆ.

ಸೂರ್ಯ ದೇವಸ್ಥಾನದ ಆತ್ಮಾಹುತಿ ವೀರಗಲ್ಲಿನಲ್ಲಿ ವೀರನು ಸೊಂಟಕ್ಕೆ ಕಚ್ಚೆಯಂತೆ ಧರಿಸಿರುವ ಉಡುಪು ಇದೆ. ಕೊಪ್ಪ ಪಟ್ಟಣದ ಐದನೇ ನಿಷಧಿಕಲ್ಲಿನಲ್ಲಿ ವೀರ ಮತ್ತು ಸತಿ

ಅಗ್ನಿಕುಂಡದಲ್ಲಿ ಪದ್ಮಾಸನದಲ್ಲಿ ಕುಳಿತಿದ್ದು, ವೀರನು ಮುಂಗಾಲನ್ನು ವಸ್ತ್ರದಿಂದ ಮುಚ್ಚಿಕೊಂಡಿದ್ದಾನೆ. ಸತಿಯು ನೀಳವಾದ ಸೊಂಟವನ್ನು ಹೊಂದಿದ್ದು ನೆರಿಗೆ ಲಂಗ ಮತ್ತು ಅದರ ಮುಂಭಾಗ ಗೊಂಡೆಯನ್ನು ಇಳಿಬಿಟ್ಟಿದ್ದಾಳೆ.

ಚಿಕ್ಕನಕೊಡಿಗೆ ಮಾಸ್ತಿಕಲ್ಲಿನಲ್ಲಿ ಸತಿಯು ಸೊಂಟದ ಸುತ್ತ ಮೂರು ಸುತ್ತಿನ ಪಟ್ಟಿ ಧರಿಸಿದ್ದು, ಉದ್ದನೆಯ ನೆರಿಗೆ ಲಂಗ ಪಾದದವರೆಗೂ ಇದೆ. ಮಂಡಗದ್ದೆಯ ವೀರಮಾಸ್ತಿಯಲ್ಲಿ ಸತಿಯ ನೀಳ ಸೊಂಟದ ಸುತ್ತ ಪಟ್ಟಿ ಇದ್ದು, ಲಂಗವನ್ನು ಮೊಣಕಾಲಿನವರೆಗೂ ಇಳಿಬಿಟ್ಟಿದ್ದು ನೆರಿಗೆಯನ್ನು ಹೊಂದಿದೆ.

ಎರಡನೇ ಮಾಸ್ತಿಕಲ್ಲಿನಲ್ಲಿ ವೀರನು ಸೊಂಟದ ಸುತ್ತ ಬಟ್ಟೆ ಸುತ್ತಿದ್ದು, ನೆರಿಗೆಯುಳ್ಳ ಉಡುಪು (ವೀರಗಚ್ಚೆ) ಮಂಡಿಯವರೆಗೂ ಇದೆ. ಮಧ್ಯದಲ್ಲಿ ಉದ್ದವಾದ ಗೊಂಡೆಯು ಕೆಳಭಾಗದವರೆಗೂ ಇದೆ. ಸತಿಯು ನೀಳವಾದ ಸೊಂಟದಲ್ಲಿ ನೆರಿಗೆಯ ಲಂಗವು ಮೊಣಕಾಲಿನ ವರೆಗೂ ಇದೆ. ಮಧ್ಯದಲ್ಲಿ ಗೊಂಡೆಯ ಹಾರ ಕಾಲಿನ ಪಾದದ ಸಮೀಪ ಬಿಚ್ಚಿಕೊಂಡಿದೆ. ಇಲ್ಲಿನ ಮಾಸ್ತಿಕಲ್ಲಿನಲ್ಲಿ ಸತಿಯು ಪದ್ಮಾಸನದಲ್ಲಿ ಕುಳಿತಿದ್ದು ನೆರಿಗೆಯುಳ್ಳ ಲಂಗದಿಂದ ತನ್ನ ಕಾಲುಗಳನ್ನು ಮುಚ್ಚಿಕೊಂಡಿದ್ದಾಳೆ.

ಹೆದ್ದೂರಿನ ಒಂದನೇ ವೀರಗಲ್ಲಿನಲ್ಲಿ ವೀರ ಮತ್ತು ಪುರುಷರು ತಲೆಯ ಸುತ್ತಲೂ ಮುಂಡಾಸು ಧರಿಸಿದ್ದು, ಅದರ ಉಳಿಕೆಯ ತುದಿಯ ವಸ್ತ್ರವನ್ನು ಹೊರಗೆ ಬಿಟ್ಟಿದ್ದಾರೆ. ಸೊಂಟದ ಸುತ್ತಲೂ ಮೂರು ಪಟ್ಟಿಯ ವಸ್ತ್ರವಿದ್ದು, ನೆರಿಗೆಯ ಪಂಚೆ ಅಥವ ವೀರಗಚ್ಚೆಯಲ್ಲಿ ಅಡ್ಡ ನೆರಿಗೆಯಿದ್ದು ಮಧ್ಯದಿಂದ ಇಳಿದಿರುವ ಗೊಂಡೆಯು ಪಾದದವರೆಗೂ ಇದೆ.

ಎರಡನೇ ಹಂತದಲ್ಲಿ ವೀರನ ಎಡಭಾಗದಲ್ಲಿ ಅಲಂಕೃತಳಾದ ಅಪ್ಸರೆ ಸೊಂಟಕ್ಕೆ ಪಟ್ಟಿ ಧರಿಸಿದ್ದು, ಉದ್ದನೆಯ ಅಡ್ಡನೆರಿಗೆಯ ಲಂಗ ಪಾದದವರೆಗೂ ಇದ್ದು, ಮಧ್ಯದಲ್ಲಿ ಉದ್ದ ನೆರಿಗೆಯ ಮೂರು ಪಟ್ಟಿ ಇವೆ. ಇವಳ ಪಕ್ಕದಲ್ಲಿ ವೀರನು ಕೈ ಮುಗಿದು ಪದ್ಮಾಸನದಲ್ಲಿ ಕುಳಿತಿದ್ದಾನೆ. ಸೊಂಟದಲ್ಲಿ ಪಟ್ಟಿ ನೆರಿಗೆ ಲಂಗದಿಂದ ಕಾಲನ್ನು ಮುಚ್ಚಿಕೊಂಡಿದ್ದಾಳೆ.

ಒಂದನೇ ಹಂತದಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಯತಿಯು ಸೊಂಟದ ಸುತ್ತ ವಸ್ತ್ರ, ಮೊಣಕಾಲಿನವರೆಗೂ ಅಡ್ಡನೆರಿಗೆಯ ಪಂಚೆ ಧರಿಸಿದ್ದಾನೆ. ಇಲ್ಲಿನ ವೀರಗಲ್ಲಿನ ಎರಡನೇ ಹಂತದಲ್ಲಿ ಐದು ಜನ ಪುರುಷರು ಪರಸ್ಪರ ಕೈ ಕೈ ಹಿಡಿದುಕೊಂಡು ನೃತ್ಯ ಮಾಡುತ್ತಿದ್ದಾರೆ. ಸೊಂಟದಿಂದ ಮೊಣಕಾಲಿನವರೆಗೂ ಪಂಚೆಯನ್ನು ತೊಟ್ಟಿದ್ದು, ಮಧ್ಯದಲ್ಲಿ ಉದ್ದನೆಯ ಗೊಂಡೆಯನ್ನು ಕೆಳಭಾಗದವರೆಗೂ ಇಳಿಬಿಟ್ಟಿದ್ದಾರೆ.

ಬೆಜ್ಜವಳ್ಳಿಯ ವೀರಮಾಸ್ತಿಯಲ್ಲಿ ವೀರ ಮತ್ತು ಪುರುಷರು ಸೊಂಟದ ಸುತ್ತ ಎರಡು ಸುತ್ತಿನ ಪಟ್ಟಿ ಧರಿಸಿದ್ದು ಅಲ್ಲಿಂದ ತೊಡೆಯವರೆಗೂ ನೆರಿಗೆಯ ಉಡುಪು ಇದ್ದು ಮಧ್ಯದಲ್ಲಿ ಗೊಂಡೆಯ ಇಳಿ ಇದೆ. ಸತಿಯ ಉಡುಗೆ ಅಲಂಕಾರವಾಗಿದ್ದು, ನೀಳವಾದ ಸೊಂಟದಿಂದ

ಇಳಿಬಿಟ್ಟಿರುವ ಅಡ್ಡ ನೆರಿಗೆ ಲಂಗ ಎರಡು ಹಂತಗಳಲ್ಲಿದೆ. ತೊಡೆಯವರೆಗೂ ಅಡ್ಡನೆರಿಗೆಯ ಅಲಂಕೃತ ಲಂಗವಿದ್ದು, ಅದರ ಕೆಳಭಾಗದಿಂದ ಪಾದದವರೆಗೂ ಉದ್ದ ನೆರಿಗೆಯ ಲಂಗವಿದ್ದು ಮಧ್ಯದಲ್ಲಿ ಪದಕವಿದೆ.

ಹುಲಿಸರದ ವೀರಗಲ್ಲಿನಲ್ಲಿ ನೃತ್ಯ ರೂಪದಲ್ಲಿರುವ ಅಪ್ಸರೆಯರು ಸೊಂಟದ ಸುತ್ತ ಪಟ್ಟಿ ಕಟ್ಟಿದ್ದು, ಗಂಡುಗಚ್ಚೆಯ ಗೊಂಡೆ ನೆಲದವರೆಗೂ ಇದೆ. ವೀರನು ಸೊಂಟದ ಸುತ್ತ ಪಟ್ಟಿ ಧರಿಸಿದ್ದು, ವೀರಗಚ್ಚೆ ಹಾಕಿದ್ದಾನೆ.

ಕಬಸೆ ವೀರಗಲ್ಲಿನಲ್ಲಿ ಯುದ್ಧನಿರತ ಪುರುಷರು ಸೊಂಟದ ಸುತ್ತ ಎರಡು ಸುತ್ತಿನ ಬಟ್ಟೆಯನ್ನು ಸುತ್ತಿದ್ದು, ಉಳಿಕೆ ಬಟ್ಟೆಯನ್ನು ಹೊರಗೆ ಬಿಟ್ಟಿರುವರು; ಮೊಣಕಾಲಿನವರೆಗೂ ವೀರಗಚ್ಚೆಯಿದ್ದು, ಅದರ ತುದಿಯ ಗೊಂಡೆ ನೆಲಕ್ಕೆ ತಾಗಿದೆ.

ಹುಲಿಸರದ ಎಂಟು ಅಡಿ ಎತ್ತರದ ಆರು ಹಂತಗಳಿಂದ ಕೂಡಿದ ಲಿಪಿ ಸಹಿತವಾದ ವೀರಗಲ್ಲಿನ ನಾಲ್ಕನೆಯ ಹಂತದಲ್ಲಿ ವೀರನನ್ನು ಅಪ್ಸರೆಯರು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಸ್ವರ್ಗಕ್ಕೆ ಹೊತ್ತೊಯ್ಯುತ್ತಿದ್ದಾರೆ. ಮೊಣಕಾಲಿನವರೆಗೂ ಅಡ್ಡನೆರಿಗೆಯ ಲಂಗವಿದ್ದು, ಮಧ್ಯದಲ್ಲಿ ಗೊಂಡೆಯಿದ್ದು ಅಲಂಕೃತವಾಗಿದೆ. ಮೂರನೆಯ ಹಂತದಲ್ಲಿ ಪುರುಷರು ಸೊಂಟದಿಂದ ಮೊಣಕಾಲಿನವರೆಗೂ ಅಡ್ಡ ಪಂಚೆಯನ್ನು ಹೊಂದಿದ್ದು, ಅದರ ಮೇಲ್ಭಾಗದಲ್ಲಿ ಸಾಲಾಗಿರುವ ಗೆರೆಗಳಿವೆ.

ಒಟ್ಟಾರೆಯಾಗಿ ಹೇಳುವುದಾದರೆ ಈ ಪ್ರದೇಶದಲ್ಲಿ ಸಂಶೋಧನಾ ಕಾರ್ಯದಲ್ಲಿ ತೊಡಗಿದಾಗ ೨೨ ವೀರಗಲ್ಲು, ೨೪ ಮಾಸ್ತಿಕಲ್ಲು, ೫೫ ವೀರಮಾಸ್ತಿಗಲ್ಲು, ೩ ನಿಷಿಧಿಕಲ್ಲುಗಳು, ೨ ತುರುಗೋಳ್ ಪೆಣ್ಬುಯಲ್, ೨ ಹುಲಿಬೇಟೆ ವೀರಗಲ್ಲು ಪ್ರಾಪ್ತವಾಗಿದ್ದು ಸಾಕಷ್ಟು ಸ್ಥಳಗಳನ್ನು ಸಂದರ್ಶಿಸಿ ಅಧ್ಯಯನ ವ್ಯಾಪ್ತಿಗೆ ಒಳಪಡಿಸಲಾಗಿದೆ. ಇನ್ನು ಕೆಲವೊಂದು ಮಾಸ್ತಿ/ವೀರಗಲ್ಲುಗಳು ತ್ರುಟಿತ ಮತ್ತು ಅಸ್ಪಷ್ಟವಾಗಿದ್ದು ಅಧ್ಯಯನದಲ್ಲಿ ನಿರ್ಲಕ್ಷಿಸಲಾಗಿದೆ. ಇವುಗಳ ತಲಸ್ಪರ್ಶಿ ಅಧ್ಯಯನದಿಂದ ಅಂದಿನ ಕಾಲದ ಅಲಂಕಾರ ಆಭರಣ, ಉಡುಗೆ–ತೊಡುಗೆಗಳ ವಾಸ್ತವಿಕ ಚಿತ್ರಣವನ್ನು ಅರಿಯುವುದರ ಮೂಲಕ ನೈಜ ಇತಿಹಾಸವನ್ನು ಕಟ್ಟಿಕೊಡಬಹುದು.

ಈ ಮೇಲಿನ ವೀರಮಾಸ್ತಿ ಕಲ್ಲುಗಳಲ್ಲಿನ ಸ್ತ್ರೀ–ಪುರಷರ ಶಿಲ್ಪಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇವರಿಬ್ಬರೂ ಸಾಧಾರಣವಾಗಿ ಧರಿಸಿರುವ ವಸ್ತ್ರಗಳನ್ನು ತಿಳಿಯಬಹುದು. ಪುರುಷರು ತಲೆಗೆ ಮುಂಡಾಸು ಧರಿಸುವುದು ಸಾಮಾನ್ಯವಾದ ವಾಡಿಕೆಯಾಗಿದ್ದಿತು. ಸೊಂಟದ ಸುತ್ತ ಎರಡು ಅಥವ ಮೂರು ಪಟ್ಟಿಕೆಯುಳ್ಳ ಉಡುಪನ್ನು ಬಿಗಿದುಕೊಳ್ಳುತ್ತಿದ್ದರು. ವೀರಗಚ್ಚೆಯು ನೆರಿಗೆಯುಳ್ಳದಾಗಿದ್ದು ಅದರ ತುದಿಯಲ್ಲಿ ಗೊಂಡೆಗಳು ಇಳಿಬಿದ್ದಿರುವುದನ್ನು ಗಮನಿಸಿದರೆ ಬಹುಶಃ ಇಂದಿನ ಯಕ್ಷಗಾನದ ಮಾದರಿಯ ಉಡುಪು ಅವರ ಉಡುಗೆಯಾಗಿದ್ದಿತು.

ಇನ್ನು ಶಿವಲಿಂಗವನ್ನು ಪೂಜಿಸುತ್ತಿರುವ ಯತಿಯ ದೇಹದ ಮೇಲ್ಭಾಗ ಬೆತ್ತಲೆಯಾಗಿದ್ದು ಸೊಂಟದ ಸುತ್ತ ಅಡ್ಡ ಪಂಚೆ ಹಾಗೂ ಪಾದದವರೆಗೂ ಉದ್ದ ಪಂಚೆಯನ್ನು ಧರಿಸಿರುವುದನ್ನು

ಗಮನಿಸಿದಾಗ ಇದು ಎಲ್ಲಾ ಯತಿಗಳ ಸಾಮಾನ್ಯವಾದ ಉಡುಪು ಆಗಿದ್ದಿತು ಎನ್ನುವುದು ಸ್ಪಷ್ಟವಾಗುತ್ತದೆ.

ಅಂದಿನ ಕಾಲದ ಧಾರ್ಮಿಕ ಇತಿಹಾಸವನ್ನು ತಿರುಗಿ ನೋಡಿದಾಗ ಶೈವ, ವೈಷ್ಣವ, ಜೈನ ಧರ್ಮಗಳು ಪ್ರಬಲವಾಗಿದ್ದು, ಜನಸಾಮಾನ್ಯರ ಪ್ರೀತಿ ಆದರಗಳಿಗೆ ಪಾತ್ರವಾಗಿದ್ದವು ಎಂಬುದನ್ನು ಮನಗಾಣಬಹುದು. ಮಧ್ಯಮಲೆನಾಡಿನಲ್ಲಿ ಜೈನ ಧರ್ಮದ ತರುವಾಯ ಶೈವ ಧರ್ಮ ಪ್ರಾಧಾನ್ಯತೆಯನ್ನು ಪಡೆದುಕೊಂಡಿದ್ದರಿಂದ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ಇಂದಿಗೂ ಶೈವ ದೇವಾಲಯಗಳಲ್ಲಿಯೇ ಕಂಡುಬರುತ್ತವೆ. ವೈಷ್ಣವ ದೇವಾಲಯಗಳು ಅಪರೂಪವಾಗಿ ರುವುದರಿಂದ ಇಲ್ಲಿ ಅವುಗಳು ಕಂಡುಬರುವುದು ವಿರಳವೇ ಎನ್ನಬಹುದು. ಬೇರೆ ಧರ್ಮಗಳಿಗೆ ಹೋಲಿಸಿದರೆ ವೀರ/ಮಾಸ್ತಿಗಲ್ಲುಗಳಲ್ಲಿ ಬಹುಪಾಲು ಶೈವ ಧರ್ಮ ವಿವರಗಳೇ ಹೆಚ್ಚಾಗಿ ದೊರೆಯುವುದರಿಂದ ಶೈವ ಧರ್ಮವು ಮಧ್ಯಯುಗದಲ್ಲಿ ಪ್ರಬಲವಾಗಿತ್ತೆಂದು ತಿಳಿದುಬರುತ್ತದೆ. ವೀರನನ್ನು ಶಿವನ ಅಂಶವೆಂದೂ, ಸತಿಯನ್ನು ಪಾರ್ವತಿಯ ಅಂಶವೆಂದೂ ನಂಬಿಕೆ ಬೆಳೆದಿದ್ದರಿಂದ, ವೀರ/ಸತಿ ಮಡಿದ ಜಾಗದಲ್ಲಿ ಸ್ಥಾಪಿಸಿದ ಕಲ್ಲುಗಳು ನಂತರದ ಕಾಲಘಟ್ಟದಲ್ಲಿ ಶಿವ ದೇವಾಲಯಗಳಿಗೆ ಸ್ಥಳಾಂತರಿಸಿದ ಸಾಧ್ಯತೆಗಳೂ ಇವೆ. ವೀರ ಮತ್ತು ಸತಿಯ ಬಗೆಗಿನ ಭಯ ಭಕ್ತಿಯೇ ಇದಕ್ಕೆ ಕಾರಣವಾಗಿರಬಹುದು.

ಮಧ್ಯಮಲೆನಾಡಿನ ಪ್ರದೇಶದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಇವುಗಳು ದೊರಕಲು ಕಾರಣವೇನು ಎಂಬುದರ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟಸಾಧ್ಯ. ಬಯಲುನಾಡು ಪ್ರದೇಶಕ್ಕೆ ಹೋಲಿಸಿದರೆ ಮಲೆನಾಡಿನಲ್ಲಿ ಏಕೆ ಇಷ್ಟೊಂದು ಪ್ರಮಾಣದಲ್ಲಿ ಇವುಗಳು ಉಳಿದಿರಲು ಬಹುಶಃ ಇಲ್ಲಿನ ತಂಪು ವಾತಾವರಣ ಕಾರಣ ಎನ್ನಬಹುದು.

•••

ಅಧ್ಯಾಯ : ಏಳು

ಸಮಾರೋಪ

---

* ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳು

ಅಧ್ಯಾಯ : ಏಳು

ಸಮಾರೋಪ

ಮಧ್ಯಮಲೆನಾಡು ಸಹ್ಯಾದ್ರಿ ಪರ್ವತ ಶ್ರೇಣಿಯ ನದಿ, ತೊರೆ, ಗಿರಿಶೃಂಗಗಳಿಂದ ಆವೃತವಾಗಿದ್ದು ಋಷಿಶೃಂಗರ ತಪೋಭೂಮಿ, ಯಾಗಭೂಮಿ, ಕರ್ಮಭೂಮಿಯಾಗಿದ್ದು ಸರಿ ಸುಮಾರು ಏಳು ಮತ್ತು ಎಂಟನೆಯ ಶತಮಾನಗಳಿಂದ ನಿರಂತರವಾಗಿ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಚಟುವಟಿಕೆಗಳ ಪ್ರಧಾನ ಕೇಂದ್ರವಾಗಿ ಬೆಳೆದುಬಂದು ತನ್ನದೇ ಆದ ವೈವಿಧ್ಯತೆ ಹಾಗೂ ವೈಶಿಷ್ಟ್ಯತೆಯನ್ನು ಮೇಳೈಸಿಕೊಂಡಿದೆ.

ಸಾಮಾಜಿಕ ಸ್ಥಿತಿಸಂಚಲನಗಳನ್ನು ಅರಿಯುವುದೇ ಅಧ್ಯಯನದ ಮೂಲ ಉದ್ದೇಶವಾಗಿದ್ದು, ಇಂತಹ ತೀವ್ರ ರಾಜಕೀಯ, ಧಾರ್ಮಿಕ ಬದಲಾವಣೆಗೆ ಒಳಗಾಗಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ ಮಲೆನಾಡು ಹಾಗೂ ಇದರ ಆಡಳಿತ ವಿಭಾಗಗಳನ್ನು ಅಧ್ಯಯನಕ್ಕೆ ಆರಿಸಿಕೊಳ್ಳಲಾಯಿತು. ವಿಜಯನಗರದ ಸಾಮಂತರ ರಾಜಧಾನಿಯಾದ ಆರಗ ರಾಜ್ಯ, ಸಾಂತರ ರಾಜ್ಯ, ಕಳಸ ಕಾರ್ಕಳ ರಾಜ್ಯ, ಆಳುಪರ ರಾಜ್ಯ, ಕೆಳದಿ ರಾಜ್ಯಗಳು ಹಾಗೂ ಇನ್ನಿತರ ಅರಸರುಗಳ ಸಾಂಸ್ಕೃತಿಕ, ಚಾರಿತ್ರಿಕ ಮಹತ್ವ ಮತ್ತು ಶಾಸನ ಸಂಪತ್ತನ್ನು ತಿಳಿಯುವ ಉದ್ದೇಶದಿಂದ ಮಧ್ಯಮಲೆನಾಡಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳಿಗೆ ಪ್ರಾಮುಖ್ಯತೆಯನ್ನು ಪ್ರಸ್ತುತ ಅಧ್ಯಯನಕ್ಕೆ ನೀಡಲಾಗಿದೆ. ವಿವಿಧ ಕಾಲಘಟ್ಟದಲ್ಲಿ ರಾಜಕೀಯ ವ್ಯವಸ್ಥೆ, ಅವು ಎತ್ತಿ ಹಿಡಿದ ಮೌಲ್ಯಗಳು, ಧರ್ಮಪ್ರಾಮುಖ್ಯತೆ ಮತ್ತು ಧರ್ಮಾನುಸರಣೆ ನೀತಿಗಳು, ಆಚಾರ - ವಿಚಾರಗಳು, ಆರ್ಥಿಕ ವ್ಯವಸ್ಥೆ, ಮಠ - ದೇವಸ್ಥಾನಗಳ ಪಾತ್ರ, ಶಾಸನ, ಸಾಹಿತ್ಯಿಕ ಅಂಶಗಳು, ಆತ್ಮಬಲಿ, ವೀರಗಲ್ಲು ಮಾಸ್ತಿಗಳಲ್ಲಿನ ಸ್ತ್ರೀಪುರುಷರ ಅಲಂಕಾರಗಳು ಹೀಗೆ ಹತ್ತು ಹಲವು ವಿಷಯಗಳ ಸೂಕ್ಷ್ಮ ಸ್ತರದ ಅಧ್ಯಯನ ಕೈಗೊಂಡುದರ ಸಣ್ಣ ಪ್ರಯತ್ನವೇ ಈ ಮಹಾಪ್ರಬಂಧ.

ಸಹಜವಾಗಿಯೇ ಇಲ್ಲಿನ ಅಧ್ಯಯನದಲ್ಲಿ ಆ ಕಾಲದ ಸಾಮುದಾಯಿಕ ಬದುಕು ನಡೆದುಬಂದ ರೀತಿಯನ್ನು ಕಟ್ಟಿಕೊಡುವ ಕಡೆ ಗಮನಹರಿಸಲಾಗಿದೆ. ಎಲ್ಲಾ ವರ್ಗದ ಸಮಗ್ರ ಜೀವನ ರೂಪಿಸಿಕೊಡುವ ಆಶಯ ಇದರ ಹಿಂದಿದೆ. ಈ ಹಿನ್ನೆಲೆಯಲ್ಲಿ ಇರುವ ವರ್ಗಗಳಲ್ಲಿನ ಸಾಂಸ್ಕೃತಿಕ ಎಳೆಗಳನ್ನು ಗುರುತಿಸುವುದು, ರೂಪಿಸುವುದು ಇದರ ಹಿಂದಿನ ಆಶಯವಾಗಿದೆ.

ಈ ಉದ್ದೇಶಕ್ಕೆ ಆಶ್ರಯಿಸಿರುವ ಮೂಲ ಪ್ರಮುಖ ಆಕರಗಳಾದ ಶಾಸನಗಳು, ರಾಜಪ್ರಭುತ್ವ ವರ್ಗದವರಾಗಿದ್ದಿರಬಹುದಾದ ದಾಖಲೆಗಳು, ಕಡತಗಳು ಹಾಗೆಯೇ ವೀರಗಲ್ಲು, ಮಾಸ್ತಿಗಲ್ಲು, ಆತ್ಮಬಲಿ ಮುಂತಾದವುಗಳನ್ನು ಒಂದು ಮಿತಿಯ ಒಳಗೆ ಸಂಶೋಧನಾ ಚೌಕಟ್ಟಿಗೆ ತರಲು ಪ್ರಯತ್ನಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧವನ್ನು ಒಟ್ಟು ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಆಕರಗಳಾಗಿ ಶಾಸನಗಳು ಅಧ್ಯಯನದ ಉದ್ದೇಶ, ಭೌಗೋಳಿಕ ವ್ಯಾಪ್ತಿ ಹಾಗೂ ಈವರೆಗಿನ ಅಧ್ಯಯನಗಳ ಕುರಿತಂತೆ ಕಿರುಪರಿಚಯ ಮಾಡಲಾಗಿದೆ.

ಸಮಸ್ತ ಶಾಸನಗಳ ಸಹಾಯದಿಂದ ಎರಡನೇ ಅಧ್ಯಾಯವನ್ನು ರಾಜಕೀಯ ಮತ್ತು ಆಡಳಿತ ಕ್ಷೇತ್ರವಾಗಿ ವಿಂಗಡಿಸಿ ಆರಂಭಕಾಲದಿಂದ ಈ ಪ್ರದೇಶಗಳನ್ನಾಳಿದ ರಾಜರ ಮತ್ತು ರಾಜಮನೆತನದ ರಾಜಕೀಯ ಚಟುವಟಿಕೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಈ ಪ್ರದೇಶಗಳನ್ನಾಳಿದ ಎಲ್ಲಾ ರಾಜರು ವಿವಿಧ ಕಾಲಘಟ್ಟಗಳಲ್ಲಿ ರಾಜಮನೆತನದ ಸಾಮಂತ ಅರಸರಾಗಿ ಆಳ್ವಿಕೆ ನಡೆಸಿದ್ದು ಸ್ವತಂತ್ರರಾಗದೇ ಉಳಿದಿದ್ದನ್ನು ಗಮನಿಸಬಹುದು. ಸಾನ್ತರರು, ಸೇನರು, ಕಳಸ–ಕಾರ್ಕಳ ಪ್ರಭುಗಳು, ದಕ್ಷಿಣ ಕನ್ನಡದ ಆಳುಪರು, ಆರಗದ ಮಾಂಡಳಿಕರು, ದಾನಿವಾಸ ಒಡೆಯರು, ಕೆಳದಿ ನಾಯಕರು, ಮೈಸೂರು ಒಡೆಯರು ಹೀಗೆ ಕಾಲಾನುಕ್ರಮವಾಗಿ ಆಳಿದ ಅರಸು ಮನೆತನಗಳ ರಾಜಕೀಯ ಪ್ರಭಾವವನ್ನು ಈ ಅಧ್ಯಯನವು ಪ್ರತಿಬಿಂಬಿಸುತ್ತದೆ. ಈ ಪ್ರದೇಶದ ಶಾಸನಗಳಲ್ಲಿ ಆರಗದ ಒಡೆಯರು ಹಾಗೂ ಕೆಳದಿ ಅರಸರ ಶಾಸನಗಳು ಹೆಚ್ಚಿದ್ದು ರಾಜಕೀಯ ಸಾಂಸ್ಕೃತಿಕ ಕ್ಷೇತ್ರದಲ್ಲಿ ಚಟುವಟಿಕೆಯಿಂದಿದ್ದುದೇ ಈ ಶಾಸನಗಳಲ್ಲಿ ಕಂಡುಬರುವ ಅಂಶವಾಗಿದೆ. ಹೊಂಬುಜವನ್ನು ರಾಜಧಾನಿಯನ್ನಾಗಿರಿಸಿ ೮ನೇ ಶತಮಾನದಿಂದ ಆಳ್ವಿಕೆ ನಡೆಸಿದ ಸಾನ್ತರರು, ಚಾಲುಕ್ಯರು, ರಾಷ್ಟ್ರಕೂಟರು, ಆಳುಪರು ಹೊಯ್ಸಳರ ಸಾಮಂತರಾಗಿದ್ದು, ಪೊಂಬುಚಪುರವರದೀಶ್ವರರು, ಮಹಾಮಂಡಳೇಶ್ವರರು ಎಂಬುದಾಗಿ ಶಾಸನಗಳಲ್ಲಿ ಕರೆದು ಕೊಂಡಿದ್ದಾರೆ. ಭುಜಬಲಾಸಾನ್ತರ, ನನ್ನಿಸಾನ್ತರ, ವಿಕ್ರಮಸಾನ್ತರ, ತ್ರಿಭುವನಮಲ್ಲ ವೀರಸಾನ್ತರ ದೇವ ಈ ಭಾಗದಲ್ಲಿ ಆಳ್ವಿಕೆ ಮಾಡಿದ್ದರ ಮಾಹಿತಿ, ಸೇನರು ಕೊಪ್ಪದ ಕೆಲವು ಪ್ರದೇಶಗಳನ್ನು ಆಳ್ವಿಕೆಗೆ ಒಳಪಡಿಸಿ ಆಡಳಿತ ನಡೆಸಿದ್ದು, ಕಳಸ-ಕಾರ್ಕಳದ ಭೈರರಸ ಒಡೆಯರು ಈ ವಂಶದ ಮಹಾರಾಣಿಯರಾದ ಜಾಗಲದೇವಿ, ಕಾಳಲಮಹದೇವಿಯರು ಹಾಗೂ ಇನ್ನಿತರ ಅರಸರ ಸಾಧನೆ, ಕಳಸನಾಥೇಶ್ವರನಿಗೆ ದಾನ ನೀಡಿದ ವಿವರಣೆಯು ಈ ಅಧ್ಯಯನದಲ್ಲಿ ಒಳಗೊಂಡಿದೆ. ದಕ್ಷಿಣ ಕನ್ನಡದ ಆಳುಪರು ತುಳುನಾಡಾಧಿಪತಿಗಳಾಗಿದ್ದು ಆಳ್ವರಸ, ಚಿತ್ರವಾಹನ, ಬಂಕದೇವ, ಅಳುಪೇಂದ್ರರು ಇನ್ನು ಮುಂತಾದವರ ಆಳ್ವಿಕೆಯ ವಿವರಣೆ, ವಿಜಯನಗರದ ಸಾಮಂತರುಗಳಾಗಿ ಆರಗದಲ್ಲಿ ಆಳ್ವಿಕೆ ನಡೆಸಿದ ಆರಗ ಸಾಮಂತರು ಪ್ರಬಲ ರಾಜವಂಶದವರಾಗಿ ಆಳ್ವಿಕೆ ನಡೆಸಿದುದನ್ನು ಕಾಣಬಹುದು.

ದಾನಿವಾಸ ಒಡೆಯರು, ಕೆಳದಿ ನಾಯಕರು ಹಾಗೂ ಮೈಸೂರು ಒಡೆಯರುಗಳ ರಾಜಕೀಯ ಪ್ರಬುದ್ಧತೆಯನ್ನು ಈ ಅಧ್ಯಯನದಲ್ಲಿ ನಿರೂಪಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ರಾಜವಂಶಗಳ ಆಡಳಿತ ವಿಭಾಗಗಳಾದ ಸಾಂತಳಿಕೆ ಸಾವಿರ, ಕೊಡನಾಡು, ರಾವುನಾಡು ನಿಡುಪಾಲ ನಾಡು, ಹೊಂಬುಚನಾಡು ಇನ್ನೂ ಮುಂತಾದ ಆಡಳಿತ ವಿಭಾಗಗಳು ಹಾಗೂ ಸೀಮೆಗಳು ಅಗ್ರಹಾರದಲ್ಲಿನ ಪುರೋಹಿತಶಾಹಿಯ ಪಾರಮ್ಯತೆ, ಆಡಳಿತ ವಿಭಾಗದ ಮುಖ್ಯಸ್ಥರಾದ ಗಾವುಂಡರ ಕಾರ್ಯವೈಖರಿ, ಶಾಸನಕವಿಗಳಾಗಿ ಸೇನಾಭೋವರ ಮಹತ್ವ ಕುರಿತು ಎರಡನೇ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಪ್ರಭುತ್ವದಷ್ಟೇ ಪ್ರಬಲವಾಗಿ ಸಮಾಜವನ್ನು ತನ್ನ ತೆಕ್ಕೆಯಲ್ಲಿಟ್ಟುಕೊಂಡು ನಡೆಸಿದ ಮತ್ತೊಂದು ಶಕ್ತಿ ಧರ್ಮವಾದ್ದರಿಂದ ಈ ಪ್ರದೇಶದಲ್ಲಿ ಕಂಡುಬರುವ ವಿವಿಧ ಧರ್ಮಗಳ, ಪಂಥ - ಪಂಗಡಗಳ ಸ್ಥಿತಿಗತಿ, ಅವುಗಳ ನಡುವಿನ ಪ್ರಭಾವ, ಪ್ರಸಾರ, ಸಮನ್ವಯಗಳನ್ನು, ಜನಪರವಾಗುವ ಜನಪ್ರಿಯ ವಾಗುವ ನಿಟ್ಟಿನಲ್ಲಿ, ಅವುಗಳು ಬಲಿಷ್ಠವಾಗಿ ಬೆಳೆಯಬೇಕೆಂಬ ಹಂಬಲದಿಂದ ಅರಸೊತ್ತಿಗೆ ಮತ್ತು ಪುರೋಹಿತಶಾಹಿಗಳು ತಮ್ಮೊಂದಿಗೆ ಮಾಡಿಕೊಂಡ ಒಡಂಬಡಿಕೆಗಳನ್ನು ಗಮನಿಸಲಾಗಿದೆ. ಭಾವನಾವಾದಿ ಸಿದ್ಧಾಂತದ ಬೆಂಬಲ ಪಡೆದು ಅಧಿಕಾರ ಮತ್ತು ಅರ್ಥಮುಖಿ ಯಾದ ಧರ್ಮವು ವರ್ಣ, ವರ್ಗ ವ್ಯವಸ್ಥೆಯಿಂದ ರೂಪುಗೊಂಡ ಯಜಮಾನ ಸಂಸ್ಕೃತಿಯೊಂದಿಗೆ ತಳುಕು ಹಾಕಿಕೊಂಡು ಸಾಗಿದುದರಿಂದ ಹುಟ್ಟಿದ ದೇವಾಲಯ ಸಂಸ್ಕೃತಿಯನ್ನು, ಅದರ ಕಾರ್ಯ ಚಟುವಟಿಕೆಗಳನ್ನು ಅರ್ಥ ಮಾಡಿಕೊಳ್ಳಲು ಇಲ್ಲಿನ ಜೈನ ವೈಷ್ಣವ, ಶೈವಧರ್ಮಗಳು, ದೇವಾಲಯ, ಮಠ -ಮಾನ್ಯಗಳು, ಅವುಗಳ ಸಂಪತ್ತು, ಒಡೆತನ ಕಾರ್ಯಚಟುವಟಿಕೆಗಳನ್ನು ಗಮನಿಸಲಾಗಿದೆ. ಬೌದ್ಧ ಧರ್ಮದ ಕುರುಹುಗಳನ್ನು ಇಲ್ಲಿ ಪತ್ತೆ ಹಚ್ಚಬಹುದಾದರೂ, ಶಾಸನಗಳ ಕೊರತೆ ಎದ್ದು ಕಾಣುತ್ತದೆ. ಕ್ರಿ.ಶ. ೧೨ನೆಯ ಶತಮಾನದವರೆಗೂ ವೈಭವವಾಗಿ ಬಾಳಿಬೆಳಗಿದ ಜೈನ ಧರ್ಮ ಅವನತಿಯ ಹಾದಿಯನ್ನು ಹಿಡಿಯುವಂತಹ ಕಾರಣ ಈ ಧರ್ಮದ ಸ್ಥಾನದಲ್ಲಿ ಶೈವ ಧರ್ಮ ಪ್ರಬಲವಾಗಿ ತನ್ನ ಭದ್ರತೆಯನ್ನು ಪಡೆದುಕೊಂಡಿದ್ದು, ಕೊನೆಗೆ ಪಾಶುಪತ, ಕಾಳಮುಖ ಹಾಗೂ ಪುರೋಹಿತಶಾಹಿ ವರ್ಗಗಳು ಶೈವ, ವೈಷ್ಣವ ಪಂಥಗಳಿಗೆ ಪ್ರಾಧಾನ್ಯತೆ ನೀಡಿದ್ದು, ಧರ್ಮಗಳ ಮುಖೇನ ರಾಜಪ್ರಭುತ್ವವು ಸಾಮಾಜಿಕ ನಿಯಂತ್ರಣ ಶಕ್ತಿಯನ್ನು ಪಡೆದುಕೊಂಡಿದ್ದು ತನ್ನ ಅಧಿಕಾರವನ್ನೂ ಉಳಿಸಿಕೊಳ್ಳಲು ದೇವಾಲಯಗಳಿಗೆ ದಾನ - ದತ್ತಿಗಳನ್ನು ನೀಡಿ ಸಾಮಾಜಿಕ ಯಜಮಾನಿಕೆ, ಧಾರ್ಮಿಕ ಪ್ರಭುತ್ವವನ್ನು ಹೊಂದಿ ದೇವಾಲಯ ಹಾಗೂ ಮಠ - ಮಾನ್ಯಗಳ ಮೂಲಕ ಕೇಂದ್ರೀಕೃತ ವ್ಯವಸ್ಥೆಯೊಳಗೆ ಇವುಗಳನ್ನು ನಿಯಂತ್ರಿತ ಶಕ್ತಿಯಂತೆ ಬಳಸಿಕೊಳ್ಳಲು ರಾಜಪ್ರಭುತ್ವ ಹಾಗೂ ಪುರೋಹಿತಶಾಹಿ ಹವಣಿಸುತ್ತಿದ್ದಿತು. ಮೇಲ್ವರ್ಗವು ರಾಜರಿಂದ ಯಥೇಚ್ಛವಾಗಿ ಭೂದಾನವನ್ನು ಸ್ವೀಕರಿಸಿ ಭೂಮಾಲಿಕರಾಗಿ, ಬಂಡವಾಳಶಾಹಿಗಳಾಗಿ ರೂಪುಗೊಂಡು ಜನತೆಯನ್ನು ಸಾಮಾಜಿಕವಾಗಿ ನಿಯಂತ್ರಿಸುವ ಸಲುವಾಗಿ ಧರ್ಮದ ಹೆಸರಲ್ಲಿ ದೇವಾಲಯ, ಮಠಗಳು ನಿರ್ಮಾಣಗೊಂಡುದರ ಬಗ್ಗೆ ಅವುಗಳ ಸ್ವರೂಪ ಕಾರ್ಯವ್ಯಾಪ್ತಿಯನ್ನು ಅವಲೋಕಿಸಲಾಗಿದೆ.

ಈ ಪ್ರದೇಶದ ಅಭಿವೃದ್ಧಿಯ ಮೊದಲ ಹೆಜ್ಜೆಗಳನ್ನು ಕೃಷಿ ವಿಸ್ತರಣೆ, ಭೂಒಡೆತನ, ದಾನ, ಭೂಮಿಯ ಅಭಿವೃದ್ಧಿಯಲ್ಲಿ ಗುರುತಿಸಿಕೊಳ್ಳಲಾಗಿದೆ. ಮಲೆನಾಡಿನಲ್ಲಿ ಸಮೃದ್ಧ ನೀರಿನಾಸರೆಯನ್ನು ಪ್ರಕೃತಿಯೇ ಒದಗಿಸಿರುವುದರಿಂದ ಕೆರೆ - ಕಟ್ಟೆ, ಬಾವಿಗಳ ನಿರ್ಮಾಣದ ಅಗತ್ಯತೆ ಕಂಡು ಬಂದಿಲ್ಲ. ಇಲ್ಲಿ ಉತ್ಪನ್ನಗೊಂಡ ಸಂಪತ್ತು, ಇಲ್ಲಿನ ಭೂಒಡೆತನದ ಹಂಚಿಕೆಯಲ್ಲಾದ ಏರುಪೇರುಗಳು, ಅವು ಇಲ್ಲಿನ ಸಾಮಾಜಿಕ ರಚನೆಯ ಸ್ವರೂಪದಲ್ಲಿ ಉಂಟು ಮಾಡಿದ ಪಲ್ಲಟಗಳು ಯಾವುವು? ಎಂಬುದನ್ನು ಗುರುತಿಸಲಾಗಿದೆ. ಭೂಮಾಲೀಕರು, ವರ್ತಕರು, ಉಂಬಳಿ ಗ್ರಾಮಗಳನ್ನು ಕೊಡುಗೆಯಾಗಿ ಪಡೆದ ಬ್ರಾಹ್ಮಣರು ಹಾಗೂ ಸೇವಕ ವರ್ಗಗಳ ಸಂಬಂಧವನ್ನು ಶಾಸನಗಳ ಸಹಾಯದಿಂದ ವಿಶ್ಲೇಷಿಸಲಾಗಿದೆ. ಭೂವಿಕ್ರಯ, ಪರಿವರ್ತನೆ, ಸಾಲ, ಯಜಮಾನಿಕೆ ಕುರಿತ ಶಾಸನಗಳು ಹಾಗೂ ಸಾಗುವಳಿ ಗದ್ದೆ ಬೆದ್ದಲು, ತೋಟ–ತುಡಿಕೆ, ಕಣ, ಮನೆ, ನಿವೇಶನಗಳ ಅಳತೆಗಳನ್ನು ಕರಾರುವಕ್ಕಾಗಿ ನೀಡಿರುವುದು(ಅಳತೆ, ತೂಕ, ವ್ಯಾಪಾರ, ತೆರಿಗೆ, ಸುಂಕ, ಹಣ, ಬಡ್ಡಿ, ನಾಣ್ಯಗಳು) ಈ ಪ್ರದೇಶದ ಭೂಒಡೆತನ, ಕೃಷಿ ಸಂಬಂಧಿ ಚಟುವಟಿಕೆಗಳ ಮೇಲೆ ಬೆಳಕು ಬೀರಿರುವುದನ್ನು ಗುರುತಿಸಲಾಗಿದೆ.

ಈ ಪ್ರದೇಶದ ಸಾಮಾಜಿಕ–ಸಾಂಸ್ಕೃತಿಕ ಸ್ಥಿತಿ–ಸಂಚಲನಗಳನ್ನು ಅರ್ಥ ಮಾಡಿಕೊಳ್ಳಲು ಭೂಒಡೆತನ, ಕೃಷಿ ವಿಸ್ತರಣೆ, ಸಂಪತ್ತಿನ ಅಭಿವೃದ್ಧಿಯೊಂದಿಗೆ ಸಂತೆ ಪೇಟೆಗಳು, ಪಟ್ಟಣಗಳು, ವಾಣಿಜ್ಯ ಕೇಂದ್ರಗಳ ಬೆಳವಣಿಗೆಗೆ ಸಹಕಾರಿಯಾದ ವಾಣಿಜ್ಯೋದ್ಯಮ, ಸಾರಿಗೆ–ಸಂಪರ್ಕ, ಬಂಡವಾಳ ಹೂಡುವಂತಹ ಅರ್ಥಸಂಬಂಧಿ ಪಲ್ಲಟಗಳು ಕೃಷಿ ಪ್ರಧಾನವಾಗಿದ್ದ ಸಮಾಜದಲ್ಲಿ ಉಂಟುಮಾಡಿದ ಸಂಚಲನಗಳು ಹೇಗೆ ನಗರೀಕರಣಕ್ಕೆ ದಾರಿಯಾಯಿತೆಂಬುದನ್ನು, ಪ್ರಮುಖ ಪಟ್ಟಣಗಳು, ಅಗ್ರಹಾರಗಳ ಬೆಳವಣಿಗೆಗೆ ಕಾರಣವಾದ ಅಂಶಗಳನ್ನು ಗುರುತಿಸಲಾಗಿದೆ. ಇಲ್ಲಿನ ಪ್ರಮುಖ ಕೃಷಿಯ ಚಟುವಟಿಕೆಗಳ ಜೊತೆಗೆ ಅಳತೆ, ತೂಕ, ವ್ಯಾಪಾರ, ವಾಣಿಜ್ಯ, ಹಣ, ಬಡ್ಡಿ, ನಾಣ್ಯವ್ಯವಸ್ಥೆ ಮುಂತಾದ ಉದ್ದಿಮೆಗಳ ಕುರಿತು ಮೂರನೇ ಅಧ್ಯಾಯದಲ್ಲಿ ವಿಮರ್ಶಿಸ ಲಾಗಿದೆ.

ಮಧ್ಯಮಲೆನಾಡಿನ ಶಾಸನಗಳಲ್ಲಿ ಬಿಂಬಿತವಾಗಿರುವ ಸಮಾಜದ ಜನಸಾಮಾನ್ಯರ ಸ್ಥಿತಿಗತಿಗಳನ್ನು ಕಂಡುಕೊಳ್ಳುವ ಮೂಲಕ ಮಲೆನಾಡಿನ ಜನಸಾಮಾನ್ಯರ ಬದುಕಿನಲ್ಲಾದ ಪಲ್ಲಟವನ್ನು ಅರ್ಥ ಮಾಡಿಕೊಳ್ಳಲಾಗಿದೆ. ಶಾಸನಗಳಲ್ಲಿ ಮೇಲ್ವರ್ಗದ ಉಲ್ಲೇಖ ಸಾಕಷ್ಟಿದ್ದರೂ ಕೆಳವರ್ಗದ ಉಲ್ಲೇಖ ಅತ್ಯಂತ ಕಡಿಮೆಯೆಂದೇ ಹೇಳಬಹುದು. ಸಮಾಜದಲ್ಲಿ ಚಾತುರ್ವರ್ಣ ವ್ಯವಸ್ಥೆಯಿದ್ದು ಕೆಳವರ್ಗದ ಹಲವಾರು ಜಾತಿಗಳು, ಶೂದ್ರರು, ಹೊಲೆಯರು ಎಂಬಂತಹ ವರ್ಗವ್ಯವಸ್ಥೆಯನ್ನು ಶಾಸನಗಳಲ್ಲಿ ಎತ್ತಿ ಹಿಡಿಯಲಾಗಿದೆ.

ಮನುಷ್ಯನ ಅಪವರ್ತನೆಯನ್ನು ತಡೆಯಲು ಆಚಾರ–ವಿಚಾರಗಳು, ವಿಧಿ–ನಿಷೇಧಗಳು, ಶಿಕ್ಷೆ, ರಕ್ಷಣಾ ವ್ಯವಸ್ಥೆಗಳಷ್ಟೇ ಸಾಲದೆಂಬ ಅರಿವಿನಿಂದ ನಮ್ಮ ಹಿರಿಯರು ತಮ್ಮ ಸಮಾಜದ ಸದಸ್ಯರಲ್ಲಿ ಒಂದು ಸಾಮಾಜಿಕ ನಿಷ್ಠೆ, ಬದ್ಧತೆ, ಹೊಣೆಗಾರಿಕೆಯ ಇತ್ಯಾತ್ಮಕ ಭಾವವನ್ನು

ಮೂಡಿಸಲು ಪ್ರೋತ್ಸಾಹಕ ನಿಯೋಗಗಳನ್ನು ರೂಪಿಸಿದ್ದರು ಎಂಬುದು ತಿಳಿಯಬಹುದಾಗಿದೆ. ರಾಜಪ್ರಭುತ್ವ ಮತ್ತು ಪುರೋಹಿತಶಾಹಿ ವರ್ಗ ಸಮಾಜದ ವ್ಯವಸ್ಥೆಯಲ್ಲಿ ಸಮತೋಲನವನ್ನು ಕಾಪಾಡಲು ಔಪಚಾರಿಕ ಮತ್ತು ಅನೌಪಚಾರಿಕ ನಿಯಂತ್ರಣ ನಿಯೋಗಗಳನ್ನು ಬಳಸಿ ಇಲ್ಲಿನ ಸಮಾಜವು ತನ್ನ ಸದಸ್ಯರ ವರ್ತನೆಯನ್ನು ಯಾವ ರೀತಿ ನಿಯಂತ್ರಿಸಿದೆ ಎಂಬುದನ್ನು ಶಾಪಾಶಯಗಳು, ಪುಣ್ಯಾಶಯಗಳು, ಶಿಕ್ಷಾ ವಿಚಾರಗಳು, ನೀತಿ-ನಡಾವಳಿಯ ನಿಯಮ ನಿಬಂಧನೆಗಳ ಮೂಲಕ ತಿಳಿದುಕೊಳ್ಳಲಾಗಿದೆ. ಜನಸಾಮಾನ್ಯರು ಸಮಾಜದಲ್ಲಿ ಬಹುಸಂಖ್ಯಾತರಾಗಿದ್ದು ದೇವಾಲಯ ಹಾಗೂ ಕೆರೆಗಳ ನಿರ್ಮಾಣದಲ್ಲಿ ಯಾವ ರೀತಿಯಲ್ಲಿ ಭಾಗಿಯಾಗಿದ್ದರು ಎಂಬುದು ಶಾಸನಾಧರಿತವಾಗಿ ಅಭ್ಯಸಿಸಲಾಗಿದೆ. ಜೊತೆಗೆ ಸಾಮಾಜಿಕ ಭದ್ರತೆಗಾಗಿ ಪ್ರಜಾಕ್ಷೇಮಕ್ಕಾಗಿ ರಾಜ್ಯರಕ್ಷಣೆಯ ಹೊಣೆಹೊತ್ತ ವೀರರ ಪಡೆ ಆಕ್ರಮಣ ಆತಂಕಗಳಿಂದ ಗ್ರಾಮಗಳನ್ನು ರಕ್ಷಿಸುತ್ತಿದ್ದ ವೀರರ ತ್ಯಾಗ ಪರಾಕ್ರಮಗಳನ್ನು ಬಲಿದಾನ ಹಾಗೂ ಯುದ್ಧವಾದ್ಯಗಳನ್ನು ಇಲ್ಲಿನ ವೀರಗಲ್ಲು, ಮಾಸ್ತಿಗಲ್ಲು ಹಾಗೂ ಶಾಸನಗಳಲ್ಲಿ ವಿವರಿಸಲಾಗಿದೆ. ಜೊತೆಗೆ ಶಾಸನಗಳಲ್ಲಿ ಕಂಡುಬರುವ ಸಾಹಿತ್ಯಿಕ ಅಂಶಗಳು ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯವನ್ನು ನಿರೂಪಿಸಿರುವುದು. ಶಾಸನ ಸಾಹಿತ್ಯದ ಮೇಲೆ ಈ ಎರಡೂ ಭಾಷೆಯ ಹಿಡಿತ, ಚಂಪೂಸಾಹಿತ್ಯ, ಕಾವ್ಯ, ಸಾಹಿತ್ಯಾಂಶ ಹಾಗೂ ಶಾಸನಸಾಹಿತ್ಯದಲ್ಲಿ ಆಕರಗಳನ್ನು ಒಳಗೊಂಡ ವಿಷಯ ಪರಿಮಿತಿಯಿಂದ ಪ್ರತಿಫಲಿತವಾಗದ ಅದರಾಚೆಗಿನ ಬದುಕು, ಜನಸಮುದಾಯಗಳ ಸಾಂಸ್ಕೃತಿಕ ಬದುಕನ್ನು ನಿರ್ಲಕ್ಷಿಸಿರುವುದನ್ನು ಗಮನಿಸಿದರೆ ಕೇವಲ ಪ್ರಭುತ್ವ ಹಾಗೂ ಪುರೋಹಿತಶಾಹಿಯ ಪ್ರಾಬಲ್ಯತೆಯನ್ನು ಎತ್ತಿ ತೋರಿಸುತ್ತದೆ ಎಂಬುದರ ಅಧ್ಯಯನವನ್ನು ನಾಲ್ಕನೇ ಅಧ್ಯಾಯದಲ್ಲಿ ಪ್ರತಿಬಿಂಬಿಸಲಾಗಿದೆ.

ಪ್ರಾಚೀನ ಭಾರತೀಯ ಮಹಿಳೆಯ ಬಹುಮುಖ್ಯ ಮತ್ತು ಗೌರವಪೂರ್ಣ ಕಾರ್ಯರಂಗ ಗೃಹಸ್ಥ ಜೀವನ. ಹೆಣ್ಣು ಬೇಡಿ ಬಯಸಿ ಪಡೆದ ಮಗುವಾಗದಿದ್ದರೂ ಹುಟ್ಟಿದ ಹೆಣ್ಣನ್ನು ಕೆಟ್ಟ ದೃಷ್ಟಿಯಿಂದ ಕಂಡ ಉದಾಹರಣೆಗಳಿಲ್ಲ. ಗಂಡು ಮಕ್ಕಳಷ್ಟು ಇವಳು ಮಾನ್ಯತೆ ಪಡೆಯದೆ ಹೋದರೂ ಕೆಲವು ಶಾಸನಗಳು ಹೆಣ್ಣನ್ನು ಸುಪುತ್ರಿ, ಕುಲದೀಪಿಕೆ ಎಂದು ಕರೆದಿವೆ. ಗಂಡನನ್ನು ಅನುಸರಿಸಿ ಜೀವನ ಮಾಡುವುದು, ವೀರ ಮಕ್ಕಳನ್ನು ಹೆರುವುದು ಆಕೆಯ ಬಯಕೆಯಾಗಿದ್ದಿತು. ವಿವಾಹ, ವಿಧವಾ ಜೀವನ, ಸತಿ ಪದ್ಧತಿ ಇತ್ಯಾದಿಗಳ ಬಗ್ಗೆ ವಿಶ್ಲೇಷಿಸಲಾಗಿದೆ.

ಕರ್ನಾಟಕದಲ್ಲಿ ಸ್ತ್ರೀಯರ ಔಪಚಾರಿಕ ವಿದ್ಯಾಭ್ಯಾಸದ ಚಿತ್ರ ತುಂಬಾ ನಿರಾಶಾದಾಯಕವಾಗಿರುವುದು ಶಾಸನಗಳಿಂದ ಕಂಡುಬರುತ್ತದೆ. ಸ್ತ್ರೀ ಶಿಕ್ಷಣಕ್ಕೆ ಸಂಬಂಧಿಸಿದ ಉಲ್ಲೇಖಗಳ ಅಭಾವವೇ ಅದರ ಸ್ಥಿತಿಗತಿಯನ್ನು ಸೂಚಿಸುತ್ತದೆ. ಸ್ತ್ರೀಶಿಕ್ಷಣ, ನೃತ್ಯ, ಸಂಗೀತ, ಚಿತ್ರಕಲೆ ಮುಂತಾದವುಗಳಿಗೆ ಬಹುಮಟ್ಟಿಗೆ ಸೀಮಿತವಾಗಿರುವಂತಿದೆ. ಮಹಿಳೆಯರಿಗೆ ಅಕ್ಷರಾಭ್ಯಾಸದಲ್ಲಿ ಪುರುಷರಷ್ಟು ಅವಕಾಶ ಸಿಗದೆ ಹೋದರೂ ಉನ್ನತ ಮಟ್ಟದ ಮಹಿಳೆಯರಿಗೆ ಅದರಲ್ಲೂ ಅರಸು ವರ್ಗ ಮತ್ತು ಅಧಿಕಾರಿ ವರ್ಗದ ಮಹಿಳೆಯರಿಗೆ ಅಕ್ಷರ, ಕಲೆಗಳ ಶಿಕ್ಷಣ ಕೊಡಲಾಗುತ್ತಿತ್ತು. ಉದಾ:- ಕೆಳದಿ ಚೆನ್ನಮ್ಮಾಜಿ, ಸಾಂತರ ರಾಣಿಯರು, ಆಳುಪ ರಾಣಿವರ್ಗ ಇತ್ಯಾದಿ, ಸಾಮಾನ್ಯ ಸ್ತ್ರೀಯ ಮನವನ್ನು ಜಯಿಸಿದುದು ಜೀವನವೇ ಶಿಕ್ಷಣ.

ಮಲೆನಾಡು ಪ್ರದೇಶದ ಶಾಸನಗಳಲ್ಲಿ ಅಭಿವ್ಯಕ್ತವಾಗಿರುವ ಸ್ತ್ರೀ ಸಮಾಜದ ಸ್ಥಿತಿಗತಿಗಳನ್ನು ಕಂಡುಕೊಳ್ಳುವ ಮೂಲಕ ಮಧ್ಯಕಾಲೀನ ಕರ್ನಾಟಕದ ಸ್ತ್ರೀ ಸಮುದಾಯದ ಬದುಕಿನಲ್ಲಾದ ಸ್ಥಿತ್ಯಂತರವನ್ನು ಅರ್ಥ ಮಾಡಿಕೊಳ್ಳಲಾಗಿದೆ. ಅರಸಿಯರಿಂದ ಅತ್ಯಂತ ಸಾಮಾನ್ಯ ಸ್ತ್ರೀಯವರೆಗೆ ಬಹಳಷ್ಟು ಸ್ತ್ರೀಯರು ಇಲ್ಲಿನ ಶಾಸನಗಳಲ್ಲಿ ಉಲ್ಲೇಖಗೊಂಡಿದ್ದರಾದರೂ ಅವರ ಪ್ರಧಾನ ಕ್ಷೇತ್ರ ಗೃಹಜೀವನವಾಗಿದ್ದಿತು. ಅರಸರು, ಅಧಿಕಾರಿಗಳು, ದಾನಿಗಳು, ಪರಾಕ್ರಮಿಗಳ ಮಡದಿಯಾಗಿ, ತಾಯಿಯಾಗಿ ಮಾತ್ರ ಅವರಿಗೆ ವಿಶೇಷ ಮಾನ್ಯತೆ ಇರುತ್ತಿದ್ದು, ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಸಾಧನೆ ಮಾಡಲು ಅವಕಾಶ ಪಡೆದವರ ಸಂಖ್ಯೆ ಬೆರಳೆಣಿಕೆಯಷ್ಟು ಎಂಬುದು ಸತ್ಯಸಂಗತಿ.

ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಸತಿಸಹಗಮನ, ವೀರ ಪರಂಪರೆ, ಸಲ್ಲೇಖನ ವ್ರತ, ಆತ್ಮಬಲಿಯ ಹಲವಾರು ಪ್ರಭೇದಗಳನ್ನು ಶಾಸನ ಮತ್ತು ಶಿಲ್ಪಗಳ ಮುಖೇನ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಾಗೂ ವ್ಯಾಪ್ತಿಯ ಪರಿಧಿಯೊಳಗೆ ಅಪಾರ ಸಂಖ್ಯೆಯ ಮಾಸ್ತಿಗಲ್ಲುಗಳು, ವೀರಗಲ್ಲುಗಳು, ನಿಷೇಧಿಗಲ್ಲುಗಳು, ಆತ್ಮಬಲಿಯ ವಿಗ್ರಹಗಳು ಲಭಿಸಿದ್ದು, ಅವುಗಳಲ್ಲಿನ ಸೂಕ್ಷ್ಮಾತಿಸೂಕ್ಷ್ಮ ಅಂಶಗಳ ಕುರಿತು ವಿಶ್ಲೇಷಿಸಲಾಗಿದೆ. ಮಾಸ್ತಿಗಲ್ಲುಗಳು ಪಾತಿವ್ರತ್ಯಾಪರಂಪರೆಯ ದ್ಯೋತಕವಾದರೆ, ವೀರಗಲ್ಲುಗಳು ವೀರಪರಂಪರೆಯ ಸೂಚಕವಾಗಿವೆ.

ಮಧ್ಯಮಲೆನಾಡು ಪ್ರದೇಶದ ಇತಿಹಾಸದ ಆರಂಭದ ಹಂತದಲ್ಲಿ ಒಡೆಯನ ಪರವಾದ ನಿಷ್ಠೆ, ಅದರ ಮೂಲಕ ಆತ್ಮೀಯತೆಯನ್ನು ಸಾಧಿಸಿ ತಮ್ಮ ರಾಜಕೀಯ ಜೀವನದಲ್ಲಿ ನೆಲೆಯನ್ನು ಕಂಡುಕೊಳ್ಳುವ ಪ್ರಯತ್ನ, ಯುದ್ಧಗಳಲ್ಲಿ ಅರಸನಿಗಾಗಿ ಪ್ರಾಣಾರ್ಪಣೆಯಂತಹ ಮೌಲ್ಯಗಳು, ಪತಿಗಾಗಿ ಪ್ರಾಣಾರ್ಪಣೆಗೈಯುವ ಸತಿಯರ ವಿಷಯ ಮುಂತಾದವು ದಾಖಲಾದವು. ಬಳಿಕ ವೀರತನವೇ ಪ್ರಧಾನ ಮೌಲ್ಯವಾಗಿ ಆ ಮೂಲಕ ಬರತಕ್ಕ ಮರಣವು ಸ್ವರ್ಗಕ್ಕೆ ಕಾರಣ ವಾಗುವುದೆಂಬ ನಂಬಿಕೆಯೊಂದಿಗೆ ಬೆಳೆದುಬಂದಿತು.

ಪ್ರಾಪ್ತವಾಗಿರುವ ವೀರಗಲ್ಲು. ಮಾಸ್ತಿಗಲ್ಲುಗಳ ಶಿಲ್ಪಗಳಲ್ಲಿ ಕಾಣಬರುವ ಅಲಂಕಾರ, ಸ್ತ್ರೀಪುರುಷರ ಕೇಶಾಲಂಕಾರದ ಬಗ್ಗೆ, ಧರಿಸಿರುವ ಆಭರಣಗಳು ವಸ್ತ್ರವಿನ್ಯಾಸದ ಅಂಶಗಳ ಸೂಕ್ಷ್ಮವಾದ ಅಧ್ಯಯನಕ್ಕೆ ಮಹತ್ವ ಕೊಡಲಾಗಿದೆ. ವ್ಯಾಪಕ ಪ್ರಮಾಣದಲ್ಲಿ ಮಾಸ್ತಿಗಲ್ಲು ಮತ್ತು ವೀರಗಲ್ಲುಗಳು ಪ್ರಾಪ್ತವಾಗಲು ಕಾರಣವೇನೆಂಬ ಪ್ರಶ್ನೆಯನ್ನು ಕೇಳಿಕೊಂಡಾಗ ಬಹುಶಃ ಈ ಭಾಗದಲ್ಲಿದ್ದ ಪಾತಿವ್ರತ್ಯ ಆಚರಣೆಯೋ, ನಿರಂತರವಾದ ಯುದ್ಧದ ಕಾರಣವೋ, ಪರಕೀಯರ ದಾಳಿಯೋ, ಮತಾಂತರವೋ ಎನ್ನುವಂತಹ ಕಾರಣಕ್ಕೆ ಸತ್ಯವನ್ನು ಹುಡುಕುವುದು ಕಷ್ಟಸಾಧ್ಯ ವಾಗುತ್ತದೆ ಎಂಬುದರ ಕುರಿತ ವಿಮರ್ಶೆ ಆರನೆಯ ಅಧ್ಯಯನದಲ್ಲಿದೆ.

ಅಧ್ಯಯನದ ಫಲಿತಗಳು

* ಬಹುಪ್ರಧಾನ ಅಂಶವೆಂದರೆ ಅಧ್ಯಯನದ ವ್ಯಾಪ್ತಿಯಲ್ಲಿ ಅಥವಾ ಎಲ್ಲಾ ಸಂದರ್ಭಗಳಲ್ಲಿ ದಾನ-ಧರ್ಮದ ಮೂಲಕ ಜಮೀನು ಮತ್ತು ಅಧಿಕಾರವನ್ನು ಪಡೆದ ಮೇಲ್ವರ್ಗದವರು ಅದೇ ಅಧಿಕಾರವನ್ನು ಬಳಸಿ ಸಮಾಜದ ಕೆಳವರ್ಗದ ಮೇಲೆ ತಮ್ಮ ಹತೋಟಿಯನ್ನು

ಸಾಧಿಸಿ ವೈದಿಕ ಧರ್ಮದ ಕಟ್ಟುಕಟ್ಟಳೆಗಳನ್ನು ಸಮಾಜದ ಮೇಲೆ ಹೇರಿ ಬ್ರಾಹ್ಮಣ ತತ್ವ ಸಿದ್ಧಾಂತಗಳನ್ನು ಒಪ್ಪಿಕೊಳ್ಳುವಂತೆ ಮಾಡಲಾರಂಭಿಸಿದರು. ಮಧ್ಯಮಲೆನಾಡಿನಲ್ಲಿ ಶೇಕಡ ೮೦ರಷ್ಟು ಶಾಸನಗಳು ದಾನಶಾಸನಗಳಾಗಿದ್ದು ಇನ್ನುಳಿದವು ವೀರಗಲ್ಲು ಶಾಸನಗಳಾಗಿವೆ. ಉದಾ:- ತೀರ್ಥಹಳ್ಳಿಯ ಅಂದಗೆರೆ ಶಾಸನ, ಅಲಗವಳ್ಳಿ ಶಾಸನ, ಕೆಸರಿ ಶಾಸನ, ವೈದ್ಯರ ಕೊಪ್ಪ ಶಾಸನ ದಾನಶಾಸಗಳಾಗಿವೆ.

* ವಿಭಿನ್ನ ರಾಜವಂಶಗಳು, ರಾಜರುಗಳು, ಧರ್ಮ–ಆಚರಣೆಗಳು, ಅರ್ಥವ್ಯವಸ್ಥೆ, ದೇವಸ್ಥಾನಗಳ ನಿರ್ಮಾಣ ಮೇಲ್ನೋಟಕ್ಕೆ ಕಂಡುಬಂದರೂ ಆಂತರಿಕವಾಗಿ ಭಿನ್ನವಾದ ಮತ್ತು ಬಲವಾದ ಕಾರಣ ಬೇರೆಯೇ ಆಗಿರುತ್ತದೆ. ಬಹುಮುಖ್ಯವಾದುದು ಧರ್ಮ ರಕ್ಷಣೆಯ ಸೋಗಿನಲ್ಲಿ ಸಾಮಾಜಿಕ ನಿಯಂತ್ರಣವೇ ಪ್ರಧಾನವಾಗಿದೆ.

* ಶಾಸನಗಳಲ್ಲಿ ರಾಜರ, ಸಾಮಂತರ, ಬ್ರಾಹ್ಮಣರ ಹಿತಾಸಕ್ತಿಯೇ ವ್ಯಕ್ತವಾಗಿರುವುದು.

* ಬಹಳಷ್ಟು ಶಾಸನಗಳಲ್ಲಿ ಜನಸಾಮಾನ್ಯರು, ಸ್ತ್ರೀಯರು, ಶೋಷಿತರ ಉಲ್ಲೇಖಗಳು ಅಪರೂಪ ವೆನಿಸುವುದು. ಸ್ತ್ರೀಯರು ಜೀತದಾಳುಗಳಾಗಿ, ಸೇವಕಿಯರಾಗಿ ಇನ್ನೊಬ್ಬರ ಮನೆ ಮತ್ತು ದೇವಾಲಯಗಳಲ್ಲಿ ಎಂಜಲು ತೆಗೆಯುವ ಕೆಲಸದಲ್ಲಿ ನಿರತರಾಗಿದ್ದರು ಎನ್ನುವುದಕ್ಕೆ ತೀರ್ಥಹಳ್ಳಿಯ ಕಾಳಮ್ಮನ ಗುಡಿ ಶಾಸನದಲ್ಲಿ ಎಂಜಲು ತೆಗೆಯುವ ಶೂದ್ರತಿ ಎಂಬ ಉಲ್ಲೇಖವನ್ನು ಗಮನಿಸಲಾಗಿದೆ. ಶಾಸನಗಳು ಕೇವಲ ಶ್ರೀಮಂತರು, ಪುರೋಹಿತರು ಹಾಗೂ ಭೂಮಾಲೀಕರ ಹಿತಕ್ಕಾಗಿ ರೂಪುಗೊಂಡ ದಾನಶಾಸನಗಳಾಗಿವೆ.

* ಇಲ್ಲಿನ ಶಾಸನಗಳಲ್ಲಿ ಭೂಮಿಯನ್ನು ಪ್ರಧಾನ ಅಸ್ತ್ರವನ್ನಾಗಿ ಉಪಯೋಗಿಸಿಕೊಳ್ಳಲಾಗಿದ್ದು ದಾನವನ್ನು ರಕ್ಷಿಸಿ ಮುಂದುವರೆಸುವಂತೆ ಪುಣ್ಯಾಶಯಗಳನ್ನು ಅಪಹರಸಿದಂತೆ ಶಾಪಾಶಯ ಗಳನ್ನು ಪ್ರತಿಯೊಂದು ಶಾಸನದಲ್ಲಿಯೂ ವಿವರಿಸಲಾಗಿದೆ.

* ಹಲವು ರಾಜವಂಶಗಳಲ್ಲಿ ಆಂತರಿಕ ಬದಲಾವಣೆಗಳು ಉಂಟಾಗಿರುವುದು ಸಹಜವಾಗಿದೆ. ಜೈನ, ಬೌದ್ಧ, ವೈದಿಕ ಆಚರಣೆ ಮತ್ತು ಕಂದಾಚಾರಗಳಿಗೆ ಆಯಾ ಧರ್ಮದ ನೆಲೆಯಲ್ಲಿ ಅಸ್ತಿತ್ವ ಸಿಕ್ಕಿದಂತಾಗಿರುವುದು ತಮ್ಮ ರಾಜಪ್ರಭುತ್ವದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡಿ ರುವುದು ಶಾಸನಗಳ ಹಿನ್ನೆಲೆಯಲ್ಲಿ ವ್ಯಕ್ತವಾಗುತ್ತದೆ.

* ಮಧ್ಯಮಲೆನಾಡಿನ ರಾಜವಂಶಗಳು ಕೆಲವೊಮ್ಮೆ ಸಂಘರ್ಷಕ್ಕೆ ಇಳಿದಿರುವುದು ಮೇಲ್ನೋಟಕ್ಕೆ ಕಂಡುಬಂದರೂ ಭಿನ್ನವಾದ ಮತ್ತು ಬಲವಾದ ಕಾರಣ ಬೇರೆಯೇ ಆಗಿರುತ್ತದೆ. ಅದರಲ್ಲಿ ಮುಖ್ಯವಾದುದೆಂದರೆ ಸಾಮ್ರಾಜ್ಯ ವಿಸ್ತರಣೆ, ಆರ್ಥಿಕತೆ ಮತ್ತು ಸಂಪತ್ತಿನ ಕ್ರೋಢೀಕರಣ ವಾಗಿದೆ.

* ರಾಜರುಗಳು ತಮ್ಮ ತಮ್ಮ ವೈಯಕ್ತಿಕ ಧರ್ಮಗಳ ಬೆಳವಣಿಗೆಗೆ, ರಾಜಪ್ರಭುತ್ವದ ಆಶ್ರಯದೊಂದಿಗೆ ಶಾಸನಗಳನ್ನು ಬರೆಯಿಸುವ ಕಾರ್ಯ ನಡೆದಿತ್ತು. ಆರ್ಥಿಕ ಕ್ರೋಢೀಕರಣದ ಫಲವಾಗಿ ರೂಪುಗೊಂಡ ಕುಲಕಸುಬು ಕೇಂದ್ರಿತ ನವಸಮುದಾಯಗಳ ನಿಯಂತ್ರಕ ಶಕ್ತಿಗಳನ್ನಾಗಿ ರಾಜಪ್ರಭುತ್ವ ಈ ಧರ್ಮವನ್ನು ಬಳಸಿಕೊಂಡಿದೆ.

* ಸಾಮಾನ್ಯವಾಗಿ ಎಲ್ಲಾ ರಾಜವಂಶಗಳು ಪ್ರಾಚೀನ ಮತ್ತು ಮಧ್ಯಯುಗೀನ ಕಾಲಘಟ್ಟದಲ್ಲಿ ಸ್ವಮತ ಮತ್ತು ಪರಮತಗಳಿಗೆ ಆಶ್ರಯ ನೀಡಿರುವುದರ ಹಿಂದೆ ಬಲವಾದ ಕಾರಣ ಅಡಗಿರುವುದು. ಸೈನಿಕ ಶಕ್ತಿಗೆ ಬದಲಾಗಿ ಧಾರ್ಮಿಕ ನಂಬಿಕೆಯನ್ನು ಜನರಲ್ಲಿ ಬಲಪಡಿಸುವ ಮೂಲಕ ರಾಜಪ್ರಭುತವು ಸಮಾಜದ ಮೇಲೆ ನಿಯಂತ್ರಣ ಸಾಧಿಸಿರುವುದನ್ನು ಗಮನಿಸಲಾಗಿದೆ.

* ಸಾಧಾರಣವಾಗಿ ವಿಭಿನ್ನ ರಾಜವಂಶಗಳ ಮಧ್ಯದಲ್ಲಿ ನೆಲೆನಿಂತ ಧರ್ಮಗಳಲ್ಲಿ ಮೂರ್ತಿಪೂಜೆ, ದೇವತಾರಾಧನೆಯ ಮೂಲ ಪ್ರಬಲವಾದ ಧರ್ಮಗಳನ್ನು ಓಲೈಸುವ ರೀತಿಯಲ್ಲಿ ಕಂಡು ಬರುತ್ತದೆ.

* ಮಧ್ಯಕರ್ನಾಟಕದಲ್ಲಿ ಚಲಾವಣೆಯಲ್ಲಿದ್ದ ಪ್ರಧಾನ ಧರ್ಮಗಳಾದ ಜೈನ, ವೈಷ್ಣವ, ಶೈವ ಮುಂತಾದ ಧರ್ಮಗಳು ಜನಸಾಮಾನ್ಯರಿಂದಲೇ ರೂಪುಗೊಂಡರೂ ಕೇವಲ ಶ್ರೀಮಂತರು, ಅಧಿಕಾರಿಗಳು ಮತ್ತು ಪುರೋಹಿತಶಾಹಿಗಳ ನಿಯಂತ್ರಣದಲ್ಲಿದ್ದವು ಎಂಬುದು ಸರ್ವವಿಧಿತ.

* ಧರ್ಮ ದೇವಾಲಯ, ಮಠಗಳನ್ನು ಮಧ್ಯಮಲೆನಾಡಿನಲ್ಲಿ ಒಂದು ಶೋಷಣಾ ಅಸ್ತ್ರವನ್ನಾಗಿ ಬಳಸಿಕೊಳ್ಳಲಾಗಿದೆ. ಇದು ಅಲ್ಪಸಂಖ್ಯಾತರ ಮನೆಯಂಗಳದ ಚೆಂಡಿನಂತೆ ಗೋಚರ ವಾಗಿರುತ್ತದೆ.

* ಶಾಸನಗಳ ಅಧ್ಯಯನದ ಮೂಲಕ ಅಂದಿನ ಸಮಾಜವನ್ನು ತಿರುಗಿ ನೋಡಿದಾಗ ದೇವಾಲಯಗಳು ಮತ್ತು ಮಠಗಳು ರಾಜಪ್ರಭುತ್ವದ ಸ್ಮಾರಕಗಳಾಗಿ ರೂಪುಗೊಂಡಿದ್ದು, ರಾಜಪ್ರಭುತ್ವವನ್ನು ವೈಭವೀಕರಿಸುವ ಕಾರ್ಯವನ್ನು ಮಾಡಿದವು. ಇಂತಹ ಸ್ಮಾರಕಗಳನ್ನು ಕಟ್ಟಿದ ಕುಶಲಕರ್ಮಿಗಳ ಶ್ರಮ ಅರಸುಕೇಂದ್ರಿತ ಇತಿಹಾಸಕ್ಕೆ ಒಳಪಡಲಿಲ್ಲ. ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳೆರಡು ಒಟ್ಟೊಟ್ಟಿಗೆ ಸೇರಿ ಹೆಚ್ಚು ಹೆಚ್ಚು ದೇವಾಲಯಗಳು, ಮಠಗಳು ನಿರ್ಮಾಣವಾಗಿದ್ದನ್ನು ವಿವಿಧ ಕಾಲಘಟ್ಟದಲ್ಲಿ ಪರಿಶೀಲಿಸಲಾಗಿದೆ. ಇವುಗಳ ನಿರ್ಮಾಣವನ್ನು ಒಂದು ಶೋಷಣೆ ಅಸ್ತ್ರವನ್ನಾಗಿ ಬಳಸಿಕೊಂಡಿದ್ದನ್ನು ಗುರುತಿಸಲಾಗಿದೆ.

* ತೂಕ, ಅಳತೆ, ವ್ಯಾಪಾರ, ಸುಂಕ, ಹಣದ ವ್ಯವಸ್ಥೆ, ನಾಣ್ಯ ಚಲಾವಣೆಯಂಥ ವ್ಯವಸ್ಥೆ ಅಂದಿನ ಕಾಲದಲ್ಲಿದ್ದುದನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ.

* ಅಂದಿನ ಸಾಮಾಜಿಕ ರಚನೆಯಲ್ಲಿ ಸತಿ ಪದ್ಧತಿಯ ಹುಟ್ಟಿಗೆ ಕಾರಣವಾದ ಪ್ರಮುಖ ಅಂಶಗಳೆಂದರೆ ಪ್ರಭುತ್ವಕೇಂದ್ರಿತ ವ್ಯವಸ್ಥೆ, ಪಿತೃಪ್ರಧಾನ ಕೌಟುಂಬಿಕ ರಚನೆ, ಪುರುಷ ಪ್ರಧಾನ ಸಮಾಜ ಹಾಗೂ ಪುರೋಹಿತಶಾಹಿ ಪ್ರವೇಶ ಮುಂತಾದವುಗಳು. ಮೇಲ್ವರ್ಗದವರು ಜನಸಾಮಾನ್ಯರಲ್ಲಿ ಸ್ವರ್ಗೀಯ ಕಲ್ಪನೆಯನ್ನು ಹುಟ್ಟುಹಾಕಿ, ಸತಿಸಹಗಮನವನ್ನು ವೈಭವೀಕರಿ ಸಿದರು. ಮಹಿಳೆಯು ಬದುಕಿದ್ದಾಗ ಶೋಷಣೆ, ನಿಂದನೆಯನ್ನು ಅನುಭವಿಸಿ, ಸತ್ತ ನಂತರ ದೈವಿಶಕ್ತಿಯಾಗಿ ರೂಪುಗೊಳ್ಳುವುದನ್ನು ಇಲ್ಲಿ ಕಾಣಬಹುದಾಗಿದೆ.

* ಮಧ್ಯಮಲೆನಾಡಿನ ಭಾಗಗಳಲ್ಲಿ ಪ್ರಾಪ್ತವಾಗಿರುವ ವೀರಗಲ್ಲು, ಮಾಸ್ತಿಕಲ್ಲುಗಳಲ್ಲಿನ ಶಿಲ್ಪಗಳನ್ನು ಅಧ್ಯಯನ ಒಳಪಡಿಸುವುದರ ಮುಖೇನ ಅಂದಿನ ಕಾಲದ ರಾಜರು, ಯೋಧರು, ಸ್ತ್ರೀಯರು ಹಾಗೂ ಜನಸಾಮಾನ್ಯರ ಕೇಶಾಲಂಕಾರ, ಆಭರಣ, ಉಡುಗೆ-ತೊಡುಗೆಗಳನ್ನು ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಆಧುನಿಕ ಕಾಲಕ್ಕೆ ಹೊಂದಿಸಿ ನೋಡುವ ಪ್ರಯತ್ನ ಮಾಡಲಾಗಿದೆ. ವೀರತ್ವ ಎಂಬುದು ದಾಸ್ಯದ ಸಂಕೇತ. ವೀರ ಸ್ವರ್ಗ ಎನ್ನುವ ವೈದಿಕ ಧರ್ಮದ ಮೋಕ್ಷ ಸಾಧನೆ ಹಿನ್ನೆಲೆಯಲ್ಲಿ ರಾಜಪ್ರಭುತ್ವವು ವೀರತ್ವದ ಮೌಲ್ಯವನ್ನು ಎತ್ತಿ ಹಿಡಿದು ತನ್ನ ಕಾರ್ಯ ಸಾಧಿಸಿರುವುದನ್ನು ಕಾಣಬಹುದು. ವೀರಮರಣವು ಸತಿ ಸಹಗಮನಕ್ಕೆ ಎಡೆ ಮಾಡಿಕೊಟ್ಟು ಧಾರ್ಮಿಕ ಸಿದ್ಧಾಂತದ ಕಲ್ಪನೆಯಲ್ಲಿ ಜನರನ್ನು ನಿರ್ಬಂಧಿಸುವ ಕಾರ್ಯವನ್ನು ರಾಜಪ್ರಭುತ್ವವು ರೂಢಿಸಿಕೊಂಡಿತು. ಉದಾ: ಕೊಡೂರು ವೀರಗಲ್ಲು ಶಾಸನ, ಕೊಳವಳ್ಳಿ ವೀರಗಲ್ಲು ಶಾಸನ ಹಾಗೂ ಹುಲಿಸರ ವೀರಗಲ್ಲು ಶಾಸನಗಳನ್ನು ಇಲ್ಲಿ ಹೆಸರಿಸಬಹುದು.

* ಶಾಸನಸಾಹಿತ್ಯದಲ್ಲಿ ಆಕರಗಳನ್ನು ಒಳಗೊಂಡ ವಿಷಯ, ಪರಿಮಿತಿಯಿಂದ ಪ್ರತಿಫಲಿತ ವಾಗದಿರುವ, ಅದರಾಚೆಗಿನ ಬದುಕು, ಜನಸಮುದಾಯಗಳ ಸಾಂಸ್ಕೃತಿಕ ಬದುಕಿನ ಚಿತ್ರಣದ ಕೊರತೆಯಿದೆ. ಇದರಿಂದ ಸಂಪೂರ್ಣ ವಿವರಣೆ ಇಲ್ಲದೆ ಕಡೆಗಣಿಸಲ್ಪಟ್ಟಿದೆ ಅಥವಾ ಹೊರಗೆ ಉಳಿದಿದೆ ಎಂಬುದು ಸತ್ಯ ಸಂಗತಿ.

ಅನುಬಂಧದಲ್ಲಿ ಕ್ಷೇತ್ರಕಾರ್ಯದಲ್ಲಿ ಮೊದಲ ಬಾರಿ ಪತ್ತೆ ಹಚ್ಚಿದ ಅಪ್ರಕಟಿತ ಶಾಸನಗಳು ಮತ್ತು ಅಪ್ರಕಟಿತ ವೀರಗಲ್ಲು ಶಾಸನಗಳ ಪಾಠವನ್ನು ನೀಡಲಾಗಿದೆ. ಪತ್ತೆಯಾದ ವೀರಗಲ್ಲು, ಮಾಸ್ತಿಗಲ್ಲು, ವೀರಮಾಸ್ತಿಗಲ್ಲು, ಆತ್ಮಬಲಿ, ನಿಷಧಿಗಲ್ಲುಗಳು, ಹುಲಿ ಬೇಟೆ ಮತ್ತು ತುರುಗೋಳ್ ಶಿಲ್ಪಗಳನ್ನು ನೀಡಲಾಗಿದೆ. ಅಧ್ಯಯನಕ್ಕೆ ಪೂರಕವಾದ ಗ್ರಂಥಋಣ ಮತ್ತು ಛಾಯಾಚಿತ್ರಗಳನ್ನು ನೀಡಲಾಗಿದೆ.

ಸಮಷ್ಟಿಯಾಗಿ ಮಧ್ಯಮಲೆನಾಡು ಪ್ರಾಂತೀಯ ರಾಜಧಾನಿಯ ನಾಡಾಗಿಯೂ, ವಾಣಿಜ್ಯ ಕೇಂದ್ರವೂ, ಆಡಳಿತ ವಿಭಾಗವಾಗಿಯೂ, ಸಾಂಸ್ಕೃತಿಕ ಕೇಂದ್ರವಾಗಿಯೂ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದು ಅದಕ್ಕಾಗಿಯೇ ರಾಜಕೀಯ, ಸಾಂಸ್ಕೃತಿಕ ಇತಿಹಾಸದಲ್ಲಿ ಸ್ಥಾನ ಕಲ್ಪಿಸಿಕೊಡ ಬೇಕೆಂಬ ಉದ್ದೇಶದಿಂದ ಕೈಗೊಂಡ ಪ್ರಸ್ತುತ ಅಧ್ಯಯನವು ಹೊಸ ವಿಚಾರಗಳನ್ನು ಬೆಳಕಿಗೆ ತರುವ ಮೂಲಕ ಸಫಲವಾಗಿದೆ ಎಂದು ಭಾವಿಸುತ್ತೇನೆ. ಮಧ್ಯಮಲೆನಾಡು ಕಾಲಕಾಲಕ್ಕೆ ಒದಗಿಬಂದ ಸಾಂಸ್ಕೃತಿಕ ಪಲ್ಲಟಗಳಿಗೆ ಒಗ್ಗಿಕೊಂಡು ಸಾಧಿಸಿದ ಪ್ರಗತಿಯನ್ನು, ಪತನವನ್ನು ದಾಖಲಿಸಲು ಪ್ರಯತ್ನಿಸಿದ್ದೇನೆ. ಈ ಭಾಗದತ್ತ ಸಂಶೋಧಕರ ಗಮನವನ್ನು ಸೆಳೆದು ಮತ್ತಷ್ಟು ಸಂಶೋಧನೆಗೆ ಹಾಗೂ ಅಭಿವೃದ್ಧಿಗೆ ತೊಡಗಲು ಈ ಮಹಾಪ್ರಬಂಧ ಪ್ರೇರೇಪಿಸಿದರೆ ನನ್ನ ಶ್ರಮ ಸಾರ್ಥಕವೆಂದು ಅರಿಯುತ್ತೇನೆ.

•••

ಅನುಬಂಧ

೧. ಅಪ್ರಕಟಿತ ಶಾಸನಗಳು

೨. ಗ್ರಂಥಋಣ

೩. ಕ್ಷೇತ್ರಕಾರ್ಯದಲ್ಲಿ ದೊರೆತ ವೀರಗಲ್ಲು/ಮಾಸ್ತಿಗಲ್ಲು/ ವೀರಮಾಸ್ತಿಗಲ್ಲು, ಆತ್ಮಬಲಿ, ನಿಷಧಿಗಲ್ಲುಗಳು, ಹುಲಿ ಬೇಟೆ, ತುರುಗೋಳ್‌ಗಳ ವಿವರ

೪. ಕ್ಷೇತ್ರಕಾರ್ಯದಲ್ಲಿ ದೊರೆತ ವೀರಗಲ್ಲು/ಮಾಸ್ತಿಗಲ್ಲು/ ವೀರಮಾಸ್ತಿಗಲ್ಲು, ಆತ್ಮಬಲಿ, ನಿಷಧಿಗಲ್ಲುಗಳು, ಹುಲಿ ಬೇಟೆ, ತುರುಗೋಳ್‌ಗಳ ತಃಖ್ತೆ

೫. ಛಾಯಾಚಿತ್ರಗಳು

೧. ಅಪ್ರಕಟಿತ ಶಾಸನಗಳು

೧

ಕಲ್ಲುಕೊಪ್ಪ ಶಾಸನ

ತೀರ್ಥಹಳ್ಳಿ ತಾಲ್ಲೂಕು

ದೇವಸ್ಥಾನದ ಮುಂಭಾಗದಲ್ಲಿರುವ ಶಾಸನ

ಶಕವರ್ಷ ೧೪೨೭, ಆರಗದ ವಿಠಣಒಡೆಯ

೧. ಸ್ವಸ್ತಿ ಶ್ರೀ ಜಯಾಭ್ಯುದಯದ ಶಕ ವರುಶ೧೩೪೨ ನೆಯ ಸಂದು ವರ್ತಮಾನ ವಿಕಾರಿ ಸಂವತ್ಸರದ ಪಾಲ್ಗುಣ

೨. ಶುದ್ಧ ಪುಣ್ಯಕಾಲದಲೂ ಮಂನಹಾರಾಜಾದಿರಾಜಾರಾಜಪರಮೇಶ್ವರ ವೀರ ಪ್ರತಾಪಧ್ಯೇಯ ರಾಯ ಮಹಾರಾ

೩. ಯರು ವಿಜಯನಗರದಲುಗುತ್ತಲಮೂಾಂನ್ಯ. . . . . . ಗಳನ್ನು ಪ್ರತಿಪಾಲಿಸುತ ಸುತಂ ಸುಖಸಂಖತಾವಿನೊದದಿಂ

೪. ಸಾಮ್ರಾಜ್ಯಂಗೆಯಿಉತ್ತಿಹಲ್ಲಿಆರಾಯರನಿರೂಪದಿಂ ವಿಠಪ್ಪವಡೇಯರುಆರಗದರಾಜ್ಯದಗುತ್ತವಮ್ ನಾ .

೫. . . . . .ಆರಗದ. .ಯ . .ಕ್ಷತ್ರಿಯ ನಾಡ ಬಲಗಡೆ ಬಲಪಹಿಕಡ ಒಂ

೬. ಮ . . . . . . ಮಂಣಹೆಗಡೆ ಬಯಚಂಣ ಹೆಗಡೆ ಒಳಗಾದ ಸಮಸ್ತ ನಾಡವರು ನಂಮ ಅಳಿಯಂದಿರು ಮಕ್ಕಳು

೭. . . . . . . ಸರ್ವೇಕಮತ್ಯವಾಗಿಯಜನಯಾಜನಅಧ್ಯಾಯಆಧ್ಯಾಪನದಾನಪ್ರತಿಗ್ರಹಸ್ತದುಂ ಮೌನಿಯತರು

೮. . . . . ಶ್ಯಾಮಗೌ .ಪಅ . . ಗುಂದಿಯ ಮಲ್ಲಿನಾಥ ಭಟ್ಟರ ಮತ್ಯಕಸಾರಕಗುತ್ತಿಗೆ .

೯. . . . . .ಸ .ಕ್ರಮವೆಂತೆದರೆ ನಂಮ. . ತ್ತಿಯ ನಾಡ ಒಳಗಣ ಣೆಗೇರಿಯ ಜಂನಗಳ ಗ್ರಾಮದ .

೧೦. . . . . . ಭೂಮಿ . . . . . ೨೫ಅಕ್ಷರದಲುಇಪತಯದುಖಂಡುಗ ಭೂಮಿಯ ನಿಮಗೆ ಸೂರ್ಯಪರಾಗ ಪುಣ್ಯಕಾಲ.

೧೧. ದಲುಸಹಿರಂಣ್ಯೊದಕದಾನದಾರಾಪೂರ್ವಕವಾಗಿದಾರೆಯನ್ನೇರೆದುಕೊಟ್ಟಿದಾಗಿಆಭೂಮಿಯ ಚತುಸ್ಸೀಮೆಯ . . ಮೂಡಲು . . .

೧೨. . . . . ಯ . . . . ಲು ತೆಂಕಲುಆಸಿ.ಗೆನೆಟ್ಟ ವಾಮನ ಮುದ್ರೆಯಕಲ್ಲಿಂದ ಬಡಗಲು ಪಡುವಲು . .

೧೩. . . . . . .ಭೂಮಿಂ . . . . . . ದಿದಂ ಮೂಡಲು ಬಡಗಲುಆಸಿ .ಗೆ ನೆಟ್ಟ ವಾಮನ ಮುದ್ರೆಯಕಲ್ಲಿಂದ ಬಡಗಲು ಪಡುವಣ

೧೪. . ..ಚತು ಸೀಮ. . . ನೆಟ್ಟಗದ್ದೆಬೆದ್ದಲು ಮಕ್ಕಿಮರಡುಕುಂಮರಿ. ಕೋಹು. . . . . ಹಲಸು ಮೆಣಸು ಮಾವು

೧೫. . . . . ನಿಧಿ ನಿಕ್ಷೇಪ ಜಲಪಾಷಣಅಕ್ಷಿಣಿ ಆಗಾಮಿಸಿದ್ಧ ಸಾದ್ಯಅಷ್ಟಭೋಗತೇಜಸ್ವಾಮ್ಯ . . .

೧೬. . . . . . ಭೂಮಿಯ. .ಸಿ . . ಕವಾಗಿ ನಂಮನಾಡು ಸರ್ವೆಕಮತ್ಯವಾಗಿ ಆ ಸಾತಂಣ ಗಳಿಗೆ ಸಹಿರಂಣ್ಯೋದಕ

೧೭. . . . . ವಾಗಿ ತಂಮಸ್ತ್ರೀಪುತ್ರ ಜ್ಞಾತಿಸಮಂತದಾಯಾದ್ಯ ಸಂಮತದಿಂದ ಸರ್ವಾನು ಮತಪುರ ಸ್ತ್ರರಾಗಿ

೨

ನೇರಳೆ ಶಾಸನ

ತೀರ್ಥಹಳ್ಳಿ ತಾಲೂಕು

ಹಾಡ್ಯದಲ್ಲಿರುವ ಶಾಸನ

ಶಕವರ್ಷ ೧೪೦೫, ಆರಗದ ವಿಠಣಒಡೆಯ

೧. ಶ್ರೀಗಣಾ . . . . . ಶ್ರೀ . . . . . ಸರಸ್ವತಾಯನಮಃ

೨. ನಿರ್ವಿಘ್ನಮಸ್ತು . . . . . .ಳಾ . . ಗವರಿವರ ಶಚೀವರಾಃದೇವಾಹ

೩. . . . . .ಜಗತಾಂಮುದಾ, ನಮಸ್ತುಂಗ

೪. . . . . .ಸ್ತಂಬಾಯ ಶಂಭ_

೫. . . . . . . ಬೊಂ ಮಣ ವೊಡೆಯರ ಮಕ್ಕಳು ವಿಠಂಣವೊಡೆಯರುಆರಗದರಾಜ್ಯವನ

೬. . . . . .ಜಯಾಭ್ಯುದಯ ಶಕ ವರ್ಷ೧೩೨೭ ಸಂದು . .

೭. ವರ್ತಮಾನತಾರಣ ಸಂ . . . . ದಲೂಶ್ರೀಮುದ್ರಾಧಿರಾಜ ರಾಜ ಪರಮೇಶ್ವರ

೮. ಬುಕ್ಕಂಣ ಮಹಾರಾಜರು ವಿಜಯನಗರಿಯ ಪಟ್ಟಣದಲೂ ವಿರೂಪಾಕ್ಷದೇವ .

೯. ಸಂನ್ನಿದಿಂರಲು ಸುಖಸಂಕತವಿ . . . . .ಗೈಯುತಿದ್ದಲಿಆರಾಯರ ನಿರೂಪದಿಂ

೧೦. . . . . ಬ್ರಹ್ಮರಾಜವರಕುಮಾರ ವಿಠಂಣವೊಡೆಯರುಆರಗರಾಜ್ಯ

೧೧. . . . . ಹದಿನೆಂಟುಕಂಪಣ—

೧೨. . . . . ಮದುವಂಕ ನಾಡ

೧೩. . . . . .ಆಭೂಮಿಯ . . .

೧೪. . . . . .ಪಡುವಣ . . .

೧೫. . . . ವಾಮನಮುದ್ರೆಯಕಲ್ಲು . . . . ನಿರುಪದಿಂ

೧೬. . . . ಮುಂತಾಗಿ ನಡಿಸಿದ ವಾಮನ ಮುದ್ರೆಯಕಲ್ಲು . . . ನೇರಳೆ ಗುಡ್ಡೆ

೧೭. ಯ ನೀರುವರಿ ಒಳಗಾಗಿ ಮೂಢ ಮುಂತಾಗಿ ನೆಟ್ಟ ವಾಮನ ಮುದ್ರೆಮಕಲ್ಲು . . ರಡು

೧೮. ಅತ್ತಿಗಾರುಗುಡ್ಡೇಯ ನೀರುವರಿ ಒಳಗಾದ ತೆಂಕಮುಂತಾಗಿ ನೆಟ್ಟ ವಾಮನಮುದ್ರೆಯ

೧೯. ಯರಡುಇಂತೀ ಚತುಸೀಮೆಯೊಳಗುಳ್ಳಗದ್ದೆ ಬೆದ್ದಲು ಮಕ್ಕಿಹಕ್ಕಲು ಕುಂಮರಿ

೨೦. ಕೋಹು ಕಾಡಾರಂಭ.ಹಲಸು ಮೆಣಸು ಮಾವು . . . . ಜಲ. .

೨೧. ಯ . . . . . ನಿಧಿನಿಕ್ಷೇಪ ಜಲಪಾಷಣಅಕ್ಷೀಣಿ ಆಗಾಮಿಸಿದ್ದಸಾಧ್ಯ ಅಷ್ಟ

೨೨. ಭೋಗತೇಜಸ್ವಾಮ್ಯ ಸುಂಕಕಾರುಕಗ್ರಾಮಗದ್ಯಾಣ ಪಂಚಗಾರುಕ

೨೩. ರ್ಜಿತವಾಗಿ ಸರ್ವಮಾಂನ್ಯವಾಗಿ ಸಾಯಿಭಟ್ಟರ ಮಕ್ಕಳು ವಿರೂಪಾಕ್ಷ ಭಟ್ಟರಿಗೆ

೨೪. . . . . ಸಮ್ಹಿರಂಣ್ಯೋದಕದಾನ

೨೫. ಧಾರಾಪೂರ್ವಕವಾಗಿಕೊಟ್ಟರು . . .

೨೬. ಕ್ಷರದಲ್ಲಿಎಂಟು ಹೊಂನನ್ನು ಸಾಫಲ್ಯವಾಗಿ ಪಾಲಿಸಿಕೊಂಡು ನಂಮ ಮದುವಂ

೨೭. ಕ ನಾಡ ಹಲುಬಾಗಿಯ ಸಮಸ್ತ ಗಉಡ ಪ್ರಜೆಗಳು ಸಾಯಿಭಟ್ಟರ ಮಕ್ಕಳು

೨೮. ವಿರೂಪಾಕ್ಷಭಟ್ಟರಿಗೆ ಸಂತಾನ ಪರಂಪರೆಯಾಗಿ ಆ ಚಂದ್ರಾರ್ಕಸ್ಥಾಯಿಯಾ

೨೯. ಗಿ ಸುಖದಿಂ ಬೋಗಿಸುವಂತಾಗಿ . . . . . ಜನ ಸಮಸ್ತ ನಾಡವರುತಂ

೩೦. ಮ ಸ್ವರೂಚಿಯಿಂದಒಡಂಬಟ್ಟುಕೊಟ್ಟಕ್ರಯದಾನ ಶಿಲಾಶಾಸನ ಯಿದಂ

೩೧. ಯಿಧರ್ಮಕ್ಕೆ ಸಾಕ್ಷಿಗಳು ಚಂದ್ರಸೂರ್ಯರು . . . . . . ನಾಡ

೩೨. . . . . ನಾಡ ಸೇನಭೋಮ ನಾಗಪ್ಪಗರ ಮಕ್ಕಳು ಕೋರಿಯಪ್ಪನ ಬರಹ . . .

೩೩. . . . . ಜನ ಸಮಸ್ತ ನಾಡವರುಒಪ್ಪಲಂಬುತೀರ್ಥದ ಶ್ರೀರಾಮದೇವ . . ಈ

೩೪. ಧರ್ಮವ ಪರಿಪಾಲಿಸಿದರಿಗೆ ವಾರಣಾಸಿಯಲಿ ವಿಶ್ವೇಶ್ವರದೇವರ ಸನ್ನಿಧಿಯಲು ಸಾವಿರ ಬ್ರಾಹ್ಮರಿಗಿ ಸಮಸ್ತ

೩೫. ಪುಣ್ಯಕಾಲದಲು ಸಾಲಂಕಾರದಕ್ಷಿಣೆ ಸಹಿತವಾಗಿಗೋದಾನವಕೊಟ್ಟ ಫಲವಹುದುಧರ್ಮಕ್ಕೆ ಅಳುಪಿ

೩೬. ದವರಿಗೆ ವಾರಣಾಸಿ ಗಯಾಕ್ಷೇತ್ರದಲ್ಲಿ ಸಹಸ್ರಕಪಿಲೆಯ ವಧಿಸಿದ ದೋಷಕ್ಕೆಹೋಹ

೩೭. ರೂ ಮಾತಾಪಿತ್ರವಧೆಯ ಮಾಡಿ . . . .

೩೮. ಸ್ವದತ್ತಂ ವಾ ಪರದತ್ತಂ ವಾಯೋ ಹರೇತಿ ವಸುಂದರಾ ಷಷ್ಠಿರ್ವ . . .

೩೯. ಸ್ರಾಣಿ ವಿಷ್ಟಾಯಂಜಾಯತೇಕ್ರಿಮಿಃದಾನಪಾಲನೋರ್ವ ಮಧ್ಯೆ.

೪೦. ನಾ ತ್ಸೇಯೋನೃಪಾಲನಂ . .ಸ್ವರ್ಗಮವಪ್ನೋತಿ ಪಾಲನಾ.ಚ್ಯುತಂ.

೪೧. .ತ್ತಂ ದಿಗುಣಂ . ಪುಣ್ಯಂ ಪರದತ್ತಾನಪಾಲನಂ.ರ್ವದತ್ತಾಪಹಾರೇಣ ಸ್ವದ..

೪೨. ಭವೇತು । ಯಿಸಿಲಾ ಶಾಸನಕ್ಕೆ ಮಂಗಳ ಮಹಾ ಶ್ರೀಶ್ರೀಶ್ರೀ.

೩

ಬಿಳುವಿನಕೊಪ್ಪ ಶಾಸನ


ನಂದಿನಾಗರಿ ಲಿಪಿ

ಕೊಪ್ಪ ತಾಲೂಕು

ಹಾಡ್ಯದಲ್ಲಿರುವ ಶಾಸನ

ಶಕವರ್ಷ ೧೪೯೭

೧ ರಿಂದ ೧೩ರವರೆಗೆ ಸವೆದಿದೆ.

೧೪. . . . .  . . . ಜೋ (ಜ್ಞಾ) ಗೆ ನ್ಮಟ ಹು . . . . ಏಕರಾ ಭೂಮಿ . . . ಟವಸಿಯ . . . . ಪರಿವರ್ತನ

೧೫. ಕೇಕ(ಲ) . ಸರಿಮಾಡಿ . ಡು (ರು) . . . . ವ ಕ ಚ ಟು (ಟ್ಬು)

೧೬. ಗಡಿಗೆ ದಾನ ಧಾರೆ ಪೂರ್ವಕವಾಗಿಶಂಕರ ಬಟ್ಟ (ಟ್ಟ) ಕೊಟಟು (ಟ್ಟು) . . . .

೧೭. ಸ . . . . ಸಾಕ್ಷಿಗಳು/ (ನು) ಹಣಸಗೆ ಚೀಲ (ರಿ) ದೆ . . . . ಮೆಣಸು

೧೮. . . . . ದಲೂರ ಮಲ್ಲಪ್ಪ ಹೆಗ್ಗಡೆ ಸಹರದ . ವಕಕ (ಕ) .(ಲ) .

೧೯. . . . . ರು . . ಭ ಪಾತು ಮತದಿವ . . . . ಕವವೆ . . ಸ್ಯ . . ಶ್ರೀಬ್ರಹ್ಮ

೨೦. ದೇವರು ಸಾಕ್ಷಿಗಲ ಉ (ರು/ಡ) ಫ . ಶ್ರೀ ಮಲ್ಲಿಕಾರ್ಜುನ ದೇವ . . . .

೨೧. . . . . .ಶತಕ . . . ಶ್ರೀ ಬ್ರಹ್ಮದೇವರು ಶ್ರೀ ಬ್ರಹ್ಮದೇವರು ಶ್ರೀ ಬ್ರಹ್ಮದೇವರು

೨೨. . . . . ಲ ಲ/(ಕ.ಕ) ಯೋರ್ಮಧ್ಯೇ . . . ತು ಪಾಲನ ಕತಾ . ತ್ಸ್ವರ್ಗ

೨೩. ಮವಾ(ಪ್ರಾ)ಪ್ನೋತಿ ಸಾಲ (ನಾದಚ್ಯುತಂ) . . . . . ಲರು (ಶು) ದ್ಧಕ ವಿಘಮಶ್ಚ

೨೪. ವಿಷಯಕಾಕಿ ಭ ಹಮ್ತಿ ಬ್ರಹ್ಮ . ಸುಪುತ್ರ . ಪೌತ್ರಕ . . . ಧರ್ಮಸೇತುನೃಪಾಣಾಂ

೨೫. ಕಾಲೇ ಕಾಲೇ ಪಾಲನೀಯೋ ಭವದ್ಭಿಃ ಸರ್ವಾನೇತಾನ್ ಭಾವಿನಃ ಪಾರ್ಥಿವೇಂದ್ರಾನ್

೨೬. ಭೂಯೋ ಭೂಯೋ ಯಾಚತೇ ರಾಮಚಂದ್ರಃ

೪

ಮಳಲಿಮಕ್ಕಿ ಶಾಸನ

ತೀರ್ಥಹಳ್ಳಿ ತಾಲೂಕು

ಬ್ರಹ್ಮಲಿಂಗ ದೇವಸ್ಥಾನದ ಪಕ್ಕದಲ್ಲಿದ್ದ ಶಾಸನ

ಶಕವರ್ಷ ೧೪೧೯, ಶ್ರೀ ದೇವರಾಯ

೧. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇತ್ರೈ .ಕ್ಯ

೨. ನಗರಾರಂಭ ಮೂಲಸ್ತಂಬಾಯ ಶಂಭವೇ . . . .

೩. ಶ್ರೀ ದೇವರಾಯ ಮಹಾರಾಯ. . . .

೪. ಯ ಸ್ಥಾಪನಾಚಾರ್ಯ . . . . . ಪ್ರತಿಷ್ಠಾಚಾರ್ಯ .

೫. . . . . . ಮಸಕಾ . . . . . .

೬. ರಾಜ್ಯೋದಯ ಶಕವರುಷ೧೩೪೧ ನೆಯರುದಿರೋದ್ಗಾರಿ ಸಂವತ್ಸ .

೭. ರದ ... ಜೇಷ್ಟಶುದ್ಧ ಬಿದಿಗೆ . . ವಾರದಂದುಗ .ಯ . . .

೮. . ಯ . . . ಳ ಮುಂದಿನ ತಂಮ ವೆಗ್ಗಡೆಯನು ಕಂನಂಗಿ ಆಂನ್ತು

೯. ಆದ್ಧಾನ . . .ತಂಗಿ ವೆಗ್ಗಡೆತಿಯು ಬೊಂಮವೆಗ್ಗಡೆ . . .

೧೦. ಯರು .ವ . . . . ಮುಂದಿನ ತಂಗಿದ ಬೊಂ

೧೧. ಮ ವೆಗ್ಗಡೆಯ ಬೊಂಮವೆಗ್ಗಡೆಯಆಕ್ಕ ಬೇಯಕ್ಕ ವೆಗ್ಗ

೧೨. ಡತಿಯರ . ಬೊಂವೆಗ್ಗಡೆಯರು ಮಾಡ್ಸಿದ ಲಿಂಗ ಪ್ರತಿ

೧೩. ಷ್ಟೆಯ ಮಾಡಿದೇವಾಲ್ಯವನುಕಟ್ಸಿ ಆ ಬ್ರಹ್ಮೇಶ್ವರ

೧೪. ದೇವರಿಗೆದೇವಾಸ ಮಣಲಿಯಲ್ಲಿ ನಾಕು . . . .

೧೫. . . . . ಬ್ಬಗಿಯಲಿ . . . . ಆಂನ್ತು

೧೬. ಆಯಿದುಹೊಂನ ಮಕ್ಕಿಯ ನುಣಿದು

೧೭. ಯಿ ಧರ್ಮವನೂ .. . ದೈವಕಾಯ್ಯದ

೧೮. ವನೂ ಕಂನಂಗಿಯ ಬೊಂಮೆಯಜಯ್ಯಂ ಬೋ

೧೯. ಮ ಯರ ಹೆಗ್ಗಡೆಯರುದಾರಾಪೂರ್ಬ

೨೦. ಕವಾಗಿ ಕೊಟ್ಟರು ಆ ಬ್ರಹ್ಮೇಶ್ವರ ಪುರ ಸರ್ವ

೨೧. ಮಾಂನ್ಯವಾಗಿ ಬ್ರಹ್ಮೇಶ್ವರದೇವರಿಗೆದಾರೆಯನ್ನೆರೆದುಕೊಟ್ಟು-

೨೨. ರ್ಮಕ್ಕೆ ಅಳುಪಿದವರಿಗೆ ವಾರಣಾಸಿಯಲಿ ಸಹಸ್ರ ಕಪಿಲೆಯ

೨೩. ನೂ ಬ್ರಾಹ್ಮರನೂಕೊಯಿದದೋಷಕ್ಕೆ ಹೋಹರು ಈಶಾಸ

೨೪. ನವ ಬರದ ನಾಡಸೇನಬೊವ ಸಿಂಗಣ್ಣನು . . .

೨೫. ಮಂಗಳ ಮಹಾ ಶ್ರೀಶ್ರೀಶ್ರೀ

೫

ಹರೂರುಮಕ್ಕಿ ಶಾಸನ

ಶೃಂಗೇರಿ ತಾಲ್ಲೂಕು

ಗದ್ದೆ ಬಯಲಿನಲ್ಲಿದ್ದ ಶಾಸನ

ಶಕವರ್ಷ ೧೪೦೮, ಶ್ರೀ ದೇವರಾಯ ಒಡೆಯ

೧. ಶ್ರೀಗಣಾಧಿಪತಯೇ ನಮಃ ನಮ ಸುಂಗ ಶಿರಶ್ಚುಂಬಿ ಚಂದ್ರ

೨. ಚಾಮರಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ

೩. ಸ್ವಸ್ತಿ ಶ್ರೀ ಶಕವರುಷ ೧೩೩೦ ನೆಯ. . . . . .

೪. .ಜ. . . . ಯ .ಪ್ರ. . ಬ . ಲು . ಶ್ರೀ ಮದ್ರಾರಾಜ

೫. ಧಿರಾಜರಾಜ ಪರಮೇಶ್ವರ ಶ್ರೀ ವೀರಪ್ರತಾಪ ಹರಿಹರ ಮಹಾ

೬. ರಾಯರಕುಮಾರದೇವರಾಯ ಒಡೆಯರು ಸುಕ ಸಂಕಥಾ ವಿನೋದ

೭. ದಿಂ ರಾಜ್ಯಂಗೆಯುತ್ತಲಿಹ ಪುಂಣ್ಯಕಾಲದಲುಆರಗದ ಹದಿ

೮. ನೆಂಟುಕಂಪಣದ ಒಳಗಣ ಕಿಕ್ಕುಂದನಾಡನುಲು ಬಾಗೆಯೊಳಗೆ

೯. ಮೆಣಸೆಯ ಬಕವೆಗ್ಗಡೆ ಭವಕಿ. . ಬೊಂಮಣ ವೆಗ್ಗಡೆಯ

೧೦. ಳ ಥ. . ಚತುಸೀಮೆಯ ಒಳಗಡೆಯ ಗಡಿಯ. . ಕಂ . ನಿ ಬೊಂಮಣ ಮಿ

೧೧. ನು ಕುಂಮರಿ ಕೋಹು .ಯಕಾ.ಗ ಅ .ಒಳಗಡೆ ಅ . . . ಯ

೧೨. ಕಾಲುಗದ್ದೆಯಲ್ಲಿ. . ಗದ್ದೆಬಯಲು. . .ಕ್ರಿ. . ಣ ಒಪ್ಪಗೊಡ ಬಡಗಣ

೧೩. ಯ.ಜಗಡಿಕೊ. . . . . ಬೆಂಕಿಕೂಡಿಗೆ. . ರಾಯ ಗಂ ಹ . ಡೆ.

೧೪. . ಯರ. . . ದೂಡ. . . ಯ್ಯ. . ಆರಾಯ. .ಡಕ ಬಲಗಡೆ ೦ಣ

೧೫. ಚಾಕದಂಬ ಗಣ.ತಂಗಿಯಬ್ಬೆ.ಗ್ಪದ್ಯಾಣ ಕುಯಿ . . . . .

೧೬. ಬಲಗಡೆಯ ಬಂ . . ನೊಳಗಾದ . .ಡದ ನಾಡ. ಮ . . ಶ್ರೀ

೧೭. ಪಾದಂಗಳು ತುಂಗಾತೀರದ ಮಲ್ಲಿಕಾರ್ಜುನದೇವರ ಸಂನ್ನಿಧಿಯಲಿ . . . . .ಕ್ರಯದಾನ ಮೂಲವಾಗಿ ಆ ನಾಡವರು ಸುವರ್ಣೊದಕದಾನದಾರಾ ಪೂರ್ಬಕವಾ

೧೮. ಗಿ ದಾರ್ಯನ್ನೆರೆದುಕೊಟೆ ಉ ಆ ಭೂಮಿಗೆ ಸಲ್ಲುವ ನೀರವರಿಯೊಳ ಗುಳ್ಳ

೧೯. ಮನೆ ನಿದಿ ನಿಕ್ಷೇಪ ಜಲಪಾಷಣಅಕ್ಷೀಣಿ ಆಗಾಮಿಸಿದ್ಧ ಸಾಧ್ಯ

೨೦. ಅಷ್ಟ ಭೋಗತೇಜ ಸ್ವಾಮ್ಯ ಸಹಿತವಾಗಿ ಸರ್ವಮಾಂನ್ಯವಾಗಿ

೨೧. ಆಚಂದ್ರಾರ್ಕಸ್ಥಾಯಿಯಾಗಿ ಸಖದಿಂ ಭೋಗಿಸುವಂತಾಗಿ ಆ ಬೊಂಮಣ್ಣ

೨೨. ಹೆಗಡೆಯರಕ್ರಯದಾನ ಪತ್ರ ಶಾಸನ ಯಿ ಧರ್ಮಕ್ಕೆ ಅಳುಪಿದವರಿಗೆ ವಾರಣಾಸಿ

೨೩. ಯಲೂ ಸಹಸ್ರ ಬ್ರಾಂಹ್ಮರನು ಕಪಿಲೆಯನು ವಧಿಸಿದ ದೋಶ ಯಿ ಧರ್ಮ

೨೪. ವನು ಪಾಲಿಸಿದವರಿಗೆ ವಾರಣಾಸಿಯಲೂ ಸಹಸ್ರ ಕವಿಲೆಯನು ಬಾಂಹ್ಮರಿಗೆ

೨೫. ದಾನವಕೊಟ್ಟ ಪಲ ಯಿಂತಪ್ಪುದಕ್ಕೆ ವೊಪ್ಪ ಆ ಮಲ್ಲಿದೇವರು, ಸ್ವದತ್ತಾಂ ಪರದತ್ತಾಂ

೨೬. ವಾಯೋ ಹರೇತಿ ವಸುಂಧರಾಂ ಸ್ರಷ್ಟಿರ್ವಷ ಸಹಸ್ರಾಣಿ ವಿಷ್ಠಾಯಾಂಜಾಯತೇ

೨೭. ಕ್ರಿಮೀಃದಾನಪಾಲನೊಯೋರ್ಮಧ್ಯೇದಾನಛ್ರೇಯೋನು ಪಾಲನಂ ದಾನಾ

೨೮. ತ್ಸರ್ಗ ಮವಾಪ್ನೋತಿ ಪಾಲನಾದಚ್ಚುತಂ ಪದಂ ॥ ಯಿಂತಪುದಕ್ಕೆ ಆ ನಾಡ

೨೯. ಸೇನಾಭೋವ ವಿಠಣನ ಬರಹ

ಶ್ರೀ ಶ್ರೀಶ್ರೀ

೬

ಹುಲಿಸರ ವೀರಗಲ್ಲು ಶಾಸನ

ತೀರ್ಥಹಳ್ಳಿ ತಾಲ್ಲೂಕು

ಕಾಡಿನಲ್ಲಿರುವ ಶಾಸನ

ಶಕವರ್ಷ ೧೩೦೨, ಸಾಂತರರ ಕಾಲ

ಒಂದನೆಯ ಪಟ್ಟಿ

೧. ನಮಸ್ತುಂಗ ಸಿರಶ್ಚುಂಬಿ ಚಂದ್ರಚಾಮರಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಬಾಯ ಶಂಭವೇ

೨. ಸ್ವಸ್ತಿ ಶ್ರೀ ಶಕ ವರುಷ೧೨೨೪ ನೆಯ ಸುಭಕೃತು ಸಂವತ್ಸರದಕಾರ್ತಿಕ ಸುದ್ಧ೧೫ ಮಂಗಳವಾರ

ಎರಡನೆಯ ಪಟ್ಟಿ

೩. ದಂದು ಶ್ರೀ ಮಂನು ಮಹಾಮಂಡಳೇಶ್ವರಂ ಆದಿಯರಾದಿತ್ಯಉಭಯ ಮಾರ್ತಂಡ ಸತ್ಯರತ್ನಾಕರಂ

೪. ಶರಣಾಗತ ವಜ್ರಪಂಜರಂ ಮಾಂಡಲಿಕ ಜಗದಳೆಯ ಹೊಂನ ಕೊಟ್ಟುಕುದುರೆಯಕಟ್ಟುವ

೫. ಮಾಂಡಳಿಕರ ಗಂಡ ಪಟ್ಟಿ ಪೊಂಬುರ್ಚಪುರ ವರಾಧೀಸ್ವರಂ ಶ್ರೀ ಬಿಲ್ಲೇಶ್ವರದೇವರ ದಿವ್ಯ ಶ್ರೀ ಪಾದಪ

೬. ದ್ಮಾರಾಧಕರುವಪ್ಪ ಬಲ್ಲವೆಗಡ ಕೊಳಗಿಯ ಬೊಂಮರ್ಸದೇವರ್ಸನವೊಂದು ಸೋಡಾ

ಮೂರನೆ ಪಟ್ಟಿ

೭. ಳ ದೇವರ್ಸ್ರಸಾಂತಳಿಗೆ ಸಾವಿರ ಹದಿನೆಂಟುಕಂಪಣಂ ಸುಖ ಸಂಕಥಾ ವಿನೋದದಿಂ

೮. ರಾಜ್ಯಂಗೆಯ್ಯುತ ಮಿರ್ದ್ದಲ್ಲಿಯಬರನಾಯಕನಕೂಡೆ ನಡೆದಲ್ಲಿ ಕಾಳಗ

ನಾಲ್ಕನೆಯ ಪಟ್ಟಿ

೯. ವಾದಲ್ಲಿ (ವ್ರಿ_ನುತಾರಿ..ರುನಾದನುರಿದು ಸಾವಿರ ಸೀಮಾ .. ತ್ರ

೧೦. ಸ (ಕ್ರ)_ ನುವಣಿಯಲಿಹ . . . ಟ್ಟಿದಗಂಡ . ಪ್ಪಾಜಗದಳೆಯಸ.

ಐದನೆಯ ಪಟ್ಟಿ

೧೧. . . ಬೊಂಮೆಯನು ವೀರದೊಳು ವಿತರಣ. .ರ . ವದೊಳು ಕಾದಿತಳು

೧೨. ತಿರಿದುಏರಿದಕುದುರೆಯ ಮೀಟಿದ ಕಾಲಳನ ಕೊತ್ತಿಕು

೧೩. ತ್ತಿಸಿಕೊಂಡು. ಸ್ಥಳ ಸೂರೆಗೊಂಡು ಸುರಲೋಕ ಪ್ರಾಪ್ತನಾದನು

ಆರನೆಯ ಪಟ್ಟಿ

೧೪. ಮಂಗಳ ಮಹಾ ಶ್ರೀ . . . ಮಾಡಿ. . ನು ಮಚ್ಚರಿ

೧೫. ಸುವ ಕಲ್ಲುಕುಟಿಗಗಂಟಲು ಗಾಳ ಮ . . ಣಸೂಲ ಬೀರೋಜಶ್ರೀ

•••

೨. ಗ್ರಂಥಋಣ

* ಅಂಬಳಿಕೆ ಹಿರಿಯಣ್ಣ, **ವೈಷ್ಣವ ಒಕ್ಕಲಿಗರ ಸಂಸ್ಕೃತಿ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯.

* ಈರಣ್ಣ ಕೆ.ಪಿ., **ಶಾಸನೋಕ್ತ ವಿಶ್ವಕರ್ಮದ ವೀರಜೀವನ,** ಶ್ರೀ ಭುವನೇಶ್ವರಿ ಸಾಹಿತ್ಯ ಪ್ರಕಾಶನ ಶಿರಹಟ್ಟಿ, ೧೯೯೩.

* ಕಲಬುರ್ಗಿ ಎಂ.ಎಂ.(ಸಂ), **ಕರ್ನಾಟಕದ ಕೈಫಿಯತ್ತುಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.

* ಕಲಬುರ್ಗಿ ಎಂ.ಎಂ., **ಶಾಸನಗಳಲ್ಲಿ ಶಿವಶರಣರು,** ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಗುಲಬರ್ಗಾ, ೨೦೧೨.

* ಕಲಬುರ್ಗಿ ಎಂ.ಎಂ., **ಕನ್ನಡ ಸಂಶೋಧನಾಶಾಸ್ತ್ರ,** ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೯.

* ಕಲ್ಕುಳಿ ವಿಠಲ ಹೆಗ್ಗಡೆ, **ಮಂಗನ ಬ್ಯಾಟೆ,** ಲಂಕೇಶ್ ಪ್ರಕಾಶನ, ಬೆಂಗಳೂರು, ೨೦೧೩.

* ಕಾಶೀ ವಿಶ್ವನಾಥಶೆಟ್ಟಿ, **ಶೃಂಗೇರಿ ತಾಲ್ಲೂಕು ದರ್ಶನ,** ೧೯೮೭.

* ಕುಮಾರಸ್ವಾಮಿ ಕೆ.ಎಸ್., **ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫.

* ಕೂಡ್ಲೂರು ವೆಂಕಟಪ್ಪ, **ಸ್ಥಳನಾಮ ವೀರರು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೭.

* ಕೊಟ್ರೇಶ ಎಂ., **ಹರಪನಹಳ್ಳಿ ತಾಲ್ಲೂಕಿನ ರಕ್ಷಣಾ ಸ್ಮಾರಕಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

* ಗುಂಡಾ ಜೋಯಿಸ್, **ಕೆಳದಿ ಅರಸರು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೦.

* ಗೋಪಾಲರಾವ್ ಹೆಚ್.ಎಸ್., **ಶಾಸನ ಸಂಕಲನ,** ಅಳಿಲು ಸೇವಾ ಸಂಸ್ಥೆ, ಮೈಸೂರು, ೨೦೦೧.

* ಗೋಪಾಲ ಬಿ.ಆರ್., **ಕನ್ನಡ ಶಾಸನಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

* ಚಂದ್ರಕಲಾ ಎಸ್.ಎನ್. **ಕೊಪ್ಪ ತಾಲ್ಲೂಕು ದರ್ಶನ,** ೨೦೦೨.

* ಚಂದ್ರಶೇಖರ್ ನಾರಾಣಾಪುರ, **ಕರ್ನಾಟಕದ ವೀರಶೈವ ಮಠಗಳು,** ಗೆಳೆಯ ಪ್ರಕಾಶನ ಚಿಕ್ಕಮಗಳೂರು, ೨೦೦೨.

* ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ೧೯೭೯.

* ಚಿದಾನಂದಮೂರ್ತಿ ಎಂ., **ಮಾಸ್ತಿಗಲ್ಲು ವೀರಗಲ್ಲು,** ಕನ್ನಡ ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, ೧೯೮೪.

* ಚಿದಾನಂದಮೂರ್ತಿ ಎಂ., **ಸಂಪ್ರಬಂಧ ಸಂಚಯ,** ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೧೩.

* ಚಿನ್ನಪ್ಪಗೌಡ ಕೆ.(ಸಂ), **ಗೌಡ ಜನಾಂಗ ಇತಿಹಾಸ ಮತ್ತು ಸಂಸ್ಕೃತಿ,** ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘ, ಮಂಗಳೂರು, ೨೦೦೩.

* ಚೆನ್ನಕ್ಕ ಎಲಿಗಾರ, **ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦.

* ಚೆನ್ನಬಸವಯ್ಯ ಹಿರೇಮಠ, **ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪.

* ಜಯರಾಮ್ ವಿ., **ಪ್ರಾಚೀನ ಕನ್ನಡ ಶಾಸನಗಳ ಸಾಹಿತ್ಯಿಕ ಅಧ್ಯಯನ,** ಚಂದನ ಪ್ರಕಾಶನ, ಬೆಂಗಳೂರು, ೨೦೦೮.

* ಜಯದೇವ ಹು.ಕಾ., **ಶಾಸನ ಮತ್ತು ಗದ್ಯ,** ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೧೨.

* ಜಯದೇವಪ್ಪ ಜೈನಕೇರಿ, **ಕರ್ನಾಟಕ ಶಿಲ್ಪ ಸಂಸ್ಕೃತಿ,** ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ಬೆಂಗಳೂರು, ೨೦೦೯.

* ಜಯಚಂದ್ರ ಎಂ.ಎಂ., **ಸಮಣಸುತ್ತಂ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

* ಜ್ಯೋಯಿಸ್ ಗುಂಡಾ (ಪ್ರ.ಸಂ.), **ಕೆಳದಿ ಕಾಲದ ಐತಿಹಾಸಿಕ ದಾಖಲೆಗಳು, ಸಂಪುಟ ೨,** ಕರ್ನಾಟಕ ರಾಜ್ಯ ಪತ್ರಗ್ರಾರ, ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೬.
* ಜ್ಯೋಯಿಸ್ ಗುಂಡಾ (ಪ್ರ.ಸಂ.), ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬.
* ತಿಪ್ಪೇರುದ್ರಸ್ವಾಮಿ ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೭೪.
* ದಯಾನಂದ ಪೈ., **ಗುಡಿಜನರ ಜೀವನಾಡಿ,** ದಯಾನಂದ ಪೈ ಇತಿಹಾಸ ಸಂಶೋಧನ ಕೇಂದ್ರ, ಮೈಸೂರು, ೧೯೯೪.
* ದೇವರಕೊಂಡಾರೆಡ್ಡಿ(ಸಂ), **ಹಂಪಿ ಸಂಪುಟ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.
* ದೇವರಕೊಂಡಾರೆಡ್ಡಿ, ಜಯಪ್ರಕಾಶ ಮಾವಿನಕುಳಿ (ಸಂ)., **ತುಳುನಾಡಿನ ಜೈನ ಶಾಸನಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.
* ದೇಸಾಯಿ ಪಿ.ಬಿ., **ಎ ಹಿಸ್ಟರಿ ಆಫ್ ಕರ್ನಾಟಕ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦.
* ನರಸಿಂಹಮೂರ್ತಿ ಎ.ವಿ., **ಕರ್ನಾಟಕ ನಾಣ್ಯ ಪರಂಪರೆ,** ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೩.
* ನರಸಿಂಹಮೂರ್ತಿ ಎ.ವಿ., **ಶೃಂಗೇರಿ ದಿ ಸೇಕ್ರೆಡ್ ಅಬೋಟ್ ಆಫ್ ದಿ ಶಂಕರಚಾರ್ಯ ಆಫ್ ದಿ ಸೌತ್,** ಅಭಿಜ್ಞಾನ ಪ್ರಕಾಶನ, ಬೆಂಗಳೂರು, ೨೦೦೫.
* ನಾಗರಾಜ ರಾವ್ ಹೆಚ್.ಎಂ., **ಶೃಂಗೇರಿ ಪ್ರಾಚೀನತೆ,** ಮಾನವಿಕ ಕರ್ನಾಟಕ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೧.
* ನಾಗರಾಜಯ್ಯ ಹಂಪ, **ಯಾಪನೀಯ ಸಂಘ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.
* ನಾಗೇಗೌಡ ಎಚ್.ಎಲ್., **ಪ್ರವಾಸಿ ಕಂಡ ಇಂಡಿಯಾ,** ಸಂಪುಟಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೮
* ನಾರಾಯಣಾಚಾರ್ಯ ಕೆ.ಎಸ್., **ಭಾರತೀಯ ಇತಿಹಾಸ ಪುರಾಣಗಳು,** ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ, ೨೦೦೫.

* ϕëತ⁄Lತತ⁄– u   p -⌈ -+ **ಕನ್ನಡ ಶಾಸನಶಿಲ್ಪ,** ⍉ಸಾeಾಂಗ+ ಕನ್ನಡ¨ ⌈ಶ್ವ⌈ದ್ಯಾಲಯ⁄+ ಹಂಪಿ+ ೧೯೯೯.

* ϕëತ⁄Lತತ⁄– u⌐ p -⌈ -+ **ಪೆಣ್ಬುಯ್ಯಲ್,** ⍉ಸಾeಾಂಗ+ ಕನ್ನಡ¨ ⌈ಶ್ವ⌈ದ್ಯಾಲಯ⁄+ ಹಂಪಿ+ ೨೦೧೦-

* ϕಂಚತ⁄/ಖಿ ಆೞ್-ಎಸ್-+ **ಕರ್ನಾಟಕ ಅರಸುಮನೆತನಗಳು,** ಧಾe ತಾಡ-

* ϕಾರ್ಥ⌐ಸಾeಥಿ ಬಿ-(⍉ಸಂ)+ **ಚಿಕ್ಕಮಗಳೂರು ಜಿಲ್ಲಾ ದರ್ಶನ,** ಜಿಲ್ಲಾ ಶತಮಾನೋತ್ಸವ ಸಮಿತಿ, ೧೯೮೬-

* ⍉ಭಾಕeï¨ ಎಂ-ಎನ್-+ **ದೇವಾಲಯ ವಾಸ್ತು,** ⍉ಸಾeಾಂಗ+ ಕನ್ನಡ¨ ⌈ಶ್ವ⌈ದ್ಯಾಲಯ⁄+ ಹಂಪಿ+ ೨೦೧೧-

* ಬಸತಿಾಜ ಕಲ್⁄⁄p + **ಮಹಾಸತಿ ಆಚರಣೆ : ಒಂದು ಅಧ್ಯಯನ,** ⍉ಸಾeಾಂಗ+ ಬೆಂಗಳ– e⁄ ⌈ಶ್ವ⌈ದ್ಯಾಲಯ⁄+ ಬೆಂಗಳ– e⁄+ ೧೯೮೫-

* ಬಸತಿಾಜ ಸಬeದ+ **ಜನಪದ ದೈವಗಳು,** ⍉ಸಾeಾಂಗ+ ಕನ್ನಡ¨ ⌈ಶ್ವ⌈ದ್ಯಾಲಯ⁄+ ಹಂಪಿ+ ೨೦೦೯.

* ಬಿ-ಜಿ-ಎಲ್- ಸ್ವಾ⌈/+ **ಶಾಸನಗಳಲ್ಲಿ ಗಿಡಮರಗಳು**+ ⍉ಸಾeಾಂಗ¨ ಬೆಂಗಳ– e⁄ ⌈ಶ್ವ⌈ದ್ಯಾಲಯ⁄+ ಬೆಂಗಳ– e⁄+ ೧೯೭೬.

* ಬೆಟಗೇರಿ ಕೃಷ್ಣಶಿತ⁄⌐+ **ಕರ್ನಾಟಕ ಜನಜೀವನ,** ಸತಾಜ ϕ⁄ಸ್ತಕಾಲಯ⁄+ ಧಾe ತಾಡ+ ೧೯೭೧-

* ಭಟ್‌ಸ– ರಿ ಕೆ-ಜಿ-(ಸಂ)+ **ಕರ್ನಾಟಕ ಶಾಸನ ಸಂಶೋಧನೆ,** ⍉ಸಾeಾಂಗ+ ಕನ್ನಡ¨ ⌈ಶ್ವ⌈ದ್ಯಾಲಯ⁄+ ಹಂಪಿ+ ೨೦೦೯-

* ತಂಜ⁄ನಾಥ¨ ಸಿ-ಯ⁄⁄-+ **ಶಾಸನಗಳು ಮತ್ತು ಕರ್ಣಾಟಕ ಸಂಸ್ಕೃತಿ,** ಚಿತ್ಕಲ ⍉ಕಾಶನ+ ಕ⁄ϕರ+ ೨೦೧೨-

* ತಂಜ⁄ನಾಥ¨ ಬೇ⌈ನಕಟ್ಟೆ+ **ಕರ್ನಾಟಕ ಜನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ,** ⍉ಸಾeಾಂಗ+ ಕನ್ನಡ¨ ⌈ಶ್ವ⌈ದ್ಯಾಲಯ⁄+ ಹಂಪಿ+ ೨೦೦೯-

* ತೆ⁄eತುಂp ತ⁄ಲ್ಲಾರಿ+ **ಕನ್ನಡ ನಾಡಿನ ಶಾಸನ ಕವಿಗಳು,** ತ⁄ನೆ–eಹë¨ ಗಾಣೇಕಾೞ್+ ⍉ü ಭಾ ಗ್ರಂಥತಾಲೆ ಧಾe ತಾಡ+ ೧೯೭೪.

* ತೆ–eಹನ್‌ಕೃಷ್ಣ¨ eೈ ಕೆ-+ **ಪ್ರಭುತ್ವ ಮತ್ತು ಜನತೆ,** ⍉ಸಾeಾಂಗ+ ಕನ್ನಡ¨ ⌈ಶ್ವ⌈ದ್ಯಾಲಯ⁄+ ಹಂಪಿ+ ೨೦೦೪-

* ರಘುನಾಥ ಭಟ್ ಹೆಚ್.ಎಸ್., **ಕರ್ನಾಟಕ ಶಾಸನ ಕಲೆ,** ಭಾರತಿ ಪ್ರಕಾಶನ, ಮೈಸೂರು, ೧೯೭೭.

* ರಮೇಶ್ ಸ.ಚಿ., **ಕರ್ನಾಟಕದ ಜನಪದ ಆಚರಣೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

* ರಮೇಶ ನಾಯಕ, **ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

* ರಮೇಶ ಕೆ.ವಿ., **ತುಳುನಾಡಿನ ಇತಿಹಾಸ,** ಗೀತಾ ಬುಕ್ ಹೌಸ್, ಮೈಸೂರು, ೧೯೬೮.

* ರಮೇಶ ಕೆ.ವಿ., **ತುಳುನಾಡಿನ ಶಾಸನಗಳು,** ಗೀತಾ ಬುಕ್ ಹೌಸ್, ಮೈಸೂರು, ೧೯೭೮.

* ರಹಮತ್ ತರೀಕೆರೆ, **ಕರ್ನಾಟಕದ ನಾಥಪಂಥ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

* ರಹಮತ್ ತರೀಕೆರೆ, **ಕನ್ನಡ ಸಂಶೋಧನೆ ತಾತ್ವಿಕ ವಿಚಾರ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ರಾಜಣ್ಣ ಟಿ.ಡಿ., **ಕನ್ನಡ ಶಾಸನ ಮತ್ತು ಸಾಹಿತ್ಯದಲ್ಲಿ ಶಾಪ,** ಭಂಡಾರ ಪ್ರಕಾಶನ ಮಸ್ಕಿ, ೨೦೧೦.

* ರಾಜಾರಾಮ ಹೆಗಡೆ, ಅಶೋಕ ಶೆಟ್ಟರ್ (ಸಂ), **ಮಲೆಕರ್ನಾಟಕದ ಅರಸು ಮನೆತನಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

* ರಾಬರ್ಟ್ ಸೀವೆಲ್ (ಅನು), ಸದಾನಂದ ಕನವಳ್ಳಿ, **ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

* ರಾವ್ ಎಸ್.ಆರ್., **ಸಮುದ್ರದಲ್ಲಿ ಮುಳುಗಿದ ಶ್ರೀಕೃಷ್ಣನ ದ್ವಾರಕೆ,** ಅಂಕಿತ ಪುಸ್ತಕ, ಬೆಂಗಳೂರು, ೨೦೧೦.

* ರಾಜಾರಾಮ ಹೆಗಡೆ (ಸಂ), **ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

* ರಾಮಭಟ್ಟ ಬಿ.ಎಸ್., **ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿ,** ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ, ೨೦೦೧.

* ರಾಮಚಂದ್ರರಾವ್ ಎಸ್.ಕೆ., **ಮೂರ್ತಿಶಿಲ್ಪ : ನೆಲೆ–ಹಿನ್ನೆಲೆ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫.

* ಲಕ್ಷ್ಮಣ್ ತೆಲಗಾವಿ, **ದೊಡ್ಡೇರಿ ಕದನ, ಚರಿತ್ರೆ ಮತ್ತು ಜಾನಪದಗಳ ನೆಲೆಯಲ್ಲಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

* ಲಕ್ಷ್ಮಣ್ ತೆಲಗಾವಿ ಮತ್ತು ಶ್ರೀನಿವಾಸ್ ಎಂ.ಎ.(ಸಂ), **ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು,** ಚಿತ್ರದುರ್ಗ ೧೯೭೬
* ಲೀಲಾ ಶಾಂತಕುಮಾರಿ ಎಸ್., **ಹಿಸ್ಟರಿ ಆಫ್ ದಿ ಅಗ್ರಹಾರಾಸ್,** (ಕ್ರಿ.ಶ. ೪೦೦–೧೩೦೦), ನ್ಯೂಎರಾ ಪ್ರಕಾಶನ, ಮದ್ರಾಸ್, ೧೯೮೬.
* ವಸಂತ ಮಾಧವ ಕೆ.ಜಿ., **ಕರಾವಳಿ ಕರ್ನಾಟಕದ ರಾಜಕೀಯ ಇತಿಹಾಸ ಅಧ್ಯಯನ ಮತ್ತು ಸಂಶೋಧನೆ,** ನಮ್ಮಿ ಅನಂತ, ಮಂಗಳೂರು, ೧೯೯೮.
* ವಸಂತಲಕ್ಷ್ಮೀ ಕೆ., **ಕರ್ನಾಟಕದ ಶೈವ ಶಿಲ್ಪಗಳು,** ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ, ಧಾರವಾಡ, ೨೦೦೭/೨೦೦೮.
* ವಾಸುದೇವನ್ ಸಿ.ಎಸ್., **ಹಂಪಿ ಪರಿಸರದ ಕೆರೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧.
* ವಿಠಲರಾವ್ ಟಿ. ಗಾಯಕ್ವಾಡ್(ಅನು), **ಭಾರತೀಯ ಸ್ತ್ರೀ ಜೀವನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.
* ವಿಠಲರಾವ್ ಟಿ. ಗಾಯಕ್ವಾಡ್, **ಲಜ್ಜಾಗೌರಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.
* ವಿವೇಕ ರೈ ಬಿ.ಎ.(ಸಂ), **ಪ್ರವಾಸಿ ಕಂಡ ವಿಜಯನಗರ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೫.
* ವಿರೂಪಾಕ್ಷ ಕುಲಕರ್ಣಿ (ಅನು), **ಕಾಪಾಲಿಕರು ಮತ್ತು ಕಾಳಮುಖರು,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೫.
* ವೀರೇಶ ಬಡಿಗೇರ, **ಸಂಸ್ಕೃತಿ ಸಂಕಥನ,** ಮಯ ಪ್ರಕಾಶನ, ಕಮಲಾಪುರ, ೨೦೦೯.
* ವೀರೇಶ ಬಡಿಗೇರ, **ಕನ್ನಡ ಮೋಡಿಲಿಪಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧
* ವೀರೇಶ ಬಡಿಗೇರ, **ಶಾಸನಗಳಲ್ಲಿ ಆಯಾಗಾರಿಕೆ ಸಂಸ್ಕೃತಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.
* ಶಾರದಾ ಕೆ., **ಕರ್ನಾಟಕದಲ್ಲಿ ಜೈನಧರ್ಮ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.
* ಶಾಸ್ತ್ರೀ ಎ.ಕೆ.(ಸಂ), **ದಿ ರೆಕಾರ್ಡ್ ಆಫ್** ದಿ **ಶೃಂಗೇರಿ ಮಠ ರಿಲೇಟಿಂಗ್ ಟು ಕೆಳದಿ,** ಮ್ಯೂಸಿಯಂ ಮತ್ತು ರೀಸರ್ಚ್ ಬ್ಯೂರೋ ಕೆಳದಿ, ೨೦೦೪.

* ಶಾಸ್ತ್ರೀ ಎ.ಕೆ.(ಸಂ), **ಶೃಂಗೇರಿ ಮಠದ ಆಯ್ದ ಚಾರಿತ್ರಿಕ ದಾಖಲೆಗಳು,** ಬೆಂಗಳೂರು, ೨೦೦೩.
* ಶಾಸ್ತ್ರೀ ಎ.ಕೆ., **ಶೃಂಗೇರಿ ಧರ್ಮಸಂಸ್ಥಾನ,** ಶ್ರೀಮಠ, ಶೃಂಗೇರಿ, ೧೯೮೩.
* ಶಾಸ್ತ್ರೀ ಎ.ಕೆ., **ದಿ ರೆಕಾರ್ಡ್ ಆಫ್ ದಿ ಶೃಂಗೇರಿ ಮಠ ರಿಲೇಟಿಂಗ್ ಟು ಕೆಳದಿ ಮ್ಯೂಸಿಯಮ್ ಅಂಡ್ ಹಿಸ್ಟಾರಿಕಲ್ ರೀಸರ್ಚ್ ಬ್ಯೂರೋ ಕೆಳದಿ,** ೨೦೦೧.
* ಶಾಸ್ತ್ರಿ ಎ.ಕೆ., **ಹಿಸ್ಟರಿ ಆಫ್ ಶೃಂಗೇರಿ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೮.
* ಶಿವತಾರಕ್, ಕೆ.ಬಿ, **ಕರ್ನಾಟಕದ ಪುರಾತತ್ವ ನೆಲೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧
* ಶೆಟ್ಟರ್ ಎಸ್., **ಪರ್‌ಸ್ಯೂಯಿಂಗ್ ಡೆತ್ – ಡೈರೆಕ್ಟರ್,** ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಆರ್ಟ್ ಹಿಸ್ಟರಿ, ಧಾರವಾಡ, ೧೯೮೨.
* ಶೆಟ್ಟರ್ ಎಸ್., ಸದಾನಂದ ಕನವಳ್ಳಿ(ಅನು), **ಸಾವಿಗೆ ಆಹ್ವಾನ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪.
* ಶೇಷಶಾಸ್ತ್ರಿ ಆರ್., **ಕರ್ನಾಟಕದ ವೀರಗಲ್ಲುಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.
* ಶೇಠೆ ಎನ್., **ಕರ್ನಾಟಕದಲ್ಲಿ ಸತಿಪದ್ಧತಿ,** ವೀರಶೈವ ಅಧ್ಯಯನ ಅಕಾಡೆಮಿ, ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ, ೧೯೯೧.
* ಸಾಲತ್ತೊರೆ ಬಿ.ಎ., **ಮಿಡೀವಲ್ ಜೈನಿಸಮ್,** ಬಾಂಬೆ, ೧೯೩೮.
* ಸಿ.ಪಿ.ಕೆ., **ಶಾಸನಶಾಸ್ತ್ರ ಪ್ರವೇಶ,** ಚೇತನ್ ಬುಕ್‌ಹೌಸ್, ಮೈಸೂರು, ೨೦೦೧.
* ಹನುಮಾಕ್ಷಿ ಗೋಗಿ, **ಅನುಶಾಸನ,** ಮಹಿಳಾ ಸಾಹಿತ್ಯಿಕ ನವನಗರ, ಧಾರವಾಡ, ಕ್ರಿ.ಶ. ೨೦೦೨.
* ಹಳಕಟ್ಟಿ ಫ.ಗು., **ಕೆಳದಿ ಸಂಸ್ಥಾನದ ರಾಯರ ವಂಶಾವಳಿ,** ವಿಜಾಪುರ, ೧೯೪೦.
* ಹಿರೇಮಠ ಆರ್.ಸಿ., ಕಲಬುರ್ಗಿ ಎಂ.ಎಂ., **ಕನ್ನಡ ಶಾಸನ ಸಂಪದ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೪.
* ಹಿರೇಮಠ ಬಿ.ಆರ್., **ಶಾಸನಗಳಲ್ಲಿ ಕರ್ನಾಟಕದ ವರ್ತಕರು,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೬.

* ಹಿರೇಮಠ ಎಸ್.ಎಸ್., **ಸಮಾಜ ಸಂಸ್ಕೃತಿ ಸಂಘರ್ಷ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

ಸಂಪುಟಗಳು

* **ಕರ್ನಾಟಕ ಚರಿತ್ರೆ ಸಂಪುಟಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,
* **ಕನ್ನಡ ನಿಘಂಟು ಸಂಪುಟಗಳು,** ಪರಿಷ್ಕೃತ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೦.
* **ಆನ್ಯುಯಲ್ ರಿಪೋರ್ಟ್ಸ್ ಆಫ್ ಮೈಸೂರು ಆರ್ಕ್ಯಾಲಜಿಕಲ್ ಡಿಪಾರ್ಟ್‌ಮೆಂಟ್,** ೧೯೦೮, ೧೯೧೮, ಕ್ರಿ.ಶ. ೧೯೨೮, ೧೯೩೪.
* **ಇತಿಹಾಸ ದರ್ಶನ ಸಂಪುಟಗಳು,** ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು
* **ಎಪಿಗ್ರಾಫಿಯಾ ಕರ್ನಾಟಿಕ (ಪರಿಷ್ಕೃತ) ಸಂಪುಟಗಳು ೧–೧೫.**
* **ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, ಸಂ. V.**
* **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧, ಬಳ್ಳಾರಿ ಜಿಲ್ಲೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.
* ಗಾಯ್ ಜಿ.ಎಸ್.(ಸಂ), **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, (ಸಂಪುಟ ೧೮),** ಆರ್ಕ್ಯಾಲಜಿಕಲ್ ಸರ್ವೆ ಆಫ್ ಇಂಡಿಯಾ, ನವದೆಹಲಿ, ೧೯೭೫.
* ಗೋಪಾಲ್ ವಿ.ಆರ್.(ಸಂ), **ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, (ಸಂಪುಟ ೫, ೬),** ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫.
* ಗೋಪಾಲ್ ಬಾ.ರಾ. ಮತ್ತು ಇತರರು(ಸಂ), **ಎಪಿಗ್ರಾಫಿಯ ಕರ್ನಾಟಿಕ (ಪರಿಷ್ಕೃತ), (ಸಂಪುಟ ೯),** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೯೦.
* **ಷೇಕ್‌ಅಲಿ ಬಿ., (ಪ್ರಸಂ.),** ಕರ್ನಾಟಕ ಚರಿತ್ರೆ ಸಂಪುಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.
* **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಸಂಪುಟ VII. VIII. IX.**

ನಿಯತಕಾಲಿಕೆಗಳು

* **ಪ್ರಬುದ್ಧ ಕರ್ನಾಟಕ,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
* **ಶಾಸನ ಅಧ್ಯಯನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* **ಸಾಧನೆ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
* **ಮಹಿಳಾ ಅಧ್ಯಯನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* **ಕರ್ನಾಟಕ ರಾಜ್ಯ ಗೆಜೆಟಿಯರ್,** ಶಿವಮೊಗ್ಗ.
* **ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ,** ಬೆಂಗಳೂರು.
* ಸರ್ಕಾರ್ ಡಿ.ಸಿ., **ಇಂಡಿಯನ್ ಎಪಿಗ್ರಾಫಿಕಲ್ ಗ್ಲಾಸರಿ,** ನ್ಯೂಡೆಲ್ಲಿ, ೧೯೬೬.
* **ಜರ್ನಲ್ ಆಫ್ ಕರ್ನಾಟಕ ಯುನಿವರ್ಸಿಟಿ,** ಧಾರವಾಡ.

•••

೩. ಕ್ಷೇತ್ರಕಾರ್ಯದಲ್ಲಿ ದೊರೆತ ವೀರಗಲ್ಲು/ಮಾಸ್ತಿಗಲ್ಲು/ವೀರಮಾಸ್ತಿಗಲ್ಲು, ಆತ್ಮಬಲಿ, ನಿಷಿಧಿಗಲ್ಲುಗಳು, ಹುಲಿ ಬೇಟೆ, ತುರುಗೋಳ್‌ಗಳ ವಿವರ

೧. **ಅಗಸರ ಕೊಪ್ಪ - ಒಕ್ಕೈ ವೀರಮಾಸ್ತಿ**

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ ದೂರದಲ್ಲಿದೆ. ೩ ಅಡಿ ಎತ್ತರ, ೨ ಹಂತಗಳನ್ನು ಹೊಂದಿದೆ.

೨. **ಆರಗ ಆತ್ಮಬಲಿ, ಎರಡು ವೀರಗಲ್ಲು, ೪ ಮಾಸ್ತಿಗಲ್ಲು**

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ ದೂರದಲ್ಲಿದೆ.

೩. **ಕಬಸೆ - ಲಿಪಿ ಸಹಿತ ವೀರಗಲ್ಲು ೪ ಒಕ್ಕೈವೀರಮಾಸ್ತಿಕಲ್ಲುಗಳು**

ತೀರ್ಥಹಳ್ಳಿಯಿಂದ ೨೮ ಕಿ.ಮೀ ದೂರದಲ್ಲಿದೆ. ೪ ಅಡಿ ಎತ್ತರ ೨ ಅಡಿ ಅಗಲವಿದ್ದು ೨ ಹಂತಗಳನ್ನು ಹೊಂದಿದೆ.

೪. **ಕಣಿವೆ: ನಿಷಿಧಿಕಲ್ಲು ಲಿಪಿಸಹಿತ**

ತೀರ್ಥಹಳ್ಳಿಯಿಂದ ೨೮ ಕಿ.ಮೀ ದೂರದಲ್ಲಿದ್ದು ೫ ಅಡಿ ಎತ್ತರ, ೩ ಅಡಿ ಅಗಲವುಳ್ಳದ್ದಾಗಿದೆ.

೫. **ಕೆಸ್ತೂರು :** ೭ ಮಾಸ್ತಿಕಲ್ಲು ತೀರ್ಥಹಳ್ಳಿಯಿಂದ ೧೦ ಕಿ.ಮೀ. ದೂರದಲ್ಲಿದೆ.

೬ ಇಕ್ಕೈ ಮಾಸ್ತಿಕಲ್ಲುಗಳು, ೩ ಅಡಿ ಎತ್ತರ

೧ ಮುಕ್ಕೈ ಮಾಸ್ತಿಕಲ್ಲು, ೩ ಅಡಿ ಎತ್ತರ

೬. **ಕೋಟೆ ಹೊಸಕೊಪ್ಪ, ೨ ವೀರಮಾಸ್ತಿ, ೧ ತುರುಗೋಳ್**

ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ ದೂರದಲ್ಲಿದೆ. ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೫ ಹಂತಗಳನ್ನು ಹೊಂದಿದೆ.

೭. **ಕೋಣಂದೂರು: ವೀರ ಮಾಸ್ತಿಗಲ್ಲು**

ತೀರ್ಥಹಳ್ಳಿಯಿಂದ ೧೮ ಕಿ.ಮೀ. ದೂರದಲ್ಲಿದ್ದು ಮಕ್ಕಿಬೈಲು ಶಾಲೆಯ ಹತ್ತಿರವಿದೆ. ಮೂರು ಅಡಿ ಎತ್ತರ, ೧೧/೨ ಅಡಿ ಅಗಲವಿದೆ. ವೀರ ಮತ್ತು ಸತಿಯ ಶಿಲ್ಪಗಳಿವೆ.

೮. **ಕೊರನಕೂಡಿಗೆ - ೧ ವೀರಮಾಸ್ತಿ**

ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ ದೂರದಲ್ಲಿದೆ. ೭ ಅಡಿ ಎತ್ತರ, ೩ ಅಡಿ ಅಗಲವಿದ್ದು

೯. **ಕೊಡಕೊಣೆ - ೧ ವೀರಮಾಸ್ತಿ, ೧ ವೀರಗಲ್ಲು.**

ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ ದೂರದಲ್ಲಿದೆ.

ವೀರಮಾಸ್ತಿ - ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೫ ಹಂತಗಳನ್ನು ಹೊಂದಿದೆ.

ವೀರಗಲ್ಲು - ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ

೧೦. **ಕೊಪ್ಪ ಪಟ್ಟಣ :** ೫ ಒಕ್ಕೈ ವೀರಮಾಸ್ತಿಕಲ್ಲು ಮತ್ತು ಹುಲಿಬೇಟೆ ವೀರಗಲ್ಲು

೧೧. **ಕೊಗ್ರೆ - ವೀರ ಮಾಸ್ತಿ**

ಕೊಪ್ಪ ಪಟ್ಟಣದಿಂದ ೩೨ ಕಿ.ಮೀ. ದೂರದಲ್ಲಿದೆ. ೫ ಅಡಿ ಎತ್ತರ, ೩ ಅಡಿ ಅಗಲ, ೩ ಹಂತಗಳನ್ನು ಹೊಂದಿದೆ.

೧೨. **ಗಂಡಘಟ್ಟ ಎರಡು ಒಕ್ಕೈ ವೀರಮಾಸ್ತಿ**

ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ ದೂರದಲ್ಲಿದೆ. ೫ ಅಡಿ ಎತ್ತರ, ೩ ಅಡಿ ಅಗಲವಿದ್ದು ೫ ಹಂತಗಳನ್ನು ಹೊಂದಿದೆ.

೧೩. **ಗಳ್ಮಡಿ :** ವೀರಮಾಸ್ತಿಕಲ್ಲು - ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ೪ ಅಡಿ ಎತ್ತರ, ೨ ಹಂತಗಳನ್ನು ಹೊಂದಿದೆ.

೧೪. **ಗನವಳ್ಳಿ - ಐದು ಒಕ್ಕೈ ಮಾಸ್ತಿಕಲ್ಲು.**

ತೀರ್ಥಹಳ್ಳಿ ತಾಲ್ಲೂಕು ಕೊಪ್ಪದಿಂದ ೨೦ ಕಿ.ಮೀ. ದೂರದಲ್ಲಿದೆ ಹಾಗೂ ಸಾಲಾಗಿ ಮಾಸ್ತಿಕಲ್ಲುಗಳನ್ನು ನಿಲ್ಲಿಸಲಾಗಿದೆ. ೫ ಅಡಿ ಎತ್ತರ ೨೧/೨ ಅಡಿ ಅಗಲವುಳ್ಳದಾಗಿದ್ದು ಎರಡು ಹಂತಗಳನ್ನು ಒಳಗೊಂಡಿವೆ.

೧೫. **ಚಿಕ್ಕನಕೂಡಿಗೆ - ಮಾಸ್ತಿ ವಿಗ್ರಹ**

ಕೊಪ್ಪದಿಂದ ೭ ಕಿ.ಮೀ ದೂರದಲ್ಲಿದೆ. ೩ ಅಡಿ ಎತ್ತರದ ವಿಗ್ರಹ.

೧೬. **ಚೇಪುಗೋಡು:** ವೀರಮಾಸ್ತಿ

ಕೊಪ್ಪ ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ.ದಲ್ಲಿದ್ದು ಇಲ್ಲಿನ ವೀರಮಾಸ್ತಿಯು ಮೂರು ಹಂತಗಳನ್ನು ಹೊಂದಿದ್ದು ೫ ಅಡಿ ಎತ್ತರ ೨ ಅಡಿ ಅಗಲವುಳ್ಳದಾಗಿದೆ.

೧೭. **ಜಿಗಳಗೋಡು:-** ವೀರಗಲ್ಲು (ಹುಲಿಬೇಟೆ)

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ ದೂರದಲ್ಲಿದೆ. ಇಲ್ಲಿ ಹುಲಿಬೇಟೆಯ ವೀರಗಲ್ಲು ೨ ಹಂತಗಳಿಂದ ಕೂಡಿದೆ. ಎರಡನೇ ಹಂತದಲ್ಲಿ ವೀರನು ಹುಲಿಯ

ಜೊತೆಗೆ ಹೋರಾಡುವ ದೃಶ್ಯಾವಳಿ ಇದೆ. ಮೊದಲನೇ ಹಂತದಲ್ಲಿ ಶಿವಲಿಂಗವಿದ್ದು ಅದನ್ನು ಪೂಜಿಸುತ್ತಿರುವ ಯತಿಯು ಕೈಯಲ್ಲಿ ಕಮಂಡಲ ಹಿಡಿದಿರುವನು. ವೀರನು ಪಕ್ಕದಲ್ಲಿ ಕೈಮುಗಿದು ನಿಂತಿದ್ದಾನೆ.

೧೮. ಶ್ರೀ ಜೆ.ಸಿ.ಬಿ.ಎಂ. ಕಾಲೇಜು ಆವರಣ. ಶೃಂಗೇರಿ – ವೀರಗಲ್ಲು

ವೀರಗಲ್ಲು ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೫ ಹಂತಗಳನ್ನು ಹೊಂದಿದೆ.

೧೯. ತಲಗೋಡು, ವೀರಮಾಸ್ತಿ

ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ ದೂರದಲ್ಲಿದೆ. ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೫ ಹಂತಗಳನ್ನು ಹೊಂದಿದೆ.

೨೦. ತಿರಳೆ ಬೈಲು - ವೀರಮಾಸ್ತಿ ಮತ್ತು ಇಕ್ಕೈ ಮಾಸ್ತಿಕಲ್ಲು

ತೀರ್ಥಹಳ್ಳಿಯಿಂದ ೪ ಕಿ.ಮೀ. ದೂರದಲ್ಲಿದೆ. ೫ ಅಡಿ ಎತ್ತರ, ೩ ಅಡಿ ಅಗಲವಿದ್ದು ೩ ಹಂತಗಳನ್ನು ಹೊಂದಿದೆ.

೨೧. ದೋಣೂರು : ಮಾಸ್ತಿಕಲ್ಲು - ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ ದೂರದಲ್ಲಿದೆ. ೮ ಅಡಿ ಎತ್ತರ, ೫ ಹಂತಗಳನ್ನು ಹೊಂದಿದೆ.

೨೨. ನಾಗಲಪುರ: ಮಾಸ್ತಿಕಲ್ಲು - ಕೊಪ್ಪ ಪಟ್ಟಣದಿಂದ ೭ ಕಿ.ಮೀ ದೂರದಲ್ಲಿದೆ. ೫ ಅಡಿ ಎತ್ತರ, ೫ ಹಂತಗಳನ್ನು ಹೊಂದಿದೆ.

೨೩. ನಾರ್ವೆ: ಕೊಪ್ಪ ಪಟ್ಟಣದಿಂದ ೭ ಕಿ. ಮೀ ದೂರದಲ್ಲಿದೆ.

ಆತ್ಮಬಲಿ ವಿಗ್ರಹ ೩ ಅಡಿ ಎತ್ತರವಿದ್ದು ೨ ಹಂತಗಳನ್ನು ಹೊಂದಿದೆ. (ಲಿಪಿಸಹಿತ) ವೀರಗಲ್ಲು ೨ ಅಡಿ ಎತ್ತರವಿದ್ದು ೨ ಹಂತಗಳನ್ನು ಹೊಂದಿದೆ. ವೀರನ ವಿಗ್ರಹ ೨ ಅಡಿ ಎತ್ತರವಿದೆ. ಒಕ್ಕೈ ವೀರಮಾಸ್ತಿ ೪ ಅಡಿ ಎತ್ತರ.

೨೪. ನೆಮ್ಮಾರು: ವೀರಗಲ್ಲು, ಒಕ್ಕೈ ವೀರಗಲ್ಲು, ಇಕ್ಕೈ ವೀರಗಲ್ಲು - ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ ದೂರದಲ್ಲಿದೆ. ವೀರಗಲ್ಲು - ೩ ಅಡಿ ಎತ್ತರ, ೩ ಹಂತಗಳನ್ನು ಹೊಂದಿದೆ.

ಒಕ್ಕೈ ವೀರಮಾಸ್ತಿ : ೫ ಅಡಿ ಎತ್ತರ, ೨ ಹಂತಗಳನ್ನು ಹೊಂದಿದೆ. ಇಕ್ಕೈ ವೀರಮಾಸ್ತಿ - ೫ ಅಡಿ ಎತ್ತರ, ೨ ಹಂತಗಳನ್ನು ಹೊಂದಿದೆ.

೨೫. ಬಳಗಟ್ಟೆ: ೭ ಮಾಸ್ತಿಕಲ್ಲುಗಳು.

ತೀರ್ಥಹಳ್ಳಿ ತಾಲ್ಲೂಕು ೮ ಕಿ.ಮೀ. ದೂರಲ್ಲಿದ್ದು ಇಲ್ಲಿನ ದೇವರಬನದಲ್ಲಿ ೭ ಮಾಸ್ತಿ ಕಲ್ಲನ್ನು ಸಾಲಾಗಿ ನಿಲ್ಲಿಸಲಾಗಿದ್ದು ಊರಿನವರ ಐತಿಹ್ಯದ ಪ್ರಕಾರ ಯಡಿಯೂರು ಹೆಗ್ಗಡೆ ಎಂಬ ರಾಜ ೭ ಪತ್ನಿಯರ ಮಾಸ್ತಿಕಲ್ಲುಗಳು ಎಂಬ ನಂಬಿಕೆ ಇದೆ. ಎಲ್ಲಾ ವಿಗ್ರಹಗಳು ಎರಡರಿಂದ ಮೂರು ಅಡಿ ಎತ್ತರ ಇದ್ದು ೧೧/೪ ಅಡಿ ಅಗಲವುಳ್ಳದ್ದಾಗಿವೆ.

೨೬. **ಭಂಡಿಗಡಿ - ೫ ಒಕ್ಕೈ ವೀರಮಾಸ್ತಿ**

ಕೊಪ್ಪ ಪಟ್ಟಣದಿಂದ ೫ ಕಿ.ಮೀ ದೂರದಲ್ಲಿದೆ. ಎಲ್ಲವೂ ೫ ಅಡಿ ಎತ್ತರ ಇವೆ.

೨೭. **ಬೆಜ್ಜವಳ್ಳಿ : ವೀರಮಾಸ್ತಿ**

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ ದೂರದಲ್ಲಿದೆ. ೪ ಅಡಿ ಎತ್ತರ, ೩ ಅಡಿ ಅಗಲವಿದ್ದು ೩ ಹಂತಗಳನ್ನು ಹೊಂದಿದೆ.

೨೮. **ಬೊಬ್ಬಿ ವೀರಗಲ್ಲು**

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ೪ ಅಡಿ ಎತ್ತರ, ೨ ಅಡಿ ಅಗಲವಿದ್ದು ೩ ಹಂತಗಳನ್ನು ಹೊಂದಿದೆ.

೨೯. **ಬೋಳೂರು - ವೀರಮಾಸ್ತಿ**

ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ ದೂರದಲ್ಲಿದೆ. ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ.

೩೦. **ಮಂಡಗದ್ದೆ; ಎರಡು ವೀರಮಾಸ್ತಿ, ಒಂದು ಮಾಸ್ತಿಗಲ್ಲು**

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೩೦ ಕಿ.ಮೀ. ದೂರದಲ್ಲಿದೆ.

ಒಂದನೇ ವೀರಮಾಸ್ತಿ - ೩ ಅಡಿ ಎತ್ತರ, ೧.೫ ಅಡಿ ಅಗಲ,

ಎರಡನೇ ವೀರಮಾಸ್ತಿ - ೩ ಅಡಿ ಎತ್ತರ, ೧.೫ ಅಡಿ ಅಗಲ,

ಮಾಸ್ತಿಕಲ್ಲು - ೨ ಅಡಿ ಎತ್ತರದ ಶಿಲ್ಪ.

೩೧. **ಮಾಸ್ತಿಕೋಟೆ:** ಒಕ್ಕೈ ವೀರಮಾಸ್ತಿ - ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ ದೂರದಲ್ಲಿದೆ. ೨ ಅಡಿ ಎತ್ತರ, ೨ ಹಂತಗಳನ್ನು ಹೊಂದಿದೆ.

೩೨. **ಮೀಗಾ : ವೀರಮಾಸ್ತಿ, ವೀರಗಲ್ಲು**

ಶೃಂಗೇರಿ ತಾಲೂಕು ಕೇಂದ್ರದಿಂದ ೧೩ ಕಿ.ಮೀ ದೂರದಲ್ಲಿದೆ. ವೀರಮಾಸ್ತಿ ಅಡಿ ಎತ್ತರ ೩ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ.

ವೀರಗಲ್ಲು - ೪ ಅಡಿ ಎತ್ತರ, ೨ ಅಡಿ ಅಗಲ, ೪ ಹಂತಗಳಿವೆ.

೩೩. **ಮುನ್ನೂರು, ತುರುಗೋಳ್ ವೀರಗಲ್ಲು**

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ ದೂರದಲ್ಲಿದೆ. ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ.

೩೪. **ಮೂರಳ್ಳಿ:** ವೀರಗಲ್ಲು

ಕೊಪ್ಪದಿಂದ ೨೫ ಕಿ.ಮೀ ದೂರದಲ್ಲಿದೆ. ನಾಲ್ಕು ಅಡಿ ಎತ್ತರ, ೨ ಅಡಿ ಅಗಲವಿದ್ದು ನಾಲ್ಕು ಹಂತಗಳನ್ನು ಹೊಂದಿದೆ.

೩೫. ಶಿರೂರು : ಒಕ್ಕೈ ವೀರಮಾಸ್ತಿ

ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೭ ಕಿ.ಮೀ ದೂರದಲ್ಲಿದೆ. ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ.

೩೬. ಸಿಂಹಾದ್ರಿ : ಒಕ್ಕೈವೀರಮಾಸ್ತಿ

ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ೭ ಅಡಿ ಎತ್ತರ, ೩ ಅಡಿ ಅಗಲವಿದ್ದು ೫ ಹಂತಗಳನ್ನು ಹೊಂದಿದೆ.

೩೭. ಸೂರ್ಯ ದೇವಸ್ಥಾನ : ವೀರಗಲ್ಲು, ಆತ್ಮಬಲಿ

ಕೊಪ್ಪ ನಗರದಿಂದ ೬ ಕಿ.ಮೀ. ದೂರದಲ್ಲಿದ್ದು ಇಲ್ಲಿನ ವೀರಗಲ್ಲು ೬ ಅಡಿ ಎತ್ತರ, ೨ ೪ ಅಡಿ ಅಗಲವಿದ್ದು ನಾಲ್ಕು ಹಂತಗಳಿಂದ ಕೂಡಿದೆ. ಆತ್ಮಬಲಿ ವಿಗ್ರಹ - ಮೂರು ಅಡಿ ಎತ್ತರವಿದ್ದು ಲಿಪಿಸಹಿತ ಶಾಸನವಾಗಿದೆ.

೩೮. ಹರೂರು : ವೀರಗಲ್ಲು

ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ ದೂರದಲ್ಲಿದೆ. ೫ ಅಡಿ ಎತ್ತರ, ೩ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ.

೩೯. ಹಲ್ಲುಸಾಲೆ : ಲಿಪಿಸಹಿತ ಎರಡು ವೀರಗಲ್ಲು

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದ್ದು ಅಲ್ಲಿನ ಈಶ್ವರ ದೇವಸ್ಥಾನದ ಮುಂಭಾಗದಲ್ಲಿ ನೆಡಲಾಗಿದ್ದು ೭ ಅಡಿ ಎತ್ತರ ೩ ಅಡಿ ಅಗಲವುಳ್ಳದ್ದಾಗಿದ್ದು ಎಲ್ಲಾ ಸಾಲಿನಲ್ಲಿಯೂ ಶಾಸನಪಾಠವಿದ್ದು ಯುದ್ಧ ವರ್ಣನೆಯ ಸುಂದರ ಕಲಾಕೃತಿಯಿಂದ ರಚಿಸಲ್ಪಟ್ಟಿದೆ.

೪೦. ಹಾದಿಗಲ್ಲು : ಲಿಪಿಸಹಿತ ನಿಷಿಧಿಕಲ್ಲು

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ ದೂರದಲ್ಲಿದ್ದು ಕಾಡಿನ ಮಧ್ಯೆ ೭ ಅಡಿ ಎತ್ತರ ೩ ಅಡಿ ಅಗಲದ ನಿಷಿಧಿಕಲ್ಲಿದ್ದು ಸಮಾಧಿ ಮರಣದ ವಿವರಣೆ ಮತ್ತು ಶಿಲ್ಪವನ್ನು ಹೊಂದಿದೆ.

೪೧. ಹಾಲಮುತ್ತೂರು : ಒಕ್ಕೈ ವೀರಮಾಸ್ತಿ

ಕೊಪ್ಪ ಪಟ್ಟಣದಿಂದ ೧೮ ಕಿ.ಮೀ ದೂರದಲ್ಲಿದೆ. ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೨ ಹಂತಗಳನ್ನು ಹೊಂದಿದೆ. ಲಿಪಿಸಹಿತ ವೀರಗಲ್ಲು - ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ.

೪೩. ಹೀರೆಕಲ್ಲಹಳ್ಳಿ : ಲಿಪಿಸಹಿತ ಎರಡು ವೀರಗಲ್ಲು

ತೀರ್ಥಹಳ್ಳಿ ತಾಲ್ಲೂಕು ಕೇಂದ್ರ ೨೪ ಕಿ.ಮೀ. ದೂರದಲ್ಲಿದ್ದು ಗ್ರಾಮ ದೇವಾಲಯದ ಮುಂಭಾಗದಲ್ಲಿ ನಿಲ್ಲಿಸಲಾಗಿದ್ದು ೭ ಅಡಿ ಎತ್ತರ ೩ ಅಡಿ ಅಗಲವುಳ್ಳದಾಗಿದ್ದು ಎಲ್ಲಾ

ಸಾಲಿನಲ್ಲಿಯೂ ಶಾಸನಪಾಠವಿದ್ದು ಸಾಕಷ್ಟು ತ್ರುಟಿತವಾಗಿದೆ. ಅಲಂಕಾರವಾದ ಶಿಲ್ಪಾಕೃತಿಯಿಂದ ಕೆತ್ತಲಾಗಿದೆ.

೪೪. **ಹೆದ್ದೂರು : ಲಿಪಿಸಹಿತ ಜೋಡಿವೀರಗಲ್ಲು**

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಮೊದಲನೆಯ ವೀರಗಲ್ಲು - ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ. ಎರಡನೇ ವೀರಗಲ್ಲು - ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ.

೪೫. **ಹೆಗ್ಗರಸು: ವೀರಮಾಸ್ತಿ ಮತ್ತು ಮಾಸ್ತಿಕಲ್ಲು** – ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ ದೂರದಲ್ಲಿದೆ. ವೀರಮಾಸ್ತಿಕಲ್ಲು - ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ. ಮಾಸ್ತಿಕಲ್ಲು - ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ.

೪೬. **ಹುಲಿಸರ ಎರಡು ವೀರಗಲ್ಲು ೧ ನಿಷಿಧಿಕಲ್ಲು - ಮೊದಲನೆಯ ವೀರಗಲ್ಲು**

ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೩ ಹಂತಗಳನ್ನು ಹೊಂದಿದೆ.

ಎರಡನೇ ವೀರಗಲ್ಲು - ೮ ಅಡಿ ಎತ್ತರ, ೩ ಅಡಿ ಅಗಲವಿದ್ದು ೬ ಹಂತಗಳನ್ನು ಹೊಂದಿದೆ. ನಿಷಿಧಿ ಕಲ್ಲು - ೫ ಅಡಿ ಎತ್ತರ, ೩ ಅಡಿ ಅಗಲವಿದ್ದು ೪ ಹಂತಗಳನ್ನು ಹೊಂದಿದೆ.

೪೯. **ಹುದ್ದೆ** - ವೀರಮಾಸ್ತಿ ಶೃಂಗೇರಿ ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ ದೂರದಲ್ಲಿದೆ. ೫ ಅಡಿ ಎತ್ತರ, ೨.೫ ಅಡಿ ಅಗಲವಿದ್ದು ೫ ಹಂತಗಳನ್ನು ಹೊಂದಿದೆ.

•••

೪. ಕ್ಷೇತ್ರಕಾರ್ಯದಲ್ಲಿ ದೊರೆತ ವೀರಗಲ್ಲು/ಮಾಸ್ತಿಗಲ್ಲು/ವೀರಮಾಸ್ತಿಗಲ್ಲು, ಆತ್ಮಬಲಿ, ನಿಷಿಧಿಗಲ್ಲುಗಳು, ಹುಲಿ ಬೇಟೆ, ತುರುಗೋಳ್‌ಗಳ ತಃಖ್ತೆ

ಕ್ರ.ಸಂ.	ಸ್ಥಳ	ತಾಲ್ಲೂಕು	ಕಲ್ಲು	ವೈಶಿಷ್ಟ್ಯತೆ	ಆರಾಧನೆ	ಅಂದಾಜು ಕಾಲ
೧.	ಅಗಸರಕೊಪ್ಪ	ತೀರ್ಥಹಳ್ಳಿ	ಒಕ್ಕೈ ವೀರಮಾಸ್ತಿ	೫ ಬೆರಳುಗಳಿಗೂ ಉಂಗುರಗಳನ್ನು ಧರಿಸಿರುವುದು ವಿಶೇಷ.	ಇದೆ	ಹೊಯ್ಸಳರ ಕಾಲ
೨.	ಆರಗ	ತೀರ್ಥಹಳ್ಳಿ	ಒಂದು ಆತ್ಮಬಲಿ ಎರಡು ವೀರಗಲ್ಲು ಲಿಪಿ ಸಹಿತ, ನಾಲ್ಕು ಮಾಸ್ತಿಗಲ್ಲು.	ಯುದ್ಧದ ಚಿತ್ರಾವಳಿ, ಯುದ್ಧದಲ್ಲಿ ಆನೆಗಳನ್ನು ಬಳಸಿದ್ದು, ವೀರನ ರುಂಡವನ್ನು ಸ್ತ್ರೀಯೊಬ್ಬಳು ಕೈಯಲ್ಲಿ ಹಿಡಿದಿರುವುದು.	ಇಲ್ಲ	ವಿಜಯನಗರ ಕಾಲ (ಆರಗ ಒಡೆಯರು)
೩.	ಕಬಸೆ	ತೀರ್ಥಹಳ್ಳಿ	ವೀರಗಲ್ಲು ಲಿಪಿಸಹಿತ ನಾಲ್ಕು ಒಕ್ಕೈ ವೀರಮಾಸ್ತಿ.	ಯುದ್ಧ ದೃಶ್ಯಾವಳಿಗಳು	ಇಲ್ಲ	ವಿಜಯನಗರ ಕಾಲ
೪.	ಕಣಿವೆ	ತೀರ್ಥಹಳ್ಳಿ	ಮೊದಲನೆ ಸಮಾಧಿಕಲ್ಲು ಎರಡನೆ ಸಮಾಧಿಕಲ್ಲು	ಮೇಲ್ಭಾಗದಲ್ಲಿ ಶಿಲ್ಪಗಳು, ಕೆಳಭಾಗದಲ್ಲಿ ಶಾಸನವಿರುವುದು.	ಇದೆ	ಕ್ರಿ.ಶ. ೧೧೯೦–೯೧ ಹೊಯ್ಸಳರ ಕಾಲ
೫.	ಕೆಸ್ತೂರು	ತೀರ್ಥಹಳ್ಳಿ	ಆರು ಇಕ್ಕೈ ಮಾಸ್ತಿಕಲ್ಲುಗಳು ಒಂದು ಮುಕ್ಕೈ ಮಾಸ್ತಿಗಲ್ಲು.	ಕಲ್ಲುಗಳು ಸಾಲಾಗಿ ನಿಲ್ಲಿಸಿರುವುದು	ಇದೆ ಇದೆ	ವಿಜಯನಗರ ಕಾಲ
೬.	ಕೋಣಂದೂರು	ತೀರ್ಥಹಳ್ಳಿ	ವೀರಮಾಸ್ತಿ	ಹೋರಾಟದ ದೃಶ್ಯಗಳು	ಇಲ್ಲ	ವಿಜಯನಗರ ಕಾಲ
೭.	ಕೋಟೆ ಹೊಸಕೊಪ್ಪ	ಶೃಂಗೇರಿ	೨ ವೀರಮಾಸ್ತಿ ಹಾಗೂ ಒಂದು ತುರುಗೋಳ್ ವೀರಗಲ್ಲು	ಸಾಲಾಗಿ ಸಾಗುತ್ತಿರುವ ಹಸುಗಳ ಚಿತ್ರ	ಇದೆ	ವಿಜಯನಗರ ಕಾಲ

೮.	ಕೋರನಕೊಡಿಗೆ	ಶೃಂಗೇರಿ	ವೀರಮಾಸ್ತಿಗಲ್ಲು	ಯುದ್ಧದ ದೃಶ್ಯಾವಳಿಗಳು	ಇಲ್ಲ	ವಿಜಯನಗರ ಕಾಲ
೯.	ಕೊಡಕಣೆ	ಶೃಂಗೇರಿ	ವೀರಮಾಸ್ತಿಗಲ್ಲು ವೀರಗಲ್ಲುಗಲ್ಲು	ಯುದ್ಧದ ಚಿತ್ರಗಳು	ಇದೆ ಇದೆ	ವಿಜಯನಗರ ಕಾಲ
೧೦.	ಕೊಪ್ಪ ಪಟ್ಟಣ	ಕೊಪ್ಪ	೫ ಒಕ್ಕೈ ವೀರಮಾಸ್ತಿಗಲ್ಲುಗಳು ಒಂದು ಹುಲಿ ಬೇಟೆ ವೀರಗಲ್ಲು	ಕಲ್ಲುಗಳು ಸಾಲಾಗಿ ನಿಲ್ಲಿಸಿರುವುದು ಉಬ್ಬು ಶಿಲ್ಪ ಚಿತ್ರಗಳು	ಇಲ್ಲ ಇಲ್ಲ	–
೧೧.	ಕೊಗ್ರೆ	ಕೊಪ್ಪ	ವೀರಮಾಸ್ತಿಗಲ್ಲು	ವೀರ ಮತ್ತು ಸತಿ ಸರ್ವಾಲಂಕಾರ ಭೂಷಿತರಾಗಿದ್ದು ಸತಿಯು ಕೇದಿಗೆ ಹೂವನ್ನು ಮುಡಿದಿರುವಳು.	ಇದೆ	ವಿಜಯನಗರ ಕಾಲ
೧೨.	ಗಂಡಘಟ್ಟ	ಶೃಂಗೇರಿ	ಒಕ್ಕೈ ವೀರಮಾಸ್ತಿಗಲ್ಲು	ಕಂಬದಿಂದ ಹೊರಚಾಚಿದ ತೋಳು	ಇದೆ	ವಿಜಯನಗರ ಕಾಲ
೧೩.	ಗಳ್ಮುಡಿ	ಶೃಂಗೇರಿ	ವೀರಮಾಸ್ತಿಗಲ್ಲು	ಅಲಂಕೃತವಾದ ಪಲ್ಲಕ್ಕಿ	ಇದೆ	–
೧೪.	ಗನವಳ್ಳಿ	ತೀರ್ಥಹಳ್ಳಿ	೫ ಒಕ್ಕೈ ಮಾಸ್ತಿಕಲ್ಲು	ಸಾಲಾಗಿ ನಿಲ್ಲಿಸಿರುವುದು	ಇಲ್ಲ	
೧೫.	ಚಿಕ್ಕನಕೊಡಿಗೆ	ಕೊಪ್ಪ	ಮಾಸ್ತಿವಿಗ್ರಹ	ಉದ್ದವಾದ ಜಡೆಯು ಮುಂಗಾಲಿನ ವರೆಗೂ ಇಳಿಬಿದ್ದಿದೆ.	ಇದೆ	–
೧೬.	ಚೇಪುಗೋಡು	ಕೊಪ್ಪ	ವೀರಮಾಸ್ತಿಗಲ್ಲು	ಶಿವಲಿಂಗದ ಮೇಲೆ ಆನೆಗಳು ಪೂರ್ಣ ಕುಂಭದಿಂದ ಜಲಪ್ರೇಕ್ಷಣೆ ಮಾಡುತ್ತಿರುವುದು.	ಇಲ್ಲ	–
೧೭.	ಜಿಗಳಗೋಡು	ತೀರ್ಥಹಳ್ಳಿ	ಹುಲಿಬೇಟೆ ವೀರಗಲ್ಲು	ಹುಲಿಯ ಜೊತೆ ವೀರ ಹೋರಾಡುತ್ತಿರುವುದು	ಇದೆ	–
೧೮.	ಜೆ.ಸಿ.ಬಿ.ಎಂ. ಕಾಲೇಜು, ಆವರಣ	ಶೃಂಗೇರಿ	ವೀರಗಲ್ಲು	ಯುದ್ಧದ ದೃಶ್ಯಾವಳಿಗಳು	ಇಲ್ಲ	ವಿಜಯನಗರ ಕಾಲ
೧೯.	ತಲಗೋಡು	ಶೃಂಗೇರಿ	ವೀರಮಾಸ್ತಿಗಲ್ಲು	ತೋರುಬೆರಳು ಮತ್ತು ಹೆಬ್ಬೆರಳಿನ ಮಧ್ಯೆ ನಿಂಬೆಹಣ್ಣನ್ನು ಸತಿ ಹಿಡಿದಿರುವುದು.	ಇದೆ	–

೨೦.	ತಿರಳೆಬೈಲು	ತೀರ್ಥಹಳ್ಳಿ	ವೀರಮಾಸ್ತಿಗಲ್ಲು, ಇಕ್ಕೈ ಮಾಸ್ತಿಕಲ್ಲು	ಕಂಬದಿಂದ ಎರಡು ತೋಳುಗಳು ಹೊರ ಚಾಚಿರುವುದು	ಇಲ್ಲ	–
೨೧.	ದೋಣೂರು	ಶೃಂಗೇರಿ	ಮಾಸ್ತಿಕಲ್ಲು	ಸ್ತ್ರೀಯರು ಕೈ ಕೈ ಹಿಡಿ ನೃತ್ಯ ಮಾಡುತ್ತಿರುವುದು	ಇದೆ	
೨೨.	ನಾರ್ವೆ	ಕೊಪ್ಪ	ಆತ್ಮಬಲಿ (ಲಿಪಿ ಸಹಿತ) ವೀರಗಲ್ಲು ವೀರನವಿಗ್ರಹ ಒಕ್ಕೈ ವೀರಮಾಸ್ತಿ	ವ್ಯಕ್ತಿಯೊಬ್ಬ ಶಿರವನ್ನು ಕಡಿದುಕೊಂಡು ಕೈಯಲ್ಲಿ ಹಿಡಿದಿರುವುದು	ಇದೆ	ವಿಜಯನಗರ ಕಾಲ
೨೩.	ನಾಗಲಾಪುರ	ಕೊಪ್ಪ	ವೀರಗಲ್ಲು	ಯುದ್ಧದ ಚಿತ್ರಾವಳಿಗಳು	ಇದೆ	–
೨೪.	ನೆಮ್ಮಾರು	ಶೃಂಗೇರಿ	ವೀರಗಲ್ಲು ಒಕ್ಕೈ ವೀರಮಾಸ್ತಿ ಇಕ್ಕೈ ವೀರಮಾಸ್ತಿ	ಸ್ವರ್ಗಾರೋಹಣದ ಕಲ್ಪನೆಯ ಚಿತ್ರಗಳು	ಇದೆ ಇದೆ ಇಲ್ಲ	–
೨೫.	ಬಳಗಟ್ಟೆ	ತೀರ್ಥಹಳ್ಳಿ	೭ ಮಾಸ್ತಿಗಲ್ಲುಗಳು	ಉಬ್ಬು ಶಿಲ್ಪಗಳು	ಇದೆ	ಟಿಪ್ಪುಸುಲ್ತಾನನ ಕಾಲ
೨೬.	ಬೆಜ್ಜವಳ್ಳಿ	ತೀರ್ಥಹಳ್ಳಿ	ವೀರಮಾಸ್ತಿಗಲ್ಲು	ಯುದ್ಧದ ವರ್ಣನೆ	ಇಲ್ಲ	ಹೊಯ್ಸಳರ ಕಾಲ
೨೭.	ಬೊಬ್ಬಿ	ತೀರ್ಥಹಳ್ಳಿ	ವೀರಗಲ್ಲು	ಯುದ್ಧ ವರ್ಣನೆ	ಇಲ್ಲ	ವಿಜಯನಗರ ಕಾಲ
೨೮.	ಬೋಳೂರು	ಶೃಂಗೇರಿ	ವೀರಮಾಸ್ತಿ	ಸ್ತ್ರೀಯರ ನೃತ್ಯ ರೂಪ	ಇಲ್ಲ	
೨೯.	ಭಂಡಿಗಡಿ	ಕೊಪ್ಪ	೫ ಒಕ್ಕೈ ವೀರಮಾಸ್ತಿಗಲ್ಲುಗಳು	ಸಾಲಾಗಿ ನಿಲ್ಲಿಸಿರುವ ವಿಗ್ರಹಗಳು	ಇಲ್ಲ	–

೩೦.	ಮಂಡಗದ್ದೆ	ತೀರ್ಥಹಳ್ಳಿ	ಎರಡು ವೀರಮಾಸ್ತಿ ಒಂದು ಮಾಸ್ತಿಗಲ್ಲು	ಸತಿ ಮತ್ತು ವೀರನರ್ತನ ರೂಪದಲ್ಲಿ ನಿಂತಿರುವುದು. ಸತಿತಲೆಯ ತುಂಬಾ ಚಕ್ರಾಕಾರದಲ್ಲಿ ಕೇದಿಗೆ ಹೂವುಗಳನ್ನು ಮುಡಿದಿರುವಳು.	ಇಲ್ಲ	ವಿಜಯನಗರ ಕಾಲ
೩೧.	ಮಾಸ್ತಿಕೋಟೆ	ಶೃಂಗೇರಿ	ಒಕ್ಕೈ ವೀರಮಾಸ್ತಿ	ಸತಿ ಅಲಂಕಾರ ಮಾಡಿಕೊಂಡಿರುವುದು	ಇದೆ	–
೩೨.	ಮೀಗಾ	ಶೃಂಗೇರಿ	ವೀರಮಾಸ್ತಿ ಮತ್ತು ವೀರಗಲ್ಲು	ಸಂಗೀತ ಪರಿಕರವಾದ ತಂಬೂರಿ ಇರುವುದು.	ಇದೆ	
೩೩.	ಮುನ್ನೂರು	ತೀರ್ಥಹಳ್ಳಿ	ತುರುಗೋಳ್ ವೀರಗಲ್ಲು	ಹಸುವೊಂದು ವೀರನನ್ನು ತುಳಿದು ಸಾಯಿಸುತ್ತಿರುವುದು ಲಿಪಿ ಆಧಾರಿತ.	ಇಲ್ಲ	ವಿಜಯನಗರ ಕಾಲ
೩೪.	ಮುರುಳ್ಳಿ	ಕೊಪ್ಪ	ವೀರಗಲ್ಲು	ಯುದ್ಧದ ಚಿತ್ರಾವಳಿಗಳು	ಇಲ್ಲ	–
೩೫.	ಶಿರೂರು	ಶೃಂಗೇರಿ	ಒಕ್ಕೈ ವೀರಮಾಸ್ತಿ	ಅಪ್ಸರೆಯರು ಸತಿ ಮತ್ತು ವೀರನನ್ನ ಸ್ವರ್ಗಕ್ಕೆ ಕೊಂಡೊಯ್ಯುವುದು.	ಇಲ್ಲ	–
೩೬.	ಸಿಂಹಾದ್ರಿ	ಶೃಂಗೇರಿ	ಒಕ್ಕೈವೀರಮಾಸ್ತಿ	೭ ಅಡಿ ಎತ್ತರ ೫ ಹಂತಗಳಲ್ಲೂ ಅದ್ಭುತ ಶಿಲ್ಪಾಕೃತಿ, ಸಂಗೀತ ಪರಿಕರಗಳನ್ನು ನುಡಿಸುತ್ತಿರುವುದು.	ಇಲ್ಲ	–
೩೭.	ಸೂರ್ಯ ದೇವಸ್ಥಾನ	ಕೊಪ್ಪ	ಆತ್ಮಬಲಿ	ರುಂಡವನ್ನು ಕಡಿದು ಕೈಯಲ್ಲಿ ಹಿಡಿದ ವ್ಯಕ್ತಿ ವೀರಗಲ್ಲಿನಲ್ಲಿ ಲಿಪಿ ಸಹಿತ ಆಧಾರವಿದೆ.	ಇದೆ	–
೩೮.	ಹರೂರು	ಶೃಂಗೇರಿ	ವೀರಗಲ್ಲು	ಯುದ್ಧದ ಶಿಲ್ಪಾಕೃತಿಗಳು ೫ ಅಂಕಣಗಳಿವೆ. ವೀರರು ಜಡೆಯ ಮೇಲೊಂದು ಜಡೆ ಹೆಣೆದಿರುವುದು ವಿಶೇಷ.	ಇದೆ	–

೩೯.	ಹಲ್ಲುಸಾಲೆ	ತೀರ್ಥಹಳ್ಳಿ	ಒಂದನೇ ವೀರಗಲ್ಲು ಎರಡನೇ ವೀರಗಲ್ಲು	ಯುದ್ಧದ ದೃಶ್ಯಾವಳಿಗಳು	ಆರಾಧನೆ	–
೪೦.	ಹಾದಿಗಲ್ಲು	ತೀರ್ಥಹಳ್ಳಿ	ಸಮಾಧಿಕಲ್ಲು	ಸಮಾಧಿ ಮರಣದ ಚಿತ್ರಗಳು	ಇದೆ	ಕ್ರಿ.ಶ. ೧೪೭೭
೪೧.	ಹಾಲುಮತ್ತೂರು	ಕೊಪ್ಪ	ಒಕ್ಕೈ ವೀರಮಾಸ್ತಿ ವೀರಗಲ್ಲು	ಹಾವಿನ ಚಿತ್ರ ಲಿಪಿ ಸಹಿತ	ಇಲ್ಲ	
೪೨.	ಹಿರೇಕಲ್ಲಹಳ್ಳಿ	ತೀರ್ಥಹಳ್ಳಿ	ಒಂದನೇ ವೀರಗಲ್ಲು ಎರಡನೇ ವೀರಗಲ್ಲು	ಯುದ್ಧದ ಸನ್ನಿವೇಶ	ಇದೆ ಇದೆ	ಕ್ರಿ.ಶ. ೧೧೩೧ ಕ್ರಿ.ಶ. ೧೩ ಮತ್ತು ೧೪ನೇ ಶತಮಾನ
೪೩.	ಹುಲಿಸರ	ತೀರ್ಥಹಳ್ಳಿ	ಎರಡು ವೀರಗಲ್ಲು ಒಂದು ನಿಷಿಧಿಗಲ್ಲು	ಒಂದು ಎಂಟು ಅಡಿ ಎತ್ತರ ಎಲ್ಲಾ ಹಂತದಲ್ಲಿ ಬರವಣಿಗೆ ನಿಷಿಧಿಕಲ್ಲಿನಲ್ಲಿ ಸುಂದರವಾದ ಶಿಲ್ಪಾ ಕೃತಿಗಳು	ಇಲ್ಲ	ಕ್ರಿ.ಶ. ೧೩೦೨ ಸಾಂತರರ ಕಾಲ
೪೪.	ಹುಲ್ಸೆ	ಶೃಂಗೇರಿ	ವೀರಮಾಸ್ತಿ	ಸುಂದರವಾದ ಶಿಲ್ಪಗಳು	ಇಲ್ಲ	ವಿಜಯನಗರ
೪೫.	ಹೆದ್ದೂರು	ತೀರ್ಥಹಳ್ಳಿ	ಜೋಡಿ ವೀರಗಲ್ಲು	ಯುದ್ಧದ ಚಿತ್ರಾವಳಿ	ಇಲ್ಲ	ಕ್ರಿ.ಶ. ೧೨೫೪
೪೬.	ಹೆಗ್ಗರಸು	ಶೃಂಗೇರಿ	ವೀರಮಾಸ್ತಿ ಮಾಸ್ತಿಕಲ್ಲು	ಅಲಂಕೃತವಾದ ಮೇನೆಯಲ್ಲಿ ವೀರ ಮತ್ತು ಸತಿ ಕುಳಿತಿರುವುದು	ಇಲ್ಲ	

•••

೫. ಛಾಯಾಚಿತ್ರಗಳು



ಕಲ್ಲುಕೊಪ್ಪ ಶಾಸನ



ನೇರಳೆ ಶಾಸನ



ಬಿಳುವಿನಕೊಪ್ಪ ಶಾಸನ



ಮಳಲಿಮಕ್ಕಿ ಶಾಸನ



ಹರೂರುಮಕ್ಕಿ ಶಾಸನ



ಹುಲಿಸರ ವೀರಗಲ್ಲು ಶಾಸನ

ವೀರಗಲ್ಲುಗಳು



ವೀರಗಲ್ಲು: ಆರಗ



ವೀರಗಲ್ಲು: ಮೀಗಾ




ವೀರಗಲ್ಲು: ಕಬಸೆ



ವೀರಗಲ್ಲು: ಹರೂರುಮಕ್ಕಿ


ವೀರಗಲ್ಲು: ಹುಲಿಸರ


ವೀರಗಲ್ಲು : ಹುಲಿಸರ


ವೀರಗಲ್ಲುಗಳು: ಹೆದ್ದೂರು

ಮಾಸ್ತಿಗಲ್ಲುಗಳು



ಒಕ್ಕೈ ಮಾಸ್ತಿಗಲ್ಲು: ಅಗಸರಕೊಪ್ಪ



ಮಾಸ್ತಿಗಲ್ಲು: ಅಮಡಿ



ಒಕ್ಕೈ ಮಾಸ್ತಿಗಲ್ಲು: ಆರಗ



ಮಾಸ್ತಿಗಲ್ಲು: ಚಿಕ್ಕನಕೋಡಿಗೆ



ಮಾಸ್ತಿಗಲ್ಲುಗಳು: ಕೆಸ್ತೂರು

ವೀರಮಾಸ್ತಿಗಲ್ಲುಗಳು



ಒಕ್ಕೈ ವೀರ ಮಾಸ್ತಿಗಲ್ಲು:ಅದ್ರಿನಿ



ವೀರ ಮಾಸ್ತಿಗಲ್ಲು: ಕೋರನ ಕೋಡಿಗೆ



ವೀರ ಮಾಸ್ತಿಗಲ್ಲು: ಗಂಡಗಟ್ಟ



ವೀರ ಮಾಸ್ತಿಗಲ್ಲು: ಜೆ.ಸಿ.ಬಿ.ಎಮ್.ಕಾಲೇಜು ಆವರಣ



ವೀರ ಮಾಸ್ತಿಗಲ್ಲು: ತಲಗೋಡು



ಒಕ್ಕೈ ವೀರ ಮಾಸ್ತಿಗಲ್ಲು: ದೋರಗಲ್ಲು



ವೀರ ಮಾಸ್ತಿಗಲ್ಲುಗಳು: ಬಂಡಿಗಡಿ



ಒಕ್ಕೈ ವೀರ ಮಾಸ್ತಿಗಲ್ಲು: ಹಾಲ್ಮತ್ತೂರು



ಒಕ್ಕೈ ವೀರ ಮಾಸ್ತಿಗಲ್ಲು: ಸಿಂಹಾದ್ರಿ



ಒಕ್ಕೈ ವೀರ ಮಾಸ್ತಿಗಲ್ಲು: ಹುಲ್ಸೆ



ವೀರ ಮಾಸ್ತಿಗಲ್ಲು: ಬೆಜ್ಜವಳ್ಳಿ



ವೀರ ಮಾಸ್ತಿಗಲ್ಲು: ಮಂಡಗದ್ದೆ



ವೀರ ಮಾಸ್ತಿಗಲ್ಲು: ಮಂಡಗದ್ದೆ

ಆತ್ಮಬಲಿ



ಆತ್ಮಬಲಿ ವಿಗ್ರಹ: ಆರಗ



ಆತ್ಮಬಲಿ: ನಾರ್ವೆ



ಆತ್ಮಬಲಿ: ಸೂರ್ಯದೇವಸ್ಥಾನ


ನಿಷಧಿಗಲ್ಲುಗಳು



ನಿಷದಿಗಲ್ಲು: ಕಣಿವೆ



ನಿಷದಿಗಲ್ಲು: ಹುಲಿಸರ



ಹುಲಿಬೇಟೆ ವಿಗ್ರಹ: ಕೊಪ್ಪ



ಹುಲಿ ಬೇಟೆ ವಿಗ್ರಹ: ಜಿಗಳಗೋಡು



ತುರುಗೋಳ್ ಶಾಸನ: ಮುನ್ನೂರು

ಶಾಸನಶಾಸ್ತ್ರ ವಿಭಾಗ